ಶಿವಾನುಭವ ಗ್ರಂಥಮಾಲಾ ನಂ|| ೮

# ಪ್ರಭುದೇವರ ವಚನಗಳು

ಸಂಪಾದಕರು

ರಾ|| ಸಾ|| ಫ.ಗು.ಹಳಕಟ್ಟಿ

ಬಿ.ಎ.ಎಲ್.ಎಲ್.ಬಿ.

ವಿಜಾಪುರ

೧೯೩೧

820
4603

ಶಿವಾನುಭವ ಗ್ರಂಥಮಾಲಾ ಸಂ॥ ೮.

# ಪ್ರಭುದೇವರ ವಚನಗಳು.


ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಏ. ಎಲ್. ಎಲ್. ಬಿ. ವಕೀಲ



ವಿಜಾಪುರ

೧೯೩೧

ಬೆಲೆ ೨। ರೂಪಾಯಿ.



ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.

ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.

ಮಾಳಮಡ್ಡಿ, ಧಾರವಾಡ.

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
“ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ” ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿ ಬುರುಜದ ಹತ್ತರ ತಮ್ಮ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸದರು.

820
4603

The Times of India

Thursday, June 9, 1938.

**A Thought for To-day**

*All duty should be regarded as sacred, and its faithful and unselfish performance one of the leading rules of conduct. All personal and selfish considerations should be extracted and cast away from the doing of one's duty; and when this is done, Duty ceases to be irksome, and becomes joyful.*

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.
ಮಾಳಮಡ್ಡಿ, ಧಾರವಾಡ.



ಹುಬ್ಬಳ್ಳಿಯ ಮೂರುಸಾವಿರಮಠದ

**ಶ್ರೀಮಜ್ಜಗದ್ಗುರು**

**ಗಂಗಾಧರ ಮಹಾಸ್ವಾಮಿಗಳವರು.**

॥ ಓಂ ॥

**ವೀರಶೈವ ಧರ್ಮ ಜಾಗ್ರತಿಗೋಸ್ಕರ**

ಮತ್ತು ಆದರ

**ವಾಙ್ಮಯ ಅಭಿವೃದ್ಧಿಗೋಸ್ಕರ**

ಸದಾ

**ಪ್ರಯತ್ನಿಸುತ್ತಿರುವ ಮತ್ತು ಪ್ರೋತ್ಸಾಹಿಸುತ್ತಿರುವ**

**ಶ್ರೀಮಜ್ಜಗದ್ಗುರು ಹುಬ್ಬಳ್ಳಿ**

**ಮೂರುಸಾವಿರ ಮಹಾ ಮಠಾಧಿಷ್ಠಿತ**

**ಶ್ರೀಗುರುಸಿದ್ಧಯೋಗಿರಾಜ ದೇಶಿಕೇಂದ್ರ**

**ಮಹಾಸ್ವಾಮಿಗಳವರಿಗೆ**

ಈ ಗ್ರಂಥವು

**ಅತ್ಯಂತ ಭಕ್ತಿ ವಿಶ್ವಾಸಗಳಿಂದ ಅರ್ಪಿಸಲ್ಪಟ್ಟಿದೆ.**

**ಸಂಪಾದಕ.**

# ಪ್ರಸ್ತಾವನೆ.

ಪ್ರಭುದೇವರ ವಚನಗ್ರಂಥವು ಮಹತ್ವದ ಅಧ್ಯಾತ್ಮಿಕ ವಿಷಯ ನಿರೂಪಣೆಯ ವಿಷಯದಲ್ಲಿ ವಚನವಾಙ್ಮಯದಲ್ಲಿ ಬಹು ಉನ್ನತಸ್ಥಾನವನ್ನು ಹೊಂದಿದೆ. ಈ ಪ್ರಭುದೇವರ ವಚನಗಳಾದರೂ ಪುರಾತನ ವಚನಗಳಂತೆ ಒತ್ತಟ್ಟಿಗೆ ಎಲ್ಲಿಯೂ ಸಿಕ್ಕುವದಿಲ್ಲ. ಅವುಗಳು ಬೇರೆ ಬೇರೆ ವಚನ ಸಂಗ್ರಹಗಳಲ್ಲಿ ಖಂಡಶಃ ದೊರೆಯುತ್ತವೆ. ಆದರೆ ಇವುಗಳು ಬಹು ವಿಪುಲವಾಗಿದ್ದು ಅವುಗಳನ್ನು ಏಕತ್ರಮಾಡುವ ಕಾರ್ಯವು ಸಂಪೂರ್ಣವಾಗಿ ಯಾವಾಗ್ಗೆಯೂ ಕೈಕೊಂಡಂತೆ ತೋರಿಬರುವದಿಲ್ಲ. ಆದರೆ "ಪ್ರಭುದೇವರ ವಚನಗಳು" ಎಂಬ ಪ್ರಸ್ತುತ ವಚನಗ್ರಂಥವೂ, "ಪ್ರಭುದೇವರ ಸೃಷ್ಟಿಯ ವಚನ"ವೆಂದೂ ಹೀಗೆ ಅವನ ಹಲಕೆಲವು ಗ್ರಂಥಗಳು ಪ್ರಚುರವಾಗಿರುತ್ತವೆ. ಇವುಗಳಲ್ಲಿ ಈಗಿನ ವಚನಗ್ರಂಥವೇ ಬಹು ಮಹತ್ವದ್ದಿದ್ದು ವಚನವಾಙ್ಮಯದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿದೆ.

ಈ ಗ್ರಂಥವನ್ನು ನಾವು ಕೆಳಗೆ ಕಾಣಿಸಿದ ಪ್ರತಿಗಳ ಸಹಾಯದಿಂದ ಸಿದ್ಧಗೊಳಿಸಿರುತ್ತೇವೆ. ಅವುಗಳು ಯಾವವೆಂದರೆ:-

(ಅ) ಕೈ. ವಾ. ಮಂಚಾಲಿ ಶಿವಲಿಂಗಪ್ಪನವರ ಸಂಗ್ರಹದಲ್ಲಿದ್ದ ಪ್ರತಿ. ಇದು ಹಾವೇರಿಯಲ್ಲಿಯದು.

(ಬ, ಕ) ಶಿ॥ ಮೂ॥ ಮುರಿಗೆಯ್ಯ ಜಂಗಿನ ಬಾಗಲಕೋಟಿ ಇವರ ಸಂಗ್ರಹದಲ್ಲಿದ್ದ ಎರಡು ಪ್ರತಿಗಳು.

(ಡ) ಶ್ರೀ. ಚನಮಲ್ಲಪ್ಪ ಹಲಸಂಗಿ ಇವರಲ್ಲಿದ್ದದ್ದು.

ಮೊದಲನೆಯ ೩ ಪ್ರತಿಗಳು ಬಹುಮಟ್ಟಿಗೆ ಶುದ್ಧವಾಗಿವೆ. ಆದರೆ ೪ನೇ ಪ್ರತಿಯು ಬಹಳ ಅಶುದ್ಧವು.

ನಮಗೆ ಈ ಪ್ರತಿಗಳನ್ನು ಕಳಿಸಿಕೊಟ್ಟದ್ದಕ್ಕೆ ನಾವು ಈ ಎಲ್ಲ ಮಹನೀಯರುಗಳಿಗೆ ಬಹು ಕೃತಜ್ಞರಾಗಿದ್ದೇವೆ.

ಈ ಗ್ರಂಥವನ್ನು ಸಿದ್ಧಗೊಳಿಸಿ ಅಚ್ಚು ಹಾಕುವ ಕಾಲಕ್ಕೆ ನನಗೆ ವಿಶೇಷ ಅಸ್ವಸ್ಥತೆಯು ಒದಗಿದ್ದರಿಂದ ಡಾ॥ ಎಸ್. ಸಿ. ನಂದೀಮಠ ಎಮ್. ಏ. (ಪಿ. ಎಚ್. ಡಿ.) ಇವರು ವಿಜಾಪುರದಲ್ಲಿ ಕೆಲವು ದಿವಸ

ನಿಂತು ಈ ಗ್ರಂಥದ ಬಹುಭಾಗವನ್ನು ಬರೆಯಿಸಿ ತಿದ್ದಿ ಅಚ್ಚಿಗೆ ಸಿದ್ಧಗೊಳಿಸುವ ಕಾರ್ಯದಲ್ಲಿ ನನಗೆ ಬಹು ಸಹಾಯವಾದರು. ಇದಕ್ಕೋಸ್ಕರ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ.

ಇಷ್ಟೇ ಅಲ್ಲ, ಈ ಗ್ರಂಥವನ್ನು ಅಚ್ಚುಹಾಕುವ ಕಾರ್ಯದ ಸಹಾಯಕ್ಕೋಸ್ಕರ ಶ್ರೀಮಜ್ಜಗದ್ಗುರು ಹುಬ್ಬಳ್ಳಿಯ ಮೂರುಸಾವಿರ ಮಹಾ ಮಠಾಧೀಶರಾದ ಶ್ರೀ ಗುರುಸಿದ್ಧಯೋಗಿರಾಜ ದೇಶಿಕೇಂದ್ರರವರು ೫೦೦ ರೂಪಾಯಿಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದಕ್ಕೆ ನಾನು ಆ ಮಹಾನುಭಾವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ಈಗಿನ ಗ್ರಂಥದ ಪೀಠಿಕೆಯಲ್ಲಿ ಹೇಳಿದಂತೆ ಕುಮಾರ ಬಂಕನಾಥದೇವರ ಶಿಷ್ಯ ಭಕ್ತಿ ಭಂಡಾರಿ ಜಕ್ಕಣ್ಣನಿಗೆ ಷಟ್‌ಸ್ಥಲೋಪದೇಶವನ್ನು ಈ ಪ್ರಭುದೇವರ ವಚನಗಳ ಮೂಲಕ ಮಾಡಿದ್ದಾಗಿರುತ್ತದೆ. ಈ ವಚನಕ್ಕಿರುವ ಟೀಕೆಗಳಾದರೂ ಬಹುಭಾವ ಗರ್ಭಿತವೂ ವಿಚಾರಪ್ರೇರಕವೂ ಆಗಿರುತ್ತವೆ. ಈ ವಚನಗಳಲ್ಲದೆ ಪ್ರಭುದೇವರ ಇನ್ನೂ ಅಸಂಖ್ಯ ವಚನಗಳಿದ್ದು, ಅವುಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಕೂಡಿಸಿ ಇನ್ನೊಂದು ಪ್ರಭುದೇವರ ವಚನಗ್ರಂಥವನ್ನು ಪ್ರಸಿದ್ಧಿಸಬೇಕೆಂಬ ಯೋಚನೆಯು ಇರುತ್ತದೆ. ಆದರೆ ಈ ಕಾರ್ಯವು ಮಹತ್ತರವಾದದ್ದಿದ್ದು ಇದಕ್ಕೆ ಕೆಲಕಾಲವು ಬೇಕಾಗಬಹುದು. ಆದರೂ ಶಕ್ಯವಿದ್ದಷ್ಟರ ಮಟ್ಟಿಗೆ ಇವುಗಳನ್ನು ಕೂಡಿಸಿ ಇನ್ನೊಂದು ಪ್ರಭುದೇವರ ವಚನಗ್ರಂಥವನ್ನು ಆದಷ್ಟು ತೀವ್ರವಾಗಿ ಹೊರಪಡಿಸಲುದ್ದೇಶಪಟ್ಟಿರುತ್ತೇವೆ.

ಪುರಾತನ ಗ್ರಂಥಗಳನ್ನು ಶೋಧಿಸಿ, ಶುದ್ಧವಾಗಿ ಅಚ್ಚುಹಾಕುವ ಕಾರ್ಯವು ಯಾವಾಗಲೂ ಕಷ್ಟತರವಾದದ್ದು. ಆದರೂ ಶಕ್ಯವಿದ್ದಷ್ಟರ ಮಟ್ಟಿಗೆ ಈಗಿನ ಪ್ರತಿಯನ್ನು ನಾವು ಶುದ್ಧಗೊಳಿಸಲು ಪ್ರಯತ್ನಿಸಿದ್ದೇವೆ. ಹೀಗಿದ್ದರೂ ಗ್ರಂಥದಲ್ಲಿ ಅಲ್ಲಲ್ಲಿ ವಾಕ್ಯದೋಷಗಳೂ ಪ್ರಿಂಟಿನ ದೋಷಗಳೂ ಕಂಡುಬರಬಹುದು. ಇದಕ್ಕೋಸ್ಕರ ವಾಚಕರು ನಮ್ಮನ್ನು ಕ್ಷಮಿಸುವರೆಂದು ಪ್ರಾರ್ಥಿಸುತ್ತೇವೆ. ಪಾಠಾಂತರಗಳ ಬಗ್ಗೆ ಮತ್ತು ಇಂಥ ದೋಷಗಳ ಬಗ್ಗೆ ವಾಚಕರು ನಮಗೆ ತಿಳಿಸಿದಲ್ಲಿ, ನಾವು ಅವರಿಗೆ ಬಹಳ ಆಭಾರಿಯಾಗುವೆವು. ಮತ್ತು ಆ ಪ್ರಕಾರ ನಾವು ಮುಂದಿನ ಆವೃತ್ತಿಯಲ್ಲಿ ಸರಿಪಡಿಸುವೆವು.



ನಾವು ನಮ್ಮ ಪ್ರತಿಯನ್ನು ಅಚ್ಚಿಗೆ ಸಿದ್ಧಗೊಳಿಸುವ ಕಾರ್ಯದಲ್ಲಿ ಹಿಂದೆ ವಿವರಿಸಿದಂತೆ ೪ ಪ್ರತಿಗಳನ್ನು ಉಪಯೋಗಿಸಿದ್ದನ್ನು ವಿವರಿಸಿರುವೆವಷ್ಟೇ. ಈ ಪ್ರತಿಗಳೆಲ್ಲವೂ ಬಹುತರ ಒಂದೇ ಆಗಿರುತ್ತವೆ. ಆದರೆ ೧ ನೇ ಪ್ರತಿಯಲ್ಲಿ ಮಾತ್ರ "ಪ್ರಭುದೇವರ ಪಿಂಡಸಂಭವವಾದ ಗದ್ಯ" ಎಂಬ ಭಾಗವಿದ್ದು ಉಳಿದ ಪ್ರತಿಗಳಲ್ಲಿ ಇದು ಕಂಡುಬರುವದಿಲ್ಲ. ಇದನ್ನು ವಾಚಕರು ಲಕ್ಷಿಸತಕ್ಕದ್ದಾಗಿದೆ.

**ವಿಜಾಪುರ.** **ಫ. ಗು. ಹಳಕಟ್ಟಿ.**

ತಾ॥ ೭—೬—೩೧ ಸಂಪಾದಕ

# ಪ್ರಭುದೇವರ ವಚನಗಳು.

ಸ್ವಸ್ತಿ ಸಮಸ್ತ ಭುವನ ಜನ ತಿಮಿರ ಹರ ಕಾರಣ ಸ್ವರೂಪರುಂ, ಭಕ್ತವತ್ಸಲರುಂ ಸರ್ವಾಂಗ ಪ್ರಾಣಲಿಂಗ ಮೂರ್ತಿನಿವಾಸರುಂ, ಪುಲಿಗೆರೆಯ ಪುರವರಾಧೀಶ್ವರರುಂ, ಅಪೂರ್ವ ಸ್ವಯಂಭು ಪ್ರಸನ್ನ ಚನ್ನ ದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕರುಂ, ತ್ರಿಕಾಂಡ ನಿಷ್ಠರುಂ, ಋಗ್ಯಜುಃಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರುಂ, ಶ್ರುತಿ - ಸ್ಮೃತಿ - ಪುರಾಣಾಗಮೇತಿಹಾಸಾದಿ ನಾನಾ ಶಾಸ್ತ್ರಕೋವಿದರುಂ, ಪರಮ ವೀರಶೈವಾಗಮಾಚಾರ್ಯರುಂ, ಸಕಲ ಪ್ರಸಾದ ಪಂಚಾಕ್ಷರೀ ಮಂತ್ರಸಿದ್ಧರುಂ, ನಿತ್ಯ ಪರಿಪೂರ್ಣ ಸಚ್ಚಿದಾನಂದ ನಿರಂಜನರುಂ, ಪರಂಜ್ಯೋತಿ ಸ್ವರೂಪರುಮಪ್ಪ ಪರಮ ಗುರುಮೂರ್ತಿ ಜಗದಾರಾಧ್ಯರುಮಪ್ಪ ಮಹಾಲಿಂಗದೇವರ ಅನಾದಿ ಸಂಸಿದ್ಧ ಗುರುಕುಳದನ್ವಯವೆಂತೆಂದೊಡೆ:— ಪ್ರಥಮದಲ್ಲಿ ನಿತ್ಯ ನಿರ್ಮಳ ನಿರಂಜನವಪ್ಪ ಪರಶಿವನು, ದ್ವಿತೀಯದಲ್ಲಿ ವಾಙ್ಮನಾತೀತನಪ್ಪ ನಂದಿಕೇಶ್ವರ ದೇವರು ತೃತೀಯದಲ್ಲಿ ಪರಮ ಋಷೀಶ್ವರನಪ್ಪ ದೂರ್ವಾಸ ದೇವರು, ಚತುರ್ಥದಲ್ಲಿ ದ್ವಿತೀಯ ಸ್ವಯಂಭು ತ್ರಿಣೇತ್ರ ದೇವರು, ಪಂಚಮದಲ್ಲಿ ಉರಿಲಿಂಗ ಪೆದ್ದಣ್ಣಂಗಳು, ಷಷ್ಠಮದಲ್ಲಿ ಸರ್ವೇಶ್ವರ ದೇವರು, ಸಪ್ತಮದಲ್ಲಿ ವಿಶ್ವೇಶ್ವರ ಪೆದ್ದಣ್ಣಗಳು, ಅಷ್ಟಮದಲ್ಲಿ ಸಂಹಿತೆಯ ಕಾಳಿದಾಸಭಟ್ಟರು, ನವಮದಲ್ಲಿ ಸದಾಶಿವ ದೇವರು, ದಶಮದಲ್ಲಿ ಪ್ರಣವಿದೇವರು, ಏಕಾದಶದಲ್ಲಿ ಈಶಾನ್ಯದೇವರು, ದ್ವಾದಶದಲ್ಲಿ ಮೌನಿದೇವರು, ತ್ರಯೋದಶದಲ್ಲಿ ಚನ್ನಸೋಮದೇವರು, ಚತುರ್ದಶದಲ್ಲಿ ಬಾಗೆಯ ಬಂಕನಾಥದೇವರು, ಪಂಚದಶದಲ್ಲಿ ಶಂಕರ ದೇವರು, ಷೋಡಶದಲ್ಲಿ ಗಂಗಾಧರದೇವರು, ಸಪ್ತದಶದಲ್ಲಿ ಬಂಕನಾಥ ದೇವರು, ಅಷ್ಟದಶದಲ್ಲಿ ಪುರಾಣದ ಮಾಯಿದೇವ ಪಂಡಿತರು, ನವದಶದಲ್ಲಿ ಬಂಕಯ್ಯದೇವರು, ವಿಂಶತಿಯಲ್ಲಿ ಮಹಾಲಿಂಗದೇವರು, ಏಕವಿಂಶತಿಯಲ್ಲಿ ಕುಮಾರ ಬಂಕನಾಥ ದೇವರು, ಆ ಕುಮಾರ ಬಂಕನಾಥದೇವರ ದಿವ್ಯಜ್ಞಾನಾನಂದ ಕರಕಮಳದಲ್ಲಿ ಉದಯವಾದ ತಚ್ಛಿಷ್ಯ ಭಕ್ತಿ ಭಂಡಾರಿ ಜಕ್ಕಣ್ಣನು ಆ ಶ್ರೀ ಗುರುರಾಯಂಗೆ ಬಿನ್ನಪಂಗೆಯ್ದು, ಪರಮಗುರುವೇ,

ಪರಮಗುರುವೇ, ನಿಮ್ಮಡಿಗಳು ಎನ್ನ ಪೂರ್ವ ಜನ್ಮನಿವೃತ್ತಿಯಂ ಮಾಡಿ, ಪುನರ್ಜಾತನೆನಿಸಿ, ಅಂಗದಲ್ಲಿ ಲಿಂಗಪ್ರತಿಷ್ಠೆಯಂ ಮಾಡಿ, ಪ್ರಣವ ಪಂಚಾಕ್ಷರಿಯ ಪ್ರಾಣಸ್ಥಲದಲ್ಲಿ ಸ್ಥಾಪಿಸಿ, ಎನ್ನ ಕೃತಾರ್ಥನ ಮಾಡಿದಿರಿ ದೇವಾ. ಇನ್ನು ಎನ್ನ ಷಡಂಗವು ಲಿಂಗದಲ್ಲಿ ಲೀಯವಹ ಭೇದವಂ ನಿರೂಪವಂ ಕೊಟ್ಟು ಪಾಲಿಪುದೆಂದೊಡೆ, ಆ ಶ್ರೀಗುರು ಸ್ವಾಮಿ ತಮ್ಮ ಪರಮ ಜ್ಞಾನಾನುಭಾವ ಪ್ರಸನ್ನ ಪ್ರಕಾಶದಿಂದ ಷಟ್‌ಸ್ಥಲವನು ಪ್ರಭುದೇವರ ವಚನಂಗಳಿಂದ ಸಂಕಲ್ಪಿಸಿ, ಸುಲಲಿತ ವಾಕ್ಯಾಮೃತವಾಗಿ, ಆ ವಚನಂಗಳನು ಟೀಕಿಸಿ, ಪರಮಾರ್ಥ ತತ್ವಬೋಧೆಯನು ನಿರೂಪಿಸಿದ ಭೇದವೆಂತಿರ್ದುದೆಂದೊಡೆ, ಮುಂದೆ ಪ್ರಥಮದಲ್ಲಿ ಪಿಂಡಸ್ಥಲವಾದುದು.

---

ಪ್ರಭುದೇವರ ಪಿಂಡಸಂಭವವಾದ ಗದ್ಯ. ನಿತ್ಯನಿರಂಜನ ಪರಂಜ್ಯೋತಿ ವಾಙ್ಮನಕ್ಕಗೋಚರಮಪ್ಪ ಶ್ರೀ ಪರಮೇಶ್ವರನು ಕೈಲಾಸದಲ್ಲಿಹ ಎಲ್ಲ ಶಿವಗಣಂಗಳೊಳಗೆ ಅತ್ಯಂತ ಶ್ರೇಷ್ಠನಾಗುತ್ತಿಹ ಮಾಯಾಕೋಲಾಹಳನೆಂಬ ಗಣೇಶ್ವರನು ಒಪ್ಪುತ್ತಿರಲು ಆ ಮಾಯೆಯೊಂದು ದಿನ ಶ್ರೀ ಪಾರ್ವತೀದೇವಿಯವರು ಪರಮೇಶ್ವರನ ಕೂಡೆ ಸಂವಾದಿಸಿ ಈ ಮಾಯಾಕೋಲಾಹಳನೆಂಬ ಗಣೇಶ್ವರನು ಆ ಮಾಯೆ ತೋರಿದ ಪರಿ ಎಂತು, ಈತನ ಮಾಯಾಸಕಲನ ಮಾಡಿ ತೋರುವೆನೆಂದು ಪ್ರತಿಜ್ಞೆಯಂ ಮಾಡಿ ತನ್ನ ಓಲಗದ ವಾದ್ಯವ ಬಾರಿಸುವ ಒಬ್ಬ ರುದ್ರ ಕನ್ನಿಕೆಯ ಕರೆದು ನೀನು ಈ ಮಾಯಾ ಕೋಲಾಹಳನೆಂಬ ಗಣೇಶ್ವರನ ಸೋಲಿಸಿ ಬಾ ಎಂದು ನಿರೂಪಿಸಲು ಮಹಾ ಪ್ರಸಾದವೆಂದು ಅನುಜ್ಞೆಯಂ ಕೈಕೊಂಡು ಆ ರುದ್ರ ಕನ್ನಿಕೆ ಶಿವನ ಓಲಗಕ್ಕೆ ಬಪ್ಪ ದಾರಿಯೊಳು ತನ್ನ ಮಾಯಾ ವಿಲಾಸ ಸ್ವರೂಪಮಂ ತೋರಿ ಮೆರೆಯುತ್ತ ಮುಂದೆ ಬಂದು ನಿಂದಿರಲು ಆ ಗಣೇಶ್ವರನು ಬರುತ ಆ ಕನ್ನಿಕೆಯ ರೂಪಲಾವಣ್ಯಮಂ ಕಂಡು ಮನ ಮುಟ್ಟಿ ಹಾರೈಸಿ ತನ್ನ ತಾನೆಚ್ಚತ್ತು ಹಾ ಎಂದು ಬೆರಗಾಗಿ ಎನಗೀ ಮಾಯಾಧೀನ ಸಂಬಂಧಿಸಿತಲ್ಲಾ ಎನುತ್ತ ಚಿಂತಾಕ್ರಾಂತನಾಗಿ ಶಿವನೋಲಗಕ್ಕೆ ಬರಲು ಅವನು ಆ ಗಣೇಶ್ವರನ ಸ್ಥಿತಿಯನರಿದು ನೀನು ಮಾಯೆಗೆ ಮನಸೋತ ಕಾರಣ ಮಾಯಾಧೀನನಾಗಿ ಮರ್ತ್ಯದಲ್ಲಿ ಹುಟ್ಟಿ ಹೋಗೆನಲು, ದೇವಾ, ನಾನು ಮರ್ತ್ಯದಲ್ಲಿ ಹುಟ್ಟಿ ನಿಮ್ಮನೆಂತರಿವೆನೆನಲು ಅದಕ್ಕೆ ನೀನು ಅಂಜದಿರು, ನಾನು ನಿನ್ನ ಮುಸುಕಿದ ಮಾಯೆಯಂ ನಿವೃತ್ತಿಯ



ಮಾಡಿ ನಿನ್ನ ಸಂಸಾರ ಬಂಧನಮಂ ಬಿಡಿಸಿ ನಿನ್ನ ಅಂತರಂಗದಲ್ಲಿ ನಾನು ಗುರುಮೂರ್ತಿಯಾಗಿ ಬಹಿರಂಗದಲ್ಲಿ ಅನುಮಿಷನೆಂಬ ಗುರುಮೂರ್ತಿಯಾಗಿ ನಿನ್ನ ಕರಸ್ಥಲಕ್ಕೆ ಮಹಾಲಿಂಗವಂ ತೋರಿಸಿಕೊಟ್ಟು ಸದ್ಯೋನ್ಮುಕ್ತನಂ ಮಾಡಿದಪೆನು. ನೀನು ಮರ್ತ್ಯದಲ್ಲಿ ಹೋಗಿ ಶ್ರೀ ವೀರಶೈವಾಚಾರಕ್ಕೆ ಪ್ರಥಮಾಚಾರ್ಯ ಪುರುಷನಾದಪೆ. ನಿನ್ನಿಂದ ಮರ್ತ್ಯ ಲೋಕದ ಮಹಾ ಗಣಂಗಳೆಲ್ಲರು ಕೃತಾರ್ಥರಾದಪರು, ಹೋಗೆಂದು ಶಿವನು ಅಭಯ ಹಸ್ತವಂ ಕೊಡಲು ಮಹಾ ಪ್ರಸಾದವೆಂದನುಜ್ಞೆಯಂ ಕೈಕೊಂಡು ಮಾನುಷಾಕಾರ ಚೈತನ್ಯ ಕಳೆಯ ಧರಿಸಿ ಮೇರುವಿಂಗೆ ದಕ್ಷಿಣ ಭಾಗದ ಜಂಬೂದ್ವೀಪದ ಮಧ್ಯದೊಳು ನಾಗವಸಾಧಿಪತಿ ಎಂಬ ಶಿವಭಕ್ತನ ಸತಿ ಸುಜ್ಞಾನ ದೇವಿಯ ಬಸಿರಲ್ಲಿ ಕಳಾಪ್ರವೇಶಿತನಾಗಿ ಜನಿಸಿ ಅಲ್ಲಮನೆಂಬ ನಾಮವಂ ಧರಿಸಿರಲು ಆ ರುದ್ರ ಕನ್ನಿಕೆಯು ಶಿವನಿರೂಪದಿಂದ ಆ ಪುರದಲೊಬ್ಬ ಶಿವಭಕ್ತನ ಬಸಿರಲ್ಲಿ ಜನಿಸಿ ಕಾಮಲತೆ ಎಂಬ ನಾಮವಂ ಧರಿಸಿರಲು ಆ ಸ್ತ್ರೀಗೆ ತಾನು ಪುರುಷನಾಗಿ ಸುಖ ಸಂಗದಿ ಕೆಲವು ಸಂವತ್ಸರಂಗಳಂ ಕಳೆಯಲು ಆ ಕಾಮಲತೆಯು ವಿಶ್ರಾಮವನೈದಿ ತನಗೆಯು ಶ್ರೀ ಪರಮೇಶ್ವರನ ಕರುಣ ಪ್ರಸನ್ನಮಪ್ಪ ಕಾಲದೊಳು ಅಲ್ಲಮ ಪ್ರಭುರಾಯನ ಸಂಗಡದೊಳಗಡಗಿರ್ದ ಶಿವ ತತ್ವ ದರ್ಶನವೆಂತಿರ್ದುದೆಂದಡೆ,

ಪ್ರಥಮದಲ್ಲಿ ಪಿಂಡಸ್ಥಲವಾದದು.

---

## ಪಿಂಡಸ್ಥಲ.

೧. ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ಶರಣಸಂಬಂಧ.

ಟೀಕು:---ಶಿಲೆಯೊಳಗಿಪ್ಪ ಅಗ್ನಿ ಮೈದೋರದ ಹಾಗೆ, ಪರಬ್ರಹ್ಮವು ಪಿಂಡಸ್ಥವಾಗಿದ್ದು ಕಾಣಿಸಬಾರದೆಂಬುದೀಗ, ಶಿಲೆಯೊಳಗಣ ಪಾವಕನಂತೆ ಎಂಬ ಶಬ್ದಕ್ಕರ್ಥ. ಆವುದಾನೊಂದು ಪ್ರತಿಬಿಂಬವು ಉದಕದೊಳಗಿರ್ದು, ಉದಕದ ಗುಣಧರ್ಮ ಕರ್ಮವ ಹೊದ್ದದ ಹಾಗೆ, ಆ ಪರಬ್ರಹ್ಮವು ಪಿಂಡ

ಸ್ಥವಾಗಿರ್ದು, ಆ ಪಿಂಡದ ಗುಣ ಧರ್ಮ ಕರ್ಮವ ಹೊದ್ದದಿಪ್ಪುದೀಗ, ಉದಕದೊಳಗಣ ಪ್ರತಿಬಿಂಬದಂತೆ ಎಂಬ ಶಬ್ದಕ್ಕರ್ಥ. ಬೀಜದೊಳಗಣ ವೃಕ್ಷದ ಹಾಗೆ, ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಪಿಂಡದ ಮಧ್ಯದಲ್ಲಿ ಗೂಢವಾಗಿಪ್ಪುದೆಂಬುದೀಗ, ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ಥ. ಶಬ್ದದೊಳಗೆ ನಿಶ್ಶಬ್ದವಿದ್ದುದನು ಭೇದಿಸಬಾರದ ಹಾಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು, ಅಭೇದ್ಯವಾಗಿಪ್ಪುದೆಂಬುದೀಗ ಶಬ್ದದೊಳಗಣ ನಿಶ್ಶಬ್ದದಂತೆ ಎಂಬುದಕ್ಕರ್ಥ. ಇದು ಪಿಂಡಸಂಭವ ನಿರ್ವಚನ.

೨. ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ? ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ? ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು ಗುಹೇಶ್ವರಾ ನಿಮ್ಮ ನಿಲವ ಅನುಭವ ಸುಖಿ ಬಲ್ಲ.

ಟೀಕು:— ಶಿಲೆಯೊಳಗಿಪ್ಪ ಅಗ್ನಿ ಸ್ಫುರಿಸದಂತೆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಆ ಪಿಂಡದಿಂದ ವ್ಯತಿರಿಕ್ತವಾಗಿ ತೋರಲರಿಯದೆಂಬುದೀಗ ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ ಎಂಬ ಶಬ್ದಕ್ಕರ್ಥ. ಬೀಜದೊಳಗಡಗಿಪ್ಪ ವೃಕ್ಷದಂತೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ವೈದೋರದಿಪ್ಪುದೀಗ ಬೀಜದೊಳಗಣ ವೃಕ್ಷ ಉಲಿಯಬಲ್ಲುದೇ ಎಂಬ ಶಬ್ದಕ್ಕರ್ಥ. ಇಂತಪ್ಪ ಪರಬ್ರಹ್ಮವು ತಾನೊಂದಕ್ಕೆಯು ತೋರಲಿಲ್ಲಾಗಿ, ತೋರಲಿಲ್ಲಾಗಿ ಬೀರಲಿಲ್ಲಾರಿಗೆಯೂ ಎಂಬ ಶಬ್ದಕ್ಕರ್ಥ. ಈ ನಿಲವನಾರು ಬಲ್ಲರೆಂದಡೆ ಇದಂ ಹಮ್ಮೆಂಬ ಉಭಯವಳಿದ ಮಹಾನುಭಾವಿ ಬಲ್ಲನೆಂಬುದೀಗ ಅನುಭವ ಸುಖಿ ಬಲ್ಲನೆಂಬ ಶಬ್ದಕ್ಕರ್ಥ.

೩. ಜಲದೊಳಗಿರ್ದ ಕಿಚ್ಚು ಜಲವ ಸುಡದೆ, ಜಲವು ತಾನಾಗಿಯೆ ಇದ್ದಿತ್ತು ನೋಡಾ. ನೆಲೆಯನರಿದು ನೋಡಿಹೆನೆಂದಡೆ, ಅದು ಜಲವು ತಾನಲ್ಲ. ಕುಲದೊಳಗಿರ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದುನಾರು ಬಲ್ಲರು? ಹೊರಗೊಳಗೆ ತಾನಾಗಿರ್ದು ಮತ್ತೆ ತಲೆದೋರದಿಪ್ಪುದು ಗುಹೇಶ್ವರಾ ನಿಮ್ಮ ನಿಲವು ನೋಡಾ.

ಟೀಕು:— ಶುಕ್ಲ ಶೋಣಿತಾತ್ಮ ಸಂಗದಿಂದಾದ ಜಲಬುದ್ಬುದ ಪಿಂಡದೊಳಗೆ ಅಡಗಿಪ್ಪ ಪರಶಿವ ಜ್ಞಾನಾಗ್ನಿ ಜಡಪಿಂಡವ ದಗ್ಧವ ಮಾಡಲರಿಯದಲ್ಲಿಯೇ ಗತವಾಗಿ ತದ್ರೂಪಾಗಿದ್ದಿತ್ತೆಂಬುದೀಗ, ಜಲದೊಳಗಿರ್ದ ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತೆಂಬ ಶಬ್ದಕ್ಕರ್ಥ. ವಿವೇಕದಿಂದ ತಿಳಿದು ನೋಡಿದಡೆ ಆ ಶಿವಜ್ಞಾನ ಜಡಪಿಂಡರೂಪಲ್ಲವೆಂಬುದೀಗ ನೆಲೆಯನರಿಯಬಲ್ಲಡೆ ಅದು ಜಲವು ತಾನಲ್ಲವೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಜಾತಿ ವರ್ಣಾಶ್ರಮ ಕುಲಗೋತ್ರ ನಾಮಂಗಳೊಳಗೆ ವೇಧಿಸಿಕೊಂಡಿರ್ದು ಹೊದ್ದಿಯೂ ಹೊದ್ದದೆ ಸರ್ವತೋಧಿಕವಾಗಿದ್ದಿತ್ತೆಂಬುದೀಗ ಕುಲದೊಳಗಿರ್ದು ಕುಲವ ಬೆರಸದೆ ನೆಲೆಗೆಟ್ಟುಹೋಗಿ ನಿಂದುದನಾರು ಬಲ್ಲರು ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಅಂತರಂಗ ಬಹಿರಂಗದೊಳಗೆ ಪರಿಪೂರ್ಣವಾಗಿರ್ದು ಅನ್ಯವಾಗಿ ತೋರಿಸಿಕೊಳ್ಳಲರಿಯದೆ ಗೋಪ್ಯವಾಗಿಪ್ಪುದೆಂಬುದೀಗ ಒಳಹೊರಗೆ ತಾನಾಗಿ ಮತ್ತೆ ತಲೆದೋರದಿಪ್ಪುದು ಗುಹೇಶ್ವರಾ ನಿಮ್ಮ ನಿಲವು ನೋಡಾ ಎಂಬ ಶಬ್ದಕ್ಕರ್ಥ.



೪. ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿರ್ದ ಮಿಂಚಿನಂತೆ, ಬಯಲ ಮರೆಯಲಡಗಿರ್ದ ಮರೀಚನಂತೆ ಕಂಗಳ ಮರೆಯಲಡಗಿರ್ದ ಬೆಳಗಿನಂತೆ ಗುಹೇಶ್ವರಾ ನಿಮ್ಮ ನಿಲವು.

ಟೀಕು:— ಭೂಗತವಾಗಿಪ್ಪ ನಿಧಾನದಂತೆ, ಪರಬ್ರಹ್ಮವು ಪಿಂಡಮಧ್ಯದಲ್ಲಿ ಗತವಾಗಿ ಕಾಣಬಾರದಿಪ್ಪುದೀಗ, ನೆಲದ ಮರೆಯ ನಿಧಾನದಂತೆ ಎಂಬ ಶಬ್ದಕ್ಕರ್ಥ. ಮೇಘದೊಳಗೆ ಸ್ಫುರಿಸದಿಪ್ಪ ಕ್ಷಣಿಕದಂತೆ ಆ ಪರಬ್ರಹ್ಮವು ಪಿಂಡ ಮಧ್ಯದೊಳಗೆ ಇರ್ದು ಬೇರಿಟ್ಟು ತೋರಲರಿಯದೆಂಬುದೀಗ, ಮುಗಿಲ ಮರೆಯ ಮಿಂಚಿನಂತೆ ಎಂಬ ಶಬ್ದಕ್ಕರ್ಥ. ಬಯಲೊಳಗಡಗಿದ ಮರೀಚಿಯ ನಿಃಕಂಪಿತದಂತೆ, ಆ ಪರಬ್ರಹ್ಮವು ಪಿಂಡದೊಳಗಿರ್ದು ನಿಶ್ಚಲವಾಗಿಪ್ಪುದೆಂಬುದೀಗ ಬಯಲ ಮರೆಯಲಡಗಿದ ಮರೀಚನಂತೆ ಎಂಬ ಶಬ್ದಕ್ಕರ್ಥ. ಕಂಗಳ ಪಟಲದೊಳಗಿರ್ಪ ಪ್ರಭೆ ಕಂಗಳಿಂದ ವ್ಯತಿರಿಕ್ತವಾಗಿ ವಿವರಿಸಬಾರದಂತೆ, ಆ ಪರಬ್ರಹ್ಮವು ಪಿಂಡಸ್ಥವಾಗಿಪ್ಪುದು. ಅದ ವಿವರಿಸಬಾರದೆಂಬುದೀಗ ಕಂಗಳ ಮರೆಯಲಡಗಿರ್ದ ಪ್ರಭೆಯಂತೆ ಎಂಬ ಶಬ್ದಕ್ಕರ್ಥ.

**ಇದು ಪಿಂಡದ ನಿಜದ ನಿಲವು. ಪಿಂಡಸ್ಥಲ ಸಮಾಪ್ತ.**

ಇಂತಪ್ಪ ಮಹಾಪಿಂಡಸ್ಥಲವು ತಾ ತನ್ನ ಲೀಲೆಯಿಂ ತನ್ನೊಳಗಡಗಿದ ಸಕಲ ನಿಷ್ಕಲಾತ್ಮ ತತ್ವಂಗಳನುಂಟು ಮಾಡಿ ತೋರಬೇಕೆಂದು ಇಚ್ಛೈಸಲು ಜ್ಞಾನೋದಯವಾಯಿತ್ತಾಗಿ ಮುಂದೆ ಪಿಂಡಜ್ಞಾನಸ್ಥಲದ ವಚನ.

## ಪಿಂಡಜ್ಞಾನಸ್ಥಲ.

೫. ಆದಿಯಾಧಾರವಿಲ್ಲದಂದು ಹಮ್ಮು ಬಿಮ್ಮುಗಳಿಲ್ಲದಂದು ಸುರಾಳ ನಿರಾಳವಿಲ್ಲದಂದು ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರಾ ನಿಮ್ಮ ಶರಣನುದಯಿಸಿದನಂದು ॥೫॥

ಟೀಕು:--- ಆದಿಯಾಧಾರವೆಂಬೆರಡು ಕುರುಹುಗೊಳಿಸದ ಮುನ್ನ ಎಂಬುದೀಗ ಆದಿ ಆಧಾರವಿಲ್ಲದಂದು ಎಂಬ ಶಬ್ದಕ್ಕರ್ಥ ಮದಹಂಕಾರ ವೈದೋರದ ಮುನ್ನವೆಂಬುದೀಗ ಹಮ್ಮು ಬಿಮ್ಮು ಇಲ್ಲದಂದು ಎಂಬ ಶಬ್ದಕ್ಕರ್ಥ. ಸಕಳ ನಿಃಕಳವೆಂಬೆರಡು ಹುಟ್ಟದಂದು ಎಂಬುದೀಗ ಸುರಾಳ ನಿರಾಳವಿಲ್ಲದಂದು ಎಂಬ ಶಬ್ದಕ್ಕರ್ಥ. ಸಮಸ್ತ ಲೋಕ ಪ್ರಪಂಚು ಪಸರಿಸದಂದು ಎಂಬುದೀಗ ಸಚರಾಚರವೆಲ್ಲ ರಚನೆಗೆ ಬಾರದಂದು ಎಂಬ ಶಬ್ದಕ್ಕರ್ಥ. ಇವಾವಾವು ಇಲ್ಲದಂದು ಇಪ್ಪ ಮಹಾಘನದೊಳಗೆ ಚಿಚ್ಛಕ್ತಿ ಹುಟ್ಟಲು ಆ ಚಿಚ್ಛಕ್ತಿಯ ಸ್ವರೂಪವೇ ಶರಣ ರೂಪಾಗಿ ಉದಯವಾಯಿತ್ತೆಂಬುದೀಗ ಗುಹೇಶ್ವರನ ಶರಣನುದಿಸಿದನಂದು ಎಂಬ ಶಬ್ದಕ್ಕರ್ಥ. ॥೫॥

೬. ನಾದಬಿಂದುಗಳಿಲ್ಲದಂದು, ನಿರ್ಭಯನೆಂಬ ಗಣೇಶ್ವರನು. ಉತ್ಪತ್ತಿ ಸ್ಥಿತಿಲಯವಿಲ್ಲದಂದು, ಅಕ್ಷಯನೆಂಬ ಗಣೇಶ್ವರನು. ಓದು ವೇದಂಗಳಿಲ್ಲದಂದು ಓಂಕಾರನೆಂಬ ಗಣೇಶ್ವರನು. ಯುಗ ಜುಗವಿಲ್ಲದಂದು ಊರ್ಧ್ವಮುಖನೆಂಬ ಗಣೇಶ್ವರನು. ಗುಹೇಶ್ವರನೆಂಬ ಲಿಂಗವಿಲ್ಲದಂದು ನಿರ್ಮಾಯನೆಂಬ ಗಣೇಶ್ವರನು.

ಟೀಕು:--- ನಾದಬಿಂದು ಸಂಜ್ಞೆಯಪ್ಪ ಶಿವಶಕ್ತಿ ಪಿಂಡವ ಧರಿಸಿದ ಶಂಕೆಯ ಭಯವು ಎನ್ನಿಂದಾಯಿತ್ತಲ್ಲದೆ, ಆ ನಾದಬಿಂದುವಿಲ್ಲದ ತಾನು ನಿರ್ಭಯನೆಂಬದೀಗ ನಾದಬಿಂದುವಿಲ್ಲದಂದು ನಾನು ನಿರ್ಭಯನೆಂಬ



ಗಣೇಶ್ವರನು ಎಂಬ ಶಬ್ದಕ್ಕರ್ಥ. ಉತ್ಪತ್ತಿ ಸ್ಥಿತಿ ಲಯವಿಲ್ಲದಂದು ಅನಿತ್ಯಭಾವವೆಂಬುದೆನ್ನಿಂದಾಯಿತ್ತಲ್ಲದೆ, ಆ ಉತ್ಪತ್ತಿ ಸ್ಥಿತಿಲಯದವ ನಾನಲ್ಲ. ನಾನು ಅಕ್ಷಯನೆಂಬುದೀಗ ಉತ್ಪತ್ತಿ ಸ್ಥಿತಿಲಯವಿಲ್ಲದಂದು ನಾನು ಅಕ್ಷಯನೆಂಬ ಗಣೇಶ್ವರನು ಎಂಬ ಶಬ್ದಕ್ಕರ್ಥ. ಅದು ಬ್ರಹ್ಮ ಇದು ಬ್ರಹ್ಮವೆಂದು ವಚಿಸುವ ಶೃತಿಪ್ರಮಾಣವಾಕ್ಯ ಎನ್ನಿಂದಾಯಿತ್ತಲ್ಲದೆ, ಈ ಉಲುಹಿಲ್ಲದೊಡೆ ನಾನು ಪ್ರಣವರೂಪನೆಂಬುದೀಗ ಓದು ವೇದಂಗಳಿಲ್ಲದಂದು, ಓಂಕಾರನೆಂಬ ಗಣೇಶ್ವರನೆಂಬ ಶಬ್ದಕ್ಕರ್ಥ. ಯುಗ ಜುಗ ಬ್ರಹ್ಮಾಂಡಂಗಳೆಂಬ ಅಧೋಮುಖ ಎನ್ನ ಉದಯದಿಂದಾದವಲ್ಲದೆ, ನಾನು ಊರ್ಧ್ವಮುಖನೆಂಬುದೀಗ ಯುಗ ಜುಗಂಗಳಿಲ್ಲದಂದು ಊರ್ಧ್ವಮುಖನೆಂಬ ಗಣೇಶ್ವರನೆಂಬ ಶಬ್ದಕ್ಕರ್ಥ. ನಾನು ಲಿಂಗವೆಂಬುಭಯ ಸಂದೇಹ ಭ್ರಾಂತು ಎನ್ನಿಂದಾಯಿತ್ತಲ್ಲದೆ, ಈ ಸಂದೇಹ ಭ್ರಾಂತಳಿದಡೆ, ನಾನು ನಿರ್ಮಾಯನೆಂಬುದೀಗ ಗುಹೇಶ್ವರಲಿಂಗವಿಲ್ಲದಂದು ನಾನು ನಿರ್ಮಾಯನೆಂಬ ಗಣೇಶ್ವರನೆಂಬ ಶಬ್ದಕ್ಕರ್ಥ.

೭. ಅಯ್ಯಾ, ಜಲ ಕೂರ್ಮ ಗಜ ಫಣಿಯ ಮೇಲೆ ಧರೆ ವಿಸ್ತರಿಸಿ ನಿಲ್ಲದಂದು, ಗಗನವಿಲ್ಲದಂದು, ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರದಂದು, ತರುಗಿರಿ ತೃಣ ಕಾಷ್ಠಂಗಳಿಲ್ಲದಂದು, ಯುಗ ಜುಗ ಮಿಗಿಲೆನಿಸಿ ನಿಂದ ಹದಿನಾಲ್ಕು ಭುವನ ನೆಲೆಗೊಳ್ಳದಂದು, ನಿಜವನರಿದಿಹೆನೆಂಬ ತ್ರಿಜಗದಾಧಿಪತಿಗಳಿಲ್ಲದಂದು ತೋರುವ ಬೀರುವ ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರ ಲಿಂಗವು.

ಟೀಕು.---ಪಂಚಭೂತಾದಿ ಸ್ಥಾವರ ಜಂಗಮವಿಲ್ಲದಂದು ಸ್ವಯಂಭುವಾಗಿಪ್ಪುದು ನಿಜವೆಂಬುದೀಗ ಜಲಕೂರ್ಮಗಜ ಫಣಿಯ ಮೇಲೆ ಧರೆ ವಿಸ್ತರಿಸಿ ನಿಲ್ಲದಂದು, ಗಗನವಿಲ್ಲದಂದು ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರದಂದು, ತರುಗಿರಿ ತೃಣಕಾಷ್ಠಾದಿಗಳಿಲ್ಲದಂದು ಎಂಬ ಶಬ್ದಕ್ಕರ್ಥ. ಯುಗಜುಗ ಮಿಗಿಲೆನಿಸಿ ನಿಂದ ಹದಿನಾಲ್ಕು ಭುವನ ನೆಲೆಗೊಳ್ಳದಂದು ನಿಜವು ಸ್ವಯಂಭುವೆಂಬುದೀಗ ಕಾಣ ಬಂದರ್ಥ. ಆ ನಿಜವ ಕಂಡಿಹೆನರಿದಿಹೆನೆಂಬ ಬ್ರಹ್ಮ ವಿಷ್ಣು ರುದ್ರರುಗಳಿಲ್ಲದಂದು ಎಂಬುದೀಗ ನಿಜವನರಿದಿಹೆನೆಂಬ ತ್ರಿಜಗದಾಧಿಪತಿಗಳಿಲ್ಲದಂದು ಎಂಬ ಶಬ್ದಕ್ಕರ್ಥ. ಈ ಭಾವವು ಇಲ್ಲದಂದು ಆ ಪರಬ್ರಹ್ಮವೆಲ್ಲ ನಿಜವಾಗಿಪ್ಪುದೆಂದು ತನಗೆ ತೋರುವ ಬೀರುವ ಭಾವದೊಳಗೆ ಆ ವಸ್ತು ತದ್ಗತವಾಗಿ ಭರಿತವಾಗಿ

ನಿರ್ಗಮನವಾಗಿಪ್ಪುದೆಂಬುದೀಗ ತೋರುವ ಬೀರುವ ಭಾವದ ಪರಿಯ ಆ ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರನೆಂಬ ಶಬ್ದಕ್ಕರ್ಥ.

೮. ಅಯ್ಯಾ, ನೀನು ನಿರಾಳ ನಿರ್ಮಾಯನಾಗಿಪ್ಪೆಯಾಗಿ, ಆಕಾಶದ ಪ್ರಕಾಶವಿಲ್ಲದಂದು, ಸಾಕ್ಷಿಸಭೆಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು, ಆಧಾರದೊಳಗಣ ವಿಭೂತಿಯನೆ ತೆಗೆದು, ಭೂಮಿಯ ನೆಲೆಗೊಳಿಸಿ, ಪಂಚಾಶತ್‌ಕೋಟಿ ವಿಸ್ತೀರ್ಣ ಭೂಮಂಡಲಕ್ಕೆ ಸುತ್ತಿ ಹರಿವ ಸಪ್ತಸಾಗರಂಗಳು ಎಂಭತ್ತಾರು ಕೋಟಿಯು ತೊಂಭತ್ತೇಳು ಲಕ್ಷ ಕಾಲ ಭುವನ ಮಂಡಲಕ್ಕೆ ಉದಯ ಬ್ರಹ್ಮಾಂಡ ಆರುವತ್ತಾರುಕೋಟಿ ತಾರಾಮಂಡಲವೆಂದಡೆ, ಬೆಳಗಿ ತೋರಿದ ಹನ್ನೆರಡು ಜ್ಯೋತಿಯ, ನಿಲಿಸಿ ತೋರಿದ ಹದಿನಾಲ್ಕು ಭುವನವ. ಈ ಜಗದ ಜಂಗುಳಿಯ ಕಾವ ಗೋವಳ ತಾನಾಗಿ ಚವುರಾಶಿ ಲಕ್ಷ ಜೀವರಾಶಿಗಳಿಗೆ ರಾಶಿವಾಳ ತಾನಾಗಿ ಸಕಲರ ಅಳಿವಿನ ಉಳಿವಿನ ನಿಂದ ನಿಜವ ನೋಡಿ ಕಂಡೆನು ಗುಹೇಶ್ವರಾ ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಟೀಕು:— ನಿರಾಳ ನಿರ್ಮಾಯನಾಗುತ್ತಿಹ ಪರಶಿವನು, ಆಕಾಶ ಪ್ರಕಾಶಿಸದಂದು ನಿಜವಾಗಿದ್ದನೆಂಬುದೀಗ ಕಾಣ ಬಂದರ್ಥ. ತನ್ನ ನಿಜವನುಸುರಿಹೆನೆಂದಡೆ ತನ್ನಿಂದನ್ಯವಾರೂ ಇಲ್ಲವೆಂಬುದೀಗ ಸಾಕ್ಷಿ ಸಭೆಗಳಿಲ್ಲದಂದು ಎಂಬ ಶಬ್ದಕ್ಕರ್ಥ. ಸಚರಾಚರವೆಲ್ಲ ರಚನೆಗೆ ಬಾರದಂದು ನಿಜವಾಗಿದ್ದನೆಂಬುದೀಗ ಕಾಣ ಬಂದರ್ಥ. ಇಂತು ಇವಾವಾವು ಇಲ್ಲದಂದು ಜಗತ್ ಸೃಷ್ಟ್ಯರ್ಥಕಾರಣವಾಗಿ ತನ್ನ ಮಹದಹಂಕಾರ ಭೂಷಣಮಪ್ಪ ಚಿದ್ವಿಭೂತಿಯನು ಆತ್ಮಾಂತರ್ಗತ ಸ್ಥಾನದಿಂ ಬಹಿರ್ಗತವ ಮಾಡಲು, ಅದೇ ಚಿಚ್ಛಕ್ತಿ ಸ್ವರೂಪವಾಗಿ, ಚಿತ್ತಾಯತೆ ಧಾತುಬದ್ಧಂ ಶರೀರಸ್ಥಂ ಎನಿಸಿಕೊಂಡಿತ್ತಾಗಿ ಆಧಾರದೊಳಗಣ ವಿಭೂತಿಯನೆ ತೆಗೆದು ಭೂಮಿಯ ನೆಲೆಗೊಳಿಸಿದನೆಂಬ ಶಬ್ದಕ್ಕರ್ಥ. ಆ ಚಿತ್‌ಶಕ್ತಿಯಿಂದ ಪಂಚಸಾದಾಖ್ಯ ತತ್ವಂಗಳುದಯಿಸಿದವು. ಆ ಸಾದಾಖ್ಯ ತತ್ವಂಗಳಿಂದ ಅಷ್ಟತನುಗಳುದಯಿಸಿದವು. ಆ ಅಷ್ಟತನುಗಳಿಂದ ಬ್ರಹ್ಮಾಂಡವಾದಿಯಾದ ನಾನಾ ಪ್ರಪಂಚುಗಳುದಯಿಸಿದವೆಂಬುದರೊಳಗೆ, ಬ್ರಹ್ಮಾಂಡ ವಳಯ, ಸೂರ್ಯಮಂಡಲ, ತಾರಾಮಂಡಲ, ಚತುರ್ದಶಭುವನ ಕಾಲ ಕಲ್ಪಿತ ಪ್ರಮಾಣಂಗಳೆಲ್ಲವು ಅಡಗಿದವೆಂಬುದು ಕಾಣ ಬಂದರ್ಥ. ಚೌರಾಶಿಲಕ್ಷ ಜೀವ



ರಾಸಿಗಳಿಗೆ ಆ ಪರವಸ್ತುವೇ ಕರ್ತೃವೆಂಬುದು ಕಾಣಬಂದರ್ಥ. ಇಂತುದಯಿಸಿದ ಸಮಸ್ತ ಪ್ರಪಂಚುಗಳು ಎಲ್ಲಿ ಅಡಗಿದವೆಂದರೆ “ಯದ್ದೃಷ್ಟಂ ತನ್ನಷ್ಟಂ” ಎಂದುದಾಗಿ, ಆ ಮಹತ್ತಿನೊಳಗಡಗಿದವೆಂಬುದು ಸಕಲರ ಅಳಿವಿನ ಉಳಿವಿನ ಎಂಬ ಶಬ್ದಕ್ಕರ್ಥ. ಆ ಉಳಿಮೆಯ ಸುಜ್ಞಾನದೀಪ್ತಿಯಿಂ ಕಂಡೆನೆಂಬುದು ನೋಡಿ ಕಂಡೆನೆಂಬುದಕ್ಕರ್ಥ.

೯. ತಲೆ ಇಲ್ಲದ ತಲೆಯಾತಂಗೆ ಕರುಳಿಲ್ಲದ ಒಡಲು ನೋಡಾ. ಆನಲಂಗೆ ಅಂಗವಿಲ್ಲದಂಗನೆ ಸತಿಯಾಗಿಪ್ಪಳು. ಇವರಿಬ್ಬರ ಬಸಿರಲ್ಲಿ ಹುಟ್ಟಿದಳೆಮ್ಮ ತಾಯಿ. ನಾ ಹುಟ್ಟಿ ತಾಯ ಕೈವಿಡಿದು ಸಂಗವ ಮಾಡಿ ನಿರ್ದೋಷಿಯಾದೆನು ಕಾಣಾ ಗುಹೇಶ್ವರಾ.

ಟೀಕು:— ಜ್ಞಾನದ ತೂರ್ಯವೆಂಬ ವೃತ್ತಿಜ್ಞಾನವಳಿದು ಶುದ್ಧಜ್ಞಪ್ತಿಯೇ ತಲೆ ಇಲ್ಲದ ತಲೆ ಎಂಬ ಶಬ್ದಕ್ಕರ್ಥ. ಆ ಜ್ಞಪ್ತಿಯೇ ಶಿರಸ್ಸಾಗಿಪ್ಪ ಪರಬ್ರಹ್ಮಕ್ಕೆ ಕರಣಾದಿಗಳೆಂಬ ಕರುಳಿಲ್ಲದ ಪರಕಾಯ ಒಡಲಾಯಿತ್ತಾಗಿ ಕರುಳಿಲ್ಲದ ಒಡಲೆಂಬ ಶಬ್ದಕ್ಕರ್ಥ. ಇಂತು ಪರಶಿವನೆಂಬ ಪುರುಷಂಗೆ ಅಕಾಯ ರೂಪಿಣಿಯಪ್ಪ ಪರಶಕ್ತಿಯೇ ಸ್ತ್ರೀಯಳಾಗಿಪ್ಪಳೆಂಬುದೀಗ ಅಂಗವಿಲ್ಲದಂಗನೆ ಸತಿಯಾಗಿಪ್ಪಳೆಂಬ ಶಬ್ದಕ್ಕರ್ಥ. ಆ ಪರಶಿವನ ಆ ಪರಶಕ್ತಿಯ ಅಭಿನ್ನಸಂಯೋಗ ಮಥನದಿಂದ ಚಿತ್ಶಕ್ತಿ ಹುಟ್ಟಿದಳೆಂಬುದೀಗ ಇವರಿಬ್ಬರ ಬಸಿರಲ್ಲಿ ಹುಟ್ಟಿದಳೆಮ್ಮ ತಾಯಿ ಎಂಬ ಶಬ್ದಕ್ಕರ್ಥ. ಆ ಚಿತ್ಶಕ್ತಿಯ ಗರ್ಭದೊಳಗೆ ಶಿವಶರಣ ಹುಟ್ಟಿದ ಕಾರಣ, ನಾ ಹುಟ್ಟಿ ಎಂಬ ಶಬ್ದಕ್ಕರ್ಥ. ಆ ಚಿತ್ಶಕ್ತಿಯನು ಶರಣನು ಕೃತನಿಶ್ಚಯ ಹಸ್ತದಿಂ ದೃಢವಿಡಿದ ಕಾರಣ ತಾಯ ಕೈಯ್ಯವಿಡಿದು ಎಂಬ ಶಬ್ದಕ್ಕರ್ಥ. ಆ ಶರಣನು ಆ ಶಕ್ತಿಯಲ್ಲಿ ಸಮರಸ ಸಂಗವ ಮಾಡಿ ಸರ್ವ ದೋಷಂಗಳಳಿದನೆಂಬುದೀಗ ತಾಯ ಕಯ್ಯವಿಡಿದು ಸಂಗವ ಮಾಡಿ ನಿರ್ದೋಷಿಯಾದೆನೆಂಬ ಶಬ್ದಕ್ಕರ್ಥ.

೧೦. ಎನ್ನ ನಾನರಿಯದುದು ಮುನ್ನ ನೀನೇನಾಗಿರ್ದೆ ಹೇಳಾ? ಮುನ್ನ ಬಾಯ ಮುಚ್ಚಿಕೊಂಡಿರ್ದನೆಂಬುದು ನಾ ನಿನ್ನ ಕಣ್ಣಿಂದ ಕಂಡೆನು. ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದಡೆ ಅದ ನಿನ್ನ ಕಣ್ಣಿಂದ ಕಂಡು ನಾಚಿದೆ ನೋಡಾ. ಎನ್ನ ಕಾಂಬ ನಿನಗೆ ನಿನ್ನ ಕಾಂಬ ಎನಗೆ ಸುಚದ ನೋಟ ಒಂದೇ ನೋಡಾ ಗುಹೇಶ್ವರಾ. ನಿನ್ನ ಬೆಡಗಿನ ಬಿನ್ನಣವನರಿದೆ ನೋಡಾ ‖೧೦‖

ಟೀಕು:— ಶಿವಜ್ಞಾನೋದಯವಾದ ಶರಣನು ಅನಾದಿಯಲ್ಲಿ ಪರ ತತ್ವವು ನಿಶ್ಶಬ್ದವೆಂಬುದನು ಆ ಶಿವಜ್ಞಾನದೃಷ್ಟಿಯಲ್ಲಿ ನೋಡಿ ಕಂಡನು ಎಂಬುದೀಗ ಎನ್ನ ನಾನರಿಯದಂದು ಮುನ್ನ ನೀನೇನಾಗಿರ್ದೆ, ಮುನ್ನ ಬಾಯ ಮುಚ್ಚಿಕೊಂಡಿರ್ದೆನೆಂಬುದನು ನಾ ನಿನ್ನ ಕಣ್ಣಿಂದ ಕಂಡೆ ನೆಂಬ ಶಬ್ದಕ್ಕರ್ಥ. ಆ ಪರಶಿವ ತತ್ವದ ನಿಲವು ತಾನೆಂದರಿದ ಬಳಿಕ ನುಡಿದ ನುಡಿಯನು ತನ್ನ ಜ್ಞಾನ ದೃಷ್ಟಿಯಿಂದ ಕಂಡು ನಿವೃತ್ತಿಯ ಮಾಡಿದನೆಂಬುದೀಗ ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದಡೆ ಎನ್ನ ಕಣ್ಣಿಂದ ಕಂಡು ನಾಚಿದೆನೆಂಬ ಶಬ್ದಕ್ಕರ್ಥ. ಇಂತು ಶಿವತತ್ವ ಕಾಂಬ ಶರಣಂಗು ಆ ಶರಣನ ಕಾಂಬ ಶಿವತತ್ವಕ್ಕು ಮೂಲಜ್ಞಾನದೃಷ್ಟಿ ಒಂದೇ ಎಂದರಿದು ಪ್ರಭುದೇವರು ತಮ್ಮ ತಾವರಿದು ವಿವೇಕಿಸುತ್ತಿರ್ದರೆಂಬುದೀಗ ಎನ್ನ ಕಾಂಬ ನಿನಗೆ ನಿನ್ನ ಕಾಂಬ ಎನಗೆ ಸಂಚದ ನೋಟ ಒಂದೆ ಎಂಬ ಬೆಡಗನರಿದೆನೆಂಬ ಶಬ್ದಕ್ಕರ್ಥ.

೧೧. ಮಾಯೆಯ ಬಲೆಯಲ್ಲಿ ಸಿಲುಕಿದ ಮರುಳ ನಾನೆಂದರಿದ ಪರಿಯ ನೋಡಾ. ಲಿಂಗವೆಂದರಿದ ಪರಿಯ ನೋಡಾ. ತನ್ನ ವಿನೋದಕ್ಕೆ ಬಂದು ನಿಶ್ಚಿಂತ ನಿರಾಳ ಗುಹೇಶ್ವರನೆಂದರಿದ ಪರಿಯ ನೋಡಾ.

ಟೀಕು:—ಮಾಯಾ ಪಾಶವ ಹರಿದು, ಭ್ರಾಂತಿಸೂತಕವಳಿದು, ಶಿವ ಜ್ಞಾನೋದಯವಾದ ಶರಣನು ಮಾಯಾ ಬಲೆಯಲ್ಲಿ ಸಿಲುಕಿದ ಮರುಳನಾ ನೆಂದರಿದ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಆ ಮಹಾಲಿಂಗದ ಘನವ ಸದ್ವಿವೇಕದಿಂ ವಿವೇಕಿಸಿ ಅರಿದು ಪರಮ ಹರುಷಿತನಾಗಿ ಲಿಂಗವೆಂದರಿದ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಎನ್ನ ಲೀಲೆಯಿಂದ ನಾನೆ ಸಂಸಾ ರವ ಹೊದ್ದಿಸಿಕೊಂಡೆನಲ್ಲದೆ, ನಿಜದಿಂದ ನೋಡಲು, ತಾನೇ ಪರಶಿವನೆಂಬು ದೀಗ, ತನ್ನ ವಿನೋದಕ್ಕೆ ಬಂದು ನಿಶ್ಚಿಂತ ನಿರಾಳ ಗುಹೇಶ್ವರನನರಿದ ಪರಿಯ ನೋಡಾ ಎಂಬ ಶಬ್ದಕ್ಕರ್ಥ

**ಇಂತೀ ಪಿಂಡಜ್ಞಾನಸ್ಥಲ ಸಮಾಪ್ತ.**



ಇಂತು ತನ್ನ ಪಿಂಡಜ್ಞಾನದ ಲೀಲೆಯಿಂದ ಮಾಯಾ ಮಹದಾದಿ ಪ್ರಪಂಚು ತನಗನ್ಯವಾಗಿರಲು, ಆ ಮಾಯೆಯ ತಾನರಿದು ಬೇರ್ಪಡಿಸಿ ನಿವೃತ್ತಿಯ ಮುಖದಿಂದ ವಿಡಂಬಿಸುತ್ತಿರಲು ಮುಂದೆ ಮಾಯಾವಿಲಾಸ ವಿಡಂಬನಸ್ಥಲವಾದುದು.

## ಮಾಯಾ ವಿಲಾಸ ವಿಡಂಬನಸ್ಥಲ

೧೨. ಕಾಯದ ಮೊದಲಿಂಗೆ ಬೀಜವಾವುದೆಂದರಿಯದೀ ಲೋಕ. ಇಂದ್ರಿಯಂಗಳು ಬೀಜವಲ್ಲ. ಆ ಕಳಾ ಭೇದವಲ್ಲ. ಸ್ವಪ್ನ ಬಂದೆರಗಿತ್ತಲ್ಲಾ. ಇದಾವಂಗೂ ಶುದ್ಧ ಸುಯಿಧಾನವಲ್ಲ ಕಾಣಾ ಗುಹೇಶ್ವರಾ.

ಟೀಕು:— ಶಿವಾಂಶಿಕರಾದಾತ್ಮರಿಗೆ ತನುಸಂಬಂಧದ ಜನನಕ್ಕೆ ಮೂಲವಾವುದೆಂದೊಡೆ ಇಂದ್ರಿಯಂಗಳಿಂದುದಯವಲ್ಲ. ಅದೇನು ಕಾರಣವೆಂದಡೆ, ಆ ಇಂದ್ರಿಯಂಗಳು ಜಡವಿಷಯಂಗಳಾದ ಕಾರಣವೆಂಬುದೀಗ, ಕಾಯದ ಮೊದಲಿಂಗೆ ಇಂದ್ರಿಯಂಗಳು ಬೀಜವಲ್ಲವೆಂಬ ಶಬ್ದಕ್ಕರ್ಥ. ಆತ್ಮನ ಕಲಾ ಭೇದದಿಂದಾದುದಲ್ಲ. ಅದೇನು ಕಾರಣವೆಂದೊಡೆ, ಆತ್ಮನು ನಿರ್ಮಲ ಮಪ್ಪ ಶಿವಕಲಾಂಶಿಕನಾದ ಕಾರಣವೆಂಬುದೀಗ ಆ ಕಳಾಭೇದವಲ್ಲವೆಂಬ ಶಬ್ದಕ್ಕರ್ಥ. ಈ ದೇಹ ಸಂಬಂಧಮುತ್ಪತ್ಯವೇತರಿಂದಾಯಿತ್ತೆಂದಡೆ ಶಿವ ತನ್ನ ತದಂಶವಾದಾತ್ಮರಿಗೆ ತಾನೇ ಮರವೆ ಘಟಿಸಲು ಆ ಮರವೆಯಾತ್ಮಂಗೆ ಎಡೆಯೊಕ್ಕ ಕಾರಣ ತಾನು ಶಿವಾಂಶಿಕವೆಂಬುವನು ಮರೆದು ದೇಹೋಹಂ ಎಂಬಲ್ಲಿ ದೇಹಭಾವ ಉದಯವಾಯಿತ್ತೆಂಬುದೀಗ ಸ್ವಪ್ನ ಬಂದೆರಗಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತು ಶಿವಜ್ಞಾನದಿಂದ ಆತ್ಮಂಗೆ ಬಂದ ಮರವೆಯೆ ದೇಹದ ಜನನಕ್ಕೆ ಮೊದಲೆಂಬುದನಾರಿಗೆಯು ಅರಿಯಬಾರದು. ಆ ಮರವೆಯನಾರು ಸಂಸ್ಕಾರವ ಮಾಡಿ ಜನನಕ್ಕೆ ರಹಿತರಾಗಬಾರದೆಂಬುದೀಗ ಇದಾವಂಗೂ ಶುದ್ಧಸುಯಿಧಾನವಲ್ಲ ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೩. ಅಂಡಜವೆಂಬ ತತ್ತಿಯೊಡೆದು ಪಿಂಡ ಪಲ್ಲಟವಾಗಿ ಗಂಡ ಗಂಡರನರಸಿ ತೊಳಲಿ ಬಳಲುತ್ತಿದ್ದಾರೆ. ಖಂಡ ಮಂಡಲದೊಳಗೆ ಕಂಡೆನೊಂದ ಚೋದ್ಯವ ಕಂದನ ಕೈಯ್ಯ ದರ್ಪಣವ ಪ್ರತಿಬಿಂಬ ನುಂಗಿತ್ತು. ದಿವಾ

ರಾತ್ರಿ ಉದಯದ ಬೆಳಗನು ಕತ್ತಲೆ ನುಂಗಿತ್ತು. ಗುಹೇಶ್ವರನಲ್ಲಿಯೇ ನಿರ್ವಯಲಾಯಿತ್ತು.

ಟೀಕು:—ಪರಶಿವತತ್ವದಲ್ಲಿ ಒಂದು ಚಿತ್ತೆಂಬ ಬಿಂದು ಉದಯಿಸಿ ಊರ್ಧ್ವರೇತಸ್ಸೆಂಬ ರಸಬದ್ಧದಿಂದ ಪಂಚವರ್ಣಾತ್ಮಕ ಸ್ವರೂಪಿಂ ಸಕಲ ತತ್ವವೆಂಬ ಶಿಸುವಂ ಗರ್ಭೀಕರಿಸಿಕೊಂಡಿಪ್ಪ ಕಾರಣದಿಂದೊಂದಂಡಾಕೃತಿ ಯಾಗಲು ಇದು ಅಂಡಜ ಶಬ್ದಕ್ಕರ್ಥ. ಆ ಚಿತ್ ಬ್ರಹ್ಮಾಂಡದೊಡಲೊಳಗೆ ಪ್ರಪಂಚ ಬ್ರಹ್ಮಾಂಡವೆಂಬ ತತ್ತಿ ಹುಟ್ಟಿತೆಂಬುದೀಗ ತತ್ತಿ ಶಬ್ದಕ್ಕೆ ನಿರ್ವಚನ. ಆ ಬ್ರಹ್ಮಾಂಡದೊಳಗೆ ಸಮಸ್ತ ಜೀವರಾಶಿಗಳು ಹುಟ್ಟುವಂದು ಹುಟ್ಟಿದನೊಬ್ಬ ಜೀವನು. ತನ್ನ ಸ್ವಭಾವ ಪಿಂಡವ ಮರೆದು, ಮಿಥ್ಯಪಿಂಡವ ಧರಿಸಲು ಆದು ಪಿಂಡ ಪಲ್ಲಟವಾಗಿ ಎಂಬ ಶಬ್ದಕ್ಕರ್ಥ. ಆ ಮಿಥ್ಯ ಪಿಂಡದೊಳಗೆ ಜ್ಞಾನೋದಯವಾದ ಸುಜ್ಞಾನಿಗಳು ತಮ್ಮ ನಿಲವಾವುದೆಂದರಿಯದೆ, ಇದಿರಿಟ್ಟುಕೊಂಡು ಪರಬಹ್ಮವನರಸುತಿಪ್ಪುದೀಗ, ಗಂಡ ಗಂಡರನರಸಿ ತೊಳಲಿ ಬಳಲುತ್ತಿದ್ದಾರೆ ಎಂಬ ಶಬ್ದಕ್ಕರ್ಥ. ಆ ಅರಸುವ ಖಂಡಿತಜ್ಞಾನದ ಬಗೆಯ ಭೇದಿಸಿ ಅರಿದು ಚೋದ್ಯಂಬಡುತಿಹುದೀಗ, ಖಂಡಮಂಡಲದೊಳಗೆ ಕಂಡೆನೆಂದು ಚೋದ್ಯವನೆಂಬ ಶಬ್ದಕ್ಕರ್ಥ. ಇಂತು ತನ್ನ ತಾನರಸುತ್ತಿರ್ಪ ಕರ್ಮಾವ ಶೇಷವೆಂಬ ಸುವಿವೇಕ ಶಿಷ್ಯನ ಜ್ಞಾನದೃಷ್ಟಿಯ ಮುಂದೆ ಇದಿರಿಟ್ಟು ತೋರುವ ಪ್ರರಬ್ರಹ್ಮವು ದರ್ಪಣ ಸ್ಥಾನವಾದ ಕಾರಣ ಕಂದನ ಕೈದರ್ಪಣವೆಂಬ ಶಬ್ದಕ್ಕರ್ಥ. ಆ ಇದಿರಿಟ್ಟು ತೋರುವ ಪರಬ್ರಹ್ಮವು ತನ್ನಲ್ಲಿ ತೋರಿ ಪ್ರತಿಬಿಂಬಿಸಿತ್ತೆಂದರಿದು, ಆ ಪ್ರತಿಬಿಂಬ ಭಾವವೇ ಪರಬ್ರಹ್ಮವನವಗ್ರಹಿಸಿ ತಾನೆ ಉಳಿಯಲು ಅದೀಗಾ ಕಂದನ ಕಯ್ಯ ದರ್ಪಣವ ಪ್ರತಿಬಿಂಬ ನುಂಗಿತ್ತೆಂಬ ಶಬ್ದಕ್ಕರ್ಥ. ಅರಿವೆಂಬುದೇ ದಿವ ಶಬ್ದಕ್ಕರ್ಥ. ಮರವೆಂಬುದೇ ರಾತ್ರಿ ಎಂಬುದಕ್ಕರ್ಥ. ಈ ಅರಿವು ಮರವೆಗಳೆರಡನು ತನ್ನಲ್ಲಿ ಹುಟ್ಟಿಸುವರಿವಿನ ಬೆಳಗು ಮಿಥ್ಯಾಜ್ಞಾನ ಪ್ರವೇಶಿತವಹ ಕಾರಣ ದಿವಾ ರಾತ್ರಿ ಉದಯದ ಬೆಳಗನು ಕತ್ತಲೆ ನುಂಗಿತ್ತೆಂಬುದಕ್ಕರ್ಥ. ಆ ಮರವೆಯು ನಿಜದಿಂದರಿಯಲು, ಅದು ಪರಬ್ರಹ್ಮದಲ್ಲಿ ಅಳಿಯಿತ್ತೆಂಬುದೀಗ ನಿರ್ವಯಲಾಯಿತ್ತೆಂಬ ಶಬ್ದಕ್ಕರ್ಥ. ॥೧೩॥

೧೪. ರಕ್ಕಸಿಗಿಬ್ಬರು ಮಕ್ಕಳು, ತೊಟ್ಟಿಲಮೇಲೈವರು, ರಕ್ಕಸಿ ಬಾಣತಿಯಾದರೆ, ಮಕ್ಕಳಿಗಿನ್ನೆಂತೊ? ತೊಟ್ಟಿಲ ತೂಗುವೆ. ಜೋಗುಳ



ವಾಡುವೆ. ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು. ಇದೇನು ಹೇಳಾ ಗುಹೇಶ್ವರಾ?

ಟೀಕು:— ಮಾಯೆ ಎಂಬ ರಕ್ಕಸಿ ಚತುರ್ದಶ ಭುವನಂಗಳೆಲ್ಲವನು ಅವಗ್ರಹಿಸಿ ನುಂಗುತ್ತಿಹ ಕಾರಣ ಆ ಮಾಯೆಗೆ ರಕ್ಕಸಿ ಎಂಬ ನಾಮವಾಯಿತ್ತು. ಆ ಮಾಯಾ ಸಂಕಲ್ಪಭಾವದಿಂ ಜೀವ ಪ್ರಾಣಗಳೆಂಬೆರಡು ಹುಟ್ಟಿದ ಕಾರಣ ಆ ರಕ್ಕಸಿಗಿಬ್ಬರು ಮಕ್ಕಳೆಂಬ ಶಬ್ದಕ್ಕರ್ಥ. ಆ ಜೀವ ಪ್ರಾಣಂಗಳಿಗೆ ತನುವೆ ಆಶ್ರಯಸ್ಥಾನವಾದ ಕಾರಣ ತೊಟ್ಟಿಲೆಂಬ ಶಬ್ದಕ್ಕರ್ಥ. ಆ ತನುವಿನೊಳಗೆ ಪಂಚಭೂತಂಗಳು ಮಾಯಾಧೀನದಿಂ ಹುಟ್ಟಿದವೆಂಬುದೀಗ ತೊಟ್ಟಿಲಮೇಲೈವರು ಎಂಬ ಶಬ್ದಕ್ಕರ್ಥ. ಇಂತು ತನ್ನಿಂದ ಹುಟ್ಟಿದ ಜೀವ ಪ್ರಾಣ ಪಂಚಭೂತಂಗಳನು ತಾನೆ ನುಂಗುತ್ತುಗುಳುತ್ತ ತಾಯಿ ರಕ್ಕಸಿಯಾದಳೆಂಬಂತಿರಲು, ಅದು ರಕ್ಕಸಿ ಬಾಣತಿಯಾದಳೆಂಬ ಶಬ್ದಕ್ಕರ್ಥ. ಇಂತು ತಾಯಿ ರಕ್ಕಸಿಯಾಗಲು ಮಕ್ಕಳಿನ್ನೆಂತು ಬದುಕುವರೆಂಬುದು ಮಕ್ಕಳಿಗಿನ್ನೆಂತೊ ಎಂಬ ಶಬ್ದಕ್ಕರ್ಥ. ಇಂತು ಮಾಯಾಧೀನದಿಂ ದೇಹಕರ್ಮವಶಮಪ್ಪನ್ನಕ್ಕರ ಚರಿಸುವೆನೆಂಬುದೀಗ, ತೊಟ್ಟಿಲ ತೂಗುವೆನೆಂಬುದಕ್ಕರ್ಥ. ಆ ದೇಹ ಚರಿಸುವನ್ನಕ್ಕರ ;ಶಬ್ದಜಾಲಂಗಳಿಂ ಆ ದೇಹ ಪ್ರಾರಬ್ಧವ ಜೋಗೈಸುವೆನೆಂಬುದೀಗ ಜೋಗುಳವಾಡುವೆನೆಂಬ ಶಬ್ದಕ್ಕರ್ಥ. ಆ ಮಾಯೆ ತನ್ನನು ಆ ದೇಹವೇ ಅವಗ್ರಹಿಸಿಕೊಂಡಿಪ್ಪುದೀಗ, ರಕ್ಕಸಿ ಬಾಣತಿಯು ತೊಟ್ಟಿಲು ನುಂಗಿತ್ತೆಂಬ ಶಬ್ದಕ್ಕರ್ಥ.

೧೫. ಗಗನದ ಮೇಲೊಂದಭಿನ್ನದ ಗಿಳಿ ಹುಟ್ಟಿ ಸಯಸಂಭ್ರಮದಲ್ಲಿ ಮನೆಯ ಮಾಡಿತ್ತು. ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು. ಬ್ರಹ್ಮನಾ ಗಿಳಿಗೆ ಹಂಜರವಾದ. ವಿಷ್ಣುವಾ ಗಿಳಿಗೆ ಕೊರೆಕೂಳಾದ. ರುದ್ರನಾ ಗಿಳಿಗೆ ಕೋಳುವೋದ. ಇಂತೀ ಮೂವ್ವರ ಮುಂದಣ ಕಂದನ ನುಂಗಿ ದೃಷ್ಟ ನಾಮ ನಷ್ಟವಾಯಿತ್ತು. ಇದೇನು ಹೇಳಾ ಗುಹೇಶ್ವರಾ!

ಟೀಕು:—"ಆತ್ಮಾಕಾಶಮಯಂ ತಾವತ್" ಆತ್ಮನೆಂಬುದೀಗ ಗಗನವೆಂಬ ಶಬ್ದಕ್ಕರ್ಥ. ಆ ಆತ್ಮನ ಅಹಂಕಾರ ವಿಭ್ರಾಂತಿಯ ತೂರ್ಯಾವಸ್ಥೆಯಲ್ಲಿ ಜೀವಹಂಸನುದಯಿಸಿದನೆಂಬುದೀಗ, ಗಗನದ ಮೇಲೊಂದ

ಭಿನ್ನದ ಗಿಳಿ ಹುಟ್ಟಿತ್ತೆಂಬುದಕ್ಕರ್ಥ. ಆ ಜೀವ ಹಂಸನು ಸಂಸಾರ ಪ್ರಸಂಚುವೆ ತನಗೆ ಆಶ್ರಯಿಸಿದ ಕಾರಣದಿಂ ಸಯ ಸಂಭ್ರಮದಲ್ಲಿ ಮನೆಯ ಮಾಡಿತ್ತೆಂಬ ಶಬ್ದಕ್ಕರ್ಥ. ಆ ಒಬ್ಬ ಜೀವಹಂಸನು ಪಂಚವಿಂಶತಿ ಭೂತಾತ್ಮಕನಪ್ಪ ಕಾರಣದಿಂ ಆ ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತೆಂಬ ಶಬ್ದಕ್ಕರ್ಥ. ರಜೋಗುಣ ಸಂಬಂಧವೆ ಬ್ರಹ್ಮತತ್ವವಾದ ಕಾರಣ ಆ ರಜೋಗುಣ ಸಂಬಂಧಮಪ್ಪ ಸ್ಥೂಲತನುವೆ ಆ ಜೀವಂಗೆ ನಿವಾಸಸ್ಥಾನವಾಯಿತ್ತೆಂಬುದೀಗ ಬ್ರಹ್ಮನಾ ಗಿಳಿಗೆ ಹಂಜರವಾದನೆಂಬ ಶಬ್ದಕ್ಕರ್ಥ. ಸಾತ್ವಿಕಗುಣ ಸಂಬಂಧವೆ ವಿಷ್ಣುತತ್ವವಾಗಿ, ಆ ಸಾತ್ವಿಕಗುಣ ಸಂಬಂಧಮಪ್ಪ ಸೂಕ್ಷ್ಮತನು ವಿಂದಾದ ಇಂದ್ರಿಯ ವಿಷಯಾದಿ ಭೋಗಂಗಳ ಸ್ಥಿತಿಗತಿ ಆ ಜೀವಂಗೆ ಆಹಾರವಾದ ಕಾರಣ ವಿಷ್ಣುವಾ ಗಿಳಿಗೆ ಕೊರೆ ಕೂಳಾದನೆಂಬ ಶಬ್ದಕ್ಕರ್ಥ. ತಮೋಗುಣ ಸಂಬಂಧವೆ ರುದ್ರತತ್ವವಾಗಿ ಆ ತಮೋಗುಣ ಸಂಬಂಧವಪ್ಪ ಕಾರಣ ತನುವಿನ ಮರವೆ ಆ ಜೀವಭಾವ ಭ್ರಾಂತಿಗೆ ಕೋಳುವೋಯಿತ್ತೆಂಬುದೀಗ ರುದ್ರನಾ ಗಿಳಿಗೆ ತಾ ಕೋಳುವೋದನೆಂಬ ಶಬ್ದಕ್ಕರ್ಥ. ಇಂತೀ ತತ್ವತ್ರಯಂಗಳಿಗೆ ಇದಿರಿಟ್ಟಿಹ ಆ ಜೀವಭ್ರಾಂತು ನುಂಗಿಪ್ಪ ಕಾರಣ ಲಕ್ಷ್ಯಕ್ಕೆಯೂ ತನ್ನ ನಾಮಕ್ಕೆಯೂ ನಷ್ಟ ಉಂಟೆಂಬುದೀಗ ಮೂವ್ವರ ಮುಂದಣ ಕಂದನ ನುಂಗಿ ದೃಷ್ಟನಾಮ ನಷ್ಟವಾಯಿತ್ತೆಂಬ ಶಬ್ದಕ್ಕರ್ಥ.

೧೬. ನೆಲದ ಬೊಂಬೆಗೆ ಜಲದ ಬಣ್ಣವನುಡಿಸಿ ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ ವಾಯುವನಲನ ಸಂಚಕ್ಕೆ ಅರಳೆಲೆಯ ಶೃಂಗಾರವ ಮಾಡಿ ಆಡಿಸುವ ಯಂತ್ರವಾಹಕನಾರೋ? ಬಯಲ ಕಂಭಕ್ಕೆ ತಂದು ಸಯವೆಂದು ಪರವ ಕಟ್ಟಿದಡೆ ಸಯವದ್ವಯವಾಯಿತ್ತು. ಏನೆಂಬೆ ಗುಹೇಶ್ವರಾ?

ಟೀಕು:-- ಪೃಥ್ವಿಯಂಶದ ತನುವೆಂಬುದೀಗ ನೆಲದ ಬೊಂಬೆ ಎಂಬ ಶಬ್ದಕ್ಕರ್ಥ. ಆ ತನುವಿಂಗೆ ಅಪ್ಪುವಿನ ಅಂಶರಸದಿಂ ಬದ್ಧವ ಮಾಡಿ ಎಂಬುದೀಗ ಜಲದ ಬಣ್ಣವನುಡಿಸಿ ಎಂಬ ಶಬ್ದಕ್ಕರ್ಥ. ಆ ಪೃಥ್ವಿಅಪ್ಪುವಿನಂಶದಿಂ ಹಲವು ಪ್ರಕಾರದ ಪ್ರಕೃತಿ, ಆ ಪ್ರಕೃತಿ ಗುಣದಿಂ ಉಲಿವ ಕರಣಂಗಳೆಂಬುದೀಗ ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ ಎಂಬ ಶಬ್ದಕ್ಕರ್ಥ. ಅಗ್ನಿವಾಯುಗಳೆರಡು ಆ ತನುವಿಂಗೆ ಆಧಾರ ಸಂಚವಾಯಿತ್ತೆಂಬುದೀಗ, ವಾಯುವನಲನ ಸಂಚವೆಂಬ ಶಬ್ದಕ್ಕರ್ಥ. ಇಂತಪ್ಪ



ಶರೀರ ಸಂಬಂಧಮಪ್ಪ ಜೀವನ ಹಣೆಯಲ್ಲಿ ಪ್ರಾರಬ್ಧ ಸಂಕಲ್ಪಿತವಾಯಿತ್ತೆಂಬುದೀಗ ಅರಳೆಲೆಯ ಶೃಂಗಾರವ ಮಾಡಿ ಎಂಬ ಶಬ್ದಕ್ಕರ್ಥ. ಇಂತು ಆ ಜೀವಂಗೆ ಸಂಸಾರವನೊಪ್ಪವಿಟ್ಟು ಪರಶಿವನು ಯಂತ್ರವಾಹಕನಾಗಿ ಆಡಿಸುತ್ತಿದ್ದನೆಂಬುದೀಗ ಆಡಿಸುವ ಯಂತ್ರವಾಹಕನಾರೋ ಎಂಬ ಶಬ್ದಕ್ಕರ್ಥ. ಇದು ಮಿಥ್ಯವೆಂದರಿವುದೆ ಬಯಲೆಂಬ ಶಬ್ದಕ್ಕರ್ಥ. ದೃಢಬುದ್ಧಿ ಸ್ತಂಭವೆಂಬುದೀಗ ಕಂಭವೆಂಬರ್ಥ. ಆ ಕಂಭದಲ್ಲಿ ಪರಬ್ರಹ್ಮವೆ ನಿತ್ಯವೆಂದರಿದು ನೆಲೆಗೊಳಿಸಿದವೆಂಬುದೀಗ ಸಯವೆಂದು ಪರವ ನೆಲೆಗೊಳಿಸಿದರೆ ಎಂಬ ಶಬ್ದಕ್ಕರ್ಥ. ಆ ನೆಲೆಗೊಂಡ ನಿತ್ಯದಿಂದ ದ್ವೈತಭಾವ ವಳಿಯಿತ್ತಾಗಿ ಆ ಸಯವದ್ವಯವಾಯಿತ್ತೆಂಬ ಶಬ್ದಕ್ಕರ್ಥ.

೧೭. ಇಪ್ಪತ್ತೈದು ತಲೆಯೊಳಗೆ ಏಳು ಮೊಲೆ, ಮುಖವೆಂಟು, ಹದಿನಾಲ್ಕು ಬಾಯಿ, ನೂರಿಪ್ಪತ್ತು ಕೋರೆದಾಡೆ, ಹೃದಯದಲ್ಲಿ ಹುದುಗಿದಗ್ನಿಯ ತೆಗೆದು ಮುದ್ದಾಡಿ, ಧ್ವನಿಯ ಧರ್ಮವ ನುಂಗಿ, ಮನಪಬಣ್ಣಗಳಡಗಿ, ಹೆತ್ತ ತಾಯಿ ಮಗನ ನುಂಗಿ, ಶಿಸು ತಾಯ ಬೆಸಲಾಗಿ ಗುಹೇಶ್ವರನೆಂಬ ಸಿಲವು ಅಂಗ್ಯೆಯ ಮೊಲೆ ನುಂಗಿತ್ತು.

ಟೀಕು:-- ದೇಹಕ್ಕೆ ಶಿರಸ್ಸು ಹೇಗೆ ಪ್ರಧಾನವಾಗಿಪ್ಪುದು, ಹಾಗೆ ತದ್ದೇಹಕ್ಕೆ ಪಂಚವಿಂಶತಿ ತತ್ವವೆ ಪ್ರಧಾನವಾಗಿಹ ಕಾರಣ, ಇಪ್ಪತ್ತೈದು ತಲೆ ಎಂಬ ಶಬ್ದಕ್ಕರ್ಥ. ಸಪ್ತವ್ಯಸನಂಗಳು ವಿಷಯಂಗಳೆಂಬ ರಸ ತುಂಬಿಕೊಂಡಿರ್ದು ಆ ದೇಹಕ್ಕೆ ಸಂಸಾರ ಸುಖವ ಕೊಟ್ಟು ಪೋಷಿಸಿಕೊಂಡಿಪ್ಪ ಕಾರಣ ಏಳು ಮೊಲೆ ಎಂಬ ಶಬ್ದಕ್ಕರ್ಥ. ಆ ವ್ಯಸನ ವಿಷಯಂಗಳ ಗ್ರಹಿಸುವದಕ್ಕೆ ಮುಖವಾವುದೆಂದಡೆ, ಅಷ್ಟಮದಂಗಳೆ ಮುಖವಾದ ಕಾರಣ ಮುಖವೆಂಟು ಎಂಬ ಶಬ್ದಕ್ಕರ್ಥ. ಆ ಮುಖಂಗಳಿಗೆ ಚತುರ್ದಶ ಇಂದ್ರಿಯಂಗಳೆಂಬವು ಬಾಯಾದ ಕಾರಣ, ಹದಿನಾಲ್ಕು ಬಾಯಿ ಎಂಬ ಶಬ್ದಕ್ಕರ್ಥ. ಆ ಚತುರ್ದಶ ಮುಖದ್ವಾರದೊಳಗೆ ಆ ವಿಷಯಮಂ ಮಥನಿಸಿ ಭೋಗಿಸುವ ಅಂತರಂಗವಾವಾವೆಂದಡೆ, ನೂರಿಪ್ಪತ್ತು ಕರಣ ಮಥನಂಗಳೆಂಬವೆ ಕಾರಣವಾದ ಕಾರಣ ನೂರಿಪ್ಪತ್ತು ಕೋರೆದಾಡೆ ಎಂಬ ಶಬ್ದಕ್ಕರ್ಥ. ಇಂತಪ್ಪ ಮಾಯಾ ಭ್ರಾಂತಿಯ ಜೀವನ ಹೃದಯದಲ್ಲಿ ಅಡಗಿಪ್ಪ ಜ್ಞಾನಾಗ್ನಿಯ ಸ್ವಾನುಭಾವ ಬೋಧೆಯಿಂದೆಬ್ಬಿಸಿ ತದ್ದೇಹದಿಂ ಬೇರ್ಪಡಿಸಿ, ಕೃತ ನಿಶ್ಚಯದಿಂ ಪಿಡಿದು, ಲಾಲಿಸುತ್ತಿರಲು ಎಂಬುದೀಗ ಹೃದ

ಯದಲ್ಲಿ ಹುದುಗಿದಗ್ನಿಯು ತೆಗೆದು ಮುದ್ದಾಡಿಸಿ ಎಂಬ ಶಬ್ದಕ್ಕರ್ಥ. ಇಂತಾಗಲು ಶಬ್ದ ಜಾಲಂಗಳೆಂಬವೆಲ್ಲವು ಅಳಿದವೆಂಬುದೀಗ, ಧ್ವನಿಯ ಧರ್ಮವ ನುಂಗಿ ಎಂಬ ಶಬ್ದಕ್ಕರ್ಥ. ಮನಸ್ಸಿನ ಸಂಕಲ್ಪ ಭಾವದಿಂ ತೋರುವ ನಾನಾ ವರ್ಣಂಗಳೆಲ್ಲ ಅಳಿದವೆಂಬುದೀಗ ಮನದ ಬಣ್ಣಗಳಡಗಿ ಎಂಬ ಶಬ್ದಕ್ಕರ್ಥ. ಇಂತು ಮನದ ನ್ಯಾಯ ಧರ್ಮವಳಿದು, ಚಿತ್ ಶಕ್ತಿಯಿಂದುದ್ಭವಿಸಿಪ್ಪ ಶರಣನು ಆ ಚಿತ್ತು ತಾನೆ ತನ್ಮಯವಾಗಿ ಅವಗ್ರಹಿಸಿತ್ತೆಂಬುದೀಗ, ಹೆತ್ತತಾಯಿ ಮಗನ ನುಂಗಿದಳು ಎಂಬ ಶಬ್ದಕ್ಕರ್ಥ. ಆ ಚಿತ್ ಶಕ್ತಿಯೊಳಗೆ ತಾನೆಂಬ ಭಾವವ ಕಳೆದುಳಿದ ಶರಣನು ತಾನೇ ಶಿವತತ್ವ ಸ್ವರೂಪನಾಗಿ ಆ ಚಿತ್ ಶಕ್ತಿಗೆ ತಾನೇ ಮಾತೃಸ್ಥಾನವಾಗಿರ್ದನೆಂಬುದೀಗ ಶಿಶು ತಾಯ ಬೆಸಲಾಗಿ ಎಂಬ ಶಬ್ದಕ್ಕರ್ಥ. ಇಂತಾದ ನಿಜದ ನಿಲವು ಕರತಳಾಮಳಕವಾಗಿ, ಅಮೃತ ಕುಂಭಸ್ವರೂಪದಿಂದೊಪ್ಪುವ ಕರಸ್ಥಲದ ಲಿಂಗದೊಳಡಗಿತ್ತೆಂಬುದೀಗ ಅಂಗಯ್ಯ ಮೊಲೆ ನುಂಗಿತ್ತೆಂಬ ಶಬ್ದಕ್ಕರ್ಥ ॥೧೭॥

೧೮. ಜಂಬೂದ್ವೀಪದ ಬೆವಹಾರಿ ಖಂಡ ಭಂಡವ ತುಂಬಿ ಕುಂಭಿನಿಯುದರದ ಮೇಲೆ ಪಸಾರವನಿಕ್ಕಿದ. ಉಷ್ಣತೃಷ್ಣೆ ಘನವಾಗಿ ಕಡಲೇಳು ಸಮುದ್ರವಂ ಕುಡಿದು ನೀರಡಿಸಿದಾತ ಅರಲುಗೊಂಡು ಬೆರಗಾದ. ಶಿಸು ತಾಯ ಹೆಣನ ಹೊತ್ತುಕೊಂಡು ಹೆಸರ ಹೇಳುತ್ತೈದಾನೆ. ಗುಹೇಶ್ವರನೆಂಬ ನಿಲವು ವಸುಧೆಯಾಕೃತಿಯ ನುಂಗಿತ್ತು.

ಟೀಕು:—ಭೂಮಧ್ಯದೊಳಗಿಪ್ಪ ಮೇರುಗಿರಿಯ ಬಳಿಸಿ ಸಮೀಪಸ್ಥವಾಗಿಹ ಜಂಬೂದ್ವೀಪದ ಹಾಗೆ, ತನುಮಧ್ಯದೊಳಗಿಪ್ಪ ಅಹಂಕಾರವೆಂಬ ಮೇರುವಿನ ಪರಿವೇಷ್ಟಿಸಿಕೊಂಡಿಪ್ಪುದೀಗ ತನುವೆಂಬ ದ್ವೀಪ. ಅದು ಕಾರಣ ಜಂಬೂದ್ವೀಪವೆಂದರೆ ಸ್ಥೂಲ ತನುವೆಂಬುದಕ್ಕರ್ಥ. ಆ ಸ್ಥೂಲ ತನುವಿನ ಗುಣಧರ್ಮ ಕರ್ಮಂಗಳ ವ್ಯವಹಾರವ ಮಾಡುತ್ತಿಪ್ಪಾತನು ಜೀವನಾದ ಕಾರಣ, ಜಂಬೂದ್ವೀಪದ ಬೆವಹಾರಿ ಎಂಬ ಶಬ್ದಕ್ಕರ್ಥ. ಆ ಜೀವನು ಸಕಲ ಇಂದ್ರಿಯಂಗಳು ಕರಣಂಗಳೆಂಬ ಸಾಧನ ದ್ರವ್ಯಂಗಳ ಗಳಿಸಿಕೊಂಡನೆಂಬುದೀಗ ಖಂಡ ಭಂಡವ ತುಂಬಿದನೆಂಬ ಶಬ್ದಕ್ಕರ್ಥ. ಅಹಂಕಾರವೆಂಬ ಭಿತ್ತಿಯ ಮೇಲೆ ಆ ಕರಣಾದಿ ವಿಕಾರವೆಂಬ ದ್ರವ್ಯಂಗಳ ಪರಡಿಸಿಕೊಂಡಿಪ್ಪನೆಂಬುದೀಗ ಕುಂಭಿನಿಯುದರದ ಮೇಲೆ ಪಸಾರವನಿ



ಕ್ಕಿದನೆಂಬ ಶಬ್ದಕ್ಕರ್ಥ. ಆ ವಿಕಾರ ವಿಷಯಂಗಳಲ್ಲಿ ಕಾಮೋಷ್ಣವೆದ್ದು ಆಶಾತೃಷ್ಣೆ ಹೆಚ್ಚಿತ್ತೆಂಬುದೀಗ ಉಷ್ಣ ತೃಷ್ಣೆ ಘನವಾಗಿ ಎಂಬ ಶಬ್ದಕ್ಕರ್ಥ. ಆ ತೃಷ್ಣೆಯಿಂ ಸಂಸಾರ ವಿಷಯ ರಸಾಂಬುಧಿಯಂ ಪೋಷಿಸಿ, ಮತ್ತೆಯು ಆಶಾತೃಷ್ಣೆ ಹಿಂಗದೆ ಇರ್ದನೆಂಬುದೀಗ, ಕಡಲೇಳು ಸಮುದ್ರವಂ ಕುಡಿದು ನೀರಡಿಸಿದಾತ ಅರಲುಗೊಂಡು ಬೆರಗಾದನೆಂಬ ಶಬ್ದಕ್ಕರ್ಥ. ಆ ಮಾಯಾ ಸಂಕಲ್ಪ ಸಂಭೂತವಾಗಿಪ್ಪ ಜೀವನು, ಆ ಮಾಯಾವೃತ ಜೋಹವ ಧರಿಸಿಕೊಂಡು ಜಾತಿವರ್ಣ ನಾಮಂಗಳಿಗೊಳಗಾದನೆಂಬುದೀಗ ಶಿಸು ತಾಯ ಹೆಣನ ಹೊತ್ತುಕೊಂಡು ಹೆಸರ ಹೇಳುತ್ತೈದಾಳೆ ಎಂಬ ಶಬ್ದಕ್ಕರ್ಥ. ಇಂತಪ್ಪ ಜೀವನ ಮಿಥ್ಯಾಪಿಂಡದ ಮಧ್ಯದಲ್ಲಿ ಶಿವತತ್ವವಡಗಿತ್ತೆಂಬುದೀಗ, ಗುಹೇಶ್ವರನ ನಿಲವ ವಸುಧೆಯಾಕೃತಿ ನುಂಗಿತ್ತೆಂಬ ಶಬ್ದಕ್ಕರ್ಥ. ॥೧೮॥

೧೯. ಭೂಮಿಯ ಕಠಿಣವನು, ಆಕಾಶದ ಮೃದುವನು, ತಿಳಿವ ಗಮನದಲ್ಲಿಯೇ ನಿಂದಿತ್ತು. ಉದಕದೊಳಗೆ ಹುಟ್ಟಿದ ತೃಷ್ಣೆ ಉದಕವನರಸಿತ್ತಲ್ಲಾ. ಒಳಗೆ ಸತ್ತು ಹೊರಗಾಡುತ್ತಿದೆ ಗುಹೇಶ್ವರನೆಂಬ ಮಹಿಮ ಬೆರಗಾಗಿ, ಅಲ್ಲಿಯೇ ನಿಂದನು.

ಟೀಕು:— ಅನಾತ್ಮಕ ತತ್ವವೆಂಬುದು ಭೂಮಿಯ ಸಂಬಂಧವಾದ ಕಾರಣ ಭೂಮಿಯ ಕಠಿಣವೆಂಬ ಶಬ್ದಕ್ಕರ್ಥ. ಇಂತು ಆತ್ಮಾಕಾಶಮಯಂತಾವತ್ ಎಂದುದಾಗಿ ಆತ್ಮ ತತ್ವದ ಪರಿಭಾವವೆಂಬುದು ಆಕಾಶದ ಮೃದುವನು ಎಂಬ ಶಬ್ದಕ್ಕರ್ಥ. ಇಂತು ಆತ್ಮ ತತ್ವ ಅನಾತ್ಮ ತತ್ವವೆಂಬೆರಡನು ಇದಿರಿಟ್ಟುಕೊಂಡು ಅನುಭಾವದ್ವಾರದಿಂದ ಅರಿವುತ್ತಿರ್ದ ಮನಸ್ಸು ನಿಜದರಿವನರಿವ ತೆರನ ಕಾಣದೆ, ಅಲ್ಲಿಯೇ ಸಂಕಲ್ಪ ಬದ್ಧವಾದುದೆಂಬುದೀಗ ತಿಳಿವ ಗಮನವಲ್ಲಿಯೇ ನಿಂದಿತ್ತು ಎಂಬ ಶಬ್ದಕ್ಕರ್ಥ ಉದಕವೆಂದಡೆ ಮನಸ್ಸೆಂಬರ್ಥ. ಅದೆಂತೆಂದೊಡೆ, ಸಂಸಾರ ವಿಷಯ ರಸೇಂದ್ರಿಯ ಸಂಕಲ್ಪ ರೂಪಾದ ಕಾರಣ, ಆ ಮನದೊಳಗೆ ತನ್ಮನದ ನಿಲವ ನರಿಯ ಬೇಕೆಂಬರ್ಥ ಹುಟ್ಟಿ ಶ್ರದ್ಧಾತುರದಿಂದಿಪ್ಪುದೀಗ, ಉದಕದೊಳಗೆ ಹುಟ್ಟಿದ ತೃಷ್ಣೆ ಉದಕವನರಸಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇದು ಕಾರಣ ಅಂತರಂಗದೊಳಗೆ ತನ್ನ ನಿಜವು ನಷ್ಟವಾಗಿ, ಬಾಹ್ಯಾ

ಭ್ಯಂತರ ವಿಚಾರದಲ್ಲಿ ಬಳಸುತ್ತಿರಲು ಎಂಬುದೀಗ ಒಳಗೆ ಸತ್ತು ಹೊರಗಾಡುತ್ತಿದೆ ಎಂಬ ಶಬ್ದಕ್ಕರ್ಥ. ಅಲ್ಲಿ ಮಹಾಲಿಂಗದ ನಿಲವ ಹೊದ್ದದೆ, ನಿಬ್ಬೆರಗಾಗಿ ಇದ್ದುದೆಂಬುದೀಗ ಗುಹೇಶ್ವರಲಿಂಗವು ನಿಬ್ಬೆರಗಾಗಿದ್ದನೆಂಬ ಶಬ್ದಕ್ಕರ್ಥ. ॥೧೯॥

೨೦. ಭೂಮಿಯಾಕಾಶ ಒಂದು ಜೀವನುದರ. ಅಲ್ಲಿ ಘನವನು ಘನವೆನ್ನದವಂಗೆ, ಕಿರಿದನು ಕಿರಿದೆನ್ನದವಂಗೆ, ಆ ಘನವು ಮನಕ್ಕೆ ಗಮಿಸಿದಡೆ ಇದು ಸರಿಯುಂಟೆ ಗುಹೇಶ್ವರಾ?

ಟೀಕು:-- ಪಿಂಡ ಬ್ರಹ್ಮಾಂಡಯೋರೈಕ್ಯಂ ಎಂದುದಾಗಿ, ಬ್ರಹ್ಮಾಂಡದೊಳಗುಳ್ಳುದೆಲ್ಲವು ಒಂದು ಜೀವನ ಪಿಂಡದೊಳಗೆ ಉಂಟೆಂಬುದೀಗ, ಭೂಮಿಯಾಕಾಶ ಒಂದು ಜೀವನುದರವೆಂಬ ಶಬ್ದಕ್ಕರ್ಥ. ಇದನರಿತು ತನ್ನ ತನುವ ಕಿರಿದೆನ್ನದೆ, ಆ ಬ್ರಹ್ಮಾಂಡವ ಘನವೆನ್ನದಿಪ್ಪುದೀಗ, ಅಲ್ಲಿ ಘನವೆನ್ನದವಂಗೆಕಿರಿದನು, ಕಿರಿದೆನ್ನದವಂಗೆ ಎಂಬ ಶಬ್ದಕ್ಕರ್ಥ. ಆ ಘನತತ್ವವು ತಾನೆಂದರಿದು, ಮನೋ ಮೂರ್ತಿ ತಾನಾದಡೆ, ಪ್ರತಿಇಲ್ಲವೆಂಬುದೀಗ ಆ ಘನವು ಮನಕ್ಕೆ ಸಾಧ್ಯವಾದಡೆ ಇನ್ನು ಸರಿಯುಂಟೆ ಎಂಬ ಶಬ್ದಕ್ಕರ್ಥ. ॥೨೦॥

೨೧. ಬ್ರಹ್ಮಪಾಶ ವಿಷ್ಣುಮಾಯೆ ಎಂಬ ಬಲೆಯ ಬೀಸಿ ಹೊನ್ನು ಹೆಣ್ಣು ಮಣ್ಣೆಂಬ ಭ್ರಾಂತಿಯ ತೋರಿ ಮುಕ್ಕಣ್ಣನಾಡಿದ ಬೇಂಟೆಯ ಆಸೆ ಎಂಬ ಗುಟುಕನಿಕ್ಕಿ ಹೇಸದೆ ಕೊಂದೆಯಲ್ಲ ಗುಹೇಶ್ವರಾ. ॥೨೧॥

ಟೀಕು:--ರಜೋಗುಣವೆಂಬ ಪಾಶದಿಂ ಬದ್ಧನಾಗಿ, ಸತ್ವಗುಣದ ಸ್ಥಿತಿಯ ಬಲೆಯಲ್ಲಿ ಸಿಲುಕಿದನೆಂಬುದೀಗ, ಬ್ರಹ್ಮಪಾಶ ವಿಷ್ಣುಮಾಯೆ ಎಂಬ ಬಲೆಯ ಬೀಸಿತ್ತೆಂಬ ಶಬ್ದಕ್ಕರ್ಥ. ಹೊನ್ನು ಹೆಣ್ಣು ಮಣ್ಣೆಂಬವರ ಭ್ರಾಂತಿಯೊಳು ಮರುಳಾದರೆಂಬುದೀಗ, ಹೊನ್ನು ಹೆಣ್ಣು ಮಣ್ಣೆಂಬ ಭ್ರಾಂತಿ ತೋರಿ ಮುಕ್ಕಣ್ಣನಾಡಿದ ಬೇಂಟೆ ಎಂಬಶಬ್ದಕ್ಕರ್ಥ. "ಆಶಯಾ ಬದ್ಧತೆ ಲೋಕೆ ಕರ್ಮಣಾ ಬಹು ಚಿಂತಯಾ ಆಯುಕ್ಷೀಣ ನ ಜಾನಾತಿ ವೇಣು ಸೂತ್ರಂ ವಿಧೀಯತೆ" ಎಂದುದಾಗಿ ಎಂಬುದೀಗ ಆಸೆ ಎಂಬ ಗುಟುಕನಿಕ್ಕಿ ಹೇಸದೆ ಕೊಂದೆಯಲ್ಲಾ ಎಂಬ ಶಬ್ದಕ್ಕರ್ಥ. ॥೨೧॥

೨೨. ಬ್ರಹ್ಮಘನವೆಂಬೆನೆ? ಬ್ರಹ್ಮನ ನುಂಗಿತ್ತು ಮಾಯೆ. ವಿಷ್ಣು ಘನವೆಂಬೆನೆ? ವಿಷ್ಣುವ ನುಂಗಿತ್ತು ಮಾಯೆ. ರುದ್ರ ಘನವೆಂಬೆನೆ? ರುದ್ರನ ನುಂಗಿತ್ತು ಮಾಯೆ. ತಾ ಘನವೆಂಬೆನೆ? ತನ್ನ ನುಂಗಿತ್ತು ಮಾಯೆ. ಇಂತು ಸರ್ವವು ನಿನ್ನ ಮಾಯೆ. ಒಬ್ಬರನೊಬ್ಬರ ನೊಳಕೊಂಡಿತ್ತೆ ಹೇಳಾ ಗುಹೇಶ್ವರಾ?



ಟೀಕು:-- ರಾಜಸಾಹಂಕಾರದಲ್ಲಿ ಬ್ರಹ್ಮ ಮಾಯಾಸಕ್ತನಪ್ಪ ಕಾರಣ ಬ್ರಹ್ಮನ ಮಾಯೆ ನುಂಗಿತ್ತೆಂಬ ಶಬ್ದಕ್ಕರ್ಥ. ಸಾತ್ವಿಕಾಹಂಕಾರದಲ್ಲಿ ವಿಷ್ಣು ಮಾಯಾಸಕ್ತನಾಗಿಪ್ಪ ಕಾರಣ, ವಿಷ್ಣುವನು ಮಾಯೆ ನುಂಗಿತ್ತೆಂಬ ಶಬ್ದಕ್ಕರ್ಥ. ತಾಮಸಾಹಂಕಾರದಲ್ಲಿ ರುದ್ರನು ಮಾಯಾ ಸಕ್ತನಾಗಿಪ್ಪ ಕಾರಣ, ರುದ್ರನ ಮಾಯೆ ನುಂಗಿತ್ತೆಂಬ ಶಬ್ದಕ್ಕರ್ಥ. ಬ್ರಹ್ಮವಾನೆಂಬ ಬ್ರಹ್ಮಜ್ಞಾನಿಗಳು ವೃಥಾಹಂಕಾರದಲ್ಲಿ ಮಾಯಾ ಸಕ್ತರಾದ ಕಾರಣ ತಾ ಘನವೆಂದಡೆ ತನ್ನ ನುಂಗಿತ್ತು ಮಾಯೆ ಎಂಬ ಶಬ್ದಕ್ಕರ್ಥ. ಇಂತು ಲೋಕವೆಲ್ಲವನು ಅದು ಪರಶಿವನ ಅಧೀನದ ಮಾಯೆ ಆವರಿಸಿಕೊಂಡಿಪ್ಪಳೆಂಬುದೀಗ ಸರ್ವವು ನಿನ್ನ ಮಾಯೆ ಒಬ್ಬರನೊಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೩. ದೇವರನ್ನೆಲ್ಲರ ಹೊಡೆತಂದು ದೇವಿಯರೊಳು ಕೂಡಿತ್ತು ಮಾಯೆ. ಹರಹರಾ ಮಾಯೆ ಇದ್ದೆಡೆಯ ನೋಡಾ. ಶಿವಶಿವಾ ಮಾಯೆ ಇದ್ದೆಡೆಯ ನೋಡಾ. ಎರಡೆಂಬತ್ತು ಕೋಟಿ ಪ್ರಮಥ ಗಣಂಗಳು, ಅಂಗಾಲ ಕಣ್ಣವರು, ಮೆಯ್ಯೆಲ್ಲಾ ಕಣ್ಣವರು, ನಂದಿವಾಹನ ರುದ್ರರು, ಇವರೆಲ್ಲರು ಮಾಯೆಯ ಕಾಲುಗಾಹಿನ ಸರಮಾಲೆ ಕಾಣಾ ಗುಹೇಶ್ವರಾ.

ಟೀಕು:— ಅನಂತಕೋಟಿ ರುದ್ರಾದಿಗಳೆಲ್ಲರು ತಾವು ನಿತ್ಯ ಪರಿಪೂರ್ಣವಾದ ಮಹಾಘನ ಪರಶಿವತತ್ವ ಸ್ವರೂಪರೆಂದರಿಯದೆ ಕೈಲಾಸವೆಂಬ ಪ್ರವೇಶಿಕ ಪುರದಲ್ಲಿ ಆಶ್ರಿತವಾಗಿರ್ದು, ಅಲ್ಲಿಯ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ಅಲ್ಪ ಪದಂಗಳಿಗೆರಗಿ ಮಚ್ಚಿ ಮರುಳಾಗಿಪ್ಪರಾಗಿ, ಇವರೆಲ್ಲರು ಮಾಯಾಸಕ್ತರೆಂಬುದೀಗ ದೇವರನೆಲ್ಲರ ಹೊಡೆತಂದು ದೇವಿಯರೊಳು ಕೂಡಿತ್ತು ಮಾಯೆ ಎಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೪. ಆಡಂಬರದೊಳ ಗಾಡಂಬರವಿದೇನೋ? ಹಾರಿತ್ತು ಬ್ರಹ್ಮನೋಲಗ. ಕೆದರಿತ್ತಿದೇನಯ್ಯ? ಸಾರು ಸಾರೆನುತ್ತ ವಿಷ್ಣು ಅಜನ ನುಂಗಿ

ರುದ್ರಯೋನಿಯೊಳಗಡಗಿತ್ತಿದೇನೋ? ಬೇರಿಲ್ಲದ ಮರ ನೀರಿಲ್ಲದ ನೆಳಲೊಳಗೆ ತೋರಿದ ಪ್ರತಿಬಿಂಬವ ನಾನೇನೆಂಬೆ ಗುಹೇಶ್ವರಾ?

ಟೀಕು:—ಶರಣನು ಸುಜ್ಞಾನ ದೃಷ್ಟಿಯಿಂದ ಮಾಯಾಡಂಬರದ ಸ್ಥಿತಿಗತಿಯನರಿದು ನಿರೀಕ್ಷಿಸಲು ಎಂಬುದೀಗ ಆಡಂಬರದೊಳಗಾಡಂಬರವಿದೇನೋ ಎಂಬ ಶಬ್ದಕ್ಕರ್ಥ. ಇಂತು ನೋಡಲು, ಬ್ರಹ್ಮ ಸೃಷ್ಟಿ ಪಸರವೆಲ್ಲವು ಮಿಥ್ಯವಾಗಿ ಹೋಯಿತ್ತೆಂಬುದೀಗ, ಹಾರಿತ್ತು ಬ್ರಹ್ಮನೋಲಗ ಕೆದರಿತ್ತಿದೇನಯ್ಯ ಎಂಬ ಶಬ್ದಕ್ಕರ್ಥ. ಆ ಮಿಥ್ಯವನು ವಿಷ್ಣುತತ್ವ ಸಂಬಂಧಮಪ್ಪ ಶುದ್ಧ ಸಾತ್ವಿಕವನಗ್ರಹಿಸಿತ್ತೆಂಬುದೀಗ ಸಾರು ಸಾರು ಎನುತ್ತ ವಿಷ್ಣುವಜನ ನುಂಗಿತ್ತೆಂಬ ಶಬ್ದಕ್ಕರ್ಥ. ಆ ಶುದ್ಧ ಸಾತ್ವಿಕವು ರುದ್ರತತ್ವವೆಂಬ ನಿಜದ ಸುಷುಪ್ತಿಯ ಸ್ಥಾನವಾದ ಕಾರಣ, ಆ ರುದ್ರನೊಳಗೆ ಲೀಯವಾಯಿತ್ತೆಂಬುದೀಗ, ರುದ್ರಯೋನಿಯೊಳಡಗಿತ್ತಿದೇನೋ ಎಂಬ ಶಬ್ದಕ್ಕರ್ಥ. ಆ ನಿಜದ ಸುಷುಪ್ತಿಯೊಳಗೆ ತನ್ನ ನಿಜ ವಿವೇ ವೆಂಬ ವೃಕ್ಷವು ಮೂಲಸ್ಥಾನವಿಲ್ಲದೆ, ನಿರ್ಬೀಜವಲ್ಲಿ ಬೆಳೆಯಿತ್ತೆಂಬುದೀಗ ಬೇರಿಲ್ಲದ ವೃಕ್ಷವೆಂಬ ಶಬ್ದಕ್ಕರ್ಥ. ಆ ವಿವೇಕ ವೃಕ್ಷವು ನೀರೆಂಬ ಮನದ ಸಂಚಲವಳಿದ ಉನ್ಮನೆಯ ತತ್ವದ ಸದ್ಭಾವಚ್ಛಾಯೆಯೊಳಗೆ ತಾನೆ ಪ್ರತಿಬಿಂಬಿಸಿತ್ತೆಂಬುದೀಗ ನೀರಿಲ್ಲದ ನೆಲಲೊಳಗೆ ತೋರಿದ ಪ್ರತಿಬಿಬಿಂಬವ ನಾನೇನೆಂಬೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ. ॥೨೪॥

೨೫. ಚಂದ್ರಮನೊಳಗಣ ಎರಳೆಯು ನುಂಗಿದ ರಾಹುವಿನ ನೋಟ ಅಂದಂದಿಂಗೆ ಬಂದು ಕಾಡಿತ್ತು ನೋಡಾ. ಒಂದರ ತಲೆ ಒಂದರ ಬಸಿರು ಅಂದಂದಿಂಗೆ ಬಂದು ಕಾಡಿತ್ತು ನೋಡಾ. ನಂದಿನಂದಿಯು ನುಂಗಿ ಬಂದುದು ಮಹೀತಳಕ್ಕಾಗಿ ಇಂದು ರವಿಗಡಣವ ನಾನೇನೆಂಬೆ ಗುಹೇಶ್ವರ?

ಟೀಕು:—ತಮೋಗುಣ ನಿವೃತ್ತಿಯ ಮಾಡಿ, ಷೋಡಶಕಳಾ ಸಂಪೂರ್ಣ ಭಾವದಿಂ, ಸುಧಾಕರ ಸ್ವರೂಪವಾಗಿಪ್ಪ ಚಂದ್ರಂಗೆಯು ಅಂತರಂಗದ ಅಜ್ಞಾನ ತಮೋವೃತ್ತಿಯನಳಿದು, ಶಿವಜ್ಞಾನದ ಕಳೆಯ ಸಂಪೂರ್ಣ ಭಾವದಿಂ ಸುಧಾಪಿಂಡರೂಪಿಂ, ಪರಮ ಶಾಂತಿ ಎನಿಪ ಚಿತ್ತಿನ ನಿಲವು ಒಂದೇ ಭಾವವಾದ ಕಾರಣ ಚಂದ್ರಮನೆಂಬ ಶಬ್ದಕ್ಕರ್ಥ. ಆ ಚಿತ್ತಿನೊಳಗೆ ತಾನೆ ಶಿವತತ್ವವೆಂಬರಿವಿನ ಕುರುಹು ಲಕ್ಷಕ್ಕೆ ಬರಲು ಅದೆ ಆ



ಚಿತ್ತಿನೊಳಗಣ ಕಳಂಕವಾದ ಕಾರಣ, ಅದು ಚಂದ್ರಮನೊಳಗಣ ಎರಳೆ ಎಂಬ ಶಬ್ದಕ್ಕರ್ಥ. ಆ ಕಳಂಕೆಂಬ ಅಜ್ಞಾನ ಕಾಳಿಕೆಯನು ಶಂಕಾದೃಷ್ಟಿಗ್ರಾಹಕತ್ವವಂ ಮಾಡಲು ಎಂಬುದೀಗ, ಎರಳೆಯ ನುಂಗಿದ ರಾಹುವಿನ ನೋಟವೆಂಬ ಶಬ್ದಕ್ಕರ್ಥ. ಅಂತು ಅಜ್ಞಾನ ಶಂಕೆ ಜ್ಞಾನವನರಿಯಲೀಸದೆ ಅಂದಂದಿಂಗೆ ಬಂದು ಕಾಡುತ್ತಿಪ್ಪದೆಂಬುದೀಗ, ಅಂದಂದಿಗೆ ಬಂದು ಕಾಡಿತ್ತೆಂಬ ಶಬ್ದಕ್ಕರ್ಥ. ಅದೆಂತೆಂದಡೆ, ಸುಜ್ಞಾನದ ಶಿರಸ್ಸು ಅಜ್ಞಾನದ ಒಡಲು ಇವೆರಡು ಸಂಬಂಧಿಸಿಕೊಂಡು ಕಾಡುತ್ತಿಪ್ಪದಾಗಿ, ಒಂದರ ತಲೆ ಒಂದರ ಬಸಿರು ಅಂದಂದಿಂಗೆ ಬಂದು ಕಾಡಿತ್ತೆಂಬ ಶಬ್ದಕ್ಕರ್ಥ. ಇಂತು ಸುಜ್ಞಾನದ ಪ್ರಭೆ ಜ್ಞಾನಾಜ್ಞಾನ ಯುಕ್ತದಿಂದಳಿದುಳಿದ, ತನು ಮುಖ ಸಂಬಂಧದಿಂ ಅಧೋ ಮುಖ ಪ್ರವೇಶವಾಗುತ್ತಿಹುದೆಂಬುದೀಗ, ನಂದಿ ನಂದಿಯ ನುಂಗಿ ಬಂದುದು ಮಹೀತಳಕ್ಕಾಗಿ ಎಂಬ ಶಬ್ದಕ್ಕರ್ಥ. ಇಂತು ಜ್ಞಾನ ವಿಪರೀತ ಭಾವವನೆಯ್ದಿ ಪ್ರತಿಸೂರ್ಯ ನ್ಯಾಯದಂತಿರಲು ಇಂದು ರವಿಗಡಣವ ನಾನೇ ನೆಂಬೆನೆಂಬ ಶಬ್ದಕ್ಕರ್ಥ. ॥೨೫॥

೨೬. ಊರ ಮಧ್ಯದ ಕಣ್ಣ ಕಾಡಿನೊಳಗೆ ಬಿದ್ದಿದ್ದಾವೆ ಐದು ಹೆಣನು. ಬಂದು ಬಂದು ಅಳುವರು. ಬಳಗ ಘನವಾದ ಕಾರಣ ಹೆಣನು ಬೇಯದು. ಕಾಡು ನೊಂದದು ಮಾಡ ಉರಿಯಿತ್ತು ಗುಹೇಶ್ವರಾ.

ಟೀಕು:— ಪಂಚಭೂತ ಕಾಯ ಗ್ರಾಮವೆಂಬುದೀಗ ಊರೆಂಬ ಶಬ್ದಾರ್ಥ. ಆ ತನುವಿನ ಮಧ್ಯದೊಳು ಅಜ್ಞಾನ ದೃಷ್ಟಿಯೊಳಗೆ ಭವಾರಣ್ಯ ತನ್ಮಯವಾಗಿಪ್ಪದೆಂಬುದೀಗ ಊರ ಮಧ್ಯದ ಕಣ್ಣ ಕಾಡಿನೊಳಗೆಂಬ ಶಬ್ದಕ್ಕರ್ಥ. ಆ ಭವಾರಣ್ಯ ಮಧ್ಯದೊಳು ಶಬ್ದ ಸ್ಪರ್ಶ ರೂಪು ರಸ ಗಂಧಗಳೆಂಬ ವಿಷಯಂಗಳೈದ ಅಚೇತನ ಭಾವದಿಂ ಮೃತಗತಂಗಳಾಗಿರುತ್ತಿರಲು ಬಿದ್ದಿದ್ದಾವೆ ಐದು ಹೆಣನೆಂಬ ಶಬ್ದಕ್ಕರ್ಥ. ಆ ಪಂಚ ವಿಷಯಂಗಳ ಶರೀರ ಸಂಬಂಧಿಗಳಪ್ಪ ಸಕಲಕರಣಂಗಳು ಆ ವಿಷಯಂಗಳ ಮುಟ್ಟಿ ಮುಟ್ಟಿ ಸಂಸಾರ ದುಃಖ ಜೀವಿಗಳಪ್ಪ ಕಾರಣ ಬಂದು ಬಂದು ಅಳುವರು ಬಳಗ ಘನವಾದ ಕಾರಣ ಎಂಬ ಶಬ್ದಕ್ಕರ್ಥ. ಅದು ಕಾರಣ ಆ ವಿಷಯಂಗಳು ಅಳಿಯದೆ ಭವವು ಕೆಡದಿಪ್ಪುದರಿಂದ ದೇಹವೇ ತಾಪತ್ರಯದಲ್ಲಿ ಬೇವುತ್ತಿದ್ದಿತ್ತೆಂಬುದೀಗ ಹೆಣನು ಬೇಯದು, ಕಾಡು ನಂದದು ಮಾಡ ಉರಿಯಿತ್ತೆಂಬ ಶಬ್ದಕ್ಕರ್ಥ.

೨೭. ಹುಲಿಯ ಬೆನ್ನಿಲಿ ಒಂದು ಹುಲ್ಲೆ ಹೋಗಿ ಮೇದು ಬಂದೆನೆಂದಡೆ, ಇದ ಕಂಡು ಬೆರಗಾದೆ. ರಕ್ಕಸಿಯ ಮನೆಗೆ ಹೋಗಿ ನಿದ್ರೆಗೈದು ಬಂದೆನೆಂದಡೆ, ಇದ ಕಂಡು ಬೆರಗಾದೆ. ಜವನ ಮನೆಗೆ ಹೋಗಿ ಸಾಯದೆ ಬದುಕಿ ಬಂದೆನೆಂದಡೆ ಇದ ಕಂಡು ಬೆರಗಾದೆ ಗುಹೇಶ್ವರಾ.

ಟೀಕು:— ವಿಶ್ವಮಂ ಮುರಿದು ನುಂಗುತ್ತಿಹ ಕಾಲವ್ಯಾಘ್ರನ ಬಳಿವಿಡಿದು, ಜೀವನೆಂಬ ಮೃಗವು ನಡೆದು, ಸಂಸಾರ ವಿಷಯಸುಖವ ಸವಿದು ಬರುತ್ತಿರ್ದನಲ್ಲಾ ಎಂದು ಜ್ಞಾನಿ ತನ್ನ ತಾನರಿದು ಚೋದ್ಯಂಬಡುತ್ತಿರಲು ಎಂಬುದೀಗ ಹುಲಿಯ ಬೆನ್ನಿನಲಿ ಒಂದು ಹುಲ್ಲೆ ಹೋಗಿ ಮೇದು ಬಂದೆನೆಂದರೆ ಇದ ಕಂಡು ಬೆರಗಾದೆನೆಂಬ ಶಬ್ದಕ್ಕರ್ಥ. ಮಾಯಾಗ್ರಹವಪ್ಪ ಪಂಚಭೂತಾಶ್ರಯದೊಳು ಮೈಮರೆದಿದ್ದು ಎಚ್ಚತ್ತು ಬಂದೆನಲ್ಲಾ ಎಂದು ಜ್ಞಾನಿ ಚೋದ್ಯಂಬಡುತ್ತಿರಲು ಎಂಬುದೀಗ ರಕ್ಕಸಿಯ ಮನೆಗೆ ಹೋಗಿ ನಿದ್ರೆಗೈದು ಬಂದೆನೆಂದಡೆ, ಇದ ಕಂಡು ಬೆರಗಾದೆನೆಂಬ ಶಬ್ದಕ್ಕರ್ಥ. ಜನನ ಮರಣ ಪರಭವದಿಂ ಯಮನ ಬಾಧೆಗೊಳಗಾಗಿರುತ್ತಿರಲು ಎಂಬುದೀಗ ಏತಕ್ಕೆ ಜನನ ಮರಣಗೆಟ್ಟೆನಲ್ಲಾ ಎಂದು ಚೋದ್ಯವ ಮಾಡುತ್ತಿರಲು, ಆದೀಗ ಜವನ ಮನೆಗೆ ಹೋಗಿ ಸಾಯದೆ ಬದುಕಿ ಬಂದಡೆ ಇಡ ಕಂಡು ಬೆರಗಾದೆನೆಂಬ ಶಬ್ದಕ್ಕರ್ಥ. ॥೨೭॥

೨೮. ಹೃದಯಕಂದದ ಮೇಲೆ ಹುಟ್ಟಿತ್ತು. ಹರಿದು ಹಬ್ಬಿ ಕೊಬ್ಬಿ ಹಲವು ಫಲವಾಯಿತ್ತು ನೋಡಿರೆ. ಪರಿಪರಿಯ ಫಲಂಗಳ ಬೇಡಿದವರಿಗಿತ್ತು, ಆ ಫಲವ ಬಯಸಿದವರು ಜಲದೊಳಗೆ ಬಿದ್ದರೆ ನೋಡಿ ನಗುತ್ತಿರ್ದೆ ಗುಹೇಶ್ವರ.

ಟೀಕು:— ಹೃತ್ಕಮಲ ಕರ್ಣಿಕಾ ಕುಹರ ಮಧ್ಯದ ಮೂಲಾಹಂಕಾರವೆಂಬ ಬೀಜದೊಳುದಯಿಸಿದ ಅಜ್ಞಾನವೀಗ ಹೃದಯ ಕಂದದ ಮೇಲೆ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಅಂತುದಯಿಸಿದ ಅಜ್ಞಾನ ಅಂತರಂಗದೊಳಗೆ ಪೆರ್ಚಿ ಬೆಳೆದು, ದಶವಾಯುಗಳ ದಶನಾಳದೊಳಗೆ ಶಾಖೋಪಶಾಖೆಯಾಗಿ ನಿರ್ಮಿಸಿದ ಸಕಲ ಕರಣಂಗಳೇ ಪರ್ಣಕುಸುಮಂಗಳಾಗಿ ದಶೇಂದ್ರಿಯಗಳೆಂಬ ಫಲವಾಗಿರುತ್ತಿಪ್ಪುದೀಗ ಹರಿದು ಹಬ್ಬಿ ಕೊಬ್ಬಿ ಹಲವು ಫಲವಾಯಿತ್ತು ನೋಡಿರೆ ಎಂಬ ಶಬ್ದಕ್ಕರ್ಥ. ಆ ಇಂದ್ರಿಯ ಸುಖವನಾ



ರಾರು ಬಯಸುವರು, ಆ ಬಯಸಿದವರಿಗೆಲ್ಲಕ್ಕ ತತ್ಸಂಸಾರ ಸುಖವನುಂಟುಮಾಡಿಕೊಡುತ್ತಿರಲು, ಆದೀಗ ಬೇಡಿದವರಿಗೆ ಬೇಡಿತ್ತನಿತ್ತು ಎಂಬ ಶಬ್ದಕ್ಕರ್ಥ. ಆ ಐದಿಂದ್ರಿಯ ಸುಖರಸದ ಫಲವ ನಿಶ್ಚೈಸಿದವರು ಸಂಸಾರಸಾಗರದೊಳಗೆ ಬಿದ್ದರೆ, ಶಿವಜ್ಞಾನಿಗಳು ಕಂಡು ಹಾಸ್ಯವನಾಡುತ್ತಿರಲು ಆ ಫಲವ ಬಯಿಸಿದವರು ಜಲದೊಳಗೆ ಬಿದ್ದರೆ ನೋಡಿ ನಗುತ್ತಿರ್ದನೆಂಬ ಶಬ್ದಕ್ಕರ್ಥ.

೨೯. ಪಂಚಾಶತ್ಕೋಟಿ ಭೂಮಂಡಲವನೊಂದು ತಲೆ ಇಲ್ಲದ ಮುಂಡ ನುಂಗಿತ್ತ ಕಂಡೆನು. ತಲೆ ಇಲ್ಲದ ಕಂಡು ಬೆರಗಾದೆನು. ನವಖಂಡ ಮಂಡಲ ಭಿನ್ನವಾದಂದು, ಆ ತಲೆಯ ಕಂಡವರುಂಟೆ ಗುಹೇಶ್ವರಾ?

ಟೀಕು:— ಜ್ಞಾನಕಾಂಡ, ಪರಿಚ್ಛೇದ್ಯಂ ಕರ್ಮಕಾಂಡ ರತೋ ನರಃ ಶಿರಚ್ಛೇದಕಬಂಧಸ್ಯ ಮುಂಡನಂ ಕುರ್ವತಿ॥ ಎಂದುದಾಗಿ ತಲೆ ಎಂದಡೆ ಜ್ಞಾನ. ಮುಂಡನೆಂದಡೆ ಅಜ್ಞಾನವ ಪ್ರಪಂಚು. ವಿಶ್ವವನವಗ್ರಹಿಸಿ ಕೊಂಡಿಪ್ಪುದೆಂಬುದೀಗ, ಪಂಚಾಶತ್‌ಕೋಟಿ ಭೂಮಂಡಲವನೊಂದು ತಲೆಇಲ್ಲದ ಮುಂಡ ನುಂಗಿತ್ತೆಂಬ ಶಬ್ದಕ್ಕರ್ಥ. ಆ ಪ್ರಪಂಚು ನುಂಗಿದ ಭೇದವನು ಸುಜ್ಞಾನಿ ಶರಣನು ಪ್ರಮಾಣವೃತ್ತಿಯಿಂದ ನೋಡದೆ. ತಲೆಯಿಂದ ಅರುವಿನಿಂದ ನಿರೀಕ್ಷಿಸಿ ಕಂಡು ಚೋದ್ಯವಂ ಬಡುತ್ತಿರಲು, ಆದೀಗ ತಲೆ ಇಲ್ಲದೆ ಕಂಡು ಬೆರಗಾದೆನೆಂಬ ಶಬ್ದಕ್ಕರ್ಥ. ಆ ಮಾಯೆಯನು ಇದಿರಿಟ್ಟು, ಅರಿವುತ್ತಿಪ್ಪ ಅರಿವು ಖಂಡಿತವಾದಕಾರಣ, ನವಖಂಡ ಮಂಡಲವೆಂಬ ಶಬ್ದಕ್ಕರ್ಥ. ಆ ಖಂಡಿತ ಜ್ಞಾನವು ಅಖಂಡಿತಜ್ಞಾನದೊಳಳಿಯಿತ್ತೆಂಬುದೀಗ, ನವಖಂಡಮಂಡಲ ಭಿನ್ನವಾಯಿತ್ತೆಂಬ ಶಬ್ದಕ್ಕರ್ಥ. ಆ ಖಂಡಿತ ಜ್ಞಾನದ ನಿಲವನಾರಿಗೂ ಕಾಣಬಾರದೆಂಬುದೀಗ, ಆ ತಲೆಯ ಕಂಡವರುಂಟೇ ಎಂಬ ಶಬ್ದಕ್ಕರ್ಥ.

೩೦. ಅರಗಿನ ಪುತ್ಥಳಿಯನುರಿ ಕೊಂಡಡೆ ಉದಕ ಬಾಯಾರಿ ಬಳಲುತ್ತಿದೆ. ಅಗಿಂಬೋ ಬಾವಿ ಎನಗಿಂಬೋ. ಅಗಿದಾತ ಸತ್ತ. ಬಾವಿ ಬತ್ತಿತ್ತು. ಇದು ಕಾರಣ ನೆರೆ ಮೂರು ಲೋಕ ಬರು ಸೂರೆವೋಯಿತ್ತು ಗುಹೇಶ್ವರಾ.

ಟೀಕು:---ಒಂದು ಜೀವಿಯ ಮಲದಿಂದಾದ ಲಕ್ಷಕ್ಕೊ, ಒಬ್ಬ ಜೀವನ ಮಲತ್ರಯ ಸಂಬಂಧದಿಂದಾದ ದೇಹಕ್ಕೊ ಸಂಬಂಧ ಒಂದೇ ಯಾದ ಕಾರಣ, ಆ ದೇಹಕ್ಕೆ ಅರಗೆಂಬ ಶಬ್ದವಾಯಿತ್ತು. ಆ ಮಲ ದೇಹವನು ತಾಪತ್ರಯಾಗ್ನಿ ಗ್ರಹಿಸಲು ಅದೀಗ ಅರಗಿನ ಪುತ್ಥಳಿಯ ಸುರಿಕೊಂಡಡೆ ಎಂಬ ಶಬ್ದಕ್ಕರ್ಥ. ಆ ತಾಪತ್ರಯಾಗ್ನಿ ದೇಹವನಾವರ್ತಿಸಲು, ಉದಕವೆಂಬ ನಾಮವ ಧರಿಸಿಪ್ಪ ಮನವು ಅತ್ಯಂತ ಕಾಮಾದಿ ತೃಷ್ಣೆಯಾತುರನಾಗಿದ್ದಿತ್ತು. ಆ ತೃಷ್ಣೆಗೆ ತನುವೆಂಬ ಭುಮಿಯ ಮೇಲೆ ವಿಷಯವೆಂಬ ಕೂಪವನುಂಟು ಮಾಡುತ್ತಿರಲು ಅದೀಗ ಅಗಿಂಬೋ ಬಾವಿ ಎನಗಿಂಬೋ ಎಂಬ ಶಬ್ದಕ್ಕರ್ಥ. ಆ ವಿಷಯ ಕೂಪದೊಳಗಣ ಸಂಸಾರ ರಸವ ಕುಡಿದು ಜೀವನು ಮರಣವನೆಯ್ದುತ್ತಿಹ ಕಾರಣ, ಅಗಿದಾತ ಸತ್ತನೆಂಬ ಶಬ್ದಕ್ಕರ್ಥ. ಆ ಜೀವನು ಮೃತಗತವಾಗುತ್ತಿರಲು, ಆ ವಿಷಯ ಕೂಪಂಗಳು ಆ ಜೀವನ ಕೂಡೆ ನಷ್ಟವಾಗುತ್ತಿಹ ಕಾರಣ, ಬಾವಿ ಬತ್ತಿತ್ತೆಂಬ ಶಬ್ದಕ್ಕರ್ಥ. ಇಂತು ಸಂಸಾರದ ಭ್ರಾಂತಿನ ದೋಷದಿಂ ಲೋಕವೆಲ್ಲವು ವೃಥಾ ಕೆಡುತ್ತಿರ್ದರೆಂಬುದೀಗ ನೆರೆ ಮೂರು ಲೋಕ ಬರು ಸೂರೆವೋಯಿತ್ತೆಂಬ ಶಬ್ದಕ್ಕರ್ಥ. ॥೩೦॥

೩೧. ಅಂಗದ ಕೊನೆಯ ಮೇಲಣ ಕೋಡಗ ಕೊಂಬಿಂಗೆ ಹಾರಿತ್ತು ಅಯ್ಯ. ಒಂದು ಸೋಜಿಗ. ಕೆಯ್ಯ ನೀಡಲು ಮಯ್ಯೆಲ್ಲವ ನುಂಗಿತ್ತು. ಒಯ್ಯನೆ ಕರೆವಡೆ ಮುಂದೆ ನಿಂದಿತ್ತು. ಮೆಯ್ಯಂತಡೆ ಬಯಲಾಯಿತ್ತು ಗುಹೇಶ್ವರಾ.

ಟೀಕು:--- ಶರೀರವೆಂಬ ವೃಕ್ಷದಲ್ಲಿಹ ಮನವೆಂಬ ಮರ್ಕಟವೆಂಬುದೀಗ, ಅಂಗದ ಕೊನೆಯ ಮೇಲಣ ಕೊಡಗವೆಂಬ ಶಬ್ದಕ್ಕರ್ಥ. ಇಂದ್ರಿಯಂಗಳೆಂಬ ಶಾಖೋಪ ಶಾಖೆಗಳಿಗೆ ಲಂಘಿಸುತ್ತಿಹುದೆಂಬುದೀಗ ಕೊಂಬಿಗೆ ಹಾರಿತ್ತೆಂಬ ಶಬ್ದಕ್ಕರ್ಥ. ಆ ಮನವ ಹಿಡಿದು ಸಿಲಿಸಿಹೆನೆಂದು ನೆನೆಯಲು, ಆ ನೆನೆವ ಮನ ತಾನಾಗಿ ಸರ್ವಾಂಗವನು ಸಂಕಲ್ಪಭಾವದಿಂ ಅವಗ್ರಹಿಸಿತ್ತೆಂಬುದೀಗ, ಕೈಯ್ಯ ನೀಡಲು ಮೆಯ್ಯಲ್ಲವ ನುಂಗಿತ್ತೆಂಬ ಶಬ್ದಕ್ಕರ್ಥ. ಆ ಸುಜ್ಞಾನ ಬೋಧೆಯಿಂದ ಆ ಮನಸ್ಸು ಆಹ್ವಾನಿಸಲು ಸಂಚಲವ ಬಿಟ್ಟು ನಿಶ್ಚಲವಾಗಿ ನಿಂದಿತ್ತೆಂಬುದೀಗ, ಒಯ್ಯನೆ ಕರೆವಡೆ ಮುಂದೆ ನಿಂದಿತ್ತೆಂಬ ಶಬ್ದಕ್ಕರ್ಥ. ಆ ಮನೋ ಮೂರ್ತಿ ಶಿವನು ತಾನೆಂದರಿಯಲು ಆ ಮನವು ಅಲ್ಲಿಯೇ ನಿರ್ವಯಲಾಯಿತ್ತೆಂಬುದೀಗ ಮುಯ್ಯಾಂತಡೆ ಬಯಲಾಯಿತ್ತೆಂಬ ಶಬ್ದಕ್ಕರ್ಥ.



೩೨. ಭೂತ ಭೂತವ ಕೂಡಿ. ಅದ್ಭುತವಾಯಿತ್ತು. ಕಿಚ್ಚು ಕೂಡಿತ್ತು. ನೀರು ನೀರಡಿಸಿತ್ತು. ಉರಿ ಪವನ ದೋಷದೊಳಗಿರ್ದು ವಾಯು ಇಮ್ಮಡಿಸಿದ್ದುದ ಕಂಡೆ ಗುಹೇಶ್ವರಾ.

ಟೀಕು:--- ಸ್ಥೂಲಪಂಚಭೂತ, ಸೂಕ್ಷ್ಮಪಂಚಭೂತ, ಕಾರಣಪಂಚಭೂತಂಗಳ ಸಮರಸ ಸಂಯೋಗದಿಂ, ಮಿಥ್ಯಾಪಿಂಡವೆಂಬ ಅದ್ಭುತ ಉದಯವಾಯಿತ್ತೆಂಬುದೀಗ, ಭೂತ ಭೂತವ ಕೂಡಿ ಅದ್ಭುತವಾಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಅದ್ಭುತ ಪಿಂಡದೊಳಗೆ ಇಪ್ಪ ಜ್ಞಾನಾಗ್ನಿಶ್ರಮಿಸಿತ್ತೆಂಬುದೀಗ, ಕಿಚ್ಚು ಕೂಡಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಜ್ಞಾನಾಗ್ನಿ ಶ್ರಮಿಸಲು, ಮನದಲ್ಲಿ ವಿಷಯ ತೃಷ್ಣೆ ಘನವಾಯಿತ್ತೆಂಬುದೀಗ, ನೀರು ನೀರಡಿಸಿತ್ತೆಂಬ ಶಬ್ದಕ್ಕರ್ಥ. ತಾಪತ್ರಯಾಗ್ನಿಯು ವಾಯು ವಿಕಾರವ ಕೂಡಿ ದುಸ್ಸಂಚಲ ಪ್ರಾಣವಿಕಾರ ಪ್ರವರ್ತಿಸಿತ್ತೆಂಬುದೀಗ, ಉರಿ ಪವನ ದೋಷದೊಳಡಗಿರ್ದು, ವಾಯು ಇಮ್ಮಡಿಸಿದ್ದುದ ಕಂಡೆನೆಂಬ ಶಬ್ದಕ್ಕರ್ಥ.

೩೩. ಅಡವಿಯೊಳಗೆ ಕಳ್ಳರು ಕಡವರಧ ಸ್ವಾಮಿಯನು ಹುಡಿಕಿ ಹುಡಿಕಿ ಅರಸುತ್ತಲಿದ್ದಾರೆ. ಸೊಡರು ನಂದಿ ಕಾಣದೆ ಅನ್ನಪಾನದ ಹಿರಿಯರೆಲ್ಲರು ತಮ್ಮ ತಾವರಿಯದೆ ಅಧರ ಪಾನವನುಂಡು ತೇಗಿ, ಸುರಾಪಾನವ ಬೇಡುತ್ತಿದ್ದಾರೆ. ಅರಿದು ಹಾರುವನೊಬ್ಬನು ಆರಿದ ತಲೆಯ ಹಿಡಿದುಕೊಂಡು ಆಧ್ಯಾತ್ಮದ ವಿಕಾರದ ನೆತ್ತರವ ಕುಡಿದನು ನೋಡಾ ಗುಹೇಶ್ವರಾ.

ಟೀಕು:--- ಭವವೆಂಬರಣ್ಯದೊಳಗೆ ಹೊಲಬುದಪ್ಪಿ ನಿಲವು ಕಾಣಬಾರದ ಜೀವನೆಂಬ ಮಿಥ್ಯಾ ಚರ್ಮದೇಹಿಯನು ಪರಮಾರ್ಥ ವಂಚಕರೆಂಬ ಕರಣಂಗಳು, ಆ ಜೀವನ ಬೆಂಬಳಿವರಿದು, ಭಿನ್ನ ವಿವೇಕದಿಂದಿರಸಿ ನೋಡುತ್ತಿರಲೆಂಬುದೀಗ, ಅಡವಿಯೊಳಗೆ ಕಳ್ಳರು ಕಡವರದ ಸ್ವಾಮಿಯನು ಹುಡಿಕಿ ಹುಡಿಕಿ ಅರಸುತ್ತಿದ್ದಾರೆ ಎಂಬ ಶಬ್ದಕ್ಕರ್ಥ. ಆ ಭಿನ್ನ ವಿವೇಕದಿಂ ಜ್ಞಾನಜ್ಯೋತಿಯಳಿಯದು ಅನ್ನೋದಕದಾಧಾರದಲ್ಲಿಪ್ಪ ಬರಿಯರುವಿನ ಜ್ಞಾನಿಗಳು ತಮ್ಮ ನಿಜವನರಿಯದೆ ಎಂಬುದೀಗ, ಅನ್ನಪಾನದ ಹಿರಿಯರೆಲ್ಲರು ತಮ್ಮ ತಾವರಿಯದೆ ಎಂಬ ಶಬ್ದಕ್ಕರ್ಥ. ಭಿನ್ನ ರುಚಿಯನುಂಡು, ವೃಥಾ ಅಹಂಕಾರವೆಂಬ ಮದವ ನಿಶ್ಚೈಸುತ್ತಿರಲು

ಎಂಬುದೀಗ ಅಧರ ಪಾನವನುಂಡು ತೇಗಿ ಸುರಾಪಾನವ ಬೇಡುತ್ತಿದ್ದಾರೆ ಎಂಬ ಶಬ್ದಕ್ಕರ್ಥ. ಇಂತು ವೃಥಾಹಂಕಾರ ಮದ ನಿಶ್ಚೈಸುತ್ತ ಮತ್ತೆ ಅಸಾಧ್ಯವೆನಿಪ ಶಿವತತ್ವವನಾಸೆಗೆಯ್ದಡೆ, ತಾ ಹಿಡಿದ ಭಿನ್ನಜ್ಞಾನದಿಂ ಮಿಥ್ಯಾದ್ವೈತವೆಂಬ ತನ್ನ ಪಿಂಡದ ಸಂಸಾರ ರಸವ ಪೋಷಿಸುತ್ತಿರ್ದನೆಂಬುದೀಗ ಅರಿದು ಹಾರುವನೊಬ್ಬ ಅರಿದ ತಲೆಯ ಹಿಡಿದುಕೊಂಡು ಅಧ್ಯಾತ್ಮದ ವಿಕಾರದ ನೆತ್ತರ ಕುಡಿದನೆಂಬ ಶಬ್ದಕ್ಕರ್ಥ.

೩೪. ಮುಗಿಲ ಬಣ್ಣದ ಪಕ್ಷಿ, ಮಗನ ಕೈಯ್ಯರಗಿಳಿ ಗಗನ ಕೋಲಂಬಿನಲ್ಲಿ ಸ್ವಪ್ನದ ನಿಲವನು ತೆಗೆದೆಚ್ಚವನಾರೋ? ಉಪಮಿಸಬಾರದು. ಜಾಗ್ರತ್ ಸ್ವಪ್ನ ಸುಷುಪ್ತಿಯ ನಡುವೆ ತ್ರಿಜಗವಾಯಿತ್ತು. ಜಗಂಜ್ಯೋತಿ ನಿನ್ನ ಮಾಯೆಯನೇನೆಂಬೆನು ಗುಹೇಶ್ವರಾ.

ಟೀಕು॥ ಮಿಥ್ಯಾಚ್ಛಾಯಾಮಾತ್ರವಪ್ಪ ಜೀವಹಂಸನೆಂಬುದೀಗ ಮುಗಿಲ ಬಣ್ಣದ ಪಕ್ಷಿ ಎಂಬ ಶಬ್ದಕ್ಕರ್ಥ. ಆ ಜೀವಹಂಸನು ಶಿಸುವಿನ ಕೈಯ್ಯ ಶುಕನ ಹಾಗೆ ಏನುವನರಿಯದೆಂಬುದೀಗ ಮಗನ ಕೈಯ್ಯರಗಿಳಿ ಎಂಬ ಶಬ್ದಕ್ಕರ್ಥ. ಇಂತಪ್ಪ ಜೀವಂಗೆ ಬಯಲ ಸರವ ತೊಟ್ಟ ಮಿಥ್ಯವನೆ ಲಕ್ಷ್ಯವ ಮಾಡಿ ಪರಶಿವನೆಸೆದು ಕೆಡಹಲೆಂಬುದೀಗ ಗಗನ ಕೋಲಂಬಿನಲ್ಲಿ ಸ್ವಪ್ನದ ನಿಲವನು ತೆಗೆದೆಚ್ಚವನಾರೊ ಎಂಬ ಶಬ್ದಕ್ಕರ್ಥ. ಇಂತು ಬಯಲ ಬಾಣದಲ್ಲಿ ಕೆಡಹಲು ಆ ಜೀವನು ತನುವೆಂಬ ಭೂಮಿಯ ಮೇಲೆ ಬಿದ್ದು, ಮೃತವಾಗಿ ಅವಸ್ಥಾತ್ರಯಕ್ಕೊಳಗಾಗಿರುತ್ತಿರಲು, ಈ ಪರಿಯಲ್ಲಿ ತ್ರಿಜಗವೆಲ್ಲವು ಮೃತವಾಗಿ ಅವಸ್ಥಾತ್ರಯದೊಳಗಿಪ್ಪುದು ಪರಮೇಶ್ವರನ ನಿರೂಪವೆಂಬುದೀಗ ಜಾಗ್ರತ್ ಸ್ವಪ್ನ ಸುಷುಪ್ತಿಯ ನಡುವೆ ತ್ರಿಜಗವಾಯಿತ್ತು ಜಗಂಜ್ಯೋತಿ, ನಿನ್ನ ಮಾಯೆಯನೇನೆಂಬೆನೆಂಬ ಶಬ್ದಕ್ಕರ್ಥ.

೩೫. ಕಡಲನುಂಗಿದ ಕಪ್ಪಿನ ಪರಿಭವ ನವಸಾಸಿರ ಸಿಡಿಲು ಹೊಯ್ದು ಬಯಲಿಂಗೆ ಬಣ್ಣ ಉಂಟೆ? ಕಂಗಳ ಮುಂದಣ ಕನಸು ಹಿಂಗದ ತುಂಬಿಯ ಪರಿಮಳ, ಅಂಗವಿಲ್ಲದ ರೂಹಿಂಗೆ ಸಂಗ ಉಂಟೆ? ಇದೇನೋ ಗಗನದ ಹಣ್ಣನೆ ಕೊಯ್ದು ಮುಗುದೆ ರುಚಿಯನರಿಯಳು ಹಗರಣದಹಂಮಾವಿನ ಹಯನು ಸಯವಪ್ಪುದೇ ಗುಹೇಶ್ವರಾ?



ಟೀಕು॥ ಕಡಲೆಂದರೆ ಸಂಸಾರ ಸಾಗರ. ಆ ಸಂಸಾರ ಸಾಗರವ ನವಗ್ರಹಿಸಿಕೊಂಡಿಪ್ಪುದು ಮಾಯಾತಮಂಥ. ಆ ಮಾಯಾ ತಮಂಥವು ಆವರ್ತಿಸಿಕೊಂಡಿಪ್ಪ ಜೀವನ ಪರಿಭವ ನವಸಾಸಿರ ಪ್ರಳಯ ಪರಿಯಂತರ ಮುಸುಕಿಕೊಂಡಿಪ್ಪುದು. ಅದೆಂತೆಂದರೆ, ಸೃಷ್ಟಿ ಹುಟ್ಟುವಂದು ಜೀವನ ಮುಸುಕಿದ ಮಾಯಾತಮಂಥ ಆ ಸೃಷ್ಟಿಯು ಲಯ ಪರಿಯಂತರ ಬಿಡದಾಗಿ ಅದು ಒಂದು ಪರಿಭವ. ಅಂತಹ ಪರಿಭವ ನವಸಾಸಿರ ಪರಿಯಂತರ ಮಾಯಾ ತಮಂಥದಲ್ಲಿ ಜೀವನಿರುತ್ತಿಪ್ಪನಾಗಿ, ಅದು ಕಾರಣ, ಕಡಲ ನುಂಗಿದ ಕಪ್ಪಿನ ಪರಿಭವ ನವಸಾಸಿರವೆಂಬ ಶಬ್ದಕ್ಕರ್ಥ. ಆ ಜೀವನ ನಿಲವನರಸಿ ಕಂಡಿಹೆನೆಂದರೆ ಬಯಲೊಳಗೆ ಸಿಡಲೆರಗಿದಂತೆ ಕಾಣಬಾರದಾಗಿ, ಸಿಡಿಲು ಹೊಯ್ದು ಬಯಲಿಂಗೆ ಬಣ್ಣ ಉಂಟೆ ಎಂಬ ಶಬ್ಧಕ್ಕರ್ಥ. ಆ ಜೀವನ ನಿಲವು, ಸ್ವಪ್ನದೃಷ್ಟಿಯ ಮುಂದೆ ತೋರದ ಸ್ವಪ್ನದ ನಿಲವಿನಂತೆ ಅಸಹಜ ಮಾಗಿಪ್ಪುದಾಗಿ ಕಂಗಳ ಮುಂದಣ ಕನಸೆಂಬ ಶಬ್ದಕ್ಕರ್ಥ. ಆ ಜೀವನ ನಿಲವು ಪರಿಮಳದಿಂದಗಲಿದ ತುಂಬಿಯನಾ ಪರಿಮಳ ಭ್ರಮೆ ಮುಸುಕಿಕೊಂಡಿಪ್ಪಂತೆ ಭ್ರಾಂತಿ ಭಾವವಾಗಿಪ್ಪುದಾಗಿ, ಹಿಂಗದ ತುಂಬಿಯ ಪರಿಮಳವೆಂಬ ಶಬ್ದಕ್ಕರ್ಥ. ಆ ಜೀವನ ನಿಲವು, ರೂಪುಂಟಾಗಿಯೂ ಇಲ್ಲವೆಯಾಗಿಪ್ಪ ಇಂದ್ರಚಾಪದಂತಾದ ಕಾರಣ ಆದ ಬೆರಸಿ ನೋಡಬಾರದಾಗಿ ಅಂಗವಿಲ್ಲದ ರೂಹಿಂಗೆ ಸಂಗ ಉಂಟೆ ಎಂಬ ಶಬ್ದಕ್ಕರ್ಥ. ಆ ಜೀವನದಿಂದಾದ ಸುಖವ ಸುಖಿಸಿಹೆನೆಂದಡೆ ಇಲ್ಲವೆಯ ಫಳವನುಂಟೆಂದು ಮಾಡಿಕೊಂಡು ಭಕ್ಷಿಸಿ ಸುಖವನರಿಯದ ಭ್ರಾಂತಿಯುಂತಿಪ್ಪುದಾಗಿ, ಗಗನದ ಹಣ್ಣನೆ ಕೊಯ್ದು ಮುಗುದೆ ರುಚಿಯನರಿಯಳೆಂಬ ಶಬ್ದಕ್ಕರ್ಥ. ಅದು ಕಾರಣ ಆ ಜೀವನ ನಿಲವು ಇಂದ್ರ ಜಾಲಿಕನ ಕೃತ್ರಿಮದಿಂದಾದ ಹಯನಂತೆ ತಥ್ಯವಾಗದಾಗಿ, ಹಗರಣದ ಹಂಮಾವಿನ ಹಯನು ಸಯವಪ್ಪದೆ ಎಂಬ ಶಬ್ದಕ್ಕರ್ಥ.

೩೬. ಮಾಯದ ಕೈಯ್ಯಲ್ಲಿ ಓಲೆ ಕಂತವ ಕೊಟ್ಟರೆ, ಲಘುವಿನ ವಿಘುನವ ಬರೆಯಿತ್ತು ನೋಡಾ. ಅರಗಿನ ಪುತ್ಥಳಿಗೆ ಉರಿಯ ಸೀರೆಯ ನುಡಿಸಿದರೆ, ಅದು ಸಿರಿಯ ಸಿಂಗರವಾಯಿತ್ತು ನೋಡಾ. ಅಂಬರದೊಳಗಾಡುವ ಗಿಳಿ ಪಂಜರದೊಳಗಣ ಬೆಕ್ಕ ನುಂಗಿ ರಂಭೆಯ ತೋಳಿಂದಗಲಿತ್ತು ನೋಡಾ ಗುಹೇಶ್ವರಾ.

ಟೀಕುಃ— ವಿಶ್ವವ ನುಂಗಿದ ಮಾಯಾ ಪ್ರಪಂಚು ಪಿಂಡವೆಂಬ
ಶಾಸನದ ಮೇಲೆ ಸಂಚಿತ ಪ್ರಾರಬ್ಧ ಆಗಾಮಿ ಎಂಬ ಕರ್ಮತ್ರಯದ
ಸಂಕಲ್ಪಯುಕ್ತದಿಂ ಲಿಖಿಸಲು, ತಥ್ಯವಾದ ನಿಜವನೇ ಮಿಥ್ಯವ ಮಾಡಿ
ಮಿಥ್ಯವಾದ ತನುವನೆ ತಥ್ಯವ ಮಾಡಿತ್ತೆಂಬುದೀಗ ಮಾಯದ ಕೈಯ್ಯಲ್ಲಿ
ಓಲೆ ಕಂಠವ ಕೊಟ್ಟರೆ ಲಘುನ ವಿಘುನವ ಬರೆಯಿತ್ತು ನೋಡಾ ಎಂಬ
ಶಬ್ದಕ್ಕರ್ಥ. ಈ ಭೇದವನು ಸದ್ವಿವೇಕದಿಂದರಿದು ಆ ಮಲಸಂಬಂಧ
ದೇಹಕ್ಕೆ ಸುಜ್ಞಾನ ಪ್ರಭೆಯನಾವರಣವ ಮಾಡಿಕೊಂಡರೆ, ಆ ದೇಹವೆ
ಶುದ್ಧ ನಿರ್ಮಲ ದೇಹವಾಗಿ, ಮಹಾಜ್ಞಾನವೇ ಶೃಂಗಾರವಾಗಿದ್ದಿತೆಂಬು
ದೀಗ, ಅರಗಿನ ಪುತ್ಥಳಿಗೆ ಉರಿಯ ಸೀರೆಯನುಡಿಸಿದರೆ, ಅದು ಸಿರಿಯ
ಸಿಂಗರವಾಯಿತ್ತೆಂಬ ಶಬ್ದಕ್ಕರ್ಥ. ಅಂಬರವೆಂದಡೆ ಆತ್ಮ ತತ್ವ. ಆ ಆತ್ಮ
ತತ್ವದೊಳಗೆ ಸ್ವಲೀಲಾ ಪರನಾಗಿಪ್ಪಾತನು ಪರಮ ಹಂಸನೆನಲು ಅಂಬರ
ದೊಳಗಾಡುವ ಗಿಳಿ ಎಂಬ ಶಬ್ದಕ್ಕರ್ಥ. ಆ ಪರಮಹಂಸನು ದೇಹ
ವೆಂಬ ಪಂಜರದೊಳಗಿರ್ದು ತನ್ನ ನಿಲವ ಗ್ರಹಿಸಿ ಹಿಡಿದಿಹೆನೆಂದು ತದೇ
ಕಾಗ್ರ ಚಿತ್ತದಿಂದಿಷ್ಟಾರ್ಥವನು ತಾನೆ ಅವಗ್ರಹಿಸಿ, ಜ್ಞಾನಶಕ್ತಿಯ ಅಭಿನ್ನ
ಸಂಗದ ಹಾಗೆ ಏಕರಸವಾಯಿತ್ತೆಂಬುದೀಗ, ಅಂಬರದೊಳಗಾಡುವ ಗಿಳಿ
ಪಂಜರದೊಳಗಣ ಬೆಕ್ಕ ನುಂಗಿ ರಂಭೆಯ ತೋಳಿಂನಗಲಿತ್ತು ಎಂಬ
ಶಬ್ದಕ್ಕರ್ಥ.

೩೭. ಹಿರಿದಪ್ಪ ಜಲಧಿಯ ಮಡುವಿನೊಳಗೆ ಕರಿಯ ಕಬ್ಬಿಲ
ಜಾಲವ ಬೀಸಿದ ನೋಡಯ್ಯ. ಅರಿದ ತಲೆ ಐದು, ಅರಿಯದ ತಲೆ ಐದು,
ಕರಿಯ ತಲೆ ಐದು, ಮುಂದಿದ್ದಾವೆ ನೋಡಯ್ಯ. ಕರಿಯ ಕಬ್ಬಿಲ ಜಾಲವ
ಹೊತ್ತುಕೊಂಡು ಹೋದರೆ ನೇತ್ರದಲೋಕುಳಿಯಾಡಿತ್ತ ಕಂಡೆ ಗುಹೇ
ಶ್ವರಾ.

ಟೀಕು॥ ಹಿರಿದಪ್ಪ ಜಲಧಿಯ ಮಡುವೆಂದರೆ, ಸಂಸಾರ ಸಾಗರದ
ಘಾತವನರಿಯಬಾರದೆಂಬರ್ಥ. ಆ ಸಂಸಾರ ಸಾಗರದೊಳು ಕಾಮನೆಂಬ
ಜಾಲಗಾರನು ಮಾಯಾ ಜಾಲವ ಬೀಸಿದನೆಂಬುದೀಗ, ಕರಿಯ ಕಬ್ಬಿಲ
ಜಾಲವ ಬೀಸಿದ ನೋಡಯ್ಯ ಎಂಬ ಶಬ್ದಕ್ಕರ್ಥ. ಶಬ್ದ, ಸ್ಪರ್ಶ, ರೂಪ,
ರಸ, ಗಂಧವೆಂಬ ಐದು ವಿಷಯಂಗಳು ದೇಹದಿಂದಲು ಬೇರಿಟ್ಟು
ಕುರುಹುಗೊಂಡು ಸೋಂಕಿನಿಂ ತೋರುತ್ತಿಹ ಕಾರಣ, ಅವು ಭಿನ್ನ ವಿಷ
ಯಂಗಳಾಗಿ, ಅವು ಅರಿದ ತಲೆ ಐದು ಎಂಬ ಶಬ್ದಕ್ಕರ್ಥ. ಜ್ಞಾನೇಂ



ದ್ರಿಯಂಗಳೈದು ತದ್ದೇಹಕ್ಕೆ ಪ್ರಧಾನವಾಗಿ ಸರ್ವವನು ತಾನೆ ಅರಿವುತ್ತಿಹ
ಕಾರಣ ಅಭಿನ್ನ ಸಂಬಂಧದಿಂ ಅರಿಯದ ತಲೆ ಐದು ಎಂಬ ವಚನಾ
ನ್ವಯ. ಕರ್ಮೇಂದ್ರಿಯಂಗಳೈದು ತಮಗೆ ಜ್ಞಾನವಿಲ್ಲದೆ ಮನಸ್ಸಿನಾಧಿ
ನದಿಂ ಚರಿಸುತ್ತಿಪ್ಪ ಕಾರಣದಿಂ ಆ ಅಜ್ಞಾನ ತಮೋರೂಪಾಗಿ ಆ ಕರ್ಮೇಂ
ದ್ರಿಯಂಗಳು ಕರಿಯ ತಲೆ ಐದೆಂಬ ಶಬ್ದಾನ್ವಯ. ಆ ಕಾಮ ಜಾಲದೊಳು
ಸಿಕ್ಕಿಪ್ಪ ಜೀವನ ಪಾಶಚ್ಛೇದವಾಗಲು, ಆ ಮಾಯಾ ಜಾಲ ನಿವೃತ್ತಿ
ಯಾಯಿತ್ತಾಗಿ, ಕರಿಯ ಕಬ್ಬಿಲ ಜಾಲವ ಹೊತ್ತುಕೊಂಡು ಹೋದ
ನೆಂಬ ಶಬ್ದಕ್ಕರ್ಥ. ಇಂತು ಆ ಜೀವಭಾವ ಭ್ರಾಂತಿಯಳಿದು, ಸುಜ್ಞಾ
ನೋದಯವಾದ ಶರಣನು ತನ್ನ ಸ್ವರೂಪ ನೋಡಿ ಸ್ವಚ್ಛಾನಂದ ಜಲ
ಪ್ರವಾಹದಲ್ಲಿ ಮುಳುಗಾಡುತಲಿರ್ದನೆಂಬುದೀಗ, ನೇತ್ರದ ಲೋಕುಳಿಯಾ
ಡಿತ್ತ ಕಂಡೆನೆಂಬ ಶಬ್ದಕ್ಕರ್ಥ.

೩೮. ಕೋಣನ ಕೋಡಿನ ತುದಿಯಲ್ಲಿ ಏಳು ನೂರೆಪ್ಪತ್ತು ಸೇದಿ
ಯಬಾವಿ, ಬಾವಿಯೊಳಗೊಂದು ಬಗರಿಗೆ, ಬಗರಿಗೆಯೊಳಗೊಬ್ಬ ಸೂಳೆ
ನೋಡಯ್ಯ. ಆ ಸೂಳೆಯ ಕೊರಳಲ್ಲಿ ಏಳುನೂರೆಪ್ಪತ್ತಾನೆ ನೇರಿತ್ತಕಂಡೆ
ಗುಹೇಶ್ವರಾ.

ಟೀಪುಃ— ಕೋಣನೆಂದರೆ ಜೀವನೆಂಬ ಪಶುವೆಂಬರ್ಥ. ಆ ಜೀವ
ವೆಂಬ ಪಶುವಿಂಗೆ ಅಹಂಕಾರ ಮಮಕಾರಂಗಳೆರಡು ಕೋಡುಗಳಾಗಿ
ಪ್ಪವಾಗಿ, ಕೋಣನ ಕೋಡೆಂಬ ಶಬ್ದಕ್ಕರ್ಥ. ಆ ಅಹಂಕಾರ ಮಮ
ಕಾರಂಗಳ ಸಂಕಲ್ಪಮಾರ್ಗಭೇದದಿಂ ಏಳುನೂರೆಪ್ಪತ್ತು ನಾಳಂಗಳು
ಸಂಸಾರ ವಿಷಯ ರಸವನಾಸ್ವಾದಿಸಿಕೊಂಡಿಪ್ಪ ಕಾರಣವಾಗಿ ಏಳುನೂರೆ
ಪ್ಪತ್ತು ಸೇದಿಯ ಬಾವಿ ಎಂಬ ಶಬ್ದಕ್ಕರ್ಥ. ಆನಾಳಂಗಳೆಲ್ಲಕ್ಕೂ ಮಧ್ಯ
ಸ್ಥಾನವಾಗಿ ನವಚಿದ್ರವಾಗಿ ತನುವೆಂಬುದೊಂದು ಬಗರಿಗೆ ಇರುತಿಪ್ಪ ಕಾರ
ಣದಿಂ, ಬಾವಿಯೊಳಗೊಂದು ಬಗರಿಗೆ ಎಂಬ ಶಬ್ದಕ್ಕರ್ಥ. ಆ ತನು
ವಿನೊಳಗೇ ಕಾಕಿಯಾಗಿ ಮಾಯೆಯೆಂಬ ಸ್ತ್ರೀ ಅಸಜ್ಜನಭಾವದಿಂ ಪಣ್ಯಾಂ
ಗನೆಯಾಗಿರುತಿಪ್ಪಳು. ಆದು ಕಾರಣದಿಂ ಬಗರಿಗೆಯೊಳಗೊಬ್ಬ ಸೂಳೆ
ಎಂಬ ಶಬ್ದಕ್ಕರ್ಥ. ಆ ಮಾಯೆಯ ಅದೃಢ ಕಂಠದೊಳು ಏಳುನೂ
ರೆಪ್ಪತ್ತು ನಾಳಂಗಳೊಳು ಜೀವನು ವ್ಯವಹರಿಸುವ ಕರಣಾದಿ ವಿಕಾರಂ
ಗಳು ನಾನಾ ಭೇದದಿಂದ ಅಹಂಕಾರಂಗಳಿಂ ಭೂಷಣವೆನಿಸುತ್ತಿರಲು,

ಆ ಸೂಳೆಯ ಕೊರಳಲ್ಲಿ ಏಳುನೂರೆಪ್ಪತ್ತು ಆನೆ ನೇರಿತ್ತ ಕಂಡೆನೆಂಬ ಶಬ್ದಕ್ಕರ್ಥ.

೩೯. ಹುಲಿಯ ತಲೆಯ ಹುಲ್ಲೆ, ಹುಲ್ಲೆಯ ತಲೆಯ ಹುಲಿ, ಈ ಎರಡರ ನಡು ಒಂದಾಯಿತ್ತು. ಹುಲಿಯಲ್ಲ, ಹುಲ್ಲೆಯಲ್ಲ. ಕೆಲದಲೊಂದು ಬಂದು ಮೆಲುಕಾಡಿತ್ತು ನೋಡಾ. ತಲೆ ಇಲ್ಲದ ಮುಂಡ ತರಗೆಲೆಯ ಮೇದರೆ ಎಲೆ ಮರೆಯಾಯಿತ್ತು ಕಾಣಾ ಗುಹೇಶ್ವರಾ.

ಟೀಕು:— ಸಮಸ್ತ ವಿಶ್ವದಲುಳ್ಳ ಪಶುಪ್ರಾಣಿಗಳನು ಮುರಿದು ನುಂಗುತ್ತಿಹುದು ಕಾಲನು. ಆ ಕಾಲವ್ಯಾಘ್ರನೆಂಬುದೇ ಹುಲಿ ಎಂಬ ಶಬ್ದಕ್ಕರ್ಥ. ಹರಿಣಿ ಎಂದರೆ ಮಾಯೆ ಎಂಬ ಶಬ್ದಕ್ಕರ್ಥ. ಆ ಕಾಲವ್ಯಾಘ್ರನನೆ ಶಿರಪ್ರಧಾನವ ಮಾಡಿಕೊಂಡು ಮಾಯೆ ಎಂಬ ಹರಿಣಿ ಇಪ್ಪಳು. ಆ ಮಾಯೆ ಎಂಬ ಹರಿಣಿಯನೆ ಶಿರಪ್ರಧಾನವ ಮಾಡಿಕೊಂಡು ಕಾಲವ್ಯಾಘ್ರನಿಪ್ಪದು. ತತ್ಕಾಲ ವ್ಯಾಘ್ರನ ಮುಖದಿಂ ಮಾಯೆ ಲೋಕವ ಸಂಹರಿಸುತ್ತಿಪ್ಪಳು ಆ ಕಾಲವ್ಯಾಘ್ರ ತಾನು ಆ ಮಾಯಾ ಮುಖದಿಂ ಲೋಕವ ಗ್ರಹಿಸುತ್ತಿಪ್ಪನು. ಹರಿಣಿ ಎಂದಡೆ ಮಾಯೆಯಾದ ಪರಿ ಎಂತೆಂದೊಡೆ ಹರಿಣಿ ಎಂಬುದು ತಾನು ಅರಣ್ಯ ಪ್ರವೇಶಿಯಾಗಿಹುದು; ಸಾಂಚಲ್ಯಗುಣಯುತೆ ಯಾಗಿಪ್ಪುದು; ವೃಥಾ ಭ್ರಾಂತು ಲಕ್ಷಣ ಸಂಬಂಧಿಯಾಗಿಪ್ಪುದು; ಇತರ ದೃಷ್ಟಿಗೆ ಸ್ವರೂಪಿಣಿಯಾಗಿಪ್ಪುದು; ತೃಣಾಂಬುಗ್ರಾಸಿಯಾಗಿಪ್ಪುದು. ಆ ಹಾಂಗೆ ಮಾಯೆಯು ಭವಾರಣ್ಯವಾಸಿಯಾಗಿಯು, ಸಂಚಲಗುಣ ಸಂಬಂಧಿಯಾಗಿಯು, ವೃಥಾ ಭ್ರಾಂತು ಲಕ್ಷಣೆಯಾಗಿಯು, ಭಿನ್ನ ದೃಷ್ಟಿಗಳಿಗೆ ಸ್ವರೂಪಿಣಿಯಾಗಿಯು, ತೃಣ ಸ್ರತಿ ಪತ್ರಾಗುತ್ತಿಹ ಸಂಸಾರವನು ವಿಷಯ ರಸೋದಕವನು ಕೊಂಡಿಪ್ಪಳಾಗಿ, ಹರಿಣಿ ಎಂದೊಡಂ ಮಾಯೆ ಎಂದೊಡಂ ಏಕಾರ್ಥ. ಇಂತಪ್ಪ ಕಾಲಕ್ಕು ಮಾಗು. ಅಜ್ಞಾನವೆಂಬುದು ಮಧ್ಯಭಾವದಿಂದೊಂದೆಯಾಗಿರುತ್ತಿರಲು ಎರಡರ ನಡು ಒಂದೆಯಾಯಿತ್ತೆಂಬ ಶಬ್ದಕ್ಕರ್ಥ. ಆ ಕಾಲವ್ಯಾಘ್ರನಲ್ಲದೆ ಆ ಮಾಯೆಯಲ್ಲದೆ ಪ್ರಾರಬ್ಧ ಕರ್ಮವೆಂಬ ಭೋಕ್ತೃಪುಣ್ಯ ಪಾಪಂಗಳನನುಭವಿಸುತ್ತಿರಲು, ಅದು ಹುಲಿಯಲ್ಲ, ಹುಲ್ಲೆಯಲ್ಲ, ಕೆಲದಲೊಂದು ಬಂದು ಮೆಲುಕಾಡಿತ್ತು ಎಂಬ ಶಬ್ದಕ್ಕರ್ಥ. ಇಂತಪ್ಪ ಮಾಯಾ ಭ್ರಾಂತಿ ಜೀವನ ಜ್ಞಾನಹೀನವಾದ ಚರಿತ್ರಂಗಳು ಶಿರವಿಲ್ಲದ ಮುಂಡವೆನಿಸಿಕೊಂಡ ಕಾರಣದಿಂ, ಆ ದುಶ್ಚರಿತ್ರಂಗಳು ಸಂಸಾರ ಪ್ರಪಂಚುಗಳೆಂಬ ಶುಷ್ಕ ಪತ್ರನವಗ್ರಹಿಸಿಕೊಂಡಿಪ್ಪನಾಗಿ, ತಲೆ ಇಲ್ಲದ ಮುಂಡಂಗಳು ತರಗೆಲೆಯ ಮೇದವೆಂಬ ಶಬ್ದಾನ್ವಯ. ಇಂತಾದ ಕಾರಣ ಆ ಜೀವನು ಪ್ರಪಂಚಿನ ಮರೆಯೊಳಗಡಗಿದನೆಂಬುದೀಗ, ಎಲೆ ಮರೆಯಾಯಿತ್ತು ಎಂಬ ಶಬ್ದಕ್ಕರ್ಥ.



೪೦. ಕರೆಯದೆ ಬಂದುದ, ಹೇಳದೆ ಹೋದುದನಾರು ಅರಿಯರಲ್ಲಾ. ಅಂದಂದಿಂಗೆ ಬಂದ ಪ್ರಾಣಿಗಳಾರು ಅರಿಯರಲ್ಲಾ. ಗುಹೇಶ್ವರನೆಂಬ ಲಿಂಗ ಉಣ್ಣದೆ ಹೋದುದನಾರು ಅರಿಯರಲ್ಲಾ.

ಟೀಕು:— ಹುಟ್ಟುವಾಗಾರು ಕರೆಯದೆ, ವೃಥಾ ಹುಟ್ಟಿ ಎಂಬುದೀಗ, ಕರೆಯದೆ ಬಂದುದೆಂಬ ಶಬ್ದಕ್ಕರ್ಥ. ಸಾವಾಗಾರಿಗೂ ಹೇಳದೆ ಹೋದರೆಂಬುದು, ಹೇಳದೆ ಹೋದರೆಂಬ ಶಬ್ದಕ್ಕರ್ಥ. ಈ ಭೇದವನಾರಿಗೂ ಅರಿಯಬಾರದು. ಏನು ಕಾರಣವೆಂದರೆ, ಆಗ ಹುಟ್ಟಿ ಬೇಗ ಸಾವ ಅನಿತ್ಯ ಜೀವಿಗಳಾದ ಕಾರಣ, ಇಂತು ಸಮಸ್ತ ಪ್ರಾಣಿಗಳು ದೇಹವಿಡಿದು ಹುಟ್ಟಿ, ಪುಣ್ಯಪಾಪವನುಂಬಲ್ಲಿ, ಆ ಜೀವರುಗಳೊಳಗೆ ಹೊದ್ದಿಯೂ ಹೊದ್ದದೆ, ಬೆರಸಿಯೂ ಬೆರಸದೆ ಇಪ್ಪ ಪರಶಿವನು ಆ ಪುಣ್ಯಪಾಪವ ತಾನು ಅನುಭವಿಸದೆ ತಪ್ಪಿಸಿಕೊಂಡು ಹೋದನೆಂಬುದೀಗ, ಗುಹೇಶ್ವರನೆಂಬ ಲಿಂಗ ಉಣ್ಣದೆ ಹೋದುದನಾರು ಅರಿಯರೆಂಬ ಶಬ್ದಕ್ಕರ್ಥ.

೪೧. ಆಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ. ಅಳಿದವಲ್ಲಾಗಿರಲಾದ ನಿರ್ಮಿತಂಗಳೆಲ್ಲವು ಕತ್ತಲೆಗವಿಯಿತ್ತು. ಮೂರು ಲೋಕದೊಳಗೆ ಇದರಚ್ಚುಗವೇನು ಹೇಳಾ ಗುಹೇಶ್ವರಾ?

ಟೀಕು:— ಆವಾಗ ಉತ್ಪತ್ತಿ ಆಗವೆ ಲಯ, ನಡುವಿದ್ದುದೆಲ್ಲವೂ ಮಿಥ್ಯ. ಇಂತು ಜಲಬುದ್ಬುದ ಪಿಂಡವ ಧರಿಸಿಪ್ಪ ಜೀವರುಗಳೆಲ್ಲರೂ, ಅಜ್ಞಾನದಲ್ಲಿ ಮಗ್ನರಾಗಿ ಹೋದರೆಂಬುದೀಗ ವಚನಾರ್ಥ.

೪೨. ಕಾಲುಗಳೆರಡು ಗಾಲಿ ಕಂಡಯ್ಯ. ದೇಹವೆಂಬುದು ತುಂಬಿದ ಬಂಡಿ ಕಂಡಯ್ಯ. ಬಂಡಿಯ ಹೊಡೆವವರೈವರು ಮಾನಿಸರು. ಒಬ್ಬರಿಗೊಬ್ಬರು ಸಮವಿಲ್ಲಯ್ಯ. ಅದರಿಚ್ಛೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿಯಿತ್ತು ಗುಹೇಶ್ವರಾ.

ಟೀಕು:— ದೇಹವೆಂಬ ರಥಸೂತ್ರವು ಪಂಚ ಪ್ರಾಣ ವಾಯುಗಳಿಂ ನಡೆವುತ್ತಿಪ್ಪುದೆಂಬುದೀಗ ಕಾಲುಗಳೆರಡು ಗಾಲಿ, ದೇಹವೆಂಬುದು ತುಂಬಿದ ಬಂಡಿ, ಬಂಡಿಯ ಹೊಡೆವರೈವರು ಮಾನಿಸರೆಂಬ ಶಬ್ದಕ್ಕರ್ಥ. ಆ ವಾಯುಗಳು ತಮ್ಮೊಳಗೆ ಒಂದಕೊಂದು ಸಮ ವಿಷಮ ಗತಿಗಳನುಳ್ಳ ಕಾರಣ ಒಬ್ಬರಿಗೊಬ್ಬರು ಸಮವಿಲ್ಲವೆಂಬ ಶಬ್ದಕ್ಕರ್ಥ. ಆ ದೇಹಧರ್ಮವನರಿದು, ಸತ್ಪಥದಲ್ಲಿ ನಡಿಸಲು ಆ ಪಿಂಡಕ್ಕೆ ಭವಭಾರವಳಿಯಿತ್ತೆಂಬುದೀಗ, ಅದರಿಚ್ಛೆಯನರಿದು ಹೊಡೆಯದಿದ್ದರೆ, ಅದರಚ್ಚು ಮುರಿಯಿತ್ತೆಂಬ ಶಬ್ದಕ್ಕರ್ಥ.

೪೩. ಆರಕ್ಕೆಯ ಸಿರಿಗೆ ಆರಕ್ಕೆಯ ಚಿಂತಿಸುವರು. ಆರಕ್ಕೆಯ ಬಡತನಕ್ಕೆ, ಆರಕ್ಕೆಯ ಮರುಗುವರು. ಇದಾರಕ್ಕೆ ಆರಕ್ಕೆ ಎನಕ್ಕ ಎನಕ್ಕೆ ಮಾಯದ ಬೇಳುವೆ ಹುರುಳಿಲ್ಲ. ಕೊಂದು ಕೂಗಿತ್ತು ನೋಡಾ ಗುಹೇಶ್ವರಾ.

ಟೀಕು:— ತಾನಲ್ಲದ ತನ್ನದಲ್ಲವ ಅನ್ಯೋನ್ಯವಾದ ದೇಹವಿಡಿದು ಬದುಕುವೆನೆಂದು, ವೃಥಾ ಚಿಂತಾತುರನಾಗಿಪ್ಪ ಜೀವರು ಮಾಯಾ ಭ್ರಾಂತಿನೊಳಗೆ ಸಿಕ್ಕಿ ಕೆಟ್ಟರೆಂಬುದೀ ವಚನಾರ್ಥ.

೪೪. ತೋಟವ ಬಿತ್ತಿದರೆಮ್ಮವರು. ಕಾಹ ಕೊಟ್ಟರು ಜವನವರು. ನಿತ್ಯವಲ್ಲದ ಸಂಸಾರ ವೃಥಾ ಹೋಯಿತ್ತಲ್ಲಾ. ಗುಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು. ಆಟ್ಟಣ್ಣಲಿಲ್ಲ.

ಟೀಕು:— ತಾಯಿತಂದೆಗಳ ವಿಕಾರದಿಂದಲುದಯಿಸಿದ ತನುವಿಂಗೆ ಯಮನು ಸಂಸಾರವನೆ ಸಂಕಲ್ಪಿಸಿಕೊಂಡಿಪ್ಪನೆಂಬುದೀಗ, ತೋಟವ ಬಿತ್ತಿದರೆಮ್ಮವರು ಕಾಹ ಕೊಟ್ಟರು ಜವನವರೆಂಬ ಶಬ್ದಕ್ಕರ್ಥ. ಇಂತಪ್ಪ ಸಂಸಾರ ನಿತ್ಯವಲ್ಲದ ಕಾರಣ ಶಿವನಿಕ್ಕಿದ ತಾಪತ್ರಯಾಗ್ನಿಯಲ್ಲಿ ಜಗವೆಲ್ಲವು ಬೇವುತ್ತಿರ್ದುದಲ್ಲದೆ, ಅರಿದು ಸುಖಿಸ ತೆರಹಿಲ್ಲವೆಂಬುದೀಗ ಗುಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು, ಆಟ್ಟಣ್ಣಲಿಲ್ಲವೆಂಬ ಶಬ್ದಕ್ಕರ್ಥ.

೪೫. ನಿರ್ಣಯವನರಿಯದ ಮನವೆ ದುಗುಡವನಾಹಾರಗೊಂಡೆಯಲ್ಲಾ! ಮಾಯಾ ಸೂತ್ರವಿದೇನೊ? ಕಂಗೊಳಗಣ ಕತ್ತಲೆ ತಿಳಿಯರಲ್ಲಾ ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ ಗುಹೇಶ್ವರಾ.



ಟೀಪು:— ತನ್ನ ನಿಜದ ನಿಲವನರಿಯೆನೆಂದು ಚಿಂತಾಗ್ರಾಹಕನಾದಡೆ, ಅದೆ ಮಾಯಾಸೂತ್ರವಾದ ಕಾರಣ, ನಿರ್ಣಯವನರಿಯದ ಮನವೆ ದುಗುಡವನಾಹಾರಂಗೊಂಡೆಯಲ್ಲಾ, ಮಾಯಾ ಸೂತ್ರವಿದೇನೊ ಎಂಬ ಶಬ್ದಕ್ಕರ್ಥ. ಅದು ತಾನೆ ಜ್ಞಾನ ದೃಷ್ಟಿಯ ಮರವೆಯಾದ ಕಾರಣ ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ ಎಂಬ ಶಬ್ದಕ್ಕರ್ಥ. ಆ ಸುಜ್ಞಾನ ಪ್ರಭೆಯೊಳಗೆ ಮಹಾಜ್ಞಾನ ಶೃಂಗಾರವಾಗಿಪ್ಪಾತನು ತಾನೆಂದರಿಯದೆ ತನ್ನ ತಾನರಿಸಿ ಬಳಲುತ್ತಿಪ್ಪುದು ಮಿಥ್ಯಾಜ್ಞಾನವಾದಕಾರಣ, ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ ಎಂಬ ಶಬ್ದಕ್ಕರ್ಥ.

**ಮಾಯಾ ವಿಲಾಸ ವಿಡಂಬನ ಸ್ಥಲಸಮಾಪ್ತ.**

ಇಂತು ಮಾಯೆಯ ವಿಲಾಸವ ವಿಡಂಬಿಸುತ್ತಿರ್ದ್ದಾತನು ಆ ಮಾಯೆಗೆ ಸಮೀಪನು. ಅದೆಂತೆಂದಡೆ ತನಗೆ ಮಾಯೆ ಇದಿರಿಟ್ಟು ತೋರಿಹುದಾಗಿ, ತನ್ನಲ್ಲಿ ಭಿನ್ನವಿಲ್ಲವೆಂಬ ವಿಚಾರ ಹುಟ್ಟಲ್ಲಾಗಿ ತಾನೆ ಮಾಯಾ ವಿಕಾರಿ ಎಂದರಿದು, ಅನ್ಯವ ವಿಡಂಬಿಸುವದ ಬಿಟ್ಟು ತನ್ನ ಹೇಯೋಪಾಯವ ತಾನೆ ವಿಡಂಬಿಸುತ್ತಿರಲು, ಮುಂದೆ ಸಂಸಾರಹೇಯಸ್ಥಲವಾದುದು.

## ಸಂಸಾರ ಹೇಯಸ್ಥಲ.

೪೬. ಸಂಸಾರವೆಂಬ ಹೆಣ ಬಿದ್ದಿರೆ, ತಿನ ಬಂದ ನಾಯ ಜಗಳವ ನೋಡಿರೆ. ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ. ಗುಹೇಶ್ವರನೆಂಬ ಲಿಂಗ ಅಲ್ಲಿಲ್ಲ ಕಾಣರೆ.

ಟೀಪು:— ಅಮೃತವೆಂದರೆ ನಿತ್ಯಕ್ಕೆ ಪೆಸರು. ಮೃತವೆಂದರೆ ಅನಿತ್ಯಕ್ಕೆ ಪೆಸರು. ಇಂತೆರಡರೊಳಗೆ ಸಂಸಾರವೆಂಬುದು ಅನಿತ್ಯವಾಗಿ, ಜೀವನ್ಮೃತವೆನಿಸಿಪ್ಪ ಕಾರಣದಿಂ, ಸಂಸಾರವೆಂಬ ಹೆಣ ಬಿದ್ದರೆ ಎಂಬ ಶಬ್ದಕ್ಕರ್ಥ. ಆ ಜೀವನ್ಮೃತ ಪಿಂಡದ ಮಾಂಸ ಬಿಂದುವನು ಇಂದ್ರಿಯಂಗಳೆಂಬ ಶ್ವಾನಂಗಳು ಭಕ್ಷಿಸುತ್ತ ಅಲ್ಲಿ ಕರಣ ಮನವೆಂಬ ಕರ್ಕಶ

ದಿಂದಿರುತ್ತಿರಲು, ಅದ ತಿನಬಂದ ನಾಯ ಜಗಳವ ನೋಡಿರೆ, ಎಂಬ ಶಬ್ದಕ್ಕರ್ಥ. ಈ ಭೇದವನು ಸದ್ವಿವೇಕದಿಂದೆಚ್ಚತ್ತು ನೋಡಿದರೆ, ತನಗೆ ತನ್ನ ಸ್ಥಿತಿ ಹಾಸ್ಯವಾಗಿ ತೋರುತ್ತಿರಲು, ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ ಎಂಬ ಶಬ್ದಕ್ಕರ್ಥ. ಈ ಭೇದವನುಳ್ಳ ಕಾರಣ ಅಲ್ಲಿ ಲಿಂಗದ ನಿಜವನರಿಯಬಾರದೆಂಬುದೀಗ ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೋ ಎಂಬ ಶಬ್ದಕ್ಕರ್ಥ.

೪೭. ಹಳ್ಳದೊಳಗೊಂದು ಹುಳ್ಳಿ ಬರುತ್ತಿಗಲು ನೊರೆ ತೆರೆಗಳು ತಾಗಿದವಲ್ಲಾ! ಸಂಸಾರವೆಂಬ ಸಾಗರದೊಳಗೆ ಸುಖ ದುಃಖಂಗಳು ತಾಗಿದವಲ್ಲಾ! ಇದಕ್ಕಿದು ಮೂರ್ತಿಯಾದ ಕಾರಣ ಪ್ರಳಯವಾಯಿತ್ತು ಗುಹೇಶ್ವರಾ.

ಟೀಪುಃ— ಸಂಸಾರವೆಂಬ ಸಾಗರದ ತೆರೆಯೊಳಗೆ ಆಳುತ್ತ ಮುಳುಗುತ್ತಿಹ ಜೀವಂಗೆ ಸುಖ ದುಃಖಂಗಳು ವ್ಯೆಯ್ಯುಂಡಿಪ್ಪವು. ಅದು ಕಾರಣ ಎಲ್ಲ ಜೀವರುಗಳು ಪ್ರಳಯ ಬಾಧೆಗೊಳಗಾದರೆಂಬುದೀ ವಚನಾರ್ಥ.

೪೮. ಮಾನದ ತೊರೆಯಾವಿಂಗೆ ಕೊಳಗದ ತೊರೆಯ ಕೆಚ್ಚಲು, ತಾಳಮರದುದ್ದಿಹ ವೆರಡು ಕೋಡು ನೋಡಾ! ಅದನರಸ ಹೋಗಿ ಆರುದಿನ ಅದು ಕೆಟ್ಟು ಮೂರುದಿನ ಅಘಟಿತ ಘಟಿತ ಗುಹೇಶ್ವರಾ ಅರಸುವ ಬಾರ್ಕೆ.

ಟೀಕುಃ— ದೇಹಾಭಿಮಾನ ಸ್ವರೂಪಿನ ಜೀವನು ತಾನು ಸೂಕ್ಷ್ಮವಾದರು ಸಂಸಾರವೆಂಬ ವಿಷಯ ರಸವ ತುಂಬಿಕೊಂಡಿಹ ಸ್ಥಾನ ಪಿರಿದಾಗಿಪ್ಪದೆಂಬುದೀಗ, ಮಾನದ ತೊರೆಯಾವಿಂಗೆ ಕೊಳಗದ ತೊರೆಯ ಕೆಚ್ಚಲೆಂಬ ಶಬ್ದಕ್ಕರ್ಥ. ಅದಕ್ಕೆ ಅಹಂಕಾರ ಮಮಕಾರವೆಂಬವೆರಡು ಕೋಡುಗಳು ಅತ್ಯುನ್ನತವಾಗಿರ್ಪ ಕಾರಣ ತಾಳಮರದುದ್ದಿಹವೆರಡು ಕೋಡು ನೋಡಾ ಎಂಬ ಶಬ್ದಕ್ಕರ್ಥ. ಆ ಜೀವನ ನಿಲವನರಿದಿಹೆನೆಂದು ಷಡಂಗ ಯೋಗ ಸೋಪಾನವ ಮಾಡಿ ಆರಡಿಯ ದಾಂಟಿ, ಅರಿದಿಹೆನೆಂಬನ್ನಕ್ಕರ ಆ ಜೀವನ ನಿಲವು ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿಸೋಪಾನವ ಮೆಟ್ಟಲೊಡನೆ ಮೂರರಲ್ಲಿ ಇಲ್ಲವೆ ಯಾಯಿತ್ತೆಂಬುದೀಗ, ಅದನರಸ ಹೋಗಿ ಆರು ದಿನ ಅದು ಕೆಟ್ಟು, ಮೂರು ದಿನವೆಂಬ ಶಬ್ದಕ್ಕರ್ಥ. ಈ ಭೇದವನರಿದು, ಶಿವಶರಣನು ಪರತತ್ವದ ಸಂಗವ ಹಾರು



ತ್ತಿರಲು, ಅದೀಗ, ಅಘಟಿತ ಘಟಿತ ಗುಹೇಶ್ವರಾ ಅರಸುವ ಬಾರ್ಕೆ ಎಂಬ ಶಬ್ದಕ್ಕರ್ಥ.

೪೯. ಆನೆಯ ಹೆಣ ಬಿದ್ದರೆ, ಕೋಡಗ ಮುದ್ದಾಡಿಸಿತ್ತ ಕಂಡೆನಯ್ಯ. ಕಾಡೊಳಗೊಬ್ಬ ಸೂಳೆ ಕರೆಕರೆದೊತ್ತೆಯ ಕೊಂಬುದ ಕಂಡೆನಯ್ಯ. ಹಾಳೂರೊಳಗೆ ನಾಯ ಜಗಳವ ಕಂಡೆ. ಇದೇನು ಸೋಜಿಗ ಹೇಳಾ ಗುಹೇಶ್ವರಾ?

ಟೀಪುಃ— ಆನೆ ಎಂಬ ಅಹಂಕಾರವು ಜೀವನ್ಮೃತವೆನಿಸಿ ಶರೀರಗತವಾಗಿ ಬಿದ್ದಿರಲೆಂಬುದೀಗ, ಆನೆಯ ಹೆಣ ಬಿದ್ದರೆ ಎಂಬ ಶಬ್ದಕ್ಕರ್ಥ; ಆ ಜೀವನ್ಮೃತಪಿಂಡವನು ಮನವೆಂಬ ಮರ್ಕಟನು ತದ್ದೇಹ ಸಂಕಲ್ಪ ಹಸ್ತದಿಂ ಹಿಡಿದು ಲಾಲಿಸುತ್ತಿರಲು, ಅದೀಗ ಕೋಡಗ ಮುದ್ದಾಡಿಸಿತ್ತೆಂಬ ಶಬ್ದಕ್ಕರ್ಥ; ಭವಾರಣ್ಯದೊಳಗೆ ಮಾಯೆ ಎಂಬ ಪಣ್ಯಸ್ತ್ರೀ ಸರ್ವರನು ಮರುಳು ಮಾಡುತ್ತಿರಲು, ಅದೀಗ ಕಾಡೊಳಗೊಬ್ಬ ಸೂಳೆ ಕರೆಕರೆದೊತ್ತೆಯ್ಯ ಕೊಂಬುದ ಕಂಡೆನೆಂಬ ಶಬ್ದಕ್ಕರ್ಥ; ಮಿಥ್ಯಾಭಾವವಪ್ಪ ಪಂಚಭೂತ ಗ್ರಾಮದೊಳು ಇಂದ್ರಿಯಂಗಳೆಂಬ ಶುನಕಂಗಳು ಕರಣ ಮಥನ ಕರ್ಕಶದಿಂದಿರಲು ಅದೀಗ ಹಾಳೂರೊಳಗೆ ನಾಯ ಜಗಳವ ಕಂಡೆನೆಂಬ ಶಬ್ದಕ್ಕರ್ಥ. ಇಂತಪ್ಪ ಸಂಸಾರದ ನಿಲವ ನೋಡಿ, ಶಿವಶಿರಣನು ಆಶ್ಚರ್ಯಂ ಬಡುತ್ತಿರಲು, ಅದೀಗ ಇದೇನು ಸೋಜಿಗವೆಂಬ ಶಬ್ದಕ್ಕರ್ಥ.

೫೦. ಕುಲದಲಧಿಕನು ಹೋಗಿ, ಹೊಲೆಗೇರಿಯಲ್ಲಿ ಮನೆಯ ಕಟ್ಟಿದರೆ ಕುಲಗೆಡದೆ ಇಪ್ಪ ಪರಿಯ ನೋಡಾ. ಆತನ ಕುಲದವರೆಲ್ಲರು ಮುಖವ ನೋಡಲೊಲ್ಲದಿದ್ದಾರೆ. ಕುಲವುಳ್ಳವರೆಲ್ಲರು ಕೈವಿಡಿದರು. ಕುಲಗೆಟ್ಟವನೆಂದು ತಿಳಿದು ವಿಚಾರಿಸಲು, ಹೊಲೆಗೆಟ್ಟು ಹೋಯಿತ್ತು ಕಾಣಾ ಗುಹೇಶ್ವರಾ.

ಟೀಕುಃ— ತಾನು ಶುದ್ಧ ಸತ್ಕುಲಜನಪ್ಪ ಶಿವನೆಂದರಿಯದೆ, ಶುಕ್ಲ ಶೋಣಿತ ಸಂಬಂಧದ ಸರ್ವ ಸೂತಕ ತನುವನು ಮನೆಯ ಮಾಡಿಕೊಂಡರೆ, ಅದು ಕುಲದಲಧಿಕನು ಹೋಗಿ ಹೊಲೆಗೇರಿಯಲ್ಲಿ ಮನೆಯ ಕಟ್ಟಿದರೆ ಎಂಬ ಶಬ್ದಕ್ಕರ್ಥ. ಅದು ಕಾರಣ ಕುಲ ಛಲ ಸೂತಕ ಕೆಡದೆ ಉಂಟಾಗಿದ್ದಿತ್ತೆಂಬುದೀಗ ಕುಲಗೆಡದೆ ಇರ್ದಿತ್ತೆಂಬ ಶಬ್ದಕ್ಕರ್ಥ. ಅದು ಕಾರಣ ಶುದ್ಧಶಿವ ಸತ್ಕುಲಜರಪ್ಪ ಶಿವಜ್ಞಾನಿಗಳು ಮುಖವ ನೋಡ

820
4603



ಡಾದರೆಂಬುದೀಗ, ಕುಲದವರೆಲ್ಲರು ಮುಖವ ನೋಡದಾದರೆಂಬ ಶಬ್ದಕ್ಕರ್ಥ. ಅಲ್ಲಿ ಕುಲಸೂತಕವುಳ್ಳವರೆಲ್ಲರು ಕೈವಿಡಿದರೆಂಬುದೀಗ, ಕುಲವುಳ್ಳವರೆಲ್ಲ ಕೈವಿಡಿದರೆಂಬ ಶಬ್ದಕ್ಕರ್ಥ. ವಿವೇಕದಿಂ ಸರ್ವ ಸೂತಕ ರಹಿತ ತಾನೆಂದರಿಯಲು, ಆ ಸೂತಕ ನಿವೃತ್ತಿಯಾಯಿತ್ತೆಂಬುದೀಗ, ಕುಲಗೆಟ್ಟವನೆಂದು ತಿಳಿದು ವಿಚಾರಿಸಲು, ಹೊಲೆಗೆಟ್ಟು ಹೋಯಿತ್ತೆಂಬ ಶಬ್ದಕ್ಕರ್ಥ.

**ಸಂಸಾರ ಹೇಯಸ್ಥಲ ಸಮಾಪ್ತ.**

ಇಂತು ಸಂಸಾರವೆಂಬ ದುಸ್ಸಾರವ ಬೇರ್ಪಡಿಸಿ ತನ್ನ ನಿಜವ ನೋಡಿಹೆನೆಂದರೆ ಇದಿರಿಟ್ಟಲ್ಲದೆ, ತನ್ನ ಕಾಣಬಾರದಾಗಿ, ಅದೆಂತೆಂದಡೆ, ತನ್ನ ಮುಖವ ತಾ ನೋಡಿಹೆನೆಂಬವನು ಇದಿರೆ ಕನ್ನಡಿ ಹಿಡಿದಲ್ಲದೆ, ಕಾಣೆನೆಂದು ಕನ್ನಡಿಯನುಂಟು ಮಾಡಿಕೊಂಡು ನೋಡುವನಂತೆ ತನ್ನಿದಿರೆ ಗುರುವನುಂಟು ಮಾಡಿಕೊಂಡು ಉಪಾವಸ್ಥೆಯ ಮಾಡುತ್ತಿರಲು ಮುಂದೆ ಗುರುಕರುಣ ಸ್ಥಲವಾದುದು.

## ಗುರುಕರುಣಸ್ಥಲ.

೫೧. ಕಂಡುದ ಹಿಡಿಯಲೊಲ್ಲದೆ, ಕಾಣದುದನರಸಿ ಹಿಡಿದಿಹೆನೆಂದರೆ ಸಿಕ್ಕದೆಂಬ ಬಳಲಿಕೆಯ ನೋಡಾ! ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ ಕಾಣದುದ ಕಾಣಬಹುದು ಗುಹೇಶ್ವರಾ.

ಟೀಪು:-- ಕಾಣಬಾರದ ಪರಬ್ರಹ್ಮವ ಬ್ರಹ್ಮಾದ್ವೈತದಿಂ ಸಾಧಿಸಿ, ಹಿಡಿದಿಹೆನೆಂದರೆ ಮತ್ತೂ ಇದಿರಿಟ್ಟಲ್ಲದೆ ಕಾಣಬಾರದಾಗಿ, ಅದು ಕಾರಣ ಸಕಲ ತತ್ವ ಸನ್ನಿಹಿತವಾಗಿಪ್ಪ ಗುರುಪಾದವ ಹಿಡಿದಲ್ಲಿ ಆ ಪರಬ್ರಹ್ಮವು ಸಿಕ್ಕುವದೆಂಬುದೀ ವಚನಾರ್ಥ.

೫೨. ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ ಆಗಲಿ, ಮಹಾಪ್ರಸಾದವೆಂದೆನಯ್ಯಾ! ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಯ್ದು ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದನೆಂದೆ



ನಯ್ಯಾ. ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯಾ. ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯಾ. ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

ಟೀಕು:-- ಸಕಲ ಕರ್ಮಂಗಳಳಿದುಳಿದ ಶಿಷ್ಯನೆಂಬ ಶಿಷ್ಯನು ಗುರುಕರುಣವ ಹಡೆದ ಪರಿ ಎಂತೆಂದಡೆ, ಪ್ರಥಮ ಪ್ರಾರಂಭದಲ್ಲಿ ತನ್ನ ತಾನೆಚ್ಚತ್ತು ಸಂಸಾರದ ಗಾಲಿಯಲ್ಲಿ ಸಿಕ್ಕಿ ನೊಂದೆನಲ್ಲಾ ಎಂದು ಉಪತಾಪ ಹುಟ್ಟಿ ತನ್ನ ತಾ ಬೋಧಿಸಿಕೊಳ್ಳುತ್ತಿರಲು, ಅದು ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ ಆಗಲಿ, ಮಹಾ ಪ್ರಸಾದವೆಂದೆನಯ್ಯಾ ಎಂಬ ಶಬ್ದಕ್ಕರ್ಥ. ಆ ಗುರುಕರುಣವ ಹಡೆದ ಶಿಷ್ಯನು ದ್ವಿತೀಯದಲ್ಲಿ ಕರಣಂಗಳ ನಿವೃತ್ತಿಯ ಮಾಡಿ, ಲಿಂಗಭಾವ ಭರಿತನಾಗಿರ್ದನೆಂಬುದೀಗ, ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರಾಗಲಿ ಮಹಾ ಪ್ರಸಾದವೆಂದೆನಯ್ಯಾ ಎಂಬ ಶಬ್ದಕ್ಕರ್ಥ. ತೃತೀಯದಲ್ಲಿ ಸರ್ವಾಂಗ ಲಿಂಗವಾಗಿ, ಕೋಹಂ ಭಾವವಳಿದು, ಸೋಹಂ ಭಾವವಳವಟ್ಟಿತೆಂಬುದೀಗ ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರಾಗಲಿ, ಮಹಾ ಪ್ರಸಾದವೆಂದೆನಯ್ಯಾ ಎಂಬ ಶಬ್ದಕ್ಕರ್ಥ. ಚತುರ್ಥದಲ್ಲಿ ಗುರುಶಿಷ್ಯ ಸಂಬಂಧವೆಂಬ ಭಿನ್ನಭಾವವಳಿದು, ಸೋಹಂ ಭಾವವಡಗಿ, ನಿರಹಂಭಾವ ಸ್ವರೂಪನಾಗಿ, ಸೇವ್ಯ ಸ್ಥಲವ ನಿಂಬುಗೊಂಡಿರ್ದನೆಂಬುದೀಗ, ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಸಿದರಾಗಲಿ, ಮಹಾ ಪ್ರಸಾದವೆಂದೆನಯ್ಯಾ ಎಂಬ ಶಬ್ದಕ್ಕರ್ಥ. ಇಂತು ನಾಹಂ ಭಾವ, ಕೋಹಂ ಭಾವ, ಸೋಹಂ ಭಾವ, ಶಿವೋಹಂ ಭಾವವೆಂಬ ಚತುರ್ವಿಧ ಭಾವವು ನಿರ್ಭಾವವನೆಯ್ದಿ ನಿಜದಲ್ಲಿ ನಿಂದು ಪರಮ ಕಾಷ್ಠೆಯಾಕಿರ್ದನೆಂಬುದೀಗ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನೆಂಬ ಶಬ್ದಕ್ಕರ್ಥ.

೫೩. ಅಯ್ಯಾ ನೀನೆನಗೆ ಗುರುವಪ್ಪೊಡೆ, ನಾ ನಿನಗೆ ಶಿಷ್ಯನಪ್ಪೊಡೆ ಎನ್ನಕರಣಾದಿ ಗುಣಂಗಳ ಕಳೆದು, ಎನ್ನ ಕಾಯದ ಕರ್ಮವ ತೊಡೆದು ಎನ್ನ ಪ್ರಾಣನ ಧರ್ಮವ ನಿಲಿಸಿ, ನೀನೆನ್ನ ಕಾಯದಲಡಗಿ ನೀನೆನ್ನ

ಪ್ರಾಣದಲಡಗಿ, ನೀನೆನ್ನ ಭಾವದಲಡಗಿ, ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡು ಗುಹೇಶ್ವರಾ. ॥೫೩॥

ಟೀಕು:-- ಗುರೂಪದೇಶವ ಮಾಡುವ ಕಾಲದಲ್ಲಿ ಶಿಷ್ಯನು ತನ್ನ ಕಾಯದ ಕರ್ಮವ ಕಳೆದು, ಪ್ರಾಣನ ಧರ್ಮವ ತೊಡೆದು, ಕರಣಂಗಳ ನಿವೃತ್ತಿಯ ಮಾಡಿ ಶಿವಕಾಯದಲಡಗಿ, ಶಿವ ಚೈತನ್ಯದಲಡಗಿ, ಶಿವ ಭಾವದ ಲಡಗಿಪ್ಪ ಭೇದವ ತಿಳುಹಿ ನೀನೆ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು, ಕಾರುಣ್ಯವ ಮಾಡೆಂದು ಬಿನ್ನಹವ ಮಾಡುತ್ತಿರ್ದನೆಂಬುದೀ ವಚನಾರ್ಥ.

೫೪. ಅಟ್ಟಿತ್ತೊಂದು, ಓಡಿತ್ತೊಂದು, ಮುಟ್ಟಿ ಹಿಡಿಯಿತ್ತೊಂದು, ಅಟ್ಟಾಟಿಕೆಯಲ್ಲಿ ಅರಿದಾವುದು, ಹಸು ಮಾಣಿಕ್ಯವ ನುಂಗಿ ಬ್ರಹ್ಮೇತಿಗೊಳಗಾಯಿತ್ತು. ಮೂರ್ತಿಯಾದುದೆ ಅಮೂರ್ತಿಯಾದುದು. ಅಮೂರ್ತಿಯಾದುದೆ ಮೂರ್ತಿಯಾದುದು. ಇದನೆಂತು ತೆಗೆಯಬಹುದು? ಇದನೆಂತು ಕೊಳಬಹುದು? ಅಗಮ್ಯ ಅಗೋಚರ ಕಾಯವು ಲಿಂಗದೊಳಡಗಿ ಪ್ರಾಣವು ಲಿಂಗದೊಳಡಗಿ, ನೀನೆನ್ನ ಕರಸ್ಥಲದೊಳಗೆ ಮೂರ್ತಿಗೊಂಡು ಕಾರುಣ್ಯವ ಮಾಡು ಗುಹೇಶ್ವರಾ. ॥೫೪॥

ಟೀಕು:-- ಜ್ಞಾನೋದಯವಾಗಿ ಅಂತರಂಗದೊಳಗೆ ಬೆಳಗು ಪಸರಿಸುತ್ತಿರಲು, ಆ ಅಂತರಂಗದ ಅಜ್ಞಾನ ತಿಮಿರ ಹರಿದು ಹೋಗುತ್ತಿರಲು, ಅದು ಅಟ್ಟಿತ್ತೊಂದು, ಓಡಿತ್ತೊಂದೆಂಬ ಶಬ್ದಕ್ಕರ್ಥ. ಸುಬುದ್ಧಿ ಕೃತನಿಷ್ಠೆಯನಾಗಿ, ಧೃಡಭಾವದಿಂ ಸದ್ಗುರುಪಾದವ ಹಿಡಿಯಲು ಅದು ಮುಟ್ಟಿ ಹಿಡಿಯಿತ್ತೊಂದೆಂಬ ಶಬ್ದಕ್ಕರ್ಥ. ಅನಾಯಸದಿಂದ ಕೃತಾರ್ಥನಾದೆನೆಂಬುದೀಗ ಅಟ್ಟಾಟಿಕೆಯಲ್ಲಿ ಅರಿದಾವುದೆಂಬ ಶಬ್ದಕ್ಕರ್ಥ. ಜೀವನೆಂಬ ಪಶು ಜ್ಞಾನ ರತ್ನವ ನುಂಗಲು ಆ ಪಶುತ್ವ ಉಪದೇಶದಿಂದಳಿಯಲು, ಆ ಜ್ಞಾನ ರತ್ನ ಉಳಿಯಿತ್ತೆಂಬುದೀಗ ಹಸು ಮಾಣಿಕ್ಯವ ನುಂಗಿ ಬ್ರಹ್ಮೇತಿಗೊಳಗಾಯಿತ್ತೆಂಬ ಶಬ್ದಕ್ಕರ್ಥ. ಕಾಯವೇ ಅಕಾಯವಾಗಿ, ಆ ಅಕಾಯವೇ ನಿತ್ಯ ಕಾಯವಾಗಿ, ಉಳಿದುದೆಂಬುದೀಗ ಮೂರ್ತಿಯಾದುದೆ ಅಮೂರ್ತಿಯಾದುದು, ಅಮೂರ್ತಿಯಾದುದೆ ಮೂರ್ತಿಯಾದುದೆಂಬ ಶಬ್ದಕ್ಕರ್ಥ. ಇಂತಪ್ಪ ನಿಲವ ಮುಟ್ಟಿಹೆನೆಂದಡೆ ಗ್ರಹಿಸುವೆನೆಂದಡೆ ಅಸಾಧ್ಯವಾಗಿಪ್ಪದೆಂಬುದೀಗ ಇದನೆಂತು ತೆಗೆಯಬಹುದು, ಇದನೆಂತು ಕೊಳಬಹುದೆಂಬ ಶಬ್ದಕ್ಕರ್ಥ. ಇಂತಪ್ಪ ಅಗಮ್ಯ ಕಾಯವು ಅಕಾಯದೊಳಗಡಗಿಪ್ಪ ನಿಸ್ಸಂಚಲಿ ಪ್ರಾಣನು, ಲಿಂಗದೊಳಡಗಿ ಎಂಬುದೀಗ ಅಗಮ್ಯ, ಅಗೋಚರ ಕಾಯವು



ಲಿಂಗದೊಳಡಗಿ, ಪ್ರಾಣವು ಲಿಂಗದೊಳಡಗಿ, ಎಂಬ ಶಬ್ದಕ್ಕರ್ಥ. ಈ ನಿರ್ಣಯವ ಕೃಪೆಯಿಂದರುಹಿ ಎನ್ನ ಕರಸ್ಥಲಕ್ಕೆ ನೀನೆ ಲಿಂಗವಾಗಿ ಬಂದು ಕಾರುಣ್ಯವ ಮಾಡೆಂದು ಶಿಷ್ಯನು ಗುರುವನಾಶ್ರಯಿಸುತ್ತಿರಲು, ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡೆಂಬ ಶಬ್ದಕ್ಕರ್ಥ.

೫೫. ಕಾಣದುದ ನರಸುವರಲ್ಲದೆ, ಕಂಡುದನರಸುವರೇ ಹೇಳಾ? ಘನಕ್ಕೆ ಘನವಾದ ವಸ್ತು ತಾನೆ ಗುರುವಾದ, ತಾನೆ ಲಿಂಗವಾದ, ತಾನೆ ಜಂಗಮವಾದ, ತಾನೆ ಪ್ರಸಾದವಾದ, ತಾನೆ ಮಂತ್ರವಾದ, ತಾನೆ ಯಂತ್ರವಾದ, ತಾನೆ ಸಕಲ ವಿದ್ಯಾಸ್ವರೂಪವಾದ. ಇಂತಿವೆಲ್ಲವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದ ಬಳಿಕ ಇನ್ನ ನಿರ್ವಿಕಾರ ಗುಹೇಶ್ವರಾ.

ಟೀಕು:-- ಕಾಣಬಾರದುದನರಸಿ, ಕಾಣೆನೆಂದು ಬಳಲಬೇಡ. ಕಾಣಬಂದ ಶ್ರೀಗುರು ಮುಂದೆ ಪ್ರತ್ಯಕ್ಷವಾಗಿರಲು, ಅಲ್ಲಿಯೆ ಕಾಣದುದ ಕಂಡು ಕೊಂಬುದೆಂಬುದೀಗ, ಕಾಣದುದನರಸುವರಲ್ಲದೆ, ಕಂಡುದನರಸುವರೆ ಹೇಳಾ ಎಂಬ ಶಬ್ದಕ್ಕರ್ಥ. ಅಂತಪ್ಪ ಶ್ರೀಗುರು ತಾನೆ ಶಿಷ್ಯನ ಮೇಲಣ ಕರುಣದಿಂದ ಗುರುವಾಗಿ, ದೀಕ್ಷೆಯ ಕೊಟ್ಟು ಲಿಂಗವಾಗಿ ಪೂಜೆಗೊಂಡು, ಜಂಗಮವಾಗಿ ಬಂದು ಬೋಧಿಸಿ, ಪ್ರಸಾದವಾಗಿ ಬಂದು ಪರಿಣಾಮವ ತೋರಿ, ಮಂತ್ರರೂಪಿಂದ ಷಡಕ್ಷರಿ ಸ್ವರೂಪವಾಗಿ ಬಂದು ಅಂತರಂಗದಲ್ಲಿ ನೆಲೆಗೊಂಡು ಯಂತ್ರವಾಗಿ, ಸಕಲ ಕ್ರಿಗಳಲ್ಲಿ ನೆಲಸಿ, ಸಕಲ ವಿದ್ಯಾಸ್ವರೂಪನಾಗಿ ಬಂದು ಮಹಾನುಭಾವದೊಳಗೆ ನೆಲೆಗೊಂಡು ಇಂತೀ ಸರ್ವಾಂಗಲಿಂಗ ಸ್ವಾಯತವಾಗಿ, ಸರ್ವಾಂಗ ವಿಕಾರವಳಿದು, ನಿರ್ವಿಕಾರ ವಾಯಿತ್ತೆಂಬುದೀ ವಚನಾರ್ಥ.

೫೬. ಕಸ್ತುರಿಯ ಮೃಗ ಬಂದು, ಸುಳಿಯಿತ್ತಲ್ಲಾ! ಸಕಲ ವಿಸ್ತಾರದ ರೂಹು ಬಂದು ನಿಂದಿತ್ತಲ್ಲಯ್ಯ. ಅವಗ್ರಹ ಬಂದು ಸೋಂಕಿತ್ತೆಂದರಿಯೆನಯ್ಯ! ಅವಗ್ರಹ ಬಂದು ಹಿಡಿಯಿತ್ತೆಂದರಿಯೆನಯ್ಯ. ಹೃದಯ ಕಮಲ ಮಧ್ಯದಲ್ಲಿ ಗುರುವನರಿದು, ಪೂಜಿಸಿ, ಗುರುವಿಖ್ಯಾತನೆಂಬುದ ನಾನರಿದೆನಯ್ಯಾ. ಗುಹೇಶ್ವರನಲ್ಲಿ ಹಿಂದಣ ಹುಟ್ಟರತು ಹೋದುದ ಕಂಡೆನಯ್ಯಾ.

ಟೀಕು:-- ಅಂರಂಗದಲ್ಲಿ ಸ್ವಾನುಭಾವ ಉದಯವಾಗಿ, ಲಿಂಗ ನಿಜ ಸದ್ವಾಸನೆದೋರಲು, ಅದು ಕಸ್ತುರಿಯ ಮೃಗ ಬಂದು ಸುಳಿಯಿತ್ತೆಂಬ

ವಚನಾರ್ಥ, ಆ ಸದ್ವಾಸನೆ ಅಂತರಂಗ ಬಹಿರಂಗದಲ್ಲಿ ದರ್ಪಣ ಪ್ರತಿಬಿಂಬ ಜ್ಞಾನದಂತೆ, ಪರಶಿವ ಮೂರ್ತಿಯಾಗಿ, ನೆಲೆಗೊಂಡಿತ್ತೆಂಬುದೀಗ, ಸಕಲ ವಿಸ್ತಾರದ ರೂಹು ಬಂದು ನಿಂದಿತ್ತೆಂಬ ಶಬ್ದಕ್ಕರ್ಥ. ಆ ಲಿಂಗ ಸೋಂಕಿನ ಸಂಬಂಧದಿಂ ಅನ್ಯವನರಿಯ ತೆರಹಿಲ್ಲದಿಪ್ಪುದೀಗ, ಅವಗ್ರಹ ಬಂದು ಸೋಂಕಿತ್ತೆಂದರಿಯೆನಯ್ಯಾ ಎಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗದ ನಿಲವ ತೋರಿದ ಜ್ಞಾನಗುರುವ ತನ್ನಂತರಂಗದಲ್ಲಿ ಅರಿದೆನೆಂಬುದು ಹೃದಯ ಕಮಲ ಮಧ್ಯದಲ್ಲಿ ಗುಡುವನರಿದು, ಗುರು ವಿಖ್ಯಾತನೆಂಬುದನರಿದೆನಯ್ಯಾ ಎಂಬ ಶಬ್ದಕ್ಕರ್ಥ. ಇಂತಾದ ಕಾರಣ ಭವಪಾಶ ಹರಿಯಿತ್ತೆಂಬುದೀಗ ಹಿಂದಣ ಹುಟ್ಟರತು ಹೋದುದ ಕಂಡೆನೆಂಬ ಶಬ್ದಕ್ಕರ್ಥ.

೫೭. ಎಣ್ಣೆ, ಬತ್ತಿ, ಪ್ರಣಿತೆ ಕೂಡಿ, ಜ್ಯೋತಿಯ ಬೆಳಗಯ್ಯಾ. ಅಸ್ತಿ ಮಾಂಸ ದೇಹ ಪ್ರಾಣ ನಿಃಪ್ರಾಣವಾಯಿತ್ತು. ದೃಷ್ಟಿವರಿದು, ಮನ ಮುಟ್ಟಿದ ಪರಿ ಇನ್ನೆಂತೊ? ಮುಟ್ಟಿ ಲಿಂಗವ ಕೊಂಡಡೆ ಕೆಟ್ಟಿತ್ತು ಜ್ಯೋತಿಯ ಬೆಳಗು. ಇದು ಕಷ್ಟವೆಂದರಿದೆನು ಗುಹೇಶ್ವರಾ.

ಟೀಕು:-- ತನುವೆಂಬ ಪ್ರಣಿತೆಯಲ್ಲಿ ಮನವೆಂಬ ಬತ್ತಿಯನಿಟ್ಟು ಸದ್ವಿವೇಕವೆಂಬ ತೈಲವನೆರೆದು, ಮಹಾ ಜ್ಞಾನ ಪ್ರಕಾಶವೆಂಬ ಜ್ಯೋತಿಯಾಯಿತ್ತೆಂಬುದೀಗ, ಎಣ್ಣೆ ಬತ್ತಿ ಪ್ರಣಿತೆ ಕೂಡಿ ಜ್ಯೋತಿಯ ಬೆಳಗಾಯಿತ್ತೆಂಬ ಶಬ್ದಕ್ಕರ್ಥ. ಇಂತರಿವಿನ ಬೆಳಗಾವರ್ತಿಸಲು, ಅಸ್ತಿ ಮಾಂಸ ಸಂಬಂಧದ ದೇಹವು ಪ್ರಾಣವಾಯು ವಿಕಾರವಳಿಯಿತ್ತೆಂಬುದೀಗ, ಅಸ್ತಿ ಮಾಂಸದ ದೇಹ ಪ್ರಾಣ ನಿಃಪ್ರಾಣವಾಯಿತ್ತೆಂಬ ಶಬ್ದಕ್ಕರ್ಥ. ಇಂತು ಸರ್ವಾಂಗಲಿಂಗವಾಗಿರ್ದು ಆ ಲಿಂಗವನ ಭಿನ್ನ ದೃಷ್ಟಿಯಿಂ ನೋಡದೆ ಕರಸ್ಥಲದೊಳಗೆ ಲಿಂಗವ ಕುರುಹುಗೊಂಡು, ಎನ್ನದೆಂದು ಮಮಕಾರದಿಂ ಸ್ವೀಕರಿಸಲು, ಆ ಪರಿಪೂರ್ಣ ಜ್ಞಾನ ಖಂಡಿತ ಬುದ್ಧಿಯಿಂದಳಿದಿಹುದಾಗಿ ದೃಷ್ಟಿವರಿದು ಮನ ಮುಟ್ಟಿದ ಪರಿ ಇನ್ನೆಂತೊ? ಮುಟ್ಟಿ ಲಿಂಗವ ಕೊಂಡಡೆ ಕೆಟ್ಟಿತ್ತು ಜ್ಯೋತಿಯ ಬೆಳಗೆಂಬ ಶಬ್ದಕ್ಕರ್ಥ. ಇಂತಪ್ಪ ಖಂಡಿತ ಯುಕ್ತಿಯ ನಿವೃತ್ತಿಯ ಮಾಡಿದನೆಂಬುದೀಗ ಕಷ್ಟವೆಂದರಿದೆನೆಂಬ ಶಬ್ದಕ್ಕರ್ಥ.

೫೮. ಪಾತಾಳದಿಂದತ್ತ ಮಾತ ಬಲ್ಲವರಿಲ್ಲ. ಗಗನದಿಂದ ಮೇಲೆ ಅನುಭಾವ ತಾನಿಲ್ಲ. ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲ. ಹೊರ



ಗಣ ಹೊರಗನು ಅರಿಯ ಬಲ್ಲವರಿಲ್ಲ. ಹಿಂದಣ ಹಿಂದನು, ಮುಂದಣ ಮುಂದನು ತಂದೆ ತೋರಿದ ನಮ್ಮ ಗುಹೇಶ್ವರನು.

ಟೀಕು:-- ಆರಾರು ವಚಿಸುವ ವಾಗದ್ವೈತವೆಲ್ಲವು ಆರಾರು ಅರಿವ ಖಂಡಿತ ಜ್ಞಾನವೆಂಬುದೆಲ್ಲವು "ದ್ಯಾವಾ ಭೂಮಿ ಜನಯಂ ದ್ಯಾವಾ ಏಕ ಏವ" ಎಂಬ ಶ್ರುತಿ ಪ್ರಮಾಣದಿಂ ಮೀರಿ ಕಾಣಿಸಲರಿಯದಾಗಿ, ಪಾತಾಳ ಲೋಕ, ಸತ್ಯಲೋಕದೊಳಗಾದ ಬ್ರಹ್ಮಾಂಡದೊಳಗೆ ವರ್ತಿಸುತ್ತಿರ್ದಿತ್ತೆಂಬುದೀಗ ಪಾತಾಳದಿಂದತ್ತ ಮಾತ ಬಲ್ಲವರಿಲ್ಲ, ಗಗನದಿಂದ ಮೇಲೆ ಅನುಭಾವ ತಾನಿಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ ಖಂಡಿತ ವಿವೇಕದೊಳಗಿರ್ಪ ಮಹಾಜ್ಞಾನ ಜ್ಯೋತಿಯ ಬೆಳಗು ಅಭೇದ್ಯವಾದ ಕಾರಣ ಅದನರಿಯಬಾರದೆಂಬುದೀಗ ಒಳಗಣ ಜ್ಯೋತಿಯ ಬೆಳಗ ಬಲ್ಲವರಿಲ್ಲವೆಂಬ ಶಬ್ದಕ್ಕರ್ಥ. ತನಗೆ ಇದಿರಿಟ್ಟು ತೋರುವ ತೋರಿಕೆ ಎಲ್ಲವು ತನ್ನಿಂದ ಹೊರಗು ಆ ಹೊರಗಿಂಗೆ ಹೊರಗಾಗಿರ್ಪುದು ಬ್ರಹ್ಮ ಅದನಾರಿಂಗೆಯೂ ತಿಳಿಯಲಾರದೆಂಬುದೀಗ ಹೊರಗಣ ಹೊರಗನು ತಿಳಿಯ ಬಲ್ಲವರಿಲ್ಲವೆಂಬ ಶಬ್ದಕ್ಕರ್ಥ. ತನ್ನಿಂ ಹಿಂದಾದುದು ಜೀವಭಾವ, ಆ ಜೀವಭಾವದಿಂ ಹಿಂದಾದುದು ಮೂಲ ಜ್ಞಾನ ಈ ಎರಡು ಭೇದವೆಂಬುದೀಗ, ಹಿಂದಣ ಹಿಂದನು ಎಂಬ ಶಬ್ದಕ್ಕರ್ಥ. ತನ್ನಿಂದ ಮುಂದಾದುದು ತತ್ವ ವಿವೇಕ, ಆ ತತ್ವ ವಿವೇಕದಿಂ ಮುಂದಿರ್ಪುದು ತನ್ನ ಸ್ವಭಾವದ ನಿಲವೆಂಬುದೀಗ, ಮುಂದಣ ಮುಂದನು ಎಂಬ ಶಬ್ದಕ್ಕರ್ಥ. ಇಂತಪ್ಪ ಸದ್ವಿವೇಕ ಸುಖವನು ಸದ್ಗುರು ಕೃಪೆಯಿಂದರಿದನೆಂಬುದೀಗ ತಂದೆ ತೋರಿದನೆಂಬ ಶಬ್ದಕ್ಕರ್ಥ.

೫೯. ಎತ್ತಣ ಮಾಮರ? ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯಾ? ಬೆಟ್ಟದ ನೆಲ್ಲಿಯ ಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧ? ಗುಹೇಶ್ವರ ಲಿಂಗಕ್ಕೆಯು ಎನಗೆಯು ಎತ್ತಣಿಂದೆತ್ತ ಸಂಬಂಧವಯ್ಯಾ?

ಟೀಕು:-- ಅಂಗಕ್ಕೆಯೂ ಲಿಂಗಕ್ಕೆಯೂ ಸಂಬಂಧವಿಲ್ಲ. ಅದೇನು ಕಾರಣವೆಂದರೆ, ಅಂಗವೆ ಜಡನು ಲಿಂಗವೇ ಅಜಡನಾಗಿ ಮನಕ್ಕೆಯೂ ಅರಿವಿಂಗೆಯೂ ಸಂಬಂಧವಿಲ್ಲ. ಅದೇನು ಕಾರಣವೆಂದರೆ ಮನವೆ ಮರವೆ ಅರಿವೆ ಬೆಳಗಾಗಿ. ಇಂತಪ್ಪ ತನುಮನವಿಡಿದಾತಂಗೆ ಮಹಾಲಿಂಗದ ಸಂಗ ಒಮ್ಮೆಯು ಇಲ್ಲದಿರುತ್ತಿರಲು, ಕರ್ಪೂರ ಶೇಷದಿಂ ತನು ಧರ್ಮ ಮನ ಧರ್ಮವಳಿದು, ಮಹಾಲಿಂಗವು ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬರಲು,

ಆ ಲಿಂಗದ ಮಹಿಮೆಯನು ತನ್ನ ಕ್ಷೀಣವನು ತಾನೇ ನೋಡಿ ಆಶ್ಚರ್ಯ ಬಡುತ್ತಿರಲು ಆದೀಗ ಈ ವಚನಕ್ಕೆ ಅರ್ಥ.

೬೦. ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದರೆ ಎನಗಿದು ಸೋಜಿಗ, ಎನಗಿದು ಸೋಜಿಗ. ಅಹುದೆನಲಮ್ಮೆನು ಅಲ್ಲೆನಲಮ್ಮೆನು ಗುಹೇಶ್ವರ ಲಿಂಗವು ನಿರಾಳ ನಿರಾಕಾರ ಬಯಲು, ಆಕಾರವಾದರೆ

ಟೀಕು:—ಅಗಮ್ಯ ಅಗೋಚರ ನಿರಾಳ ನಿರಾಕಾರವಪ್ಪ ಮಹಾ ಲಿಂಗವು ಭಕ್ತಿಕಾರಣದಿಂ ಸಾಕಾರ ರೂಪಾಗಿ, ಕರಸ್ಥಲದಲ್ಲಿ ಮೂರ್ತಿ ಗೊಂಡಿರಲು ಕಾರಬಾರದ ಲಿಂಗ ಕರಸ್ಥಲಕ್ಕೆ ಬರಲು ಎಂಬ ಶಬ್ದಕ್ಕರ್ಥ. ಇಂತು ಕರಸ್ಥಲಕ್ಕೆ ಬಂದ ಲಿಂಗವ ಅಹುದೆಂಬರೆ ರೂಪಾಗಿ ಇದಿರಿಟ್ಟು ತೋರಿಹುದಾಗಿ, ಅಹುದೆನಬಾರದು, ಅಲ್ಲವೆಂಬರೆ ಗುರು ತೋರಿಸಿಕೊಟ್ಟ ನಾಗಿ ಅಲ್ಲೆನಬಾರದು. ಇಂತಾದ ಕಾರಣ ಅಹುದೆನಲಮ್ಮೆ, ಅಲ್ಲೆನಲ ಮ್ಮೆನೆಂಬುದು ಚೋದ್ಯಂಬಟ್ಟೆನೆಂಬ ಶಬ್ದಕ್ಕರ್ಥ. ಇಂತು ನಿರಾಳ ನಿರಾ ಕಾರ ಬಯಲು ಆಕಾರವಾಗಿ ಬಂದರೆ ಆ ಶರಣನು ಹರುಷಭಾವದಿಂ ಚೋದ್ಯಂಬಡುತ್ತಿರ್ದನೆಂಬುದೀ ವಚನಾರ್ಥ.

೬೧. ಆದಿಯ ಮುಟ್ಟಬಂದ ಶರಣಂಗೆ ಬಂಧವಿಲ್ಲವಯ್ಯಾ. ಜನ್ಮ ಕೋಟಿ ಕ್ರೂರ ಕರ್ಮವ ಮಾಡಿದವಂಗೆ ಸೋಂಕಿನ ಸೊಬಗ ಹೇಳಲಿಕ್ಕೆ ಅಂಗದಲ್ಲಿ ಲಿಂಗ ಸೋಂಕಿದ ಶರಣಂಗೆ ಕಾಯದೊಳಗುಳ್ಳ ಕರಣಂಗಳು ಕಳಾಕುಳ ಕಳಾ ಭೇದವಯ್ಯಾ. ಸುಖದ ಸೋಂಕಿನ ಸೊಬಗ ಇನ್ನಾರಿ ಗೆಯು ಹೇಳಲಿಲ್ಲ ಗುಹೇಶ್ವರಾ.

ಟೀಕುಃ—ತನ್ನ ಮೂಲಜ್ಞಾನ ವಿಡಿದು ಗುರುಕರಕಮಲದಿಂದುದ ಯಿಸಿ, ಬಂದಾತಂಗೆ, ಭವ ಬಂಧನವಿಲ್ಲವೆಂಬುದೀಗ, ಆದಿಯ ಮುಟ್ಟಿ ಬಂದ ಶರಣಂಗೆ, ಬಂಧವಿಲ್ಲಯ್ಯಾ ಎಂಬ ಶಬ್ದಕ್ಕರ್ಥ. ಆ ಶರಣನು ಅಂಗ ವಿಕಾರಿಗಳ ಕೂಡೆ ತನ್ನ ಲಿಂಗ ಸೋಂಕಿನ ಸುಖವ ಹೇಳಿಹೆನೆಂಬೆನ್ನ ಕ್ಕರ ಬೈ ಸಕ್ಕರೆ, ಅಂತರಂಗದ ಕರಣಂಗಳ ಕುಳ ಸ್ಥಲ ಸಂಚ ತಪ್ಪಿ ವ್ಯಾಕು ಳವಪ್ಪ ಕಾರಣದಿಂ ಜನ್ಮ ಕೋಟಿ ಕ್ರೂರ ಕರ್ಮವ ಮಾಡಿದವಂಗೆ, ತನ್ನ ಸೋಂಕಿನ ಸೊಬಗ ಹೇಳಲಿಕ್ಕೆ ಅಂಗದಲ್ಲಿ ಲಿಂಗ ಸೋಂಕಿದ ಶರಣಂಗೆ ಕಾಯದೊಳಗುಳ್ಳ ಕರಣಂಗಳು ಕಳಾಕುಳ ಕಳಾಭೇದವಯ್ಯಾ ಎಂಬ ಶಬ್ದಕ್ಕರ್ಥ. ಇಂತಾದ ಶರಣ ತಾನರಿಮು, ಸುಖಿಸಿದ ಸುಖವನಾರಿಗೆಯು



ಹೇಳಲಿಲ್ಲವೆಂಬುದೀಗ ಸುಖದ ಸೋಂಕಿನ ಸೊಬಗನಿನ್ನಾರಿಗೆಯೂ ಹೇಳ ಲಿಲ್ಲವೆಂಬ ಶಬ್ದಕ್ಕರ್ಥ.

೬೨. ಜ್ಯೋತಿಯೊಳಗಣ ಕರ್ಪುರಕ್ಕೆ ಅಪ್ಪುವಿನ ಕೈಯ್ಯಲಿಪ್ಪ ಉಪ್ಪಿಂಗೆ ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯಂಗೆ ಈ ಮೂರಕ್ಕೆಯೂ ಬೇರೆ ಕ್ರಿಯಾವರ್ತಕ ಉಂಟೆ ಗುಹೇಶ್ವರಾ?

ಟೀಕುಃ—ಉರಿಯೊಳಡಗಿರ್ದ ಕರ್ಪುರ ಉರಿಯಾಗಿ ತೋರುವು ದಲ್ಲದೆ ಕರ್ಪುರವಾಗಿ ತೋರಲರಿಯದೆಂಬುದೀಗ, ಜ್ಯೋತಿಯೊಳಗಿರ್ಪ ಕರ್ಪುರಕ್ಕೆ ಎಂಬ ವಚನಾನ್ವಯ. ಉದಕದೊಳಗಿರ್ಪ ಲವಣ ಉದಕ ವಾಗಿ ತೋರುವುದಲ್ಲದೆ, ಲವಣವಾಗಿ ತೋರಲರಿಯದೆಂಬುದೀಗ ಅಪ್ಪು ವಿನ ಕೈಯ್ಯ ಉಪ್ಪಿಂಗೆಂಬ ಶಬ್ದಕ್ಕರ್ಥ. ಶ್ರೀ ಗುರುತತ್ವದೊಳಗಿರ್ಪ ಶಿಷ್ಯನು ಆ ಶ್ರೀಗುರುತತ್ವವಾಗಿಪ್ಪನಲ್ಲದೆ ಅಲ್ಲಿ ಭಿನ್ನವಾಗಿ ತೋರ ಲರಿಯನೆಂಬುದೀ ವಚನಾನ್ವಯ.

೬೩. ಗುರುಶಿಷ್ಯ ಸಂಬಂಧವನರಸಲೆಂದು ಹೋದರೆ ತಾನೇ ಗುರುವಾದ ತಾನೆ ಶಿಷ್ಯನಾದ, ತಾನೆ ಲಿಂಗವಾದ. ಗುಹೇಶ್ವರಾ ನಿಮ್ಮ ಶರಣನ ಕಾಯದ ಕೈಯಲ್ಲಿ ಲಿಂಗವ ಕೊಟ್ಟರೆ ಭಾವ ಬತ್ತಲೆಯಾ ಯಿತ್ತು.

ಟೀಕುಃ—ಶ್ರೀಗುರು ತತ್ವದೊಳಗೆ ತನ್ನ ಮರೆದು ವಿಶ್ರಾಂತಿಯನೆ ಯ್ದಿದ ಶಿಷ್ಯನು ತಾನೆ ಗುರುವಾಗಿ ಆ ಶಿಷ್ಯನ ಭಾವದೊಳಗೆ ಆ ಗುರು ತನ್ನ ಮರೆದು ವಿಶ್ರಾಂತಿಯನೆಯ್ದಿದನಾಗಿ ಆ ಗುರು ತಾನೆ ಶಿಷ್ಯನಾದ ನೆಂಬುದೀಗ ಗುರು ಶಿಷ್ಯ ಸಂಬಂಧವನರಸಲೆಂದು ಹೋದರೆ ತಾನೆ ಗುರುವಾದ, ತಾನೆ ಶಿಷ್ಯನಾದನೆಂಬ ಶಬ್ದಕ್ಕರ್ಥ. ಆ ಗುರುತತ್ವವು ಆ ಶಿಷ್ಯನು ತಮ್ಮೊಳಗೇಕರಸವಾಗಿ ಲಿಂಗದೊಳಗೆ ಸಾಮರಸ್ಯವನೆಯ್ದಿದ ಕಾರಣದಿಂ ತಾನೆ ಲಿಂಗವಾದನೆಂಬ ಶಬ್ದಕ್ಕರ್ಥ. ಇಂತಪ್ಪ ಶರಣನ ಕರಸ್ಥಲಕ್ಕೆ ಲಿಂಗವು ಬರಲು, ಆನು ಶರಣನು, ಇದು ಲಿಂಗ ವೆಂಬು ಭಯ ಭಾವದ ಲಜ್ಜೆಯುಳಿದು, ನಿರ್ಭಾವವಾಯಿತ್ತೆಂಬುದೀಗ ಗುಹೇ ಶ್ವರಾ ನಿಮ್ಮ ಶರಣನ ಕಾಯದ ಕೈಯ್ಯಲ್ಲಿ ಲಿಂಗವ ಕೊಟ್ಟರೆ ಭಾವ ಬತ್ತಲೆಯಾಯಿತ್ತೆಂಬ ಶಬ್ದಕ್ಕರ್ಥ.

**ಗುರುಕರುಣಸ್ಥಲ ಸಮಾಪ್ತ.**

ಇಂತು ಗುರುಕರುಣ ಸ್ಥಲದಿಂದ ಅವಿರಳ ಲಿಂಗ ಸಂಬಂಧವ ಹಡೆದ ತಚ್ಛಿಷ್ಯನು ತನ್ನ ಸಾಂಗಕ್ರಿಯಾವರ್ತನೆಯ ಆಚರಿಸಿ ತೋರುತ್ತಿರಲು ಮುಂದೆ ಭಕ್ತಸ್ಥಲವಾದುದು.

## ಭಕ್ತಸ್ಥಲ.

ಭವಿಯ ತಂದು, ಭಕ್ತನ ಮಾಡಿ, ಪೂರ್ವಾಶ್ರಯವ ಕಳೆದ ಬಳಿಕ, ಪೂರ್ವಾಶ್ರಯವನೆತ್ತಿ ನುಡಿವ ಗುರುದ್ರೋಹಿಯ ಮಾತ ಕೇಳಲಾಗದು. ಹೆಸರಿಲ್ಲದ ಲಿಂಗಕ್ಕೆ ಹೆಸರಿಡುವ ಲಿಂಗದ್ರೋಹಿಯ ಮಾತ ಕೇಳಲಾಗದು. ಪೂರ್ವದಲ್ಲಿ ನಾಮವಿಲ್ಲದ ಗುರು, ಹೆಸರಿಲ್ಲದ ಲಿಂಗ, ಹೆಸರಿಲ್ಲದ ಶಿಷ್ಯ, ಇಂತೀ ತ್ರಿವಿಧ ಸ್ಥಲವನರಿಯದೆ ಕೆಟ್ಟರು ಗುಹೇಶ್ವರಾ.

ಟೀಕು:—ಭವಿಜನ್ಮವಳಿದು ಭಕ್ತನಾದ ಬಳಿಕ, ಆ ಭಕ್ತನ ಮರಳಿ ಭವಿ ಎನಲಾಗದೆಂಬುದೀಗ, ಭವಿಯ ತಂದು, ಭಕ್ತನ ಮಾಡಿದ ಬಳಿಕ ಪೂರ್ವಾಶ್ರಯವನೆತ್ತಿ ನುಡಿವ ಗುರುದ್ರೋಹಿಯ ಮಾತ ಕೇಳಲಾಗದೆಂಬ ಶಬ್ದಕ್ಕರ್ಥ. ನಾಮ, ಸೀಮೆ ಇಲ್ಲದ ಲಿಂಗಕ್ಕೆ ನಾಮ ಸೀಮೆಯ ಮಾಡಲಾಗದೆಂಬುದೀಗ, ಹೆಸರಿಲ್ಲದ ಲಿಂಗಕ್ಕೆ ಹೆಸರಿಡುವ ಲಿಂಗದ್ರೋಹಿಯ ಮಾತ ಕೇಳಲಾಗದೆಂಬ ಶಬ್ದಕ್ಕರ್ಥ. ಇಂತು ಗುರುವಿಂಗೂ ನಾಮವಿಲ್ಲ. ಲಿಂಗಕ್ಕೂ ನಾಮವಿಲ್ಲ. ಶಿಷ್ಯಗೂ ನಾಮವಿಲ್ಲ. ಈ ಭೇದವನರಿಯದೆ, ಶಬ್ದಸೂತಕದಿಂದ ನುಡಿದರೆ, ಮೋಕ್ಷಾರ್ಥಿ ಎಂಬುದೀಗ ನಾಮವಿಲ್ಲದ ಗುರು, ನಾಮವಿಲ್ಲದ ಲಿಂಗ, ನಾಮ ವಿಲ್ಲದ ಷ್ಯಶಿ ಈ ತ್ರಿವಿಧವನರಿಯದೆ ಕೆಟ್ಟರೆಂಬ ಶಬ್ದಕ್ಕರ್ಥ.

೬೫. ಬೆವಸಾಯವ ಮಾಡಿ, ಮನೆಯ ಬಿಯ್ಯಕ್ಕೆ ಬತ್ತವಿಲ್ಲದಿರ್ದರೆ, ಆ ಬೆವಸಾಯದ ಗೊರವೇಕಯ್ಯಾ? ಕ್ರಯ ವಿಕ್ರಯವ ಮಾಡಿ, ಮನೆಯ ಸಂಚ ನಡೆಯದನ್ನಕ್ಕ ಆ ಕ್ರಯ ವಿಕ್ರಯದ ಗೊರವೇಕಯ್ಯಾ? ಒಡೆಯನ ನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ ಆ ಓಲಗದ ಗೊರವೇಕಯ್ಯಾ? ಭಕ್ತನಾಗಿ ಭವಂ ನಾಸ್ತಿಯಾಗದಿರ್ದರೆ ಆ ಉಪದೇಶವ ಕೊಟ್ಟ ಗುರು ಕೊಂಡ ಶಿಷ್ಯ ಇವರಿಬ್ಬರ ಮನೆಯಲ್ಲಿ ಮಾರಿ ಹೊಗಲಿ ಗುಹೇಶ್ವರ



ಟೀಕು:—ಭವಿಜನ್ಮವಳಿದು ಭಕ್ತನಾದ ಬಳಿಕ, ಹಿಂದಣ ಭವಿ ಗುಣ ಸಂಬಂಧವಳಿಯದಿರ್ದರೆ, ಗುರು ಕೊಟ್ಟ ಉಪದೇಶವು ಹುಸಿ, ಆ ಶಿಷ್ಯ ಕೊಂಡ ಅನುಗ್ರಹವು ಹುಸಿ, ಎಂಬುದೀ ವಚನದ ಉಪದೃಷ್ಟಂಗಳಿಗೇ ಕಾರ್ಥ ನಿರ್ವಚನ.

೬೬. ಮೇರುವ ಸಾರಿದ ಕಾಗೆ, ಹೊಂಬಣ್ಣವಾಗದಿರ್ದರೆ, ಆ ಮೇರುವಿಂದತ್ತಣ ಹುಲುಮೊರಡಿ ಸಾಲದೆ ದೇವಾ? ನಿಮ್ಮ ಪೂಜಿಸಿ ಥಾವತಿಗೊಂಬಡೆ ಆ ಥಾವತಿಯಿಂದ ಮುನ್ನಿನ ವಿಧಿಯೆ ಸಾಲದೆ? ಗುಹೇಶ್ವರಾ ನಿಮ್ಮ ಪೂಜಿಸಿ ಸಾವಡೆ, ನಿಮ್ಮಿಂದ ಹೊರಗಣ ಜವನೆ ಸಾಲದೆ?

ಟೀಕು:—ಅಂಗದ ಮೇಲೆ ಲಿಂಗ ಸಂಬಂಧಿಯಾದ ಬಳಿಕ, ದೇಹ ಧರ್ಮ ಜನನ ಮರಣವ ಗೆಲಲೇಬೇಕು. ಗೆಲುವ ಬುದ್ಧಿಯನರಿಯದೆ, ಲೋಕ ಲೌಕಿಕದ ಹಾಗೆ ಹುಟ್ಟುವ ಹೊಂದುವ ದಂದುಗದೊಳಿಪ್ಪದೆಂಬುದು ವ್ಯರ್ಥ ಜನ್ಮವೆಂಬುದೀಗ ಈ ವಚನದ ಉಪದೃಷ್ಟಂಗಳಿಗೇ ಕಾರ್ಥ ನಿರ್ವಚನ.

೬೭. ಕಾಳ ರಕ್ಕಸಿಗೊಬ್ಬ ಮಗ ಹುಟ್ಟಿ, ಕಾಯದ ರಾಸಿಯ ಮೊಗವುತ್ತ ಸುರಿವುತ್ತಲಿರ್ದನಯ್ಯಾ? ಕಾಳ ರಕ್ಕಸಿಯ ಮೂಗ ಮೊಲೆಯ ಕೊಯ್ದು ದೇವ ಕರ್ಣಿಕೆಯ ಮರೆಯ ಹೊಕ್ಕು ಬಾಯ ತುತ್ತೆಲ್ಲವನುಣಲೊಲ್ಲದೆ, ಕಾರಿದಡೆ ಆತನೆ ಭಕ್ತನೆಂಬೆ ಗುಹೇಶ್ವರಾ.

ಟೀಕು:—ಕಾಳರಕ್ಕಸಿ ಎಂದಡೆ ಮಾಯೆ ಎಂಬುದಕ್ಕರ್ಥ. ಆ ಮಾಯೆಯಿಂದ ಹುಟ್ಟಿದಾತನು ಜೀವನಾದ ಕಾರಣ ಮಗ ಹುಟ್ಟಿ ಎಂಬ ಶಬ್ದಕ್ಕರ್ಥ. ಇಲ್ಲದ ಸಂಸಾರದ ರಾಸಿಯ ಮುಂದಿಟ್ಟುಕೊಂಡು, ತನುವೆಂಬ ಕೊಳಗದಲ್ಲಿ ಮೊಗವುತ್ತ ಸುರಿವುತ್ತ ಜನನ ಮರಣಕ್ಕೊಳಗಾದನೆಂಬುದೀಗ, ಕಾಯದ ರಾಸಿಯ ಮೊಗವುತ್ತ ಸುರಿವುತ್ತಲಿದ್ದನೆಂಬ ಶಬ್ದಕ್ಕರ್ಥ. ಆ ಮಾಯೆಯ ದುರ್ವಾಸನಾ ಸ್ವೀಕಾರವೆಂಬ ನಾಸಿಕಮುಂ ಸಂಸಾರ ವಿಷಯ ರಸದ ಘಟ ಸ್ವರೂಪಮಪ್ಪ ಸ್ತನಮುಂ ಛೇದಿಸಿ, ಇಂತು ಅಭಿಮಾನಮುಂ ನಿವೃತ್ತಿಯಮಾಡುತ್ತಿಪ್ಪುದೀಗ, ಕಾಳ ರಕ್ಕಸಿಯ ಮೂಗ ಮೊಲೆಯ ಕೊಯ್ದೆಂಬ ಶಬ್ದಕ್ಕರ್ಥ. ಜ್ಞಾನಶಕ್ತಿಯ ಸಂಗವನಾಶ್ರಯಿಸಿ ಪ್ರಾರಬ್ಧಾದಿ ಕರ್ಮಂಗಳನುಣಲೊಲ್ಲದೆ ಉದ್ಗಾರಿಸಿದಾತನೆ ಶರಣನೆಂಬುದೀಗ, ದೇವ ಕರ್ಣಿಕೆಯ ಮರೆಯ ಹೊಕ್ಕು ಬಾಯ ತುತ್ತನುಣಲೊಲ್ಲದೆ ಕಾರಿದಡೆ ಆತನೆ ಭಕ್ತನೆಂಬ ಶಬ್ದಕ್ಕರ್ಥ.

೬೮. ರಾಜಸಭೆ ದೇವಸಭೆಯೊಳಗೆ, ದೇವರಾಜ ಪೂಜಕರೆಲ್ಲ ಮುಖ್ಯರಿಗೆ ಗುರುವಿನ ಕರುಣ ಇರ ಬಲ್ಲರೆ ಆಯ್ಯಾ! ಪೂಜಕರೆಲ್ಲರು ಇಂತಹ ಪರಿಗಳ ಕಂಡು ಬೆರಗಾದೆ ಗುಹೇಶ್ವರಾ ಇವರೆಲ್ಲ ಸಂಸಾರ ವ್ಯಾಪಕರು.

ಟೀಕು:-ಗುರುಕರುಣವ ಪಡೆದು ಲಿಂಗವ ಪೂಜಿಸಿ, ರಾಜಭೋಗ ದೇವಭೋಗವ ಬಯಸುವಂತಹವರೆಲ್ಲರು ಗುರೂಪದೇಶಕ್ಕೆ ಸಲ್ಲದ ಫಲ ದಾಯಕ ಸಂಸಾರಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೬೯. ಅಕ್ಷರವ ಬಲ್ಲೆವೆಂದು ಅಹಂಕಾರವೆಡೆಗೊಂಡು ಲೆಕ್ಕಗೊಳ್ಳ ರಯ್ಯಾ! ಗುರುಹಿರಿಯರು ತೋರಿದ ಉಪದೇಶದಿಂದ ವಾಗದ್ವೈತವ ಕಲಿತು ವಾದಿಪರಲ್ಲದೆ ಆಗುಹೋಗೆಂಬುದನರಿಯರು. ಯುಕ್ತಿಯನರಿ ಯರು ಮುಕ್ತಿಯನರಿಯರು ಭಕ್ತಿಯನರಿಯರು. ಮತ್ತೆ ವಾದಿಗಳೆನಿಸು ವರು ಹೋದರು ಗುಹೇಶ್ವರಾ ಸಲೆ ಕೊಂಡ ಮಾರಿಂಗೆ.

ಟೀಕು:--ಗುರೂಪದೇಶದ ಬಲದಿಂದ ಅಭ್ಯಾಸದ ಭಕ್ತಿವಿಡಿದು ವಾಗದ್ವೈತವ ಮಾಡಿ ಕಂಡ ಕಂಡವರೊಡನೆ ವಾಗ್ವಾದಿಸುವರು ಯುಕ್ತಿಗೆ ಸಲ್ಲರು ಮುಕ್ತಿಗೆ ಸಲ್ಲರು ಭಕ್ತಿಗೆ ಸಲ್ಲರು ಲಿಂಗ ಪಥಕ್ಕೆ ಸಲ್ಲರು ಎಂಬು ದೀ ವಚನದ ಬಹುಶಬ್ದಕ್ಕೇಕಾರ್ಥ ನಿರ್ವಚನ.

೭೦. ಐದುಮುಖದಂಗನೆಗೆ, ಹದಿನೈದು ದೇಹ ನೋಡಾ! ಆ ಅಂಗನೆಯ ಮನೆಯೊಳಗಿರ್ದು, ತಾವಾರೆಂಬುದನರಿಯದೆ, ಬಾಯಿಗೆ ಬಂದಂತೆ ನುಡಿವರು ಗುಹೇಶ್ವರಾ ನಿಮ್ಮನರಿಯದ ಜಡರುಗಳು.

ಟೀಕು:—ಪಂಚಭೂತವೆಂಬ ಪಂಚಮುಖವನುಳ್ಳ ಮಾಯೆ ಎಂಬು ದೀಗ ಐದುಮುಖದಂಗನೆ ಎಂಬ ಶಬ್ದಾನ್ವಯವಾಯಿತ್ತು. ಆ ಮಾಯೆಗೆ ಸ್ಥೂಲ ಪಂಚಭೂತ, ಸೂಕ್ಷ್ಮ ಪಂಚಭೂತ, ಕಾರಣ ಪಂಚಭೂತವೆಂ ಬವು ದೇಹವಾದವೆಂಬುದೀಗ ಅದು ಹದಿನೈದು ದೇಹವೆಂಬ ಶಬ್ದಕ್ಕರ್ಥ. ಆ ಮಾಯಾಪಿಂಡದೊಳಗಿರ್ದು ಎಂಬುದೀಗ, ಆ ಅಂಗನೆಯ ಮನೆಯೊ ಳಗಿರ್ದು ಎಂಬ ಶಬ್ದಕ್ಕರ್ಥ. ಇಂತಪ್ಪ ಪಿಂಡದೊಳಗಿರ್ದು ತಮ್ಮ ನಿಜ ವನರಿಯದೆ, ಬಾಯ್ಗೆ ಬಂದಂತೆ ವಾಗ್ವಿಲಾಸವ ಮೆರೆವರು ಜಡರೆಂಬು ದೀಗ, ತಾವಾರೆಂಬುದನರಿಯದೆ ಬಾಯ್ಗೆ ಬಂದಂತೆ ನುಡಿವರು ಗುಹೇ ಶ್ವರಾ ನಿಮ್ಮನರಿಯದ ಜಡರೆಂಬ ಶಬ್ದಕ್ಕರ್ಥ.



೭೧. ಎಣ್ಣೆ ಬೇರೆ, ಬತ್ತಿ ಬೇರೆ, ಎರಡೂ ಕೂಡಿ ಸೊಡರಾಯಿತ್ತು. ಪುಣ್ಯ ಬೇರೆ, ಪಾಪ ಬೇರೆ, ಎರಡೂ ಕೂಡಿ ಒಡಲಾಯಿತ್ತು. ಮಿಗಬಾರದು, ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು. ಕಾಯ ಗುಣವಳಿದು ಮಾಯಾಜ್ಯೋತಿ ನಾಯುವ ಕೂಡದ ಮುನ್ನ ಭಕ್ತಿಯ ಮಾಡಬಲ್ಲಡಾತನೆ ದೇವ ಗುಹೇಶ್ವರಾ.

ಟೀಕು:--ಪುಣ್ಯವೆ ಪ್ರಾಣ, ಪಾಪವೇ ಒಡಲು, ಇಂತೆರಡು ಕೂಡಿ, ಒಂದೊಡಲಾಯಿತ್ತು. ಆ ಒಡಲಾಸೆಯ ಕೆಡಿಸಬಾರದು. ಇಂತಪ್ಪ ಕಾಯ ವಳಿಯದ ಮುನ್ನ ಒಡಲಿಚ್ಛೆಯ ಕೆಡಿಸಿ, ಲಿಂಗಭಕ್ತಿಯ ಮಾಡಬಲ್ಲಾತನೆ ಭಕ್ತನೆಂಬುದೀಗ ಈ ವಚನದ ಬಹುಶಬ್ದಕ್ಕೇಕಾರ್ಥ ನಿರ್ವಚನ.

೭೨. ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು ಮಣ್ಣು ಮಾಯೆ ಎಂಬರು. ಹೊನ್ನು ಮಾಯೆಯಲ್ಲ. ಹೆಣ್ಣು ಮಾಯೆ ಯಲ್ಲ. ಮಣ್ಣು ಮಾಯೆಯಲ್ಲ. ಮನದ ಮುಂದಣಾಸೆಯೆ ಮಾಯೆ ಕಾಣಾ ಗುಹೇಶ್ವರಾ.

ಟೀಕು:--ಹೊನ್ನು, ಹೆಣ್ಣು, ಮಣ್ಣು ಎಂಬ ತ್ರಿವಿಧವನು ತನ್ನ ಸೊಮ್ಮೆಂದಭಿಲಾಷೆ ಗೆಯ್ಯದೆ, ಗುರುಲಿಂಗಜಂಗಮಕ್ಕರ್ಪಿಸಿ, ನಿರಾಶಾ ಭರಿತನಾಗಿರಬಲ್ಲರೆ ಆತನು ನಿರ್ಮಾಯನೆಂಬುದೀ ವಚನದ ಬಹುಶ ಬ್ದಕ್ಕೇಕಾರ್ಥ ನಿರ್ವಚನ.

೭೩. ಕಳ್ಳಗಂಜಿ ಕಾಡ ಹೊಕ್ಕಡೆ, ಹುಲಿ ತಿಂಬುದ ಮಾಬುದೆ? ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿಂಬುದ ಮಾಬುದೆ? ಕಾಲಕ್ಕಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಬುದೆ? ಮೃತ್ಯುವಿನ ಬಾಯ ತುತ್ತಾದ ವೇಷ ಡಂಭಕರನೇನೆಂಬೆ ಗುಹೇಶ್ವರಾ?

ಟೀಕು:--ಕಾಲಕರ್ಮಕ್ಕಂಜಿ ಭಕ್ತನಾದಡೆ ಅದು ಭಕ್ತಸ್ಥಲಕ್ಕೆ ಸಲ್ಲದು. ಅದೇನು ಕಾರಣವೆಂದಡೆ, ಅದು ಸಹಜ ಭಕ್ತಿಯಲ್ಲವಾಗಿ. ಇಂತಪ್ಪ ವೇಷಲಾಂಛನ ಡಂಭಕರಿಗೆ ಭಕ್ತಿ ಇಲ್ಲವೆಂಬುದೀ ವಚನದ ಬಹುಶಬ್ದಂಗ ಳಿಗೇಕಾರ್ಥ ನಿರ್ವಚನ.

೭೪. ಐದುಸರ್ಪಂಗಳಿಗೆ ತನು ಒಂದು ದಂತವೆರಡು. ಆ ಸರ್ಪ ಕಡಿದು, ಸತ್ತ ಹೆಣನು ಮುಳಿದಾಡುವ ಕಂಡೆ. ಈ ನಿತ್ಯವರಿಯದ ಹಾವಿನಲ್ಲಿ ಭಕ್ತಿ ಎಲ್ಲಿಯದು ಗುಹೇಶ್ವರಾ?

ಟೀಪು:—ಪಂಚೇಂದ್ರಿಯಂಗಳೆಂಬ ಐದು ಸರ್ಪಂಗಳು ಶಂಕಾವಿಷ ಸಂಬಂಧಿಗಳಾಗಿರ್ಪವೆಂಬುದೀಗ, ಐದು ಸರ್ಪಂಗಳೆಂಬ ಶಬ್ದಕ್ಕರ್ಥ. ಆ ಇಂದ್ರಿಯಂಗಳಿಗೆ ಇಂದ್ರಿಯಾಣಾಂ ಮನೋ ನಾಥಾ ಎಂಬುದಾಗಿ, ಮನಸ್ಸೆ ತನುವಾಗಿಪ್ಪುದೆಂಬುದೀಗ ತನು ಒಂದೆಂಬ ಶಬ್ದಕ್ಕರ್ಥ. ಆ ಮನ ಸಂಕಲ್ಪ ವಿಕಲ್ಪದಿಂ ಹಿಡಿವುತ್ತ ಬಿಡುತ್ತ ಬೇಕು ಬೇಡವೆಂಬೆರಡರಲ್ಲಿ ಧಾವತಿಗೊಳಿಸುತ್ತಿಹುದಾಗಿ ಬಂತವೆರಡೆಂಬ ಶಬ್ದಕ್ಕರ್ಥ. ಆ ಮನಸ್ಸಿನ ಸಂಕಲ್ಪ ವಿಕಲ್ಪದಿಂದ ಆ ಇಂದ್ರಿಯಂಗಳೆಂಬ ಸರ್ಪಂಗಳು ಪ್ರಾಣನನವಗ್ರಹಿಸಿಕೊಂಡಿರಲು, ಅರಿವು ಸತ್ತು, ಪ್ರಾಣನು ಇಂದ್ರಿಯಂಗಳಿಚ್ಛೆಗೆ ಸುಳಿದಾಡುತ್ತಿರಲು, ಅದೀಗ ಸರ್ಪ ಕಡಿದು ಸತ್ತ ಹೆಣ ಸುಳಿದಾಡುವದ ಕಂಡೆನೆಂಬ ಶಬ್ದಕ್ಕರ್ಥ. ಇಂತು ಅನಿತ್ಯದೊಳಗಿರ್ಪ ನಿತ್ಯವನರಿಯದ ಒಡಲೊಳಗೆ ಲಿಂಗಭಕ್ತಿ ಎಡೆಗೊಳ್ಳದೆಂಬುದೀಗ ನಿತ್ಯವನರಿಯುವ ಠಾವಿನಲ್ಲಿ ಭಕ್ತಿ ಎಲ್ಲಿಯದೆಂಬ ಶಬ್ದಕ್ಕರ್ಥ.

೭೫. ಹುಟ್ಟಿದಲ್ಲಿಯೆ ಹೊಂದುದೆಲ್ಲರಿಗೆಯೂ ಸ್ವಭಾವ. ಪುಣ್ಯಪಾಪವೆಲ್ಲರಿಗೆಯೂ ಸ್ವಭಾವ. ಮಹಾ ಶಿವತತ್ವದಲ್ಲಿ ಹುಟ್ಟಿದ ಭಕ್ತರು ಆಗಮ ತತ್ವದಲ್ಲಿ ಹೊಂದಿದಡೇನು? ಆ ಪುಣ್ಯ ಪಾಪವಿಲ್ಲಾಗಿ ಅವರು ಮಹಾನುಭಾವರು. ಆದಡೇನು? ಲೋಕದ ಪರಿಯೇ ಅಲ್ಲ. ಇದು ಲೋಕದ ಪರಿ ಎಂಬ ಅಜ್ಞಾನಿಗಳನೇನೆಂಬೆ ಗುಹೇಶ್ವರಾ?

ಟೀಪು:—ಆವುದಾನೊಂದು ಎಲ್ಲಿ ಹುಟ್ಟುವುದು ಅಲ್ಲಿಯೇ ಲಯವೆಂಬ ಹಾಗೆ, ಆ ಶ್ರೀಗುರು ತತ್ವದಲ್ಲಿ ಉದಯಿಸಿದ ಭಕ್ತರು ಆ ಗುರುಮಾರ್ಗಾಚಾರದಲ್ಲಿ ಅವರ ಪ್ರಪಂಚು ಲಯವಾಗಿ ಹೋಹುದು. ಆ ಒಡಲುವಿಡಿದಡೆ ಅವರುವನು ಲೋಕದಂತಹವರೆಂದು ಭಾವಿಸಲಾಗದೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೭೬. ಆರು ಇಲ್ಲದಾರಣ್ಯದೊಳಗೆ ಮನೆಯ ಕಟ್ಟಿದರೆ ಕಾಡ ಕಿಚ್ಚೆದ್ದು ಬಂದು, ಹತ್ತಿತ್ತಲ್ಲಾ. ಆ ಉರಿಯೊಳಗೆ ಮನೆ ಬೇವಲ್ಲಿ ಮನೆಯೊಡೆಯನೆತ್ತ ಹೋದನೊ? ಉರಿಯೊಳಗೆ ಬೆಂದ ಮನೆ ದೆಗೆಯಾಗದುದ ಕಂಡು ಮನೆಯೊಡೆಯನಳಲುತ್ತ ಬಳಲುತ್ತೈದಾನೆ. ಗುಹೇಶ್ವರಾ ನಿಮ್ಮ ಒಲವಿಲ್ಲದ ಠಾವ ಕಂಡು ಮನದಲ್ಲಿ ಹೇಸಿ ತೊಲಗಿದೆನಯ್ಯಾ.



ಟೀಕು:—ನಿರ್ಜನ ಪ್ರದೇಶವಪ್ಪ ಭವಾರಣ್ಯದೊಳಗೆ ಎಂಬುದೀಗ ಆರೂ ಇಲ್ಲದಾರಣ್ಯದೊಳಗೆ ಎಂಬ ಶಬ್ದಕ್ಕರ್ಥ. ಪಂಚಭೂತ ಸಪ್ತಧಾತೆಂಬ ಪಿಂಡವನಾಶ್ರಯವ ಮಾಡಲು, ಎಂಬುದೀಗ ಅಲ್ಲಿ ಮನೆಯ ಕಟ್ಟೆ ಎಂಬ ಶಬ್ದಕ್ಕರ್ಥ. ಆ ಭವಾರಣ್ಯದೊಳಗೆ ತಾಪತ್ರಯಾಗ್ನಿ ಎದ್ದು ಆ ಪಿಂಡವನಾವರ್ತಿಸಿಕೊಂಡು ಸುಡುತ್ತಿದ್ದಿತ್ತೆಂಬುದೀಗ ಕಾಡು ಕಿಚ್ಚು ಬಂದು ಹತ್ತಿತ್ತಲ್ಲಾ ಎಂಬ ಶಬ್ದಕ್ಕರ್ಥ. ಆ ತಾಪತ್ರಯಾಗ್ನಿಯಲ್ಲಿ ತನು ಉರಿದು ಬೇವಲ್ಲಿ, ಜೀವನ ನಿಲವು ಕಾಣಬಾರದೆಂಬುದೀಗ ಆ ಮನೆ ಬೇವಲ್ಲಿ ಮನೆಯೊಡೆಯನೆತ್ತ ಹೋದನು ಎಂಬ ಶಬ್ದಕ್ಕರ್ಥ. ಆ ತಾಪತ್ರಯಾಗ್ನಿಯಲ್ಲಿ ದಗ್ಧವಾದ ಪಿಂಡದ ತನುಗುಣ ಕರಣಂಗಳಾವಾವು ಅಳಿಯದೆ ಪ್ರವರ್ತಿಸುತ್ತಿರ್ದವೆಂಬುದೀಗ ಆ ಮನೆ ಬೆಂದು ದೆಗೆಯಾಗದುದ ಕಂಡೆನೆಂಬ ಶಬ್ದಕ್ಕರ್ಥ. ಇಂತಾದ ಕಾರಣ ಆ ಜೀವನು ಸಂಸಾರದೊಳು ಅಳಲುತ್ತ ಬಳಲುತ್ತಿರ್ದನೆಂಬುದೀಗ, ಮನೆಯೊಡೆಯನಳಲುತ್ತ ಬಳಲುತ್ತಿದ್ದಾನೆ ಎಂಬ ಶಬ್ದಕ್ಕರ್ಥ. ಇಂತಪ್ಪ ಠಾವಿನಲ್ಲಿ ಗುರುಕರುಣ ಎಡೆಗೊಳ್ಳದೆ ಇರಲು ಅದ ಕಂಡು ನಿವೃತ್ತಿಯ ಮಾಡಿದನೆಂಬುದೀಗ ನಿಮ್ಮ ಒಲವಿಲ್ಲದ ಠಾವ ಕಂಡು ಮನದಲ್ಲಿ ಹೇಸಿ ತೊಲಗಿದೆನೆಂಬ ಶಬ್ದಕ್ಕರ್ಥ.

೭೭. ಅಣೋರಣೀಯಾನ್ ಮಹತೋ ಮಹಿಯಾನ್ ಎಂಬ ಶ್ರುತಿ ಹುಸಿ. ಲಿಂಗವಿರ್ದ ಠಾವಿನಲ್ಲಿ ಪ್ರಳಯ ಉಂಟೆ? ಭಕ್ತರ ಭಾವದಲ್ಲಿರ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಗುಹೇಶ್ವರಾ.

ಟೀಕು:—ಅಣು, ರೇಣು, ತೃಣ, ಕಾಷ್ಠದೊಳಗೆ ಶಿವನಿರ್ಪನೆಂದಡೆ ಆ ಮಾತು ಹುಸಿ. ಅದೇನು ಕಾರಣವೆಂದಡೆ, ಆ ಶಿವನಿರ್ಪ ಕಾಯಕ್ಕೆ ಮುಕ್ತಿಯುಂಟಾಗಬೇಕೆಂದರೆ, ಅವಕ್ಕಿಲ್ಲಾಗಿ, ಆ ಶಿವನಿರ್ಪ ಕಾಯಕ್ಕೆ ಜ್ಞಾನ ಉಂಟಾಗಬೇಕೆಂದರೆ, ಅವಕ್ಕೆ ಜ್ಞಾನವಿಲ್ಲಾಗಿ, ಆ ಶಿವನಿರ್ಪ ಕಾಯ ನಿತ್ಯ ಕಾಯವಾಗಬೇಕೆಂದಡೆ, ಅದಕ್ಕೆ ನಿತ್ಯತ್ವವಿಲ್ಲಾಗಿ, ಅದು ಕಾರಣ ಸದ್ಭಕ್ತರಲ್ಲಿ ಶಿವನಿರ್ಪನಲ್ಲದೆ ಮತ್ತೆಲ್ಲಿಯೂ ಇಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೭೮. ಪ್ರಣುತೆಯು ಇದೆ. ಬತ್ತಿಯು ಇದೆ. ಜ್ಯೋತಿಯ ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ? ಗುರುವಿದೆ, ಲಿಂಗವಿದೆ, ಶಿಷ್ಯನ ಸುಜ್ಞಾ

ನೋದಯವಾಗದನ್ನಕ್ಕರ ಭಕ್ತಿ ಎಲ್ಲಿಯದೊ? ಸೋಹಂಮೆಂಬುದ ಕೇಳಿ ದಾಸೋಹಂ ಮಾಡದಿರ್ದಡೆ ಅತಿಗಳವೆ ಗುಹೇಶ್ವರಾ.

ಟೀಕು:— ಬೆಳಗುವ ಜ್ಯೋತಿಗೆ ತೈಲವೆ ಜೀವಾಳವೆಂಬಂತೆ, ಗುರುಲಿಂಗ ಸಂಬಂಧಕ್ಕೆ ಶಿಷ್ಯನ ಜ್ಞಾನವೇ ಜೀವಾಳ. ಸೋಹಂವೆಂದು ಬಂದ ಜಂಗಮಕ್ಕೆ ಆ ಜಂಗಮ ಬಂದ ಬರವನರಿದು ದಾಸೋಹವ ಮಾಡುವುದೆ ಜೀವಾಳ. ಈ ನಿರ್ಣಯವನರಿಯದಿರ್ದರೆ ಅದು ಭಕ್ತಸ್ಥಲಕ್ಕೆ ಸಲ್ಲದೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೭೯. ಘನತರದ ಚಿತ್ರದ ರೂಹ ಬರೆಯಬಹುದಲ್ಲದೆ ಪ್ರಾಣವ ಬರೆಯಬಹುದೆ ಅಯ್ಯಾ? ದಿವ್ಯಾಗಮಂಗಳು ಹೇಳಿದ ಕ್ರಿಯಲು ದೀಕ್ಷೆಯ ಮಾಡಬಹುದಲ್ಲದೆ ಭಕ್ತಿಯ ಮಾಡಬಹುದೆ ಆಯ್ಯಾ? ಪ್ರಾಣವಹ ಭಕ್ತಿ ತನ್ಮಯ ನೀನು ಈ ಗುಣವುಳ್ಳಲ್ಲಿ ನೀನಿಹೆ ಇಲ್ಲದಲ್ಲಿ ನೀನಿಲ್ಲ ಗುಹೇಶ್ವರಾ.

ಟೀಕು:— ಚಿತ್ರಿಕನು ಚಿತ್ರವ ಬರೆದಡೇನು? ಪ್ರಾಣವ ತುಂಬಲರಿಯನೆಂಬ ಹಾಗೆ, ಶಿಷ್ಯಂಗೆ ಶ್ರೀ ಗುರು ದೀಕ್ಷೆಯ ಮಾಡುವನಲ್ಲದೆ, ಜ್ಞಾನವ ತುಂಬಲರಿಯನು. ಅದು ಕಾರಣ ಜ್ಞಾನವು ಶಿಷ್ಯನಿಂದವೆ ಆಗಬೇಕು. ಇಂತಪ್ಪ ಜ್ಞಾನ ಸನ್ನಿಹಿತವಾದ ಭಕ್ತಿಯಲ್ಲಿ ಲಿಂಗವಿರ್ಪನು. ಅಲ್ಲದುದ್ದೇಶ ಭಕ್ತಿಯಲ್ಲಿ ಲಿಂಗವೆಡೆಗೊಳ್ಳನೆಂಬುದೀ ವಚನದ ತಾತ್ಪರ್ಯಾರ್ಥ.

೮೦. ಗಂಡಗಿಂದ ಮುನ್ನ ಹೆಂಡತಿ ಹುಟ್ಟಿ, ಗಂಡಗಿಂದ ಕಿರಿಯಳಾದಳು. ಆ ಹೆಂಡತಿ ಒಡಹುಟ್ಟಿದಳಾದಳೆಂಬುದ ಕೇಳಿ ಆ ಗಂಡ ಸಂಗವ ಮಾಡಿಡಡೆ, ಇಬ್ಬರಿಗೊಂದು ಮಗುವು ಹುಟ್ಟಿತಲ್ಲಾ. ಆ ಹುಟ್ಟಿದ ಮಗುವ ತಾಯಿ ಮುದ್ದಾಡಿಸಿದಡೆ ತಾಯ ತಕ್ಕೈರ್ಸಿತ್ತಿದೇನು ಹೇಳಾ? ತಾ ಎದ್ದು ಪತಿಭಕ್ತಿಯ ಮಾಡಿತ್ತ ಕಂಡು ಗುಹೇಶ್ವರ ಲಿಂಗಕ್ಕೆ ಭಕ್ತಿ ಪರಿಣಾಮವಾಯಿತ್ತು

ಟೀಕು:—ಗುರುವೆ ಪತಿಯಾಗಿ, ಶಿಷ್ಯನೆ ಸತಿಯಾದ ಕಾರಣ ಗಂಡನೆಂಬ ಶಬ್ದಕ್ಕರ್ಥ. ಆ ಗುರುವಿಂದ ಮುನ್ನ ಶಿಷ್ಯಂಗೆ ಜ್ಞಾನೋದಯವಾಗಿ, ಸಂಸಾರ ಪಾಶಚ್ಛೇದನವ ಮಾಡಿದ ಬಳಿಕ ಬಂದು ಗುರುವನಾಶ್ರಯಿಸುವ ಕಾರಣದಿಂದ, ಗಂಡಗಿಂದ ಮುನ್ನ ಹೆಂಡತಿ ಹುಟ್ಟಿದಳೆಂಬ ಶಬ್ದಕ್ಕರ್ಥ. ಆ ಗುರವಿಂದವೆ ಮುನ್ನವುಳ್ಳ ಶಿಷ್ಯನಾದಡೆಯೂ ನ ಗುರೋರಧಿಕಂ ನ ಗುರೋರಧಿಕಂ ಎಂಬುದನರಿದು, ಗುರುಪುತ್ರನಾಗಿ,



ಶಿಶ್ರೂಷೆಯ ಮಾಳ್ಪ ಗುಣದಿಂದ ಗಂಡಗಿಂದ ಹೆಂಡತಿ ಕಿರಿಯಳಾದಳೆಂಬ ಶಬ್ದಕ್ಕರ್ಥ. ಆ ಶಿಷ್ಯನು ಶ್ರೀಗುರು ತತ್ವದಿಂ ಭಿನ್ನವಿಲ್ಲದೆ, ಆ ಗುರು ತತ್ವ ಸಹಿತವೆ ಉದಯವಾದನೆಂಬುದೀಗ, ಆ ಹೆಂಡತಿಯೆ ಒಡಹುಟ್ಟಿದಳಾದಳೆಂಬ ಶಬ್ದಕ್ಕರ್ಥ. ಆ ಶಿಷ್ಯನಲ್ಲಿ ಗುರು ಅವಿರಳ ಸಂಗವ ಮಾಡಲಾಗಿ, ಲಿಂಗವೆಂಬ ಶಿಸು ಹುಟ್ಟಿತ್ತೆಂಬುದೀಗ, ಇಬ್ಬರಿಗೊಂದು ಮಗುವು ಹುಟ್ಟಿತ್ತೆಂಬ ಶಬ್ದಕ್ಕರ್ಥ. ಆ ಲಿಂಗಭಾವ ಜ್ಞಾನಶಕ್ತಿಯಿಂದ ಹುಟ್ಟಿತ್ತಾಗಿ, ಆ ಜ್ಞಾನಶಕ್ತಿಯನೆ ಆಲಿಂಗಿಸಿ, ಭಕ್ತ್ಯಾಂಗನೆ ಎನಿಸಿಕೊಂಡು, ಲಿಂಗಭಕ್ತಿಯ ಮಾಡುತ್ತಿರ್ದಳೆಂಬುದೀಗ, ಹುಟ್ಟಿದ ಮಗುವ ತಾಯ ಮುದ್ದಾಡಿಸಿದರೆ, ತಾಯ ತಕ್ಕೈರ್ಸಿತ್ತಿದೇನು ಹೇಳಾ? ತಾ ಎದ್ದು ಪತಿಭಕ್ತಿಯ ಮಾಡುತ್ತಿರ್ದಳೆಂಬ ಶಬ್ದಕ್ಕರ್ಥ. ಇಂತಪ್ಪ ಸದ್ಭಕ್ತಿ ಲಿಂಗಕ್ಕೆ ಪರಿಣಾಮವಾದ ಕಾರಣ ಗುಹೇಶ್ವರ ಲಿಂಗಕ್ಕೆ ಭಕ್ತಿ ಪರಿಣಾಮವಾಯಿತ್ತೆಂಬ ಶಬ್ದಕ್ಕರ್ಥ.

೮೧. ಮುನ್ನಿನ ಪರಿಯಂತುಟಲ್ಲ. ಆದಡೆಂತಹುದು, ಆಗದಡಿಂತಾಯಿತ್ತು. ಹಲವು ಪರಿಯ ಬಯಕೆ ತಾರ್ಕಣೆಯಾದಂತೆ ಗುಹೇಶ್ವರ ಲಿಂಗವು ತನುವ ತನ್ನತ್ತಲೊಯ್ದನು.

ಟೀಕು:— ಅಂಗದ ಮೇಲೆ ಲಿಂಗಸಂಬಂಧಿಯಾದ ಭಕ್ತನು ತನ್ನ ತಾ ವಿವೇಕಿಸಿ ನೋಡಿ, ನಾನು ಅನಾದಿಯಲ್ಲಿ ಭಕ್ತನಲ್ಲಾ ಎಂಬುದನರಿದು, ವಿವೇಕಿಸಿ ನಾನು ಹಿಂದಣ ಭವಿ ಜನ್ಮದಂತಹನಲ್ಲವೆಂಬುದೀಗ, ಮುನ್ನಿನ ಪರಿಯಂತುಟಲ್ಲವೆಂಬ ಶಬ್ದಾರ್ಥ. ತಾನೆ ಭವಿಯಾದಡೆ, ಇಂತಪ್ಪ ಸದ್ಭಕ್ತಿ ಘಟಿಸುವದೆ ಎಂದು ವಿವೇಕಿಸುತ್ತಿರಲು ಆದಡೆ ಇಂತಹುದೆ ಎಂಬ ಶಬ್ದಾನ್ವಯ. ಅದು ಕಾರಣ ಆ ಭವಿಯಾಗದ ಸಂಬಂಧದಿಂ ಇಂತಪ್ಪ ಸದ್ಭಕ್ತಿ ಸಾಧ್ಯಯಾಯಿತ್ತೆಂಬುದೀಗ, ಆಗದಡಿಂತಾಯಿತ್ತೆಂಬ ಶಬ್ದಕ್ಕರ್ಥ. ಇಂತು ಶೃತ, ದೃಷ್ಟ, ಅನುಮಾನಂಗಳಿಂ ತಿಳಿದು ನೋಡಿ, ಲಿಂಗದಲ್ಲಿ ನಾನು ಸಂಬಂಧಿಯಾದೆನೆಂಬ ಕೃತ ನಿಶ್ಚಯ ಭಾವವೀಗ ಹಲವು ಪರಿಯ ಬಯಕೆ ತಾರ್ಕಣೆ ಗಂಡಂತಾಯಿತ್ತು. ಗುಹೇಶ್ವರ ಲಿಂಗವು ತನುವ ತನ್ನತ್ತಲೊಯ್ದನೆಂಬ ಶಬ್ದಕ್ಕರ್ಥ.

೮೨. ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ ಇವ ಮಾಡಲೆಬೇಕು. ಸುಳಿವ ಸುಳುಹು ಉಳ್ಳನ್ನಕ್ಕ ಇವ ಮಾಡಲೆ ಬೇಕು. ಗುಹೇಶ್ವರನೆಂಬ ಲಿಂಗಕ್ಕೆ ಆತ್ಮನುಳ್ಳನ್ನಕ್ಕರ ಭಕ್ತಿಯ ಮಾಡಲೇಬೇಕು.

ಟೀಕು:—ಲಿಂಗವಿಡಿದು ಭಕ್ತ ನಾನು ಎಂಬದುಳ್ಳನ್ನಕ್ಕರ, ಒಡಲು ವಿಡಿದು ಸುಳಿವ ಸುಳುಹು ಉಳ್ಳನ್ನಕ್ಕರ, ಅಂತರಂಗದೊಳಗೆ ಲಿಂಗವನರಿವ ಅರಿವುಳ್ಳನ್ನಕ್ಕರ, ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ, ಷೋಡಶೋಪಚಾರವನು, ಪ್ರಾಣಸ್ವರೂಪಮಪ್ಪ ಜಂಗಮಲಿಂಗಕ್ಕೆ ಸಕಲ ಪದಾರ್ಥವನು ನೀಡಿ, ಭಕ್ತಿಯ ಮಾಡುತ್ತಿರಬೇಕೆಂಬುದೀ ವಚನದ ಬಹುಶಬ್ದಕ್ಕೇಕಾರ್ಥ ನಿರ್ವಚನ.

೮೩. ಬಂದ ಬಟ್ಟೆಯ ನಿಂದು ನೋಡದೆ, ಬಂದ ಬಟ್ಟೆಯ ಕಂಡು ಸುಖಿಯಾದೆ. ನಿಂದ ನಿಲವ ಮುಂದುಗೆಡಿಸಿ, ನಿಂದ ನಿಲವ ಮುಂದುಗೊಂಡಿತ್ತು. ತಂದೆಮಕ್ಕಳ ಗುಣ ಒಂದೆ ಭಾವದಲಡಗಿ, ಸಂದಿಲ್ಲದ ಕಾಲೊಳಗೆ ಕೈಮೂಡಿತ್ತು. ಒಂದನೆ ಹಿಡಿದು, ಒಂದನೆ ಬಿಟ್ಟರೆ ಇಂದು ನಮ್ಮ ಗುಹೇಶ್ವರನ ಸದ್ಭಕ್ತಿಯಾಯಿತ್ತೈ ಸಂಗನಬಸವಣ್ಣಾ॥

ಟೀಕುಃ—ತಾಯ ಯೋನಿ ಎಂಬ ದ್ವಾರಮಂ ತಾನು ತಿರುಗಿ ನೋಡದೆ ಎಂಬುದೀಗ ಬಂದ ಬಟ್ಟೆಯ ನಿಂದು ನೋಡದೆ ಎಂಬ ಶಬ್ದಕ್ಕರ್ಥ. ಅಂತು ಮಾಯಾ ಯೋನಿ ಸಂಬಂಧ ನಾನಲ್ಲವೆಂದರಿದು, ಅನಾದಿ ಶಿವತತ್ವದ್ವಾರದಿಂ ಬಂದೆನೆಂದರಿದು, ಪರಿಣಾಮಿಸುತ್ತಿರಲು, ಬಂದ ಬಟ್ಟೆಯ ಕಂಡು ಸುಖಿಯಾದೆನೆಂಬ ಶಬ್ದಕ್ಕರ್ಥ. ಶರೀರವಿಡಿದು, ನಿಂದ ನಿಲವ ಮುಂದುಗೆಡಿಸಿ ತನ್ನ ಸ್ವಭಾವದಿಂ ನಿಂದ ನಿಲವ ಮುಂದುಗೊಂಡಿರ್ದನೆಂಬುದೀಗ ನಿಂದ ನಿಲವ ಮುಂದು ಗೆಡಿಸಿ, ನಿಂದ ನಿಲವ ಮುಂದುಗೊಂಡಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಸದ್ವಿವೇಕ ಶಿಷ್ಯನ ಹೃದಯವು ಆ ಶ್ರೀಗುರುವಿನ ಹೃದಯವು ಏಕೋಭಾವವಾಗಿ ಎಂಬುದೀಗ, ತಂದೆಮಕ್ಕಳ ಗುಣ ಒಂದೆ ಭಾವದಲಡಗಿ ಎಂಬ ಶಬ್ದಕ್ಕರ್ಥ. ಇಂತಪ್ಪ ಸದ್ವಿವೇಕ ಶಿಷ್ಯನ ಸದಾಚಾರ ವರ್ತನೆಯ ಚರಿಯುವೆ, ಭಿನ್ನವಿಲ್ಲದ ಚರಣವಾಗಿಪ್ಪದೆಂಬುದೀಗ, ಸಂದಿಲ್ಲದ ಕಾಲೆಂಬ ಶಬ್ದಕ್ಕರ್ಥ. ಆ ಸದಾಚಾರ ಕ್ರಿಯಾಚಾರದೊಳಗೆ, ಕೃತನಿಶ್ಚಯವೆಂಬ ದೃಢ ಹಸ್ತ ಹುಟ್ಟಿತ್ತೆಂಬುದೀಗ ಸಂದಿಲ್ಲದ ಕಾಲೊಳಗೆ ಕೈಮೂಡಿತ್ತೆಂಬ ಶಬ್ದಕ್ಕರ್ಥ. ಆ ಕೃತನಿಶ್ಚಯ ಹಸ್ತದೊಳು ಸದ್ಭಕ್ತಿ ಕ್ರಿಯನೆ ದೃಢವಿಡಿದು, ಆ ಭಕ್ತಿ ಕ್ರಿಯನೆ, ವಿಸರ್ಜಿಸಿಪ್ಪುದೀಗ, ಒಂದನೆ ಬಿಟ್ಟು, ಒಂದನೆ ಹಿಡಿದು ಎಂಬ ಶಬ್ದಕ್ಕರ್ಥ. ಇಂತು



ಕೃತನಿಶ್ಚಯವಾದ ಭಕ್ತಿ ಲಿಂಗದ ಪರಿಣಾಮವೆಂಬುದೀಗ ಇಂದು ನಮ್ಮ ಗುಹೇಶ್ವರ ಸದ್ಭಕ್ತಿಯಾಯಿತ್ತೆಂಬ ಶಬ್ದಕ್ಕರ್ಥ.

೮೪. ತಂದೆಯ ಸದಾಚಾರ ಮಕ್ಕಳದೆಂಬರು. ಗುರು ಮಾರ್ಗಾಚಾರ ಶಿಷ್ಯನದೆಂಬರು. ಮೇಲುಪಂಕ್ತಿಯ ಕಾಣರು ನೋಡಾ! ತತ್ವದ ಮೇಲುಪಂಕ್ತಿಯತ್ತಲೆ ಉಳಿಯಿತ್ತು. ಕತ್ತಲೆಯ ಮರೆಯಲ್ಲಿ ಕಾಣರು ನೋಡಾ. ತತ್ವದ ಹಾದಿಯನು ಭಕ್ತಿಯ ಭೇದವನು ಇವರೆತ್ತ ಬಲ್ಲರೈಯ್ಯಾ ಗುಹೇಶ್ವರಾ?

ಟೀಕುಃ— ತಂದೆಯ ವರ್ಣಾಶ್ರಮ ಧರ್ಮ ಆಚಾರ ಮಗನದು ಎಂಬ ಹಾಗೆ, ಆ ಶ್ರೀಗುರುವಿನ ಸನ್ಮಾರ್ಗ ಸದಾಚಾರ ಸದ್ಭಕ್ತಿ ಶಿಷ್ಯನದು. ಅದೆಂತೆಂದಡೆ "ಗುರೂಕ್ತಿ ಮಾರ್ಗ ತೆ ಲಿಂಗಂ ವ್ರತಸ್ಥಂ ಪರಮೇಶ್ವರಿ" ಎಂದುದಾಗಿ ಈ ವರ್ಮವನರಿದು ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡುವುದು ಕ್ರಮ, ಉಳಿದುದು ಅಕ್ರಮವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೮೫. ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ! ಬ್ರಹ್ಮವ ನುಡಿದು ನಾನು ಭ್ರಮಿತನಾದೆನಯ್ಯಾ! ಶೂನ್ಯವ ನುಡಿದು ನಾನು ಸುಖದಃಖಕ್ಕೆ ಗುರಿಯಾದೆನಯ್ಯಾ! ಗುಹೇಶ್ವರಾ ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ.

ಟೀಕುಃ— ತನುವೆಂಬ ಭಾವ ಮನದಲ್ಲಿ ಉಳ್ಳನ್ನಕ್ಕರ ಮನ ಉಂಟೆಂಬ ಭಾವ ತನುವಿನಲ್ಲಿ ಉಳ್ಳನ್ನಕ್ಕರ ಶ್ರೀಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡುವುದೇ ಸತ್ಪಥ. ಇಂತಲ್ಲದೆ ವಾಗದ್ವೈತವ ನುಡಿವುದೆಲ್ಲವು ಮಿಥ್ಯೆ ಎಂದರಿವುದೀಗ ಈ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೮೬. ಹಳೆಗಾಲದಲೊಬ್ಬ ಪುರುಷಂಗೆ ಎಳೆಯ ಕನ್ನಿಕೆಯ ಮದುವೆಯ ಮಾಡಲು ಕೆಳದಿಯರೈವರು ನಿಬ್ಬಣ ಬಂದರು. ಹಸೆಯ ಮೇಲೆ ಮದುವಣಿಗನ ತಂದು ನಿಲಿಸಲೊಡನೆ ಶಶಿವದನೆ ಬಂದು ಕೈವಿಡಿದಳು. ಮೇಲುದಾಯದಲೊಬ್ಬ ಸತಿ ಕಣ್ಣಸನ್ನೆಯ ಮಾಡುತ್ತಿರೆ ಕೂಡೆ ಬಂದ ನಿಬ್ಬಣಗಿತ್ತೆಯರೆಲ್ಲ ಹೆಂಡಿರಾದರು. ದೂರವಿಲ್ಲದ ಗಮನಕ್ಕೆ ದಾರಿಯ ಪಯಣ ಹಲವಾಯಿತ್ತು. ಸಾರಾಯ ನಿರ್ಣಯವ ನಾನೇನೆಂಬೆ ಗುಹೇಶ್ವರಾ?

ಟೀಕು.— ಪೂರ್ವಸಂಸ್ಕಾರ ಕರ್ಮವಳಿದು, ಶಿವಸಂಸ್ಕಾರಿಯಾದ

ಒಬ್ಬ ಶರಣನು ತನ್ನ ಪೂರ್ವಾಪರವ ವಿಚಾರಿಸಿ ನೋಡಲು ತಾನು ಅನಾದಿ ಸಂಸಿದ್ಧವಹ ಪರಶಿವನಲಾ ಎಂದು ಅರಿದನೆಂಬುದೀಗ ಹಳೆಗಾಲದಲೊಬ್ಬ ಪುರುಷನೆಂಬ ಶಬ್ದಾರ್ಥ. ಸದ್ವಿವೇಕ ಭಾಗೆಯಿಂ ಸದ್ವಾಸನಾಸ್ವರೂಪಿಯಪ್ಪ ಚಿತ್‌ಶಕ್ತಿಯುದಯವಾಗಲು, ಆ ಚಿತ್‌ಶಕ್ತಿ ಪ್ರಥಮವಿವೇಕ ಭಾಗೆಯಿಂ ಬಾಲ್ಯ ವಿವೇಕಿ ಎನಿಸಿಕೊಂಡ ಕಾರಣದಿಂ ಎಳೆಯ ಕರ್ನಿಕೆ ಎಂಬ ಶಬ್ದಾರ್ಥ. ಆ ಚಿತ್‌ಶಕ್ತಿಯನೂ ಆ ಶರಣಂಗೆ ಜ್ಞಾನವಿಷಯ ಸಂಗ ಒಂದೆ ಎಂದರಿದು, ಸತಿಪತಿಭಾವವ ಸಂಬಂಧಿಸುವಲ್ಲಿ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿ ಎಂಬ ಐವರು ಸಖಿಭಾವದಿಂ ತತ್ಸಂಬಂಧಕ್ಕೆ ಅನುಗುಣಂಗಳಾಗಿರಲು, ಕೆಳದಿಯರೈವರು ನಿಬ್ಬಣ ಬಂದರೆಂಬ ಶಬ್ದಕ್ಕರ್ಥ. ಆ ಸದಾಚಾರ ಸತ್ಕ್ರಿಯೆ ಎಂಬುದೇ ಆಧಾರ ಸ್ಥಲವಾಗಿಪ್ಪುದರಿಂ ಅದು ಹಸೆ ಎಂಬ ಶಬ್ದಾರ್ಥ. ಆ ಸತ್ಕ್ರಿಯಾಸಂಪತ್ತೆಂಬ ನೆಲಗಟ್ಟಿನ ಮೇಲೆ ಆ ಶರಣ ಸ್ವಸ್ಥವಾಗಿ ನಿಲ್ಲಲು ಆದೀಗ ಹಸೆಯ ಮೇಲೆ ಮದವಣಿಗನ ತಂದು ನಿಲಿಸಲೊಡನೆ ಎಂಬ ಶಬ್ದಾರ್ಥ. ಅಂತು ಕೃತನಿಶ್ಚಯದಿಂ ಸ್ವಸ್ಥ ಭಾವಿಯಾದ ತತ್‌ಶರಣನು ಆ ಶಕ್ತಿ ಕೈವಿಡಿದಳೆಂಬುದೀಗ ಶಶಿವದನೆ ಬಂದು ಕೈವಿಡಿದಳೆಂಬ ಶಬ್ದಕ್ಕರ್ಥ. ಆ ಚಿತ್ತಿನ ಸಂಗದಿಂ ಸಹಜ ಕ್ರಿಯಾಸಂಪನ್ನನಾಗಿರ್ಪ ಶರಗೆಂಣ ಉತ್ತರ ಕಕ್ಷವಪ್ಪ ಪರಾಶಕ್ತಿ ಮುಂದುದೋರುತ್ತಿರಲು, ಮತ್ತಂ ಭಕ್ತಿಯೊಳು ಅತ್ಯಂತ ಅರ್ಥವಿಶೇಷವಾಗಿ ಇರ್ದನು. ಆ ಅರ್ಥಕ್ಕೆ ಪಂಚಶಕ್ತಿಯರೆಲ್ಲರೂ ಸದ್ಭಕ್ತಿ ವಿವೇಕದೊಳು ಸಂಗಿಗಳಾದರೆಂಬುದೀಗ ಮೇಲುದಾಯದಲೊಬ್ಬ ಸತಿ ಕಣ್ಣುಸನ್ನೆಯ ಮಾಡುತ್ತಿರಲು ಕೂಡೆ ಬಂದ ನಿಬ್ಬಣಗಿತ್ತಿಯರೆಲ್ಲ ಹೇಂಡಿರಾದರೆಂಬ ಶಬ್ದಕ್ಕರ್ಥ. ಇಂತಪ್ಪ ಶಿವತತ್ವವ ಕಂಡಿಹೆನೆಂಬ ಶರಣಂಗೆ ಆ ವಸ್ತು ಸಮೀಪಸ್ಥವಾಗಿಹ ಕಾರಣ ದೂರವಿಲ್ಲದ ಗಮನವೆಂಬ ಶಬ್ದಕ್ಕರ್ಥ. ಇಂತು ಸಮೀಪಸ್ಥವಾಗಿಪ್ಪ ನಿಜವನರಿವುದಕ್ಕೆ ಸತ್ಪಥ ಅನೇಕವಾಗಿರ್ಪುದೆಂಬುದನರಿದು ಆಚರಿಸಲು ಅದು ದೂರವಿಲ್ಲದ ಗಮನಕ್ಕೆ ದಾರಿಯ ಪಯಣ ಹಲವಾಯಿತ್ತು, ಸಾರಾಯ ನಿರ್ಣಯವನೇನೆಂಬೆನೆಂಬ ವಚನಾರ್ಥ.

೮೭. ದೇವ ಕಂಡಾ. ಭಕ್ತ ಕಂಡಾ. ಮರಳಿ ಮರಳಿ ಶರಣೆಂಬ ಕಂಡಾ. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಸಾವನ್ನಕ್ಕರ ಸರಸ ಉಂಟೇ ಗುಹೇಶ್ವರಾ?



ಟೀಕು:— ದೇವನು ಭಕ್ತನು ಎಂಬ ಉಭಯನಾಮವಿಡಿದು ಚರಿಸಿ, ತಾವೆ ಶಿವತತ್ವವೆಂದರಿದು ಸಹಜ ಭಕ್ತಿಯ ಮಾಡುತ್ತಿಹುದು ಕ್ರಮವಲ್ಲದೆ, ಈ ಭೇದವನರಿಯದೆ ಭಿನ್ನ ವಿವೇಕದಿಂ ಮಾಡುವ ಜಡ ಕ್ರಿಯಾ ಕರ್ಮಭಕ್ತಿ ಲಿಂಗವ ಮುಟ್ಟಲರಿಯದೆಂಬುದೀ ವಚನದ ತಾತ್ಪರ್ಯಾರ್ಥ.

೮೮ ಮುಂದು ಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತ ಸಮಯದಲ್ಲಿ ಸದ್ಭಕ್ತರ ಮುಖವ ನೋಡುವುದು. ಹುಟ್ಟಿದುದಕ್ಕಿದೆ ಸಫಲ ನೋಡಾ! ಸತ್ಯವಚನವಿಂತೆಂದುದು. ಇದಿಲ್ಲದವರ ಕಂಡಡೆ ನಾನೊಲ್ಲೆ ಗುಹೇಶ್ವರಾ.

ಟೀಕು:— ಉದಯಕಾಲದಲೆದ್ದು ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿ, ಸದ್ಭಕ್ತ ಶರಣರುಗಳಿಗೆರಗಿ ದಾಸೋಹವ ಮಾಡುವದೆ ಕ್ರಮ, ಅದೇ ಸದ್ಭಕ್ತಿ. ಈ ಕ್ರಮವನರಿಯದೆ ಮಾಡುವುದೆಲ್ಲವು ದುಶ್ಚರಿಯವೆನಿಸುವದೀಗ ಈ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೮೯. ಉಲುಹಿನ ವೃಕ್ಷದ ನೆಳಲಡಿಯಲಿರ್ದ್ದ, ಗಲಭೆಯನೊಲ್ಲೆನೆಂಬುದೆಂತಯ್ಯಾ! ಪಟ್ಟದ ರಾಣಿಯ ಮುಖವ ಮುದ್ರಿಸಿ, ಮೆಟ್ಟಿ ನಡೆವ ಸತಿಯ ಶಿರವ ಮೆಟ್ಟಿ ನಿಲುವ ಪರಿ ಎಂತಯ್ಯ. ಆದಿಯ ಹೆಂಡತಿಯನುಲ್ಲಂಘಿಸಿದ ಕಾರಣ, ಮೇದಿನಿಯ ಮೇಲೆ ನಿಲಬಾರದು. ಸಾಧಕರೆಲ್ಲರು ಮರುಳಾದುದ ಕಂಡು ನಾಚಿ ನಗುತಿರ್ದೆನು ಗುಹೇಶ್ವರಾ.

ಟೀಕು:—ಅಧೋಮುಖ ಶಾಖೋಪಶಾಖೆಗಳಿಂ ಶಿರಸ್ಸೆಂಬ ಮೂಲದಿಂದಿರ್ಪ ಶರೀರವೆಂಬ ವೃಕ್ಷ ಪ್ರಾಣವಾಯು ವಿಕಾರದಿಂ ಶಬ್ದಜಾಲಂಗಳನುಚ್ಚರಿಸುತ್ತಿರಲು, ಆ ಶರೀರವ ಮಾಯಾಚ್ಛಾಯದೊಳಿರ್ದು ಶಬ್ದ ಮುಗ್ಧನಾದಿಹೆನೆಂದೊಡೆ, ಆ ಪರವು ಸಾಧ್ಯವಾಗದೆಂಬುದೀಗ, ಉಲುಹಿನ ವೃಕ್ಷದ ನೆಳಲಡಿಯಲ್ಲಿರ್ದು ಗಲಭೆಯನೊಲ್ಲೆನೆಂಬುದೆಂತಯ್ಯ ಎಂಬ ಶಬ್ದಕ್ಕರ್ಥ. ಭಕ್ತಿ, ಜ್ಞಾನ, ವೈರಾಗ್ಯ ಮುಖ್ಯವಾದ ಸಕಲ ಕ್ರಿಯಗಳೆಲ್ಲಕ್ಕೂ ಇಚ್ಛೈಸುವುದೆ ಮುನ್ನ ಅದೆಂತೆಂದಡೆ, ಇಚ್ಛೆ ಇಲ್ಲದೆ, ಆವುದು ಸಾಧ್ಯವಾಗದಾಗಿ, ಅದು ಕಾರಣ ಗುರುಕಾರುಣ್ಯ ಪಟ್ಟವ ಕಟ್ಟುವ ಕಾಲದಲ್ಲಿ ಇಚ್ಛಾಶಕ್ತಿಯ ಸಂಗ ಮುನ್ನವಾದ ಕಾರಣ, ಇಚ್ಛಾಶಕ್ತಿಗೆ ಪಟ್ಟದ ರಾಣಿವಾಸವೆಂಬ ನಾಮವಾಯಿತ್ತು. ಅಂತಪ್ಪ ಇಚ್ಛಾಶಕ್ತಿಯಲ್ಲಿ ಶ್ರದ್ಧೆ

ಇಲ್ಲದೆ, ಇಚ್ಛೆಯ ಮುಖವ ಮುದ್ರಿಸಿಪ್ಪುದರಿಂ ಪಟ್ಟದ ರಾಣಿವಾಸದ ಮುಖವ ಮುದ್ರಿಸಿ ಎಂಬ ಶಬ್ದಕ್ಕರ್ಥ. ಆ ಸತ್ಕ್ರಿಯಾವರ್ತನೆಯಲ್ಲಿ ವರ್ತಿಸಿ, ಚರಿಸುತ್ತಿರ್ಪುದರಿಂ ಕ್ರಿಯಾಶಕ್ತಿಗೆ ನಡೆವ ಸತಿ ಎಂಬ ನಾಮವಾಯಿತ್ತು. ಆ ಕ್ರಿಯಾಶಕ್ತಿಯ ವಿವೇಕದ ಮೇಲೆ ಸ್ವಸ್ಥನಾಗಿರಬೇಕೆಂಬುದೀಗ ಮೆಟ್ಟಿ ನಡೆವ ಸತಿಯ ನೆತ್ತಿಯ ಮೇಲೆ ನಿಲ್ಲುವ ಪರಿ ಎಂತಯ್ಯ ಎಂಬ ಶಬ್ದಕ್ಕರ್ಥ. ಜ್ಞಾನಶಕ್ತಿ ಎಂಬ ಸ್ತ್ರೀ ಶರಣಂಗೆ ಆದಿಯಿಂದ ಉಳ್ಳ ಸತಿಯಾದ ಕಾರಣ, ಆ ಜ್ಞಾನಶಕ್ತಿಯ ಸಂಗ ಹಿಂಗಲು ಅಜ್ಞಾನವರ್ತನೆ ಎಡೆಗೊಂಡು ಮಾಡುವ ಕ್ರಿಗಳೆಲ್ಲವು ಅಜ್ಞಾನ ಕ್ರಿಗಳಾಗಿ ಜಡಭಾವವನೆಯ್ದಲು ಭಕ್ತಿಸ್ಥಲದ ಮೇಲೆ ಚರಿಯಿಸಬಾರದೆಂಬುದೀಗ, ಆದಿಯ ಹೆಂಡತಿಯನುಲ್ಲಂಘಿಸಿದ ಕಾರಣ ಮೇದಿನಿಯ ಮೇಲಿನ್ನು ಇರಬಾರದೆಂಬ ಶಬ್ದಕ್ಕರ್ಥ. ಇಂತು ಕ್ರಮವನರಿಯದೆ, ಭ್ರಮೆಯಳಿಯದೆ, ಮಾಡುವ ಭಕ್ತಿ ಎಲ್ಲವು ಹಾಸ್ಯಕ್ಕೊಳಗಾಯಿತ್ತೆಂಬುದೀಗ, ಸಾಧಕರೆಲ್ಲರು ಮರುಳಾದುದ ಕಂಡು ನಾಚಿ ನಗುತ್ತಿರ್ದೆನೆಂಬ ಶಬ್ದಕ್ಕರ್ಥ.

೯೦ ಆಚಾರವನರಿಯದೆ, ವಿಭವವಳಿಯದೆ, ಕೋಪವಡಗದೆ, ತಾಪಮುರಿಯದೆ, ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ ನಾನು ಮರುಗುವೆ ಕಾಣಾ ಗುಹೇಶ್ವರಾ.

ಟೀಕು:—ಅಂಗದ ಮೇಲೆ ಆಚಾರ ಸ್ವಾಯತವಾಗದೆ ತನುಗುಣಾದಿಗಳಡಗದೆ, ಬರಿದೆ ನಾನು ಭಕ್ತನೆಂಬ ವಿಕಳತೆಯ ನುಡಿ ಪ್ರಯೋಜನವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೯೧. ಆಸೆಗೆ ಸತ್ತುದು ಕೋಟಿ. ಆಮಿಷಕ್ಕೆ ಸತ್ತುದು ಕೋಟಿ. ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ. ಗುಹೇಶ್ವರಾ ನಿನಗಾಗಿ ಸತ್ತವರನಾರನು ಕಾಣೆ.

ಟೀಕು:—ಆಸೆಯಾಮಿಷ ಹೊನ್ನು, ಹೆಣ್ಣು, ಮಣ್ಣೆಂಬ ದುರಾಶೆಯಲ್ಲಿ ಪಾಶಾಬದ್ಧರಾಗಿ, ಅಳಿದು ಹೋಗುತ್ತಿರ್ದವರು ಸಂಪೂರ್ಣ ಸುಲಭ ಸದ್ಭಕ್ತಿಯಲ್ಲಿ ಕೃತನಿಶ್ಚಯವಾಗಿ ಲಿಂಗತತ್ವದೊಳು ಲೀಯವಪ್ಪವರಾರು ಇಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೯೨. ಆದಿಯಲ್ಲಿ ಬಸವಣ್ಣನುತ್ಪತ್ತ್ಯವಾದ ಕಾರಣ ನಾಗಲೋಕದ ನಾಗಗಣಂಗಳಿಗೆಯೂ ಬಸವಣ್ಣನ ಪ್ರಸಾದ. ಮರ್ತ್ಯಲೋಕದ ಮಹಾಗಣಂ



ಗಳಿಗೆಯೂ ಬಸವಣ್ಣನ ಪ್ರಸಾದ. ದೇವಲೋಕದ ದೇವಗಣಂಗಳಿಗೆಯೂ ಬಸವಣ್ಣನ ಪ್ರಸಾದ. ಗುಹೇಶ್ವರಾ ನಿಮ್ಮಾಣೆ. ಎನಗೆಯೂ, ನಿನಗೆಯೂ, ಬಸವಣ್ಣನ ಪ್ರಸಾದ.

ಟೀಕು:— ಸಮಸ್ತ ವಿಶ್ವಕ್ಕೆ ಚಿತ್‌ಶಕ್ತಿಯೇ ಉದಯಸ್ಥಾನ, ಆಧಾರಸ್ಥಾನ, ವಿಶ್ರಾಂತಿಸ್ಥಾನವಾದ ಕಾರಣ, ಆ ಚಿತ್‌ಶಕ್ತಿಯೇ ಬಸವಣ್ಣನೆಂಬ ರೂಪ ಕೈಕೊಂಡ ಕಾರಣ ಸಮಸ್ತ ವಿಶ್ವವೆಲ್ಲವು ಬಸವಣ್ಣನೊಳಗಡಗಿರ್ಪವಾಗಿ ವಿಶ್ವವೆಲ್ಲಕ್ಕೆಯೂ ಬಸವಣ್ಣನ ಕರುಣ ಪ್ರಸಾದವಲ್ಲದಿಲ್ಲ. ಮಹಾಲಿಂಗವು ಬಸವಣ್ಣನ ಭಕ್ತಿ ಸವಿಯೊಳಗೆ ಸನ್ನಿಹಿತವಾಗಿರ್ಪುದಾಗಿ ಆ ಮಹಾಲಿಂಗಕ್ಕೂ ಆ ಲಿಂಗವೇದಿಗಳಾಗಿರ್ಪ ಶಿವಶರಣರಿಗೂ ಬಸವಣ್ಣನ ಪ್ರಸಾದವಲ್ಲದಿಲ್ಲವೆಂಬುದೀಗ ಈ ವಚನಾರ್ಥ.

೯೩. ಕಬ್ಬುನದ ಗುಂಡಿಗೆಯಲ್ಲಿ ರಸದ ಭಂಡವ ತುಂಬಿ, ಹೊನ್ನ ಮಾಡಬಲ್ಲಡೆ, ಅದು ಪರುಷ ಕಾಣಿರಣ್ಣಾ! ಲಿಂಗ ಬಂದುಂಬಡೆ ಪ್ರಸಾದ ಕಾಯವಪ್ಪೊಡೆ ಅಂದಂದಿಂಗೆ ಭವಕರ್ಮ ಮುಟ್ಟಲಮ್ಮವು ಕಾಣಿರೆ. ಆದಿಯ ಪ್ರಸಾದಕ್ಕೆ ಬಾಧೆ ಇಲ್ಲ ಕಾಣಿರೆ. ಶಶಿಯಲ್ಲಿ ಕರಗದು. ಬಿಸಿಲಲ್ಲಿ ಕೊರಗದು ರಸಉಂಡ ಹೊನ್ನು ಗುಹೇಶ್ವರಾ ನಿಮ್ಮ ಶರಣಾ.

ಟೀಕು:— ಅವ ಲೋಹವ ಕರಡಿಗೆಯೊಳಗೆ ಸಿದ್ಧರಸದ ಭಂಡವ ತುಂಬಿ, ಹೊನ್ನ ಮಾಡುವಂತೆ ಎಂಬುದೀಗ ಕಬ್ಬುನದ ಗುಂಡಿಗೆಯಲ್ಲಿ ರಸದ ಭಂಡವ ತುಂಬಿ ಹೊನ್ನ ಮಾಡಬಲ್ಲಡೆ, ಅದು ಪರುಷ ಕಾಣಿರಣ್ಣಾ ಎಂಬ ಶಬ್ದಕ್ಕರ್ಥ. ಸರ್ವಾಂಗ ಸುಖವನು ಲಿಂಗಗ್ರಾಹಕತ್ವಮಂ ಮಾಡಲು ಎಂಬುದೀಗ ಲಿಂಗ ಬಂದುಂಬಡೆ ಎಂಬ ಶಬ್ದಕ್ಕರ್ಥ. ಆ ಲಿಂಗಗ್ರಾಹಕತ್ವದಿಂ ಅಲ್ಲಿ ಪ್ರಸಾದ ನಿಕ್ಷೇಪವಪ್ಪುದು. ಆ ಪ್ರಸಾದ ನಿಕ್ಷೇಪದಿಂ ತನ್ನ ದೇಹ ಮನ ಪ್ರಾಣೇಂದ್ರಿಯಂಗಳು ಸಹಿತ, ಪ್ರಸಾದ ಕಾಯವಾಗಿ, ಭವಚ್ಛೇದನವಪ್ಪುದೆಂಬುದೀಗ ಪ್ರಸಾದ ಕಾಯವಪ್ಪಡೆ, ಅಂದಂದಿಂಗೆ ಭವಕರ್ಮ ಮುಟ್ಟಲಮ್ಮವು ನೋಡಿರೆ ಎಂಬ ಶಬ್ದಾನ್ವಯ. ಅಂತಪ್ಪ ಪ್ರಸಾದವೆ ಅನಾದಿ ಸಂಸಿದ್ಧ ಪ್ರಸಾದವೆಂಬುದೀಗ ಆದಿಯ ಪ್ರಸಾದಕ್ಕೆ ಬಾಧೆ ಇಲ್ಲ ಕಾಣಿರೆ ಎಂಬ ಶಬ್ದಕ್ಕರ್ಥ. ಅಂತಪ್ಪ ಪ್ರಸಾದ ಕಾಯ ಚಂದ್ರ ಸೂರ್ಯರ ಪ್ರಭೆಯೊಳಗೆ ಸಿಲ್ಕದೆ ಸಿದ್ಧರಸ ಉಂಡ ಮಿಸುನಿಯಂತಿರ್ಪುದೆಂಬುದೀಗ, ಶಶಿಯಲ್ಲಿ ಕರಗದು, ಬಿಸಿಲಲ್ಲಿ ಕೊರಗದು, ರಸ ಉಂಡ ಹೊನ್ನು ಗುಹೇಶ್ವರಾ ನಿಮ್ಮ ಪ್ರಸಾದ ಎಂಬ ಶಬ್ದಕ್ಕರ್ಥ.

೯೪. ನಚ್ಚುಮಚ್ಚಿನ ಲಿಂಗವ ಗ್ರಹಿಸಿ, ಮಚ್ಚು ಒಳಕೊಂಡಿತ್ತಯ್ಯ. ಕರ್ಪುರದ ಕರಡಿಗೆಯು ಗಾಸಿಮಾಡಿದಂತಾಯಿತ್ತು. ಲಿಂಗಾನುಭಾವಿಗಳ ಸಂಗದಿಂದಾನು ಕಣ್ದೆರೆದೆನು ಕಾಣಾ ಗುಹೇಶ್ವರಾ.

ಟೀಕು:— ಅಂಗದ ಮೇಲೆ ಲಿಂಗವ ಧರಿಸಿ, ಆ ಲಿಂಗವನು ಲೋಲುಪ್ತಿಯಿಂದ ಗ್ರಹಿಸುತ್ತಿರಲು, ಶರಣರ ಸಂಸರ್ಗದಿಂದ ಲಿಂಗವು ಪ್ರಾಣವು ಒಂದಹ ಅನುಭಾವಗ್ರಾಹಕವಾಗಲು, ಮಹಾ ವಿವೇಕದೊಳಗೆ ಹೃದಯ ಮಥನವಾಗಿ, ಪ್ರಾಣಲಿಂಗ ಸಂಬಂಧ ಕಂದೆರವಾಯಿತ್ತು. ಎಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೯೫. ಹೃದಯ ಕಮಲದೊಳಗೊಂದು ಮರಿದುಂಬಿ ಹುಟ್ಟಿತ್ತು. ಹಾರಿ ಹೋಗಿ, ಆಕಾಶವ ನುಂಗಿತ್ತಯ್ಯಾ! ಆ ತುಂಬಿಯ ಗರಿಯ ಗಾಳಿಯಲ್ಲಿ ಮೂರುಲೋಕವೆಲ್ಲವು ತಲೆ ಕೆಳಗಾಯಿತ್ತು. ಪಂಚವರ್ಣದ ಹಂಸೆ, ಪಂಜರವ ಖಂಡಿಸಿದರೆ ಗರಿ ಮುರಿದು ತುಂಬಿ ನೆಲಕ್ಕೆ ಉರುಳಿತ್ತು. ನಿಜದುದಯದ ಬೆಡಗಿನ ಕೀಲ ಗುಹೇಶ್ವರಾ ನಿಮ್ಮ ಶರಣರನುಭಾವ ಸಂಗದಲ್ಲಿರ್ದು ಕಂಡೆನಯ್ಯಾ.

ಟೀಕು:— ಹೃತ್ಕಮಲ ಕರ್ಣಿಕಾ ಕುಹರ ಮಧ್ಯದಲ್ಲಿ ಅಜ್ಞಾನತಮೋವರ್ಣದಿಂ ಭ್ರಮೆ ಯುಕ್ತದಿಂ ಭ್ರಮರ ನಾಮದಿಂದುದಯಿಸಲು, ಅದೀಗ, ಹೃತ್ಕಮಲದಲ್ಲಿ ಒಂದು ಮರಿದುಂಬಿ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಅಜ್ಞಾನ ಆತ್ಮತತ್ವವನಾವರ್ತಿಸಿದ ತಮೋ ವಿವರ್ಧತ್ವಮಂ ಪುಟ್ಟಿಸಲು, ಅದು ಹಾರಿ ಹೋಗಿ ಆಕಾಶವ ನುಂಗಿತ್ತೆಂಬ ಶಬ್ದಕ್ಕರ್ಥ. ಆ ಅಜ್ಞಾನ ಭ್ರಮರನ ಪ್ರಪಂಚಕ್ರೀಡೆಯಿಂ ಜಗವೆಲ್ಲವು ಮರವೆಯನೆಯ್ದಿತ್ತೆಂಬುದೀಗ, ಆ ತುಂಬಿಯ ಗರಿಯ ಗಾಳಿಯಲ್ಲಿ ಮೂರುಲೋಕವೆಲ್ಲವು ತಲೆ ಕೆಳಗಾಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಅಜ್ಞಾನ ಭ್ರಮೆಯ ಕೆಡಿಸುವ ಪರಿ ಎಂತೆಂದಡೆ, ಪಂಚೀಕರಣಂಗಳ ವರ್ಣ ಧರ್ಮಂಗಳನುಳ್ಳ ಜೀವಹಂಸನ ಆಶ್ರಯವೆನಿಸುವ ಪಿಂಡಮಂ ಅನಿತ್ಯವೆಂದರಿದು ಸದ್ವಿವೇಕದಿಂ ಖಂಡಿಸಲು, ಎಂಬುದೀಗ ಪಂಚವರ್ಣದ ಹಂಸೆಯು ಪಂಜರವ ಖಂಡಿಸಿದರೆ ಎಂಬ ಶಬ್ದಕ್ಕರ್ಥ. ಇಂತು ಶರಣನು ಅನುಭಾವ ಮುಖದಿಂ ಶರೀರಭಾವಮಂ ಖಂಡಿಸಲು, ಆ ಅಜ್ಞಾನ ಭ್ರಮರನ ಪ್ರಪಂಚೆಂಬ ರೆಕ್ಕೆಗಳು ಲೋಪವಾಗಿ, ಆತನು ಮಧ್ಯದಲ್ಲಿ ಲಯುವಾಯಿತ್ತೆಂಬುದೀಗ, ಆ ತುಂಬಿಯ ಗರಿ ಮುರಿದು ನೆಲಕ್ಕೆ ಬಿದ್ದವೆಂಬ ಶಬ್ದಕ್ಕರ್ಥ. ಇಂತು ಭ್ರಮೆಯುಳಿಯಲು, ನಿಜಸ್ವಯಂಭುವಪ್ಪ ಪರ



ತತ್ವದ ನಿಲವಿನ ಭೇದವ ಶಿವಶರಣರಪ್ಪ ಮಹಾನುಭಾವಿಗಳ ಸಂಗದಿಂದ ಕಂಡೆನೆಂಬುದೀಗ, ನಿಜದುದಯದ ಬೆಡಗಿನ ಕೀಲು ಗುಹೇಶ್ವರಾ ನಿಮ್ಮ ಶರಣರ ಅನುಭಾವ ಸಂಗದಲ್ಲಿರ್ದು ಕಂಡೆನಯ್ಯಾ ಎಂಬ ಶಬ್ದಕ್ಕರ್ಥ.

೯೬. ಲಿಂಗವನು ಪ್ರಾಣವನು ಒಂದು ಮಾಡಿ ತೋರಿದ ಗುರುವಿರ್ದನಲ್ಲಾ! ಲಿಂಗವಿರ್ದನಲ್ಲಾ. ಇದಕ್ಕೆ ಸಾಕ್ಷಿ. ಮುಂದೆ ಜಂಗಮವಿರ್ದನಲ್ಲಾ! ಈ ತ್ರಿವಿಧ ದೃಷ್ಟವ ಕಂಡು ಬೇರೆಂಬ ಅಜ್ಞಾನಕ್ಕೆ ನಾನು ಬೆರಗಾದೆನು ಗುಹೇಶ್ವರಾ.

ಟೀಕು.— ಲಿಂಗದಲ್ಲಿ ಪ್ರಾಣಗುಣವಳಿದು ಲಿಂಗಗುಣ ಉಳಿದರೆ ಅದೀಗ ಪ್ರಾಣಲಿಂಗ ಸಂಬಂಧ. ಇಂತಪ್ಪ ಪ್ರಾಣಲಿಂಗ ಸಂಬಂಧವ ಶ್ರೀಗುರು ಬೋಧೆಯಿಂದ ಕರಸ್ಥಲದ ಇಷ್ಟಲಿಂಗ ದರ್ಶನ ವಿವೇಕದಿಂದ ಜಂಗಮಲಿಂಗದ ಶಿಕ್ಷಾಬೋಧೆಯಿಂದ ಕಾಣಬಂದಿತ್ತೆಂಬುದೀಗ ದೃಷ್ಟ. ಇದಲ್ಲದೆ ಬೇರೆ ಬೇರೆ ಅನ್ಯಪದವಿಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೯೭. ಕಬ್ಬಿನ ಬಿಲ್ಲ ಮಾಡಿ, ಪರಿಮಳದಲ್ಲಿ ಅಂಬ ಮಾಡಿ, ನಿಲ್ಲೊ ಬಲ್ಲಾಳೆ. ಎನ್ನ ಮನದಲ್ಲಿ ಎಸೆಯ ಬಲ್ಲೆಯಲ್ಲಾ ಗುಹೇಶ್ವರನೆಂಬ ಲಿಂಗವ.

ಟೀಕು:— ಲಿಂಗದ ಮೇಲಣ ರತಿ ಮನ ಪ್ರವೇಶಿತವಾಗಿ, ಶರಣನೆಂಬ ಸತಿ, ಆ ಲಿಂಗ ಸಂಗದ ಸಮರಸವನು ಅತ್ಯಂತ ಶ್ರದ್ಧೆಯಿಂದ ಬಯಸಿ, ಕಾಮಾತುರೆಯಾಗಿದ್ದಳೆಂಬುದೀ ವಚನದ ತಾತ್ಪರ್ಯಾರ್ಥ.

೯೮. ಕಂಗಳೇಕೆ ನೋಡಬೇಡವೆಂದರೆ ಮಾಣವು. ಶ್ರೋತ್ರಂಗಳೇಕೆ ಆಲಿಸಬೇಡವೆಂದಡೆ ಮಾಣವು. ಜಿಹ್ವೆ ಏಕೆ ರುಚಿಸಬೇಡವೆಂದಡೆ ಮಾಣವು. ನಾಸಿಕವೇಕೆ ವಾಸಿಸಬೇಡವೆಂದಡೆ ಮಾಣವು. ತ್ವಕ್ಕೇಕೆ ಸೋಂಕಬೇಡವೆಂದಡೆ ಮಾಣವು. ಈ ಭೇದವನರಿದು ನುಡಿಯಲು, ಸಮಧಾತುವಾಯಿತ್ತು. ಗುಹೇಶ್ವರ ಲಿಂಗಕ್ಕೆ ಒಲಿದ ಕಾರಣ ಅಭಿಮಾನ ಲಜ್ಜೆ ಬೇಸತ್ತು ಹೋಯಿತ್ತು.

ಟೀಕು:— ಪಂಚೇಂದ್ರಿಯಂಗಳು ತಮ್ಮ ತಮ್ಮ ಸ್ವಗುಣ ಧರ್ಮಂಗಳ ಬೇಡೆಂದಡೆ ಬಿಡವು. ಅದುಕಾರಣ ಪಂಚೇಂದ್ರಿಯಂಗಳ ತೊರೆದು ಲಿಂಗ ಸಂಗವ ಮಾಡಬಾರದು. ಮತ್ತೆಂತೆಂದಡೆ ಆ ಪಂಚೇಂದ್ರಿಯಂಗಳ

ಸುಖವನೆ ಲಿಂಗದೊಳಗೆ ವೇಧಿಸಿ ಸಾಮರಸ್ಯವ ಮಾಡಿಕೊಳ್ಳಲು, ದೇಹೇಂದ್ರಿಯಾದಿ ಅಭಿಮಾನಂಗಳು ಲಯವಪ್ಪವೆಂಬುದೀ ವಚನದ ಬಹು ಶಬ್ದೈಕ್ಯೇಕಾರ್ಥ ನಿರ್ವಚನ.

೯೯. ಬಿಸುಜಂತೆ ಜವಳಿಗಂಭ ಲೇಸಾಯಿತ್ತು. ಮನ ಲೇಸಾಯಿತ್ತು. ಮೇಲುವೊದಕೆ ಮಗುಳೆ ಆ ಅಂಗಕ್ಕೆ ಕಿಚ್ಚನಿಕ್ಕಿ ಸುಟ್ಟು ಮನೆಯ ನಿಂಬು ಮಾಡುವೆ. ಲಿಂಗಜಂಗಮಕ್ಕೆ ಹುಟ್ಟುಗೆಟ್ಟು ಬಟ್ಟ ಬಯಲಲ್ಲಿ ನಾನಿದೇನೆ ಗುಹೇಶ್ವರಾ.

ಟೀಕು:-- ಸಕಲ ಕ್ರಿಯೆಗಳೆಲ್ಲವು ಬಿಸುಜಂತೆಯಾಗಿ ಲಿಂಗನಿಷ್ಠೆಯು. ಭಾವವು ಆ ಕ್ರಿಯೆಗಳೆಲ್ಲಕ್ಕೆಯು ಆಧಾರವಾದ ಕಾರಣ ಬಿಸುಜಂತೆ ಜವಳಿಗಂಭವೆಂಬ ಶಬ್ದಕ್ಕರ್ಥ. ಆಚಾರವೆಂಬ ಮೇಲುವೊದಕೆ ಆವರಿಸಲು ಅದೀಗ ಮೇಲುವೊದಕೆ ಎಂಬ ಶಬ್ದಕ್ಕರ್ಥ. ಇಂತು ಲಿಂಗಕ್ಕೆ ಭಕ್ತನು ತನ್ನ ತನುವೆಂಬ ಗ್ರಹವನಿಂಬು ಮಾಡಿದನಾಗಿ, ಮತ್ತಾ ಕ್ರಿಗಳ ಜ್ಞಾನಾಗ್ನಿಯಿಂ ದಹಿಸಿ, ಸುಜ್ಞಾನ ಕ್ರಿಗಳ ಮಾಡಿ. ಆ ಲಿಂಗ ನಿಷ್ಠೆಯನು ಭಾವವನು ಜ್ಞಾನಾಗ್ನಿಯಿಂ ದಹಿಸಿ, ಮಹಾಜ್ಞಾನ ನಿಷ್ಠೆಯ ಮಹಾಜ್ಞಾನ ನಿರ್ಭರವಮಂ ಮಾಡಿ, ಮೇಲುವೊದಕೆ ಎಂಬ ಆಚಾರಮಂ ಜ್ಞಾನಾಗ್ನಿಯಿಂ ದಹಿಸಿ, ಜ್ಞಾನಾಚಾರವಂ ಮಾಡಿ, ಇಂತು ಸರ್ವಾಚಾರ ಸಂಪತ್ತು ವಿಡಿದ ಶರಣನ ತನುವೆಂಬ ಗ್ರಹಮಂ ಸುಜ್ಞಾನ ಗ್ರಹಮಂ ಮಾಡಿ, ಮಹಾಲಿಂಗಕ್ಕೆ ಇಂಬು ಮಾಡಿದನೆಂಬುದೀಗ ಮಗುಳೆ ಆ ಅಂಗಕ್ಕೆ ಕಿಚ್ಚನಿಕ್ಕಿ ಸುಟ್ಟು ಮನೆಯನಿಂಬು ಮಾಡಿದೆನೆಂಬ ಶಬ್ದಕ್ಕರ್ಥ. ಇಂತಾದ ಶರಣನ ತನುಮನಪ್ರಾಣಭಾವಂಗಳಳಿದು ಭವಂ ನಾಸ್ತಿಯಾಗಿ ಸದ್ಯನ್ಮುಕ್ತನಾದನೆಂಬುದೀಗ ಹುಟ್ಟುಗೆಟ್ಟು ಬಟ್ಟ ಬಯಲಲ್ಲಿ ನಾನಿದ್ದೇನೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೦೦ ತನು ತರತರಂಬೋಗಿ, ಮನವು ನಿಮ್ಮಲ್ಲಿ ಸಿಲುಕಿತ್ತಯ್ಯ. ನೋಟವೇ ಪ್ರಾಣವಾಗಿ ಆಪ್ಯಾಯನ ನಿಮ್ಮಲ್ಲಿ ಅರತುದಯ್ಯ. ಸಿಲುಕಿತ್ತು ಶೂನ್ಯದೊಳಗೆ. ಗುಹೇಶ್ವರ ನಿರಾಳವಯ್ಯಾ.

ಟೀಕು:— ಮಹಾಲಿಂಗದ ಮೂರ್ತಿ ಇಷ್ಟಲಿಂಗವಾಗಿ ಕರಸ್ಥಲಕ್ಕೆ ಬರಲು, ಆ ಲಿಂಗನಿಷ್ಠೆಯ ನಿಬ್ಬರದ ತುರೀಯದಿಂದ ತನುವೆಂಬ ಭಾವ ಮರೆದು ಹೋಯಿತ್ತೆಂಬುದೀಗ, ತನು ತರತರಂಬೋಗಿ ಎಂಬ ಶಬ್ದಕ್ಕರ್ಥ. ಇಂತು ತನುವೆಂಬ ಭಾವ ನಷ್ಟವಾಗಲು, ಮನವಾ ಘನಲಿಂಗ ಧ್ಯಾನದೊಳಗೆ ಸಿಲುಕಿತ್ತೆಂಬುದೀಗ ಮನವು ನಿಮ್ಮಲ್ಲಿ ಸಿಲುಕಿತ್ತೆಂಬ ಶಬ್ದಕ್ಕರ್ಥ. ಇಂತು ಲಿಂಗಧ್ಯಾನದೊಳಗೆ ಮನ ಸಿಕ್ಕಿದ ಬಳಿಕ ನೋಡುವ ಕಂಗಳ ಮುಂದಣ ಮೂರ್ತಿ ಆ ಕಂಗಳೊಳಗೆ ಪರವಶವನೆಯ್ದಲು ನೋಟವೆ ಪ್ರಾಣವಾಗಿರ್ದಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಲಿಂಗದಲ್ಲಿ ಅವಿರಳ ಸಂಗಿಯಾದ ಶರಣನ ಸುಖಪ್ರಸನ್ನ ತನಗೆ ಅನ್ಯವಿಟ್ಟು ತೋರದೆ ಆ ಲಿಂಗದೊಳಗೆ ವಿಶ್ರಮಿಸಿತ್ತೆಂಬುದೀಗ, ಆಪ್ಯಾಯನ ನಿಮ್ಮಲ್ಲಿ ಅರತುದಯ್ಯಾ ಎಂಬ ಶಬ್ದಕ್ಕರ್ಥ. ಇಂತು ಅಂಗದಾಪ್ಯಾಯನವಳಿದು, ಲಿಂಗದಾಪ್ಯಾಯನವಾದ ಕಾರಣ ಸರ್ವಾಂಗವು ನಿರ್ವಯಲೊಳಗೆ ನಿಂದಿತ್ತೆಂಬುದೀಗ, ಸಿಲುಕಿತ್ತು ಶೂನ್ಯದೊಳಗೆ ಗುಹೇಶ್ವರ ನಿರಾಳವೆಂಬ ಶಬ್ದಕ್ಕರ್ಥ.

೧೦೧. ಮನ ಬಸುರಾದರೆ ಕೈ ಬೆಸಲಾಯಿತ್ತ ಕಂಡೆ. ಕರ್ಪುರದ ಕಂಪ ಕಿವಿ ಕುಡಿಯಿತ್ತ ಕಂಡೆ. ಮುತ್ತಿನ ಡಾಳವ ಮೂಗು ನುಂಗಿತ್ತ ಕಂಡೆ. ಕಂಗಳು ಹಸಿದು ವಜ್ರವ ನುಂಗಿತ್ತ ಕಂಡೆ. ಒಂದು ನಿಲದೊಳಗೆ ಮೂರು ಲೋಕವಡಗಿತ್ತ ಕಂಡೆ ಗುಹೇಶ್ವರಾ.

ಟೀಕು:-- ಕಾಷ್ಠದೊಳಗಂತರ್ಗತವಾದ ಅಗ್ನಿ ಮಥನದಿಂ ಬಹಿರ್ಗತ ಪ್ರಕಾಶವಾಗಿ ತೋರಿದಂತೆ, ಶರಣನ ಮನೋಮಧ್ಯದಲ್ಲಿರ್ಪ ಮಹಾಲಿಂಗದ ನಿಜವು ಗುರುಕಾರುಣ್ಯ ಮಹಾನುಭಾವ ಸಂಯೋಗದಿಂದ ಅಂತರಂಗದಿಂದುದಯಿಸಿ, ಬಹಿರ್ಗತವಾಗಿ, ಇಷ್ಟಲಿಂಗ ರೂಪಿಂ ಕರತಳಾಮಳಕವಾಗಿ ಕರಸ್ಥಲದಲ್ಲಿ ತೊಳಗಿ, ಬೆಳಗಿ, ತೋರುತ್ತಿರಲು, ಅದೀಗ ಮನ ಬಸುರಾದರೆ ಕೈ ಬೆಸಲಾಯಿತ್ತೆಂಬ ಶಬ್ದಕ್ಕರ್ಥ. ಕರ್ಪುರವೆಂದರೆ ಸ್ವಾನುಭಾವಕ್ಕೆ ಪೆಸರು. ಅದೆಂತೆಂದಡೆ ಕರ್ಪುರ ತಾನು ನಿರ್ಮಲತ್ವದಿಂ ಸುಗಂಧ ಸುರುಚಿ ಸುಶೈತ್ಯ ಸ್ವಾತ್ಮಹಿತ ಸಂಬಂಧ ಗುಣಂಗಳನುಳ್ಳ ಹಾಗೆ ಸ್ವಾನುಭಾವವೆಂಬುದು ನಿರ್ಮಲ ಗುಣದಿಂ ಸದ್ವಾಸನಾ ಸಂಬಂಧದಿಂ ಅಮೃತಕರವಪ್ಪ ರುಚಿಯಿಂ, ಪರಮಶಾಂತಿಯಿಂ ಶ್ರೋತ್ರಂಗಳ ಹೃದಯಕ್ಕೆ ಸ್ವಾತ್ಮ ಸಂಬಂಧದಿಂದಿನಿತು ಗುಣಂಗಳು ವರ್ತಿಸುತ್ತಿಪ್ಪವಾಗಿ ಆ ಕರ್ಪುರಕ್ಕೂ ಸ್ವಾನುಭಾವಕ್ಕೂ ಒಂದೇ ಸಾಮ್ಯ. ಇಂತಪ್ಪ ಸ್ವಾನುಭಾವ ಸದ್ವಾಸನಾ ಸಂಬಂಧದಿಂ ಬೋಧಾರಸವನು ಕರ್ಣದ್ವಾರದಿಂ ಸ್ವೀಕರಿಸುತ್ತಿರಲು ಅದೀಗ ಕರ್ಪುರದ ಕಂಪ, ಕಿವಿ ಕುಡಿಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಮುತ್ತಿಂಗೆ ಮುಕ್ತಿ ಎಂಬ ನಾಮ ಸಾಮ್ಯದಿಂ ಮುತ್ತಿಂಗೂ ಮುಕ್ತಿಗೂ, ಒಂದೇ ನಾಮ ಪ್ರವರ್ತಕವಾದ ಕಾರಣ ಮುತ್ತೆಂದಡೆ ಮುಕ್ತಿ ಎಂಬ

ಪರಿ, ಆ ಮುಕ್ತಿಯ ನಿರ್ಮಲ ಪ್ರಭೆಯನು ಎಂಬುದೀಗ ಮುತ್ತಿನ ಕಾಂತಿ
ಎಂಬ ಶಬ್ದಕ್ಕರ್ಥ. ನಾಸಿಕ ತಾನು ಸುಗಂಧ ವಾಸನಾ ವಿಷಯ ಸಂ
ಬಂಧರೂಪವಾದ ಕಾರಣ ಸದ್ವಾಸನೆ ಎಂಬುದು ಸ್ವಾನುಭಾವ ಗಂಧ
ಸ್ವರೂಪಾದ ಕಾರಣ ನಾಶಿಕವೆಂದಡೂ ಸದ್ವಾಸನೆ ಎಂದಡೂ ಒಂದೇ
ಸಾಮ್ಯವಾದ ಕಾರಣ ಆ ಮುಕ್ತಿಯ ನಿರ್ಮಲ ಪ್ರಭೆಯನು ಸ್ವಾನು
ಭಾವ ಸುಗಂಧವವಗ್ರಹಿಸಿತ್ತೆಂಬುದೀಗ ಮುತ್ತಿನ ಕಾಂತಿಯು ಮೂಗು
ನುಂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಕಂಗಳೆಂದರೆ ಸುಜ್ಞಾನ ದೃಷ್ಟಿ ಎಂಬ
ಪರಿ. ಅಂತಪ್ಪ ಸುಜ್ಞಾನ ದೃಷ್ಟಿಯೊಳಗೆ ಮಹಾಘನದ ಅರ್ಥವೆಡೆಗೊಂಡಿ
ರಲು ಅದೀಗ ಕಂಗಳು ಹಸಿದು ಎಂಬ ಶಬ್ದಕ್ಕರ್ಥ. ವಜ್ರವೆಂದಡೆಯೂ
ಶಿವತತ್ವವೆಂದಡೆಯೂ ಒಂದೇ ಸಾಮ್ಯ. ಅದೆಂತೆಂದಡೆ ವಜ್ರವತ್ಯಂತ
ನಿರ್ಮಲ ಪ್ರಭೆಯಾಗಿಯೂ ಆವುದಾನೊಂದರಿಂ ಭೇದಿಸಿಹೆನೆಂದಡೆಯೂ
ಭೇದ್ಯವಾಗದಾಗಿಯೂ, ವಿರಳವ ಮಾಡಿಹೆನೆಂದಡೆಯೂ ವಿರಳವಾಗದಾ
ಗಿಯೂ- ಉತ್ತಮ ರತ್ನವಾಗಿಯೂ ಆ ಶಿವತತ್ವವು ಆ ಹಾಗೆ ನಿರ್ಮಲ
ಪ್ರಭೆಯಾಗಿಯೂ ಅಭೇದ್ಯವಾಗಿಯೂ, ಅವಿರಳವಾಗಿಯೂ, ಅಭೇದ್ಯವಾ
ಗಿಯೂ, ಅನರ್ಘ್ಯವಾಗಿಯೂ, ಇಂತು ವಜ್ರಕ್ಕೂ ಶಿವತತ್ವಕ್ಕೂ ಒಂದೇ
ಸಾಮ್ಯವಾದ ಕಾರಣ ಆ ಸುಜ್ಞಾನದೃಷ್ಟಿಯು ಅರ್ಥವು ಆ ಶಿವತತ್ವವ
ನವಗ್ರಹಿಸಿತ್ತೆಂಬುದೀಗ ಕಂಗಳು ಹಸಿದು ವಜ್ರವ ನುಂಗಿತ್ತ ಕಂಡೆನೆಂಬ
ಶಬ್ದಕ್ಕರ್ಥ. ನೀಲವೆಂದಡೆ ಮಾಯೆ ಎಂಬ ಪರಿ. ಅದೆಂತೆಂದಡೆ ನೀಲ
ತಾನು ಕೃಷ್ಣವರ್ಣ ಸಂಬಂಧದಿಂ ತಾಮಸಾಂಶೀಭೂತ ಮಪ್ಪುದರಿಂ
ಮಾಯೆಯೂ ತಮೋರೂಪಿಂದಿರ್ಪುದರಿಂ ನೀಲವೆಂದಡೂ ಮಾಯೆ
ಎಂದಡೂ ಒಂದೇ ಸಾಮ್ಯ. ಅದು ಕಾರಣದಿಂ ಅಂತಪ್ಪ ಮಾಯೆಯ
ನಿಲವಿನೊಳಗೆ ತ್ರಿಜಗವಡಗಿತ್ತೆಂಬುದೀಗ ಒಂದು ನಿಲದೊಳಗೆ ಮೂರು
ಲೋಕವಡಗಿತ್ತ ಕಂಡೆನೆಂಬ ಶಬ್ದಕ್ಕರ್ಥ.

೧೦೨. ಕಾಲ ಸಡಗರ ಕೈಯ್ಯಲದೆ. ಕೈಯ್ಯ ಸಡಗರ ಕಂಗಳಲದೆ.
ಅದೇನು ಕಾರಣವೆಂದಡೆ ಕಂಗಳೆ ಕಾರಣವಾಗ ಒಂದು ಮಾತಿನೊಳಗೆ
ವಿಚಾರವದೆ. ಕನ್ನಡಿಯೊಳಗೆ ಕಾಯವದೆ. ಇದೇನು ಕಾರಣ ತಿಳಿಯಲರಿ
ಯರು ಹೇಳಾ ಗುಹೇಶ್ವರಾ.

ಟೀಕು:—ಗುರು ಕಾರುಣ್ಯ ಲಿಂಗ ಸ್ವಾಯತವುಳ್ಳ ಶಿವಶರಣಂಗೆ
ಸದಾಚಾರದ ಸಚ್ಚರಿಯವೆ ಚರಣವಾಗಿ, ಸತ್ಪಥವಲ್ಲಿ ಶಿವಲೀಲೆಯಿಂ ನಡೆ



ವುತ್ತಿರ್ಪುದೀಗ, ಕಾಲಸಡಗರವೆಂಬ ಶಬ್ದಕ್ಕರ್ಥ. ಅಂತಪ್ಪ ಸದಾಚಾರ
ಸಚ್ಚರಿಯಕ್ಕೆ ಕರ್ತೃ ಸ್ಥಾನವಾವುದೆಂದಡೆ ಇಷ್ಟಲಿಂಗವೆ ಆಚಾರಲಿಂಗ
ವಾದ ಕಾರಣ ಆ ಲಿಂಗಪ್ರವರ್ತನೆ ಕರಸ್ಥಲದಲ್ಲಿರ್ಪುವೆಂಬುದೀಗ, ಕಾಲ
ಸಡಗರ ಕೈಯ್ಯಲೆಲದೆ ಎಂಬ ಶಬ್ದಕ್ಕರ್ಥ. ಆ ಕರಸ್ಥಲದ ಲಿಂಗಕ್ಕೆ ನೋಟವೆ
ಆಶ್ರಯಸ್ಥಾನ. ಅದೆಂತೆಂದಡೆ, ಕೂಟಕ್ಕೆ ನೋಟವೆ ಕಾರಣವಾಗಿ ಎಂಬು
ದೀಗ ಕೆಯ್ಯ ಸಡಗರ ಕಂಗಳಲದೆ ಅದೇನು ಕಾರಣವೆಂದಡೆ ಕಂಗಳೇ
ಕಾರಣವಾಗಿ ಎಂಬ ಶಬ್ದಕ್ಕರ್ಥ. ಈ ಪಥವನರಿದು ನಿಜದಲ್ಲಿ ನಿಂದು ಆ
ಅರಿವನಿದಿರಿಂಗೆ ತೋರಿ ಮಾತನಾಡಿವಡೆ ತನ್ನ ಮಾತು ತನ್ನನಾಲಿಂಗಿಸಿ
ಕೊಂಬ ಹಾಂಗೆ ಮಾತನಾಡಲು ಅದು ಏಕವಾಕ್ಯ ಪ್ರತಿಷ್ಠೆ ಎನಿಸಿಕೊಂಡ
ಕಾರಣದಿಂ ಅದೀಗ ಒಂದು ಮಾತಿನೊಳಗೆ ವಿಚಾರವದೆ ಎಂಬ ಶಬ್ದಕ್ಕರ್ಥ.
ಕನ್ನಡಿಯ ನೋಡಲು ತನ್ನಿಂದ ಭಿನ್ನವಿಲ್ಲವೆಂಬುದ ತನ್ನ ತಾನಿದಿರಿಟ್ಟು
ನೋಡಿ ಕಂಡು ತನ್ನನರಿವುದೆ ಸದ್ವಿವೇಕವೆಂಬುದೀಗ ಕನ್ನಡಿಯೊಳು
ಕಾಯವದೆ ಎಂಬ ಶಬ್ದಕ್ಕರ್ಥ. ಇಂತಪ್ಪ ವಿವೇಕವ ತಿಳಿಯದವರು ಅಕ್ರ
ಮಿಗಳೆಂಬುದೀಗ ಇದೇನು ಕಾರಣ ತಿಳಿಯಲರಿಯರೆಂಬ ಶಬ್ದಕ್ಕರ್ಥ.

೧೦೩ ಅಮೃತಸಾಗರದೊಳಗಿರ್ದು, ಆಕಳ ಚಿಂತೆ ಏಕೆ? ಮೇರು ಮಂದಿ
ರದೊಳಗಿರ್ದು ಜರಗ ಲೋಕದ ಚಿಂತೆ ಏಕೆ? ಶ್ರೀ ಗುರುವಿನೊಳಗಿರ್ದು
ತತ್ವ ವಿದ್ಯೆಯ ಚಿಂತೆ ಏಕೆ? ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆ
ಏಕೆ? ಕರಸ್ಥಲದೊಳಗೆ, ಲಿಂಗವಿರ್ದ ಬಳಿಕ, ಮತ್ತಿನ್ನಾವ ಚಿಂತೆ ಏಕೆ
ಹೇಳಾ ಗುಹೇಶ್ವರಾ?

ಟೀಕು:— ಅಮೃತಶರಧಿಯೊಳಗಿರ್ದು, ಆ ಅಮೃತವನೆ ಸ್ವೀಕರಿಸಲ
ರಿಯದೆ, ಆಕಳ ಬಯಸುವದು ಅಜ್ಞಾನ. ಸುವರ್ಣದ ಗಿರಿಯಮೇಲಿರ್ದು,
ಆ ಸುವರ್ಣವನೆ ತೆಗೆದುಕೊಂಡು, ಬಳಸುವದಲ್ಲದೆ ಜರಗ ತೊಳೆದಿಹೆ
ನೆಂಬುದು ಅಜ್ಞಾನ. ತಾ ಬಯಸುವ ಮಹಾಲಿಂಗವೇ, ಗುರೂಪದೇಶದಿಂ
ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬಂದು ಕರತಳಾಮಳಕವಾಗಿರುತ್ತಿರಲು ಆ
ಲಿಂಗದಲ್ಲಿ ತಾನು ಸದ್ಯನ್ಮುಕ್ತನಹುದಲ್ಲದೆ ಬೇರೆ ಮುಕ್ತಿಯೆ ಬೇರೆ ಶಿವ
ತತ್ವ ಯೋಗಾಭ್ಯಾಸ ಮೊದಲಾದವರಿಂ ಬಳಲುವುದು ಅಜ್ಞಾನಭಾವವೆಂ
ಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೧೦೪. ಈಶ್ವರನನರಿದೆನೆಂದು ನುಡಿದು, ಬೇಸರವೋದರಣ್ಣಗಳೆಲ್ಲ ಪ್ರಾಣಲಿಂಗವೆ-ಬರಯ್ಯಾ! ಮನ ಘನವೆಂದರಿಯದೆ ಮರುಳುಗೊಂಡರು. ಈಶ್ವರನನರಿದಡೆ ತಾ ಶಿವನು. ಗುಹೇಶ್ವರನೆಂಬುದು ಜೇರಿಲ್ಲ.

ಟೀಕುಃ— ಶಿವತತ್ವವನರಿದೆವೆಂದು ನುಡಿವ ನುಡಿ ಭಿನ್ನ ಶಬ್ದ. ಅದೇನು ಕಾರಣವೆಂದರೆ ತಾನರಿದುದು ತನಗನ್ಯವಾಗಿ ತೋರುವದಾಗಿ ಅದನನ್ಯವಿಟ್ಟು ನುಡಿಯಲಾಗದು. ತಥಾಪಿಸಿ ನುಡಿದಡೆ ಅದು ಶಬ್ದ ಬೇಸರವಪ್ಪುದೆಂಬುದೀಗ, ಈಶ್ವರನನರಿದೆನೆಂದು ನುಡಿದು, ಬೇಸರವೋದರಣ್ಣಗಳೆಲ್ಲರೂ, ಎಂಬ ಶಬ್ದಕ್ಕರ್ಥ. ಅದು ಲಿಂಗಸಂಬಂಧ ಪ್ರಾಣವಲ್ಲವೆಂಬುದೀಗ ಪ್ರಾಣಲಿಂಗವೆಂಬರಯ್ಯಾ ಎಂಬ ಶಬ್ದಕ್ಕರ್ಥ. ಸಂಶಯಸಂಬಂಧವಳಿದು ಮನದೊಳಗೆ ಮಹಾ ಘನಲಿಂಗವಿಂಬುಗೊಂಡು, ನೆನಹು ನಷ್ಟವಾಯಿತ್ತಾಗಿ, ನುಡಿವಾತ ತಾನೆ ಶಿವತತ್ವವೆಂದರಿವುದೀಗ, ಮನ ಘನವೆಂದರಿಯದೆ ಮರುಳುಗೊಂಡರು. ಈಶ್ವರನನರಿದಡೆ ತಾ ಶಿವನೆಂಬ ಶಬ್ದಕ್ಕರ್ಥ.

೧೦೫. ಕರ್ಮ ನಾಸ್ತಿ ಎಂಬೆ. ಅನಾಸ್ತಿ ಎಂಬೆ. ಜ್ಞಾನ ಕೊಬ್ಬಿನ ಲುಲಿವೆ. ಉಲಿದಂತೆ ನಡೆವೆ. ಸಂಗಡ ಸಹಿತ ಕರಸ್ಥಲಕ್ಕೆ ಬಂದು ನೀನು ಬಯಲಾಗೆ ಎನ್ನನು ಬಯಲು ಮಾಡಿದೆ ಗುಹೇಶ್ವರಾ.

ಟೀಕುಃ— ಆಚರಿಸುವ ಸತ್ಕ್ರಿಯಾ ಕರ್ಮಂಗಳೆಲ್ಲವು ನಾಸ್ತಿಯಾಯಿತ್ತೆಂಬುದೀಗ ಕರ್ಮನಾಸ್ತಿಯಾಯಿತ್ತೆಂಬ ಶಬ್ದಕ್ಕರ್ಥ. ಆ ಸತ್ಕ್ರಿಯಾ ಕರ್ಮವ ಅದ್ವೈತವನರಿದೆನೆಂದು ದುರ್ವಿವೇಕದಿಂ ಬಿಡದೆ ಆ ಸತ್ಕ್ರಿಯಾ ಕರ್ಮಂಗಳೆಲ್ಲವು ಲಿಂಗ ಪ್ರಭೆಯೊಳಡಗಿ, ದಗ್ಧ ಪಟ ನ್ಯಾಯದಂತೆ, ಶಿವಲಿಂಗ ಕ್ರಿಗಳಾಗಿರ್ದವೆಂಬುದೀಗ, ಅನಾಸ್ತಿ ಎಂಬೆನೆಂಬ ಶಬ್ದಕ್ಕರ್ಥ. ಇಂತಪ್ಪ ಸುಜ್ಞಾನ ಕ್ರಿಯಾವರ್ತನೆಯನು ಇದಿರಿಂಗೆ ನುಡಿದು ತೋರದೆ, ತನ್ನ ಲೀಲಾ ವಿನೋದದಿಂ ತನಗೆ ತಾ ನುಡಿದೆನೆಂಬುದೀಗ, ಜ್ಞಾನ ಕೊಬ್ಬಿನಲುಲಿವೆನೆಂಬ ಶಬ್ದಕ್ಕರ್ಥ. ಆ ನುಡಿಯಂತೆ ಎರಡಿಲ್ಲದೆ, ನಡೆವೆನೆಂಬುದೀಗ, ಆ ನುಡಿಯಂತೆ ನಡೆವೆನೆಂಬ ಶಬ್ದಕ್ಕರ್ಥ. ಇಂತು ನಡೆನುಡಿ ಒಂದಾದ ಶರಣನ ಸರ್ವಾಂಗದೊಳಗೆ ಲಿಂಗವು ಸಮರಸವಾಗಿ, ಕರಸ್ಥಲದಲ್ಲಿ ಲಿಂಗವು ಕುರುಹಳಿದು ಕುರುಹಾಕಿ, ಸಿಂದಿತ್ತೆಂಬುದೀಗ ಸಂಗಡ ಸಹಿತ ಕರಸ್ಥಲಕ್ಕೆ ಬಂದು ಎಂಬ ಶಬ್ದಕ್ಕರ್ಥ. ಇಂತಪ್ಪ ನಿರ್ಣಯವುಳ್ಳ ಶರಣಂಗೆ ನಿರ್ವಯಲ ಸಮಾಧಿಯುಳವಡಬೇಕೆಂಬುದೀಗ, ನೀನು ಬಯಲಾಗೆ, ಎನ್ನನು ಬಯಲು ಮಾಡಿದೆ ಎಂಬ ಶಬ್ದಕ್ಕರ್ಥ.



೧೦೬. ನಿಚ್ಚಕ್ಕೆ ನಿಚ್ಚ ಒತ್ತೆಯ ಬೇಡಿದಡೆ, ಅಚ್ಚಗವಾಯಿತ್ತವ್ವ ನಮ್ಮ ನಲ್ಲಂಗೆ. ಕಿಚ್ಚನೆ ಹೊತ್ತುಕೊಂಡು ಅರ್ಚನೆಯನಾಡಲು ಅಚ್ಚುಗವಾಯಿತ್ತವ್ವಾ ನಮ್ಮ ನಲ್ಲಂಗೆ. ಅರ್ಚನೆಯ ಗಳಿಹವನಿಳುಹಿದರೆ ಬಳಿಕ ನಿಶ್ಚಿಂತವಾಯಿತ್ತು ಗುಹೇಶ್ವರಾ.

ಟೀಕುಃ— ಅಂಗದ ಮೇಲೆ ಲಿಂಗವಧರಿಸಿ, ನಿಜದಿಂದರಿದು ಪೂಜಿಸಲರಿಯದೆ, ಉಪಾಧಿಯಿಂದ ಪೂಜಿಸಿ ಕಾವಿಸಿ ಮುಕ್ತಿಯನು ಬಯಸುತ್ತಿರಲು, ಅದು ನಿಚ್ಚಕ್ಕೆ ನಿಚ್ಚ ಒತ್ತೆಯ ಬೇಡಿದರೆ ಎಂಬ ಶಬ್ದಕ್ಕರ್ಥ. ಆ ಮುಕ್ತಿಯ ಬಯಸುವ ಬಯಕೆ ಲಿಂಗಕ್ಕೆ ಭಿನ್ನವಾದುದಾಗಿ, ಅಚ್ಚುಗವಾಯಿತ್ತೆಂಬ ಶಬ್ದಕ್ಕರ್ಥ. ಆ ಉಪಾಧಿಯ ಬಿಟ್ಟ ಜ್ಞಾನಾಗ್ನಿಯನು ಸರ್ವಾಂಗದಲ್ಲಿ ಧರಿಸಿ ಪರಮಾನಂದ ಲೀಲೆಯಲ್ಲಿರುತಿರಲು ಅದು ಲಿಂಗಕ್ಕೆ ಸುಖವಾಗಿದ್ದಿತೆಂಬುದೀಗ ಕಿಚ್ಚನೇ ಹೊತ್ತುಕೊಂಡು ಅರ್ಚನೆಯ ನಾಡಲು ಅಚ್ಚುಗವಾಯಿತ್ತೆಂಬ ಶಬ್ದಕ್ಕರ್ಥ. ಇಂತು ಧರಿಸಿಕೊಂಡಿಪ್ಪ ವೃತ್ತಿ ಜ್ಞಾನಕ್ರಿಯಾ ಭೇದವನು ನಿವೃತ್ತಿ ಮಾಡಲು, ನಿಜವು ಸಾಧ್ಯವಾಯಿತ್ತೆಂಬುದೀಗ ಅರ್ಚನೆಯ ಗಳಿಹವನಿಳುಹಿದರೆ ಬಳಿಕ ನಿಶ್ಚಿಂತವಾಯಿತ್ತೆಂಬ ಶಬ್ದಕ್ಕರ್ಥ.

೧೦೭. ಆಸೆ ಎಂಬ ಕೂಸನೆತ್ತಲು, ರೋಷವೆಂಬ ತಾಯಿ ಮುಂದೆ ಬಂದಿರ್ಪಳು ನೋಡಾ. ಇಂತೀ ಎರಡಿಲ್ಲದ ಕೂಸನೆತ್ತಬಲ್ಲಡೆ ಆತನೆ ಲಿಂಗೈಕ್ಯನು ಗುಹೇಶ್ವರಾ.

ಟೀಕುಃ— ಲಿಂಗವನರಿಯಬೇಕೆಂಬ ಆಸೆಯುಳ್ಳನ್ನಕ್ಕರ ಅರಿಯೆನೆಂಬ ವೈರಾಗ್ಯ ಮುಂದುಗೊಂಡಿಪ್ಪುದು. ಆ ಅರಿವಿನ ಆಸೆ ಅರಿಯೆನೆಂಬ ವೈರಾಗ್ಯವೆರಡನು ಅತಿಗಳೆದು ನಿಂದ ನಿಲವು ನಿಜ ಸ್ವಾನುಭಾವದುದಯ. ಆ ಸ್ವಾನುಭಾವವ ಸರ್ವಾಂಗದಲ್ಲಿ ಧರಿಸಲು ಆದೇ ಲಿಂಗೈಕ್ಯವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೧೦೮. ತಾಯಿ ಬಂಜೆಯಾದಲ್ಲದೆ ಶಿಸು ಗತವಾಗದು. ಬೀಜನಷ್ಟವಾದಲ್ಲದೆ, ಸಸಿ ಗತವಾಗದು. ನಾಮ ನಷ್ಟವಾದಲ್ಲದೆ ನೇಮ ನಷ್ಟವಾಗದು. ಮೊದಲು ಗೆಟ್ಟಲ್ಲದೆ ಲಾಭದಾಸೆ ಬಿಡದು. ಗುಹೇಶ್ವರನೆಂಬ ಲಿಂಗದ ನಿಜವನೆಯ್ದುವಡೆ ಪೂಜೆಯ ಫಲ ಮಾದಲ್ಲದೆ ಭವಂ ನಾಸ್ತಿಯಾಗದು.

ಟೀಕು:-- ತಾಯಿ ಬಂಜೆಯಾದರೆ ಗರ್ಭ ನಾಸ್ತಿ ಎಂಬ ಹಾಗೆ, ಬೀಜ ನಾಸ್ತಿಯಾದಡೆ ವೃಕ್ಷ ನಾಸ್ತಿ ಎಂಬ ಹಾಗೆ, ನಾಮನಾಸ್ತಿಯಾದಡೆ ನೇಮ ನಾಸ್ತಿ ಎಂಬ ಹಾಗೆ, ಮೊದಲ ಧನವಿಲ್ಲದಲ್ಲಿ ವೃದ್ಧಿ ಇಲ್ಲವೆಂಬ ಹಾಗೆ ಲಿಂಗವನರಿದೆನೆಂದಡೆ ಉಪಾಧಿಯ ಪೂಜೆಯ ಮರೆದು ಫಲಪದದ ಬಯಕೆ ಹಿಂಗಿ ನಿಃಫಲದಾಯಕನಾದಲ್ಲದೆ ಭವಂ ನಾಸ್ತಿ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೧೯. ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವರಯ್ಯಾ. ಬಯಲು ಬತ್ತಲೆ ಇರ್ದ್ದರೆ ಏನ ನುಡಿಸುವರಯ್ಯಾ. ಭಕ್ತನು ಭವಿಯಾದಡೆ, ಅದೇನನುಪಮಿಸುವೆನಯ್ಯ ಗುಹೇಶ್ವರಾ.

ಟೀಕು:--ಮಹಾ ಮೇರುವಿಗೆ ಶೈತ್ಯವಾವರಿಸಿವಡೆ, ಅದಕ್ಕೊಂದಾವರಣವ ಮಾಡಲಿಲ್ಲವೆಂಬ ಹಾಗೆ, ನಿರಾಕಾರ ನಿರ್ವಯಲು ನಿರ್ಲಜ್ಜೆಯಿಂದಿರಲು, ಅದಕ್ಕೊಂದಾವರಣವ ಮಾಡಲಿಲ್ಲವೆಂಬ ಹಾಗೆ, ಲಿಂಗಕ್ಕೆ ಭಕ್ತಿಯ ಮಾಡುತ್ತಿಪ್ಪ ಶರಣನ ಭಕ್ತಿಕ್ರಿಗಳಳಿದು ತಾನೆ ಲಿಂಗವಾದ ಬಳಿಕ ಆವಾಚಾರವನು ಆವರಣವ ಮಾಡಿಕೊಂಡು ಆಚರಿಸಲಿಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೧೨೦. ಸತ್ತ ಬಳಿಕ ಮುಕ್ತಿಯ ಹಡಿದಿಹೆನೆಂದು ಪೂಜಿಸಹೋದರೆ, ಆ ದೇವರೇನ ಕೊಡುವರೋ? ಸಾಯದೆ ನೋಯದೆ ಸ್ವತಂತ್ರನಾಗಿ ಸಂದುಭೇದವಿಲ್ಲದಿರ್ಪ ಗುಹೇಶ್ವರ ನಿಮ್ಮ ಶರಣ.

ಟೀಕು:--ಇಹದಲ್ಲಿ ಭಕ್ತಿಯ ಮಾಡಿ, ಸತ್ತ ಬಳಿಕ ಪರದಲ್ಲಿ ಮುಕ್ತಿಯ ಹಡಿದಿಹೆನೆಂದರೆ, ಮುಕ್ತಿ ಘಟಿಸದು. ಅದೇನು ಕಾರಣವೆಂದಡೆ, ಸಾವಿನ ಬೀಜ ಮುಂದೆ ಜನನಕ್ಕೆ ಕಾರಣವಾಗಿ. ಇಂತಲ್ಲದೆ ತನುವಿಡಿದಲ್ಲಿಯೆ ನಿತ್ಯ ನಿರಂಜನ ಪರಶಿವನು ತಾನೆಂದರಿದಡೆ, ಆತ ಸ್ವತಂತ್ರ ಶಿವೈಕ್ಯನೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೧೨೧. ನೀರು ನೆಳಲನೆ ಕಡಿದು ಮೇರುವೆಂಬುದ ನುಂಗಿ ಶಾರದೆ ಎಂಬವಳ ಬಾಯ ಕಟ್ಟಿ ಕಾರಮೇಘದ ಬೆಳಸ ನಿರಹರಿ ನುಂಗಲು, ದಾರಿ ವೃತ್ಯುವ ನುಂಗಿ ನಗುತ್ತಿರ್ದಿತ್ತು. ನಾರಿಯ ಬೆನ್ನ ಮೇಲೆ ಗಂಡ ಬಂದು ಕುಳ್ಳಿರಲು ನೀರಹೊಳೆಯವರೆಲ್ಲರ ಕೊಡನೊಡೆದವು. ಕಾರೆಯ ಮುಳ್ಳೆದ್ದು ಕಲಿಗಳನಟ್ಟಿ ಸದೆವಾಗ ಸೋರುಮುಡಿ ಯಾಕೆ ಗೊರವನ ನೆರೆದಳು. ಬಳ್ಳಿ



ಆನೆಯ ನುಂಗಿ ಒಳ್ಳೆಯ ಸಮುದ್ರವ ಕುಡಿದು ಕುಳ್ಳಿರ್ದ ಶಿಸು ಹಲಬರ ನೆಯ್ದೆ ನುಂಗಿ ಅತ್ತೆ ಅಳಿಯನ ಕೂಡಿ ಕೋಡಗನ ಹಡೆದಲ್ಲಿ ಹತ್ತರಿರ್ದ ಹಾವಡಿಗನನದು ನುಂಗಿತ್ತು. ಕಪ್ಪೆ ಸರ್ಪನ ಹಿಡಿದು ಒತ್ತಿ ನುಂಗುವಾಗ ಕಪ್ಪೆಯ ಕೊರಳಲ್ಲಿ ಬೀಳದು ಕೆಂಪಡರಲು ನಿಶ್ಚಿಂತವಾಯಿತ್ತು ಗುಹೇಶ್ವರನ ಶರಣಂಗೆ ಕಟ್ಟೆದಿರ ಕಪ್ಪುರದ ಜ್ಯೋತಿಯಂತೆ.

ಟೀಕು:--ಸಂಸಾರ ವಿಷಯ ರಸೇಂದ್ರಿಯ ಸುಖ ಸಂಕಲ್ಪ ಬದ್ಧರೂಪಿಂ ಪ್ರಾಣವಾಯು ಸ್ಪಂದದಿಂ ಸಾಂಚಲ್ಯ ಸಂಬಂಧದಿಂ ಮನಸ್ಸು ನೀರೆಂಬ ಶಬ್ದಕ್ಕೆ ಸಂಬಂಧ ಆ ಮನದೊಳಗೆ ಮರವೆ ಒಳಕೊಂಡಿಪ್ಪುದರಿಂ ಅದು ನೆಳಲೆಂಬ ಶಬ್ದಕ್ಕರ್ಥ. ಇಂತಪ್ಪ ಮನದ ಮರವೆಯನು ಆ ಮನದಿಂ ಭಿನ್ನವ ಮಾಡುತ್ತಿರಲು ನೀರ ನೆಳಲನೆ ಕಡಿದು ಎಂಬ ಶಬ್ದಕ್ಕರ್ಥ. ತನು ಮಧ್ಯದಲ್ಲಿ ಮೂಲಾಹಂಕಾರವು ಶಿಖರಿಯಾಗಿಪ್ಪ ಕಾರಣದಿಂ ಅದು ಮೇರುವೆಂಬ ಶಬ್ದಕ್ಕರ್ಥ. ಆ ಅಹಂಕಾರವು ತನ್ನ ನವಗ್ರಹಿಸಿ ಆ ಅಹಂಕಾರದ ವಶ ವೃತ್ತಿಗೆ ಸಿಲ್ಕದೆ ತಾನಾಹಂಕಾರವಂ ಅವಗ್ರಹಿಸಿ ತನ್ನೊಳಗಡಗಿಸಿಕೊಂಡುದೀಗ. ಮೇರುವೆಂಬುದ ನುಂಗಿ ಎಂಬ ಶಬ್ದಕ್ಕರ್ಥ. ವಾಗ್ವೃತ್ತಿಯ ನಿವೃತ್ತಿಯ ಮಾಡುತ್ತಿರಲು, ಅದು ಶಾರದೆ ಎಂಬವಳ ಬಾಯ ಕಟ್ಟಿ ಎಂಬ ಶಬ್ದಕ್ಕರ್ಥ. ಅಭ್ರಚ್ಛಾಯಾ ಮಾತ್ರವಪ್ಪುದು ತನುವಾದ ಕಾರಣ ಕಾರಮೇಘನೆಂಬ ಶಬ್ದಕ್ಕರ್ಥ. ಆ ತನುವಿಂದ ಉದಯಿಸಿ ಬೆಳೆದ ತನುಧರ್ಮಕರ್ಮಂಗಳನು ಸ್ವಚ್ಛಾನಂದ ಜಲಪ್ರವಾಹವನವಗ್ರಹಿಸಿತ್ತೆಂಬುದೀಗ ಕಾರಮೇಘದ ಬೆಳಸ ನಿರಹರಿ ನುಂಗಲು ಎಂಬ ಶಬ್ದಕ್ಕರ್ಥ. ಇಂತು ಗುರು ಕೃಪಾರಸವಾವರ್ತಿಸಿಪ್ಪ ಸತ್ಪಿಂಡ ಚರಿಸುವ ಮುಮುಕ್ಷು ಮಾರ್ಗ ಆ ಶರೀರದ ಮರಣವ ಕೆಡಿಸಿ ನಿತ್ಯತ್ವವಳವಟ್ಟೆಂಬ ಪರಮ ಹರುಷದಿಂದಿರಲು ಅದು ದಾರಿ ವೃತ್ಯುವ ನುಂಗಿ, ನಗುತ್ತಿರ್ದಿತ್ತೆಂಬ ಶಬ್ದಕ್ಕರ್ಥ. ಇಂತು ಸುಜ್ಞಾನೋದಯವಾಗಿರ್ಪ ಶರಣಸತಿಯ ಸತ್ಕ್ರಿಯಾ ಕರ್ಮವೆಂಬ ಪೂರ್ವ ಭಾಗೆಯನುಳಿದು, ಸುಜ್ಞಾನವರ್ತನೆ ಎಂಬ ಅಪರ ಭಾಗೆಯೊಳು ಲಿಂಗವೆಂಬ ಪತಿ ಬಂದು ಮೂರ್ತಿಗೊಳಲು, ಎಂಬುದೀಗ, ನಾರಿಯ ಬೆನ್ನ ಮೇಲೆ ಗಂಡ ಬಂದು ಕುಳ್ಳಿರಲು, ಎಂಬ ಶಬ್ದಕ್ಕರ್ಥ. ಇಂತು ಶರಣನಲ್ಲಿ ಲಿಂಗ ಸಂಗವಾಗಲು, ಮನೋಧರ್ಮ ಮಾರ್ಗದೊಳು ಚರಿಸುತ್ತಿಪ್ಪ ಸಕಲಕರಣಂಗಳ ಘಟಂಗಳು ಭಿನ್ನವಾದವೆಂಬುದೀಗ ನೀರ ಹೊಳೆಯವರೆಲ್ಲರ ಕೊಡನೊಡೆದವು

ಎಂಬ ಶಬ್ದಕ್ಕರ್ಥ. ಆ ವಿಷಯಾದಿ ಕಂಟಕಂಗಳಿಂ ದೇವದಾನವ ಮಾ
ನವಾದಿಗಳು ಯತಿ ವ್ರತಿ ಯೋಗಿಗಳೆಲ್ಲ ಮುಂದುಗೆಡುತ್ತಿರಲು, ಆ ಸಮ
ಯದಲ್ಲಿ ಶಿವಶರಣನು, ವಿಷಯಾಸಕ್ತನಲ್ಲದಿರುತ್ತಿರಲು, ಆ ಶರಣನಂತರಂ
ಗದ ಚಿತ್‌ಶಕ್ತಿ, ಭಿನ್ನ ಸಂಗವಳಿದು, ಸುಜ್ಞಾನ ಲಿಂಗದಲ್ಲಿ ಅಭಿನ್ನ
ಸಂಗವ ಮಾಡಿದಳೆಂಬುದೀಗ ಕಾರೆಯ ಮುಳ್ಳೆದ್ದು ಕಲಿಗಳನಟ್ಟಿ ಸದೆ
ವಾಗ ಸೋರು ಮುಡಿಯಾಕೆ ಗೊರವನ ನೆರೆವಳೆಂಬ ಶಬ್ದಕ್ಕರ್ಥ. ಆರು ಇಲ್ಲದ
ಏಕಾಂತ ಸ್ಥಲದಲ್ಲಿ ಧ್ವನಿಗೆಯ್ವ ಬಳ್ಳುವಿನ ಹಾಗೆ ತಾನಲ್ಲದೆ ಏನೂ ಇಲ್ಲದ
ಸ್ಥಾನದೊಳಗೆ ಇರ್ದು, ಶಿವೋಹಂ ಶಿವೋಹಂ ಎಂಬ ಧ್ವನಿ ಅಹಂಬ್ರಹ್ಮ
ನೆಂಬುದ ನವಗ್ರಹಿಸಲು, ಆದೀಗ ಬಳ್ಳು ಆನೆಯ ನುಂಗಿ, ಎಂಬ ಶಬ್ದ
ಕ್ಕರ್ಥ. ಉದಕದೊಳಗಿರ್ದು ವಿಷೋಪದ್ರವಿಲ್ಲದೆ, ಸರ್ವ ಭಯ ಭೀತಿ
ಯಿಂದಿರ್ಪ ಜಲ ಸರ್ಪನ ಹಾಗೆ, ಭಕ್ತಿ ರಸಾಂಬುಧಿಯೊಳು ನಿರ್ವಿಷಯ
ಯುಕ್ತವಪ್ಪ ಭಯ ಭೀತಿ ಭೃತ್ಯ ಭಾವದೊಳು ಭವಾಂಬುಧಿಯಡಗಿತ್ತೆಂಬು
ದೀಗ ಒಳ್ಳೆ ಸಮುದ್ರವ ಕುಡಿದು, ಎಂಬ ಶಬ್ದಕ್ಕರ್ಥ. ಇಂತಪ್ಪ ಸಕಲ
ಕರ್ಮಾವಶೇಷವಾಗಿ ಸ್ಥಿರಚಿತ್ತದಿಂ ಸ್ವಸ್ಥನಾಗಿರ್ಪ ಶಿಷ್ಯನೆಂಬ ಶಿಸು ಬಹು
ವರ್ಣ ಧರ್ಮಂಗಳ ತನ್ನೊಳಗವಗ್ರಹಿಸಿದನೆಂಬುದೀಗ ಕಳ್ಳಿರ್ದ ಶಿಸು
ಹಲಬರನೆಯ್ದೆ ನುಂಗಿ ಎಂಬ ಶಬ್ದಕ್ಕರ್ಥ. ಆ ಪರಾಶಕ್ತಿಯಿಂದುದಯಿ
ಸಿದ ಜ್ಞಾನಶಕ್ತಿಯ ಪುರುಷನಪ್ಪ ಶಿವಶರಣನು ಪರಶಿವತತ್ವ ಸ್ವರೂಪ
ನಪ್ಪ ಕಾರಣದಿಂ ಆ ಪರಶಕ್ತಿಯ ಸಂಗವ ಮಾಡಿ, ಸ್ವಭಾವ ತತ್ವ
ವೆಂಬ ಉನ್ಮನಿ ತತ್ವವು ಉದಯವಾಗಿ ಪಂಚೇಂದ್ರಿಯಂಗಳೆಂಬ ಹೆಡೆಗ
ಳನುಳ್ಳ ಶಂಕಾ ವಿಷಸಂಬಂಧಿಯಪ್ಪ ಸರ್ಪನ ಹಿಡಿದಿರ್ಪ ಜೀವನನು
ಅವಗ್ರಹಿಸಿ ಜೀವನ್ಮುಕ್ತನಾಗುತ್ತಿರಲು ಆದೀಗ ಅತ್ತೆಯಳಿಯನ ಕೂಡಿ
ಕೋಡಗನ ಹಡದಲ್ಲಿ ಹತ್ತಿರ್ದ ಹಾವಡಿಗನನವು ನುಂಗಿತ್ತೆಂಬ ಶಬ್ದ
ಕ್ಕರ್ಥ. ಇಂತು ಜೀವನ್ಮುಕ್ತನಾದ ದಿವ್ಯ ಶಿವಯೋಗಿಯ ಸಗುಣ ಬ್ರ
ಹ್ಮದ ಮೂಲ ಕುಂಡಲಿಯು ಬ್ರಹ್ಮರಂಧ್ರದ ಪರಮ ಶಾಂತಿ ಬಿಂದು
ವಿನಲ್ಲಿ ಅಳಿದು, ಸಾತ್ವಿಕ ರಾಜಸವೆಂಬೆರಡು ನಿವೃತ್ತಿಯಾಯಿತ್ತೆಂಬು
ದೀಗ ಕಪ್ಪೆ ಸರ್ಪನ ಹಿಡಿದು, ಒತ್ತಿ ನುಂಗುವಾಗ ಕಪ್ಪೆಯ ಕೊರ
ಳಲ್ಲಿ ಬಳದು ಕೆಂಪಡರಲು, ಎಂಬ ಶಬ್ದಕ್ಕರ್ಥ. ಇಂತು ಅಂತರಂಗ
ಬಹಿರಂಗದೊಳಗುಳ್ಳ ಸಮಸ್ತ ವ್ಯಾಕುಳ ಚಿಂತೆಗಳೆಲ್ಲವಳಿದ, ನಿಶ್ಚಿಂತೆ
ಯಾಗಿ ಶಿಖಿ ಕರ್ಪುರ ಸಂಯೋಗದಂತೆ ಇರ್ದ್ದನೆಂಬುದೀಗ ನಿಶ್ಚಿಂತ



ವಾಯಿತ್ತು. ಗುಹೇಶ್ವರನ ಶರಣಂಗೆ ಕಟ್ಟಿದಿರ ಕರ್ಪುರದ ಜ್ಯೋತಿಯಂತೆ
ಎಂಬ ಶಬ್ದಕ್ಕರ್ಥ.

೧೧೨. ಪೃಥ್ವಿ ಕುಳ ಮಂಟಪದ ಮೇಲೆ ಪದ ಶಿಲೆ ಬಿಗಿದು,
ತಳಕಂಭ ಕಳಸದ ಮೇಲೆ ಕೆಸರುಗಲ್ಲು, ಒಂದು ಮರಕ್ಕೊಂಬತ್ತು
ತುಂಬಿಯೊಳಾಪ ಒಗೆಯ ಬಣ್ಣದ ಮೇಲೆ ಹಿರಿದಪ್ಪ ಸಂಯೋಗ, ಅಂಗ
ಜನ ಪಡೆ ಕೋಟಿ ಮುಂಡವೆದ್ದು, ಕುಣಿವಲ್ಲಿ ರಣ ಉಂಡ ಭೂಮಿ
ಯನು ಮೀರಿದ ಗುಹೇಶ್ವರನು.

ಟೀಕು:—ಪೃಥ್ವಿ ಕುಳ ಮಂಟಪವೆಂದರೆ, ಪಂಚಭೂತ ಸಮ್ಮಿಶ್ರ
ವಾದ ದೇಹವೆಂಬ ಪರಿ, ಆ ಪೃಥ್ವಿಯಂಶದ ತನುವಿನ ಮೇಲೆ ಸುಚಿ
ತ್ತವೆಂಬ ನೆಲಗಟ್ಟನು ಸಿದ್ಧವ ಮಾಡಿ, ಆಧಾರಸ್ಥಲವನನುಗೊಳಿಸಲು,
ಆದೀಗ ಪೃಥ್ವಿಕುಳ ಮಂಟಪದ ಮೇಲೆ ಪದಶಿಲೆ ಬಿಗಿದು ಎಂಬ ಶಬ್ದ
ಕ್ಕರ್ಥ. ಇಂತಪ್ಪ ಸುಚಿತ್ತವೆಂಬ ಆಧಾರಸ್ಥಲದ ಮೇಲೆ ಏಕೋಭಾವ
ವೆಂಬುದೊಂದು ಸ್ತಂಭ ಉಂಟಾಗಿರಲು ಅದು ತಳಕಂಭವೆಂಬ ಶಬ್ದಕ್ಕರ್ಥ.
ಆ ಏಕೋಭಾವ ಸ್ತಂಭದ ಮೇಲೆ ಸುಜ್ಞಾನವೆಂಬುದೊಂದು ತೋರುತ್ತಿ
ಪ್ಪುದಾಗಿ, ಅದು ಕಳಸವೆಂಬ ಶಬ್ದಕ್ಕರ್ಥ. ಆ ಸುಜ್ಞಾನದ ಮೇಲೆ
ಜ್ಞಾನವಿಶ್ರಾಂತಿ ಎಂಬುದೊಂದು ಜ್ಞೇಯಸ್ಥಲವು ಸರ್ವಕಳಾ ವಿಶ್ರಾಮ
ಸ್ಥಾನವೆನಿಸಿ ಸಕಲವನು ತಾನೆ ಧರಿಸಿಕೊಂಡಿಪ್ಪುದರಿಂ ಆಧಾರ ನಾಮವ
ನೆಯ್ದಲು, ಅದು ಕಳಸದ ಮೇಲೆ ಕೆಸರುಗಲ್ಲು ಎಂಬ ಶಬ್ದಕ್ಕರ್ಥ. ಇಂತಪ್ಪ
ಒಬ್ಬ ದಿವ್ಯ ಶಿವಯೋಗಿಯ ಪಿಂಡದೊಳಗೆ ನವನಾಳಂಗಳೆಂಬವು ಒಂಭತ್ತು
ದ್ವಾರಂಗಳಿಪ್ಪವು. ಆ ನವನಾಳಂಗಳೊಳಗೆ ತುಂಬಿ ಎಂದರೆ ಪರಿಪೂ
ರ್ಣಕ್ಕೆ ಹೆಸರು, ಆಳಾಪವೆಂದರೆ ಧ್ವನಿಗರ್ಥ, ಇಂತು ಒಂದೇ ದೇಹ
ದೊಳಗಿರ್ಪ ನವದ್ವಾರಂಗಳೊಳಗೆ ಪರಿಪೂರ್ಣವಾಗಿಪ್ಪ ಪ್ರಾಣಲಿಂಗದ
ಪ್ರಭೆ ಶಿವೋಹಂ, ಶಿವೋಹಂ ಎನುತಿರ್ದಿತೆಂಬುದೀಗ, ಒಂದು ಮರಕ್ಕೊಂ
ಭತ್ತು ತುಂಬಿಯಾಳಾಪವೆಂಬ ಶಬ್ದಕ್ಕರ್ಥ. ಇಂತಪ್ಪ ಬಗೆಯ ಪ್ರಭೆಯ
ಮೇಲೆ ಮಹಾ ಘನದ ರತಿ ಸಂಗ ಅಭಿನ್ನಸಂಯೋಗವಾಗುತ್ತಿರಲು,
ಕಾಮವಿಕಾರದ ಪರಿಕರವಾಗಿರ್ಪ ನಾನಾ ಕರಣಂಗಳೆಲ್ಲವು ಅಹಂಕಾರ
ವೆಂಬ ಶಿರಹರಿದು ಭಿನ್ನವಾದ ಕಾರಣ, ಅಂಗಜನ ಪಡೆಕೋಟಿ ಮುಂಡ
ವೆಂಬ ಶಬ್ದಕ್ಕರ್ಥ. ಇಂತಪ್ಪ ಕರಣಂಗಳ ಅಹಂಮಮತೆಗಳಳಿದು ದಗ್ಧ
ಪಟದಂತೆ, ಆ ಲಿಂಗ ಶರಣ ಲೀಲಾಮಾತ್ರದಲ್ಲಿ ಇರ್ದನೆಂಬುದೀಗ,

ಮುಂಡವೆದ್ದು ಕುಣಿವಲ್ಲಿ ಎಂಬ ಶಬ್ದಕ್ಕರ್ಥ. ಇಂತಪ್ಪ ಪಿಂಡದೊಳಗೆ ಸಕಲ ಭೂತೇಂದ್ರಿಯಂಗಳೆಲ್ಲವು ಅಳಿದು ಭೂಗತವಾದವೆಂಬುದೀಗ, ರಣ ಉಂಡ ಭೂಮಿ. ಎಂಬ ಶಬ್ದಕ್ಕರ್ಥ. ಆ ದೇಹಭಾವವನು ಮೀರಿ ನಿಜದಲ್ಲಿ ನಿಂದಾತನೆ ಶಿವಶರಣನೆಂಬುದೀಗ ರಣ ಉಂಡ ಭೂಮಿಯನು ಮೀರಿದನೆಂಬ ಶಬ್ದಕ್ಕರ್ಥ.

**ಭಕ್ತಸ್ಥಲ ಸಮಾಪ್ತ.**

## ಮಹೇಶ್ವರ ಸ್ಥಲ

ಸೂತ್ರ:— ಇಂತು ಭಕ್ತಸ್ಥಲದಲ್ಲಿ ಸದಾಚಾರ ಸಂಪತ್ತುವಿಡಿದು ಆಚರಿಸಿ ಐಕ್ಯನಾದ ಸದ್ಭಕ್ತನು ಮುಂದೆ ಮಹೇಶ್ವರ ಸ್ಥಲದಲ್ಲಿ ನಿಷ್ಕಾಮುಖದಿಂದ ಆಚರಸಿ ಬೆರಿಸುವ ಭೇದವೆಂತೆಂದೊಡೆ ಮುಂದೆ ಮಹೇಶ್ವರ ಸ್ಥಲವಾದುದು.

೧. ಆಗಮ ಪುರುಷರಿರಾ, ನಿಮ್ಮ ಆಗಮವಾಯುವಾಗಿ ಹೋಯಿತ್ತಲ್ಲಾ! ವಿದ್ಯಾ ಪುರುಷರಿರಾ, ನಿಮ್ಮ ವಿದ್ಯೆ ಅವಿದ್ಯೆಯಾಗಿ ಹೋದಲ್ಲಿ ಬರುಮುಖರಾಗಿರ್ದಿರಲ್ಲಾ! ವೇದ ಪುರುಷರಿರಾ, ನಿಮ್ಮ ವೇದ ಹೊಲಬು ದಪ್ಪಿಹೋದಲ್ಲಿ ನಿಮ್ಮ ವೇದವೆ ದೈವವೆಂದು ಕೆಟ್ಟಿರಲ್ಲಾ! ಪುರಾಣ ಪುರುಷರಿರಾ, ನಿಮ್ಮ ಪುರಾಣ ವಿಚಾರ ಭೃಷ್ಟಾಗಿ ಹೋದಲ್ಲಿ ನೀವು ಒಡನೆ ಭೃಷ್ಟಾಗಿ ಹೋದಿರಲ್ಲಾ! ಶಾಸ್ತ್ರ ಪುರುಷರಿರಾ, ನಿಮ್ಮ ಶಾಸ್ತ್ರ ಮಹಾಪದದ ಹೋನಲಲ್ಲಿ. ಹೋದಲ್ಲಿ ಭಕ್ತ ದೇಹಿಕ ದೇವನೆಂದರಿಯದೆ ಕೆಟ್ಟರಲ್ಲಾ! ಯತ್ರ ಶಿವಸ್ತತ್ರ ಮಾಹೇಶ್ವರನೆಂದು ಹೇಳಿತ್ತು ಮುನ್ನ. ಅಂತು ಭಕ್ತ ನಿತ್ಯ ಸತ್ಯ ಸನ್ನಿಹಿತ ಗುಹೇಶ್ವರಾ ನಿಮ್ಮ ಶರಣ.

ಟೀಕು:— ವೇದ ಶಾಸ್ತ್ರ ಪುರಾಣಾಗಮಾದಿಯಾದ ಸಕಲ ವಿದ್ಯಂಗಳು ಶಿವನ ನಿಲುಕಡೆಯನರಿಯವಾಗಿ, ಅವನೋದಿದವರೆಂತೂ ಅರಿಯರು. ಸತ್ಯ ಸದಾಚಾರವುಳ್ಳ ಮಾಹೇಶ್ವರರಲ್ಲಿ ಶಿವನಿರ್ಪನಾಗಿ, ಆ ಮಾಹೇಶ್ವರರೆ ಆ ಶಿವನ ನಿಲವ ಬಲ್ಲರೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೨. ಕಲ್ಲ ಹೋರಿನೊಳಗೊಂದು ಕಿಚ್ಚು ಹುಟ್ಟಿತ್ತ ಕಂಡೆ. ಹುಲ್ಲ ಮೇಲೆರಳೆಯ ಹುಲಿಯು ಸರಸವ ಕಂಡೆ. ಎಲ್ಲರೂ ಸತ್ತು ಆಡುತ್ತಿರ್ಪುದ ಕಂಡೆ. ಇನ್ನೆಲ್ಲಿಯ ಭಕ್ತಿ ಹೇಳಾ ಗುಹೇಶ್ವರಾ?

ಟೀಕು:— ಕಲ್ಲೆಂದರೆ ಕಲ್ಲು ಹೃದಯವೆಂಬ ಪರಿ. ಆ ಕಲ್ಲು ಹೃದಯದಂತಪ್ಪ ಜಡ ಪಿಂಡ ಮಧ್ಯದೊಳಗೆ, ಅಹಂಕಾರವೆಂಬ ಕಿಚ್ಚು ಬಲಿದಿರ್ಪುದಾಗಿ, ಅದೀಗ ಕಲ್ಲ ಹೋರಿನೊಳಗೊಂದು ಕಿಚ್ಚು ಹುಟ್ಟಿತ್ತ ಕಂಡೆನೆಂಬ ಶಬ್ದಕ್ಕರ್ಥ. ಹುಲ್ಲೆಂದಡೆ ತೃಣ ಪ್ರತಿಪತ್ತಾಗಿ, ಸಂಸಾರ ವಿಷಯಸುಖವು ಅಂತಪ್ಪ ಸಂಸಾರ ವಿಷಯಸುಖವ ಸವಿವುತ್ತಿಹುದು. ಜೀವನೆಂಬ ಎರಳೆ, ಅದೆಂತೆಂದಡೆ, ಆ ಮೃಗದ ಗುಣಧರ್ಮಕರ್ಮಗಳಲ್ಲಿ ಜೀವಂಗುಂಟಾದ ಕಾರಣ, ಅಂತಪ್ಪ ಜೀವನೆಂಬ ನಾಮವನುಳ್ಳ ಮೃಗವು

ಕಾಲ ವ್ಯಾಘ್ರನೆಂಬ ಹುಲಿಯ ಕೂಡೆ ಸಖ್ಯತ್ವದಿಂದಿರ್ದವಾಗಿ, ಆದೀಗ ಹುಲ್ಲ ಮೇವರೆಳೆಯ ಹುಲಿಯ ಸರಸವ ಕಂಡೆನೆಂಬ ಶಬ್ದಕ್ಕರ್ಥ. ಇಂತಪ್ಪ ಜೀವ ಭಾವ ಭ್ರಾಂತಿಯಿಂ ಸಮಸ್ತ ಜೀವರುಗಳು ಜೀವನ್ಮೃತರಾಗಿ ಚರಿಸುತ್ತಿರ್ದರೆಂಬುದೀಗ, ಎಲ್ಲರೂ ಸತ್ತು ಆಡುತ್ತಿರ್ಪವ ಕಂಡೆನೆಂಬ ಶಬ್ದಕ್ಕರ್ಥ. ಅದು ಕಾರಣ ಅಂತಪ್ಪ ಅಜ್ಞಾನ ಸಂಸಾರಿಗಳಿಗೆ ಭಕ್ತಿ ಇಲ್ಲವೆಂಬುದೀಗ ಇನ್ನೆಲ್ಲಿಯ ಭಕ್ತಿ ಹೇಳಾ ಎಂಬ ಶಬ್ದಕ್ಕರ್ಥ.

೩. ಕುರೂಪಿ ಸುರೂಪಿಯ ನೆನೆದಡೆ ಸುರೂಪಿಯಪ್ಪನೆ? ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೆ? ಧನವುಳ್ಳವರ ನೆನೆದರೆ ದಾರಿದ್ರ್ಯ ಹೋಹುದೆ? ಪುರಾತನರ ನೆನೆದು ಕೃತಾರ್ಥರಾದೆವೆಂಬರು. ತಮ್ಮಲ್ಲಿ ಭಕ್ತಿ ನಿಷ್ಠೆ ಇಲ್ಲದವರ ಕಂಡಡೆ ಮೆಚ್ಚನು ಗುಹೇಶ್ವರಾ.

ಟೀಕುಃ—ಲಿಂಗನಿಷ್ಠೆವಿಡಿದು ಪುರಾತನರ ಮೇಲುಪಂಕ್ತಿಯ ನೋಡಿ ಸತ್ಯ ಸದಾಚಾರದಲ್ಲಿ ನಡೆವಾತನು ಆ ಪುರಾತನರ ನೆನೆದಡೆ ಹೊಗಳಿದಡೆ ಕೃತಾರ್ಥನಹನಲ್ಲದೆ ಬರು ಮಾತಿನಲ್ಲಿ ಪುರಾತನರ ನೆನೆದಿಹೆನೆಂದಡೆ ಮುಕ್ತಿ ಇಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೪. ಕಾರಣವಿಲ್ಲ ಕಾರ್ಯವಿಲ್ಲ. ಏತಕ್ಕೆ ಭಕ್ತರಾದೆವೆಂಬಿರೋ? ಅಯ್ವರ ಬಾಯ ಎಂಜಲನುಂಬಿರಿ. ಐಯ್ವರ ಸ್ತ್ರೀಯರ ಮುಖವನರಿಯಿರಿ. ಮೂರು ಸಂಕೊಲೆಯ ಕಳೆಯಲರಿಯಿರಿ. ಕಾಯುವಿಡಿದು ಲಿಂಗವ ಮುಟ್ಟಿಹೆನೆಂಬ ಭ್ರಮೆಯು ನೋಡಾ ಗುಹೇಶ್ವರಾ.

ಟೀಕುಃ—ತನ್ನ ನಿಜವನರಿಯದೆ ಭಕ್ತಿಯ ಮಾಡಿಹೆನೆಂಬುದು ಅಪ್ರಯೋಜನವಾದ ಕಾರಣ ಆದೀಗ ಕಾರಣವಿಲ್ಲ, ಕಾರ್ಯವಿಲ್ಲ ಏತಕ್ಕೆ ಭಕ್ತರಾದೆನೆಂಬಿರೋ ಎಂಬ ಶಬ್ದಕ್ಕರ್ಥ. ಪಂಚಭೂತ ಉಚ್ಛಿಷ್ಟವಪ್ಪ ಪಂಚೇಂದ್ರಿಯ ಸುಖವ ಸುಖಿಸುತ್ತಿರ್ಪುದೀಗ, ಅಯ್ವರ ಬಾಯ ಎಂಜಲನುಂಬಿರಿ ಎಂಬ ಶಬ್ದಕ್ಕರ್ಥ. ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿ ಎಂಬ ಪಂಚಶಕ್ತಿಯರ ಸ್ವರೂಪನರಿಯರೆಂಬುದೀಗ ಐಯ್ವರ ಸ್ತ್ರೀಯರ ಮುಖವನರಿಯಿರಿ ಎಂಬ ಶಬ್ದಕ್ಕರ್ಥ. ಹೊನ್ನು ಹೆಣ್ಣು ಮಣ್ಣೆಂಬ ಮೂರು ಬಂಧನವ ಹಿಂಗಿಸಲರಿಯರೆಂಬುದೀಗ ಮೂರು ಸಂಕೊಲೆಯ ಕಳೆಯಲರಿಯಿರಿ ಎಂಬ ಶಬ್ದಕ್ಕರ್ಥ. ಇದು ಕಾರಣ ಅಂಗಗುಣವಿಡಿದು ಲಿಂಗವ ಮುಟ್ಟಿಹೆನೆಂಬುದು ಅಜ್ಞಾನವಾದ ಕಾರಣ ಕಾಯುವಿಡಿದು ಲಿಂಗವ ಮುಟ್ಟಿಹೆನೆಂಬ ಭ್ರಮೆಯು ನೋಡಾ ಎಂಬ ಶಬ್ದಕ್ಕರ್ಥ.



೫. ಉದಯವಾಯಿತ್ತ ಕಂಡು, ಉದರಕ್ಕೆ ಕುದಿವರಯ್ಯಾ. ಕತ್ತಲೆಯಾಯಿತ್ತ ಕಂಡು, ಮಜ್ಜನಕ್ಕೆರೆವರಯ್ಯಾ. ಲಿಂಗಕ್ಕೆ ನೇಮವಿಲ್ಲ. ಇರುಳಿಗೊಂದು ನೇಮ ಹಗಲಿಗೊಂದು ನೇಮ. ಲಿಂಗಕ್ಕೆ ನೇಮವಿಲ್ಲ. ಕಾಯ ಒಂದೆಸೆ ಜೀವ ಒಂದೆಸೆ ಗುಹೇಶ್ವರನೆಂಬ ಅಂಗವು ತಾನೊಂದೆಸೆ.

ಟೀಕುಃ—ಅಹೋರಾತ್ರಿ ಒಡಲಿಂಗೆ ಕುದಿವರು. ಲಿಂಗದ ವೇಳೆಯನರಿಯದೆ ಕಾಲವೇಳೆಗೆ ಮಜ್ಜನಕ್ಕೆರೆವರಾಗಿ, ಅದು ಕಾಲವೇಳೆಯ ನೇಮವಲ್ಲದೆ ಲಿಂಗದವೇಳೆಯ ನೇಮವಲ್ಲ ಇಂತಪ್ಪವರಲ್ಲಿ ಲಿಂಗಸಂಬಂಧವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೬. ಅಗ್ಗವಣಿ ಪತ್ರೆ, ಪುಷ್ಪ, ಧೂಪ, ದೀಪ, ನಿವಾಳಿಯಲ್ಲಿ ಪೂಜಿಸಿ ಪೂಜಿಸಿ, ಬಳಲುತ್ತಿದ್ದಾರೆ. ಏನೆಂದರಿಯರು ಎಂತೆಂದರಿಯರು. ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಎಲ್ಲರೂ ಪೂಜಿಸಿ, ಏನನೂ ಕಾಣದೆ ಲಯಕ್ಕೊಳಗಾಗಿ ಹೋದರು ಗುಹೇಶ್ವರಾ.

ಟೀಕುಃ—ತಮ್ಮಲ್ಲಿ ಲಿಂಗನಿಷ್ಠೆ ಇಲ್ಲದೆ ಕಾಂಬವರ ಕಂಡು ಲಿಂಗವ ಪೂಜಿಸಿ ನಾನು ಮುಕ್ತನಾದಿಹೆನೆಂಬುದು ಬರಿಯ ಭ್ರಮೆ ಎಂಬುದೀ ವಚನದ ತಾತ್ಪರ್ಯಾರ್ಥ.

೭. ಮಜ್ಜನಕ್ಕೆರೆದು, ಫಲವ ಬೇಡುವರಯ್ಯಾ! ತಮಗೆಲ್ಲಿಯದೋ ಆ ಫಲವು ಸಿತಾಳಕ್ಕಲ್ಲದೆ? ಪತ್ರೆ ಪುಷ್ಪದಲ್ಲಿ ಪೂಜಿಸಿ ಫಲವ ಬೇಡುವರು. ತೆಮಗೆಲ್ಲಿಯದೊ ಆ ಫಲವು ಗಿಡುಗಳಿಗಲ್ಲದೆ? ಸುಯಿಧಾನವ ನರ್ಪಿಸಿ, ಪ್ರಸಾದದ ಫಲವ ಬೇಡುವರು. ತಮಗೆಲ್ಲಿಯದೋ ಆ ಫಲವು ಹದಿನೆಂಟು ಧಾನ್ಯಕ್ಕಲ್ಲದೆ? ಅಂಗದೊಡವೆಯ ಲಿಂಗಕ್ಕೆ ಕೊಟ್ಟು, ಫಲವ ಬೇಡುವ ಸರ್ವ ಅನ್ಯಾಯಿಗಳನೇನೆಂಬೆ ಗುಹೇಶ್ವರಾ?

ಟೀಕುಃ—ತಾವು ಲಿಂಗದಲ್ಲಿ ಲೋಲುಪ್ತರಾಗದೆ, ಅಷ್ಟವಿಧಾರ್ಚನೆಯ ಉಪಾಧಿವಿಡಿದು, ಲಿಂಗವ ಪೂಜಿಸಿ ವರವ ಬೇಡಿದರೆ, ಆ ಪೂಜೆ ಅನ್ಯೋನ್ಯಕ್ಕಲ್ಲದೆ ಆ ಪೂಜಾಫಲ ತಮಗಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೮. ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ. ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ. ಅಗವಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ. ಪುಷ್ಪದ ನೇಮವ ಹಿಡಿದಾತ ತುಂಬಿ

ಯಾಗಿ ಹುಟ್ಟುವ. ಇವು ಷಟ್‌ಸ್ಥಲಕ್ಕೆ ಹೊರಗು. ಭಕ್ತಿ ನಿಷ್ಠೆ ಇಲ್ಲದವರ ಕಂಡಡೆ ಮೆಚ್ಚ ಗುಹೇಶ್ವರಾ.

ಟೀಕು:—ಲಿಂಗಕ್ಕೆ ನಿಯತವಹ ನಿಷ್ಠೆ ಛಲ ಪ್ರತಸಿಯುಮುವ ಹಿಡಿದರೆ, ಲಿಂಗದಲ್ಲಿ ಸಲುವನು. ಇದಲ್ಲದೆ, ಅನಾಯತ ನಿಯಮಂಗಳ ಹಿಡಿದಾತನು ಲಿಂಗದಲ್ಲಿಗೆ ಸಲ್ಲನೆಂಬುದೀ ವಚನದ ತಾತ್ಪರ್ಯಾರ್ಥ.

೯. ಅಗ್ನಿಸ್ತಂಭದ ರಕ್ಷೆ ಇದ್ದು, ಮನೆ ಬೆಂದಿತ್ತಯ್ಯಾ! ಬಲಮುರಿಯ ಶಂಖವಿದ್ದು ಪದ ಹೋಯಿತ್ತಯ್ಯಾ! ಏಕ ಮುಖದ ರುದ್ರಾಕ್ಷಿ ಇದ್ದು ವಿಘ್ನವಾಯಿತ್ತಯ್ಯಾ! ಇವೆಲ್ಲವ ಸಾಧಿಸಿದರೆ, ಏನೂ ಇಲ್ಲದಂತಾಯಿತ್ತು ಗುಹೇಶ್ವರಾ.

ಟೀಕು:— ಲಿಂಗವ ನಂಬಿ, ನಿಷ್ಠೆಯಿಂದ ಪೂಜಿಸಿದಡೆ, ಅಸಾಧ್ಯವೆಲ್ಲವೂ ಸಾಧ್ಯವಹುದು. ಲಿಂಗವ ನಂಬದೆ ಏನ ಸಾಧಿಸಿದಡೆಯೂ ಪ್ರಯೋಜನವಿಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೧೦. ಜಾತಿಗಾರನ ಕಾಲು ಮುಳ್ಳು ತಾಗಿ ನೊಂದಿತ್ತೆಂಬಂತೆ, ಸೂನೆಗಾರನ ಮನೆಯಲ್ಲಿ ಹೆಣ ಹೋಗಿ ಅಳುವಂತೆ, ಕನ್ನಗಳ್ಳನ ಮನೆಯಲ್ಲಿ ಬಟ್ಟಲು ಹೋಗಿ ಮರುಗುವಂತೆ, ಠಕ್ಕನ ಪೂಜೆಗೆ ಮೆಚ್ಚುವನೇ ನಮ್ಮ ಗುಹೇಶ್ವರನು?

ಟೀಕು:— ಲಿಂಗದಲ್ಲಿ ನಂಬುಗೆಯುಳ್ಳ ಲಿಂಗವಂತನು ಲಿಂಗಕ್ಕೆ ದೈನ್ಯ ಬಟ್ಟಡೆ, ಒಪ್ಪುವದಲ್ಲದೆ, ಲಿಂಗದಲ್ಲಿ ನಂಬುಗೆ ಇಲ್ಲದ ಠಕ್ಕನು ಲಿಂಗಕ್ಕೆ ದೈನ್ಯ ಬಟ್ಟಡೆ, ಅದು ಲಿಂಗ ಮೆಚ್ಚಲ್ಲವೆಂಬುದೀ ವಚನದ ಉಪದೃಷ್ಟಕ್ಕೆ ಏಕಾರ್ಥ ನಿರ್ವಚನ.

೧೧. ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ! ಗಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ. ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂದಡೆ, ಬಿನ್ನಾಣ ತಪ್ಪಿತ್ತು ಗುಹೇಶ್ವರಾ.

ಟೀಕು:—ಅಲ್ಪ ಸಂಸಾರ ಸುಖಕ್ಕೆ ಮುಚ್ಚಿ, ಮರುಳಾಗಿ ಲಯವಾದ ಬಳಿಕ ಲಿಂಗವ ಕಂಡಿಹೆನೆಂದಡೆ, ಕಾಣಬಾರದೆಂಬುದೀ ವಚನದ ತಾತ್ಪರ್ಯಾರ್ಥ.

೧೨. ಜವನ ಕದ್ದ ಕಳ್ಳನು, ಅಗಲಿ ಮಿಕ್ಕು ಹೋದರೆ, ಅಗಲಕ್ಕೆ ಹಬ್ಬಿತ್ತು. ಅಲ್ಲಲ್ಲಿ ನೋಡಲು ಶರಣ ಸಂಗವನರಸುವರೆಲ್ಲ ಅಲ್ಲಲ್ಲಿಗೆ



ನೋಡಿರೆ ಸಾಧಗರೆಲ್ಲರು ಸಾಧಿಸ ಹೋಗಿ ಅಭೇದ್ಯವನರಿಯದೆ. ಕೆಟ್ಟರು ಗುಹೇಶ್ವರಾ.

ಟೀಕು:—ಮೃತ್ಯುವಿನ ಬಾಧೆಯನೊತ್ತರಿಸಿ ನಿಲಿಸಿ, ತನ್ನ ತಪ್ಪಿಸಿಕೊಂಡಿರ್ಪ ಶಿವನು ತನ್ನಿಂದಗಲಿ ಹೋದನೆಂದು ಶರಣರ ಸಂಗದಲ್ಲಿ ಅರಸಿ ಕಂಡೆಹೆನೆಂಬೆನ್ನಕ್ಕರ, ತಾನಾರೆಂದರಿಯದ ಭ್ರಮೆ ತನ್ನೊಳಗೆ ಬಳ್ಳಿವರಿಯಿತ್ತು. ಇಂತಪ್ಪ ಸಾಧನೆಯ ಸಾಧಿಸುತ್ತಿರ್ದಡೆ, ಅಸಾಧ್ಯ ಸಾಧ್ಯವಾಗಲರಿಯದೆಂಬುದೀ ವಚನದ ತಾತ್ಪರ್ಯಾರ್ಥ.

೧೩. ಭವ ಉಳ್ಳನ್ನಕ್ಕರ ಧಾವತಿ ಮಾಣದು, ಶರೀರ ಉಳ್ಳನ್ನಕ್ಕರ ಅವಸ್ಥೆ ಮಾಣದು, ಗುಹೇಶ್ವರನೆಂಬ ನೆನಹುಳ್ಳನ್ನಕ್ಕರ ಲಿಂಗವೆಂಬುದ ಬಿಡಲಾಗದು.

ಟೀಕು:—ಒಡಲುವಿಡಿದು ಸಂಸಾರ ಚಿನ್ಹವುಳ್ಳನಕ್ಕರ ಕಾಯ ವಿಕಾರಂಗಳು ಹಿಂಗವು. ಇದನುತ್ತರಿಸಬಲ್ಲಡೆ ದೃಢವಾಗಿ, ಲಿಂಗವ ನಂಬುವುದು ಎಂಬುದೀ ವಚನಾರ್ಥ.

೧೪. ಮಜ್ಜನಕ್ಕೆರೆವರೆಲ್ಲ ಇದ್ದಲ್ಲಿ ಫಲವೇನು? ಮುದ್ರೆಧಾರಿಗಳಪ್ಪರಯ್ಯಾ! ಲಿಂಗದಲ್ಲಿ ನಿಷ್ಠೆ ಇಲ್ಲ. ಜಂಗಮದಲ್ಲಿ ಪ್ರೇಮಿಗಳಲ್ಲ. ವೇಷಧಾರಿಗಳಪ್ಪರಯ್ಯಾ! ನೋಡಿ ಮಾಡುವ ಭಕ್ತ ಸಜ್ಜನ ಸಾರಾಯನಲ್ಲ. ಗುಹೇಶ್ವರ ಮೆಚ್ಚನಯ್ಯಾ!

ಟೀಕು:—ಲಿಂಗದಲ್ಲಿ ನಿಷ್ಠೆ ಇಲ್ಲದ, ಜಂಗಮದಲ್ಲಿ ಪ್ರೇಮಿಗಳಲ್ಲದ ವೇಷಧಾರಿಗಳು ಲಿಂಗಕ್ಕೆ ಮಜ್ಜನಕ್ಕೆರೆದಡೆ, ಅದು ಲೋಕಾಚಾರವಲ್ಲದೆ, ಅದು ಲಿಂಗಾರ್ಚನೆಯಲ್ಲವೆಂಬುದೀ ವಚನಾರ್ಥ.

೧೫. ಕೊಟ್ಟ ಕುದುರೆಯನೇರಲರಿಯದೆ, ಮತ್ತೊಂದು ಕುದುರೆಯ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ. ಇದು ಕಾರಣ ನೆರೆ ಮೂರು ಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು. ಬಳಲುತ್ತಿಪ್ಪಾರೆ. ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು?

ಟೀಕು:— ಶ್ರೀಗುರು ಕರಸ್ಥಲಕ್ಕೆ ಅನುಗ್ರಹಿಸಿ ಕೊಟ್ಟ ಲಿಂಗಸ್ಥಲದಲ್ಲಿ ನೆನಹು ನಿಲಲರಿಯದೆ, ಬೇರೆ ಮತ್ತೆ ಲಿಂಗಪಥವನರಸುವರು. ಲಿಂಗನಿಷ್ಠಾ ಪರರಲ್ಲ. ಇದು ಕಾರಣ ಸರ್ವರೂ ದೇಹಭಾರವ ಹೊತ್ತುಕೊಂಡು ಸುಳಿವ ಸಂಸಾರಿಗಳಾದರೆಂಬುದೀ ವಚನಾರ್ಥ.

೧೬. ಜೀವವಿಲ್ಲದ ಹೆಣನ ಹಿಡಿದಾಡುವರಯ್ಯಾ! ಪ್ರತಿ ಇಲ್ಲದಪ್ರತಿಗೆ ಪ್ರತಿ ಮಾಡುವರಯ್ಯಾ! ಶಿರವಿಲ್ಲದ ಮುಂಡಕ್ಕೆ ಸೇಸೆಯನಿಕ್ಕುವರಯ್ಯಾ ಗುಹೇಶ್ವರಾ.

ಟೀಕುಃ— ಸಂಪೂರ್ಣ ಕಳೆ ಇಲ್ಲದೆ, ಕರಸ್ಥಲದಲ್ಲಿ ಧರಿಸಿ ಮಾಡುವ, ಲಿಂಗಾರ್ಚನೆ, ಜೀವವಿಲ್ಲದ ಹೆಣನ ಹಿಡಿದಾಡುವಂತೆ ಸಲ್ಲದೆಂಬುದೀ ವಚನದ ತಾತ್ಪರ್ಯಾರ್ಥ.

೧೭. ಅದ್ಯರಲ್ಲ, ವೇದ್ಯರಲ್ಲ, ಸಾದ್ಯರಲ್ಲದ ಹಿರಿಯರು ನೋಡಾ! ತನು ವಿಕಾರ, ಮನವಿಕಾರ, ಇಂದ್ರಿಯ ವಿಕಾರದ ಹಿರಿಯರ ನೋಡಾ. ಶಿವ ಚಿಂತೆ, ಶಿವಜ್ಞಾನಿಗಳ ಕಂಡಡೆ, ಅಳಿವಾಡಿ ನುಡಿವರು ಗುಹೇಶ್ವರನನರಿಯದ ಕರ್ಮಿಗಳಯ್ಯ.

ಟೀಕುಃ—ಸ್ವಾನುಭಾವ ಸ್ವತಃಸಿದ್ಧರಲ್ಲದ ವಾಗದ್ವೈತಿಗಳು ತಮ್ಮ ಅಭ್ಯಾಸದ ಬಲದಿಂದ ಮಹಾಜ್ಞಾನಿಗಳ ಕಂಡಡೆ ಹಳಿದು ನುಡಿವರು. ಇಂತಪ್ಪ ಅನ್ಯಕಾರಿಗಳಿಗೆ ಭವವೇ ಪ್ರಾಪ್ತಿಯಲ್ಲದೆ, ಮುಕ್ತಿ ಇಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೧೮. ಅಳವರಿಯದ ಭಾಷೆ, ಬಹು ಕುಳವಾದ ನುಡಿ, ಇಂತೆರಡರ ನುಡಿ ಹುಸಿಯಯ್ಯಾ. ಬಹು ಭಾಷಿತರು ಸುಭಾಷಿತ ವರ್ಜಿತರು ಶರಣಸತಿ, ಲಿಂಗಪತಿಎಂಬರು. ಹುಸಿಯಯ್ಯಾ. ಇಂತಪ್ಪವರ ಕಂಡು ನಾಚುವೆನಯ್ಯಾ ಗುಹೇಶ್ವರಾ.

ಟೀಕುಃ—ತಮ್ಮಲ್ಲಿ ನಡೆ ಇಲ್ಲದೆ ತಮಗಳವಲ್ಲದ ಭಾಷೆ, ಅಳವಲ್ಲದ ಛಲ ನಿಯಮವ ಹಿಡಿದು ಬಹು ಭಾಷಿತರಾಗಿ, ಇಪ್ಪ ಲಾಂಛನ ಡಂಭಕರ ಶಿವನೊಲ್ಲನೆಂಬುದೀ ವಚನದ ತಾತ್ಪರ್ಯಾರ್ಥ.

೧೯. ಅಮರಾವತಿಯ ಪಟ್ಟಣದಲ್ಲಿ ದೇವೇಂದ್ರನಾಳುವ ನಂದನ ವನವಯ್ಯಾ! ಅತ್ತ ಸಾರೆಲೆ ಕಾಮಾ ಮೋಹವೆ? ನಿನಗೆ ಲೋಕಾದಿ ಲೋಕವನೆಲ್ಲವ ಮರುಳು ಮಾಡಿದೆ ಕಾಮಾ. ಗುಹೇಶ್ವರ ಲಿಂಗವನರಿ. ಭೋ.

ಟೀಕುಃ—ದೇವ ದಾನವ ಮಾನವಾದಿಗಳೆಲ್ಲರು ಕಾಮನ ಪಂಚಬಾಣದಲ್ಲಿ ಸಿಲ್ಕಿಪ್ಪರು. ಲಿಂಗದೇಹಿಗಳು ಲಿಂಗನಿಷ್ಠಾಪರರಾಗಿ ಲಿಂಗ ವಿರಹಿಗಳಾಗಿಪ್ಪರಾಗಿ ಅವರಲ್ಲಿ ಕಾಮ ವಿಕಾರವಿಲ್ಲವೆಂಬುದೀ ವಚನಾರ್ಥ.



೨೦. ದೇಶ ಗುರಿಯಾಗಿ, ಲಯವಾಗಿ ಹೋದವರ ಕಂಡೆ. ತಮ್ಮಂಥ ಗುರಿಯಾಗಿ, ಲಯವಾಗಿ ಹೋದವರ ಕಂಡೆ. ಕಾಮ ಗುರಿಯಾಗಿ ಬೆಂದು ಹೋಪವರ ಕಂಡೆ. ನೀ ಗುರಿಯಾಗಿ ಹೋದವರ ಕಾಣೆ ಗುಹೇಶ್ವರಾ.

ಟೀಕುಃ— ಅಜ್ಞಾನದಿಂದ ದೇಶಭ್ರಮಣೆಯಾಗಿ ಬಂದು ಕಾಮಬಾಣದಲ್ಲಿ ನೊಂದು, ಕೆಡುತ್ತಿರ್ಪವರೆಲ್ಲರು ಉಂಟು. ಲಿಂಗಕ್ಕೆ ಒಡಲನಿತ್ತು ಆ ಲಿಂಗದಲ್ಲಿಯೇ ಅಳಿವವರು ಅಲ್ಲಲ್ಲಿಗಪೂರ್ವವೆಂಬುದೀ ವಚನಾರ್ಥ.

೨೧. ಆ ಮಾತು ಈ ಮಾತು ಹೋ ಮಾತೆಲ್ಲವು ನೆರೆದು ಹೋಯಿತ್ತಲ್ಲಾ. ಭಕ್ತಿ ನೀರಲ್ಲಿ ನೆರೆದು ಜಲವ ಕೂಡಿ ಹೋಯಿತ್ತಲ್ಲಾ. ಸಾವನ್ನಕ್ಕವಸರ ಉಂಟೆ ಗುಹೇಶ್ವರಾ?

ಟೀಕುಃ—ನಿಜವಿಲ್ಲದ ಮಾತು ಬಾಯ್ಗೆ ಬಂದಂತೆ ನುಡಿದು ಕಡೆಯಲ್ಲಿ ಮಡಿದು ಹೋಹ ಪ್ರಾಣಿಗಳಿಗೆ ಲಿಂಗ ಸಂಬಂಧವಿಲ್ಲವೆಂಬುದೀ ವಚನಾರ್ಥ.

೨೨. ಅಗ್ನಿಗೆ ತಂಪುಂಟೆ? ವಿಷಕ್ಕೆ ರುಚಿಯುಂಟೆ ಹೇಳಾ? ಕಂಗಳಿಗೆ ಮರೆಯುಂಟೆ ಹೇಳಾ ಲಿಂಗವೆ? ದಾಳಿಕಾರಂಗೆ ಧರ್ಮ ಉಂಟೆ? ಕಂಗಳಿಗೆ ಕರುಳುಂಟೆ? ಗುಹೇಶ್ವರಾ ನಿಮ್ಮ ಶರಣರು ಮೂರು ಲೋಕವರಿಯೆ ನಿಶ್ಚಟರಯ್ಯಾ.

ಟೀಕುಃ— ನಚ್ಚಿ ಮಚ್ಚಿ ಒಲಿದ ಲಿಂಗದೇಹಿಗೆ ಲಿಂಗದಲ್ಲಿಯೆ ಲೋಲುಪ್ತಿಯುಂಟಾದ ಕಾರಣ, ಆತನ ತನುಗುಣವೆಲ್ಲವು ಲಿಂಗದ ತನುಗುಣವೆಯಾದ ಕಾರಣ ಆತನಲ್ಲಿ ಆವ ಗುಣ ಧರ್ಮವನರಸಲಿಲ್ಲವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

೨೩. ಲಿಂಗಭಕ್ತನೆಂದು ಜಗವೆಲ್ಲ ಸಾರುತಿಪ್ಪರು. ಲಿಂಗಭಕ್ತನ ಇಂಬಾವುದೆಂದರಿಯರು. ಲಿಂಗಭಕ್ತ ಹಮ್ಮು ಬಿಮ್ಮಿನವನೇ? ಲಿಂಗಭಕ್ತ ಸೀಮೆಯಾದವನೇ? ಪ್ರಾಣಲ್ಲದ ರೂಪು, ಒಡಲಿಲ್ಲದ ಜಂಗಮ, ಉಳಿದವೆಲ್ಲಾ ಶಠೆ ಎಂಬೆನು ಗುಹೇಶ್ವರಾ.

ಟೀಕುಃ— ಲಿಂಗಕ್ಕೆ ಒಲಿದ ಭಕ್ತಂಗೆ ಹಮ್ಮಿಲ್ಲ, ಬಿಮ್ಮಿಲ್ಲ, ಜಾತಿ ಇಲ್ಲ, ಸೂತಕವಿಲ್ಲ. ಅದೇನು ಕಾರಣವೆಂದಡೆ, ವಾಯು ಪ್ರಾಣವರತ ಒಡಲಿನಲ್ಲಿ ಉಪಾಧಿ ಇಲ್ಲದೆ, ಚರಿಸುವ ಕಾರಣ ಈ ಪಥ ಉಳ್ಳರೆ ಆತ

ಲಿಂಗದೇಹಿ, ಅಲ್ಲದೊಡೆ ಉಪಾಧಿಕ ದೇಹಿ, ಎಂಬುದೀ ವಚನದ ತಾತ್ಪರ್ಯಾರ್ಥ.

೨೪. ಭಕ್ತ ಭಕ್ತನೆಂಬರು. ಪೃಥ್ವಿಯ ಪೂರ್ವಾಶ್ರಯುವ ಕಳೆಯ ಲರಿಯದನ್ನಕ್ಕರ, ಅಪ್ಪುವಿನ ಪೂರ್ವಾಶ್ರಯುವ ಕಳೆಯಲರಿಯದನ್ನಕ್ಕರ ತೇಜದ ಪೂರ್ವಾಶ್ರಯುವ ಕಳೆಯಲರಿಯದನ್ನಕ್ಕರ, ವಾಯುವಿನ ಪೂರ್ವಾಶ್ರಯುವ ಕಳೆಯಲರಿಯದನ್ನಕ್ಕರ, ಆಕಾಶದ ಪೂರ್ವಾಶ್ರಯುವ ಕಳೆಯ ಲರಿಯದನ್ನಕ್ಕರ, ಸೋಮ ಸೂರ್ಯರ ಪೂರ್ವಾಶ್ರಯುವ ಕಳೆಯಲರಿಯದನ್ನಕ್ಕರ, ಆತ್ಮನ ಪೂರ್ವಾಶ್ರಯುವ ಕಳೆಯಲರಿಯದನ್ನಕ್ಕರ ಭಕ್ತನೆಂದು ಲಿಂಗವ ಪೂಜಿಸುವವರ ಕಂಡು, ನಾನು ಬೆರಗಾದೆ ಗುಹೇಶ್ವರಾ॥

ಟೀಕು:— ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮರೆಂಬ ಅಷ್ಟತನುಗಳ ಪೂರ್ವಾಶ್ರಯುಗಳ ಕಳೆಯಲರಿಯದೆ, ಲಿಂಗಕ್ಕೆ ಭಕ್ತಿಯ ಮಾಡುವ ಭೂತಪ್ರಾಣಿಗಳು ಲಿಂಗಪಥಕ್ಕೆ ಸಲ್ಲರೆಂಬುದೀ ವಚನದ ಬಹುಶಬ್ದಕ್ಕೇಕಾರ್ಥ ನಿರ್ವಚನ॥

೨೫. ಅನ್ಯರಜವ ಸೋಂಕದೆ, ತನ್ನ ರಜವ ಬಾಧಿಸದೆ, ರವಿಯ ಬೆಳಸ ಬಳಸದೆ, ಲಿಂಗದ ಬೆಳಸ ತಂದು, ಜಂಗಮದಲ್ಲಿ ಸವಿಸುತ್ತಿರ್ಪ ಲಿಂಗಭಕ್ತ ಆ ಭಕ್ತನಲ್ಲಿ ಗುಹೇಶ್ವರಲಿಂಗವಿಪ್ಪನು. . .

ಟೀಕು.— ಅನ್ಯಪಿಂಡವನಾಸೆವಿಡಿಯದೆ, ತನ್ನ ಪಿಂಡವ ನೋಯಿಸದೆ, ರೋಷದಾಸೆಯ ಬಳಸದೆ, ಲಿಂಗದಲುದಯವಾದ ಲಿಂಗದ್ರವ್ಯವನೆ ತಂದು ಜಂಗಮದಲ್ಲಿ ಸವಿಸುತ್ತಿರ್ಪ ಭಕ್ತನಲ್ಲಿ ನಿರಂತರ ಲಿಂಗ ವಿಪ್ಪನೆಂಬುದೀ ವಚನಾರ್ಥ.

೨೬. ತ್ರಿವಿಧದ ನಿತ್ಯವ ತ್ರಿವಿಧದ ಅನಿತ್ಯವ ಬಲ್ಲವರಾರೋ? ತ್ರಿವಿಧಕ್ಕೆ ತ್ರಿವಿಧವನಿತ್ತು ತ್ರಿವಿಧ ಪ್ರಸಾದವ ಕೊಳಬಲ್ಲಡೆ ಆತನ ತ್ರಿವಿಧ ನಾಥನೆಂಬೆನು. ಆತನ ವೀರನೆಂಬೆ, ಆತನ ಧೀರನೆಂಬೆ, ಗುಹೇಶ್ವರ ಲಿಂಗ ದಲ್ಲಿ ಆತನಚ್ಚ ಪ್ರಸಾದಿ ಎಂಬೆ.

ಟೀಕು:— ಸ್ಥೂಲ, ಸೂಕ್ಷ್ಮ, ಕಾರಣವೆಂಬ ತ್ರಿವಿಧದ ಅನಿತ್ಯವ ಕೆಡಿಸಿ, ಆ ಕಾಯತ್ರಯದ ಮೇಲೆ ಗುರು, ಲಿಂಗ, ಜಂಗಮವೆಂಬ ತ್ರಿವಿ



ಧದ ನಿತ್ಯವ ನೆಲೆಗೊಳಿಸಿ, ಆ ಲಿಂಗತ್ರಯಕ್ಕೆ ತನು, ಮನ, ಧನವೆಂಬ ತ್ರಿವಿಧವನಿತ್ತು, ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದವೆಂಬ ಪ್ರಸಾದತ್ರಯವ ಕೊಳಬಲ್ಲಾತನು ಆ ಲಿಂಗತ್ರಯಕ್ಕೆ ಒಡೆಯನು. ಆತನೇ ವೀರನು, ಆತನೇ ಧೀರನು, ಆತನೇ ಅಚ್ಚಪ್ರಸಾದಿ ಎಂಬುದೀ ವಚನದ ತಾತ್ಪರ್ಯಾರ್ಥ.

೨೭. ಪ್ರಣವ ಮಂತ್ರವ ಕರ್ಣದಲ್ಲಿ ಹೇಳಿ, ಶ್ರೀ ಗುರುಶಿಷ್ಯನ ಅಂಗದ ಮೇಲೆ ಲಿಂಗಪ್ರತಿಷ್ಠೆಯ ಮಾಡಿದ ಬಳಿಕ, ಪ್ರಾಣದಲ್ಲಿ ಲಿಂಗ ವಿಪ್ಪುದೆಂಬ ವ್ರತಗೇಡಿಗಳ ಮಾತ ಕೇಳಲಾಗದು. ಒಳಗಿಪ್ಪನೇ ಲಿಂಗ ದೇವನು? ಮಲಮೂತ್ರದ ಹೇಸಿಕೆಯ ಮಾಂಸದ ನಡುವೆ ಅಲ್ಲಿ ಪ್ರಾಣ ವಿಪ್ಪುದಲ್ಲದೆ ಲಿಂಗವಿಪ್ಪುದೆ? ಆ ಪ್ರಾಣನ ತಂದು ಇಷ್ಟಲಿಂಗದಲ್ಲಿ ಇರಿಸಿ ನೆರೆಯಬಲ್ಲಡೆ ಆತನೆ ಪ್ರಾಣಲಿಂಗ ಸಂಬಂಧಿ ಎಂಬೆ. ಅಲ್ಲದವರ ಮೆಚ್ಚುವನೆ ನಮ್ಮ ಗುಹೇಶ್ವರಲಿಂಗವು?

ಟೀಕು.— ಶ್ರೀಗುರುಕರುಣವ ಪಡೆದು ಅಂಗದ ಮೇಲೆ ಲಿಂಗ ಸಂಬಂಧವಾಗಿ, ಆ ಲಿಂಗದಲ್ಲಿ ಪ್ರಾಣ ಸಮರಸವಾದಡೆ ಅದೇ ಪ್ರಾಣ ಲಿಂಗ ಸಂಬಂಧ. ಇದಲ್ಲದೆ ಲಿಂಗಧಾರಣ ಮಾತ್ರದಿಂದ ಪ್ರಾಣಲಿಂಗ ಸಂಬಂಧಿಗಳೆಂಬ ನುಡಿ ಮಿಥ್ಯ ಎಂಬುದೀ ವಚನಾರ್ಥ.

೨೮. ಕಾಯದೊಳಗಣ ಜೀವವ ಮೀರಿ ಹೋಹ ಕಳ್ಳನ ಸಂಗ ಬೇಡ. ನಿಮ್ಮ ನಿಮ್ಮ ವಸ್ತುವ ಸುಯಿಧಾನವ ಮಾಡಿಕೊಳ್ಳಿ. ಗುಹೇಶ್ವರ ನೆಂಬ ಕಳ್ಳನ ಕೊಂದರೆ ಅಳುವವರಾರು?

ಟೀಕು.— ಕಾಯ ಭಾವ ಜೀವಭಾವವ ಹೊದ್ದದೆ ಬೇರ್ಪಡಿಸಿಪ್ಪ ಲಿಂಗದಲ್ಲಿ ನಾನು ಸಂಗವ ಮಾಡಿಹೆನೆನಬೇಡ. ಆ ಲಿಂಗವೆ ತಾನೆಂದರಿದಡೆ ಹಿಂದಣ ಮುಂದಣ ಚಿಂತೆ ಇಲ್ಲವೆಂಬುದೀ ವಚನಾರ್ಥ.

೨೯. ಅಕ್ಕಟಾ! ಜೀವನ ತ್ರಿವಿಧವೆ ಮೂರಕ್ಕೆ ಮುಟ್ಟದೆ ಹೋದೆಯಲ್ಲಾ. ಬಿಂದುವಿನ ಕೊಡನ ಹೊತ್ತುಕೊಂಡು, ಅಂದ ಛಂದಗೆಟ್ಟು ಆಡುವರಯ್ಯಾ! ಗುಹೇಶ್ವರ ನಿರಾಳವೆ ಅಯ್ದರಿಂದ ಕೆಟ್ಟಿತ್ತು ಮೂರು ಲೋಕ.

ಟೀಕು:— ವಿಶ್ವ, ತೈಜಸ, ಪ್ರಾಜ್ಞರೆಂಬ ಜೀವತ್ರಯವು ಇಷ್ಟ, ಪ್ರಾಣ, ಭಾವವೆಂಬ ತ್ರಿವಿಧ ಲಿಂಗಸ್ಥಲದಲ್ಲಿ ಸಂಗವಿಲ್ಲದಕಾರಣ, ಮಾಂಸ

ಬಿಂದುವ ಧರಿಸಿಕೊಂಡು, ಚರಿಸುತ್ತ ಪಂಚಸೂತ ಗುಣಭ್ರಾಂತಿಯಿಂದ ತ್ರಿಜಗ ಕೆಡುತ್ತಿಹುದು. ಪ್ರಾಣಸ್ಥಾನದಲ್ಲಿ ಲಿಂಗ ನಿರಾಳ ವೇಧಿಸಿದಡೆ ಕೇಡಿಲ್ಲವೆಂಬುದೀ ವಚನಾರ್ಥ.

೩೦. ಅಷ್ಟದಳ ಕಮಲವ ಮೇಲಿಪ್ಪ ನಿಃಶೂನ್ಯನ ಮರ್ಮವ ನರಿಯದೆ, ಪ್ರಾಣಲಿಂಗವೆಂದೆಂಬರು. ಸಂದೇಹ, ಶುದ್ಧಿಯ ವಂಚಕರು ಅಂಗದಾಪ್ಯಾಯನಕ್ಕೆ ಲಿಂಗವನರಸುವ ಭಂಡರನೇನೆಂಬೆ ಗುಹೇಶ್ವರಾ?

ಟೀಕು:— ಹೃದಯ ಕಮಲ ಮಧ್ಯದಲ್ಲಿಪ್ಪ ಪ್ರಾಣಲಿಂಗವನರಿಯದೆ, ಬೇರೆ ಮತ್ತೆ ಪ್ರಾಣಲಿಂಗ ಸಂಬಂಧವ ಬಯಸಿ ಬಾಯಾರುವ ಅಜ್ಞಾನಿಗಳಿಗೆ ಪ್ರಾಣಲಿಂಗ ಸಂಬಂಧವಳವಡದೆಂಬುದೀ ವಚನಾರ್ಥ.

೩೧. ಲಿಂಗಾರ್ಚನೆ ಇಲ್ಲದ ಮುನ್ನ, ಸಿಂಗಿಯನಾರೋಗಿಸಿದಿರಿ. ಸಂಜೆ ಸಮಾಧಿಗಳಿಲ್ಲದ ಮುನ್ನ ಉಂಡಿರಿ. ಚೆನ್ನನ ಮನೆಯಲ್ಲಿ ಚಿತ್ರಗುಪ್ತರರಿಯದ ಮುನ್ನ ಎತ್ತಿದಿರಿ. ಕಾಂಚಿಯಪುರವ ಬೈಚಿಟ್ಟರಿ. ಕೈಲಾಸದಲ್ಲಿ ನಿಮ್ಮ ಚಿಕ್ಕಟುದರದಲ್ಲಿ ಈರೇಳು ಭುವನವೆಲ್ಲವು ನಿಮ್ಮ ರೋಮಕೂಪದಲ್ಲಡಗಿದವು, ಪ್ರಾಣಾಪಾನ, ವ್ಯಾನೋದಾನ, ಸಮಾನ, ರಹಿತ ಗುಹೇಶ್ವರಾ॥

ಟೀಕು:— ಲಿಂಗಾರ್ಚನೆಯ ಕ್ರಿಗಳನಾಚರಿಸದ ಮುನ್ನವೆ ಪ್ರಪಂಚವಡಗಿಸಿದ ಕಾರಣ, ಕಾಲಕಲ್ಪಿತ ಮಂತ್ರ ತಂತ್ರ ರಹಿತವಾಗಿ ಸುಖ ಪ್ರಸನ್ನ ಲೀಲಾ ವಿಲಾಸವನೆಯ್ದಿ, ಒಳಹೊರಗೆಂಬುದಿಲ್ಲದ ಭಕ್ತಿ ಪಿಂಡವ ಧರಿಸಿದ ಶರಣನ ಉದರದಲ್ಲಿ ಕೈಲಾಸವಡಗಿತ್ತು. ಈರೇಳು ಭುವನವು ರೋಮಕೂಪದೊಳಗಡಗಿದವು. ಇಂತಪ್ಪ ಶರಣನೆ ಪಂಚಪ್ರಾಣವಾಯು ವಿಕಾರವಳಿದ ಪ್ರಾಣಲಿಂಗಸಂಬಂಧಿ ಎಂಬುದೀ ವಚನದ ತಾತ್ಪರ್ಯಾರ್ಥ.

೩೨. ಕಂಗಳಾಲಿಯ ಕರಿಯ ನಾಳದಲ್ಲಿ ಈರೇಳು ಭುವನಂಗಳಡಗಿದವು. ನಾಟಕ ನಾಟಕವ ನಟಿಸುತ್ತ, ಆಡಿಸುವ ಸೂತ್ರದ ಪರಿ, ಗುಹೇಶ್ವರಲಿಂಗ ನಿರಾಳ ಚೈತನ್ಯ.

ಟೀಕು:— ನೋಡುವ ನೋಟದ ಸೂಕ್ಷ್ಮ ನಾಳದಲ್ಲಿ ರೂಪಾದಿಯಾದ ವಿಶ್ವವಡಗಿದ ಹಾಗೆ ಶರಣನ ಸೂಕ್ಷ್ಮಾಂತರಂಗದಲ್ಲಿ ಲಿಂಗವಡಗಿಹುದೆಂಬುದೀ ವಚನಾರ್ಥ.



೩೩. ಮರನೊಳಗಣ ಪತ್ರ ಫಲಂಗಳು ಮರ ಕಾಲ ವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾವದಿಚ್ಛೆಗೆ ತೋರುವವು. ಲೀಲೆಯಾದಡುಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರಾ.

ಟೀಕು:— ಶಿವನ ಭಾವದಿಚ್ಛೆಗೆ, ಶಿವನೊಳಗಡಗಿದ ವಿಶ್ವವು ಪ್ರಕಾಶಿಸಿ ತೋರಲು, ಆ ವಿಶ್ವಕ್ಕೆ ಶಿವನು ಉಮಾಪತಿಯಾಗಿರ್ದನು. ವಿಶ್ವವಳಿದಡೆ, ಶಿವನು ಸ್ವಯಂಭುವಾದನೆಂಬುದೀ ವಚನಾರ್ಥ.

೩೪. ಓಡಿನಲುಂಟೆ ಕನ್ನಡಿಯ ನೋಟ? ಮರುಳಿನ ಕೂಟ ವಿಪರೀತ ಚರಿತ್ರ. ನೋಟದಸುಖ ತಾಗಿ ಕೋಟಲೆಗೊಂಡನು. ಗುಹೇಶ್ವರ ಲಿಂಗವು ಒಬ್ಬನೆ ಅಚಳ, ಉಳಿದವರೆಲ್ಲರೂ ಸೂತಕಿಗಳು.

ಟೀಕು:— ಅಜ್ಞಾನದಲ್ಲಿ ಜ್ಞಾನ ಮುಖ ದರ್ಪಣವಿಲ್ಲ. ಆ ಅಜ್ಞಾನದ ಕೂಟವೆ ವಿಪರೀತ ಭಾವ. ಅದನಳಿದು ಸುಜ್ಞಾನ ದೃಷ್ಟಿಯ ಸಂಗವಾದಡೆ, ಲಿಂಗ ವಿರಹ ಮಿಗಿಲಾಗಿ, ತದ್ಗತವಾದ ಕಾರಣ ಆವ ಸೂತಕವೂ ಇಲ್ಲವೆಂಬುದೀ ವಚನಾರ್ಥ.

೩೫. ಎಸೆಯದಿರು, ಎಸೆಯದಿರು ಕಾಮಾ ನಿನ್ನಬಾಣ. ಹುಸಿಯಲೇಕೋ? ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವು ಸಾಲವೆ ನಿನಗೆ? ಗುಹೇಶ್ವರಲಿಂಗದ ವಿರಹದಲ್ಲಿ ಬೆಂದವರ ಮರಳಿ ಸುಡಲುಂಟೆ ಮರುಳ ಕಾಮಾ?

ಟೀಕು:— ಅಂಗವಿಕಾರ ಮೊದಲಾದ ಕಾಮವಿಕಾರವಳಿದು ಜ್ಞಾನಾಗ್ನಿಯಲ್ಲಿ ದಗ್ಧವಾದ ಶರಣನ ಕಾಮವಿಕಾರ ಮುಟ್ಟಲಮ್ಮವೆಂಬುದೀ ವಚನಾರ್ಥ.

೩೬. ಸತಿ ಭಕ್ತೆಯಾದಡೆ ಹೊಲೆಗಂಜಲಾಗದು. ಪತಿ ಭಕ್ತನಾದಡೆ ಕುಲಕ್ಕಂಜಲಾಗದು. ಸತಿ ಪತಿ ಎಂಬ ಅಂಗ ಸುಖ ಹಿಂಗಿ ಲಿಂಗವೆ ಪತಿಯಾದ ಬಳಿಕ, ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ? ಪಾಲುಂಡು ಮೇಲುಂಬರೆ ಗುಹೇಶ್ವರಾ?

ಟೀಕು:— ಅಂಗ ಪ್ರಕೃತಿಯಳಿದು, ಲಿಂಗ ಪ್ರಕೃತಿಯಾದ ಬಳಿಕ ಅಂಗ ಸೂತಕ ಹಿಂಗಬೇಕು. ಪ್ರಾಣ ಪ್ರಕೃತಿಯಳಿದು ಲಿಂಗ ಪ್ರಾಣವಾದ ಬಳಿಕ ಪ್ರಾಣಿನ ಕುಳಸ್ಥಳ ಹಿಂಗಬೇಕು. ಇಂತು ಅಂಗಸ್ರಾ

ಣವೆಂಬ ಭಂಗ ಹಿಂಗಿದಲ್ಲಿ ಲಿಂಗವೇ ಪತಿಯಾಗಿರ್ದ ಕಾರಣ ಶರಣನೇ ಸತಿ, ಲಿಂಗವೇ ಪತಿಯಲ್ಲದೆ ಅನ್ಯವಿಷಯವಿಲ್ಲವೆಂಬುದೀ ವಚನಾರ್ಥ.

೩೭. ಉರಿಗೆ ಉರಿಯನೆ ತೋರುವೆನು. ಅಮೃತದ ಕಳೆಯಲ್ಲಿ ನಿಲಿಸುವೆನು. ನಾನು ಬ್ರಹ್ಮಸ್ಥಾನದಲ್ಲಿ ಗುಹೇಶ್ವರಲಿಂಗ ನಿರಂತರವಾಗಿ ಇರ್ದೆನಯ್ಯಾ.

ಟೀಕು:— ಲಿಂಗಜ್ಞಾನದಲ್ಲಿ ಶರಣನ ಜ್ಞಾನ ಸಂಬಂಧವಾಗಲು, ಪರಮ ಸುಖಾಮೃತ ಪ್ರಸನ್ನವಳವಟ್ಟ ಪರಬ್ರಹ್ಮದ ನೆಲೆಯಲ್ಲಿ ನಿರಂತರ ಶರಣನಿರುತಿರ್ದನೆಂಬುದೀ ವಚನಾರ್ಥ.

೩೮. ಅದ್ಭುತವೆಂಬ ಪಿಶಾಚಿ ಮೂರುಲೋಕವನವಗ್ರಹಿಸಿತ್ತಯ್ಯಾ. ಆ ಅದ್ಭುತದೊಳಗೊಂದು ಗ್ರಹ ನಿರಂತರ ನಲಿದಾಡುತ್ತಿರ್ದಿತ್ತು. ವಜ್ರಯೋಗಿ ಖಗ ರಂಧ್ರಪುರದಲ್ಲಿ ಗುಹೇಶ್ವರಲಿಂಗವು ತಾನೆ ನೋಡಾ.

ಟೀಕುಃ— ಮಾಯೆ ಎಂಬ ಅದ್ಭುತ ಮೂರುಲೋಕವನವಗ್ರಹಿಸಲು, ಆ ಮಾಯೆಯೊಳಗೆ ಜೀವನೆಂಬ ಭ್ರಮೆ ನಿರಂತರ ನಲಿದಾಡುತ್ತಿರ್ದಿತ್ತು. ಅದನರಿದಡೆ ಆ ಭ್ರಮೆ ಹಿಂಗಿ ಅಭೇದ್ಯ ಜ್ಞಾನಶಕ್ತಿ ಸಂಗವಾಗಿ, ಆ ಪರಬ್ರಹ್ಮರಂಧ್ರದಲ್ಲಿ ಪರಮ ಜ್ಞಾನಲಿಂಗವು ತಾನೆಯಾಗಿರ್ದಿತ್ತೆಂಬುದೀ ವಚನಾರ್ಥ.

೩೯. ಅನಲನರಣ್ಯದೊಳಗೆದ್ದಲ್ಲಿ ಮರದೆಡೆಯಲಾರನು ಕಾಣೆ. ಸಂಗ್ರಾಮ ಧೀರರೆಲ್ಲರು ನೆಲೆಗೆಟ್ಟರಾಗಿ, ಮಾಯಾ ಮಂಜಿನ ಕೋಟೆಗೆ ರಂಜನೆಯ ಕೊತ್ತಳ, ಅಂಜನೆಯ ಕಟ್ಟಳೆ, ಗುಹೇಶ್ವರನ ಶರಣ ಐಕ್ಯಸ್ಥಲವ ಮೆಟ್ಟಲೊಡನೆ ಸರ್ವವು ಸಾಧ್ಯವಾಯಿತ್ತು.

ಟೀಕುಃ— ಭವವೆಂಬ ಅರಣ್ಯದೊಳಗೆ ತಾಪತ್ರಯಾಗ್ನಿ ಎದ್ದು ಸುಡುತ್ತಿರಲು, ಮಾಯೆಯ ಮಂಜಿನ ರಂಜನೆಯ ಕಾಹು ಕಟ್ಟನೊಳಗಿರ್ದ ಅದ್ವೈತವ ಸಾಧಿಸಿಹೆನೆಂಬ ವೀರರೆಲ್ಲರು ಮುಂದುಗೆಡುತ್ತಿರ್ದರು. ಅಸಾಧ್ಯ ಸಾಧಕ ನಿಜಲಿಂಗೈಕ್ಯ ಶರಣನು, ಸ್ವಭಾವ ಸ್ಥಲದಲ್ಲಿ ನಿಲ್ಲಲೊಡನೆ ನಿರಾಳವು ಸಾಧ್ಯವಾಯಿತ್ತೆಂಬುದೀ ವಚನಾರ್ಥ.

೪೦. ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಫಲವೇನೋ? ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ವಿಷಯವನತಿಗಳೆದಲ್ಲಿ ಫಲವೇನೋ? ಇವೆಲ್ಲವ ಕೊಂದ ಪಾಪ ನಿಮ್ಮ ತಾಗುದು ಗುಹೇಶ್ವರಾ.



ಟೀಕು:— ಸಕಲ ಕರಣಂಗಳು ಲಿಂಗದಲ್ಲಿ ಅಡಗಿ, ಲಿಂಗೈಕ್ಯವಾದಡೆ, ಅದೇ ಲಿಂಗೈಕ್ಯವು. ಅವಲ್ಲದೆ ಕಳೆಯಬಾರವ ಇಂದ್ರಿಯ ವಿಷಯಕರಣಾದಿ ವೃತ್ತಿಗಳ ಕಳೆದು, ಪಿಡಿದು ನೋಯಿಸಿ, ಲಿಂಗವ ಬೆರಿಸಿಹೆನೆಂದಡೆ, ಎಂದೆಂದಿಗೂ ಅಸಾಧ್ಯವೆಂಬುದೀ ವಚನಾರ್ಥ.

೪೧. ಲಿಂಗ ಒಳಗೋ ಹೊರಗೋ ಬಲ್ಲಡೆ ನೀವು ಹೇಳಿರೆ? ಲಿಂಗ ಎಡನೊ ಬಲನೊ ಬಲ್ಲಡೆ ನೀವು ಹೇಳಿರೆ? ಲಿಂಗ ಹಿಂದೊ ಮುಂದೊ ಬಲ್ಲಡೆ ನೀವು ಹೇಳಿರೆ? ಲಿಂಗ ಸ್ಥೂಲವೊ, ಸೂಕ್ಷ್ಮವೊ ಬಲ್ಲಡೆ ನೀವು ಹೇಳಿರೆ? ಲಿಂಗ ಪ್ರಾಣವೊ, ಪ್ರಾಣ ಲಿಂಗವೊ ಬಲ್ಲಡೆ ನೀವು ಹೇಳಿರೆ ಗುಹೇಶ್ವರಲಿಂಗವನೂ.

ಟೀಕುಃ— ಸ್ಥೂಲ, ಸೂಕ್ಷ್ಮ, ಅಧೋ, ಊರ್ಧ್ವ ಅಂತರಂಗ ಬಹಿರಂಗ ಇದಾವುದರೊಳಗೆಯೂ ಲಿಂಗೈಕ್ಯವಿಲ್ಲ. ಇದಾವ ವಿಪರೀತವು? ತೊರೆದೊಡೆ ಅದೇ ಲಿಂಗೈಕ್ಯವು ಎಂಬುದೀ ವಚನಾರ್ಥ.

೪೨. ತನು ನಿಮ್ಮ ಪೂಜಿಸುವ ಕೃಪೆಗೆ ಸಂದುದು. ಮನ ನಿಮ್ಮ ನೆನೆವ ಧ್ಯಾನಕ್ಕೆ ಸಂದುದು. ಪ್ರಾಣ ನಿಮ್ಮ ರತಿಸುಖಕ್ಕೆ ಸಂದುದು. ಇಂತು ತನು ಮನ ಪ್ರಾಣ ನಿಮಗೆ ಸಂದಿಪ್ಪ ನಿಸ್ಸಂಗಿಯಾದ ನಿಶ್ಚಟ ಲಿಂಗೈಕ್ಯ ಕಾಣಾ ಗುಹೇಶ್ವರಾ.

ಟೀಕುಃ— ಅಂಗವಾಚಾರದಲ್ಲಿ ಐಕ್ಯವಾಗಿ, ಮನ ಧ್ಯಾನದಲ್ಲಿ ಐಕ್ಯವಾಗಿ, ಪ್ರಾಣ ಲಿಂಗರತಿ ಸುಖದೊಳಗೆ ಐಕ್ಯವಾಗಿ ಇಪ್ಪ ಶರಣನೆ ನಿಶ್ಚಟ ಲಿಂಗೈಕ್ಯನೆಂಬುದೀ ವಚನಾರ್ಥ.

೪೩. ತನುವಿಂಗೆ ತನುವಾಗಿ, ಮನಕ್ಕೆ ಮನವಾಗಿ, ಜೀವಕ್ಕೆ ಜೀವವಾಗಿ ಇರ್ದುದನಾರು ಬಲ್ಲರೋ? ಅದು ದೂರವೆಂದು, ಸಮೀಪವೆಂದು ಮಹಾಂತ ಗುಹೇಶ್ವರನೊಳಗೆಂದು ಹೊರಗೆಂದು ಬರುಸೂರೆವೋದರು.

ಟೀಕುಃ— ಶರಣನೊಳಗೆ ಲಿಂಗವಿಪ್ಪ ಭೇದವೆಂತೆಂದೊಡೆ, ತನುವಿನೊಳಗೆ ತನು ರೂಪಾಗಿ, ಮನದೊಳಗೆ ಮನ ರೂಪಾಗಿ ಜೀವದೊಳಗೆ ಜೀವರೂಪಾಗಿ ಇಪ್ಪನು. ಈ ಭೇದವನರಿಯದೆ ಲಿಂಗ ಅಂತರಂಗವೆಂದು ಬಹಿರಂಗವೆಂದು ದೂರವೆಂದು ಹತ್ತಿರೆಂದು, ಅರಸುವವರು ಅಜ್ಞಾನಿಗಳೆಂಬುದೀ ವಚನಾರ್ಥ.

೪೪. ಖೇಚರ ಪವನದಂತೆ ಜಾತಿಯೋಗಿಯ ನಿಲವು ಮಾತಿನೊಳು ಧಾತು ನುಂಗಿ ಉಗುಳ್ವುದಿನ್ನೆಂತೊ? ಭೂಚಕ್ರವಳಯುವ ಆಚಾ

ರ್ಯ ರಚಿಸಿದ ಗ್ರಾಮವೆಲ್ಲವ ಸುಟ್ಟು ನೇಮ ನೆಲಗತವಾಯಿತ್ತು. ನೇಮ ನಾಮವ ನುಂಗಿ ಗ್ರಾಮ ಪ್ರಭುವನೆ ನುಂಗಿ ಗುಹೇಶ್ವರ . ಗುಹೇಶ್ವರ ಎನುತ ನಿರ್ವಯಲಾಯಿತ್ತು.

ಟೀಕು:— ಬಯಲೊಳಗೆ ಚರಿಸುವ ಪವನದಂತೆ, ಒಡಲುವಿಡಿದು ವಿಡಿಯದೆ ಚರಿಸುವ ಶರಣನು ಧಾತು ಮಾತುವ ನುಂಗಿ ಉಗುಳುವನಲ್ಲ. ಅದೆಂತೆಂದೊಡೆ ದೇಹಚಿನ್ಹವಡಗಿ ಗುರುಕರುಣದಿಂದಾದ ನಾನಾ ಕ್ರಿಗಳೆಲ್ಲ ಅರತು ನೇಮವೆಂಬ ನಾಮವಡಗಿ ತನುಮುಖ ತಾನೆಂದು ನಿಂದ ಕಾರಣ ಆ ಶರಣನು ಲಿಂಗೈಕ್ಯನೆಂಬುದೀ ವಚನಾರ್ಥ ॥

**ಮಹೇಶ್ವರಸ್ಥಲ ಸಮಾಪ್ತ**



## ಪ್ರಸಾದಿಸ್ಥಲ

ಇಂತು ಮಹೇಶ್ವರಸ್ಥಲದಲ್ಲಿ ನೈಷ್ಠಿಕಾ ಮುಖದಿಂದ ಆಚರಿಸಿ, ಐಕ್ಯವಾದ ಮಹೇಶ್ವರನು ಮುಂದೆ ಪ್ರಸಾದಿಸ್ಥಲದಲ್ಲಿ ಸಾವಧಾನ ಮುಖದಿಂ ಆಚರಿಸಿ ಬೆರಿಸುವ ಭೇದವೆಂತಿರ್ದುದೆಂದೊಡೆ ಮುಂದೆ ಪ್ರಸಾದಿಸ್ಥಲವಾದುದು.

೧. ಬೇಡದ ಮುನ್ನ ಮಾಡಬಲ್ಲಡೆ ಭಕ್ತ. ಬೇಡುವನೆ ಲಿಂಗ ಜಂಗಮ? ಬೇಡುವರಿಗೆಯೂ ಬೇಡಿಸಿಕೊಂಬುವರಿಗೆಯೂ ಪ್ರಸಾದವಿಲ್ಲ ಗುಹೇಶ್ವರಾ.

ಟೀಕು.— ಬಂದ ಜಂಗಮದ ನಿಲವನರಿದು ಉಪಾಧಿರಹಿತನಾಗಿ, ಮಾಡುವಾತನೇ ಭಕ್ತ- ಆ ಮಾಡುವ ಭಕ್ತನೊಳಗನರಿದು ಮಾಡಿಸಿಕೊಳಬಲ್ಲಾತನೆ ಜಂಗಮ. ಈ ಸ್ಥಿತಿಯನರಿಯದೆ ಕಲ್ಪಿಸಿ ಮಾಡುವವರಿಗೆಯೂ, ಕಾಮಿಸಿ ಬೇಡುವವರಿಗೆಯೂ ಲಿಂಗಪ್ರಸಾದ ದೂರವೆಂಬುದೀ ವಚನಾರ್ಥ.

೨. ಲಿಂಗ ಜಂಗಮ ಒಂದೇ ಎಂದು ಕಂದೊಳಗೊಂಡಿರಲ್ಲಾ. ಮೂರೆಡೆಯಲ್ಲಿ ಮುಟ್ಟಿತ್ತು. ತ್ರಿವಿಧಾಚಾರಲಿಂಗ ಒಂದೆಡೆಯಲ್ಲಿ ಜಂಗಮ ಒಂದೆಡೆಯಲ್ಲಿ ಪ್ರಸಾದ ಒಂದೆಡೆಯಲ್ಲಿ ಇಂತು ಎಲ್ಲಿಯ ಪ್ರಸಾದವೋ ಗುಹೇಶ್ವರಾ?

ಟೀಕು.— ಲಿಂಗ ಜಂಗಮ ಒಂದೆ ಎಂದು ನುಡಿವಡೆ, ತ್ರಿಪುಟಿ ಭಿನ್ನವಾಗಿಹುದು. ಅದು ಕಾರಣ ಈ ಭಿನ್ನ ವಿವೇಕವುಳ್ಳವರಿಗೆ ಪ್ರಸಾದವಿಲ್ಲವೆಂಬುದೀ ವಚನಾರ್ಥ.

೩. ಹಸಿವಾಯಿತ್ತೆಂದು ಹಸಿದು ಮಜ್ಜನಕ್ಕೆರೆವರಯ್ಯಾ! ತೃಷೆಯಾಯಿತ್ತೆಂದು ಅರ್ಪಿತವ ಮಾಡುವರಯ್ಯಾ! ಇದೆಂತು ಭಕ್ತಿಸಂಬಂಧ? ಇದೆಂತು ಶರಣ ಸಂಬಂಧ? ಇದೆಂತು ಲಿಂಗ ಸಂಬಂಧ? ಕಾರಣವಿಲ್ಲದ ಭಕ್ತಿಯ ಕಂಡಡೆ ಹೋಗ ನೂಕುವನು ಗುಹೇಶ್ವರಾ.

ಟೀಕು.— ಲಿಂಗಾಪ್ಯಾಯನಕ್ಕಲ್ಲದೆ, ತಮ್ಮ ಅಂಗದ ಹಸಿವು ನಿಮಿತ್ಯ ಲಿಂಗಕ್ಕೆ ಬೋನವ ಹಿಡಿದು ಪ್ರಸಾದವ ಕೊಂಡೆನೆಂಬವರಿಗೆ

ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲ. ಇಂತಿವರು ಲಿಂಗಕ್ಕೆ ದೂರೆ ನೆಂಬುದೀ ವಚನದ ತಾತ್ಪರ್ಯಾರ್ಥ.

೪. ಪ್ರಾಣವ ಮಾರುವಂಗೆ ಪ್ರಾಣಲಿಂಗವೆಲ್ಲಿಯದೊ? ಇಷ್ಟ ಲಿಂಗಪೂಜಕರೆಲ್ಲ ನೇಮವ ಮಾಡುವರು. ಸೂನೆಗಾರಂಗೆ ಪ್ರಸಾದವೆ ಲ್ಲಿಯದೋ ಗುಹೇಶ್ವರಾ?

ಟೀಕು.— ತನ್ನ ಪ್ರಾಣನ ಸ್ಥಿತಿ ಅನ್ಯೋನ್ಯವಾಗಿ ಇರುತ್ತಿರಲು ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡು ಪೂಜಿಸುವ ಭಿನ್ನಯುಕ್ತರಿಗೆ ಪ್ರಸಾ ದವಿಲ್ಲವೆಂಬುದೀ ವಚನಾರ್ಥ.

೫. ಒಳಗೆ ತೊಳೆಯಲರಿಯದೆ, ಹೊರಗೆ ತೊಳೆದು ಕುಡಿವುತ್ತಿ ರ್ದರಯ್ಯಾ! ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತಿದ್ದಾರೆ ಗುಹೇಶ್ವರಾ.

ಟೀಕು:— ಅಂತರಂಗದ ಮಲತ್ರಯವ ತೊಳೆಯಲರಿಯದೆ ಬಹಿ ರಂಗದಲ್ಲಿ ಲಿಂಗವ ತೊಳೆದು ಪಾದೋದಕ ಪ್ರಸಾದವ ಕೊಂಬುವರಿಗೆ, ಭವ ಬಾಧೆ ಹಿಂಗದು ಎಂಬುದೀ ವಚನದ ತಾತ್ಪರ್ಯಾರ್ಥ.

೬. ಮಾಡಿದ ಓಗರ ಮಾಡಿದಂತೆ ಇರ್ದಿತ್ತು. ನೀಡಿದ ಕೈಗಳು ಎಡೆಯಾಡುತ್ತಿರ್ದವು. ಲಿಂಗಕ್ಕರ್ಪಿತವ ಮಾಡಿದೆವೆಂಬರು. ಒಂದರೊ ಳಗೊಂದು ಸವೆಯದು. ಲಿಂಗವಾರೋಗಣೆಯ ಮಾಡಿವೆವೆಂಬರು ತಾ ಉಂಡು ನಿಮ್ಮ ದೂರುವರು ಗುಹೇಶ್ವರಾ.

ಟೀಕು:— ಬಂದ ಪದಾರ್ಥದ ಸಿಂದ ನಿಲವನರಿಯದೆ ಅಂಗವಿ ಕಾರದಿಂದ, ಲಿಂಗಕ್ಕರ್ಪಿಸಿ, ಲಿಂಗಕ್ಕೆ ಆರೋಗಣೆಯ ಮಾಡಿಸಿದೆವೆಂದು ತನ್ನೊಡಲ ಹೊರೆದು, ಅಸತ್ಯವ ನುಡಿವವರಿಗೆ ಪ್ರಸಾದವಿಲ್ಲ. ಅವರು ಭವಭಾರಿಗಳೆಂಬುದೀ ವಚನಾರ್ಥ.

೭. ತಮ್ಮ ತಮ್ಮ ಮುಖದಲ್ಲಿ ಲಿಂಗವನೊಲಿಸಿದವರು ಆರಾಧಿ ಸಿದವರು ಬೇಡಿದುದ ಪಡೆದವರು ಎಲ್ಲ ಲಿಂಗಭೋಗೋಪಭೋಗಿಗಳಾಗಿ ಭೋಗಿಸುವರಿಲ್ಲ. ಗಂಗೆ ವಾಳುಕರೆಲ್ಲ ವರಮುಖಿಗಳಾಗಿ ಮೂರ್ತಿಯ ಳಿದು ಹೋದರು ಗುಹೇಶ್ವರಾ.

ಟೀಕು:— ರುದ್ರಾದಿಗಳು ಮೊದಲಾಗಿ ಎಲ್ಲರು ಲಿಂಗವ ಪೂಜಿಸಿ, ಬೇಡಿದ ಪದವ ಹಡೆದು ಪ್ರಳಯಕ್ಕೆ ಒಳಗಾಗಿ ಹೋದರಲ್ಲದೆ, ಲಿಂಗ



ಸುಖದಲ್ಲಿ ಲಿಂಗ ಭೋಗೋಪಭೋಗವ ಮಾಡುವವರು ಅಪೂರ್ವವೆಂ ಬುದೀ ವಚನಾರ್ಥ.

೮. ಬೆಳಗಿನೊಳಗಣ ರೂಪ ತಿಳಿದು ನೋಡಿಯೆ ಕಳೆದು, ಹಿಡಿ ಯದೆ ಹಿಡಿದು ಕೊಳಬಲ್ಲನಾಗಿ ಲಿಂಗಪ್ರಸಾದಿ. ಜಾತಿಸೂತಕವಳಿದು ಶಂಕೆ ತಲೆದೋರದೆ, ನಿಶ್ಶಂಕನಾಗಿ ಆತ ಸಮಯಪ್ರಸಾದಿ. ಸಕಲ ಭ್ರಮೆ ಯನೆ ಜರಿದು, ಗುಹೇಶ್ವರ ಲಿಂಗದಲ್ಲಿ ಬಸವಣ್ಣನೊಬ್ಬನೆ ಅಚ್ಚಪ್ರಸಾದಿ.

ಟೀಕು:— ತನ್ನ ಸರ್ವಾಂಗದಲ್ಲಿ ಸ್ವಾಯತವಾಗಿ ಬೆಳಗುವ ಲಿಂಗ ವ ಭಿನ್ನವಿಟ್ಟು ಧರಿಸದೆ ಅರ್ಪಿಸಿ ಸುಖಿಸುವಾತ ಲಿಂಗಪ್ರಸಾದಿ. ಸಮ ಯದಲ್ಲಿ ಅಂಗದ ಮೇಲೆ ಲಿಂಗವುಳ್ಳವರೆಲ್ಲರನು. ಪೂರ್ವಜಾತಿ ಸೂತ ಕವ ವಿವರಿಸದೆ, ಪ್ರಸಾದವ ಕೊಳಬಲ್ಲಡೆ ಆತ ಸಮಯಪ್ರಸಾದಿ. ಅಂತ ರಂಗ ಬಹಿರಂಗದ ಸಕಲ ಭ್ರಮೆಯನೆ ಕಳೆದು, ಪ್ರಸನ್ನ ಪ್ರಸಾದವ ಪಡೆದಾತನಚ್ಚ ಪ್ರಸಾದಿ ಎಂಬುದೀ ವಚನಾರ್ಥ.

೯. ತನುವ ತಾಗದ ಮುನ್ನ, ಮನವ ತಾಗದ ಮುನ್ನ, ಆಪ್ಯಾ ಯನ ಬಂದು ಎಡೆಗೊಳ್ಳದ ಮುನ್ನ, ಅರ್ಪಿತವ ಮಾಡಬೇಕು. ಗುರು ವಿನ ಕೈಯಲ್ಲಿ ಎಳತಟವಾಗದ ಮುನ್ನ, ಅರ್ಪಿತವ ಮಾಡಬೇಕು. ಎಡ ದ ಕೈಯ್ಯಲಿ ಕಿಚ್ಚು ಬಲದ ಕೈಯ್ಯಲಿ ಹುಲ್ಲು. ಉರಿ ಹತ್ತಿತ್ತು ಗುಹೇ ಶ್ವರಾ ನಿಮ್ಮ ಪ್ರಸಾದಿಯಾ॥

ಟೀಕು:— ತನ್ನ ತನುವ ತಾಗದೆ, ತನ್ನ ಮನವ ತಾಗದೆ, ಲಿಂ ಗದ ತನು ಲಿಂಗದ ಮನವ ತಾಗಿ ಅರ್ಪಿಸಿದಡೆ ಆತ ಪ್ರಸಾದಿ. ಇಂ ತಪ್ಪ ಪ್ರಸಾದಿಗೆ ಅರ್ಪಿಸುವ ಕೈ ಎಳತಟವಿಲ್ಲ. ಅದೇನು ಕಾರಣ? ಉರಿ ಯೊಳಗೆ ತೃಣ ಬಿದ್ದಂತೆ ಮುಟ್ಟಲೊಡನೆ ಅರ್ಪಿತವಹ ಕಾರಣದಿಂ ಎಂಬುದೀ ವಚನಾರ್ಥ॥

೧೦. ತನ್ನ ಮುಟ್ಟಿ ನೀಡಿದುದೆ ಪ್ರಸಾದ. ತನ್ನ ಮುಟ್ಟದೆ ನೀಡಿದುದೆ ಓಗರ. ಲಿಂಗಕ್ಕೆ ಕೊಟ್ಟು ಕೊಂಡಡೆ ಪ್ರಸಾದಿ. ಇದು ಕಾರಣ ಇಂತಪ್ಪ ಭೃತ್ಯಾಚಾರಿಗಲ್ಲದೆ ಪ್ರಸಾದವಿಲ್ಲ ಗುಹೇಶ್ವರಾ.

ಟೀಕು:— ತಾನು ಲಿಂಗಕ್ಕೆಂದು ಅರಿದು ಅರ್ಪಿಸಿದ ಸುಖವೆ ಪ್ರಸಾದ ತನ್ನನರಿಯದೆ ತಾನೆ ಲಿಂಗ ಲೀಯವಾದ ಅರ್ಪಿತವೆ ಲಿಂಗಮುಖದಿಂದಾದ ಓಗರ. ಈ ಅರ್ಪಿತವ ಬಲ್ಲಾತನೆ ಲಿಂಗಪ್ರಸಾದಿ ಎಂಬುದೀ ವಚನಾರ್ಥ.

೧೧. ಆದಿ ಇಲ್ಲದಿರ್ದಡೆ ಲಿಂಗಪ್ರಸಾದಿ ಎಂಬೆ. ವ್ಯಾಧಿ ಇಲ್ಲದಿರ್ದಡೆ ಜಂಗಮ ಪ್ರಸಾದಿ ಎಂಬೆ. ಲೌಕಿಕದ ಸೋಂಕದಿರ್ದಡೆ ಸಮಯ ಪ್ರಸಾದಿ ಎಂಬೆನು. ಇಂತೀ ಪ್ರಸಾದ ಸಂಬಂಧಿಯಾದಾತನನಚ್ಚ ಪ್ರಸಾದಿ ಎಂಬೆ ಕಾಣಾ ಗುಹೇಶ್ವರಾ,

ಟೀಕು.— ಆಧಿ, ವ್ಯಾಧಿ, ಲೌಕಿಕವೆಂಬ ತ್ರಿವಿಧ ಸೂತಕವಿಲ್ಲದಾತ ಲಿಂಗ ಜಂಗಮ ಸಮಯವೆಂಬ ತ್ರಿವಿಧ ಪ್ರಸಾದಿ ಎಂಬುದೀ ವಚನಾರ್ಥ.

೧೨, ಸರ್ವ ಸಾಯಿಧಾನಿ ಎನಿಸಿಕೊಳಬಲ್ಲಡೆ, ಬಂದ ಕಾಮ ಕ್ರೋಧವ ಲಿಂಗಾರ್ಪಿತವ ಮಾಡಬೇಕು. ಅಲಗಿನ ಕೊನೆಯ ಮೊನೆಯ ಮೇಲಣ ಸಿಂಹಾಸನ ಹೊರಳಿ ಹೋಗಬಾರದು. ಶಿವಾಚಾರದ ಧಾರೆ ಮೀರೆ ಮುಟ್ಟದ ಮುನ್ನ ಅರ್ಪಿತವ ಮಾಡಬಲ್ಲಡೆ ಭಿನ್ನಭಾವವೆಲ್ಲಿಯದು ಗುಹೇಶ್ವರಾ?

ಟೀಕು.— ನಿರಂತರ ಸಾಯಿಧಾನದಲ್ಲಿ ನಿರಂತರ ಪಾವನವುಳ್ಳಾತನು ತನ್ನಲ್ಲಿ ತಲೆದೋರಿದ ತನುಗುಣಾದಿಗಳ ತನ್ನ ಸೋಂಕಲೀಯ್ಯದೆ ಅರ್ಪಿಸುವಾತನೆ ಅಭಿನ್ನಪ್ರಸಾದಿ ಎಂಬುದೀ ವಚನಾರ್ಥ.

೧೩. ಅಚ್ಚಪ್ರಸಾದಿ. ಅಚ್ಚಪ್ರಸಾದಿ ಎಂಬಿರಿ ಕೇಳಿರಯ್ಯಾ! ನಿಚ್ಚಕ್ಕೆ ನಿಚ್ಚ ಹುಸಿವ ಹುಸಿಗಳ ಕಂಡೆವಲ್ಲಾ! ನಿಮ್ಮಲ್ಲಿ ವಾಯು ಬೀಸದ ಮುನ್ನ ಆಕಾಶ ಬಲಿಯದ ಮುನ್ನ ಲಿಂಗಕ್ಕೆ ಅರ್ಪಿಸುವ ಮುಖವನರಿಯರಯ್ಯಾ ಭೋಜನವ ಮಾಡಿ ಭಾಜನವನಿಟ್ಟು ಹೋಹ ಹಿರಿಯರಿಗೆ ಭಂಗ ನೋಡಾ ಗುಹೇಶ್ವರಾ.

ಟೀಕು:— ವೃಥಾ ಪ್ರಸಾದಿ ಎಂದೊಡೆ, ಅದು ಹುಸಿಮಾತು. ಅದೆಂತೆಂದೊಡೆ, ವಾಯು ಪ್ರಾಣವ ಚರಿಸದೆ ಆಕಾಶಭ್ರಮೆ ಬಲಿಯದೆ, ಸರ್ವಾಂಗವನರ್ಪಿಸಿ, ಪ್ರಸಾದ ಕಾಯವಳವಟ್ಟಡೆ ಆತ ಅಚ್ಚಪ್ರಸಾದಿ. ಇವಲ್ಲದೆ ಅಂತರಂಗದಲ್ಲಿ ಪ್ರಸಾದವನುಂಡು ಬಹಿರಂಗದಲ್ಲಿ ತನುವ ಬಿಸಾಟಡೆ ಅದು ಪ್ರಸಾದಿಯಂಗವಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೪. ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ ಹುಟ್ಟಿತ್ತು ಜಂಗಮ, ಅನುಭಾವದಿಂದ ಹುಟ್ಟಿತ್ತು ಪ್ರಸಾದ, ಅನುಭಾವದನುವಿನಲ್ಲಿ ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿ.

ಟೀಕು — ವಿವೇಕದಿಂದವೆ ಲಿಂಗ, ವಿವೇಕದಿಂದವೆ ಜಂಗಮ



ವಿವೇಕದಿಂದವೆ ಪ್ರಸಾದ, ಇಂತೀ ತ್ರಿವಿಧವು ವಿವೇಕದಿಂದಳವಟ್ಟಿತ್ತಾಗಿ ವಿವೇಕದಿಂದ ಶರಣ ಸುಖಿಯಾಗಿಪ್ಪನೆಂಬುದೀ ವಚನಾರ್ಥ.

೧೫. ಮನ ಬೀಸರವೆಂಬ ಗಾಳಿ ಬೀಸಿತ್ತು. ವಿದ್ಯಾ ಮುಖದ ಜ್ಯೋತಿ ನಂದಿತ್ತು. ಕತ್ತಲೆಯಲ್ಲಿ ಗತಿಯು ಕಾಣದೆ ದುಮ್ಮಾನ ನೆಲೆಗೊಂಡಿತ್ತು ನೋಡಾ. ಸುಮ್ಮಾನ ಹೋಯಿತ್ತು. ಸಕಳ ಕಳಾವಿದ್ಯಾ ಗುರುವಲ್ಲಿ ನುತಿ ತಾಳವೆಂಬ ಗುಹ್ಯ ತಾಗಿ, ಸುತಾಳವೆಂಬ ಶರಣಸಂಗದಲ್ಲಿ ಬಿದ್ದು ಗುರುವಿಂಗೆ ಪ್ರಸಾದವಾಯಿತ್ತು. ಶಿಷ್ಯಂಗೆ ಓಗರವಾಯಿತ್ತು ನೋಡಾ! ಲೌಕಿಕ ನಾಯಕ ನರಕ ಅರ್ಪಿತ ಮುಖವನರಿಯದೆ ಅನರ್ಪಿತಮುಖವಾಯಿತ್ತು ಗುಹೇಶ್ವರಾ.

ಟೀಕು:— ಮನವಿಕಾರವೆಂಬ ಗಾಳಿ ಬೀಸಲು, ಜ್ಞಾನಜ್ಯೋತಿ ನಂದಿತ್ತು. ಜ್ಞಾನಜ್ಯೋತಿ ನಂದಿದ ಕಾರಣ ಅಜ್ಞಾನದಲ್ಲಿ ನಡೆವೆ. ಪಥ ಕಾಣಬಾರದಾಯಿತ್ತು. ಕಾಣಬಾರದ ಕಾರಣ ದುಮ್ಮಾನವೆ ಮುಖವಾಯಿತ್ತು. ದುಮ್ಮಾನವೆ ಮುಖವಾದ ಕಾರಣ ಸುಮ್ಮಾನ ಹೋಯಿತ್ತು. ಇದಲ್ಲದೆ ಮನವು ಮಹದಲ್ಲಿ ನಿಂದು, ಸಕಲ ಕಳೆ ಎಲ್ಲವು ತನ್ನ ಜ್ಞಾನ ಗುರು ಮುಖದಿಂದುದಯವಾಗಿ, ಶರಣನ ಗೋಪಾಂತ್ಯರಂಗದಲ್ಲಿ ಅವಿರಳವಾದ ಕಾರಣ ಶಿಷ್ಯ ರುಚಿಸಿದ ಸುಖವು ಗುರುವಿಂಗೆ ಪ್ರಸಾದಮುಖವಾಗಿ ಲೌಕಿಕ ನಾಸ್ತಿಯಾಗಿ ಅರ್ಪಿತವನರ್ಪಿತವೆಂಬೆರಡು ಅರತು ಅನರ್ಪಿತ ಮುಖನಾಯಿತ್ತೆಂಬುದೀ ವಚನಾರ್ಥ.

೧೬. ಪದವನರ್ಪಿಸಬಹುದಲ್ಲದೆ, ಪದಾರ್ಥವನರ್ಪಿಸಬಾರದು. ಓಗರವನರ್ಪಿಸಬಹುದಲ್ಲದೆ ಪ್ರಸಾದವನರ್ಪಿಸಬಾರದು. ಗುಹೇಶ್ವರಾ ನಿಮ್ಮ ಶರಣರು ಹಿಂದ ನೋಡಿ ಮುಂದನರ್ಪಿಸುವರು.

ಟೀಕು:— ಬಂದ ಪದಾರ್ಥದ ರೂಪನರ್ಪಿಸಬಹುದಲ್ಲದೆ ರೂಪಿನೊಳಗಣ ರುಚಿಯನರ್ಪಿಸಬಾರದು. ಇದನರಿದು, ಲಿಂಗ ಸಂಬಂಧಿಗಳು ರೂಪು ರುಚಿ ಎರಡನು ವಿರಳವಿಲ್ಲದೆ ಅರ್ಪಿಸುವರೆಂಬುದೀ ವಚನಾರ್ಥ.

೧೭. ಘನವಪ್ಪ ಬೋನವನು ಒಂದನುವಿನ ಪರಿಯಾಣದಲ್ಲಿ ಹಿಡಿದು, ಗುರುಲಿಂಗವಾರೋಗಣೆಯ ಮಾಡಿ, ಮಿಕ್ಕುದು ಪ್ರಸಾದ ಈ ತೆರದ ಘನವಪ್ಪ ಲಿಂಗವನು ಒಂದನುವಿನಲ್ಲಿ ತಂದಿರಿಸಿ, ಘನವಪ್ಪ ಬೋನ

ವನು ಲಿಂಗವಾರೋಗಣೆಯ ಮಾಡಿ, ಮಿಕ್ಕುದ ಕೊಳಬಲ್ಲಡೆ ಪ್ರಸಾದಿ. ಇಂತೀ ತೆರನ ಬೆಸಗೊಳಬಲ್ಲಡೆ ಎನ್ನ ಬೆಸಗೊಳ್ಳೈ ಗುಹೇಶ್ವರಾ.

ಟೀಕು:— ಪರಿಪೂರ್ಣ ಪ್ರಸಾದಿಯ ಪರಿಪೂರ್ಣವೆಂಬ ಅಂಗ ಭಾಜನದಲ್ಲಿ ಪರಿಪೂರ್ಣ ಬೋನವಳವಡಲು, ಅಲ್ಲಿ ಪರಿಪೂರ್ಣ ರೂಪು ಅರ್ಪಿತವಾದ ಪ್ರಸಾದವ ಕೊಂಬುದೀಗ ಗುರುಪ್ರಸಾದ. ಇಂತಪ್ಪ ಶರಣನ ಪರಿಪೂರ್ಣ ಪ್ರಾಣದ ಅಂಗಭಾಜನದಲ್ಲಿ ಪರಿಪೂರ್ಣ ರುಚಿ ಅಳವಡಲು ಆ ಪ್ರಸಾದವಕೊಂಬುದೀಗ ಲಿಂಗಪ್ರಸಾದ. ಈ ತೆರನ ಇಂತಪ್ಪ ಶರಣನೆ ಬಲ್ಲನೆಂಬುದೀ ವಚನಾರ್ಥ.

**ಪ್ರಸಾದಿಸ್ಥಲ ಸಮಾಪ್ತ.**



## ಪ್ರಾಣಲಿಂಗಿ ಸ್ಥಲ.

ಇಂತು ಪ್ರಸಾದಿ ಸ್ಥಲದಲ್ಲಿ ಸಾವಧಾನ ಮುಖದಿಂದಾಚರಿಸಿ, ಐಕ್ಯವಾದ ಪ್ರಸಾದಿಯು ಮುಂದೆ ಅನುಭಾವ ಮುಂತಾಗಿ, ಆಚರಿಸಿ, ಬೆರಸುವ ಭೇದವೆಂತಿರ್ದುದೆಂದೊಡೆ, ಮುಂದೆ ಪ್ರಾಣಲಿಂಗಿ ಸ್ಥಲವಾದುದು.

೧. ಕದಳಿಯ ಬನವ ಹೊಕ್ಕು, ಹೊಲಬು ತಿಳಿಯದನ್ನಕ್ಕ ಬಯಲ ಗಾಳಿಯ ಹಿಡಿದು, ಗಟ್ಟಿಮಾಡದನ್ನಕ್ಕ ಬರಿದೆ ಬಹುದೆ ಶಿವಜ್ಞಾನ? ಷಡುವರ್ಣ ವಳಿಯದನ್ನಕ್ಕ ಬರಿದೆ ಬಹುದೆ? ಅಷ್ಟ ಮದವಳಿಯದನ್ನಕ್ಕ ಮದ ಮತ್ಸರವ ಮಾಡಲಿಲ್ಲ, ಹೊದಕುಳಿಗೊಳಲಿಲ್ಲ, ಗುಹೇಶ್ವರ ಲಿಂಗವು ಕಲ್ಪಿತದೊಳಗಲ್ಲ.

ಟೀಕು:— ಕಾಯವಿಕಾರವೆಂಬ ಕದಳಿಯ ಹೊಕ್ಕು ಹೊಲಬು ತಿಳಿದು, ವಾಯು ವಿಕಾರವನಳಿದು ಷಡುವರ್ಣವ ಕೆಡಿಸಿ, ಅಷ್ಟಮದವ ನಷ್ಟವ ಮಾಡಿ ಮದ ಮತ್ಸರವ ಪರಿತ್ಯಜಿಸಿ, ಆವ ವಿಕಾರದಲು, ಹೊದಕುಳಿಗೊಳ್ಳದೆ, ಲಿಂಗಪ್ರಾಣವೆ ಕೃತನಿಶ್ಚಯವಾಗಿಪ್ಪುದೆ, ಪ್ರಾಣಲಿಂಗ ಸಂಬಂಧವೆಂಬುದೀ ವಚನಾರ್ಥ.

೨. ಶಬ್ದ, ಸ್ಪರ್ಶ, ರೂಪು, ರಸ, ಗಂಧ ಪಂಚೇಂದ್ರಿಯ ಸಪ್ತ ಧಾತು, ಅಷ್ಟಮದದಿಂದ ಮುಂದುಗಾಣದವರು ನೀವು ಕೇಳಿರೆ. ಲಿಂಗ ವಾರ್ತೆಯ ವಚನದ ರಚನೆಯ ಮಾಡುವರಯ್ಯಾ. ಸಂಸಾರದ ಮಚ್ಚು ಬಿಡದನ್ನಕ್ಕರ ಸೂಕ್ಷ್ಮ ಶಿವಪದವು ಸಾಧ್ಯವಾಗದು. ಗುಹೇಶ್ವರ ಲಿಂಗದಲ್ಲಿ ವಾಕ್ಕು ಪಾಕವಾದಡೇನೋ ಮನ ಪಾಕವಾಗದನ್ನಕ್ಕರ?

ಟೀಕು:— ಲಿಂಗದಲ್ಲಿ ಪ್ರಾಣಸಂಬಂಧವಾಗದೆ, ನಾನಾ ತನು ವಿಕಾರದ ಉಬ್ಬಿನಲ್ಲಿ ಲಿಂಗವಾರ್ತೆಯ ರಚನೆಯ ಮಾತನಾಡುವುದು ಪ್ರಯೋಜನವಲ್ಲ. ಆದು ವಾಗ್ವಿಲಾಸವಾದ ಕಾರಣ, ಅವರು ಆಡುವ ಮಾತು ಲಿಂಗದ ಮನಕ್ಕೆ ಬಾರದೆಂಬುದೀ ವಚನಾರ್ಥ.

೩. ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದಡೆ ಆನು ಬೆರಗಾದೆನಯ್ಯಾ. ನಿಚ್ಚಕ್ಕೆ ನಿಚ್ಚ ಅರ್ಚನೆಯ ಪೂಜ

ನೆಯ ಮಾಡಿಸಿ ಭೋಗವ ಮಾಡುವವರ ಕಂಡು ನಾನು ಬೆರಗಾದೆನು. ಗುಹೇಶ್ವರಾ ನಿಮ್ಮ ಶರಣರು ಹಿಂದೆ ಲಿಂಗವನಿರಿಸಿ ಹೋದರು.

ಟೀಕುಃ— ಕಾಯವೇ ದೇಗುಲ ಪ್ರಾಣವೇ ಲಿಂಗವೆಂಬ ಭೇದವ ನರಿಯದೆ ಬೇರೆ ಮತ್ತೊಂದು ದೇವಾಲಯಕ್ಕೆ ಹೋಗಿ ಲಿಂಗಭಕ್ತಿಯ ಮಾಡಿ ತಾವು ಸತ್ತು ಆ ಲಿಂಗ ಉಳಿದು ಹೋಹ ಕಾರಣ ಜಗವೆಲ್ಲ ಭ್ರಾಂತು ಗೊಂಡಿತ್ತೆಂಬುದೀಗ ಈ ವಚನಾರ್ಥ.

೪. ಬರಿಯ ನಚ್ಚಿನ ಮಚ್ಚಿನ ಭಕ್ತಿಯ ಭಕ್ತರು ಲಿಂಗವಮುಟ್ಟಿಯೂ ಮುಟ್ಟದ ಒಳ ಲೊಟ್ಟೆಗಳು ನೆರೆದು, ಗಳಹುತಿಪ್ಪರು. ತಮತಮಗೆ ಅನುಭಾವವ ನುಡಿವರು. ಅನುಭಾವದನುವನರಿಯದಿರ್ದಾರೆ, ಹಿಂದಣ ಅನುಭಾವಿಗಳು ಗುಹೇಶ್ವರಲಿಂಗದ ಸುಖವ ಮುಟ್ಟದಲ್ಲಿ ಮರಳಿ ಭವ ಕಲ್ಪಿತವೆಲ್ಲಿಯದೂ?

ಟೀಕುಃ— ಅಂಗದಲ್ಲಿ ಭಕ್ತಿಸ್ಥಲವಳವಡದೆ, ಲಿಂಗದಲ್ಲಿ ನಿಷ್ಠೆಮುಟ್ಟದೆ, ಬರಿಯ ಮಾತಿನ ಅನುಭಾವವ ನುಡಿವ ವಾಚಾಳಕರಿಗೆ ಭವ ಕಲ್ಪಿತವಲ್ಲದೆ ಲಿಂಗಸಂಬಂಧವಿಲ್ಲವೆಂಬುದೀ ವಚನಾರ್ಥ.

೫. ಭಾವದಲೊಬ್ಬ ದೇವರ ಮಾಡಿ ಮನದಲೊಂದು ಭಕ್ತಿಯ ಮಾಡಿ, ಕಾಯದ ಕಯ್ಯಲಿ ಕಾರ್ಯ ಉಂಟೆ? ವಾಯುಕ್ಕೆ ಬಳಲುವರು ನೋಡಾ! ಎತ್ತನೇರಿ ಎತ್ತನರಸುವರು ಎತ್ತ ಹೋದರೈ ಗುಹೇಶ್ವರಾ.

ಟೀಕುಃ— ಮನಸ್ಥಲದಲ್ಲಿ ಮನೋಮೂರ್ತಿಯಾದ ಲಿಂಗ ತಾನೆಂದರಿಯದೆ, ಮತ್ತೊಂದು ಭಾವಿಸಿ, ಲಿಂಗವೆಂದು ಮಾಡಿ ಮತ್ತೊಂದು ಕಾಮಿಸಿ ಭಕ್ತಿ ಎಂದು ಮಾಡಿ, ವಾಯುಕ್ಕೆ ಬಳಲುವ ವಾಯು ಪ್ರಾಣಿಗಳಿಗೆ ಲಿಂಗ ಸಂಬಂಧವಳವಡದೆಂಬುದೀ ವಚನಾರ್ಥ.

೬. ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹುದೆ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು? ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ, ಆ ಕಲ್ಲು ಲಿಂಗವೆ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ? ಇಂತಪ್ಪವರ ಕಂಡಡೆ ನಾನು ನಾಚುವೆನಯ್ಯ! ಗುಹೇಶ್ವರಾ.



ಟೀಕುಃ— ಅಂಗದ ಮೇಲೆ ಲಿಂಗಸ್ವಾಯತವಾಗಿರ್ದು ಅಂಗವಿಕಾರ ಪ್ರಾಣವಿಕಾರ, ಹಿಂಗದಿರ್ದಾರೆ, ಆ ಕರಸ್ಥಲದಲ್ಲಿ ಇರ್ದುದು ಲಿಂಗವಲ್ಲ. ಆತ ಭಕ್ತನಲ್ಲ. ಇಂತಪ್ಪಾತಂಗೆ ಉಪದೇಶವ ಕೊಟ್ಟಾತ ಗುರುವಲ್ಲವೆಂಬುದೀ ವಚನಾರ್ಥ.

೭. ಅಸ್ತಿಗೆ ಚರ್ಮವಾಧಾರವಾಗಿ, ಪ್ರಾಣಕ್ಕೆ ಪ್ರಸಾದ ಮುಕ್ತಿಯಾಗಿ, ಪ್ರಾಣಲಿಂಗವಲ್ಲೊ. ಪ್ರಾಣಲಿಂಗವೆಂಬುದು ಕರಕಷ್ಟ ನೋಡಾ! ಪ್ರಾಣಲಿಂಗವೆಂಬುದು ಕರ ನಾಚಿಕೆ ನೋಡಾ! ಒಡೆದ ಮಡಕೆಗೆ ಒತ್ತಿಮಣ ಮೆತ್ತಿದಡೆ, ಅದು ತರಹರವಹುದೇ ಗುಹೇಶ್ವರಾ?

ಟೀಕುಃ— ಕಾಯಪ್ರಸಾದವಳವಡದೆ, ಪ್ರಾಣಲಿಂಗ ಸಂಬಂಧ ನೆಲೆಗೊಳ್ಳದೆ, ಬರಿದೆ ಪ್ರಾಣಕ್ಕೆ ಪ್ರಸಾದವ ಕೊಂಡು ಮುಕ್ತವಾದೆನೆಂಬುದು, ಅದು ಪ್ರಾಣಲಿಂಗ ಸಂಬಂಧದ ಬಗೆಗೆ ದೂರವೆಂಬುದೀ ವಚನಾರ್ಥ.

೮. ಇಷ್ಟಲಿಂಗವನು ಪ್ರಾಣಲಿಂಗವೆಂಬ ಕಷ್ಟವೆಲ್ಲಿಯದೊ? ಇಷ್ಟಲಿಂಗ ಹೋದಡೆ, ಪ್ರಾಣಲಿಂಗ ಹೋಗದು ನೋಡಾ ಇಷ್ಟಲಿಂಗ ಪ್ರಾಣಲಿಂಗವೆಂಬ ಭೇದವನು ಗುಹೇಶ್ವರಾ ನಿಮ್ಮ ಶರಣ ಬಲ್ಲ.

ಟೀಕುಃ— ಕರಸ್ಥಲದ ಲಿಂಗದಲ್ಲಿ, ಮನಸ್ಥಲ ಸಂಬಂಧವಾಗಿ, ಪ್ರಾಣಸಮರಸ ಸುಖವನೆಯ್ದಿ, ಪ್ರಾಣಲಿಂಗ ಸಂಬಂಧಿಗಳಾಗಲರಿಯದೆ ಬರಿಯ ಮಾತಿನೊಳಗೆ ಅಂಗದ ಲಿಂಗವ ಪ್ರಾಣಲಿಂಗವೆಂಬುದು ಅಜ್ಞಾನವೆಂಬುದೀ ವಚನಾರ್ಥ.

೯. ವ್ರತಗೇಡಿ, ವ್ರತಗೇಡಿ ಎಂಬವ ತಾನೆ ವ್ರತಗೇಡಿ. ವ್ರತಗೆಡಲಿಕ್ಕೇನು ಹಾಲಂಬಿಲವೆ? ವ್ರತಗೆಟ್ಟ ಬಳಿಕ ಘಟ ಉಳಿಯಬಲ್ಲುದೆ? ಕಾಯದೊಳಗೆ ಜೀವವುಳ್ಳನ್ನಕ್ಕರ ಅದೇ ಪ್ರಾಣಲಿಂಗವು ಕಾಣಾ ಗುಹೇಶ್ವರಾ.

ಟೀಕುಃ— ಕಾಯವೇ ಭಕ್ತ, ಪ್ರಾಣವೆ ಲಿಂಗವಾಗಿರ್ಪ ಭೇದವ ನರಿಯದೆ, ಬೇರೆ ಮತ್ತೆ ಲಿಂಗ ಬಿದ್ದಿತ್ತೆಂದು ನುಡಿವ ಮಾತು ಅಜ್ಞಾನವೆಂಬುದೀ ವಚನಾರ್ಥ.

೧೦. ಅಂಗದ ಕಳೆಯುಲೊಂದು ಲಿಂಗವ ಕಂಡೆ. ಲಿಂಗದ ಕಳೆಯುಲೊಂದು ಅಂಗವ ಕಂಡೆ. ಅಂಗ ಲಿಂಗ ಸಂದಣಿಯನರಸಿ, ಕಂಡೆ ನೋಡಿರೆ ಇಲ್ಲಿ ಅಯಿದಾನೆ ಶಿವನು. ಬಲ್ಲಡೆ ಇರಿಸಿಕೊಳ್ಳಿರೆ

ಕಾಯುವಳಿಯುದ ಮುನ್ನ ನೋಡ ಬಲ್ಲಡೆ, ಗುಹೇಶ್ವರಲಿಂಗಕ್ಕೆ ಬೇರೆ ಠಾವುಂಟೆ ಹೇಳಿರೆ?

ಟೀಕು:— ಅಂಗದ ಕಳೆಯೆ ಲಿಂಗದ ಕಳೆ, ಲಿಂಗದ ಕಳೆಯೆ ಅಂಗದ ಕಳೆ, ಇಂತಾದ ಬಳಿಕ ಅಂಗಲಿಂಗವೆಂಬುಭಯ ನಾಮವಿಲ್ಲವೆಂಬ ಭೇದವನರಿದು ಲಿಂಗ ಸಂಬಂಧವ ಮಾಡಿಕೊಳಲು, ಆತನ ಪ್ರಾಣಲಿಂಗ ಸಂಬಂಧಿ ಎಂಬುದೀ ವಚನಾರ್ಥ.

೧೧. ಪೂಜಿಸಿ ಕೆಳಯಿಂದೆ ಇಳುಹಲದೇನೋ? ಅನಾಗತ ಪೂಜೆಯ ಮಾಡಲದೇನೋ? ದೇಹನೇ ಪೀಠಿಕೆ, ಜೀವವೇ ಲಿಂಗ ಗುಹೇಶ್ವರಾ.

ಟೀಕು:— ಲಿಂಗವೆಂದು ಪೂಜಿಸಿದ ಬಳಿಕ, ಆ ಲಿಂಗವೇ ಅಂಗವಾಗಿ, ಪ್ರಾಣವೇ ಲಿಂಗವಾಗಿರಬೇಕೆಂಬುದೀ ವಚನಾರ್ಥ.

೧೨. ಅರಿದರಿವು ಬರುದೊರೆವೋಯಿತ್ತು. ಕುರುಹ ತೋರಿದಡೆಂತು ನಂಬರು. ತೆರಹಿಲ್ಲದ ಘನವ ನೆನೆದು, ಗುರುಶರಣೆಂಬುದಲ್ಲದೆ, ಮರಹು ಬಂದಿಹುದೆಂದು ಗುರು ಕುರುಹ ಕೈಯ್ಯಲ್ಲಿ ತೋರಿದ. ಅರಿಯಬಲ್ಲಡೆ ಗುಹೇಶ್ವರ ಲಿಂಗವು ಹೃದಯುದಲ್ಲಿದ್ದಾನೆ.

ಟೀಕು:— ಮನದೊಳಗೆ ಅಳವಟ್ಟ ಘನಲಿಂಗದ ನಿಜವ ನೋಡಬೇಕೆಂದು ಕೈಯ್ಯೊಳಗೆ ಕನ್ನಡಿಯ ಕೊಡುವಂತೆ ಗುರುಸ್ವಾಮಿ ಕರಸ್ಥಲಕ್ಕೆ ಲಿಂಗವ ಕೊಟ್ಟನಲ್ಲದೆ ಮತ್ತೇನೂ ಮರೆಗನ್ನಡವಿಲ್ಲ. ಇದು ಕಾರಣ ಅರಿಯುಬಲ್ಲಡೆ, ಲಿಂಗವೆಂಬುದು ಮನದೊಳಗೆ ಇಪ್ಪುದೆಂಬುದೀ ವಚನಾರ್ಥ.

೧೩. ಸಂಬಂಧ ಅಸಂಬಂಧವೆಂದು ಹೆಸರಿಟ್ಟುಕೊಂಡು ನುಡಿವಿರಿ. ಸಂಬಂಧವಾವುದು, ಅಸಂಬಂಧವಾವುದು, ಬಲ್ಲಡೆ ನೀವು ಹೇಳಿರೆ. ಕಾಯ ಸಂಬಂಧ ಜೀವ ಸಂಬಂಧ ಪ್ರಾಣ ಸಂಬಂಧ ಇಂತೀ ತ್ರಿವಿಧ ಸಂಬಂಧವನರಿದಡೆ ಆತನೇ ಸಂಬಂಧಿ ಕಾಣಾ ಗುಹೇಶ್ವರಾ.

ಟೀಕು:— ಲಿಂಗಸಂಬಂಧವಾವುದೆಂದಡೆ, ಕಾಯದೊಳಗೆ ಹುದುಗಿಕೊಂಡಿರ್ದ ಜೀವ, ಜೀವದೊಳಗೆ ಹುದುಗಿಕೊಂಡಿರ್ದ ಪ್ರಾಣ, ಈ ತ್ರಿವಿಧವನು ವಿವರಿಸಿ ಕಳೆದು, ಪ್ರಾಣಮಯಲಿಂಗ ವೆಂದರಿದಡೆ ಆತ ಪ್ರಾಣಲಿಂಗ ಸಂಬಂಧಿ ಎಂಬುದೀ ವಚನಾರ್ಥ.



೧೪. ಭಾನು ಶಶಿ ಕಳೆಗುಂದಿ, ಪ್ರಾಣೋಪಾನ, ವ್ಯಾನೋದಾನ ಸಮಾನವೆಂಬ ವಾಯುವನರಿಯುವೊ. ಆದಿ ಪ್ರಣಮವನರಿದಿಹೆನೆಂಬವಂಗೆ ಬಯಲು, ಆಕಾಶದೊಳಗೊಂದು ರಸದ ಬಾವಿ ಮುನ್ನಾದವರೆಲ್ಲವರೆಂದೆನಬೇಡ. ಗುಹೇಶ್ವರಲಿಂಗವು ತಾನೆ ಕಂಡೆಲವೋ.

ಟೀಕು:— ಈಡಾ ಪಿಂಗಳದಲ್ಲಿ ಹರಿವ ಸರವಡಗಿ, ಪಂಚ ಪ್ರಾಣ ವಾಯುಗಳು ನೆಲೆಗೆಟ್ಟು, ಲಿಂಗ ಪ್ರಾಣವಾದಡೆ ಅದೇ ಆದಿ ಪ್ರಣಮ. ಆದನರಿಯಲಿಲ್ಲ. ಅದು ಆತ್ಮ ತತ್ವದೊಳಗೆ ಪರಮಾಮೃತ ರೂಪವಾಗಿ ಇಪ್ಪದು. ಇದನರಿದಡೆ, ಅದೇ ಪ್ರಾಣಲಿಂಗ ಸಂಬಂಧವೆಂಬುದೀ ವಚನಾರ್ಥ.

೧೫. ಗುದಸ್ಥಾನದಲ್ಲಿ ಆಧಾರಚಕ್ರ, ಪ್ರಥ್ವಿ ಎಂಬ ಮಹಾಭೂತ, ಚತುಃಕೋಣೆ, ಚವುದಳ ಪದ್ಮ, ಅಲ್ಲಿಹ ಅಕ್ಷರ ನಾಲ್ಕು, ವ, ಶ, ಷ, ಸ, ಆದರ ವರ್ಣ ಸುವರ್ಣ, ಅದಕ್ಕೆ ಅಧಿದೇವತೆ ದಾಕ್ಷಾಯಣಿ. ಲಿಂಗ ಸ್ಥಾನದಲ್ಲಿ ಸ್ವಾದಿಷ್ಠಾನ ಚಕ್ರ, ಅಪ್ಪುವೆಂಬ ಮಹಾಭೂತ, ಧನುರ್ಗತಿ, ಷಡುದಳ ಪದ್ಮ, ಅಲ್ಲಿಹ ಅಕ್ಷರವಾರು ಬ, ಭ, ಮ, ಯ, ರ, ಲ, ಆದರ ವರ್ಣ ಪಚ್ಚೆಯ ವರ್ಣ, ಅದಕ್ಕೆ ಅಧಿದೇವತೆ ಬ್ರಹ್ಮನು. ನಾಭಿಸ್ಥಾನದಲ್ಲಿ ಮಣಿಪೂರಕವೆಂಬ ಚಕ್ರ, ತೇಜವೆಂಬ ಮಹಾಭೂತ, ತ್ರಿಕೋಣೆ, ದಶದಳ ಪದ್ಮ, ಅಲ್ಲಿಯ ಅಕ್ಷರ ಹತ್ತು. ಡ, ಢ, ಣ, ತ, ಥ, ದ, ಧ, ನ, ಪ, ಫ, ಅದರ ವರ್ಣ ಕೃಷ್ಣವರ್ಣ, ಅದಕ್ಕಧಿದೇವತೆ ವಿಷ್ಣು. ಹೃದಯ ಸ್ಥಾನದಲ್ಲಿ ಅನಾಹತ ಚಕ್ರ, ವಾಯುವೆಂಬ ಮಹಾಭೂತ, ಷಟ್ಕೋಣೆ, ದ್ವಾದಶ ದಳ ಪದ್ಮ, ಅಲ್ಲಿಹ ಅಕ್ಷರ ಹನ್ನೆರಡು, ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ, ಆದರ ವರ್ಣ ಕುಂಕುಮ ವರ್ಣ, ಅದಕ್ಕಧಿದೇವತೆ ಮಹೇಶ್ವರನು. ಕಂಠಸ್ಥಾನದಲ್ಲಿ ವಿಶುದ್ಧಿ ಚಕ್ರ, ಆಕಾಶವೆಂಬ ಮಹಾಭೂತ, ವರ್ತುಳಾಕಾರ, ಷೋಡಶ ದಳ ಪದ್ಮ, ಅಲ್ಲಿ ಇಹ ಅಕ್ಷರ ಹದಿನಾರು, ಅ, ಆ, ಇ, ಈ, ಉ, ಊ, ಋ, ೠ, ಌ, ೡ, ಎ, ಏ, ಐ, ಒ, ಓ, ಔ, ಅಂ, ಅಃ, ಆದರ ವರ್ಣ ಶ್ವೇತ ವರ್ಣ. ಆದಕ್ಕಧಿದೇವತೆ ಸದಾಶಿವನು. ಭ್ರೂ ಮಧ್ಯಸ್ಥಾನದಲ್ಲಿ ಆಜ್ಞಾಚಕ್ರ, ಮನವೆಂಬ ಮಹಾಭೂತ, ತಮಂಧಾಕಾರ, ದ್ವಿದಳ ಪದ್ಮ, ಅಲ್ಲಿಯ ಅಕ್ಷರವೆರಡು, ಹಂ, ಕ್ಷಂ, ಆದರ ವರ್ಣ ಮಾಣಿಕ್ಯ ವರ್ಣ, ಅದಕ್ಕಧಿದೇವತೆ ಶ್ರೀ ಗುರು. ಉನ್ಮನಿ ಜ್ಯೋತಿ, ಬ್ರಹ್ಮರಂಧ್ರದ ಮೇಲೆ, ಸಹಸ್ರದಳ ಪದ್ಮ ಅಲ್ಲಿ ಅವ್ಯ

ತವಿಹುದು. ಅಲ್ಲಿ ಓಂಕಾರ ಸ್ವರೂಪವಾಗಿ ಗುಹೇಶ್ವರ ಲಿಂಗವು ಸದಾ ಸನ್ನಿಹಿತನು.

ಟೀಕು:— ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆಯೆಂಬ ಷಡು ಚಕ್ರ, ಆ ಸ್ಥಾನಕ್ಕೆ ಪಂಚಭೂತ, ಮನವೆಂಬ ಆರು ಭೂತ ಚತುಃಕೋಣೆ ಧನುರ್ಗತಿ, ತ್ರಿಕೋಣೆ, ಷಟ್ಕೋಣೆ, ವರ್ತುಳಾಕಾರ, ತಮಂಧಾಕಾರವೆಂಬವಾರುಸ್ಥಾನ, ಚತುರ್ದಳ, ಷಡುದಳ, ದಶದಳ, ದ್ವಾದಶದಳ, ಷೋಡಶದಳ, ದ್ವಿದಳವೆಂಬವಾರು ಚಕ್ರದಳ, ಐವತ್ತೊಂದು ಅಕ್ಷರ ಆದಕ್ಕೆ ಪೀತ, ಹರಿತ ಕೃಷ್ಣ ಶ್ಯಾಮ, ಶ್ವೇತ ಮಾಣಿಕ್ಯವೆಂಬವು ಆರು ವರ್ಣ, ದಾಕ್ಷಾಯಣಿ, ಬ್ರಹ್ಮ, ವಿಷ್ಣು, ಮಹೇಶ್ವರ, ಸದಾಶಿವನು, ಶ್ರೀ ಗುರುವೆಂಬವಾರು ಅಧಿದೇವತೆ, ಈ ಭೇದವನೆಲ್ಲವನು ತಿಳಿದು ನೋಡಿ ಉನ್ಮನಿ ಜ್ಯೋತಿ ಬ್ರಹ್ಮರಂಧ್ರದ ಮೇಲೆ ಇಪ್ಪ ಸಹಸ್ರ ದಳ ಪದ್ಮದ ಅಮೃತ ಬಿಂದುವಿನೊಳಗೆ ಪ್ರಣಮಸ್ವರೂಪಾಗಿಪ್ಪಲಿಂಗದಲ್ಲಿ ಒಡಗೂಡಬಲ್ಲಡೆ ಅದೇ ಪ್ರಾಣಲಿಂಗ ಸಂಬಂಧವೆಂಬುದೀವಚನಾರ್ಥ.

೧೬. ಆಧಾರ, ಸ್ವಾಧಿಷ್ಠಾನ ಮಣಿಪೂರಕ, ಸ್ಥಾನವನರಿಯರು. ಅಷ್ಟ ದಳ ಕಮಳದಲ್ಲಿ ಸೂಕ್ಷ್ಮ ನಾಳವೈದೊಡೆ. ಇನ್ನೇನನರಿವರಾರೋ? ಬೇರೆ ಮತ್ತೆ ಅರಿಯಲುಂಟೆ ಹೇಳಾ? ಸಹಸ್ರ ದಳ ಕಮಲ ಬ್ರಹ್ಮರಂಧ್ರದಲ್ಲಿಯ ಗುರುವನರಿದು ಒಳಗೆ ವೇಧಿಸಿ ಅಲ್ಲಿಪ್ಪ ಅಮೃತ ಸ್ವರವರಿದು ಹಿರಿದು ಕೊಂಬುದರಿದು ಗುಹೇಶ್ವರಾ.

ಟೀಕು:— ಷಡುಚಕ್ರ, ವರ್ಣ, ದಳ, ಅಕ್ಷರ, ಅಧಿದೇವತೆಯನರಿದು, ಹೃದಯ ಕಮಲ ಸೂಕ್ಷ್ಮ ನಾಳ ಮೂಲವನು, ಬ್ರಹ್ಮರಂಧ್ರದ ಸಹಸ್ರ ದಳ ಕಮಲದೊಳಗೆ ವೇಧಿಸಿ, ಅಲ್ಲಿಪ್ಪ ಅಮೃತ ಸ್ವರವ ಗ್ರಹಿಸಿದಡೆ, ಅದೇ ಪ್ರಾಣಲಿಂಗ ಸಂಬಂಧವೆಂಬುದೀ ವಚನಾರ್ಥ.

೧೭. ಆಧಾರ, ಲಿಂಗ, ನಾಭಿ, ಹೃದಯ, ಕಂಠ, ಮುಖದ ಮೇಲೆ ನಿಂದುದದೇನೊ? ನಿತ್ಯ, ನಿರಂಜನ, ನಿರುಪಾಧಿಕ, ರೇಖೆಯಾಗಿರ್ದುದದೇನೊ? ವಿದ್ರುಮ, ಕುಸುಮ, ಚಕ್ಷು, ಪರಿಮಳದಿಂದತ್ತವೆ, ಗುಹೇಶ್ವರನೆಂಬುದದೇನೊ?

ಟೀಕು:— ಷಡು ಚಕ್ರದಿಂದ ಮೇಲೆ, ನಿತ್ಯ ನಿರಂಜನವಾಗಿ, ಬ್ರಹ್ಮರಂಧ್ರದೊಳಗೆ, ತೊಳಗಿ ಬೆಳಗುವ ಪ್ರಭೆಯಲ್ಲಿ, ದೇಹ ಪ್ರಾಣ ಸಂಬಂಧ ಸಮರಸವಡಗಿದೊಡೆ, ಪ್ರಾಣಲಿಂಗ ಸಂಬಂಧವೆಂಬುದೀ ವಚನಾರ್ಥ.



೧೮. ಘಟ ಸರ್ಪನಂತೆ ಅತಿಶಯವು ನಾಭಿ ಸರವರ ಸ್ಥಾನಕವೆ ಪಳವೆಂಟು. ನವ ದಳ ಕಮಳ ಊರ್ಧ್ವ ಮಂಡಲದ ಅಮೃತ ಸೇವನೆಯಾಗಿ, ಶಿವಯೋಗಿಯಾದೆನೆಂಬರು ಗುಹೇಶ್ವರ ಲಿಂಗವು ಪವನ ವಿಯೋಗಾ.

ಟೀಕು:— ಕುಂಡಲಿಯ ಸ್ಥಾನದ ಭುಜಂಗನನು. ಹೃದಯ ಸರೋವರದ ಅಷ್ಟದಳ ಕಮಲದಲ್ಲಿ ಗ್ರಸ್ತ ಮುಖವಾಗಿ, ಸುಷುಮ್ನ ನಾಳದಲ್ಲಿ ಊರ್ಧ್ವಮಂಡಲದ ಅಮೃತ ಸೇವನೆಯ ಮಾಡಿ, ಶಿವಯೋಗವ ಪಡೆದೆನೆಂಬುದು ಹುಸಿ. ಮತ್ತಂತೆಂದೊಡೆ, ಪ್ರಾಣಮಯ ಲಿಂಗನೆಂದರಿದಡೆ ಅದೇ ಪ್ರಾಣಲಿಂಗ ಸಂಬಂಧವೆಂಬುದೀ ವಚನಾರ್ಥ.

೧೯. ಅರ್ಕನ ಅದ್ಭುತದಲ್ಲಿ ಕೆಟ್ಟರು ಹಲಬರು. ತಪ್ಪುಕರಾದರು ಹಲಬರು. ಬಿಂದು ಬಿಂದುವನೆ ಕೂಡಿ, ಲಿಂಗ ಲೀಯ್ಯವಾಯಿತ್ತು. ನಿಂದನು ಗುಹೇಶ್ವರನು ಎನ್ನೊಳಗೆ ಭರಿತನಾಗಿ.

ಟೀಕು:— ಸೂರ್ಯಗ್ರಹಣ, ಚಂದ್ರಗ್ರಹಣವೆಂಬೆರಡು ಶಿವಭಕ್ತಿ ಗ್ರಹಣದಿಂದೆಲ್ಲರೂ ಮುಂದುಗೆಡುತ್ತಿಹರು. ಈ ಎರಡನಂಗೀಕರಿಸಿ ತನ್ನ ಬಿಂದು ಅಂಗ ಬಿಂದುವಾಗಲೊಡನೆ ಸರ್ವಾಂಗ ಪ್ರಾಣಲಿಂಗವೆಂಬುದೀ ವಚನಾರ್ಥ.

೨೦. ಉದಕ ಮೂರುತಿಯಾಗಿ, ಉದಯುವಾಯಿತ್ತು. ಪೀಠಿಕೆಯಲ್ಲಿ ಮೂಲಸ್ಥಾನ ಸ್ಥಾಪ್ಯವಾಯಿತ್ತು. ಸ್ವದೇಹ ಶಿವಪುರದಲ್ಲಿ ವಾಯು ಪೂಜಾರಿಯಾಗಿ, ಪರಿಮಳ ದಿಂಡೆಯ ಕಟ್ಟೆ ಪೂಜೆಯ ಮಾಡುತ್ತಿರ್ದುದೊ. ನವದ್ವಾರ ಶಿವಾಲಯದಾದಿ ಮಧ್ಯ ಸ್ಥಾನದಲ್ಲಿ ಗುಹೇಶ್ವರನೆಂಬುದಲ್ಲಿಯೆ ನಿಂದಿತ್ತು.

ಟೀಕು:— ಮನೋ ಮೂರ್ತಿಯಾಗಿ, ಉದಯುವಾದ ಪೀಠಿಕೆಯಲ್ಲಿ ಆ ಮನವೇ ಲಿಂಗಸ್ಥಾಪ್ಯವಾಯಿತ್ತು. ಆ ಲಿಂಗಕ್ಕೆ ದೇಹವೆ ದೇವಾಲಯವಾಗಿ, ಪ್ರಾಣವೇ ಪೂಜಾರಿಯಾಗಿ, ಸದ್ವಾಸನೆ ಎಂಬ ಪುಷ್ಪದಲ್ಲಿ ಪೂಜೆಯ ಮಾಡಿ, ನವನಾಳದಾದಿ ಮಧ್ಯ ಸ್ಥಾನದಲ್ಲಿ ನಿಜ ನಿವಾಸಿಯಾದ ಕಾರಣ ಪ್ರಾಣಲಿಂಗ ಸಂಬಂಧವಳವಟ್ಟಿತ್ತೆಂಬುದೀ ವಚನಾರ್ಥ.

೨೧. ಕಳಸವುಳ್ಳ ಶಿವಾಲಯ ಒಂದಕ್ಕೆ ಚವುಕದವೆರಡು ಕಂಭ, ಮೂರು ಭಾವ ಪೂಜಕರಾರೊ? ಅನುಭಾವಿಗಳಿನ್ನಾರೋ? ಪೂಜಿಸುವರಿನ್ನಾರೋ? ಇದರ ಸ್ಥಾನದ ನೆಲೆಯನಾರುಬಲ್ಲರು ಗುಹೇಶ್ವರಾ?

ಟೀಕುಃ-- ಜ್ಞಾನವುಳ್ಳ ಪಿಂಡನೆಂಬ ಶಿವಾಲಯಕ್ಕೆ, ಶಿವಶಕ್ತಿಗಳೆಂಬೆರಡು ಕಂಭ, ತ್ರಿತತ್ವ ಭಾವವೆಂಬ ಪೂಜೆ, ಈ ಪ್ರಾಣಲಿಂಗ ಪೂಜೆ ಆರಿಗೂ ಅಳವಡದೆಂಬುದೀ ವಚನಾರ್ಥ.

೨೨. ಕಾಲೇ ಕಂಬಗಳೆನ್ನ ದೇಹವೇ ದೇಗುಲವಾಯಿತ್ತಯ್ಯ! ಎನ್ನ ನಾಲಿಗೆಯೆ ಗಂಟೆ, ಶಿರ ಸುವರ್ಣದ ಕಳಸ ಇದೇನಯ್ಯಾ! ಸರವೆ ಲಿಂಗಕ್ಕೆ ಸಿಂಹಾಸನವಾಗಿ ಇರ್ದುದು. ಗುಹೇಶ್ವರಾ, ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ ಪಲ್ಲಟವಾಗಿರ್ದನಯ್ಯಾ.

ಟೀಕುಃ-- ಪ್ರಾಣಲಿಂಗಕ್ಕೆ ಶರಣನ ದೇಹವೆ ದೇವಾಲಯವಾಗಿ, ತನು ಗುಣಗಳೆಲ್ಲಾ ಪರಿಚಾರಕರಾಗಿರ್ದ ಕಾರಣ ಲಿಂಗಸಂಬಂಧವಳವಟ್ಟಿತ್ತೆಂಬುದೀ ವಚನಾರ್ಥ.

೨೩. ಅಚಲ ಸಿಂಹಾಸನವನಿಕ್ಕಿ, ನಿಶ್ಚಲ ಮಂಟಪವು ಸಂಚದೋವರಿಯೊಳಗೆ ರುಚಿಗಳೆಲ್ಲವನು ನಿಲಿಸಿ, ಪಂಚ ರತ್ನದ ಶಿಖರ ಮಿಂಚು ಕೊಂಡಿಯ ಕಳಸ ವಚನ ಚಿತ್ರದ ಪುಷ್ಪದ ರಚನೆಯನವರಂಗದಲ್ಲಿ ಖೇಚರಾದಿಯ ಗಮನ ವಿಚಾರಪರನುಂಗಿ ಗುಹೇಶ್ವರ ನಿಂದ ನಿಲವು ಸಚರಾಚರವ ಮಿಂಚಿತ್ತು.

ಟೀಕುಃ-- ಸ್ವಸ್ಥ ಪದ್ಮಾಸನದ ಮೇಲೆ ನಿಶ್ಚಲ ತನುವೆಂಬ ಮಂಟಪದ ಮೇಲೆ, ಮನದೋವರಿಯೊಳಗೆ ಭಿನ್ನ ರುಚಿಯಡಗಿ, ಪಂಚವರ್ಣಾತ್ಮಕ ಬಿಂದುವಿನೊಳಗೆ ನಿಂದು ನಿವಾಸ ಜ್ಞಾನದ ಅಗ್ರದ ಪ್ರಭೆ ವಾಗ್ಬ್ರಹ್ಮವನು ವಿವೇಕ ಗಮನಾಗಮನವನು ಅಡಗಿಸಿ, ವಿಚಾರವಾಗಿ ಆ ನಿಲವು ಸಚರಾಚರವ ಮೀರಿತ್ತೆಂಬುದೀ ವಚನಾರ್ಥ.

೨೪. ಭುವರ್ಲೋಕದ ಸ್ಥಾವರಕ್ಕೆ ಸತ್ಯಲೋಕದ ಅಗ್ಗವಣಿಯಲ್ಲಿ ಮಜ್ಜನಕ್ಕೆರೆದು, ದೇವಲೋಕದ ಪುಷ್ಪದಲ್ಲಿ ಪೂಜೆಯ ಮಾಡಿದಡೆ, ಹತ್ತು ಲೋಕಾದಾಚಾರ ಕೆಟ್ಟಿತ್ತು. ಮೂರು ಲೋಕದರಸುಗಳು ಮುಗ್ಧರಾದರು. ಗುಹೇಶ್ವರಲಿಂಗವು ಸ್ಥಾವರಕ್ಕೆ ಸ್ಥಾವರವಾದನು.

ಟೀಕುಃ-- ಆಧಾರ ಬ್ರಹ್ಮರಂಧ್ರಾಂತರದೊಳಗೆ ಜ್ಯೋತಿರ್ಲಿಂಗ ಪ್ರತಿಷ್ಠೆಯಾಗಿರಲು, ಬ್ರಹ್ಮರಂಧ್ರದ ಅಮೃತವೆ ಆ ಲಿಂಗಕ್ಕೆ ಅಭಿಷೇಕವಾಗಲು, ಸಹಸ್ರದಳ ಕಮಲವೆ ಪೂಜೆಯಾಗಿರಲು, ದಶವಾಯುಗಳಡಗಿ



ದವು. ಅವಸ್ಥಾತ್ರಯದ ಅಧಿದೇವತೆಗಳು ನಿಶ್ಚಟ್ಟವಾದರು. ಇಂತಾಗಲು ಆ ಸುಜ್ಞಾನಲಿಂಗವು ನಿಜ ಸ್ಥಾವರವಾಯಿತ್ತೆಂಬುದೀ ವಚನಾರ್ಥ.

೨೫. ಪ್ರಾಣಲಿಂಗಕ್ಕೆ ಕಾಯವೇ ಸೆಜ್ಜೆ, ಆಕಾಶ ಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ, ಹೃದಯ ಕಮಲದಲ್ಲಿ ಶಿವ ಶಿವ ಎಂಬ ಶಬ್ದ, ಇದು ಅದ್ವೈತ ಕಾಣಾ ಗುಹೇಶ್ವರಾ.

ಟೀಕುಃ-- ಕಾಯವೆಂಬ ಸೆಜ್ಜೆಯೊಳಗಿಪ್ಪ ಪ್ರಾಣಲಿಂಗಕ್ಕೆ ಬ್ರಹ್ಮರಂಧ್ರದ ಅಮೃತ ಗಂಗೋದಕವೆ ಮಜ್ಜನ, ದಿವ್ಯ ಸದ್ವಾಸನೆಯೆ ಪುಷ್ಪವೇ ಪೂಜೆ, ಹೃದಯ ಕಮಲದಲ್ಲಿ ಸೋಹಂಮೆಂಬ ಶಬ್ದವೇ ಸ್ತೋತ್ರ, ಇಂತಾದ ಕಾರ ಪ್ರಾಣಲಿಂಗವದ್ವೈತವಾಯಿತ್ತೆಂಬುದೀ ವಚನಾರ್ಥ.

೨೬. ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ ಪಂಚ ಭೌತಿಕ, ಮನ, ಬುದ್ಧಿ, ಚಿತ್ತ, ಅಹಂಕಾರ, ಚತುಷ್ಟಯ ಕರಣಾದಿ ಗುಣಂಗಳು, ಸತ್ವ, ರಜ, ತಮದಲ್ಲಿ ಆತ್ಮನನೆತ್ತಲೆಂದರಿಯರು. ಇದನರಿದಡೆ, ಸಮತೆ, ಸದಾಚಾರ, ಆಶ್ರಮ ಸ್ಥಾನಕ ಸಹಸ್ರದಳ ಕಮಲದಲ್ಲಿ ಗುಹೇಶ್ವರನೆಂಬ ಲಿಂಗವು.

ಟೀಕುಃ -- ಪಂಚಭೂತ ಅಂತಃಕರಣ ಚತುಷ್ಟಯ ಕರಣಾದಿ ಗುಣಂಗಳು ಸತ್ವ ರಜ ತಮವೆಂಬ ಈ ಬಾಹ್ಯಾಂತಃಕರಣದಿಂದ ಆತ್ಮನ ನೆಲೆಯನರಿಯಬಾರದು. ಮತ್ತೆ ಅರಿವ ಪರಿ ಎಂತೆಂದೊಡೆ, ಸರ್ವಾಂಗವನು ಸಮತೆ ಎಂಬ ಸದಾಚಾರದಲ್ಲಿ ನಿಲಿಸಲು, ಆ ಬ್ರಹ್ಮರಂಧ್ರದ ಸಹಸ್ರ ದಳಕಮಲದಲ್ಲಿ ಪ್ರಾಣಲಿಂಗ ಪ್ರತಿಷ್ಠೆಯನು ಕಾಣಬಹುದೆಂಬುದೀ ವಚನಾರ್ಥ.

೨೭. ಕಕ್ಷೆ, ಕರಸ್ಥಲ, ಕಂಠ, ಉತ್ತಮಾಂಗ, ಮುಖ ಸೆಜ್ಜೆ, ಅಂಗ ಸೋಂಕೆಂಬವು ಷಡುಸ್ಥಲದ ದರ್ಶನಾದಿಗಳಿಗೆ ಬಹಿರಂಗದಲ್ಲಿ ವೇಷ ಲಾಂಛನವಯ್ಯಾ. ಅಂತರಂಗದಲ್ಲಿ ನಾಲ್ಕು ಸ್ಥಲ ಬ್ರಹ್ಮರಂಧ್ರ, ಭ್ರೂಮಧ್ಯ, ನಾಸಿಕಾಗ್ರ, ಚೌಕಮಧ್ಯ, ಇಂತೀ ಸ್ಥಾನಂಗಳನರಿಯರಾಗಿ, ಬ್ರಹ್ಮರಂಧ್ರದಲ್ಲಿ ಲಿಂಗಸ್ವಾಯತ, ಭ್ರೂಮಧ್ಯದಲ್ಲಿ ಜಂಗಮ ಸ್ವಾಯತ, ನಾಸಿಕಾಗ್ರದಲ್ಲಿ ಪ್ರಸಾದಸ್ವಾಯತ, ಚವುಕಮಧ್ಯದಲ್ಲಿ ಅನುಭಾವಸ್ವಾಯತ, ಅಷ್ಟದಳ ಕಮಲದಲ್ಲಿ ಸರ್ವಸ್ವಾಯತ, ಇದು ಕಾರಣ ಗುಹೇಶ್ವರಾ ನಿಮ್ಮ ಶರಣರು ಸದಾ ಸನ್ನಿಹಿತರು.

ಟೀಕುಃ— ಬಹಿರಂಗವಲ್ಲಿ ಲಿಂಗಧಾರಣ ಸ್ಥಾನಂಗಳು ಲಾಂಛನಕ್ಕೆ ಕಾರಣಂಗಳು. ಮತ್ತಾವುದು ಲಿಂಗಧಾರಣಕ್ಕೆ ಸ್ಥಾನಂಗಳೆಂದೊಡೆ, ಬ್ರಹ್ಮರಂಧ್ರ, ಭ್ರೂಮಧ್ಯ, ನಾಸಿಕಾಗ್ರ, ಚವುಕಮಧ್ಯವೆಂಬ ನಾಲ್ಕುಸ್ಥಾನ. ಬ್ರಹ್ಮರಂಧ್ರದಲ್ಲಿ ಲಿಂಗ, ಭ್ರೂಮಧ್ಯದಲ್ಲಿ ಜ್ಞಾನ, ನಾಸಿಕಾಗ್ರದಲ್ಲಿ ಪ್ರಸಾದ, ಆಧಾರದಲ್ಲಿ ಅನುಭಾವ ಇಂತೀ ನಾಲ್ಕು ದಳದಲ್ಲಿ ಸ್ವಾಯತ ಸನ್ನಿಹಿತನಾದೊಡೆ ಹೃದಯ ಕಮಲದಲ್ಲಿ ಸಂಪೂರ್ಣ ಸ್ವಾಯತ ಇಂತಪ್ಪ ಶರಣರು ಸದಾ ಸನ್ನಿಹಿತರೆಂಬುದೀ ವಚನಾರ್ಥ.

೨೮. ಆಧಾರದಲ್ಲಿ ಬ್ರಹ್ಮ ಸ್ವಾಯತವಾದ. ಸ್ವಾಧಿಷ್ಠಾನವಲ್ಲಿ ವಿಷ್ಣು ಸ್ವಾಯತವಾದ. ಮಣಿಪೂರಕದಲ್ಲಿ ರುದ್ರ ಸ್ವಾಯತವಾದ. ಅನಾಹತದಲ್ಲಿ ಈಶ್ವರ ಸ್ವಾಯತವಾದ. ವಿಶುದ್ಧಿಯಲ್ಲಿ ಸದಾಶಿವನು ಸ್ವಾಯತವಾದ. ಆಜ್ಞೆಯಲ್ಲಿ ಉಪಮಾತೀತ ಸ್ವಾಯತವಾದ. ಇವರೆಲ್ಲರು ಬಯಲಲೆ ಹುಟ್ಟಿ ಬಯಲಲೆ ಬೆಳೆದು ಬಯಲ ಲಿಂಗವನೆ ಧರಿಸಿಕೊಂಡು, ಬಯಲನೆ ಆರಾಧಿಸಿ, ಬಯಲಾಗಿ ಹೋದುದ ಕಂಡೆ ಗುಹೇಶ್ವರಾ.

ಟೀಕುಃ— ಷಡುಚಕ್ರಸ್ಥಾನದಲ್ಲಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಉಪಮಾತೀತರೆಂಬ ಷಡು ಸಾದಾಖ್ಯ ನಾಯಕರು ಸ್ವಾಯತ ಸಂಬಂಧವಾಗಿ, ಪ್ರಾಣಲಿಂಗವ ಧರಿಸಿಕೊಂಡು ನಿರಾಳ ಲಿಂಗಾರ್ಚನೆಯ ಮಾಡುತ್ತಿರ್ಪರಾಗಿ, ನಿರಾಳದಲ್ಲಿಯೆ ತದ್ಗತವಾಗಿರ್ಪರೆಂಬುದೀ ವಚನಾರ್ಥ.

೨೯. ಆಧಾರ ಲಿಂಗ ಕುಂಡಲಿ ವಿಡಿದು, ಹೃದಯ ಕಮಳದಲ್ಲಿ ಬ್ರಹ್ಮ ಆ ನಾಳದಲ್ಲಿ ವಿಷ್ಣು ಆ ನಾಳದಗ್ರದಲ್ಲಿ ರುದ್ರ, ಭ್ರೂಮಧ್ಯದ ಮೇಲೆ ಈಶ್ವರನು ಬ್ರಹ್ಮರಂಧ್ರದೊಳಗೆ ಸದಾಶಿವನು ಶಿಖಾಗ್ರದಲ್ಲಿ ಸರ್ವಗತ ಶಿವನು ಆದಿಯನಾದಿ ಇಲ್ಲದಂದು ಗುಹೇಶ್ವರ ಲಿಂಗ ನಿರಾಳನು.

ಟೀಕುಃ— ಆಧಾರ ಲಿಂಗ ಮೂಲವಿಡಿದು, ಹೃದಯ ಕಮಲದಲ್ಲಿ ಬ್ರಹ್ಮ, ಆ ಹೃದಯಕಮಲದ ನಾಳದಲ್ಲಿ ವಿಷ್ಣು, ಆ ನಾಳದಗ್ರದಲ್ಲಿ ರುದ್ರನು ಆ ಅಗ್ರದ ಭ್ರೂಮಧ್ಯದ ಮೇಲೆ ಈಶ್ವರನು ಅಲ್ಲಿಂದ ಮೇಲೆ ಬ್ರಹ್ಮರಂಧ್ರದೊಳಗೆ, ಸದಾಶಿವನು. ಆ ಬ್ರಹ್ಮರಂಧ್ರದ ಅತ್ಯತಿಷ್ಠದ್ದಶಾಂಗುಲದ ತೂರ್ಯದಲ್ಲಿ ಸರ್ವಗತ ಶಿವನು. ಇಂತೀ ಆರು ಸ್ಥಾನದಲ್ಲಿ ಷಡಂಗ ಯೋಗ ಸಮರಸ ಸಂಪರ್ಕವಾಗಲು, ಪೂರ್ವಕಕ್ಷೆ ಅಪರ



ಕಕ್ಷೆ ಎಂಬವೆರಡು ಅಡಗಿ ಪ್ರಾಣಲಿಂಗ ಸಂಬಂಧ ನಿರಾಳದಲ್ಲಿ ಸ್ಥಾಪ್ಯವಾಯಿತ್ತೆಂಬುದೀ ವಚನಾರ್ಥ.

೩೦. ಹೊತ್ತಾರೆ ಪೂಜಿಸಲು, ಬೇಡ ಕಂಡ್ಯಾ! ಬೈಗೆ ಪೂಜಿಸಲು, ಬೇಡ ಕಂಡ್ಯಾ! ಇರುಳುವನು ಹಗಲುವನು ಕಳೆದು ಪೂಜೆಯನು ಪೂಜಿಸಲು ಬೇಕು ಕಂಡ್ಯಾ! ಇಂತಪ್ಪ ಪೂಜೆಯ ಪೂಜಿಸುವವರ ಎನಗೆ ತೋರಯ್ಯ ಗುಹೇಶ್ವರಾ.

ಟೀಕುಃ— ಉದಯ ಕಾಲವೆಂಬ ಕಲ್ಪಿತದಿಂದ ಮಾಡುವ ಲಿಂಗಾರ್ಚನೆ, ಉಪಾಧಿಯಾದ ಕಾರಣ ಹೊತ್ತಾರೆ ಪೂಜಿಸಲು ಬೇಡ ಕಂಡ್ಯಾ ಎಂಬ ಶಬ್ದಕ್ಕರ್ಥ, ಬೈಗು ಎಂಬ ಕಾಲ ಕಲ್ಪಿತದಿಂ ಮಾಡುವ ಲಿಂಗಾರ್ಚನೆ ಉಪಾಧಿಯಾದ ಕಾರಣ ಬೈಗಿನ ಪೂಜೆ ಬೇಡ ಕಂಡ್ಯಾ ಎಂಬ ಶಬ್ದಕ್ಕರ್ಥ. ಇಂತು ಇರುಳು ಹಗಲೆಂಬ ಕಾಲ ಕಲ್ಪಿತವ ಕಳೆದು ನಿರುಪಾಧಿಯಿಂದ ಶಿವಲಿಂಗಾರ್ಚನೆಯ ಮಾಡಬೇಕೆಂಬ ಕಾರಣ ಇರುಳುವನು ಹಗಲುವನು ಕಳೆದು ಪೂಜಿಸಲು ಬೇಕು ಕಂಡ್ಯಾ ಎಂಬ ಶಬ್ದಕ್ಕರ್ಥ. ಇಂತಪ್ಪ ಶಿವಲಿಂಗಾರ್ಚನೆಯ ಮಾಡುವ ಶರಣರು ಅಪೂರ್ವವೆಂಬುದೀ ವಚನಾರ್ಥ.

೩೧. ಅಂಗದಲ್ಲಿ ಮಾಡುವ ಸುಖವದು ಲಿಂಗಕ್ಕೆ ಭೂಷಣವಾಯಿತ್ತು. ಕಾಡುಗಿಚ್ಚಿನ ಕೈಯಲ್ಲಿ ಕರಡವ ಕೊಯಿಸುವಂತೆ ಹಿಂದೆ ಮೆದೆ ಇಲ್ಲ. ಮುಂದೆ ಹುಲ್ಲಿಲ್ಲ. ಅಂಗ ಲಿಂಗವೆಂಬನ್ನಕ್ಕರ ಫಲದಾಯಕ ಲಿಂಗೈಕ್ಯವದು ಬೇರೆ ಗುಹೇಶ್ವರಾ.

ಟೀಕುಃ— ಅಂಗಸೋಂಕಿನ ಸುಖ ಪ್ರಾಣಲಿಂಗಕ್ಕೆ ಭೂಷಣವಾಗಿ ಅಂಗ ಶಂಕೆಯಳಿಯಿತ್ತೆಂಬುದೀಗ ಅಂಗಕ್ಕೆ ಮಾಡುವ ಸುಖವದು ಲಿಂಗಕ್ಕೆ ಭೂಷಣವಾಯಿತ್ತೆಂಬ ಶಬ್ದಕ್ಕರ್ಥ. ಕಾಡುಗಿಚ್ಚು ಕರಡವ ಸುಟ್ಟು, ಹುಲ್ಲಿಲ್ಲ, ಮೆದೆ ಇಲ್ಲವೆಂಬ ಹಾಗೆ, ಅಂಗವೆಂಬ ತೃಣ, ಲಿಂಗವೆಂಬಗ್ನಿಯೊಳಗೆ ಅಳಿದು ಅಂಗವೆಂಬ ಶಂಕೆ ಹಿಂದೆಯೂ ಇಲ್ಲ, ಮುಂದೆಯೂ ಇಲ್ಲವೆಂಬುದೀಗ, ಕಾಡುಗಿಚ್ಚಿನ ಕೈಯಲ್ಲಿ ಕರಡವ ಕೊಯಿಸುವಂತೆ, ಹಿಂದೆ ಮೆದೆ ಇಲ್ಲ, ಮುಂದೆ ಹುಲ್ಲಿಲ್ಲವೆಂಬ ಶಬ್ದಕ್ಕರ್ಥ. ಇಂತಲ್ಲದೆ, ಅಂಗಲಿಂಗವೆಂಬುದು ಉಪಾಧಿಯಾದ ಕಾರಣ, ಅಂಗಲಿಂಗವೆಂಬನ್ನಕ್ಕರ ಫಲದಾಯಕ ಲಿಂಗೈಕ್ಯವದು ಬೇರೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೩೨. ಎನ್ನ ಮನದ ಕೊನೆಯ ಮೊನೆಯ ಮೇಲೆ, ಅಂಗವಿಲ್ಲದ ರೂಪನ ಕಂಡು, ಮರುಳಾದೆನವ್ವಾ! ಆತನ ಕಂಡು ಬೆರಗಾದೆನವ್ವಾ! ಎನ್ನಂತರಂಗದ ಆತ್ಮನೊಳಗೆ ಅನುಮಿಷ ನಿಜೈಕ್ಯ ಗುಹೇಶ್ವರನ ಕಂಡು.

ಟೀಕು:— ಮನ ಸನ್ನಿಹಿತವಾಗಿ, ನಿಶ್ಚಲ ಭಾವದ ಅಗ್ರದೊಳಗೆ ಅಕಾಯ ಚೈತನ್ಯ ಲಿಂಗವನು ಜ್ಞಾನ ದೃಷ್ಟಿಯಿಂದ ಕಂಡು, ನೋಡಿದ ನೋಟ, ಎವೆ ಹೊಯ್ಯದೆ, ಅನುಮಿಷವಾಗಿ, ಅಂತರಂಗದಲ್ಲಿ ಆ ಸುಖ ವಿಶ್ರಾಂತಿಯನೆಯ್ದುತ್ತಿರಲು, ಪ್ರಾಣಲಿಂಗ ಸಂಬಂಧ ಸನ್ನಿಹಿತವಾಯಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

೩೩. ಮನದ ಸುಖವ ಕಂಗಳಿಗೆ ತಂದರೆ, ಕಂಗಳ ಸುಖವ ಮನಕ್ಕೆ ತಂದರೆ, ನಾಚಿತ್ತು, ಮನ ನಾಚಿತ್ತು. ಸ್ಥಾನ ಪಲ್ಲಟವಾದ ಬಳಿಕ ವ್ರತಕ್ಕೆ ಭಂಗ ಗುಹೇಶ್ವರಾ.

ಟೀಕು:— ಬಾಹ್ಯಾಭ್ಯಂತರದೊಳಗೆ ಸಂಪೂರ್ಣವಾಗಿರ್ದ ಲಿಂಗವನು ತತ್ಪರಿಪೂರ್ಣ ದೃಷ್ಟಿಯಿಂ ನೋಡಿ, ಅನುಮಿಷನಾಗಿ ಸುಖಿಸುವದಲ್ಲದೆ ಮನದಲ್ಲಿ ತೋರಿದರಿವ ಕಂಗಳ ಮುಂದಕ್ಕೆ ತಂದು ಕರಸ್ಥಲದೊಳಗೆ ಕುರುಹಿಟ್ಟು, ಕರಸ್ಥಲದೊಳಗೆ ತೋರುವ ಲಿಂಗಭಾವವ ಮನಸ್ಥಲಕ್ಕೆ ತಂದು ವೇಧಿಸಿಕೊಂಡೆನೆಂಬುದು ಭಿನ್ನಭಾವವಾದ ಕಾರಣ, ಮನದ ಸುಖವ ಕಂಗಳಿಗೆ ತಂದರೆ, ಕಂಗಳ ಸುಖವ ಮನಕ್ಕೆ ತಂದರೆ ನಾಚಿತ್ತು ಮನ ನಾಚಿತ್ತು ಎಂಬ ಶಬ್ದಕ್ಕರ್ಥ. ಅದು ಕಾರಣ ಸ್ವಸ್ಥಾನ ಪಲ್ಲಟವಾಗಿ ಪ್ರದೇಶಿಕತ್ವವನೆಯ್ದಿದ ಕಾರಣ, ಸ್ಥಾನಪಲ್ಲಟವಾದರೆ ವ್ರತಕ್ಕೆ ಭಂಗ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೩೪. ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗವಾಯಿತ್ತು. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಉಳಿ ಮುಟ್ಟದ ಲಿಂಗವ ಮನ ಮುಟ್ಟ ಬಲ್ಲುದೆ ಗುಹೇಶ್ವರಾ?

ಟೀಕು:— ವಾಙ್ಮನಕ್ಕಗೋಚರವಾದ ಲಿಂಗವು ಮನೋಮೂರ್ತಿಯಾಗಿರ್ದ ಭೇದವನರಿಯದೆ, ಭಿನ್ನ ಬುದ್ಧಿಯಿಂದ ಇದು ಅನ್ಯ ಲಿಂಗ ಇದು ಎನ್ನ ಲಿಂಗವೆಂಬವರಿಗೆ ಪ್ರಾಣಲಿಂಗ ಸಂಬಂಧ ಘಟಿಸದೆಂಬುದೀ ವಚನದ ತಾತ್ಪರ್ಯಾರ್ಥ.



೩೫. ಅರುಳಿಯ ಮರದ ಮೇಲೊಂದು ಹಂಸೆ ಗೂಡನಿಕ್ಕಿತ್ತ ಕಂಡೆ. ಆ ಗೂಡಿನೊಳಗೊಬ್ಬ ಹೆಂಗೂಸು ಉಯ್ಯಾಲೆಯಾಡುತ್ತಿರ್ದಳು. ಉಯ್ಯಾಲೆ ಹರಿದು, ಹೆಂಗೂಸು ನೆಲಕ್ಕೆ ಬಿದ್ದು ಸತ್ತಡೆ, ಪ್ರಾಣಲಿಂಗವ ಕಾಣಬಹುದು ಕಾಣಾ ಗುಹೇಶ್ವರಾ.

ಟೀಕು:— ಅರುಳಿಯ ಮರನೆಂದಡೆ ಉಲಿವ ಶಬ್ದಕ್ಕರ್ಥ. ಆ ವಾಗ್ಜಾಲದೊಳಗೆ ಜೀವ ಹಂಸನೆಂಬುದೊಂದು ಪಕ್ಷಿ ಪಂಚ ಭೂತ ಪಿಂಡವೆಂಬುದೊಂದು ಗ್ರಹವ ಮಾಡಿತ್ತೆಂಬುದೀಗ, ಅರುಳಿಯ ಮರದ ಮೇಲೊಂದು ಹಂಸೆ ಗೂಡನಿಕ್ಕಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಪಿಂಡದೊಳಗೆ ಮಾಯೆ ಎಂಬ ಸ್ತ್ರೀ ಅಂತಃಕರಣ ಚತುಷ್ಟಯವೆಂಬ ಮಣೆಯ ಮಾಡಿ, ದಶವಾಯುಗಳ ಮಿಳಿಯ ಕಟ್ಟಿ, ಕರ್ಮವಾಸನೆಯಿಂದ ಉಯ್ಯಾಲೆಯನಾಡುತ್ತಿರ್ದಳೆಂಬುದೀಗ, ಆ ಗೂಡಿನೊಳಗೊಬ್ಬ ಹೆಂಗೂಸು ಉಯ್ಯಾಲೆಯಾಡುತ್ತಿರ್ದಳೆಂಬ ಶಬ್ದಕ್ಕರ್ಥ. ಅಂತಃಕರಣ ಚತುಷ್ಟಯಂಗಳಳಿದು, ದಶವಾಯುಗಳ ದುರ್ವರ್ತನೆ ಭೇದನವಾಗಲು, ಆ ಮಾಯೆಯು ಳಿದಳೆಂಬುದೀಗ, ಉಯ್ಯಾಲೆ ಹರಿದು ಹೆಂಗೂಸು ನೆಲಕ್ಕೆ ಬಿದ್ದು ಸತ್ತಡೆ, ಎಂಬ ಶಬ್ದಕ್ಕರ್ಥ. ಇಂತಾಗಲು, ವಾಯು ಪ್ರಾಣವಳಿದು, ಲಿಂಗ ಪ್ರಾಣವಳವಟ್ಟಿತ್ತೆಂಬುದೀಗ ಪ್ರಾಣಲಿಂಗವ ಕಾಣಬಹುದು ಎಂಬ ಶಬ್ದಕ್ಕರ್ಥ.

೩೬. ಸೃಷ್ಟಿಗೆ ಹುಟ್ಟಿದ ಶಿಲೆ, ಕಲ್ಲುಕುಟಿಕಂಗೆ ಹುಟ್ಟಿದ ಮೂರುತಿ, ಮಂತ್ರಕ್ಕೆ ಲಿಂಗವಾಯಿತ್ತಲ್ಲಾ! ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೆಯ್ವಿಡಿವ ಅಚ್ಚ ವ್ರತಗೇಡಿಗಳನೇನೆಂಬೆ ಗುಹೇಶ್ವರಾ?

ಟೀಕು:— ಮನೋಮೂರ್ತಿಯಾದ ಲಿಂಗವು ಸರ್ವಾಂಗದಲ್ಲಿರ್ಪ ಭೇದವನರಿಯದೆ, ಉಪಾಧಿಯಿಂದ ಇಷ್ಟಲಿಂಗವ ಪೂಜಿಸುವರಿಗೆ ಪ್ರಾಣಲಿಂಗ ಸಂಬಂಧವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೩೭. ಕಲ್ಲುದೇವರೆಂದು, ಪೂಜಿಸುವರು. ಆಗದು ಕಾಣಿರೋ. ಅಗಡಿಗರಾದಿರಲ್ಲಾ! ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ.

ಟೀಕು:— ಹೃದಯ ಕಮಲದಲ್ಲಿಪ್ಪ ಸದಮಲ ಪ್ರಾಣಲಿಂಗವಲ್ಲದೆ, ಬೇರೆ ಮತ್ತೆ ಮಿಥ್ಯಾಭಾವದಿಂದ ಲಿಂಗ ಉಂಟೆಂದು ಅಪವರ್ತಿಸಿ ನುಡಿಯಲಾಗದು. ಅದೆಂತೆಂದೊಡೆ, ಅದು ಮಿಥ್ಯಾಭಾವ, ದೋಷಾರ್ಥಿ ಎನಿಸಿತ್ತಾಗಿ ಎಂಬುದೀ ವಚನದ ತಾತ್ಪರ್ಯಾರ್ಥ.

೩೮. ಮೂರು ಪುರದ ಹೆಬ್ಬಾಗಿಲೊಳಗೊಂದು ಕೋಡಗ ಕಟ್ಟಿ
ರ್ದುದ ಕಂಡೆ. ಅದು ಕಂಡಕಂಡವರ ನೋಡಿಸುತ್ತಿರ್ದಿತ್ತು ನೋಡಾ.
ಆ ಪುರದರಸು ತನ್ನ ಪಾಯದಳ ಸಹಿತ ಬಂದರೆ ಒಂದೆ ಬಾರಿ ಮುರಿದು,
ನುಂಗಿತ್ತ ಕಂಡೆ. ಆ ಕೋಡಗಕ್ಕೆ ಒಡಲುಂಟು, ತಲೆ ಇಲ್ಲ. ಕಾಲುಂಟು.
ಹೆಜ್ಜೆ ಇಲ್ಲ. ಕೈಯ್ಯುಂಟು ಬೆರಳಿಲ್ಲ. ಇದು ಕರ ಜೋದ್ಯ ನೋಡಾ.
ತನ್ನ ಕರೆದವರ ಮುನ್ನವೆ ತಾ ಕರೆವುದು. ಆ ಕೋಡಗ ತನ್ನ ಬಸಿ
ರಲ್ಲಿ ಬಂದ ಮದಗಜದ ನೆತ್ತಿಯನೇರಿ, ಗಾಳಿಯ ಧೂಳಿಯ ಕೂಡಿ,
ಓಲಾಡುತ್ತಿಹುದ ಕಂಡೆ. ವಾಯುದ ಗಗನವ ಮೇಲೆ ತನ್ನ ಕಾಯುವ
ಪುಟನೆಗೆದು ತೋರುತ್ತಿಹುದ ಕಂಡೆ. ಹತ್ತು ಮುಖದ ಸರ್ಪನ ತನ್ನ
ಹೇಳಿಗೆಯೊಳಗಿಕ್ಕಿ ಆಡಿಸುತ್ತಿಹುದ ಕಂಡೆ. ಐವರು ಕೋಡಗೂಸುಗಳ
ಕಣ್ಣಿಂಗೆ ಕನ್ನಡಕವ ಕಟ್ಟಿಹುದ ಕಂಡೆ. ಹತ್ತು ಕೇರಿಗಳೊಳಗೆ ಸುಳಿವ
ಹರಿಯ ನೆತ್ತಿಯ ಮೆಟ್ಟಿ, ಹುಬ್ಬೆತ್ತಿಹುದ ಕಂಡೆ. ಆ ಕೋಡಗದ ಕೈಯ್ಯೊ
ಳಗೆ ಮಾಣಿಕ್ಯವ ಕೊಟ್ಟರೆ, ನೋಡುತ್ತ ನೋಡುತ್ತ ಬೆರಗಾದುದ ಕಂಡೆ.
ಕೂಡಲಲ್ಲಿ ಕಳೆಯಲಿಲ್ಲ. ಗುಹೇಶ್ವರನ ನಿಲವು ಪ್ರಾಣಲಿಂಗ ಸಂಬಂಧವಿಲ್ಲ
ದವರಿಗೆ ಕಾಣಬಾರದು.

ಟೀಕು:— ಮೂರು ಪುರವೆಂದರೆ ಸ್ಥೂಲ, ಸೂಕ್ಷ್ಮ, ಕಾರಣ ತನು
ಗಳೆಂಬರ್ಥ. ಆ ತನುತ್ರಯಂಗಳು ತನ್ನೊಳಗೆ ಭಿನ್ನವಾದ ಕಾರಣ ನಡೆವ
ಸಂಸಾರ ಮಾರ್ಗ ಒಂದೆಯಾಗಿರ್ಪುದಾಗಿ, ಮೂರುಪುರಕ್ಕೆ ಒಂದೇ
ಹೆಬ್ಬಾಗಿಲೆಂಬ ಶಬ್ದಕ್ಕರ್ಥ. ಆ ಮಾರ್ಗದೊಳಗೆ ಮನವೆಂಬ ಮರ್ಕಟನು
ಭವಪಾಶದಲ್ಲಿ ಬಿಗಿವಡೆದು, ಇರುತ್ತಿರ್ಪ ಕಾರಣ ಒಂದು ಕೋಡಗ ಕಟ್ಟಿ
ರ್ದುದ ಕಂಡೆನೆಂಬ ಶಬ್ದಕ್ಕರ್ಥ. ಆ ಮನವೆಂಬ ಮರ್ಕಟನು ಸರ್ವರನು
ಹಾಸ್ಯಾಸ್ಪದವಾನವ ಮಾಡುತ್ತಿಹ ಕಾರಣ, ಕಂಡ ಕಂಡವರ ನೋಡಿಸುತ್ತಿ
ರ್ದುದ ಕಂಡೆನೆಂಬ ಶಬ್ದಕ್ಕರ್ಥ. ಆ ಮನವೆಂಬ ಮರ್ಕಟನು ತನುತ್ರ
ಯಂಗಳ ತನ್ನವೆಂದು ಮಾಡಿಕೊಂಡು, ಅವರ ಭೋಗಾದಿಭೋಗಂಗ
ಳಿಗೆ ತಾನೇ ಕರ್ತೃವಾಗಿ, ಭೋಗಿಸುತ್ತಿರ್ಪ ಜೀವನು ತನ್ನ ಸಕಲ
ಕರಣಂಗಳೆಂಬ ಪಾಯದಳ ಸಹಿತ ಇದ್ದಡೂ ಆ ಜೀವನನು ಸಕಲ ಕರ
ಣಂಗಳನು ತಾನೇ ಅವಗ್ರಹಿಸಿಕೊಂಡಿರ್ದಿತ್ತೆಂಬ ಕಾರಣ ಆ ಪುರದರಸು
ತನ್ನ ಪಾಯದಳ ಸಹಿತ ಬಂದಡೆ, ಒಂದೇ ಬಾರಿ ಮುರಿದು, ನುಂಗಿತ್ತ
ಕಂಡೆನೆಂಬ ಶಬ್ದಕ್ಕರ್ಥ. ಆ ಮನಕ್ಕೆ ಅಂತರ್ದೇಹವೆಂಬುದೊಂದು ಒಡ



ಲುಂಟಾಗಿಯೂ, ತಲೆ ಎಂದರೆ ಜ್ಞಾನ, ಅಂತಪ್ಪ ಜ್ಞಾನವಿಲ್ಲವೆಂಬುದೀಗ
ಒಡಲುಂಟು, ತಲೆ ಇಲ್ಲವೆಂಬ ಶಬ್ದಕ್ಕರ್ಥ. ಆ ಮನ ಚರಿಸುವದ ಕಾಣ
ಬಹುದು. ಹೆಜ್ಜೆವಿಡಿಯಬಾರದೆಂಬುದೀಗ, ಕಾಲುಂಟು, ಹೆಜ್ಜೆ ಇಲ್ಲವೆಂಬ
ಶಬ್ದಕ್ಕರ್ಥ. ಆ ಮನಸ್ಸು ಆವುದೊಂದು ಪ್ರಪಂಚಿಕವನು ಪಿಡಿವುದಕ್ಕೆ
ಸಂಕಲ್ಪವೆಂಬ ಹಸ್ತ ಉಂಟಾಗಿಯೂ ಆ ಹಸ್ತಕ್ಕೆ ಲಕ್ಷ್ಯಾಲಕ್ಷಣಂಗಳು
ಇಲ್ಲವೆಂಬುದೀಗ ಕೈಯ್ಯುಂಟು, ಬೆರಳಿಲ್ಲವೆಂಬ ಶಬ್ದಕ್ಕರ್ಥ. ಆ ಮನಸ್ಸು
ಆಹ್ವಾನಿಸಲು, ತಾನಾ ಆಹ್ವಾನದೊಳಗೆ ಆಹ್ವಾನವಾಗಿರ್ಪುದಾಗಿ, ತನ್ನ
ಕರೆದವರ ತಾ ಮುನ್ನವೆ ಕರೆವುದೆಂಬ ಶಬ್ದಕ್ಕರ್ಥ. ಆ ಮನಸ್ಸಿನಿಂದ
ಹುಟ್ಟಿತ್ತು ಅಹಂಕಾರ. ಆ ಅಹಂಕಾರವೆಂಬುದೇ ಮದಗಜವೆಂಬ ಶಬ್ದ
ಕ್ಕರ್ಥ. ಆ ಅಹಂಕಾರವೆಂಬ ಮದಗಜದ ಮಸ್ತಕದ ಮೇಲೆ ತಾನೆ
ಕುಳ್ಳಿತ್ತು. ತಲೆದೋರುತ್ತಿಹ ಕಾರಣ, ಆ ಕೋಡಗ ತನ್ನ ಬಸುರಲ್ಲಿ
ಬಂದ ಮದಗಜದ ನೆತ್ತಿಯನೇರಿತ್ತೆಂಬ ಶಬ್ದಕ್ಕರ್ಥ. ರಜೋಗುಣ ಸಂ
ಯುಕ್ತವಹ ವಾಯುವಿಕಾರದ ಕೂಡೆ ತಾನು ಕ್ರೀಡಿಸುತ್ತಿಹ ಕಾರಣ
ಗಾಳಿಯ ದೂಳಿಯ ಕೂಡಿ, ಓಲಾಡುತ್ತಿಹುದ ಕಂಡೆನೆಂಬ ಶಬ್ದಕ್ಕರ್ಥ.
ವಾಯುವೆಂದರೆ ಇಲ್ಲವೆ, ಗಗನವೆಂದರೆ ಆತ್ಮತತ್ವ. ಇಂತು ವಾಯುದ ಆತ್ಮ
ತತ್ವದ ವಿದ್ಯದ ಮೇಲೆ, ತಾನಲ್ಲದೆ ಮತ್ತೆ ಆರು ಬಲ್ಲವರಿಲ್ಲವೆಂದು, ಅಂಗ
ವಿಸಿ ತೋರುತ್ತಿರಲು, ವಾಯುದ ಗಗನದ ಮೇಲೆ, ತನ್ನ ಕಾಯುವ ಪುಟ
ನೆಗೆದು, ತೋರುತ್ತಿಹುದ ಕಂಡೆನೆಂಬ ಶಬ್ದಕ್ಕರ್ಥ. ದಶೇಂದ್ರಿಯಂಗಳೆಂಬ
ಅತ್ಯುಗ್ರ ವಿಷಯ ಸರ್ಪನನೂ ತನ್ನ ಸಂಕಲ್ಪವೆಂಬ ಹೇಳಿಗೆಯೊಳಿಕ್ಕಿ.
ಸಿಕ್ಕಿಸಿಕೊಂಡಿರ್ಪುದರಿಂ ಹತ್ತು ಮುಖದ ಸರ್ಪನ ತನ್ನ ಹೇಳಿಗೆಯೊ
ಳಿಕ್ಕಿ ಆಡಿಸುತ್ತಿರ್ಪುದ ಕಂಡೆನೆಂಬ ಶಬ್ದಕ್ಕರ್ಥ. ಇಚ್ಛಾಶಕ್ತಿ, ಕ್ರಿಯಾ
ಶಕ್ತಿ, ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿ ಎಂಬ ಪಂಚಶಕ್ತಿಯರ ಜ್ಞಾನ
ಚಕ್ಷುವಿಂಗೆ, ಸಂಸಾರದ ಕನ್ನಡಕವನೆ ಮುಂದುದೋರಿಸಿ, ಸುವಿವೇಕವ
ಮರಿಸುತ್ತಿರ್ಪ ಕಾರಣ, ಅಯ್ವರ ಸ್ತ್ರೀಯರ ಕಣ್ಣಿಂಗೆ ಕನ್ನಡಕವ ಕಟ್ಟ
ತ್ತಿಹುದ ಕಂಡೆನೆಂಬ ಶಬ್ದಕ್ಕರ್ಥ. ಹತ್ತು ಕೇರಿ ಎಂದರೆ ದಶನಾಳ,
ಆ ದಶನಾಳಂಗಳೊಳಗೆ ಚರಿಸುವ ಹರಿ ಎಂದಡೆ ವಾಯು. ಅಂತಪ್ಪ
ದಶವಾಯುಗಳ ಮಸ್ತಕದ ಮೇಲೆ ತಾನೇ ಅಧಿಷ್ಠಾಯಿಕವಾಗಿ, ತೋರು
ತ್ತಿರಲು, ಹತ್ತು ಕೇರಿಗಳೊಳಗೆ ಹರಿವ ಹರಿಯ ನೆತ್ತಿಯ ಮೆಟ್ಟಿ, ಹುಬ್ಬೆ
ತ್ತುತ್ತಿಹುದ ಕಂಡೆನೆಂಬ ಶಬ್ದಕ್ಕರ್ಥ. ಅಂತಪ್ಪ ಮನಸ್ಸಿನ ಸಂಕಲ್ಪ

ನೆಂಬ ಹಸ್ತದೊಳಗೆ ಸುಜ್ಞಾನ ರತ್ನವ ತಂದು, ಸುಸಂಕಲ್ಪವ ಮಾಡಲು, ಮಿಥ್ಯಾ ಸಂಕಲ್ಪ ಮಾದು ಜ್ಞಾನ ಸಂಕಲ್ಪ ಸಿದ್ಧಿಯನೆಯ್ದಿ, ಆ ಮನವು ವಿಕಾರಾದಿ, ಭಾವಂಗಳೆಲ್ಲವನು ಮರೆದು, ಆ ಸುಜ್ಞಾನದೊಳಗೆ ಪರ ಮಕಾಷ್ಠೆಯನೆಯ್ದಿರ್ಪುದಾಗಿ, ಆ ಕೋಡಗದ ಕೈಯಲ್ಲಿ ಮಾಣಿಕ್ಯವ ಕೊಟ್ಟಡೆ, ನೋಡುತ್ತ ನೋಡುತ್ತ ಬೆರಗಾಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತಪ್ಪ ನಿರ್ಣಯವ ಕೂಡಿದ ಬಳಿಕ ಕೂಡಿದಂತಿರಬೇಕಲ್ಲದೆ ಮರಳಿ ಕೂಡಿಹೆನೆಂಬ ಭಿನ್ನ ಭಾವ ತೋರಲಿಲ್ಲ. ಆ ಅರಿವನಗಲಲಿಲ್ಲವೆಂಬ ಕಾರಣ ಕೊಡಲಿಲ್ಲ, ಕಳೆಯಲಿಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ ನಿರ್ಣಯ ಪ್ರಾಣಲಿಂಗ ಸಂಬಂಧವಿಲ್ಲದವರಿಗೆ ಕಾಣಬಾರದೆಂಬುದೀಗ ಗುಹೇಶ್ವರನ ನಿಲವು ಪ್ರಾಣಲಿಂಗ ಸಂಬಂಧವಿಲ್ಲದವರಿಗೆ ಕಾಣಬಾರದೆಂಬ ಶಬ್ದಕ್ಕರ್ಥ.

೩೯. ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ, ಕಲ್ಲು ಕಲ್ಲ ಮೇಲೆ ಕೆಡೆದರೆ, ದೇವರೆತ್ತ ಹೋದರೋ? ಲಿಂಗ ಪ್ರತಿಷ್ಠೆಯ ಮಾಡಿದ ವಂಗೆ, ನಾಯಕ ನರಕ ಗುಹೇಶ್ವರಾ.

ಟೀಕು:— ದೇಹವೇ ದೇವಾಲಯವಾಗಿ, ಪ್ರಾಣವೇ ಲಿಂಗವಾಗಿ, ಆ ಲಿಂಗವನು ಮನದಲ್ಲಿ ಪ್ರತಿಷ್ಠೆಯ ಮಾಡಿ, ಶರಣೆಂಬುದು ಕ್ರಮವಲ್ಲದೆ ಭಿನ್ನ ಬುದ್ಧಿಯಿಂದ ಅನ್ಯಲಿಂಗ ಸ್ಥಾಪ್ಯವ ಮಾಡಿ ಎರಗಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

೪೦. ದೇಹದೊಳಗೆ ದೇವಾಲಯವಿರ್ದು, ಮತ್ತೆ ಬೇರೆ ದೇವಾ ಲಯವೇಕೆ? ಎರಡಕ್ಕೆ ಹೇಳಲಿಲ್ಲಯ್ಯಾ. ಗುಹೇಶ್ವರ ನೀನು ಕಲ್ಲಾದರೆ ನಾನೇನಪ್ಪೆನು?

ಟೀಕು:— ದೇಹವೇ ದೇವಾಲಯ ಪ್ರಾಣವೇ ಲಿಂಗವಾಗಿ ತನ್ನ ಸ್ವತಃ ಸಿದ್ಧ ಸ್ವಯಂಭುವಿರುತ್ತಿರಲು, ಅಲ್ಲಿಯೆ ಲಿಂಗವನರಸಿಕೊಂಬುದಲ್ಲದೆ, ಬೇರೆ ಉಂಟೆಂದು ಅರಸಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

೪೧. ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲಾ! ಲಿಂಗ ಸಂಗಿಗಳೆಲ್ಲ ಮಹಾ ಘನವನರಿಯದೆ, ಹೋದರೋ. ಹುಸಿಯನೆ ಕೊಯ್ದು ಹುಸಿಯನೆ ಪೂಜಿಸಿ ಗಸಣಿಗೊಳಗಾದರು ಗುಹೇಶ್ವರಾ.

ಟೀಕು:— ಅಂಗದ ಶಂಕೆಯ ಹಂಗು ಹಿಂಗದೆ, ಮನದಲ್ಲಿ ಮಹಾ ಘನ ಲಿಂಗೈಕ್ಯವನರಿಯದೆ, ಮಾಡುವ ಲಿಂಗಾರ್ಚನೆ ಎಲ್ಲವು ಮಿಥ್ಯಾ ಕ್ರಿಯೆ ಎನಿಸುವವು ಎಂಬುದೀ ವಚನದ ತಾತ್ಪರ್ಯಾರ್ಥ.



೪೨. ಆಳುದ್ದಿಹದೊಂದು ಬಾವಿ, ಆಕಾಶದ ಮೇಲೆ ಹುಟ್ಟಿತ್ತು ನೋಡಾ! ಆ ಬಾವಿಯ ನೀರನೊಂದು ಮೃಗ ಬಂದು ಕುಡಿಯಿತ್ತು. ಕುಡಿಯ ಬಂದ ಮೃಗವಾ ನೀರೊಳಗೆ ಮುಳುಗಿದರೆ, ಉರಿಯ ಬಾಣದ ಲೆಚ್ಚ ತೆಗೆದೆ ನೋಡಾ! ಒಂದೇ ಬಾಣದಲ್ಲಿ ಗಾಯವಿಲ್ಲದೆ, ಸತ್ತ ಮೃಗ ಮುಂದಣ ಹೆಜ್ಜೆಯನಿಕ್ಕಿತ್ತ ಕಂಡೆ. ಅಂಗೈಯ್ಯೊಳಗೊಂದು ಕಂಗಳು ಮೂಡಿ, ಸಂಗದ ಸುಖವು ದಿಟವಾಯಿತ್ತು. ಲಿಂಗ ಪ್ರಾಣವೆಂಬುದರ ನಿರ್ಣಯುವನಿಂದು ಕಂಡೆನು ಗುಹೇಶ್ವರಾ.

ಟೀಕು:— ಅಂಗುಷ್ಠ ತೊಡಗಿ, ವಾಣಾಗ್ರ ಪರಿಯಂತರದಲ್ಲಿ ಸಂಸಾರ ವಿಷಯ ರಸ ಸಂಪೂರ್ಣವಾಗಿರುತ್ತಿರ್ಪುದಾಗಿ, ಆ ವಿಷಯ ರಸಕ್ಕೆ ತನುವೆ ಒಂದು ಕೂಪವಾಗಿ ತುಂಬಿಕೊಂಡಿರುತ್ತಿಹ ಕಾರಣ, ಆಳುದ್ದಿಹದೊಂದು ಬಾವಿ ಎಂಬ ಶಬ್ದಕ್ಕರ್ಥ. ಆ ವಿಷಯ ಕೂಪವೆಂಬ ತನು ಆತ್ಮನಲ್ಲಿ ಉದ ಯವಾಗಿ, ತೋರುತ್ತಿರಲು ಆಕಾಶದ ಮೇಲೆ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಆ ವಿಷಯ ರಸವನು ಜೀವನೆಂಬ ಮೃಗವು ತೃಷ್ಣಾತುರದಿಂ ಕುಡಿವುತ್ತಿ ರಲು, ಆ ಬಾವಿಯ ನೀರನೊಂದು ಮೃಗ ಬಂದು ಕುಡಿಯಿತ್ತೆಂಬ ಶಬ್ದ ಕ್ಕರ್ಥ. ಆ ಜೀವನೆಂಬ ಮೃಗವು ಆ ಸಂಸಾರದ ದುಃಸ್ಸಾರ ರಸವೆಂಬ ವಿಷಯ ರಸವನಾರೋಗಿಸಿ, ಅಲ್ಲಿಯೇ ಗತವಾಗಿರುತ್ತಿರಲು ಜ್ಞಾನಾಂಜನ ಶಲಾಕೆಯಿಂದ ಆ ಜೀವನನ ಜೀವಭಾವವ ಸಂಹರಿಸಿ, ಆ ವಿಷಯ ಕೂಪ ದಿಂದ ಹೊರಯಿಂಕೆ ತೆಗೆಯಲು, ಅದೀಗ ಕೂಡಿಯ ಬಂದ ಮೃಗವಾ ನೀರೊಳಗೆ ಮುಳುಗಿದೊಡೆ, ಉರಿಯ ಬಾಣದಲೆಚ್ಚು ತೆಗೆದೆ ನೋಡಾ ಎಂಬ ಶಬ್ದಕ್ಕರ್ಥ. ಆ ಸುಜ್ಞಾನಾಂಜನ ಶಲಾಕೆಯಿಂದಳಿದ ಜೀವನು ಶಿವಭಾವವನೆಯ್ದಿ ಸತ್ಪಥದಲ್ಲಿ ಅಡಿಯಿಟ್ಟು ನಡೆವುತ್ತಿರಲು, ಅದೀಗ ಒಂದೇ ಬಾಣದಲ್ಲಿ ಗಾಯವಿಲ್ಲದೆ ಸತ್ತ ಮೃಗವು ಮುಂದಣ ಹೆಜ್ಜೆಯನಿಕ್ಕಿತ್ತ ಕಂಡೆನೆಂಬ ಶಬ್ದಕ್ಕರ್ಥ. ಈ ಪರಿಯಲು ನಡೆವುತ್ತಿರಲು ಕರಸ್ಥಲದಲ್ಲಿ ಜ್ಞಾನದೃಗ್ವಿಷಯವಹ ಇಷ್ಟಲಿಂಗ ಸಂಬಂಧವಾಯಿತ್ತೆಂಬುದೀಗ ಅಂಗೈ ಯ್ಯೊಳಗೊಂದು ಕಂಗಳು ಮೂಡಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅದು ಕಾರಣ ಆ ಪ್ರಾಣಲಿಂಗದೊಳಗೆ ಸಂಗ ಸುಖವು ಸಾಧ್ಯವಾಯಿತ್ತೆಂಬು ದೀಗ, ಲಿಂಗಪ್ರಾಣವೆಂಬುದರ ನಿರ್ಣಯುವನಿಂದು ಕಂಡೆನೆಂಬ ಶಬ್ದಕ್ಕರ್ಥ.

೪೩. ಉದಯ ಮುಖದಲ್ಲಿ ಪೂಜಿಸ ಹೋದರೆ, ಹೃದಯದ ಮುಖ ದಲ್ಲಿ ಕತ್ತಲೆಯಾಯಿತ್ತು. ಹಾರಿ ಹೋಯಿತ್ತು ಪ್ರಾಣಲಿಂಗ. ಹರಿದು

ಬಿದ್ದಿತ್ತು ಸೆಜ್ಜೆ. ಕಟ್ಟುವ ಬಿಡುವ ಸಂಬಂಧಿಗಳ ಕಷ್ಟವ ನೋಡಾ ಗುಹೇಶ್ವರಾ ॥

ಟೀಕುಃ— ಲಿಂಗದ ವೇಳೆಯನರಿಯದೆ, ಕಾಲ ವೇಳೆವಿಡಿದು ಲಿಂಗಾರ್ಚನೆಯ ಮಾಡಿಹೆನೆಂದರೆ, ಅಂತರಂಗ ಅಜ್ಞಾನಕ್ಕೊಳಗಾಯಿತ್ತೆಂಬುದೀಗ, ಉದಯ ಮುಖದಲ್ಲಿ ಪೂಜಿಸಹೋದರೆ, ಹೃದಯದ ಮುಖದಲ್ಲಿ ಕತ್ತಲೆಯಾಯಿತ್ತೆಂಬ ಶಬ್ದಕ್ಕರ್ಥ. ಆ ಅಜ್ಞಾನವೆಡೆಗೊಂಡ ಕಾರಣ, ಅಲ್ಲಿಪ್ಪ ಪ್ರಾಣಲಿಂಗ ತೊಲಗಿತ್ತೆಂಬುದೀಗ, ಹಾರಿ ಹೋಯಿತ್ತು ಪ್ರಾಣಲಿಂಗವೆಂಬ ಶಬ್ದಕ್ಕರ್ಥ. ಆ ಲಿಂಗ ತೊಲಗಿದ ಕಾರಣ, ಕಾಯವೆಂಬ ಸೆಜ್ಜೆ ಭಿನ್ನವಾಯಿತ್ತೆಂಬುದೀಗ, ಹರಿದು ಬಿದ್ದಿತ್ತು ಸೆಜ್ಜೆ ಎಂಬ ಶಬ್ದಕ್ಕರ್ಥ. ಇಂತಪ್ಪ ಅಜ್ಞಾನ ಭಾವದಿಂದ ಲಿಂಗವ ಹಿಡಿದು, ಪೂಜಿಸುವದೆಲ್ಲವು ಅಕ್ರಮವಾದ ಕಾರಣ ಕಟ್ಟುವ ಬಿಡುವ ಸಂಬಂಧಿಗಳ ಕಷ್ಟವ ನೋಡಾ ಎಂಬ ಶಬ್ದಕ್ಕರ್ಥ.

೪೪. ಸೃಷ್ಟಿಯ ಮೇಲಣ ಕಣಿಯ ತಂದು, ಅಷ್ಟ ತನುವಿನ ಕೈಯ್ಯಲ್ಲಿ ಕೊಡಲು, ಅಷ್ಟ ತನು ತಪ್ಪಿ ಸೃಷ್ಟಿಯ ಮೇಲೆ ಬಿದ್ದರೆ, ಕೆಟ್ಟೆನಲ್ಲಾ, ಅನಾಚಾರಿ ಎಂದು ಮುಟ್ಟರು ನೋಡಾ! ಮುಟ್ಟದ ಭೇದವನು, ವಿಖಂಡಿಸಿದ ಭಾವವನು, ಭಾವ ವ್ರತಗೇಡಿಗಳು ತಾವೆತ್ತ ಬಲ್ಲರು ಗುಹೇಶ್ವರಾ?

ಟೀಕುಃ— ಅಂಗದ ಮೇಲೆ ಲಿಂಗವಿದ್ದು, ಅಂಗ ವಿಕಾರ ಹಿಂಗದೆ ಇಪ್ಪವರು, ಮುನ್ನವೆ ತಾವು ಲಿಂಗಕ್ಕೆ ಭಿನ್ನವಾಗಿಹರು. ಆ ಸ್ಥಿತಿಯನರಿಯದೆ, ಕೈಯ್ಯ ಕುರುಹು ನೆಲಕ್ಕೆ ಬಿದ್ದಿತ್ತು, ಎಂದು ಸಾವವರು ಉಭಯ ಭ್ರಷ್ಟರೆಂಬುದೀ ವಚನದ ತಾತ್ಪರ್ಯಾರ್ಥ.

೪೫. ಇರುಳಿನ ಮುಖದೊಳಗೊಂದು, ನವರತ್ನ ಖಂಡಿತಹಾರವಡಗಿತ್ತು. ಹಗಲಿನ ಮುಖದೊಳಗೊಂದು ನವಚಿತ್ರ ಪತ್ರದ ವೃಕ್ಷವಡಗಿತ್ತು. ರತ್ನದ ಹಾರವ ವೃಕ್ಷಕ್ಕಾಹಾರವನಿಕ್ಕಿದಡೆ ಗುಹೇಶ್ವರ ಲಿಂಗದಲ್ಲಿ ಪ್ರಾಣಲಿಂಗಕ್ಕೆ ಸುಖವಾಯಿತ್ತು.

ಟೀಕುಃ— ಇರುಳೆಂದರೆ ಅಜ್ಞಾನ. ಆ ಅಜ್ಞಾನದ ಮುಖದೊಳಗೆ ನವಲಿಂಗ ಪ್ರಯುಕ್ತವೆನಿಸಿಪ್ಪ, ಜ್ಞಾನ ರತ್ನವಡಗಿತ್ತೆಂಬುದೀಗ ಇರುಳಿನ ಮುಖದೊಳಗೊಂದು ನವರತ್ನ ಖಂಡಿತ ಹಾರವಡಗಿತ್ತ ಕಂಡೆನೆಂಬ



ಶಬ್ದಕ್ಕರ್ಥ. ಹಗಲೆಂದರೆ ಅರಿವು. ಅರಿವಿನ ಮುಖದಲ್ಲಿ ಒಂದು ವಿವೇಕವೆಂಬ ವೃಕ್ಷವಡಗಿತ್ತೆಂಬುದೀಗ, ಹಗಲಿನ ಮುಖದೊಳಗೊಂದು ನವ ಚಿತ್ರ ಪತ್ರದ ವೃಕ್ಷವಡಗಿತ್ತೆಂಬ ಶಬ್ದಕ್ಕರ್ಥ. ಆ ನವಲಿಂಗ ಜ್ಞಾನ ರತ್ನವನು ವಿವೇಕವೆಂಬ ವೃಕ್ಷವವಗ್ರಹಿಸಿದಡೆ, ಪ್ರಾಣಲಿಂಗಕ್ಕೆ ಸುಖವಾಯಿತ್ತೆಂಬುದೀಗ ರತ್ನದ ಹಾರವ ವೃಕ್ಷಕ್ಕಾಹಾರವನಿಕ್ಕಿದಡೆ ಪ್ರಾಣಲಿಂಗಕ್ಕೆ ಸುಖವಾಯಿತ್ತೆಂಬ ಶಬ್ದಕ್ಕರ್ಥ.

೪೬. ಹಿಡಿವ ಕೈಯ್ಯಮೇಲೆ ಕತ್ತಲೆಯಯ್ಯಾ! ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ! ನೆನೆವ ಮನದ ಮೇಲೆ ಕತ್ತಲೆಯಯ್ಯಾ! ಕತ್ತಲೆ ಎಂಬುದು ಇತ್ತಲೆಯಯ್ಯಾ! ಗುಹೇಶ್ವರನೆಂಬುದು ಅತ್ತಲೆಯಯ್ಯಾ

ಟೀಕುಃ— ಸರ್ವಾಂಗ ಲಿಂಗವೆಂದರಿಯದೆ, ಕರಸ್ಥಲದ ಲಿಂಗದಲ್ಲಿ ಉಪಾಧಿಕನಾಗಿ, ಪೂಜಿಸುವಾತನು ಅಜ್ಞಾನಿ ಎಂಬುದೀ ವಚನದ ತಾತ್ಪರ್ಯಾರ್ಥ.

೪೭. ಅಡವಿಯಲೊಂದು ಮನೆಯ ಮಾಡಿ ಆಶ್ರಯವಿಲ್ಲದಂತಾಯಿತ್ತು. ನಡುನೀರ ಜ್ಯೋತಿಯ ವಾಯುವಿನ ಕಯ್ಯಲ್ಲಿ ಕೊಟ್ಟಂತಾಯಿತ್ತು. ಗುಹೇಶ್ವರಾ ನಿಮ್ಮ ಶರಣರ ಎರವಿನ ಲಿಂಗ ಮೂರುಲೋಕಕ್ಕೆ.

ಟೀಕುಃ— ಅಡವಿ ಎಂದರೆ, ಭವಾರಣ್ಯಕ್ಕೆ ಪೆಸರು. ಆ ಭವಾರಣ್ಯದೊಳಗೆ, ಜೀವನು ಕಾಯವೆಂಬುದೊಂದು ಗ್ರಹವ ತಾನೆ ಅನುಗೊಳಿಸುತ್ತಿರಲು, ಅಡವಿಯಲೊಂದು ಮನೆಯ ಮಾಡಿ, ಎಂಬ ಶಬ್ದಕ್ಕರ್ಥ. ಜೀವ ಭಾವ ಹಿಂಗಿ, ಲಿಂಗ ಭಾವವೆಡೆಗೊಳ್ಳದೆ ಇರಲು ದುರಾಶ್ರಯವೆನಿಸಿಕೊಂಡಿತ್ತಾಗಿ, ಆಶ್ರಯವಿಲ್ಲದಂತಾಯಿತ್ತೆಂಬ ಶಬ್ದಕ್ಕರ್ಥ. ನೀರೆಂದರೆ ಮನಸ್ಸು, ಆ ಮನೋಮಧ್ಯದೊಳಗಿರ್ಪ ಜ್ಞಾನ ಜ್ಯೋತಿ ಪ್ರಾಣವಾಯು ವಿಕಾರದಲ್ಲಿ ಅಳಿಯಿತ್ತಾಗಿ, ನಡು ನೀರ ಜ್ಯೋತಿಯ ವಾಯುವಿನ ಕೈಯ್ಯಲ್ಲಿ ಕೊಟ್ಟಂತಾಯಿತ್ತೆಂಬ ಶಬ್ದಕ್ಕರ್ಥ. ಅದು ಕಾರಣ ಅಂತಪ್ಪ ಪಿಂಡದಲ್ಲಿ ಆ ಲಿಂಗವು ಅನ್ಯೋನ್ಯವಾಗಿರ್ಪುದಾಗಿ ಎರವಿನ ಲಿಂಗವೆಂಬ ಶಬ್ದಕ್ಕರ್ಥ.

೪೮. ಕಲ್ಪಿತ ಉದಯ ಸಂಕಲ್ಪಿತ ಸುಳುಹು ಪವನ ಭೇದವನರಿಯದೆ, ಪ್ರಾಣಲಿಂಗವೆಂಬುದು ಅಂಗ ಸಂಸಾರಿ, ಜಂಗಮವೆಂಬುದು ಲಿಂಗ ಸಂಸಾರಿ. ಸ್ವಯವಲ್ಲ ಪರವಲ್ಲ ನಿರವಯ ಗುಹೇಶ್ವರನೆಂಬ ನಾಮಕ್ಕೆ ನಾಚರು ನೋಡಾ.

ಟೀಕು:— ಕರ್ಮ ಕಲ್ಪಿತ ಭಾವದಿಂದುದಯಿಸಿದ ತನು, ಆ ತನುವಿನೊಳಗೆ ಸಂಕಲ್ಪಿತ ಭಾವದಿಂ ವ್ಯವಹರಿಸುತ್ತಿರ್ಪುದು ಮನವಾದ ಕಾರಣ, ಕಲ್ಪಿತ ಉದಯ ಸಂಕಲ್ಪಿತ ಸುಳುಹೆಂಬ ಶಬ್ದಕ್ಕರ್ಥ. ಆ ನೆನಹಿನ ಸಂಚವೆ ಪವನ ಭೇದ. ಆ ಪವನ ಭೇದ ಹಿಂಗದೆ ಪ್ರಾಣಲಿಂಗವೆಂಬುದು ಅಂಗ ಸಂಸಾರಿಯಾದ ಕಾರಣ, ಪವನ ಭೇದವನರಿಯದೆ ಪ್ರಾಣಲಿಂಗವೆಂಬುದು ಅಂಗ ಸಂಸಾರಿ ಎಂಬ ಶಬ್ದಕ್ಕರ್ಥ. ಅಂತಪ್ಪ ಅಜ್ಞಾನ ಹಿಂಗದೆ ಸುಜ್ಞಾನವ ಕಂಡಿಹೆನೆಂಬ ಮಾತು ಅಂಗವಿಡಿದು ಭಿನ್ನಸಂಸಾರವಾದ ಕಾರಣ, ಜಂಗಮವೆಂಬುದು ಲಿಂಗ ಸಂಸಾರವೆಂಬ ಶಬ್ದಕ್ಕರ್ಥ. ಈ ಎರಡು ಸ್ವಯವಲ್ಲ ಪರವಲ್ಲದ ಕಾರಣ ಆನು ಲಿಂಗವೆಂಬುದಿದು ಭಂಗವಾಗಿರ್ಪುದಾಗಿ, ಸ್ವಯವಲ್ಲ ಪರವಲ್ಲ ನಿರವಯ ಗುಹೇಶ್ವರನೆಂಬ ನಾಮಕ್ಕೆ ನಾಚರೆಂಬ ಶಬ್ದಕ್ಕರ್ಥ.

೪೯. ಇರುಳಿನ ಸಂಗವೇ ಹಗಲೆಂದರಿಯರು. ಹಗಲಿನ ಸಂಗವೆ ಇರುಳೆಂದರಿಯರು. ವಾಯಕ್ಕೆ ನಡೆವರು.' ವಾಯಕ್ಕೆ ನುಡಿವರು. ವಾಯು ಪ್ರಾಣಿಗಳು ಗುಹೇಶ್ವರನೆಂಬ ಅರಿವಿನ ಕುರುಹು ಆರಿಗೆಯು ಅಳವಡದು.

ಟೀಕು:— ಇರುಳೆಂದರೆ ಅಜ್ಞಾನ. ಹಗಲೆಂದರೆ ಸುಜ್ಞಾನ. ಅಂತು ಅಜ್ಞಾನವೆ ಮುಂದೆ ತೋರುವ, ಸುಜ್ಞಾನ ಸೂಚನೆಗೆ ಕಾರಣ. ಸುಜ್ಞಾನವೆ ಮುಂದೆ ತೋರುವ ಅಜ್ಞಾನಕ್ಕೆ ಕಾರಣವಾಗಿ, ಇರುಳಿನ ಸಂಗವ ಹಗಲೆಂದರಿಯರು, ಹಗಲಿನ ಸಂಗವ ಇರುಳೆಂದರಿಯರೆಂಬ ಶಬ್ದಕ್ಕರ್ಥ. ಇಂತಪ್ಪ ಜ್ಞಾನಾಜ್ಞಾನ ಸಂಗದಿಂದ ನಡೆವರಿಗೆ ಪ್ರಾಣಲಿಂಗ ಸಂಬಂಧವಿಲ್ಲವೆಂಬುದೀ ವಚನಾರ್ಥ.

೫೦. ಯೋಗದಾಗೆಂಬುದನಾರು ಬಲ್ಲರು? ಅದು ಮೂಗ ಕಂಡ ಕನಸು. ನಡೆವ ಬಟ್ಟೆ ಮೂರು, ನಡೆಯದೆ ಬಟ್ಟೆ ಒಂದೆ. ಒಂದನೊಂಬತ್ತು ಮಾಡಿ ನಡಿದೆಹೆವೆಂಬರು. ಒಂಬತ್ತನೊಂದ ಮಾಡಿ, ನಡೆದಿಹೆವೆಂಬನ್ನಕ್ಕರ ಮೂರು ಮುಖದ ಕತ್ತಲೆ, ಒಂದು ಮುಖವಾಗಿ, ಕಾಡುತ್ತಿರ್ಪುದು. ಪ್ರಾಣಲಿಂಗ ಸಂಬಂಧವೆಲ್ಲಿಯದೋ ಗುಹೇಶ್ವರಾ?

ಟೀಕು:— ಶಿವಯೋಗ ಸಂಬಂಧವೆಂಬುದ ಸಂಗವ ಮಾಡಿದಡೆ, ಆ ಸುಖವನಾರಿಗು ಹೇಳಬಾರದಾಗಿ, ಅದು ಮೂಗ ಕಂಡ ಕನಸೆಂಬ ಶಬ್ದ



ಕ್ಕರ್ಥ. ಈಡಾ, ಪಿಂಗಳ, ಸುಷುಮ್ನ ಎಂಬ ತ್ರಿನಾಳದಲ್ಲಿ ಪವನ ಯೋಗವಾಗುತ್ತಿಹುದೆಂಬುದೀಗ, ನಡೆವ ಬಟ್ಟೆ ಮೂರೆಂಬ ಶಬ್ದಕ್ಕರ್ಥ. ಆ ನಾಳತ್ರಯಂಗಳಿಗೆ ಅಸಾಧ್ಯವಾದ ಪಶ್ಚಿಮ ದ್ವಾರ ಅಸಾಧ್ಯವಪ್ಪುದೆ ಕಾರಣ ನಡೆಯದ ಬಟ್ಟೆ ಒಂದೆಂಬ ಶಬ್ದಕ್ಕರ್ಥ. ಆ ಒಂದು ಮಾರ್ಗದೊಳಗೆ ಯೋಗಿಸುವ ಶಿವಯೋಗವ ನವನಾಳದಲ್ಲಿ ಪ್ರಯೋಗಿಸಿಹವು. ಆ ನವನಾಳದಲ್ಲಿ ಸಂಯೋಗಿಸುವ ಶಿವಯೋಗ ಒಂದೆ ಸುಷುಮ್ನೆಯಲ್ಲಿ ಪ್ರಯೋಗಿಸಿಹವೆಂಬುದೀಗ, ಖಂಡಿತ ಭ್ರಮೆಯ ಬುದ್ಧಿಯಾದ ಕಾರಣ, ಒಂದನೊಂಬತ್ತು ಮಾಡಿ, ಒಂಬತ್ತನೊಂದ ಮಾಡಿ, ಎಂಬ ಶಬ್ದಕ್ಕರ್ಥ. ಇಂತಪ್ಪವರ ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿವಿಧ ಮುಖದ ಮೇಲೆ ಭಿನ್ನಯೋಗವೆಂಬ ಅಜ್ಞಾನ ತಮಸ್ಸು ಒಂದೇ ಮುಖವಾಗಿ ಅವಗ್ರಹಿಸಿಕೊಂಡಿರ್ಪ ಕಾರಣ, ಮೂರು ಮುಖದ ಕತ್ತಲೆ ಒಂದು ಮುಖವಾಗಿ ಕಾಡುತ್ತಿರ್ಪದೆಂಬ ಶಬ್ದಕ್ಕರ್ಥ. ಇಂತಪ್ಪ ಭಿನ್ನಯೋಗಕ್ಕೆ ಶಿವಯೋಗ ಸಾಧ್ಯವಾಗದೆಂಬುದೀಗ ಪ್ರಾಣಲಿಂಗ ಸಂಬಂಧವೆಂಬುದೆಲ್ಲಿಯದು ಹೇಳಾ ಎಂಬ ಶಬ್ದಕ್ಕರ್ಥ.

೫೧. ಆಸನ ಬಂಧನರು ಸುಮ್ಮನಿರರು. ಭಸ್ಮವ ಹೂಸಿ ಸ್ವರವ ಹಿಡಿವರು. ಸಾಯದಿರ್ಪರೆ, ಕಾಲ ಕರ್ಮ ಪ್ರಳಯಂಗಳಾಗಿ? ಸಾಯದಿರ್ಪರೆ? ನಿತ್ಯವನೆ ಮರೆದು ಅನಿತ್ಯವನೆ ಹಿಡಿದು, ಸುತ್ತು ಹೋದರು ಗುಹೇಶ್ವರಾ.

ಟೀಕು:— ಅಂತರಂಗ ಬಹಿರಂಗದಲ್ಲಿ ಪರಿಪೂರ್ಣವಾಗಿರ್ಪ ಪ್ರಾಣಲಿಂಗ ಸಂಬಂಧವನರಿಯದೆ ಪವನ ಯೋಗ ಭೇದದಿಂದ ಲಿಂಗವನರಿದಿಹೆನೆಂಬವರು ಭವಕ್ಕೆ ಭಾಜನವಾದರೆಂಬುದೀ ವಚನದ ತಾತ್ಪರ್ಯಾರ್ಥ.

೫೨. ಮನದ ಕತ್ತಲೆಯೊಳಗಣ ಜ್ಯೋತಿಯ ಕೊನೆಯ ಮೊನೆಯ ಮೇಲೆ ಘನವನರಿದಿಹೆನೆಂಬವರ ಅನುಮಾನಕ್ಕೆ ದೂರ ತಮ ತಮಗೆ ಅರಿದಿಹೆನೆಂಬವರಿಗೆ ಕನಸಿನ ಲಿಂಗ ಗುಹೇಶ್ವರಾ.

ಟೀಕು:— ಮನೋ ಮೂರ್ತಿ ಲಿಂಗವೆಂದರಿಯದೆ ಆ ಮನದ ನೆನಹಿನೊಳಗೆ ತೋರಿದ ಅರಿವಿನ ಕುರುಹ ಲಿಂಗವೆಂದು ಭಾವಿಸುವದೀಗ ಅಜ್ಞಾನವಾದ ಕಾರಣ, ಅದು ಮನದ ಕತ್ತಲೆಯೊಳಗೆ ತೋರಿದ

ಜ್ಯೋತಿಯ ಕೊನೆಯ ಮೊನೆಯ ಮೇಲೆ ಘನವನರಿದಿಹೆನೆಂಬವರ ಅನುಮಾನಕ್ಕೆ ದೂರವೆಂಬ ಶಬ್ದಕ್ಕರ್ಥ. ಇಂತಪ್ಪವರಿಗೆ ಪ್ರಾಣಲಿಂಗ ಸ್ವಪ್ನಭಾವವಾಗಿರ್ಪುದಾಗಿ ಕನಸಿನ ಲಿಂಗವೆಂಬ ಶಬ್ದಕ್ಕರ್ಥ.

೫೩. ತಲೆಯುಬಿಟ್ಟೆಂಬುದ, ಒಲೆಯುಲಟ್ಟೆಂಬರು. ಒಲೆಯುಲುಳ್ಳದ ಹೊಟ್ಟೆಯುಲುಂಬೈಸಕ್ಕರ ಹೊಗೆ ಘನವಾಯಿತ್ತು. ಇದ ಕಂಡು ಹೇಸಿ ಬಿಟ್ಟೆನು ಗುಹೇಶ್ವರಾ.

ಟೀಕು:— ತಲೆ ಎಂದರೆ ಜ್ಞಾನ, ಆ ಸುಜ್ಞಾನದೊಳಗೆ ತೋರಿದ ಸುಖವ ಅನುಭವ ಮುಖಕ್ಕೆ ತಂದು, ಸಮರಸ ಪಾಕವ ಮಾಡಿ, ಅಲ್ಲಿಯೇ ಭೋಗಿಸಿ, ಸುಖಿಸಲರಿಯದೆ, ತನುತ್ರಯ ಮುಖದಲ್ಲಿ ವೇದಿಸಿಕೊಂಡಿಹೆವೆಂಬುದೀಗ, ತಲೆಯುಲಟ್ಟೆಂಬುದ, ಒಲೆಯುಲಟ್ಟೆಂಬರೆಂಬ ಶಬ್ದಕ್ಕರ್ಥ. ಅಂತು ಸುಖಿಸಲರಿಯದೆ, ಭಿನ್ನ ಬುದ್ಧಿಯಿಂದ ಲಿಂಗ ಮುಖಕ್ಕೆ ಆ ಸುಖವ ತಂದು, ಸುಖಿಸಿಹೆನೆಂಬನ್ನಕ್ಕರ, ಭಿನ್ನ ಬುದ್ಧಿಯಿಂ ಅಜ್ಞಾನ ಭಾವವಾದುದಾಗಿ, ಒಲೆಯುಲುಳ್ಳದ ಹೊಟ್ಟೆಯುಲುಂಬೈಸಕ್ಕರ ಹೊಗೆ ಘನವಾಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಸುಖವ ಶಿವಯೋಗಿ ವಿಸರ್ಜಿಸಿರ್ಪ ಕಾರಣ ಇದ ಕಂಡು ಹೇಸಿ ಬಿಟ್ಟೆನೆಂಬ ಶಬ್ದಕ್ಕರ್ಥ.

೫೪. ಉತ್ತರ ಪಥದ ಮೇಲೆ, ಮೇಘ ವರ್ಷ ಕರೆಯುಲು, ಆ ದೇಶದಲ್ಲಿ ಬರನಾಯಿತ್ತು. ಆ ದೇಶದ ಪ್ರಾಣಿಗಳೆಲ್ಲರು ಮೃತವಾದರು. ಅವರ ಸುಟ್ಟ ರುದ್ರಭೂಮಿಯಲ್ಲಿ ನಾ ನಿಮ್ಮನರಸುವೆ ಗುಹೇಶ್ವರಾ.

ಟೀಕು:— ಉತ್ತರ ಪಥವೆಂದರೆ ಮೋಕ್ಷಮಾರ್ಗವಪ್ಪ ಉತ್ತರಕಕ್ಷದ ಸತ್ಪಥವೆಂಬರ್ಥ. ಆ ಉತ್ತರ ಮಾರ್ಗದಲ್ಲಿ ಅನುಭವ ಗವ್ಯವಾಗಿರ್ಪಲ್ಲಿ, ವಿವೇಕ ಶ್ರದ್ಧೆಯ ಮೇಲೆ ಲಿಂಗಸಂಬಂಧವೆಂಬ ಪರಮಸಂತೋಷ ಹರುಷಾಮೃತ ಸುರಿಯುಲು, ಅದು ಮೇಘವರ್ಷ ಸುರಿಯುಲೆಂಬ ಶಬ್ದಕ್ಕರ್ಥ. ಆ ದೇಶವೆಂದರೆ, ಆ ದೇಶ ಕಲ್ಪಿತವೆಂಬ ಶಿರೋಲಿಖಿತ, ಅಂತಪ್ಪ ಆ ದೇಶ ಕಲ್ಪಿತವಳಿಯಿತ್ತೆಂಬುದೀಗ, ಆ ದೇಶದಲ್ಲಿ ಬರನಾಯಿತ್ತೆಂಬ ಶಬ್ದಕ್ಕರ್ಥ. ಇಂತು ಆ ದೇಶ ಕಲ್ಪಿತವುಳ್ಳ ಸಮಸ್ತ ಪ್ರಾಣಿಗಳೆಲ್ಲಕ್ಕೆ, ಆ ಶಿವಯೋಗಾನುಭಾವವಳವಡಲು, ಆ ಜೀವರ ಜೀವಭಾವ ವಳಿಯಿತ್ತೆಂಬುದೀಗ ಆ ದೇಶದ ಪ್ರಾಣಿಗಳೆಲ್ಲರೂ, ಮೃತವಾದರೆಂಬ ಶಬ್ದಕ್ಕರ್ಥ. ಆ ಜೀವರುಗಳ ಜೀವಭಾವವನು ಜ್ಞಾನಾಗ್ನಿಯಲ್ಲಿ



ದಹನವ ಮಾಡಿದ ಲಿಂಗ ಕ್ಷೇತ್ರವಪ್ಪ ಅಂಗದೊಳಗೆ, ಶಿವ ತತ್ವ ವಿವೇಕವ ಮಾಡಿಹೆನೆಂಬುದೀಗ, ಅವರ ಸುಟ್ಟ ರುದ್ರಭೂಮಿಯೊಳಗೆ ನಾ ನಿಮ್ಮನರಸುವೆನೆಂಬ ಶಬ್ದಕ್ಕರ್ಥ.

೫೫. ರಸದ ಬಾವಿಯ ತುಡುಕಬಾರದು. ಕತ್ತರಿ ವಾಣಿಯ ದಾಂಟಿದವಂಗಲ್ಲದೆ, ಪರುಷವಿದೆ, ಕಬ್ಬುನವಿದೆ. ಸಾಧಿಸ ಬಲ್ಲೆನೆಂಬವಂಗೆ ಸಿರಿ ಶೈಲದುದಕವ ಧರಿಸಲು ಬಾರದು ಗುಹೇಶ್ವರಾ ನಿಮ್ಮ ಶರಣಂಗಲ್ಲದೆ.

ಟೀಕು:— ಸರ್ವಾಂಗವು ಲಿಂಗ ಸಮರಸವಾದ ಕಾರಣ ಪರಮಾನಂದ ಜಲ ಲಿಂಗ ರಸವೆಂಬ ಶಬ್ದಕ್ಕರ್ಥ. ಆ ಪರಮಾನಂದ ಜಲವು ಆ ಶಿವಯೋಗಿಯ ಮನವೆಂಬ ಕೂಪದೊಳಗೆ ತುಂಬಿರ್ಪುದಾಗಿ, ರಸದ ಬಾವಿ ಎಂಬ ಶಬ್ದಕ್ಕರ್ಥ. ಕತ್ತರಿ ವಾಣಿ ಎಂದರೆ ಸೋಂಕಿದವರ ಕಡಿದು, ಕತ್ತರಿಸುವ ಅತಿ ವಿಷೋದಕದಂತಪ್ಪ ಸಂಸಾರ ರಸವನಾರೊಬ್ಬರು ಬಯಸಿ ಸೋಂಕಿದಡೆ ಅವರು ಅಲ್ಲಿಯೇ ಗತವಹರೆಂಬ ಕಾರಣ, ಕತ್ತರಿ ವಾಣಿ ಎಂಬ ಶಬ್ದಕ್ಕರ್ಥ. ಅಂತಪ್ಪ ಸಂಸಾರ ವಿಷಯ ರಸವನು ಮುಟ್ಟದೆ, ಅದನುತ್ತರಿಸಿದಾತಂಗಲ್ಲದೆ ಆ ಶಿವಯೋಗ ಸಮರಸವನೆಯ್ದ ಬಾರದೆಂಬ ಕಾರಣ, ರಸದ ಬಾವಿಯ ತುಡುಕಬಾರದು. ಕತ್ತರಿ ವಾಣಿಯ ದಾಂಟಿದಾತಂಗಲ್ಲದೆ ಎಂಬ ಶಬ್ದಕ್ಕರ್ಥ. ಪರುಷವೆಂದರೆ ಸುಜ್ಞಾನ, ಕಬ್ಬುನವೆಂದರೆ ದೇಹ, ಆ ಸುಜ್ಞಾನದೊಳಗೆ ದೇಹವನು ದಗ್ಧವ ಮಾಡುವುದು ಅಪೂರ್ವವೆಂಬುದೀಗ ಪರುಷವಿದೆ, ಕಬ್ಬುನವಿದೆ, ಸಾಧಿಸಬಲ್ಲಿಹೆನೆಂಬುವಂಗೆ ಎಂಬ ಶಬ್ದಕ್ಕರ್ಥ. ಸಿರಿ ಶೈಲವೆಂದರೆ ಬ್ರಹ್ಮರಂಧ್ರಸ್ಥಾನ. ಅಂತಪ್ಪ ಬ್ರಹ್ಮರಂಧ್ರ ಸ್ಥಾನದಲ್ಲಿರ್ಪ ಪರಮಾಮೃತವನು ತನ್ನ ಸರ್ವಾಂಗದ ಮೇಲೆ ಆವರಣವ ಮಾಡಿಕೊಂಡು ಪರಮ ಪರಿತೋಷದಿಂದಿರ್ಪುದು ಶಿವಶರಣಂಗಲ್ಲದೆ ಮತ್ತಾರಿಗೂ ಅಸಾಧ್ಯವೆಂಬುದೀಗ ಸಿರಿ ಶೈಲದುದಕವ ಧರಿಸಬಾರದು ಗುಹೇಶ್ವರಾ ನಿಮ್ಮ ಶರಣಂಗಲ್ಲದೆ ಎಂಬ ಶಬ್ದಕ್ಕರ್ಥ.

೫೬. ಅಗ್ನಿಯ ಸುಡುವಲ್ಲಿ, ಉದಕವ ತೊಳೆವಲ್ಲಿ, ವಾಯುವ ಮುಟ್ಟಿ ಆಕಾಶವ ಹಿಡಿವಲ್ಲಿ, ಯೋಗದ ಹೊಲಬ ನೀವೆತ್ತ ಬಲ್ಲಿರೈ? ಕದಳಿಯ ಬನವ ನಿನ್ನಲ್ಲಿ ನೀನು ತಿಳಿದು ನೋಡು. ಮದಮತ್ಸರ ಬೇಡ, ಹೋದ ಕುಳಿಗೊಳಬೇಡ. ಗುಹೇಶ್ವರನೆಂಬ ಲಿಂಗ ಕಲ್ಪಿತವಲ್ಲ ನಿಲ್ಲೋ.

ಟೀಕು:— ಅಗ್ನಿಯ ವಿಕಾರದಿಂದಲಾದ, ಭಿನ್ನ ರೂಪ ಜ್ಞಾನಾಗ್ನಿಯಲ್ಲಿ ದಹಿಸುವದೆಂಬುದೀಗ, ಅಗ್ನಿಯ ಸುಡುವಲ್ಲಿ ಎಂಬ ಶಬ್ದಕ್ಕರ್ಥ. ಅಪ್ಪು ವಿಕಾರದಿಂದಾದ ಸಂಸಾರ ರಸವ, ಪರಮಾನಂದ ಜಲವೆಂಬ ಅಮೃತ ರಸದಲ್ಲಿ ತೊಳೆವುದೆಂಬುದೀಗ ಉದಕವ ತೊಳೆವಲ್ಲಿ ಎಂಬ ಶಬ್ದಕ್ಕರ್ಥ. ವಾಯು ವಿಕಾರದಿಂದಲಾದ ಪ್ರಾಣ ಧರ್ಮವನೆತ್ತಿ ಮೆಟ್ಟಿ ಸ್ವಸ್ಥನಾಗಿ ನಿಂದು, ಆತ್ಮ ತತ್ವ ಜ್ಞಾನವ ನವಗ್ರಹಿಸಿ, ಹಿಡಿವುವೆಂಬುದೀಗ ವಾಯುವ ಮೆಟ್ಟಿ ಆಕಾಶವ ಹಿಡಿವಲ್ಲಿ ಎಂಬ ಶಬ್ದಕ್ಕರ್ಥ. ಅಂತಪ್ಪ ಆತ್ಮ ತತ್ವಜ್ಞಾನ ಗ್ರಾಹಕತ್ವದಿಂ ಪ್ರಾಣಲಿಂಗ ಸಂಬಂಧವಹ ಶಿವಯೋಗದ ಹೊಲಬು ಆ ಶಿವಯೋಗಿಯೇ ಬಲ್ಲನೆಂಬುದೀಗ, ಯೋಗದ ಹೊಲಬ ಬಲ್ಲರೆ ನೀವು ಹೇಳಿರೆ, ಎಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗವನರಿದು, ಕಾಯವೆಂಬ ಕದಳಿಯ ಹೊಕ್ಕು, ಒಳಹೊರಗೆ ತಿಳಿಯಬೇಕೆಂಬುದೀಗ, ಕದಳಿಯ ಬನವ ನಿನ್ನಲ್ಲಿ ನೀನು ತಿಳಿದು ನೋಡೆಂಬ ಶಬ್ದಕ್ಕರ್ಥ. ಈ ಭೇದವನರಿಯದೆ, ಮದ ಮತ್ಸರದಲ್ಲಿ ಹೊದಕುಳಿಗೊಂಬವರಿಗೆ ಪ್ರಾಣಲಿಂಗ ಯೋಗವು ಕಲ್ಪಿತವಾಗಿ ತೋರುವುದಲ್ಲದೆ ನಿಜವಾಗಿ ತೋರಲರಿಯದೆಂಬುದೀ ವಚನಾರ್ಥ.

೫೭. ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗದನುಭಾವವೇಕೊ? ಮಾತಿನ ಮಾತಿನ ಮಹಂತ ಹಿರಿಯರು ಗುಹೇಶ್ವರನೆಂಬ ಲಿಂಗ ಸಾರಾಯ ಬಹುಮುಖಿಗಳಿಗೆ ತೋರದು ತೋರದು.

ಟೀಕು:— ಹುಟ್ಟಿದ ನೆಲೆ ಎಂದರೆ ತಾನು ಜನಿಸಿದ ಮಾಯಾಯೋನಿ ಎಂಬರ್ಥ. ಆ ಮಾಯಾ ಯೋನಿಯ ಮೇಲೆ ಅರ್ಥ ಬಿಡದವರಿಗೆ ಲಿಂಗದನುಭಾವ ಘಟಿಸದೆಂಬುದೀಗ, ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗಾನುಭಾವವೇಕೋ ಎಂಬ ಶಬ್ದಕ್ಕರ್ಥ. ಅಂತಪ್ಪ ಅನುಭಾವವ ಅಭ್ಯಾಸವ ಮಾಡಿದರೆ ವಾಗದ್ವೈತಿಗಳಾಗಿಹರಲ್ಲದೆ ಸಹಜಾನುಭಾವಿಗಳಲ್ಲವೆಂಬುದೀಗ ಮಾತಿನ, ಮಾತಿನ ಮಹಂತರೆಂಬ ಶಬ್ದಕ್ಕರ್ಥ. ಇಂತಪ್ಪ ವಾಗದ್ವೈತಿಗಳಿಗೆ ಪ್ರಾಣಲಿಂಗದ ನಿಜವನರಿಯಬಾರದೆಂಬುದೀಗ ಲಿಂಗ ಸಾರಾಯ ಬಹುಮುಖಿಗಳಿಗೆ ತೋರದು ತೋರದೆಂಬ ಶಬ್ದಕ್ಕರ್ಥ.

೫೮. ಕರ್ಮಾಧೀನವೆಂಬ ಕರ್ಮಿ, ಲಿಂಗಾಧೀನವೆಂಬ ಭಕ್ತ, ದೇಹ ಪ್ರಾರಬ್ಧವೆಂಬನದ್ವೈತಿ, ಈ ತ್ರಿವಿಧವೆನ್ನದವರ ನೀನೆಂಬೆ ಗುಹೇಶ್ವರಾ.



ಟೀಕು:— ಪ್ರಾಣಲಿಂಗದಲ್ಲಿ ಸಂಬಂಧವಾದವರಿಗೆ, ಕರ್ಮವಿಲ್ಲ. ಪ್ರಾರಬ್ಧವಿಲ್ಲ. ಬಂದುದು ಲಿಂಗಾಧೀನವೆಂಬ ಉಪಾಧಿ ಮುನ್ನಿಲ್ಲವೆಂಬುದೀ ವಚನಾರ್ಥ.

೫೯. ಉದಕದಲುತ್ಪತ್ಯವಾದ ಶತಪತ್ರದಂತೆ, ಸಂಸಾರ ಸಂಗವ ಹೊದ್ದದಿರಬೇಕು. ಕಾಯವೇ ಪೀಠ, ಮನವೇ ಲಿಂಗವಾದರೆ ಕೊರಳಲ್ಲಿ ನಾಗವತ್ತಿಗೆ ಏಕೋ ಶರಣರಿಗೆ ಗುಹೇಶ್ವರಾ?

ಟೀಕು:— ಸಂಸಾರದಲ್ಲಿ ಹುಟ್ಟಿದ ಶರಣನು ಸಂಸಾರವ ಹೊದ್ದಿಯೂ ಹೊದ್ದದೆ, ಬೆರಸಿ ಬೆರಸದಿರ್ಪ ಕಾರಣ ಆ ಶರಣನ ದೇಹವೆ ಪೀಠಿಕೆ ಮನವೇ ಲಿಂಗವಾಗಿರ್ಪುದಲ್ಲದೆ ಬೇರೊಂದು ಭಿನ್ನಭಾವವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೬೦. ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಡರು. ತಮ್ಮ ತಮ್ಮ ಭಾವಕ್ಕೆ ಕೊರಳಲ್ಲಿ ಕಟ್ಟಿಕೊಂಡರು. ನಾನೆನ್ನ ಭಾವಕ್ಕೆ ಪೂಜಿಸಲೆಂದು ಹೋದರೆ, ಕೈತಪ್ಪಿ ಮನದಲ್ಲಿ ಸಿಲಿಕಿತ್ತೆನ್ನ ಲಿಂಗ. ಸಾಧಕನಲ್ಲ ಭೇದಕನಲ್ಲ ಗುಹೇಶ್ವರಲ್ಲಯ್ಯ ತಾನೆ ಬಲ್ಲ.

ಟೀಕು:— ಎಲ್ಲರು ಲಿಂಗವ ಧರಿಸಿಕೊಂಡು, ಲಿಂಗಾರ್ಚನೆಯ ಮಾಡುವ ಪರಿಯಲ್ಲಿ ಶಿವಯೋಗಿಯ ಪರಿ ಮತ್ತೆಂತೆಂದೊಡೆ, ಮನ ಮುಟ್ಟಿ ಪೂಜಿಸ ಹೋಗಿ ಆ ಮನವೇ ಲಿಂಗವೆಂದರಿದು, ಅಸಾಧ್ಯ ಸಾಧಕನಾಗಿರ್ಪ ಕಾರಣ, ನಾನೆನ್ನ ಭಾವಕ್ಕೆ ಪೂಜಿಸ ಹೋದರೆ, ಕೈತಪ್ಪಿ ಮನದಲ್ಲಿ ಸಿಲಿಕಿತ್ತೆನ್ನ ಲಿಂಗವೆಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗಿ ಅಭ್ಯಾಸಿಯಲ್ಲದೆ, ನಿಜಯೋಗಿಯಾದ ಕಾರಣ ಸಾಧಕನಲ್ಲ, ಭೇದಕನಲ್ಲವೆಂಬ ವಚನಾರ್ಥ.

೬೧. ನಾನು ಭಕ್ತನಾದಡೆ, ನೀನು ದೇವನಾದಡೆ, ನೋಡುವವೆ ಇಬ್ಬರ ಸಮರಸವನೊಂದು ಮಾಡಿ, ಭೂಮಿಯಾಕಾಶವನೊಂದು ಮಾಡಿ, ಚಂದ್ರ ಸೂರ್ಯರಿಬ್ಬರ ತಾಳವ ಮಾಡಿ ಆಡುವೆ. ಜಡೆಯ ಮೇಲಣ ಗಂಗೆ ನೀನು ಕೇಳಾ! ತೊಡೆಯ ಮೇಲಣ ಗೌರಿ ನೀನು ಕೇಳಾ! ಗುಹೇಶ್ವರನೆಂಬ ಲಿಂಗವು ಎನ್ನ ಕೈಯ್ಯಲ್ಲಿ ಸತ್ತಡೆ, ರಂಡೆಗೂಳನುಂಬುದು ನಿಮಗೆ ಲೇಸೆ?

ಟೀಕು:— ಲಿಂಗವು ಭಕ್ತನು ಸಮರಸ ಭಾವದಿಂದೊಂದೆಯಾಗಲು, ಅದು ನಾನು ಭಕ್ತನಾಧಡೆ, ನೀನು ದೇವನಾದಡೆ ಇಬ್ಬರ ಸಮರಸವ

ನೊಂದು ಮಾಡಿ ನೋಡುವವೆ ಎಂಬ ಶಬ್ದಕ್ಕರ್ಥ. ಭೂಮಿ ಎಂದಡೆ ತನು, ಆಕಾಶವೆಂದಡೆ ಆತ್ಮತತ್ವ, ಅಂತಪ್ಪ ತನುವ ಆತ್ಮತತ್ವದ ವಿವೇಕದೊಡಗೂಡಿ, ಸಮರಸವ ಮಾಡಲು ಭೂಮಿಯಾಕಾಶವನೊಂದು ಮಾಡಿ, ನೋಡುವವೆ ಎಂಬ ಶಬ್ದಕ್ಕರ್ಥ. ಚಂದ್ರ ಸೂರ್ಯರೆಂಬ ಈಡಾ ಪಿಂಗಳ ವಾಯುಗಳೆರಡರ ಕೋಹಂಮೆಂಬ ಭಿನ್ನ ಧ್ವನಿಯ ಕೆಡಿಸಿ, ಸಂಪರ್ಕವ ಮಾಡಿಸಿ, ಶಿವೋಹಂಮೆಂಬ ಸುನಾದವ ಮಾಡುತ್ತಿರಲು, ಅದೀಗ ಚಂದ್ರಸೂರ್ಯರಿಬ್ಬರ ತಾಳವ ಮಾಡಿ ಆಡುವವೆ ಎಂಬ ಶಬ್ದಕ್ಕರ್ಥ. ಇಂತಾಗಲು, ಆ ಲಿಂಗವು ಆ ಶಿವಯೋಗಿಯೊಳಗೆ ಲೀನವಾಗಲು, ಬ್ರಹ್ಮರಂಧ್ರದಲ್ಲಿರ್ಪ ಪರಾಶಕ್ತಿ ಆಧಾರಸ್ಥಾನದೊಳಗಿರ್ಪ ಆದಿಶಕ್ತಿ, ಈ ಎರಡು ಶಕ್ತಿಗಳು ಶಿವಶಕ್ತಿ ಸಂಗವನಗಲದೆ, ಏಕರಸವಾಯಿತ್ತೆಂಬುದೀಗ, ಜಡೆಯ ಮೇಲಿರ್ಪ ಗಂಗೆ ನೀನು ಕೇಳಾ! ತೊಡೆಯ ಮೇಲಿರ್ಪ ಗೌರಿ ನೀನು ಕೇಳಾ! ಗುಹೇಶ್ವರ ಲಿಂಗವು ಎನ್ನ ಕೈಯ್ಯಲ್ಲಿ ಸತ್ತಡೆ, ರಂಡೆಗೂಳನುಂಬುದು ನಿಮಗ ಲೇಸೆ ಎಂಬ ಶಬ್ದಕ್ಕರ್ಥ.

೬೨. ನೀರೊಳಗಣ ಜ್ಯೋತಿ, ಮೇರುವ ನುಂಗಿತ್ತು. ದೂರದ ಧಾತು ಸಾರಾಯದೊಳಗಡಗಿತ್ತು. ಪುರದೊಳಗೈವರ ಶಿರವರಿದು, ಪರಿಮಳದೋಕುಳಿಯನಾಡಿತ್ತ ಕಂಡೆ. ಸಾರಿರ್ದ ಬ್ರಹ್ಮನ ಓಲಗ ಹರಿಯಿತ್ತು. ಘೋರ ರುದ್ರನ ದಳ ಮುರಿಯಿತ್ತು ಗುಹೇಶ್ವರಾ.

ಟೀಕು:— ನೀರೆಂದರೆ ಮನಸ್ಸು, ಆ ಮನೋ ಮಧ್ಯದೊಳಗಿರ್ಪ ಜ್ಞಾನ ಜ್ಯೋತಿ, ಮೇರುವೆಂಬಹಂಕಾರವನವಗ್ರಹಿಸಿತ್ತೆಂಬುದೀಗ, ನೀರೊಳಗಣ ಜ್ಯೋತಿ ಮೇರುವ ನುಂಗಿತ್ತೆಂಬ ಶಬ್ದಕ್ಕರ್ಥ. ಇಂತಾಗಲು, ಪರಮಾರ್ಥಕ್ಕೆ ದೂರಸ್ಥವಾಗಿರ್ಪ ಷಡುವರ್ಣಂಗಳ ರೂಪು ಮಹಾನುಭಾವ ಸಾರಾಯದೊಳಗೆ, ಅಡಗಿತ್ತೆಂಬುದೀಗ, ದೂರದ ಧಾತು ಸಾರಾಯದೊಳಗಡಗಿತ್ತೆಂಬ ಶಬ್ದಕ್ಕರ್ಥ. ಆ ಶಿವಯೋಗಿಯ ಪುರವೆಂದೆಡೆ ದೇಹ. ಆ ದೇಹದೊಳಗಿರ್ಪ, ಪಂಚೀಕರಣಂಗಳ ಭಿನ್ನಜ್ಞಾನವೆಂಬ ಶಿರಸ್ಸುಗಳನಳಿದು, ನಿಜ ಸ್ವಾನುಭಾವ ವಾಸನೆಯೊಳು ಆಳುತ್ತ, ಮುಳುಗುತ್ತ, ಕ್ರೀಡಾಪರನಾಗಿರ್ದನೆಂಬುದೀಗ, ಪುರದೊಳಗೈವರ ಶಿರವನರಿದು, ಪರಿಮಳದೋಕುಳಿಯಾಡಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತಾದ ಕಾರಣ ತನ್ನ ಮುಂದೆ ತೋರುವ ಬ್ರಹ್ಮಸೃಷ್ಟಿಯಿಂದಾದ ವಿಶ್ವವೆಲ್ಲವು ಮಿಥ್ಯೆಯಾಗಿ,



ಹರಿದು ಹೋಯಿತ್ತೆಂಬುದೀಗ ಸಾರಿರ್ದ ಬ್ರಹ್ಮನೋಲಗ ಹರಿಯಿತ್ತೆಂಬ ಶಬ್ದಕ್ಕರ್ಥ. ಇಂತು ತೋರುವ ವಿಶ್ವವೆಲ್ಲವು ಮಿಥ್ಯೆಯಾಗಿ ಹೋದ ಬಳಿಕ, ರುದ್ರತತ್ವ ಸಂಬಂಧವಪ್ಪ ತಮೋಗುಣ ಧರ್ಮಂಗಳೆಲ್ಲವು ಅಳಿದು, ನಿಜದಲ್ಲಿ ಸುಷುಪ್ತಿಯನೆಯ್ದಿದನೆಂಬುದೀಗ, ಘೋರ ರುದ್ರನ ದಳ ಮುರಿಯಿತ್ತೆಂಬ ಶಬ್ದಕ್ಕರ್ಥ.

೬೩. ಪ್ರಾಣಲಿಂಗವೆಂಬ ಶಬ್ದಕ್ಕೆ ನಾಚಿತ್ತು ಮನ ನಾಚಿತ್ತು ಪ್ರಾಣ. ಹೋದರೆ ಕಾಯ ಬಿದ್ದಿತ್ತು. ಲಿಂಗ ಒಂದೆಸೆಯಾದರೆ ಮನ ನಾಚಿತ್ತು. ಗುಹೇಶ್ವರ ನೆನೆಯಲಿಲ್ಲದ ಘನವು.

ಟೀಕು:— ಪ್ರಾಣಲಿಂಗ ಸಂಬಂಧ ಸನ್ನಿಹಿತವನರಿಯದೆ, ಪ್ರಾಣಲಿಂಗಿ ನಾನೆಂಬ ಮಾತು ಮಿಥ್ಯೆಯಾದ ಕಾರಣ, ಪ್ರಾಣಲಿಂಗವೆಂಬ ಶಬ್ದಕ್ಕೆ ನಾಚಿತ್ತು ಮನ ನಾಚಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಪ್ರಾಣತ್ಯಾಗ ಕಾಲಕ್ಕೆ ದೇಹ ಭೂಗತವಪ್ಪುದೆಂಬುದೀಗ, ಪ್ರಾಣ ಹೋದರೆ ಕಾಯ ಬಿದ್ದಿತ್ತೆಂಬ ಶಬ್ದಕ್ಕರ್ಥ. ಅಂತು ಕಾಯ ಭಿನ್ನವಾದಡೆ ಧರಿಸಿದ ಲಿಂಗ ಬೇರೊಂದೆಸೆಯಾಯಿತ್ತೆಂಬುದೀಗ ಲಿಂಗ ಒಂದೆಸೆಯಾಯಿತ್ತೆಂಬ ಶಬ್ದಕ್ಕರ್ಥ. ಅದುಕಾರಣ ಪ್ರಾಣಲಿಂಗ ಸಂಬಂಧ ಪರಿದ ಶರಣ ಇದು ಪ್ರಾಣಲಿಂಗ ಸಂಬಂಧವೆಂದು ವಾಕ್ಯಕ್ಕೆ ತರಲಿಲ್ಲಾದ ಕಾರಣ ಗುಹೇಶ್ವರ ನೆನೆಯಲಿಲ್ಲದ ಘನವು ಎಂಬ ಶಬ್ದಕ್ಕರ್ಥ.

೬೪. ಸರ್ವಾಂಗ ಸ್ವಾಯತವಾದ ಶರಣಂಗೆ ದೇಹ ದಹನವಾಗಲಾಗದು. ನಿಕ್ಷೇಪವಿರಲಾಗದು. ಸಂಸಾರ ಸಂಗದ ಕಷ್ಟವ ನೋಡಾ! ಅನಾಹತದಲ್ಲಿ ನಿರೂಪ ಸ್ವಾಯತ ಗುಹೇಶ್ವರಾ ನಿಮ್ಮ ಶರಣರ ಅಂತಹವರಿಂತಹವರೆಂದರೆ ನಾಯಕ ನರಕ.

ಟೀಕು:— ಸರ್ವಾಂಗವು ಪ್ರಾಣಲಿಂಗವಾದ ಕಾರಣ, ಆ ಶರಣಂಗೆ ಜನನ ಮರಣಂಗಳಿಲ್ಲ. ಆತನ ದೇಹದಲ್ಲಿ ನಿರೂಪ ಲಿಂಗ ಸ್ವಾಯತವಾಗಿರ್ಪುದಾಗಿ, ನಿರ್ಮಯಲನೆಯ್ದುವನಲ್ಲದೆ ಶರೀರ ಭೂಗತವಾಗಿ ಪ್ರಾಣತ್ಯಾಗವಹಾತನಲ್ಲ. ಈ ತೆರನನರಿಯದವರು ಪ್ರಾಣಲಿಂಗ ಸಂಬಂಧಿಗಳಲ್ಲವೆಂಬುದೀ ವಚನಾರ್ಥ.

೬೫. ಹರಿಯ ಲಾಯ ಹಾಲು, ಉರಿಯ ಕೆಯ್ಯ ಬೆಣ್ಣೆ, ಗಿರಿಯ ಮೇಲಣ ಶಿಸು, ಹರಿದಾಡುತ್ತಿದೆ. ಕರಯಿಂಬೋ ಹಾಲು ಗುಡಿಯ

ಸುರಪತಿಯ ಗಜವೇರಿ ಮರಳಿ ಹೋಹನ ಕಂಡು ಕರಯಿಂಬೋ. ಹರನ ಮಂತಣಿಯ ಶೂಲವಲ್ಲಿ ಶಿರವಲುಂಗುಟ ಉರಿ ನೆರವುತ್ತಿರ್ದುದ ನಾನೇನೆಂಬೆ ಗುಹೇಶ್ವರಾ?

ಟೀಕು:-- ಹರಿ ಎಂದಡೆ ವಾಯು, ಅಂತಪ್ಪ ಪ್ರಾಣವಾಯು ಶಿವ ಯೋಗ ಸಾಧನದಿಂ ಸುಷುಮ್ನ ನಾಳದಲ್ಲಿ, ಬ್ರಹ್ಮರಂಧ್ರವನೆಯ್ದಿ, ಅಲ್ಲಿರ್ಪ ಶಿವಾಮೃತವನು ಸುವಿವೇಕವೆಂಬ ಮುಖದ್ವಾರದೊಳು ತುಂಬಿಕೊಂಡಿರುತ್ತಿರಲು, ಹರಿಯ ಬಾಯ ಹಾವೆಂಬ ಶಬ್ದಕ್ಕರ್ಥ. ಆ ಲಿಂಗ ಸಂಬಂಧ ಪ್ರಾಣಾನಿಲನ ಮುಖದ್ವಾರದೊಳಿರ್ಪ ಶಿವಯೋಗಾಮೃತವನು ಉರಿ ಎಂದರೆ ಶಿವಜ್ಞಾನ ಸ್ವರೂಪಮಪ್ಪ ಕುಂಡಲಾಗ್ನಿ ಪ್ರಭೆ, ಆ ಶಿವ ಜ್ಞಾನಾಗ್ನಿ ಪ್ರಭೆಯೊಳಿರ್ಪ ಪರಿಪೂರ್ಣ ಶಿವತತ್ವವು ಸಕಲ ಕ್ರಿಯಾ ಸಾಧನಂಗಳಳಿದುಳಿದ ಘೃತದಂತೆ ಸಕಲ ಕ್ರಿಗಳೆಲ್ಲವು ಅಳಿದುಳಿದು ಘೃತ ಕಾಠಿಣ್ಯವನ್ಮೂರ್ತಿ ಸಚ್ಚಿದಾನಂದ ಲಕ್ಷಣವೆಂಬ ಘೃತಿ ಪ್ರಮಾಣದಿಂದ ವಿಶೇಷಿತನಾಗಿರಲು ಆದೀಗ ಉರಿಯ ಕೈಯ್ಯ ಬೆಣ್ಣೆ ಎಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗ ಸಾಧನಾಮೃತವನು ತಚ್ಛಿವ ತತ್ವವೆಂಬ ಘೃತವನು ಧ್ಯಾನವೆಂಬ ಹಸ್ತದೊಳ್ಪಿಡಿದು, ಗಿರಿ ಎಂದರೆ ನಾಸಿಕಾಗ್ರವೆಂಬ ಶಿಖರಿಯ ಮೇಲೆ ಸೋಹಂ ಮೆಂಬ ಮದಗಜವನೇರಿ ಈಡಾ ಪಿಂಗಳವೆಂಬ ದ್ವಾರದೊಳು ಹೋಗುತ್ತ ಬರುತ್ತಿರ್ಪ ಜೀವನೆಂಬ ಶಿಸುವಿಂಗೆ, ಸದ್ಬೋಧೆಯಿಂದುಣಿಸಲು, ಆದೀಗ ಗಿರಿಯ ಮೇಲಣ ಶಿಸು ಹರಿದಾಡುತ್ತಿದೆ, ಕರೆಯಿಂ ಜೋ ಹಾಲು ಗುಡಿಯ ಸುರಪತಿಯ ಗಜವೇರಿ ಮರಳಿ ಹೋಹನ ಕಂಡು ಕರಯಿಂಬೋ ಎಂಬ ಶಬ್ದಕ್ಕರ್ಥ. ಇಂತು ಜೀವಂಗೆ ಸದ್ಬೋಧೆಯಿಂದ ಹಾಲು ತುಪ್ಪವನುಣಕಲಿಸಲು ಜೀವ ಧರ್ಮವಳಿದು ಶಿವತತ್ವ ವಿವೇಕಿಯಾಗಿ ಹರನ ಮಂಥಣಿಯ ಶೂಲವೆಂಬ ತಲೆಗುಣದ ಮಸ್ತಕವ ಮೆಟ್ಟ ಆ ಪರಶಿವ ತತ್ವದಲ್ಲಿ ಅವಿರಳ ಸಂಬಂಧವನೆಯ್ದುತ್ತಿರ್ದಿತ್ತೆಂಬುದೀಗ ಹರನ ಮಂಥಣಿಯ ಶೂಲದ ಶಿರವಲುಂಗುಟಉರಿ ನೆರೆವುತ್ತಿರ್ದುದ ನಾನೇನೆಂಬೆನೆಂಬ ಶಬ್ದಕ್ಕರ್ಥ.

೬೬. ಹೋಹ ಬಟ್ಟೆಯಲೊಂದು ಮಾಯೆ ಇರ್ದುದ ಕಂಡೆ. ಠಾಣಾಂತರ ಹೇಳಿತ್ತು. ಠಾಣಾಂತರ ಹೇಳಿತ್ತು. ಅಲ್ಲಲ್ಲಿಗೆ, ಅಲ್ಲಲ್ಲಿಗೆ, ಅಲ್ಲಲ್ಲಿಗೆ, ಗುಹೇಶ್ವರನ ಶರಣಂಗಳು ಕುತಾಪಿಗಳು.



ಟೀಕು:-- ಪರಶಿವ. ತತ್ವವನೆಯ್ದುವ ಮೋಕ್ಷ ಮಾರ್ಗವು ಹೋಹ ಬಟ್ಟೆ ಎಂಬ ಶಬ್ದಕ್ಕೆ ಸಂಬಂಧವಾಯಿತ್ತು. ಆ ಮೋಕ್ಷ ಮಾರ್ಗದೊಳು ಇದಂ ಹಮ್ಮೆಂಬ ಮರವೆಯನುಂಟು ಮಾಡುತ್ತಿಹ, ಮಿಥ್ಯಾಜ್ಞಾನ ಮಾಯಾ ಸ್ವರೂಪವಾಗಿ, ಮುಂದುಗೊಂಡಿರುತ್ತಿರಲು, ಆದೀಗ ಹೋಹ ಬಟ್ಟೆಯಲೊಂದು, ಮಾಯೆ ಇದ್ದುದ ಕಂಡೆನೆಂಬ ಶಬ್ದಕ್ಕರ್ಥ. ಆ ಮಾಯೆಯ ಮುಂದುಗೊಂಡಿರ್ಪ ಕಾರಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯಂಗಳೊಳು ಜ್ಞಾತೃ, ಜ್ಞಾನ, ಜ್ಞೇಯವೆಂಬವು ಮೂರು ಕರಣಂಗಳಾದವೆಂಬುದೀಗ ಠಾಣಾಂತರ ಹೇಳಿತ್ತು ಅಲ್ಲಲ್ಲಿಗೆ, ಅಲ್ಲಲ್ಲಿಗೆ, ಅಲ್ಲಲ್ಲಿಗೆ ಎಂಬ ಶಬ್ದಕ್ಕರ್ಥ. ಇಂತಪ್ಪ ಅಂಗತ್ರಯಕ್ಕೆ ಲಿಂಗತ್ರಯವ ಸಂಬಂಧವ ಮಾಡಲು, ಸರ್ವಾಂಗವು ಲಿಂಗವಾಗಿ ಸಕಲ ಕರಣಂಗಳು ಲಿಂಗ ಕರಣಂಗಳಾದವೆಂಬುದೀಗ ಗುಹೇಶ್ವರನ ಕರಣಂಗಳು ಕುತಾಪಿಗಳೆಂಬ ಶಬ್ದಕ್ಕರ್ಥ.

೬೭. ಮಂಜರ ನೇತ್ರದಲ್ಲಿ ಉಭಯ ಚಂದ್ರರ ಕಾಂಬವರಾರೊ? ಕಂಡುದ ದಶರವಿ ಕರದಲ್ಲಿ ಪಿಡಿದು, ಅಗ್ನಿಯ ಮುಖಕ್ಕೆ ಸಲಿಸುವರಲ್ಲದೆ, ಲಿಂಗಮುಖಕ್ಕೆ ಸಲಿಸುವರಾರೊ? ತದನಂತರ ಪ್ರಾಣಲಿಂಗಕ್ಕೆ ಕೊಟ್ಟು ಕೊಂಬಲ್ಲಿ ನಿರಂತರ ಸಾವಧಾನಿ ಗುಹೇಶ್ವರಾ ನಿಮ್ಮ ಪ್ರಸಾದಿ.

ಟೀಕು:-- ಮಂಜರ ನೇತ್ರವೆಂದರೆ, ಜ್ಞಾನದ ಅರ್ಥದ ನಿಬ್ಬರದ ನೋಟ. ಅದೆಂತೆಂದೊಡೆ, ಮಂಜರ ನೇತ್ರವು ತಾನೊಂದ ಗ್ರಹಿಸುವಲ್ಲಿ ಅತ್ಯಂತ ಅರ್ಥದ ನಿಬ್ಬರದ ದೃಷ್ಟಿಯಿಂ ಎವೆಯ ಹೊಯ್ಯದೆ ಇಪ್ಪುದಾಗಿಯೂ ತಾಮಸಿನೊಳಗಿರ್ದು ತನ್ನ ದೃಷ್ಟಿಯ ಜ್ಯೋತಿಸ್ಸು ಕಾಣಬರುತಿರ್ಪುದಾಗಿಯೂ, ಆ ಹಾಂಗೆ ಸುಜ್ಞಾನವು ಪರಶಿವ ತತ್ವವನರಿಯಬೇಕೆಂಬ ಅರ್ಥದ ನಿಬ್ಬರದ ನೋಟದಿಂದವೆ ಹೊಯ್ಯದೆ ಅನುಮಿಷವಾಗಿಯೂ, ಅಜ್ಞಾನವೆಂಬ ತಮುಸ್ಸು ಮುಂದಿರ್ದಡೂ, ತನ್ನ ಪ್ರಭಾವಲೋಕನದಿಂದ ವಸ್ತುವ ಕಾಣುತ್ತಿರ್ಪುದಾಗಿ, ಎರಡಕ್ಕೆಯೂ ಒಂದೇ ಸಾಮ್ಯ. ಆ ದೃಷ್ಟಿಯಲ್ಲಿ ಉಭಯ ಚಂದ್ರರೆಂಬ, ಆದಿಶಕ್ತಿ, ಪರಶಕ್ತಿಗಳೆಂಬೆರಡು, ವೃತ್ತಿ ಜ್ಞಾನಾಮೃತ ಕರಮಯಮಪ್ಪ ಬಿಂದು, ನಿವೃತ್ತಿ ಜ್ಞಾನಾಮೃತಕರ ಮಯವಪ್ಪ ಬಿಂದುಗಳೆಂದು ತಿಳಿದು, ನೋಡಿ ಕಾಣುತ್ತಿರಲು ಆದೀಗ ಮಂಜರ ನೇತ್ರದಲ್ಲಿ ಉಭಯ ಚಂದ್ರರ ಕಾಂಬವರಾರೋ ಎಂಬ ಶಬ್ದಕ್ಕರ್ಥ. ಅಖಂಡ ಶಕ್ತಿದ್ವಯವನು ದಶ ನಾಳಂಗಳೊಳು ಬೀಸುವ ಸೂ

ರ್ಯಾನಿಲ ಸಮ್ಮಿಶ್ರ ಹಸ್ತದಿಂ ಪಿಡಿದು, ಸಮರಸ ಪಾಕವ ಮಾಡಿ, ಅಲ್ಲಿ ಒಸರಿಸಿದ ಅಮೃತ ಬಿಂದುವನು ಕುಂಡಲಾಗ್ನಿ ಮುಖಕ್ಕೆ ಸಲಿಸುವರಲ್ಲದೆ ಆ ಸುಖವನು ಪ್ರಾಣಲಿಂಗ ಮುಖಕ್ಕೆ ಸಲಿಸುವರಿಲ್ಲೆಂಬುದೀಗ ಕಂಡುವ ದಶ ರವಿ ಕರದಲ್ಲಿ ಪಿಡಿದು, ಅಗ್ನಿಮುಖಕ್ಕೆ ಸಲಿಸುವರಲ್ಲದೆ, ಲಿಂಗ ಮುಖಕ್ಕೆ ಸಲಿಸುವರಾರೋ ಎಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗಾಮೃತವನು ತತ್ಪ್ರಾಣಲಿಂಗಕ್ಕೆ ಸಮರ್ಪಿಸಿ, ವಿರಳವಿಲ್ಲದೆ, ಕೊಳಬಲ್ಲಾತನೆ ದಿವ್ಯ ಶಿವಯೋಗಿ ಎಂಬುದೀಗ, ಲಿಂಗಕ್ಕೆ ಕೊಟ್ಟು ಕೊಂಬಲ್ಲಿ ನಿರಂತರ ಸಾವಧಾನಿ ಗುಹೇಶ್ವರ ನಿಮ್ಮ ಪ್ರಸಾದಿ ಎಂಬ ಶಬ್ದಕ್ಕರ್ಥ.

೬೮. ಉಲಿವ ಉಯ್ಯಾಲೆಯ ಹರಿದು, ಬಂದಿರಲು ತಾಗದೆ ತೂಗುವುದು ಭವಸಾಗರ. ಮರಳಿ ಬಾರದಂತೆ ಹಂಸೆಯ ಮೇಲೆ ತುಂಬಿ ಕುಳ್ಳಿರ್ದು ಸ್ವರಗೆಯ್ವ ಘೋಷವದೇನೊ? ಆತನಿರ್ದ ಸರ ಹರಿಯದೆ ಇದ್ದಿತ್ತು ದೇಹಿಗಳೆಲ್ಲ ಅರಿವರೆ ಗುಹೇಶ್ವರನ ಆಹಾರ ಮುಖವಾ.

ಟೀಕು:-- ಉಲಿವ ಉಯ್ಯಾಲೆ ಎಂದರೆ ಸೋಹಂ ಸೋಹಂ ಮೆಂದು ಈಡಾ ಪಿಂಗಳ ಮಾರ್ಗದೊಳು ಉಲಿದಾಡುತ್ತಿಹ ಜೀವ ಹಂಸ ನಿಲವಿಂಗೆ ಅರ್ಥ. ಇಂತಪ್ಪ ಜೀವ ಹಂಸನಿಲವಿನ ಮೇಲೆ ಶಿವೋಹಂ ಮೆಂಬ ಸ್ವಾನುಭಾವ ಬಂದು ಆವರ್ತಿಸುತ್ತಿರಲು ಅದೀಗ ಹರಿದು ಬಂದೇರಲೆಂಬ ಶಬ್ದಕ್ಕರ್ಥ. ಇಂತು ಶಿವಾನುಭಾವ ವರ್ತಿಸಲು, ವಾಯು ವಿಕಾರ ಸ್ಪಂದವಳಿದು, ಆ ಶಿವೋಹಂ ಮೆಂಬ ಶಬ್ದ ಭಿನ್ನ ಮಥನವಿಲ್ಲದೆ ತುಂಬಿಸುತ್ತಿರಲು, ಅದೀಗ ತಾಗದೆ, ತೂಗುವುದೆಂಬ ಶಬ್ದಾನ್ವಯ ಇಂತಾಗಲು, ಭವ ದುಃಖಕ್ಕೆ ಮರಳಿಬಾರದೆ ಇಪ್ಪ ಕಾರಣ ಭವಸಾಗರ ಮರಳಿ ಬಾರದಂತೆಂಬ ಶಬ್ದಕ್ಕರ್ಥ. ಇಂತಪ್ಪ ಪರಮ ಹಂಸನ ಮೇಲೆ ಪರಿಪೂರ್ಣವೆಡೆಗೊಳಲು, ಆ ಶಬ್ದವೆ ಬ್ರಹ್ಮ ನಾದಮಯವಾಗಿರ್ದ ಕಾರಣ ಹಂಸೆಯ ಮೇಲೆ, ತುಂಬಿ ಬಂದು ಕುಳ್ಳಿರ್ದು ಸ್ವರಗೆಯ್ವ ಘೋಷವದೇನೊ ಎಂಬ ಶಬ್ದಕ್ಕರ್ಥ. ಅಂತಪ್ಪ ಶಬ್ದ ಬ್ರಹ್ಮವು ಖಂಡಿತವಲ್ಲದೆ, ಅಖಂಡಿತವಾದ ಸುಖವು ಆ ಮಹಾಲಿಂಗಕ್ಕೆ ಸಮರ್ಪಿತವಾದ ಭೇದವ ದೇಹಿಗಳರಿಯರೆಂಬುದೀಗ, ಆತನಿರ್ದ ಸರ ಹರಿಯದಿರ್ದಿತ್ತು ದೇಹಿಗಳೆಲ್ಲ ಬಲ್ಲರೆ ಗುಹೇಶ್ವರನ ಆಹಾರ ಮುಖವನೆಂಬ ಶಬ್ದಕ್ಕರ್ಥ.



೬೯. ಐದು ಬಣ್ಣದ ಗಿಡ ವಿಂಗೆ ಐದೆಲೆ ಐದು ಹೂ ಐದು ಕಾಯಾಯಿತ್ತು. ಮತ್ತೈದರ ಕಾವಿನಲ್ಲಿ ಐದು ಹೂವಿನ ಕ್ರಮದಲ್ಲಿ ಹಣ್ಣ ಮೆಲಬಲ್ಲಡೆ ಗುಹೇಶ್ವರ ಲಿಂಗವು ತಾನೆ ನೋಡಾ.

ಟೀಕು:-- ಐದು ಬಣ್ಣದ ಗಿಡುವೆಂದರೆ ಪಂಚಭೂತಮಯವಪ್ಪ ದೇಹವೆಂಬರ್ಥ. ಅಂತಪ್ಪ ಪಂಚಭೂತ ಪಿಂಡದಲ್ಲಿ ಪಂಚ ಕರ್ಮೇಂದ್ರಿಯಂಗಳೆಂಬ ಐದು ಎಲೆಯಾದವಾಗಿ ಐದೆಲೆ ಎಂಬ ಶಬ್ದಕ್ಕರ್ಥ. ಪಂಚವಿಷಯಗಳೆಂಬ ಪುಷ್ಪವಾಗುತ್ತಿರಲು ಐದು ಹೂವೆಂಬ ಶಬ್ದಕ್ಕರ್ಥ. ಪಂಚ ಜ್ಞಾನೇಂದ್ರಿಯಂಗಳೆಂಬ ಫಲವಾಗುತ್ತಿರಲು ಐದು ಕಾಯಿಯೆಂಬ ಶಬ್ದಕ್ಕರ್ಥ. ಪಂಚಜ್ಞಾನೇಂದ್ರಿಯ ತತ್ತಸ್ಥಾನಂಗಳೊಳು ಪಂಚ ವಿಷಯಂಗಳನೂ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಪ್ರಸಾದಲಿಂಗವೆಂಬ ಲಿಂಗಸ್ಥಳದೊಳರ್ಪಿಸಿ, ಆ ಪ್ರಸಾದವ ಸ್ವೀಕರಿಸಲು ಆತನೇ ಶಿವನೆಂಬುದೀಗ ಐವರ ಕಾವಿನಲ್ಲಿ ಐದು ಹೂವಿನ ಕ್ರಮದಲ್ಲಿ, ಹಣ್ಣಮೆಲ ಬಲ್ಲರೆ ಗುಹೇಶ್ವರನೆಂಬ ಲಿಂಗವು ತಾನೆ ಎಂಬ ಶಬ್ದಕ್ಕರ್ಥ.

೭೦. ಹೃದಯದ ಬಾವಿಯ ತಡಿಯಲ್ಲಿ ಒಂದು ಬಾಳೆ ಹುಟ್ಟಿತ್ತಲ್ಲಾ. ಆ ಬಾಳೆಯ ಹಣ್ಣ ಮೆಲ ಬಂದ ಸರ್ಪನ ಸರಿಯ ನೋಡಾ. ಬಾಳೆ ಬೀಗಿ ಸರ್ಪನೆದ್ದಡೆ ನಿರಾಳವು ಕಾಣಾ ಗುಹೇಶ್ವರಾ.

ಟೀಕು:-- ಹೃದಯ ಕೂಪ ಮಧ್ಯದಲ್ಲಿ ಅಷ್ಟದಳ ಕಮಳವು ಅಷ್ಟ ಪತ್ರಮಧೋ ವಕ್ತ್ರಂ ಕದಳಿ ಕುಸುಮೋಪಮೆಂಬ ಶ್ರುತಿ ಪ್ರಮಾಣೆಂದಿರುತ್ತಿರಲು, ಅದೀಗ ಹೃದಯದ ಬಾವಿಯ ತಡೆಯಲ್ಲಿ ಒಂದು ಬಾಳೆ ಹುಟ್ಟಿತ್ತಲ್ಲಾ, ಎಂಬ ಶಬ್ದಕ್ಕರ್ಥ. ಆ ಕಮಲ ಕರ್ಣಿಕಾ ಮಧ್ಯದೊಳಿರ್ಪ ಯೋಗಾಮೃತ ಫಲ ರಸವನು ಕುಂಡಲಿ ಸ್ಥಾನದೊಳಿರ್ಪ ಸುಪ್ತ ಭುಜಂಗನು ಲಿಂಗ ಪ್ರಾಣಾನಿಲ ಮಿಶ್ರದಿಂ ಮಹಾನುಭಾವ ಬೋಧೆಯಿಂದೆಯ್ದಿ ಆ ಫಲ ರುಚಿಯ ರುಚಿಸಲು ಆ ಬಾಳೆಯ ಹಣ್ಣ ಮೆಲಬಂದ ಸರ್ಪನ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಇಂತು ಆ ಫಲವನು ಸುಖಿಸಲು ಅಲ್ಲಿಯೇ ಪ್ರಾಣಲಿಂಗ ಪ್ರಸಾದ ಸಂಬಂಧ ಸಂತುಷ್ಟಯಾಯಿತ್ತೆಂಬುದೀಗ ಬಾಳೆ ಬೀಗಿ ಸರ್ಪನೆದ್ದರೆ ನಿರಾಳ ಕಾಣಾ ಎಂಬ ಶಬ್ದಕ್ಕರ್ಥ.

೭೧. ನಾಭಿ ಮಂಡಲದೊಳಗೆ ಈರೈದು ಪದ್ಮದಳ ಸ-ಮದ-ಗಜದ ಮಸ್ತಕದೊಳಗೆ ತೋರುತ್ತದೆ. ಅಕಾರ, ಉಕಾರ, ಮಕಾರ ಸ್ಥಾನದ

ತ್ರಿಕೂಟ ಸ್ಥಾನದ ಸಮರಸದ ಸುಖದಲ್ಲಿ ಬೆಳೆವ ಕಂದ ಮೂಲಾದಿಗಳ ಹೊಸ ರಸದ ಅಮೃತವನು ಒಸರಿಸಿ ದಣಿಯುಂಡ ತೃಪ್ತಿಯಿಂದ ಸುಖಿಯಾದೆ ಗುಹೇಶ್ವರಾ.

ಟೀಕು:— ನಾಭಿಸ್ಥಾನ ಮಣಿಪೂರಕದ ದಶದಳ ಪದ್ಮನಾಳದಲ್ಲಿ ಉದಯವಾದ ಲಿಂಗಪ್ರಾಣಾನಿಲನು ಸಮರಗಜವೆಂಬ ಶಿವಾಹಂಕಾರದ ತುರ್ಯಾವಸ್ಥೆಯಲ್ಲು ತೋರುತ್ತಿರಲು, ನಾಭಿಮಂಡಲದೊಳಗೆ ಊರ್ಧ್ವ ಪದ್ಮ ದಳ ಸ- ಮದ- ಗಜ ಮಸ್ತಕದ ಮೇಲೆ ತೋರುತ್ತಿದೆ ಎಂಬ ಶಬ್ದಕ್ಕರ್ಥ, ಆ ತೂರ್ಯಾವಸ್ಥೆಯೊಳು ಅಕಾರ, ಉಕಾರ, ಮಕಾರನೆಂಬ ಪ್ರಣವಾಕ್ಷರ ತ್ರಯವು ಏಕರಸವಾಗಿ ಪ್ರಣವ ಬ್ರಹ್ಮಸ್ವರೂಪಸನ್ಯೈದಿದ, ಆ ಸಮರಸದ ಸುಖವಾಗಲು, ಅದೀಗ ಅಕಾರ, ಉಕಾರ, ಮಕಾರಸ್ಥಾನ ತ್ರಿಕೂಟಸ್ಥಾನದ ಸಮರಸ ಸುಖವಾಯಿತ್ತೆಂಬ ಶಬ್ದಕ್ಕರ್ಥ. ಆ ಸಮರಸದಲ್ಲಿ ಉದಯವಾಗಿ ತೋರುವ ಕಂದಮೂಲವೆಂಬ ಸಹಸ್ರ ದಳ ಪದ್ಮದೊಳಿರ್ಪ ಅಮೃತವನು ಆರೋಗಣೆಯ ಮಾಡಲು, ಅಲ್ಲಿ ಪ್ರಾಣಲಿಂಗಾರ್ಪಿತವಾಯಿತ್ತೆಂಬುದೀಗ, ಆ ಸಮರಸದಲ್ಲಿ ಬೆಳೆದ ಕಂದ ಮೂಲಾದಿಗಳ ಹೊಸರಸದ ಅಮೃತವನು ಒಸರಿಸಿ ದಣಿಯುಂಡು ತೃಪ್ತಿಯಿಂದ ಸುಖಿಯಾದೆನೆಂಬ ಶಬ್ದಕ್ಕರ್ಥ.

೭೨. ತೆಗೆದು ವಾಯುವ ನೇಣ ಗಗನದಲ್ಲಿ ಗಂಟಿಕ್ಕೆ ತ್ರಿಜಗದಾಧಿಪತಿಯ ಕೋಣೆಯಲ್ಲಿ ಹಸುವಿದ್ದು, ಕರುವ ಕೊಂದು ಕಂದಲನೊಡೆದು ಕೆಲೆಯ ಬಲ್ಲವಂಗಲ್ಲದೆ ಹಯನಾಗದು ನೋಡಾ! ಹಯನೇ ಬರಡು ಬರಡೇ ಹಯನು ಆರು ಹಿರಿಯರ ಲಾಯ ಕರು ಒದೆಯಿತು ಎರಡಿಲ್ಲದ ನಿರಾಳ ಗುಹೇಶ್ವರಾ.

ಟೀಕು:— ಆಧಾರ ಚಕ್ರದಲ್ಲಿ ಉದಯವಾದ ಬಾಲನಾದ, ಪ್ರಾಣನಿಲನಲ್ಲಿ ಸ್ವಾನುಭಾವ ವಿವೇಕವೆಂಬ ಸೂತ್ರವ ಸಂಬಂಧಿಸಿ, ವ್ಯೋಮ ಚಕ್ರದಲ್ಲಿ ಸಂಬಂಧವ ಮಾಡುತ್ತಿರಲು, ಅದೀಗ ತೆಗೆದು ವಾಯು ನೇಣ ಗಗನದಲ್ಲಿ ಗಂಟಿಕ್ಕಿ ಎಂಬ ಶಬ್ದಕ್ಕರ್ಥ. ತ್ರಿಜಗದಾದಿ ಪತಿ ಎಂಬ ಶಿವತತ್ವವಿಪ್ಪ ಬ್ರಹ್ಮರಂಧ್ರ ಸ್ಥಾನದಲ್ಲಿ ಕಾಮಧೇನುವಿನಂತಪ್ಪ ಅಮೃತ ಫಲಿಸಿ ಆ ಅಮೃತ ರಸ ಒಸರಲು ಅದೀಗ ತ್ರಿಜಗಾಧಿಪತಿಯ ಕೋಣೆಯಲ್ಲಿ ಹಸುವಿದ್ದಿತ್ತೆಂಬ ಶಬ್ದಕ್ಕರ್ಥ. ಆ ಅಮೃತವನುಂಡಿಹೆನೆಂಬ



ಕುಂಡಲಾಗ್ನಿಯ ಭಿನ್ನ ತೃಪ್ತಿಯ ಕೊಂದು ಕಂದಲೆಂಬ ದೇಹ ಭಾವವ ಛೇದಿಸುತ್ತಿರಲು, ಅದೀಗ ಕರುವ ಕೊಂದು ಕಂದಲನೊಡೆದರೆಂಬ ಶಬ್ದಕ್ಕರ್ಥ. ಈ ಕ್ರಮದಲ್ಲಿ ಆ ಪರಮಾಮೃತವನು ಸ್ವಾನುಭಾವ ಉಪಾಯಾಂತರದಿಂ ಕಳೆದುಕೊಂಬಾತನೆ ದಿವ್ಯ ಶಿವಯೋಗಿ ಎಂಬುದೀಗ ಕರೆಯಬಲ್ಲವಂಗಲ್ಲದೆ ಹಯನಾಗದೆಂಬ ಶಬ್ದಕ್ಕರ್ಥ. ಅಂತು ಆ ಅಮೃತವನು ಅಂಗಮುಖಕ್ಕೆ ಆಹುತಿಯನಿಕ್ಕಲು ತೃಪ್ತಿಯಾಗಿ, ಆ ಅಮೃತವೇ ಅಂಗವಾಗಲು ಅದು ಅನ್ಯ ವಿಷಯಕ್ಕೆ ಕರೆಯದಾಗಿ ಹಯನೆ ಬರಡೆಂಬ ಶಬ್ದಕ್ಕರ್ಥ. ಆ ಅಂಗವೇ ಪರಮಾಮೃತವಾಗಿ ತನ್ನಲ್ಲಿ ತಾನು ಒಸರಿ ದಣಿಯುಂಡ ತೃಪ್ತಿಯ ನೀವುತ್ತಿರಲು, ಅದೀಗ ಬರಡೆ ಹಯನೆಂಬ ಶಬ್ದಕ್ಕರ್ಥ. ಈ ತೆರನನರಿಯದವರು ಕುಂಡಲಾಗ್ನಿಗೆ ಯೋಗಾಮೃತರಸಾಹಾರವನಿಕ್ಕಿ ತಾವು ವ್ಯರ್ಥರಾದರೆಂಬುದೀಗ ಆರು ಹಿರಿಯರ ಬಾಯ ಕರು ಒದಯಿತ್ತೆಂಬ ಶಬ್ದಕ್ಕರ್ಥ. ಇದನರಿವರೆ ದಿವ್ಯ ರಾಜಯೋಗಗಳೆಂಬುದೀಗ ಎರಡಿಲ್ಲದ ನಿರಾಳವೆಂಬ ವಚನಾರ್ಥ.

೭೩. ಕರಿಯ ತಲೆಯ ಅರಮನೆಯ ಸುರಧೇನು ಹಯನಾಯಿತ್ತು. ಕರದುಂಬಾತಕ್ಕೆ ಕೈಕಾಲಿಲ್ಲ ಕರುನಾಲ್ವೆರಳಿನ ಪ್ರಮಾಣದಲ್ಲಿಹುದು ಇದ ಕರದುಂಬಾತನೆ ದೇವ ಗುಹೇಶ್ವರಾ.

ಟೀಕು:— ಕರಿ ಎಂದರೆ ಆನೆಂಬಹಂಕಾರ ತಲೆ ಎಂದರೆ ಜ್ಞಾನ ಇಂತು ಕರಿಯತಲೆ ಎಂಬ ಬ್ರಹ್ಮಹಂಕಾರಕ್ಕೆ ನೆಲೆಮನೆ ಯಾವುದೆಂದರೆ ಬ್ರಹ್ಮರಂಧ್ರವೆ ಸ್ಥಾನವಾಗಿರ್ಪುದು ಅಂತಪ್ಪ ಬ್ರಹ್ಮರಂಧ್ರಸ್ಥಾನದಲ್ಲಿ ಅಮೃತಬಿಂದು ಕಾಮಧೇನುವಾಗಿ ಆ ಶಿವಯೋಗಿಗೆ ಕರೆವುತ್ತಿಹ ಕಾರಣ ಕರಿಯ ತಲೆಯ ಅರಮನೆಯ ಸುರಧೇನು ಹಯನಾಯಿತ್ತೆಂಬ ಶಬ್ದಕ್ಕರ್ಥ. ಆ ಅಮೃತವ ಆ ಶಿವಯೋಗ ಸಾಧನದಿಂದ ಕರದುಂಡಿಹೆನೆಂಬ ಶಿವಯೋಗಿ ಆಧಾರಸ್ಥಾನದಲ್ಲಿ ಹೆಜ್ಜೆ ಇಲ್ಲದೆ ನಿರಾಧಾರ ಪಥದಲ್ಲಿ ನಿಂದು ಆ ಊರ್ಧ್ವಚಕ್ರದಲ್ಲಿ ಸಂಕಲ್ಪಹಸ್ತವಿಲ್ಲದೆ ಗ್ರಹಿಸಬೇಕಾದ ಕಾರಣ ಇದಕರದುಂಬಾತಂಗೆ ಕೈಕಾಲಿಲ್ಲವೆಂಬ ಶಬ್ದಕ್ಕರ್ಥ. ಚತುಃಪತ್ರದ ಕುಂಡಲಾಗ್ನಿಯ ಬಾಯಂ ಕಟ್ಟಿ, ಆ ಅಮೃತವನು ಪ್ರಾಣಲಿಂಗಕ್ಕೆ ಸಮರ್ಪಣವ ಮಾಡುತ್ತಿರಲು, ಅದೇ ಪರಶಿವಯೋಗವೆಂಬುದೀಗ ಕರುನಾಲ್ವೆರಳಿನ ಪ್ರಮಾಣದಲ್ಲಿಹುದು ಇದ ಕರದುಂಬಾತನೆ ದೇವ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೭೪. ಗಗನಮಂಡಲದ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ ಎನುತ್ತಿರ್ದಿತ್ತು. ಒಂದು ಬಿಂದು ಅಮೃತದ ವಾರಿಯ ದಣಿವುಂಡ ತೃಪ್ತಿಯಿಂದ ಸುಖಿಯಾದೆ. ಗುಹೇಶ್ವರಾ ನಿಮ್ಮಲ್ಲಿಯೆ ಎನಗೆ ನಿವಾಸವಾಯಿತ್ತು.

ಟೀಕು:-- ಗಗನ ಮಂಡಲವೆಂದರೆ ಬ್ರಹ್ಮರಂಧ್ರಕ್ಕರ್ಥ. ಆ ಬ್ರಹ್ಮರಂಧ್ರಕ್ಕೆ ಸುಷುಮ್ನನಾಳ ಶಿವಯೋಗಮಾರ್ಗವಾಗಿರ್ಪ ಕಾರಣ ಆ ಮಾರ್ಗದೊಳು ಶಿವೋಹಂ ಶಿವೋಹಂ ಎನುತ್ತ ಅಲ್ಲಿ ಶಿವಯೋಗಾಮೃತ ಬಂದು, ನೆಲೆಯಾಗಿರ್ಪಕಾರಣ ಗಗನಮಂಡಲದಲ್ಲಿ ಸೂಕ್ಷ್ಮನಾಳದಲ್ಲಿ ಸೋಹಂ ಸೋಹಂ ಎನುತ್ತಿರ್ದಿತ್ತು. ಒಂದು ಬಿಂದುವೆಂಬ ಶಬ್ದಕ್ಕರ್ಥ. ಆ ಪರಮಾಮೃತವ ದಣಿಯುಂಡ ಶಿವಯೋಗಿ ಪರಶಿವ ತತ್ವದಲ್ಲಿ ವಿಶ್ರಾಂತಿಯನೆಯ್ದುವನೆಂಬುದೀಗ ಅಮೃತದ ವಾರಿಯ ದಣಿಯುಂಡು ತೃಪ್ತಿಯಿಂದ ಗುಹೇಶ್ವರಾ ಎನಗೆ ನಿಮ್ಮಲ್ಲಿಯೆ ನಿವಾಸವಾಯಿತ್ತೆಂಬ ಶಬ್ದಕ್ಕರ್ಥ.

೭೫. ಮೊಲೆ ಇಲ್ಲದಾವಿಂಗೆ, ತಲೆಯೇ ಮೊಲೆ ಮನದಲ್ಲಿ ಉಣ ಕಂಡ್ಯಾ ಮನದಲ್ಲಿ ಉಣುಕಂಡ್ಯಾ. ತಾಸತ್ತು ಹಾಲುಕುಡಿಯಬಲ್ಲಡೆ, ಗುಹೇಶ್ವರನೆಂಬ ಲಿಂಗವು ತಾನೇಕಂಡ್ಯಾ ॥೭೫॥

ಟೀಕು:- ಕಾರ್ಯಕಾರಣತ್ವನೆಂಬೆಡೂ ಇಲ್ಲದ ಅಮೃತಬಿಂದುವೆಂಬ ಕಾಮಧೇನುವಿಂಗೆ ತಲೆ ಎಂಬ ಸುಜ್ಞಾನವೇ ಸ್ತನವಾಗಿರ್ಪುದಾಗಿ, ಮೊಲೆ ಇಲ್ಲದಾವಿಂಗೆ ತಲೆಯೇ ಮೊಲೆ, ಕಂಡ್ಯಾ ಎಂಬ ಶಬ್ದಕ್ಕರ್ಥ, ಆ ಅಮೃತಬಿಂದುವನು ಮನದಲ್ಲಿ ದಣಿಯುತ್ತಿರಲು, ಆದೀಗ ಮನದಲ್ಲಿ ಉಣಕಂಡ್ಯಾ ಮನದಲ್ಲಿ ಉಣುಕಂಡ್ಯಾ ಎಂಬಶಬ್ದಕ್ಕರ್ಥ, ಇಂತಪ್ಪ ಅಮೃತವನು ದಣಿಯುಂಬ ಕ್ರಮವೆಂತೆಂದೊಡೆ, ತಾನೆಂಬಭಾವವಳಿದು, ಕೊಂಡುದೆನುತ್ತಿರಲು, ಆದೀಗ ತಾಸತ್ತು ಹಾಲುಕುಡಿಯಬಲ್ಲಡೆ ಆತನೇ ದೇವನೆಂಬ ಶಬ್ದಕ್ಕರ್ಥ ॥ ೭೫ ॥

೭೬. ಅಂಬುಧಿ ಉರಿಯಿತ್ತು ಅವನಿಯ ಮೇಲನೆರಿಯಲು, ಕೂಡೆರಡರೊಳೊಂದತಿಳಿದು, ವಾಯುವ ಬೈವುತ್ತ ತುಂಬಿ ಅಮೃತವಕಂಡು, ಪ್ರಾಣನಾಥಂಗೆ ಅರ್ಪಿತಮಾಡಿ, ಆಪ್ರಸಾದದಿಂದ ಸುಖಿಯಾದೆನಯ್ಯಾ ಗುಹೇಶ್ವರಾ ॥ ೭೬ ॥



ಟೀಕು:-- ಅಂಬುಧಿ ಎಂದರೆ ಭವಸಾಗರ, ಅಂತಪ್ಪಭವಸಾಗರವನು ಜ್ಞಾನಾಗ್ನಿಯಲ್ಲಿ ದಹಿಸಿ, ಅವನಿ ಎಂಬ ತನುವಿನ ಭೇದವನರಿಯಲು ಅದೀಗ ಅಂಬುಧಿ ಉರಿಯಿತ್ತು. ಅವನಿಯ ಮೊಲನರಿಯಲೆಂಬ ಶಬ್ದಕ್ಕರ್ಥ, ಆ ತನುವಿನ ಭೇದವನರಿದು ಕೋಡೆರಡೆಂಬ ಅಹಂಕಾರ ಮಮಕಾರಂಗಳಂ ಖಂಡಿಸಿ, ನಿಲಿಸಿ ಏಕಮೇವಪರಬ್ರಹ್ಮವೆಂಬ ಒಂದೆ ವಸ್ತುವ ತಿಳಿದು ನೋಡಲು, ಆದೀಗ ಕೊಡೆರಡರೊಳೊಂದತಿಳಿದೆಂಬ ಶಬ್ದಕ್ಕರ್ಥ ಆ ಹಾಂಗೆ ನಿಜವನರಿದು ಪ್ರಾಣವಾಯುವ ತಿರಸ್ಕರಿಸಿ, ನಿವೃತ್ತಿಯಮಾಡಿ ಶಿವಸುಖಪ್ರಸನ್ನಪ್ರಸಾದವನು ಪರಿಪೂರ್ಣಭಾವದಿಂ ಸರ್ವಾಂಗದೊಳು ಧರಿಸುತ್ತಿರಲು ಅದೀಗ ವಾಯುವ ಬೈಯ್ವುತ್ತ ತುಂಬಿ ಅಮೃತವಕಂಡು, ಎಂಬಶಬ್ದಕ್ಕರ್ಥ ಆ ಸುಖಪ್ರಸನ್ನವನು ಪ್ರಾಣಲಿಂಗಾರ್ಪಿತಮುಖಕ್ಕೆ ಸಲಸಿದಾತನೆ ದಿವ್ಯಶಿವಯೋಗಿಯೆಂಬುದೀಗ ಪ್ರಾಣನಾಥಂಗರ್ಪಿತವಮಾಡಿಸುಖಿಯಾದೆನೆಂಬ ಶಬ್ದಕ್ಕರ್ಥ ॥ ೭೬ ॥

೭೭. ಹಸಿಯ ಬಿಸಿಲನೆ ಕೊಯ್ದು ಪದಾರ್ಥವ ಮಾಡಿ ಉಸುರ ಎಸರಲ್ಲಿ ಬಾಗುತ್ತಿರ್ಪರಯ್ಯಾ ಇಕ್ಕಲಿಲ್ಲಾರಿಗೆಯೂ, ಎರೆಯಲಿಲ್ಲಾರಿಗೆಯೂ ಭಿಕ್ಷಾವೃತ್ತಿಗಳು ಬಂದು ಬೇಡುತ್ತಿರ್ಪರಯ್ಯಾ ನಿಮ್ಮ ಒಕ್ಕುದ ಮಿಕ್ಕುದ ಉಡಿಯಲ್ಲಿ ಕಟ್ಟಿಕೊಂಡಿರ್ಪರಯ್ಯಾ ಗುಹೇಶ್ವರಾ ನಿಮ್ಮಶರಣರು ॥ ೭೭ ॥

ಟೀಕು: -- ಹಸಿಯಬಿಸಿಲೆಂದರೆ ಜ್ಞಾನಾಮೃತಪ್ರಭೆ ಆ ಸುಜ್ಞಾನಾಮೃತಪ್ರಭೆಯನು ರೇಚಕವೆಂಬ ಹಸ್ತದಿಂಕೊಯ್ದು ಪೂರಕದಿಂದೋಸರಿಸಿ ಕುಂಡಲಾಗ್ನಿಯಲ್ಲಿ ಸಮರಸಪಾಕವಮಾಡುತ್ತಿರಲು ಆದೀಗ ಹಸಿಯ ಬಿಸಲನೆ ಕೊಯ್ದು ಪದಾರ್ಥವಮಾಡಿ, ಉಸುರ ಎಸರಲ್ಲಿ ಬಾಗುತ್ತಿರ್ಪರಯ್ಯಾ ಎಂಬಶಬ್ದಕ್ಕರ್ಥ. ಆ ಸಮರಸಪಾನವಾದ ಜ್ಞಾನಾಮೃತಪದಾರ್ಥವನು ಭಿನ್ನಮುಖಕ್ಕಿಕ್ಕದಿರ್ಪುದೀಗ ಇಕ್ಕಲಿಲ್ಲಾರಿಗೆಯೂ ಎರೆಯಲಿಲ್ಲಾರಿಗೆಯೂ, ಎಂಬಶಬ್ದಕ್ಕರ್ಥ. ಇಂತು ಭಿನ್ನಮುಖಕ್ಕೆ ಸಲಿಸದೆ ಆ ಸುಖವನು ಆಧಾರಸ್ಥಾನದಲ್ಲಿರ್ಪ ಚಿಲ್ಲಿಂಗಕ್ಕೆ ಸಮರ್ಪಿಸುತ್ತಿರ್ಪುದೀಗ ಒಕ್ಕುದ ಮಿಕ್ಕುದ ಉಡಿಯಲ್ಲಿ ಕಟ್ಟಿಕೊಂಡಿರ್ಪರು ಗುಹೇಶ್ವರಾ ನಿಮ್ಮ ಶರಣರೆಂಬ ಶಬ್ದಕ್ಕರ್ಥ.

೭೮. ಸ್ವರದ ಹುಳ್ಳಿಯ ಕೊಂಡು ಗಿರಿಯ ತಟಾಕಕ್ಕೆ ಹೋಗಿ ಹಿರಿಯರು ಓಗರವ ಮಾಡುತ್ತಿರ್ಪರು ಗಿರಿಬೇಯದಾಗಿ ಓಗರವಾಗದು. ಅರ್ಪಿತವಿಲ್ಲಾಗಿ ಪ್ರಸಾದವಿಲ್ಲ ಗುಹೇಶ್ವರಾ.

ಟೀಕು:-- ಸ್ವರದ ಹುಳ್ಳಿಯೆಂದರೆ ಆಧಾರಸ್ಥಾನದಲ್ಲಿ ಆಕುಂಚನವ ಬಲಿದು, ವಾಯುವನೆಬ್ಬಿಸಿ, ಬ್ರಹ್ಮರಂಧ್ರವೆಂಬ ಶಿಖರಿಗೆ ಕೊಂಡುಹೋಗಿ, ಅಲ್ಲಿರ್ಪ ಅಮೃತಬಿಂದುವ ಪಾಕವ ಮಾಡಿಹೆನೆಂಬವರೇಬುದೀಗ ಸ್ವರದ ಹುಳ್ಳಿಯ ಕೊಂಡು, ಗಿರಿಯ ತಟಾಕಕ್ಕೆ ಹೋಗಿ ಹಿರಿಯರು ಬೋನವ ಮಾಡುತ್ತಿರ್ಪರೆಂಬ ಶಬ್ಧಕ್ಕರ್ಥ. ಆ ಪೂರ್ವಯೋಗ ಸಾಧನೆಯಿಂದ ಬ್ರಹ್ಮರಂಧ್ರವೆಂಬ ಶಿಖರಿ ಕರಗದಾಗಿ ಅಮೃತಬಿಂದು ಸಾಧವಾಗದೆಂಬುದೀಗ ಗಿಂಬೇಯದಾಗಿ ಓಗರವಾಗದೆಂಬ ಶಬ್ದಕ್ಕರ್ಥ. ಅಲ್ಲಿ ಅರ್ಪಿತಮುಖವಿಲ್ಲಾಗಿ, ಪ್ರಸಾದವು ಇಲ್ಲವೆಂಬುದೀಗ ಅರ್ಪಿತವಿಲ್ಲಾಗಿ ಪ್ರಸಾದವಿಲ್ಲವೆಂಬ ಶಬ್ದಕ್ಕರ್ಥ.

೭೯- ಚಂದ್ರಕಾಂತದ ಗಿರಿಗೆ, ಉದಕದ ಸಂಚ, ಸೂರ್ಯಕಾಂತದ ಗಿರಿಗೆ ಅಗ್ನಿಯ ಸಂಚ, ಪರುಷಗಿರಿಗೆ ರಸದ ಸಂಚ, ಬೆರಸುವ ಭೇದವಿನ್ನೆಂತೊ ಅಪ್ಪುವನು ಅಗ್ನಿಯನು ಪಕ್ವಕ್ಕೆ ತಂದು ಅಟ್ಟೆಂಬ ಭೇದವನು ಗುಹೇಶ್ವರ ಬಲ್ಲ.

ಟೀಕು:-- ಉದಕದ ಕಳೆಯುಳ್ಳ ಶಿಲೆ ಚಂದ್ರಕಾಂತವಾಯಿತ್ತು. ಅಗ್ನಿಯ ಕಳೆಯುಳ್ಳ ಶಿಲೆ ಸೂರ್ಯಕಾಂತವಾಯಿತ್ತು. ಸಿದ್ಧರಸದ ಕಳೆಯುಳ್ಳ ಶಿಲೆ ಪರುಷವಾಯಿತ್ತು. ಆ ಹಾಂಗೆ ಶರಣನ ಅಂಗಕ್ಕೆ ಲಿಂಗವೇ ಕಳೆಯಾಗಿ ಅಪ್ಪುವೆಂಬ ತನುವನು ಅಗ್ನಿಯೆಂಬ ಜ್ಞಾನಾಗ್ನಿಯಲ್ಲಿ ಸಮರಸ ಪಾಕವ ಮಾಡಲು ಸರ್ವಾಂಗ ಪ್ರಸಾದ ಕಾಯವಾಯಿತ್ತಾಗಿ ಲಿಂಗಕ್ಕರ್ಪಿತವಾಯಿತ್ತೆಂಬುದೀಗ ಅಪ್ಪುವನು ಅಗ್ನಿಯನು ಪಕ್ವಕ್ಕೆ ತಂದು ಅಟ್ಟೆಂಬ ಭೇದವ ಗುಹೇಶ್ವರಬಲ್ಲನೆಂಬ ವಚನಾರ್ಥ.

೮೦. ತನುಹೊರಗಿರಲು ಪ್ರಸಾದಒಳಗಿರಲು ಎನ್ನಯ್ಯ ನಿಮ್ಮ ಮನಕ್ಕೆ ಮನನಾಚರು ಪ್ರಾಣಲಿಂಗದಲ್ಲಿ ಪ್ರಸಾದವ ಕೊಂಡಡೆ ವ್ರತಕ್ಕೆ ಭಂಗ ಗುಹೇಶ್ವರಾ.

ಟೀಕು:-- ತನುವಿಡಿದು ಬಹಿರಂಗದ ಸ್ಥಿತಿಗತಿಯಲ್ಲಿ ವರ್ತಿಸುತ್ತೊಳಗೊಂದು ಅರಿವಿನ ಸುಖವ ಕಂಡೆನೆಂದು ಆ ಸುಖಕ್ಕೆ ನೈಯ್ಯನ್ನುವುದೀಗ ತನುಹೊರಗಿರಲು ಪ್ರಸಾದ ಒಳಗಿರಲು ಎನ್ನಯ್ಯಾ ನಿಮ್ಮ ಮನಕ್ಕೆ ಮನ ನಾಚದೆಂಬಶಬ್ದಕ್ಕರ್ಥ. ಅದು ಕಾರಣ ಸರ್ವಾಂಗಲಿಂಗಸಂಬಂಧವನರಿಯದೆ ಉಪಾಧಿಯಿಂದ ಲಿಂಗಪ್ರಸಾದವ ತನ್ನ ಪ್ರಾಣಕ್ಕೆ ಕೊಂಡಿ



ಹೆನೆಂಬುದು ಭಿನ್ನಬುದ್ಧಿಯಾಗಿ ಪ್ರಾಣಕ್ಕೆ ಲಿಂಗದಲ್ಲಿ ಪ್ರಸಾದವ ಕೊಡೊಡೆ ವ್ರತಕ್ಕೆ ಭಂಗ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೮೧. ಇಷ್ಟಲಿಂಗಕ್ಕೆ ರೂಪನರ್ಪಿಸಿ ದ್ರವ್ಯಶುದ್ಧಿಯಾಯಿತ್ತೆಂದು, ಪ್ರಾಣಲಿಂಗಕ್ಕೆ ಆರೋಗಣೆಯನಿಕ್ಕುವಾಗ ನಿಚ್ಚಕ್ಕೆ ನಿಚ್ಚ ಕಿಲ್ಬಿಷವೆಂದರಿಯರು ಇಷ್ಟಲಿಂಗದ ಪ್ರಾಣಲಿಂಗದ ಆದಿ ಅಂತವ ನಾರು ಅರಿಯರು. ಇದು ಕಾರಣ ಗುಹೇಶ್ವರಾ ನಿಮ್ಮ ಶರಣರು ಹಿಂದುಗಾಣದೆ ಮುಂದುಗೆಟ್ಟರು.

ಟೀಕ:-- ಸರ್ವಾಂಗ ಲಿಂಗ ಸಂಬಂಧವೆಂದರಿಯದೆ ಭಿನ್ನಬುದ್ಧಿಯಿಂದ ಇಷ್ಟಲಿಂಗಕ್ಕೆ ರೂಪವನರ್ಪಿಸಿ ಮತ್ತೆ ಪ್ರಾಣಲಿಂಗಕ್ಕೆ ರೂಪವನರ್ಪಿಸಿ ಮತ್ತೆ ಪ್ರಾಣಲಿಂಗಕ್ಕೆ ರೂಪಿನೊಳಗಣ ರುಚಿಯನರ್ಪಿಸಿ ಕೊಂಬೆವೆಂಬುದು ಖಂಡಿತವಾದ ಕಾರಣ ಅದು ಅನರ್ಪಿತವೆಂಬುದೀಗ ಇಷ್ಟಲಿಂಗಕ್ಕೆ ರೂಪವನರ್ಪಿಸಿ ದ್ರವ್ಯಶುದ್ಧವಾಯಿತ್ತೆಂದು ಪ್ರಾಣಲಿಂಗಕ್ಕೆ ರುಚಿಯನರ್ಪಿಸುವಾಗ ನಿಚ್ಚಕ್ಕೆ ನಿಚ್ಚ ಕಿಲ್ಬಿಷವೆಂದರಿಯರೆಂಬ ಶಬ್ದಕ್ಕರ್ಥ. ಇದು ಕಾರಣ ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಯಾದ ಭೇದವನರಿದು ಸರ್ವಾಂಗದೊಳು ಸಮರಸವ ಮಾಡುವುದೀಗ ಇಷ್ಟಲಿಂಗ ಪ್ರಾಣಲಿಂಗದಾರಿಯಂತವನಾರು ಬಲ್ಲರೊ ಎಂಬ ಶಬ್ದಕ್ಕರ್ಥ. ಸರ್ವಾಂಗವನು ಲಿಂಗವ ಮಾಡಿ ಹಿಂದು ಮುಂದೆಂಬ ಭಾವವಳಿದು, ಲಿಂಗಸುಖಿವೇದಿಗಳಾಗಿರುತ್ತಿಹೆವೆಂಬುದೀಗ ಗುಹೇಶ್ವರಾ ನಿಮ್ಮ ಶರಣರು ಹಿಂದುಗಾಣದೆ ಮುಂದುಗೆಟ್ಟರೆಂಬ ವಚನಾರ್ಥ.

೮೨. ಮದ್ದನಂಬಿಕೊಂಡಡೆ, ರೋಗಮಾಣದಿರ್ಪವೆ, ಸಜ್ಜನಿಕೆಯುಳ್ಳಡೆ, ಪ್ರಸಾದಕಾಯ ಕೆಡುವುದೆ, ಪ್ರಾಣಲಿಂಗವಾದಡೆ, ಪ್ರಾಣಬೇರಪ್ಪುದೆ, ಪ್ರಾಣಲಿಂಗಪ್ರಸಾದವನು ನೀವು ತಿಳಿದು, ನೋಡಿದರೆ ನಾದ, ಬಿಂದು ಸೂಸದ ಮುನ್ನ ಆದಿಯ ಪ್ರಸಾದವ ಭೇದಿಸಿಕೊಂಡರು. ಗುಹೇಶ್ವರಾ ನಿಮ್ಮ ಶರಣರು.

ಟೀಕು:--ಸಜ್ಜನ ಸದ್ಭಕ್ತವಾಸ ಸದಾಚಾರದಿಂದ ಕಾಯದ ಪೂರ್ವಾಶ್ರಯವ ಕಳೆದು ಲಿಂಗವೇಧಿಯಾಗಿ ಸರ್ವಾಂಗ ಪ್ರಸಾದಕಾಯವಾದ ಬಳಿಕ ಆ ಕಾಯಕ್ಕೆ ಕೇಡಿಲ್ಲವಾಗಿ, ಮದ್ದನಂಬಿಕೊಂಡೊಡೆ ರೋಗ ಹೋಗದಿರ್ಪವೆ ಸಜ್ಜನಿಕೆ ಯುಳ್ಳಡೆ ಪ್ರಸಾದಕಾಯ ಕೆಡುವುದೆ ಎಂಬಶಬ್ದ

ಕ್ಕರ್ಥ. ಆ ಕಾಯವಲ್ಲಿ ಪ್ರಾಣವೇಲಿಂಗವಾಗಿರ್ದ ಬಳಿಕ ಬೇರೆ ಮತ್ತೆ ವಾಯುಪ್ರಾಣವಿಲ್ಲವೆಂಬುದೀಗ ಪ್ರಾಣಲಿಂಗವಾವಡೆ ಪ್ರಾಣಬೇರಪ್ಪುದೆ! ಎಂಬಶಬ್ದಕ್ಕರ್ಥ. ಅದುಕಾರಣ ಆ ಪ್ರಾಣಲಿಂಗಪ್ರಸಾದವನು ತಿಳಿದು ನೋಡಿ, ಅರ್ಪಿತವಿಲ್ಲದ ಮುನ್ನ ಅನರ್ಪಿತಪ್ರಸಾದವಾಗಿರ್ಪ ಆದಿಯ ಪ್ರಸಾದವನು ನಾದಬಿಂದುಗಳೆಂಬ ಶಿವಶಕ್ತಿಗಳಳಿಯದ ಮುನ್ನವೇ ಲಿಂಗಾರ್ಪಿತವ ಮಾಡಿ, ಪ್ರಸನ್ನಪ್ರಸಾದವ ಸ್ವೀಕರಿಸುತ್ತಿರ್ದನೆಂಬುದೀಗ ಆ ಪ್ರಾಣಲಿಂಗಪ್ರಸಾದವ ತಿಳಿದು ನೀವು ನೋಡಿರೆ ನಾದಬಿಂದುಸೂಸದಮುನ್ನ ಆದಿಯ ಪ್ರಸಾದವ ಭೇದಿಸಿ ಕೊಂಡರು ಗುಹೇಶ್ವರಾ ನಿಮ್ಮ ಶರಣರೆಂಬ ಶಬ್ದಕ್ಕರ್ಥ.

೮೩. ಖಂಡಾಖಂಡ ಸಂಯೋಗವಿಲ್ಲದ ಅಖಂಡತನ ನಿಲವು ತನ್ನಲ್ಲಿ ಅಲ್ಲದೆ ಮತ್ತೆಲ್ಲಿಯೂ ಇಲ್ಲ. ಬಯಲಹಿರಿಯರು ಬಯಲನೆ ಅರಸುವರು ಅಲ್ಲಿ ತಿಳಿವುಂಟೆ? ಹೇಳಾ! ಗುಹೇಶ್ವರಾ

ಟೀಕು:— ಖಂಡಿತ ಅಖಂಡಿತವೆಂಬೆರಡು ಬಗೆಯೂ ತಿಳಿದುಳಿದ ಶರಣನ ನಿಲವು ತನ್ನಲ್ಲಿ ತಾನು ಪಕ್ವವಾಗಿ ಸ್ವತಃಸಿದ್ಧವಾಗಿರ್ಪುದಾಗಿ ಖಂಡಾಖಂಡಸಂಯೋಗವಿಲ್ಲದ ಅಖಂಡಿತನ ನಿಲವು ತನ್ನಲ್ಲಿ ಅಲ್ಲದೆ ಮತ್ತೆಲ್ಲಿಯೂ ಇಲ್ಲವೆಂಬಶಬ್ದಾರ್ಥ. ಇದನರಿಯದೆ ಇಲ್ಲವ ಬಯಲನುಂಟುಮಾಡಿ ಕುರುಹಿಂಗೆ ತಂದು ಅರಸಿ ಬಳಲುವದು ಮಿಥ್ಯಾಜ್ಞಾನವೆಂಬುದೀಗ ಬಯಲಹಿರಿಯರು ಬಯಲನೆ ಅರಸುವರು ಅಲ್ಲಿ ತಿಳಿವುಂಟೆ? ಹೇಳಾ! ಎಂಬ ಶಬ್ದಕ್ಕರ್ಥ.

೮೪. ಅಷ್ಟಾಂಗಯೋಗದಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಯೆಂದು ಎಂಟು ಯೋಗವುಂಟು. ಅಲ್ಲಿ ಅಳಿದು ಕೂಡುವುದೊಂದು ಯೋಗ. ಈ ಎರಡು ಯೋಗದೊಳಗೆ ಅಳಿಯದೆ ಕೂಡುವ ಯೋಗವರಿದು ಕಾಣಾ ಗುಹೇಶ್ವರಾ.

ಟೀಕು:— ಅಷ್ಟಾಂಗಯೋಗಾಭ್ಯಾಸದಿಂದ ಪರಬ್ರಹ್ಮವನರಿದಿಹೆನೆಂಬುದು ಆ ಯಾಸ. ಅಲ್ಲಿ ಅನಾಯಾಸವಾವುದೆಂದರೆ ತಾನೆಂಬಹಂಕಾರವಳಿದು ತಾನೆಂಬುದೆ ಶಿವನೆಂದರಿದೊಡೆ ಅದು ರಾಜಯೋಗವೆಂಬುದೀಗ ಯಮನಿಯಮಾಸನಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ, ಎಂಬ ಅಷ್ಟಾಂಗಯೋಗದೊಳಗೆ ಅಳಿದು ಕೂಡುವದೊಂದು



ಯೋಗ ಅಳಿಯದೆ ಕೂಡುವದೊಂದು ಯೋಗವೆಂಬಶಬ್ದಕ್ಕರ್ಥ. ಅಲ್ಲಿ ಸಗುಣಯೋಗದಲ್ಲಿ ತಾನಳಿದು ಪರಬ್ರಹ್ಮನಬೆರಸುವನು ನಿರ್ಗುಣಯೋಗದಿಂದ ಸದ್ಯನ್ಮುಕ್ತನಹನು ಈ ಎರಡರೊಳಗೆ ನಿರ್ಗುಣಯೋಗವೆಂಬುದೆ ಅಧಿಕವೆಂಬುದೀಗ ಈಎರಡುಯೋಗದೊಳಗೆ ಅಳಿಯದೆ ಕೂಡುವ ಯೋಗವರಿದು, ಕಾಣಾ ಎಂಬಶಬ್ದಕ್ಕರ್ಥ.

೮೫. ನಾಭಿಮಂಡಲದ ಉದಯವೆ ಉದಯ ಮಧ್ಯ ನಿರಾಳದ ನಿಲವಿನ ಪರಿಯ ನೋಡಾ? ಪವನಶೂಲದ ಮೇಲೆ ಪರಿಣಾಮವಯ್ಯಾ ಊರ್ಧ್ವಮುಖದಲ್ಲಿ ಉದಯವಾಯಿತ್ತು ಕಂಡೆ ಮಿಂಚುವ ತಾರಕಿ ಇದೇನೋ ಗುಹೇಶ್ವರಾ.

ಟೀಕು:— ಆಧಾರದಲ್ಲಿ ಉದಯವಾದ ಸತ್ಪ್ರಣಮುವಿವೇಕ ಮಣಿಪೂರಕ ಚಕ್ರದಲ್ಲಿ ಸ್ವತಃ ಸಿದ್ಧವಾಗಿ ನೆಲಸಲು ಅದೀಗ ನಾಭಿಮಂಡಲದ ಉದಯವೆ ಉದಯವೆಂಬ ಶಬ್ದಾರ್ಥ. ಅಂತಹ ಸಿದ್ಧವಾದ ಸತ್ಪ್ರಣಮು ವಿವೇಕ ಸುಷುಮ್ನನಾಳದಲ್ಲಿ ಬ್ರಹ್ಮರಂಧ್ರವನೆಯ್ದುತ್ತಿರಲು ಅದೀಗ ಮಧ್ಯನಿರಾಳದ ನಿಲವಿನ ಪರಿಯ ನೋಡಾ ಎಂಬ ಶಬ್ದಕ್ಕರ್ಥ. ಆಸುಷುಮ್ನನಾಳದಲ್ಲಿ ಐಯ್ದಿದ ಆ ಪ್ರಣಮುವ್ಯೋಮಚಕ್ರವನೆಯ್ದಿ ಅಲ್ಲಿರ್ಪ ಅಮೃತವನುಂಡು ಸುಖಿಯಾಗಲು ಅದೀಗ ಪವನಶೂಲದ ಮೇಲೆ ಪರಿಣಾಮವೆಂಬಶಬ್ದಕ್ಕರ್ಥ. ಆಪರಿಣಾಮ ಊರ್ಧ್ವಮುಖವೆಂಬ ನಿರ್ಗುಣಯೋಗದಲ್ಲಿ ಉದಯಿಸಿದ್ದ ಮಹಾಜ್ಞಾನಪ್ರಭೆ ತಾನೆಯಾಗಿರಲು, ಅದೀಗ ಊರ್ಧ್ವಮುಖದಲ್ಲಿ ಉದಯವಾಯಿತ್ತು ಕಂಡೆ ಮಿಂಚುವ ತಾರಕಿ ಇದೇನೋ ಎಂಬ ಶಬ್ದಕ್ಕರ್ಥ.

೮೬. ಸ್ವರವೆಂಬ ಕುದುರೆಗೆ ವಿಷ್ಣುವೆಂಬ ಕಡಿವಾಣ ಚಂದ್ರಸೂರ್ಯರೆಂಬ ಅಂಕಣಿ ಬ್ರಹ್ಮನೆ ಹಲ್ಲಣ ಸುರಾಳವೆಂಬಲ್ಲಿ ನಿರಾಳವಾಯಿತ್ತು ಗುಹೇಶ್ವರನೆಂಬ ರಾಹುತಂಗೆ.

ಟೀಕು:— ಸ್ವರವೆಂಬ ಕುದುರೆಎಂದರೆ ಸತ್ಪ್ರಣಮುವೆಂಬವಾಹನವೆಂಬರ್ಥ. ವಿಷ್ಣುವೆಂದರೆ ಆದಿಶಕ್ತಿ ಅಂತಪ್ಪ ಆದಿಶಕ್ತಿಯ ವಶದಲ್ಲಿ ಆಪ್ರಣಮುವು ಎಚ್ಚರಿಸುವದಾಗಿ ಸ್ವರವೆಂಬಕುದುರೆಗೆ, ವಿಷ್ಣುಕಡಿವಾಣವೆಂಬಶಬ್ದಕ್ಕರ್ಥ. ಆಸ್ವರ ತಾನು ಈಡೆ ಪಿಂಗಳ ದ್ವಾರ ಮಾರ್ಗವ ಮೆಟ್ಟಿಕೊಂಡಿಹ ಕಾರಣ ಚಂದ್ರಸೂರ್ಯರ ಅಂಕಣಿ ಎಂಬಶಬ್ದಾರ್ಥ. ಬ್ರಹ್ಮನಾಳವೆಂಬುದರ ಮೇಲೆ ನೆಲಸಿರ್ಪಕಾರಣ ಬ್ರಹ್ಮನೆ ಹಲ್ಲಣವೆಂಬ

ಶಬ್ದಾರ್ಥ. ಇಂತಪ್ಪ ಸಗುಣಯೋಗದಲ್ಲಿ ಮಹಾನುಭಾವವಪ್ಪ ಪ್ರಾಣಲಿಂಗ ಮನೋಮೂರ್ತಿಯಾಗಿ, ಮೂರ್ತಿಗೊಂಡಿರಲು, ಆ ಶರಣಂಗೆ ಅದು ನಿರ್ಗುಣಯೋಗವಾಗಿ ನಿರಾಳದಲ್ಲಿ ತರಹರವಾಯಿತ್ತೆಂಬುದೀಗ ಸುರಾಳವೆಂದಲ್ಲಿ ನಿರಾಳವಾಯಿತ್ತೆಂಬಶಬ್ದಕ್ಕರ್ಥ.

೮೭. ಸಾಸಿರದೆಂಟನೆಯ ದಳದಲ್ಲಿ ಖೇಚರಿ ಚಲ್ಲಣಗಟ್ಟಿ ವಾಸುಕಿಯಫಣಾಮಣಿಯು ಪ್ರಜ್ವಲಿಸುವದ ಕಂಡೆ ಅಸುರರೆಲ್ಲಾ ತಮತಮ ಗಂಜಿ ಓಸರಿಸಿ ಮುಂದೆ ನಡೆವಲ್ಲಿ ನಾಶಿಕ ಮನವ ಮುಸುಕುವುದ ಕಂಡೆ ತಾಸುಖಸ್ವರೂಪನಾದ ಸುಖಮುಖಪ್ರವೇಶದಿಂದ ಗೋಸಾಸಿರ ನಡೆಗೆಟ್ಟವು ಗುಹೇಶ್ವರಾ ನಿಮ್ಮನೆರದನಾಗಿ.

ಟೀಕುಃ— ಕುಂಡಲಿಸ್ಥಾನದಲ್ಲುದಯವಾದ ಸುಪ್ತಭುಜಂಗನು ಖೇಚರಿಮುದ್ರೆಯಲ್ಲಿ ಸ್ವಸ್ಥನಾಗಿ, ಸಹಸ್ರದಳಪದ್ಮದಲ್ಲಿ ಗ್ರಸ್ತಮುಖವಾಗಿ, ಜ್ಞಾನತತ್ವ್ರಭಾವ್ಮೃತವನುಂಡು ಬೆಳಗುತ್ತಿರಲು, ಅದೀಗ ಸಾಸಿರದೆಂಟನೆಯ ದಳದಲ್ಲಿ ಖೇಚರಿ ಚಲ್ಲಣಗಟ್ಟಿ ವಾಸುಕಿಯ ಫಣಾಮಣಿಪ್ರಜ್ವಲಿಸುವದ ಕಂಡೆನೆಂಬ ಶಬ್ದಕ್ಕರ್ಥ. ಇಂತಾಗಲು ಅಸುರರೆಂದರೆ ಅಸುರಕರ್ಮಸಂಬಂಧಿಗಳಪ್ಪ ಕರಣಂಗಳೆಲ್ಲವೂ ವಿಕಾರಿಸಲಮ್ಮದೆ ಮುನ್ನವೇ ಲಯವಾದವೆಂಬುದೀಗ ಅಸುರರೆಲ್ಲಾ ತಮತಮಗಂಜಿ ಓಸರಿಸಿ ಮುಂದೆ ನಡೆವಲ್ಲಿ ಎಂಬ ಶಬ್ದಕ್ಕರ್ಥ ಇಂತುಸಕಲಕರಣಂಗಳೆಲ್ಲವೂ ಲಯವಹಕಾಲದಲ್ಲಿ ನಾಶಿಕವೆಂದರೆ ಸದ್ವಾಸನೆ ಆ ಸದ್ವಾಸನೆ ಮನಪ್ರವೇಶವಾಯಿತ್ತೆಂಬುದೀಗ ನಾಶಿಕ ಮನವ ಮುಸುಕುವುದ ಕಂಡೆನೆಂಬ ಶಬ್ದಕ್ಕರ್ಥ ಆಸದ್ವಾಸನೆ ಆವರ್ತಿಸಿ ತಾನೆ ಶಿವತತ್ವಸ್ವರೂಪನಾದ ಸುಖಪ್ರಸನ್ನತ್ವದಿಂ ಸಹಸ್ರಸೂಕ್ಷ್ಮನಾಳಂಗಳೊಳು ಚರಿಸುವ ಪ್ರಾಣವಾಯು ಪ್ರಕೃತಿಯಳಿದು .ನಿರ್ಗಮನವನೆಯ್ದಿದನೆಂಬುದೀಗ ತಾ ಸುಖಸ್ವರೂಪನಾದ ಸುಖಮುಖಪ್ರವೇಶದಿಂದ ಗೋಸಾಸಿರ ನಡೆಗಟ್ಟವು ಗುಹೇಶ್ವರಾ ನಿಮ್ಮ ನೆರೆದನಾಗಿ ಎಂಬಶಬ್ದಕ್ಕರ್ಥ.

೮೮. ಪಂಚೀಕೃತವೆಂಬ ಪಟ್ಟಣದೊಳಗೆ ಈರೈದು ಕೇರಿ ನಾಲ್ಕೈದು ಬೀದಿಯಲ್ಲಿ ಹಾವಕಂಡೆ, ಹಿಂಡುಗಟ್ಟಿ ಆಡುವ ಮದಗಜವ ಕಂಡೆ, ಕೇಸರಿಯ ಕಂಡು ಮನ ಬೆದರಿತ್ತು. ನೋಡಾ ಮೂವರರಸಿಂಗೆ ಇಪ್ಪತ್ತೈದು ಪರಿವಾರ ಅಂಜಲಂಜಿ ಬೆಳಗಾಯಿತ್ತು. ಗುಹೇಶ್ವರಾ.

ಟೀಕುಃ—ಪಂಚೀಕೃತವೆಂಬ ಪಟ್ಟಣವೆಂದರೆ ಪಂಚಭೂತಸಂಬಂಧಮಪ್ಪ ದೇಹವೆಂಬರ್ಥ ಆ ದೇಹದೊಳಗೆ ದಶನಾಳಂಗಳೆಂಬವು ಈರೈದು



ಕೇರಿಯಾಗಿರ್ಪವೆಂಬುದೀಗ ಪಂಚೀಕೃತವೆಂಬ ಪಟ್ಟಣದೊಳಗೆ ಈರೈದು ಕೇರಿ ಎಂಬ ಶಬ್ದಾರ್ಥ. ಅಲ್ಲಿ ದಶವಾಯು ದಶೇಂದ್ರಿಯಂಗಳು ಎಂಬ ಇಪ್ಪತ್ತು ವೀಧಿಯಾಗಿರ್ಪವೆಂಬುದೀಗ, ನಾಲ್ಕೈದು ವೀಧಿಯಾಗಿರ್ಪವೆಂಬ ಶಬ್ದಕ್ಕರ್ಥ. ಆ ದಶವಾಯು ಇಂದ್ರಿಯ ವೀಧಿಗಳೊಳಗೆ ಜೀವಭಾವ ಭ್ರಾಂತಿ ಎಂಬ ಶಂಕಾವಿಷವು ತನ್ಮುಖವಾಗಿರ್ದಿತ್ತೆಂಬುದೀಗ ನಾಲ್ಕೈದು ವೀಧಿಯಲ್ಲಿ ಹಾವ ಕಂಡೆನೆಂಬಶಬ್ದಾರ್ಥ ಅಲ್ಲಿ ಅಷ್ಟಮದವೆಂಬ ಆನೆಗಳು ಕ್ರೀಡಿಸುತ್ತಿರ್ದವೆಂಬುದೀಗ ಹಿಂಡುಗಟ್ಟಾಡುವ ಮದಗಜವ ಕಂಡೆನೆಂಬ ಶಬ್ದಕ್ಕರ್ಥ ಆ ಮದಗಜಂಗಳಿಗೆ ಕೇಸರಿ ಎಂದರೆ ಸುಜ್ಞಾನ ಆ ಸುಜ್ಞಾನೋದಯವಾಗಲು ಅಷ್ಟಮದಂಗಳು ಮುಖ್ಯವಾದ ಸಕಲಕರಣಂಗಳು ನಿವೃತ್ತಿಯಾಗಿ ಮನಸ್ಸಿನ ಸಂಶಯಸೂತಕವಳಿಯಿತ್ತೆಂಬುದೀಗ ಕೇಸರಿಯ ಕಂಡ ಮನ ಬೆದರಿತ್ತೆಂಬ ಶಬ್ದಕ್ಕರ್ಥ. ಅಂಥ ಮನಸ್ಸಿನ ಪ್ರಕೃತಿ ಭಾವವಳಿಯಲು ತ್ರಿತತ್ವಭಾವದಿಂದುದಯವಾದ ಇಪ್ಪತ್ತೈದು ತತ್ವಂಗಳು ಭಿನ್ನವಾಗಿ, ಲಿಂಗತತ್ವವಾಗಿ ನೋಡನೋಡಲು ಸುಜ್ಞಾನ ಪ್ರಕಾಶವಾಯಿತ್ತೆಂಬುದೀಗ ಮೂವರರಸಿಂಗೆ ಇಪ್ಪತ್ತೈದು ಪರಿವಾರ ಅಂಜಲಂಜಿಬೆಳಗಾಯಿತ್ತೆಂಬಶಬ್ದಕ್ಕರ್ಥ.

೮೯. ಅಪ್ಪುವಿನ ಬಾವಿಗೆ ತುಪ್ಪದ ಘಟ ಸಪ್ಪಗೆ ಸಿಹಿ ಎಂಬೆರಡಿಲ್ಲದ ರುಚಿ ಪರುಷಮುಟ್ಟದಹೊನ್ನು ಕರಸದ ಬೊಜಗನು ಬೆರಸದೆ ಬಸುರಾಯಿತ್ತಕಂಡೆ ಅಹಾ ಅರಿವಿನಾಪ್ಯಯನ ಮರಹಿನ ಸುಖವೋ ಇದನರಿಯದ ಕಾರಣ ಮೂರುಲೋಕವಳಿಯಿತ್ತು. ಗುಹೇಶ್ವರಾ.

ಟೀಕುಃ— ಸಂಸಾರ ವಿಷಯಕೂಪವೆಂಬ ತನುವಿನ ಪೂರ್ವಭಾವವಳಿದು ಸರ್ವಾಂಗಲಿಂಗವಾಗಲು, ಆ ದೇಹವೇ ಪರಮಾಮೃತಕೋಪವಾಗಿರ್ಪುದಾಗಿ ಅಪ್ಪುವಿನ ಬಾವಿ ಎಂಬ ಶಬ್ದಕ್ಕರ್ಥ. ಆ ಅಮೃತರಸವ ನೊಗದು ಬಳಸುವ ಘಟವಾವುದೆಂದೊಡೆ, ಘೃತಕಾಠಿಣ್ಯಸನ್ಮೂರ್ತಿಸಚ್ಚಿದಾನಂದಲಕ್ಷಣ ಎಂಬುದಾಗಿ ಆ ಚಿತ್ತಿನ ಸದ್ಘಟದಲ್ಲಿ ತುಂಬಿಕೊಂಡು, ಆ ಅಮೃತವನು ಅವಿರಳಲಿಂಗಮುಖದಿಂದಾರೋಗಣೆಯ ಮಾಡಲು, ಆ ಸುಖವ ಸಪ್ಪೆ ಸಿಹಿ ಎಂದುಪಮಿಸಬಾರದಿರ್ದಿತ್ತೆಂಬುದೀಗ ಅಪ್ಪುವಿನ ಬ್ಭಾವಿಗೆ ತುಪ್ಪದ ಘಟ ಸಪ್ಪಗೆ ಸಿಹಿ ಎಂಬೆರಡಿಲ್ಲದ ರುಚಿ ಎಂಬಶಬ್ದಕ್ಕರ್ಥ. ಆ ಸುಖವನು ಸವಿಸಬಾರದ ಕಾರಣ ಪರುಷಸಂಗದಿಂದ ಲೋಹ ಹೊನ್ನಾದ ಹಾಗೆ, ಆಗದೆ ನಿಜದಿಂದ ತಾನು ಪರವಸ್ತುವಾದನೆಂಬು

ದೀಗ ಪರುಷಮುಟ್ಟಿದ ಹೊನ್ನೆಂಬ ಶಬ್ದಕ್ಕರ್ಥ. ಆ ಪರವಸ್ತು ಆಹ್ವಾನವಿಲ್ಲದೆ ಸನ್ನಿಧಾನವಾಗಿ, ಭಿನ್ನವಿಲ್ಲದೆ ಸಂಗವಾಗಿ, ಪರಮಾನಂದಸುಖಗರ್ಭವಾಯಿತ್ತೆಂಬುದೀಗ ಪರುಷಮುಟ್ಟಿದ ಹೊನ್ನು ಕರಸದ ಬೊಜಗವನುಬೆರಸದೆ, ಬಸುರಾಯಿತ್ತೆಂಬಶಬ್ದಕ್ಕರ್ಥ. ಅಂತಪ್ಪ ಅರಿವಿನ ತೃಪ್ತಿಯ ಪರವಶವೆ ಪರಮಸುಖವೆಂಬುದೀಗ ಅರಿವಿನಾಪ್ಯಯನ ಮರಹಿನ ಸುಖವೆಂಬ ಶಬ್ದಕ್ಕರ್ಥ. ಈ ಸುಖವನರಿಯದ ಕಾರಣ ಮೂರು ಲೋಕವೆಲ್ಲವು ಅಳಿಯಿತ್ತೆಂಬುದೀಗ ಮೂರುಲೋಕ ಅಳಿಯಿತ್ತೆಂಬ ಶಬ್ದಕ್ಕರ್ಥ.

೯೦. ತಪ್ಪಿನೋಡಿದರೆ ಮನದಲ್ಲಿ ಅಚ್ಚೊತ್ತಿದಂತಿರ್ದಿತ್ತು. ಇಪ್ಪೆಡೆಯ ವಿಚಾರಿಸಿ ನೋಡಿದಡೆ ಇಲ್ಲದಂತಾಯಿತ್ತು. ತೆಪ್ಪದ ಜಲದ ಪಾದಾಘಾತದಂತೆ, ಕರ್ತೃತ್ವವೆಲ್ಲಿಯದೋ ಗುಹೇಶ್ವರಾ.

ಟೀಕು:-- ಜ್ಞಾನೋದಯವಾದ ಶರಣನು ತನ್ನ ತನುಗುಣಾದಿ ಪ್ರಪಂಚವಿದಿರಿಟ್ಟುಕೊಂಡು ನೋಡಲು ಅದು ಮನದ ಸಂಕಲ್ಪವಾಹುದಾಗಿ, ಆ ಮನದೊಳಗೆ ಅಚ್ಚೊತ್ತಿದಂತೆ ಕಾಣಬರುತ್ತಿರ್ದಿತ್ತೆಂಬುದೀಗ ತಪ್ಪಿನೋಡಿದಡೆ ಮನದಲ್ಲಿ ಅಚ್ಚೊತ್ತಿದಂತಿರ್ದಿತ್ತೆಂಬ ಶಬ್ದಕ್ಕರ್ಥ. ಆ ಪ್ರಪಂಚಿನ ಮೂಲವನು ವಿಚಾರಿಸಿ ನೋಡಿದಡೆ ಮಿಥ್ಯೆಯಾಗಿರ್ದಿತ್ತೆಂಬುದೀಗ ಇಪ್ಪೆಡೆಯ ವಿಚಾರಿಸಿದಡೆ ಇಲ್ಲದಾಯಿತ್ತೆಂಬ ಶಬ್ದಕ್ಕರ್ಥ. ಆ ಮಿಥ್ಯೆಯ ಅಳವ ನೋಡಿಹೆನೆಂದೊಡೆ, ತೆಪ್ಪದಲ್ಲಿ ಒರೆದ ಜಲದ ಪಾದಾಘಾತದಂತೆ ಇಲ್ಲವೆಯಾಗಿರ್ದುದಾಗಿ ಅಲ್ಲಿ ಸುಜ್ಞಾನವುಪ್ಪ ಕರ್ತೃಭಾವವಿಲ್ಲವೆಂಬುದೀಗ ತೆಪ್ಪಜಲದ ಪಾದಘಾತದಂತೆ ಕರ್ತೃತ್ವವೆಲ್ಲಿಯದೋ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೯೧. ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರೆದವರಾರೋ ಅಕಟಕಟಾ ಶಬ್ದದ ಲಜ್ಜೆಯ ನೋಡಾ! ಗುಹೇಶ್ವರನರಿಯದ ಅನುಭವಿಗಳೆಲ್ಲರ ತರಕಟಗಾಡಿತ್ತು.

ಟೀಕು:-- ನಿರಾಳ - ರವಯಲ - ನಿರ್ವಾಚ್ಯವೆಂಬಪರಬ್ರಹ್ಮವನು ಅರಿವಿನ ಬಗೆಗೆ ತಂದು ಹುಟ್ಟಿಸಿಕೊಂಡು ನಿವಿಮಾತಿನ ವಶಕ್ಕೆತಂದು, ವಾಗ್ಬ್ರಹ್ಮವ ನುಡಿವವರ ಆ ಶಿವತತ್ವ ತಾನೆ ಮರೆಮಾಡಿ ಕಾಡಿತ್ತೆಂಬುದೀವಚನಾರ್ಥ.



೯೨. ಕಿಚ್ಚಿನ ಕೆಂಡದಂತೆ ಹೊರೆಯೆಲ್ಲಿರ್ಪೆಯಯ್ಯಾ ಬೆಂಕಿಯ ಬೆಳಗಕಂಡೆ ಇದು ಕಾರಣ ನಿಮ್ಮ ಕಂಡೆ ಪರಮಜ್ಞಾನಿಗುಹೇಶ್ವರಾ.

ಟೀಕು:-- ಬೂದಿಮುಸುಕಿದ ಕೆಂಡದಂತೆ ಕೆಂಡದ ಮರೆಯಲಡಗಿದ ಪ್ರಕಾಶದಂತೆ, ತನುತ್ರಯದ ಮರೆಯಲಡಗಿರ್ಪ ಮಹಾಲಿಂಗವ ಕಂಡಾತನೆ ಪರಮಜ್ಞಾನಿ ಎಂಬುದೀ ವಚನದ ತಾತ್ಪರ್ಯಾರ್ಥ.

೯೩. ಧಾತು ಮಾತು ಪಲ್ಲಟಿಸಿದಡೆ ಗಮನವಿನ್ನೆಲ್ಲಿಯದೊ ಧ್ಯಾನ ಮೌನವೆಂಬುದು ತನುಗುಣ ಸಂದೇಹವಯ್ಯಾ ಸುಜ್ಞಾನಭರಿತ ಅನುಪಮಸುಖಿ ಗುಹೇಶ್ವರಾ. ನಿಮ್ಮ ಶರಣನು.

ಟೀಕು:-- ತನ್ನ ನಿಜದ ನಿಲವ ತಾನಾರಿಂದರಿಯದೆ ಭಿನ್ನಶಬ್ದದಿಂ ವಾಗದ್ವೈತವ ನುಡಿವಾತಂಗೆ ಅನುಭಾವಗಮ್ಯವಿಲ್ಲವೆಂಬುದೀಗ ಧಾತು ಮಾತು ಪಲ್ಲಟಿಸಿದರೆ ಗಮನವಿನ್ನೆಲ್ಲಿಯದೋ ಎಂಬ ಶಬ್ದಕ್ಕರ್ಥ ಮತ್ತೆ ನುಡಿಯಲಾಗದೆಂದು ಧ್ಯಾನ ಮೌನ ಸಂಕಲ್ಪವ ಮಾಡಿಕೊಂಡಿಪ್ಪಾತನು ಅನುಭವಸುಖಿಯಲ್ಲವೆಂಬುದೀಗ ಧ್ಯಾನ ಮೌನವೆಂಬುದು ತನುಗುಣ ಸಂದೇಹವೆಂಬಶಬ್ದಕ್ಕರ್ಥ. ಈ ಎರಡು ಬಗೆಯ ಹೊದ್ದದೆ ಇದ್ದಾತನು ಪರಿಪೂರ್ಣಜ್ಞಾನಿ ಎಂಬುದೀಗ ಸುಜ್ಞಾನಭರಿತ ಅನುಪಮಸುಖಿಗುಹೇಶ್ವರಾ ನಿಮ್ಮ ಶರಣನೆಂಬ ವಚನಾರ್ಥ.

೯೪. ಪೃಥ್ವಿ ಅಪ್ಪು ತೇಜ ವಾಯು, ಆಕಾಶದ ಕೊನೆಯ ಮೊನೆಯ ಮೇಲೆ ಇಪ್ಪತ್ತೈದು ಗ್ರಾಮಂಗಳು ಚವುಷಷ್ಟಿ ಪಟ್ಟಣ ಛಪ್ಪನ್ನ ಬೀದಿಗಳ ದಾಂಟಿ ಛತ್ತೀಸ ಪುರದ ರಚನೆಯ ನೋಡಬಲ್ಲೆಹೆವೆಂಬದು ತ್ರಿಕೋಣದ್ವಾರಮಂಟಪದ ಐವತ್ತೆರಡಕ್ಷರದ ಶಾಸನದ ಲಿಪಿಯ ತಿಳಿಯಲೋದಿ ಎಂಭತ್ತು ನಾಲ್ಕು ಲಕ್ಷದ್ವಾರದೊಳಗೆ ಹೊಕ್ಕು ಹೊರಡುವ ಜೀವನ ತಿಳಿದು ದಕ್ಷಿಣದ್ವಾರದಿಂದುತ್ತರದ್ವಾರಕ್ಕೆ ಬಂದು ಪಶ್ಚಿಮವಾಯುವ ಕೊನೆಯ ಮೊನೆಯ ಮೇಲೆ ಬೆಳಗುವ ಜ್ಯೋತಿಯ ನಿಮ್ಮಶರಣಬಲ್ಲನಲ್ಲದೆ ಲೋಕವ ಜ್ಞಾನಿಗಳೆತ್ತಬಲ್ಲರು ಗುಹೇಶ್ವರಾ.

ಟೀಕು:-- ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶದ ಕೊನೆಯ ಮೊನೆಯ ಮೇಲೆ ಎಂದರೆ ಪಂಚಭೂತಪಿಂಡದ ಅಹಂಕಾರವೆಂಬ ಶಿರಸ್ಸಿನ ಮೇಲೆ ಎಂಬ ಶಬ್ದಕ್ಕರ್ಥ. ಅಂತಪ್ಪ ಅಹಂಕಾರವೆಂಬ ಶಿರಸ್ಸಿನ ಮೇಲೆ ಇಪ್ಪತ್ತೈದು ಭೂತತತ್ವಂಗಳಿರುತ್ತಿರ್ಪವೆಂಬುದೀಗ ಇಪ್ಪತ್ತೈದು

ಗ್ರಾಮಂಗಳೆಂಬ ಶಬ್ದಕ್ಕರ್ಥ. ಅಲ್ಲಿ ಅರವತ್ತು ನಾಲ್ಕು ಭೇದದಲ್ಲಿ ಕಾರಣ ಗ್ರಾಮಂಗಳಿರುತ್ತಿರ್ಪವಾಗಿ ಚವುಷಷ್ಟಿ ಪಟ್ಟಣವೆಂಬ ಶಬ್ದಕ್ಕರ್ಥ. ಅಯ್ವತ್ತಾರು ಸೂಕ್ಷ್ಮನಾಳಂಗಳೆಂಬವು ವೀದಿಗೊಂಡಿರ್ಪುವೆಂಬುದೀಗ, ಛಪ್ಪನ್ನವೀದಿ ಎಂಬಶಬ್ದಕ್ಕರ್ಥ. ಈ ಪ್ರಪಂಚವೆಲ್ಲವನು ಉತ್ತರಿಸಿ, ಮೂವತ್ತಾರು ತತ್ವಂಗಳ ತಿಳಿದು ನೋಡುವ ಪರಿಯೆಂತೆಂದೊಡೆ ಎಂಬಲ್ಲಿ ಛತ್ತೀಸಪುರದ ರಚನೆಯ ನೋಡಬಲ್ಲೆಹೆವೆಂಬ ಶಬ್ದಕ್ಕರ್ಥ. ಆ ಮೂವತ್ತಾರು ತತ್ವಂಗಳ ನೋಡುವರೆ ತ್ರಿಕೋಣಮಂಟಪವೆಂಬ ಮಣಿಪೂರಕ ಕರ್ಣಿಕೆಯಲ್ಲಿ ನಾಭಿಮಧ್ಯ ದಿವಾಕರ ಎಂಬ ಶೃತ್ಯರ್ಥದಿಂ ಅಲ್ಲಿ ಜ್ಞಾನ ಪ್ರಕಾಶಿತವಾಗಿ ನಿಂದು ಷಡುಚಕ್ರಸ್ಥಾನದಲ್ಲಿರ್ಪ ಐವತ್ತೆರಡು ಬೀಜಾಕ್ಷರವ ತಿಳಿದು ನೋಡುವದೆಂಬುದೀಗ ತ್ರಿಕೋಣದ್ವಾರಮಂಟಪದ ಐವತ್ತೆರಡಕ್ಷರದ ಶಾಸನವ ತಿಳಿಯಲೋದಿ ಎಂಬ ಶಬ್ದಕ್ಕರ್ಥ. ಆ ಐವತ್ತೆರಡು ಬೀಜಾಕ್ಷರವ ತಿಳಿದು ಎಂಭತ್ತುನಾಲ್ಕುಲಕ್ಷಯೋನಿದ್ವಾರದೊಳು ತಿರಿಗಿ ಬರುತ್ತಿರ್ಪ ಜೀವನ ನಿಲವನರಿವುದೆಂಬುದೀಗ ಎಂಭತ್ತುನಾಲ್ಕುಲಕ್ಷದ್ವಾರದೊಳು ಹೊಕ್ಕು ಹೊರಡುವ ಜೀವನ ತಿಳಿದು ಎಂಬಶಬ್ದಕ್ಕರ್ಥ. ಆ ಜೀವನ ನಿಲವ ತಿಳಿದು ಈಡೆ ಪಿಂಗಳವೆಂಬ ಉತ್ತರ ದಕ್ಷಿಣ ನಾಳದಲ್ಲಿ ಬೀಸುವ ವಾಯುವ ನಿಲಿಸಿ ಪಶ್ಚಿಮನಾಳವೆಂಬ ಸುಷುಮ್ನೆಯಲ್ಲಿ ಪ್ರಾಣವಾಯುವನೆಯ್ದಿಸಿ ಅಲ್ಲಿ ಸಹಸ್ರದಳಕಮಲದೊಳು ತುಂಬಿ ತುಳುಕುವ ಅಮೃತವ ದಣಿಯುಂಡು ತೊಳಗಿ ಬೆಳಗುತ್ತಿರ್ಪ ಪರಂಜ್ಯೋತಿಯ ಶಿವಶರಣ ಬಲ್ಲವನಲ್ಲದೆ ಮಿಕ್ಕಿನ ಅಜ್ಞಾನಿಗಳರಿಯರೆಂಬುದೀಗ ದಕ್ಷಿಣದ್ವಾರದಿಂದುತ್ತರದ್ವಾರಕ್ಕೆ ಬಂದು ಪಶ್ಚಿಮವಾಯುವ ಕೊನೆಯ ಮೊನೆಯ ಮೇಲೆ ಬೆಳಗುವ ಪರಂಜ್ಯೋತಿಯ ನಿಮ್ಮ ಶರಣಬಲ್ಲನಲ್ಲದೆ ಲೋಕದ ಅಜ್ಞಾನಿಗಳೆತ್ತ ಬಲ್ಲರೆಂಬ ಶಬ್ದಕ್ಕರ್ಥ.

೯೫. ಅಗ್ನಿ ಮುಟ್ಟಲು ತೃಣ ಭಸ್ಮವಾದುದನೆಲ್ಲರುಬಲ್ಲರು 'ತೃಣದೊಳಗೆ ಅಗ್ನಿಯುಂಟೆಂಬುದ ತಿಳಿದು ನೋಡಿರೆ ಅಗ್ನಿ ಜಲವ ನುಂಗಿತ್ತು ಜಲ ಅಗ್ನಿಯ ನುಂಗಿತ್ತು. ಪೃಥ್ವಿ ಎಲ್ಲನ ನುಂಗಿತ್ತು ಆಕಾಶವನೆಯ್ದೆ ನುಂಗಿತ್ತು. ಅರಿದಿಹೆವೆಂಬ ಜಡರು ನೀವು ತಿಳಿದು ನೋಡಿರೆ ತಿಳಿಯಬಲ್ಲರೆ ಗುಹೇಶ್ವರನ ನಿಲವುತಾನೆ.

ಟೀಕು:— ಅಗ್ನಿ ಮುಟ್ಟದ ಮುನ್ನ ತೃಣದೊಳಗೆ ಅಗ್ನಿ ಮಂದಾಗ್ನಿಯಾಗಿ ಶ್ರಮಿಸಿಪ್ಪುದೆಂಬಹಾಂಗೆ ಲಿಂಗಮುಟ್ಟಲು ಅಂಗ ಲಿಂಗವೆಂಬುದು ಮಾತಲ್ಲ ಅದೇನುಕಾರಣವೆಂದೊಡೆ, ಲಿಂಗ ಮುಟ್ಟದ ಮುನ್ನವೆ ಅಂಗದೊಳಗೆ ಲಿಂಗನಿಕ್ಷ್ಟಯುವಾಗಿರ್ಪುದಾಗಿ ಲಿಂಗಸೋಂಕಿಂದ ಲಿಂಗ ಲಿಂಗವೆಯಾಯಿತ್ತು. ಇಂತಾದ ಬಳಿಕ ಅಗ್ನಿ ಎಂದರೆ ಜ್ಞಾನಾಗ್ನಿ ಜಲವೆಂದರೆ ಮನ ಆ ಸುಜ್ಞಾನಾಗ್ನಿ ಮನವವಗ್ರಹಿಸಿ ಆ ಮನವೇ ಜ್ಞಾನಾಗ್ನಿಯನವಗ್ರಹಿಸಿತ್ತೆಂಬುದೀಗ ಅಗ್ನಿ ಜಲವ ನುಂಗಿತ್ತು. ಜಲ ಅಗ್ನಿಯ ನುಂಗಿತ್ತೆಂಬ ಶಬ್ದಕ್ಕರ್ಥ. ಆ ನಿಜದ ನಿಲವು ಪೃಥ್ವಿ ಎಂಬತನುತ್ರಯವನು, ಅವಗ್ರಹಿಸಿತ್ತೆಂಬುದೀಗ ಪ್ರಥ್ವಿ ಎಲ್ಲವನುಂಗಿತ್ತೆಂಬ ಶಬ್ದಕ್ಕರ್ಥ. ಆ ನಿಜವು ಆಕಾಶವೆಂಬ ಆತ್ಮತತ್ವವನು ಅವಗ್ರಹಿಸಿತ್ತೆಂಬುದೀಗ ಆಕಾಶವನೆಲ್ಲವ ನುಂಗಿತ್ತೆಂಬ ಶಬ್ದಕ್ಕರ್ಥ. ಇದನರಿದಿಹೆನೆಂಬುದು ಜಡಬುದ್ಧಿಯುಳ್ಳವರಿಗೆ ಘಟಿಸವೆಂಬುದೀಗ ಅರಿದಿಹೆನೆಂಬ ಜಡರು ನೀವು ಕೇಳಿ ಎಂಬ ಶಬ್ದಕ್ಕರ್ಥ. ಈ ನಿಜವನರಿದಡೆ ಆತನೆ ಅಚ್ಚಶರಣ ಅದೇ ನಿಜತತ್ವವೆಂಬುದೀಗ ಅರಿಯಬಲ್ಲರೆ ಗುಹೇಶ್ವರನ ನಿಲವು ತಾನೆ ಎಂಬ ಶಬ್ದಕ್ಕರ್ಥ.

೯೬. ವೇದಪ್ರಮಾಣವಲ್ಲ; ಶಾಸ್ತ್ರಪ್ರಮಾಣವಲ್ಲ ಶಬ್ದಪ್ರಮಾಣ್ಪವಲ್ಲ ಕಾಣಿ ಭೋ ಲಿಂಗಕ್ಕೆ ಅಂಗಸಂಗದ ಮಧ್ಯದಲ್ಲಿರ್ಪ ಬೈಚಿಟು ಬಳಸಿದ ಗುಹೇಶ್ವರಾ. ನಿಮ್ಮ ಶರಣ.

ಟೀಕು:— ವೇದಶಾಸ್ತ್ರಪ್ರಮಾಣು ಲಿಂಗವಲ್ಲ ಅನುಭವಪ್ರಮಾಣು ಲಿಂಗವಲ್ಲ. ಮತ್ತೆಂತೆಂದೊಡೆ ಸರ್ವಾಂಗದೊಳಗೆ ಲಿಂಗಸಂಗನಿಕ್ಷೇಪಸಂಚಮಾಗಿರ್ಪ ಶರಣನಲ್ಲಿ ಲಿಂಗವು ಸನ್ನಿಹಿತವಾಗಿಹದೆಂಬುದೀವಚನಾರ್ಥ.

೯೭. ಅಗ್ನಿ ಮುಟ್ಟದುದುವೊ, ಆಕಾಶದಲ್ಲದೇಯೋ ಉದಕಮುಟ್ಟದುದುವೋ ನಿರಾಳದಲ್ಲದೆಯೋ, ಬ್ರಹ್ಮರಂಧ್ರದಲ್ಲದೆಯೋ ಭ್ರಮಿಸದೆ ನೋಡಾ! ಆವಂಗೆ ಅಸದಳ ಆವಂಗೆಯೂ ಅರಿಯಬಾರದು. ಏನು ಮಾಯೆ ಹೇಳಾ ಗುಹೇಶ್ವರಾ.

ಟೀಕು:— ಶಿವಾನುಭಾವಯೋಗದಿಂದ ಕುಂಡಲಾಗ್ನಿಯು ಬಲಿದೆತ್ತಲು ಆ ಸುಜ್ಞಾನಾಗ್ನಿಸುಷುಮ್ನದ್ವಾರದಲ್ಲಿ ವ್ಯೋಮಚಕ್ರವ ನೆಯ್ದಲು ಅದೀಗ ಅಗ್ನಿ ಮುಟ್ಟದುದುವೊ ಆಕಾಶದಲ್ಲದೆಯೋ ಎಂಬ ಶಬ್ದಕ್ಕರ್ಥ ಅಂತು ವ್ಯೋಮಚಕ್ರವನೆಯಿದಡೆ ಲಿಂಗಾನುಭಾವಸಂಪನ್ನತೆ ತಲೆದೋರಿ ಉದಕವೆಂದಡೆ ಮನಸ್ಸು ಆ ಮನಸ್ಸು ಉನ್ಮನಿತತ್ವವಾಗಿ ಆ ಲಿಂಗಾತ್ಮಭಾವದ ಕಳೆಯನವಗ್ರಹಿಸಿ ನಿರಾಳಶಿವತತ್ವದಲ್ಲಿ ವಿಶ್ರಮಿಸಿತ್ತೆಂಬುದೀಗ

ಉದಕ ಮುಟ್ಟದುದುವೋ ನಿರಾಳದಲ್ಲದೆಯೋ ಎಂಬ ಶಬ್ದಕ್ಕರ್ಥ. ನಿಜದಲ್ಲಿ ಆಕ್ರಮಿಸಿದ ಅರಿವು ಬ್ರಹ್ಮರಂಧ್ರದಲ್ಲಿ ಸ್ಥಾಯಿಯಾಗಿರುತ್ತಿರ್ಪುದು ಅದ ತಿಳಿಯಲಾರದೆಂಬುದೀಗ ಬ್ರಹ್ಮರಂಧ್ರದಲ್ಲದೇಯೋ ಭ್ರಮಿಸದೆ ನೋಡಾ ಎಂಬಶಬ್ದಕ್ಕರ್ಥ. ಅಂತು ಈ ನಿಲವನಾರು ಅರಿಯರೆಂಬುದೀಗ ಆವಂಗೆಯೂ ಅಸದಳ ಆವಂಗೆಯೂ ಅರಿಯಬಾರದೆಂಬುದೀವಚನಾರ್ಥ.

೯೮. ಗ್ರಾಮಮಧ್ಯದ ಮೇಲಣ ಮಾಮರ ಸೋಮ ಸೂರ್ಯರ ನುಂಗಿತ್ತಲ್ಲಾ! ಅಮರಗಣಂಗಳ ನೇಮದ ಮಂತ್ರ ಬ್ರಹ್ಮಾಂಡಕೋಟಿಯ ಮೀರಿತ್ತಲ್ಲಾ ಸುಮನಸುಜ್ಞಾನದಲಾಡುವ ಮಹಿಮಂಗೆ ನಿರ್ಮಳವಾಯಿತ್ತು ಗುಹೇಶ್ವರಾ.

ಟೀಕು:— ಗ್ರಾಮವೆಂದರೆ ತನು, ಆ ತನುವಿನೊಳಗೆ ಹುಟ್ಟಿದ ವಿವೇಕವೆಂಬವೃಕ್ಷ ಅಂತರಂಗದೊಳಗೆ ಪ್ರಭಾವಿಸಿ ಬೆಳೆದು ಈಡೆ, ಪಿಂಗಳೆಂಬ ಸೋಮ ಸೂರ್ಯ ವಾಯುಗಳ ಭಿನ್ನತ್ವಮಂ ಕೆಡಿಸಿತ್ತೆಂಬುದೀಗ ಗ್ರಾಮಮಧ್ಯದ ಮೇಲಣ ಮಾಮರ ಸೋಮ ಸೂರ್ಯರ ನುಂಗಿತ್ತಲ್ಲಾ! ಎಂಬಶಬ್ದಕ್ಕರ್ಥ. ಅಂತಪ್ಪ ಸದ್ವಿವೇಕಪರಿಪಕ್ವವಾದ ಅಂತರಂಗದೊಳಗಣ ಸಕಲಕರಣಂಗಳೆಲ್ಲವು ಭಿನ್ನಭಾವವಳಿದು, ಶಿವಭಾವವನೆಯ್ದಿ ಅಮರವೆಂದೊಡೆ, ನಿತ್ಯಪದವಿಗೆ ಹೆಸರು. ಅಂತಪ್ಪ ನಿತ್ಯಪದವಿಯ ಹಡದು ಶಿವಧ್ಯಾನಪರಾಯಣತ್ವವನೆಯ್ದಲು ಆ ಕರಣಂಗಳ ಸುಜ್ಞಾನಪ್ರಭೆ ಅನಂತಕೋಟಿ, ಬ್ರಹ್ಮಾಂಡವನು ಕಬಳೀ ಕರಿಸಿಕೊಂಡಿತ್ತೆಂಬುದೀಗ ಅಮರಗಣಂಗಳ ನೇಮದಮಂತ್ರಬ್ರಹ್ಮಾಂಡಕೋಟಿಯ ಮೀರಿತ್ತಲ್ಲಾ ಎಂಬಶಬ್ದಕ್ಕರ್ಥ. ಇಂತಹ ಸಕಲಕರಣಂಗಳೆಲ್ಲವು ನಿತ್ಯಪದವಿಯನೆಯ್ದಿದ ಶಿವಯೋಗಿಯ ಮನಸ್ಸು ಸುಜ್ಞಾನದಲ್ಲಿ ಲಯವಾಗಿ ಪರಮಾನಂದವನೆಯ್ದಿತ್ತಿರಲು, ಅದೀಗ ಸುಮನಸುಜ್ಞಾನದಲ್ಲಿ ಓಡಾಡುವ ಮಹಿಮಂಗೆ ನಿರ್ಮಳವಾಯಿತ್ತೆಂಬ ಶಬ್ದಕ್ಕರ್ಥ.

೯೯. ಪಂಚಬ್ರಹ್ಮಮೂರ್ತಿ ಪ್ರಣವಮಂತ್ರರೂಪ, ಪಂಚಮುಖ, ದಶಭುಜ, ಫಣಿಯ ಮಣಿಯ ಮೇಲೆ ನೋಡುತ್ತಿದ್ದಾನೆ. ಸಮತೆಸಮಾಧಿ ಎಂಬ ಸಮರಸದೊಳಗೆ ಚಂದ್ರಕಾಂತದ ಕೊಡದಲ್ಲಿ ಅಮೃತವ ತುಂಬಿ ಕೊಡನೊಡೆಯದೆಬೆಳಗುತ್ತಿದೆ ಗುಹೇಶ್ವರಾ ನಿಮ್ಮಶರಣ.



ಟೀಕು:— ಪಂಚಭೂತಂಗಳಳಿದು ಪಂಚಬ್ರಹ್ಮವೇ ತನುವಾಯಿತ್ತೆಂಬುದೀಗ ಪಂಚಬ್ರಹ್ಮಮೂರ್ತಿ ಎಂಬ ಶಬ್ದಕ್ಕರ್ಥ. ಪ್ರಣವಮಂತ್ರವೇ ಪ್ರಾಣಪ್ರತಿಷ್ಠೆಯಾಗಿರ್ದನೆಂಬುದೀಗ ಪ್ರಣವಮಂತ್ರರೂಪನೆಂಬ ಶಬ್ದಕ್ಕರ್ಥ. ಶ್ರೋತ್ರ ಸ್ಪರ್ಶ ಚಕ್ಷು ರಸನ ಘ್ರಾಣವೆಂಬಪಂಚಮುಖವಾಗಿ ದಶವಾಯುಗಳೇ ದಶಭುಜಂಗಳಾಗಿರ್ದುವೆಂಬುದೀಗ ಪಂಚಮುಖ ದಶಭುಜವೆಂಬಶಬ್ದಕ್ಕರ್ಥ. ಇಂತಪ್ಪ ಶರಣನು ಕುಂಡಲಿಸ್ಥಾನದೊಳಿರ್ಪ ಸಪ್ತಭುಜಂಗವೆಂಬ ಸುಜ್ಞಾನಪ್ರಭೆಯ ಮೇಲೆ ಏಕಾಗ್ರಚಿತ್ತವಾಗಿ ತನ್ನ ತಾ ನೋಡುತ್ತಿರ್ದನೆಂಬುದೀಗ ಫಣಿಯ ಮಣಿಯ ಮೇಲೆ ನೋಡುತ್ತಿದ್ದಾನೆ ಎಂಬ ಶಬ್ದಕ್ಕರ್ಥ ಇಂತು ತನ್ನ ತಾ ನೋಡುತ್ತ ಸಮರಸ ಸಮಾಧಿಯಲ್ಲಿ ಸನ್ನಿಹಿತನಾಗಿರ್ಪ ಆ ಶಿವಯೋಗಿಯ ಕಾಯವೇ ಚಂದ್ರಕಾಂತದ ಘಟ, ಆ ಕಾಯದಲ್ಲಿರ್ಪಸುಖರಸವೆ ಅಮೃತರಸವಾದ ಕಾರಣ ತನ್ನ ಸರ್ವಾಂಗದ ಪರಮಾಮೃತವ ಪರಿಪೂರ್ಣವಾಗಿ ವೇದಿಸಿಕೊಂಡು ಆ ಕಾಯ ಭಿನ್ನವಾಗದೆ ಮಹಾಜ್ಞಾನ ಪ್ರಕಾಶದೊಳಗೆ ತೊಳಗಿ ಬೆಳಗುತ್ತಿರ್ದಿತ್ತೆಂಬುದೀಗ ಚಂದ್ರಕಾಂತದ ಕೊಡದಲ್ಲಿ ಅಮೃತವ ತುಂಬಿ ಕೊಡನೊಡೆಯದೆ ಬೆಳಗುತ್ತಿದೆ ಗುಹೇಶ್ವರಾ ಎಂಬಶಬ್ದಕ್ಕರ್ಥ.

೧೦೦. ಕಂಗಳ ಬೆಳಗ ಕಲ್ಪಿಸಬಾರದು ಕರ್ಣದ ನಾದವ ವರ್ಣಿಸಬಾರದು. ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂದುದು ಮತಿಗೆ ಮಹಾಘನವಪ್ಪ ಸುಷಮ್ನನಾಳದ ಸುಯಿಧಾನವ ಪ್ರಮಾಣಿಸಬಾರದು ಅಣುರೇಣು ತೃಣ ಕಾಷ್ಟದೊಳಗೆ ಭರಿತ ಮನೋಹರ ನಿಂದ ನಿರಾಳ ಗುಹೇಶ್ವರಾ.

ಟೀಕು:— ಕಂಗಳೆಂದರೆ ಸುಜ್ಞಾನದೃಷ್ಟಿ ಆ ಸುಜ್ಞಾನದೃಷ್ಟಿಯ ಇಂತಹದಂತಹವೆಂದು ಕಲ್ಪಿಸಬಾರದೆಂಬುದೀಗ, ಕಂಗಳ ಬೆಳಗ ಕಲ್ಪಿಸಬಾರದೆಂಬ ಶಬ್ದಕ್ಕರ್ಥ ಆ ಶರಣನ ಅನಾಹತಕರ್ಣದ್ವಾರದಲ್ಲಿ ಪ್ರವೇಶಿಸಿರ್ಪ ಪ್ರಣವಬ್ರಹ್ಮವ ವರ್ಣಕ್ಕೆ ತರಬಾರದೆಂಬುದೀಗ ಕರ್ಣವ ನಾದವ ವರ್ಣಿಸಬಾರದೆಂಬ ಶಬ್ದಕ್ಕರ್ಥ. ಆ ಶರಣನ ಶಿವಾರ್ಪಿತ ಸುಖಪ್ರಸನ್ನದ ರುಚಿಯ ಪ್ರತಿಸ್ಥಲವಿಡಬಾರದೆಂಬುದೀಗ ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂಬಶಬ್ದಕ್ಕರ್ಥ. ಆ ಶರಣನ ಅನುಭಾವವನೆಡೆಗೊಂಡ ಮಹಾಘನಪ್ರಕಾಶಜೋತಿಯ ಪಶ್ಚಿಮಯೋಗದ ಪ್ರಮಾಣಕ್ಕೆ ತರಬಾರದೆಂಬುದೀಗ ಮತಿಗೆ ಮಹಾಘನವಪ್ಪ ಸುಷುಮ್ನನಾಳದಲ್ಲಿಯ ಸುಯಿಧಾನವ

ಪ್ರಮಾಣವಿಡಬಾರದೆಂಬ ಶಬ್ದಕ್ಕರ್ಥ ಆ ಶರಣನು ಸಚರಾಚರದೊಳಗೆ
ಸರಿಪೂರ್ಣನಾಗಿರ್ದನೆಂಬುದೀಗ ಅಣು ರೇಣು ತೃಣ ಕಾಷ್ಟದೊಳಗೆ
ಭರಿತಮನೋಹರ ನಿಂದ ನಿರಾಳವೆಂಬ ಶಬ್ದಕ್ಕರ್ಥ.

೧೦೧. ಸ್ಥೂಲಸೂಕ್ಷ್ಮದೊಳಗೆ ಬೆಳಗುವ ಮಹಾಬೆಳಗಾಗಿ ಹೊಳೆ
ವ ಜ್ಞಾನಜ್ಯೋತಿದಳಗಳನೆಲ್ಲವ ಮೀರಿ ನೆಳಲನುಂಗಿದ ಬಿಸಿಲಿನೊಳಗೆ
ಚಂದ್ರಮನುದಯ. ಜಲಧಿವಳಯದ ಬೆಳಸ ಹೇಳಲಾರಳವಲ್ಲ ಆಳು
ಆಳನ ನುಂಗಿ ಈರೇಳು ಭುವನವ ದಾಂಟಿ ಗುಹೇಶ್ವರ ನಿಂದ ನಿಲವು
ಹೊರಗು ಒಳಗನೆ ನುಂಗಿತ್ತು

ಟೀಕು:— ಸ್ಥೂಲತನು ಸೂಕ್ಷ್ಮತನುವೆಂಬ ಬಾಹ್ಯಾಭ್ಯಂತರದೊ
ಳಗೆ ಜ್ಞಾನಜೋತಿ ಪ್ರಕಾಶವಾಗಿರ್ದಿತ್ತೆಂಬುದೀಗ ಸ್ಥೂಲ ಸೂಕ್ಷ್ಮದೊ
ಳಗೆ ಬೆಳಗುವ ಮಹಾಬೆಳಗಾಗಿಯೆಂಬಶಬ್ದಕ್ಕರ್ಥ. ಆ ಸುಜ್ಞಾನಪ್ರ
ಕಾಶ ಷಡುಚಕ್ರಂಗಳ ದಳಂಗಳನೆಲ್ಲವನೂ ಅವಗ್ರಹಿಸಿ ಮೀರಿ ತೋರು
ತ್ತಿರ್ದಿತ್ತೆಂಬುದೀಗ ಹೊಳೆವ ಜ್ಞಾನಜ್ಯೋತಿದಳಗಳನೆಲ್ಲವ ಮೀರಿತ್ತೆಂಬ
ಶಬ್ದಕ್ಕರ್ಥ. ನೆಳಲೆಂದರೆ ಮರವೆ ಆ ಮರವೆಯನವಗ್ರಹಿಸಿದ ಜ್ಞಾನ
ಪ್ರಕಾಶದೊಳಗೆ ಅಮೃತಕರನುದಯವಾಗಿದ್ದಿತ್ತೆಂಬುದೀಗ ನೆಳಲ ನುಂ
ಗದ ಬಿಸಿಲಿನೊಳಗೆ ಚಂದ್ರಮನುದಯವೆಂಬ ಶಬ್ದಕ್ಕರ್ಥ. ಜಲಧಿ ವಳ
ಯವೆಂದರೆ ಪರಮಾಮೃತಾಂಬುಧಿ. ಅಂತಪ್ಪ ಪರಮಾಮೃತಾಂಬುಧಿಯ
ಬೆಳವಳಿಗೆಯನುಪಮಿಸಬಾರದೆಂಬುದೀಗ ಜಲಧಿವಳಯದ ಬೆಳಸ ಹೇಳ
ಲಾರಳವಲ್ಲವೆಂಬ ಶಬ್ದಕ್ಕರ್ಥ ಇಂತಪ್ಪ ಶಿವಶರಣನು ಆ ಶಿವತತ್ವವನ
ವಗ್ರಹಿಸಿ ಲೋಕಾದಿಲೋಕಂಗಳೆಲ್ಲವ ಮೀರಿ ಒಳ ಹೊರಗೆ ಏಕಾರ್ಥ
ವಾಗಿ ತೋರುತ್ತಿರ್ದನೆಂಬುದೀಗ ಆಳು ಆಳನ ನುಂಗಿ ಈರೇಳು ಭುವ
ನವ ದಾಂಟಿ ಗುಹೇಶ್ವರ ನಿಂದ ನಿಲವು ಹೊರಗು ಒಳಗನೆ ನುಂಗಿತ್ತೆಂಬ
ಶಬ್ದಕ್ಕರ್ಥ.

೧೦೨. ಪ್ರಾಣಲಿಂಗ ಪರಾಪರವೆಂದರಿದು, ಅಣು ರೇಣು ತೃಣ
ಕಾಷ್ಟದೊಳಗೆ ಕೂಡಿ ಪರಿಪೂರ್ಣಸದಾಶಿವನೆಂದರಿದು ಇಂತು ಕ್ಷಣ
ವೇದಿ ಅಂತರಂಗವ ವೇದಿಸಲ್ಕೆ ಅಗಣಿತಅಕ್ಷೋಭ್ವರ ತಾನೆಂದರಿದು ಪ್ರಣ
ವಪ್ರಭೆಯ ಮೇಲಣ ಪರಂಜೋತಿ ತಾನೆಂದರಿದ ಕಾರಣ ಗುಹೇಶ್ವರಾ
ನಿಮ್ಮ ಶರಣನು ಉಪಮಾತೀತನು.



ಟೀಕು:— ಅಂತರಂಗ ಬಹಿರಂಗದೊಳಗೆ ಆವರ್ಚಿಸಿಕೊಂಡಿರ್ಪ
ಪ್ರಾಣಲಿಂಗಪರಾಪರವಾಗಿ ಸಚರಾಚರದೊಳಗೆ ಕೂಡಿ ಪರಿಪೂರ್ಣವಾ
ಗಿಹುದೆಂಬುದೀಗ ಪ್ರಾಣಲಿಂಗಪರಾಪರವೆಂದರಿದು ಅಣು ರೇಣು ತೃಣ
ಕಾಷ್ಟದೊಳಗೆ ಕೂಡಿ ಪರಿಪೂರ್ಣಸದಾಶಿವನೆಂದರಿದು ಎಂಬ ಶಬ್ದಕ್ಕರ್ಥ
ಈ ಭೇದವನರಿದು ಕ್ಷಣಮಾತ್ರದಲ್ಲಿ ತನ್ನಲ್ಲಿ ತಾನು ಅಂತರ್ಗತವಾಗಲು
ತಾನೇ ಅಗಣಿತ ಅಕ್ಷಯನಹನೆಂಬುದೀಗ ಇಂಥ ಕ್ಷಣವೇದಿ ಅಂತರಂ
ಗವ ವೇಧಿಸಲ್ಕೆ ಅಗಣಿತ ಅಕ್ಷೋಭ್ವರ ತಾನೆಂದರಿದೆಂಬ ಶಬ್ದಕ್ಕರ್ಥ ಇಂತು
ತನ್ನಲ್ಲಿ ತಾನು ತದ್ಗತವಾದ ಶರಣನು ಪ್ರಣವಬ್ರಹ್ಮವ ಕೊನೆಯ
ಮೊನೆಯ ಮೇಲೆ ಅತ್ಯತಿಷ್ಠದ್ದಶಾಂಗುಲನಾಗಿ ಉಪಮಾತೀತನಾನೆಂಬು
ದೀಗ ಪ್ರಣವಪ್ರಭೆಯ ಮೇಲಣ ಪರಂಜ್ಯೋತಿತಾನೆಂದರಿದ ಕಾರಣ
ಗುಹೇಶ್ವರಾ ನಿಮ್ಮ ಶರಣನುಪಮಾತೀತನೆಂಬ ಶಬ್ದಕ್ಕರ್ಥ.

೧೦೩. ನಾರಿ ಹರಿಯಿತ್ತು. ಬಿಲ್ಲು ಮುರಿಯಿತ್ತು. ಅಂಬೇನ ಮಾಡು
ವದು. ಎಲೆಲೆ ನೋಡಿರಣ್ಣಾ! ಹೊತ್ತು ಹೋಯಿತ್ತು. ನೇಮ ನೀರಡಿಸಿತ್ತು
ಏನುಕಾರಣ ಹೇಳಾ ಗುಹೇಶ್ವರಾ.

ಟೀಕು:— ನಾರಿ ಎಂದೊಡೆ ಶಿವಭಾವ. ಬಿಲ್ಲೆಂದೊಡೆ ಮನ. ಅಂ
ಬೆಂದರೆ ಜ್ಞಾನ. ಇಂತಪ್ಪ ಶಿವಭಾವಭಿನ್ನವಾಗಿ ಮನಸ್ಸಂಕಲ್ಪವನೈಯ್ದಿದ
ಬಳಿಕ ಜ್ಞಾನವೇನುವನೂ ಅರಿಯದಂತಿರ್ದಿತ್ತೆಂಬುದೀಗ ನಾರಿಹರಿ
ಯಿತ್ತು ಬಿಲ್ಲುಮುರಿಯಿತ್ತು ಅಂಬೇನು ಮಾಡುವದೆಂಬ ಶಬ್ದಕ್ಕರ್ಥ
ಈ ಹೀಂಗೆ ಕಾಲ ದಿನಂಗಳು ಸವೆವುತ್ತಿರ್ದಕಾರಣ ತನ್ನಿಯಮವ್ರತವು
ಅತ್ಯಂತ ಅರ್ಥದೊಳಗಿರ್ದಿತ್ತೆಂಬುದೀಗ ಹೊತ್ತು ಹೋಯಿತ್ತು. ನೇಮ
ನೀರಡಿಸಿತ್ತೆಂಬ ಶಬ್ದಕ್ಕರ್ಥ.

೧೦೪. ಆಕಾಶವ ಕಪ್ಪೆ ನುಂಗಿದರೆ ಆಗಳೆ ಹತ್ತಿತ್ತು. ರಾಹು
ನೋಡಿದರೆ ಅಪೂರ್ವವತಿಶಯ. ಅಂಧಕ ಹಾವ ಹಿಡಿದ. ಇದು ಕಾರಣ
ಲೋಕಕ್ಕೆ ಅರುಹದೆ ನಾನರಿದೆನು ಗುಹೇಶ್ವರಾ.

ಟೀಕು:— ಆಕಾಶವೆಂದರೆ ಆತ್ಮನು ಕಪ್ಪೆ. ಎಂದರೆ ಬ್ರಹ್ಮರಂಧ್ರ
ದೊಳಗಿರ್ಪ ಶಾಂತಿಯೆಂಬ ಬಿಂದು. ಆ ಆತ್ಮನವಗ್ರಹಿಸಿ ಪರಮಾಮೃ
ತಸ್ವರೂಪವನೈಯ್ದಲು ಕುಂಡಲಿಸ್ಥಾನದ ಸುಪ್ತಭುಜಂಗನ ಮಹಾಪ್ರ
ಕಾಶದಿಂ ಸುಷುಮ್ನನಾಳದಲ್ಲಿ ಐಯ್ದಿ ಆ ಅಮೃತವನಾರೋಗಿಸುತ್ತಿರಲು

ಆದೀಗ ಆಕಾಶವ ಕಪ್ಪೆ ನುಂಗಿದರೆ ಆಗಳೆ ಹತ್ತಿತ್ತು ರಾಹು ನೋಡಿರೆ ಎಂಬ ಶಬ್ದಕ್ಕರ್ಥ. ಆ ಸಮರಸಯೋಗದ ಸುಖವನು ಭಿನ್ನದೃಷ್ಟಿಇಲ್ಲದೆ ಕಂಡು, ಕುಂಡಲಿಯ ಭುಜಂಗನನು ಆ ಸುಪ್ರಭಾಹಸ್ತದೊಳ್ಪಿಡಿದು, ಅವಿರಳಸಂಗವನೆಯ್ದುತ್ತಿರಲು ಅದೀಗ ಅಂಧಕ ಹಾವ ಹಿಡಿದನೆಂಬ ಶಬ್ದಕ್ಕರ್ಥ. ಈ ಭೆದವನು ಆ ಶಿವಶರಣ ಲೋಕಕ್ಕುಸುರದೆ ತಾನೆ ಅರಿದನೆಂಬುದೀಗ ಲೋಕಕ್ಕರುಹದೆ ನಾನರಿದೆನೆಂಬ ಶಬ್ದಕ್ಕರ್ಥ.

೧೦೫. ನೀರ ಸುಟ್ಟ ಕಿಚ್ಚಿನ ಬೂದಿಯ ಮರ್ಮವ ಬಲ್ಲರೆ ನೀವು ಹೇಳಿರೆ!. ಬಯಲ ಸುಟ್ಟ ಕಿಚ್ಚಿನ ಬೂದಿಯ 'ಕಂಡರೆ' ನೀವು ಹೇಳಿರೆ! ವಾಯುನಿಂದ ಸ್ಥಾನವ ಗುಹೇಶ್ವರ ನಿಂದ ನಿಲವ ಕಂಡಡೆ ನೀವು ಹೇಳಿರೆ!

ಟೀಕು:— ನೀರೆಂದರೆ ಮನಸ್ಸು ಆ ಮನಸ್ಸನ್ನು ಮೂಲಜ್ಞಾನಾಗ್ನಿಯಲ್ಲಿ ದಗ್ಧಾವ ಮಾಡಿದ ಬಳಿಕ ಅಲ್ಲಿ ಉಳಿದುದೆ ಚಿದ್ಭಸ್ಮನೆಂಬುದೀಗ ನೀರ ಸುಟ್ಟ ಕಿಚ್ಚಿನ ಬೂದಿಯ ಮರ್ಮವ ಬಲ್ಲರೆ ನೀವು ಹೇಳಿರೆ ಎಂಬಶಬ್ದಕ್ಕರ್ಥ. ಬಯಲೆಂದರೆ ಮಿಥ್ಯೆ. ಆ ಮಿಥ್ಯೆಯನು ಮಹಾಜ್ಞಾನಾಗ್ನಿಯಲ್ಲಿ ದಹನಮಾಡಿ ಉಳಿದುದೀಗ ಶಿವತತ್ವದ ನಿಜಪದದ ಮಹದೈಶ್ವರ್ಯವದೀಗ ಬಯಲ ಸುಟ್ಟ ಕಿಚ್ಚಿನ ಬೂದಿಯ ಕಂಡಡೆ ನೀವು ಹೇಳಿರೆ ಎಂಬ ಶಬ್ದಕ್ಕರ್ಥ.. ಆ ಮಹದೈಶ್ವರ್ಯವೇ ಜಗಚ್ಚೈತನ್ಯವಾಗಿರ್ಪುದು. ಅದೇ ಪರಬ್ರಹ್ಮವೆಂದರಿವುದೆಂಬುದೀಗ ವಾಯುನಿಂದ ಸ್ಥಾನವ ಗುಹೇಶ್ವರ ನಿಂದ ನಿಲವ ಕಂಡಡೆ ನೀವು ಹೇಳಿರೆ ಎಂಬಶಬ್ದಕ್ಕರ್ಥ.

೧೦೬. ಒಂದೂ ಬಾರದು. ಹೊಂದಿಯೂ ಹೊಂದದು. ನಿಂದು ನಿಲ್ಲದ ಪರಿಯ ನೋಡಾ! ಬಿಂದು ನಾದವ ನುಂಗಿತ್ತು. ಮತ್ತೊಂದಧಿಕಉಂಟೆ? ನವಖಂಡಪೃಥ್ವಿಯನೊಳಕೊಂಡ ಅಗಮ್ಯಸನ್ಮತದ ಸುಖವಿರಲು ಗುಹೇಶ್ವರನ ಬೇರೆ ಅರಸಲುಂಟೆ.

ಟೀಕು:— ಪರಮಜ್ಞಾನಿಯನು ಬ್ರಹ್ಮವು ಬಂದು ಆವರ್ಚಿಸಿ ಅಲ್ಲಿಯೇ ನಿಂದು ಮರಳಿ ಮತ್ತೆ ಒಮ್ಮೆ ಕೊಡಲಿಲ್ಲಾ ಅಗಲಿಲ್ಲವೆಂಬುದೀಗ ಒಂದುಬಾರದು ಎಂಬ ಶಬ್ದಕ್ಕರ್ಥ. ಆ ಬ್ರಹ್ಮವು ಶರಣನ ಸರ್ವಾಂಗದಲ್ಲಿ ಬೆರಸಿರ್ದು ಮರಳಿ ಬೆರಸಲಿಲ್ಲವೆಂಬುದೀಗ ಹೊಂದಿಯೂ ಹೊಂದದೆಂಬ ಶಬ್ದಕ್ಕರ್ಥ. ಆ ಶರಣಸನ್ನಿಹಿತವಾಗಿ ನಿಂದು ಅಲ್ಲಿ ಅನಾಶ್ರಯವಾದುದೆಂಬುದೀಗ ನಿಂದೂ ನಿಲ್ಲದೆಂಬ ಶಬ್ದಕ್ಕರ್ಥ. ಅಲ್ಲಿ ಅನಾಶ್ರಯನಾದ ಚಿದ್ಬಿಂದುವಿನಲ್ಲಿ ನಿಃಶಬ್ದವೇದ್ಯವಾಯಿತ್ತೆಂಬುದೀಗ ಒಂದು



ನಾದವನುಂಗಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಅಖಂಡಪರಿಪೂರ್ಣವಸ್ತು ತಾನೆಯಾಗಿರಲು ಬೇರೆ ಪರಬ್ರಹ್ಮವ ಅರಸಲಿಲ್ಲವೆಂಬುದೀಗ ಅಗಮ್ಯಸನ್ಮತಸುಖವಿರಲು ಗುಹೇಶ್ವರನ ಬೇರರಸಲಿಲ್ಲನೆಂಬ ಶಬ್ದಕ್ಕರ್ಥ.

೧೦೭. ನೆನಹು ನೆನೆವ ಮನದಲ್ಲಿಲ್ಲ. ತನುವಿನಾಸೆ ಮುನ್ನಿಲ್ಲ. ಮನ ಮನವನೊಳಕೊಂಡ ಘನ ಘನವನೇನೆಂಬೆ! ತನ್ನಲ್ಲಿ ತಾನೆಯಾಯಿತ್ತು. ನೆನೆಯಲಿಲ್ಲದ ನಿಂದ ನಿರಾಳ ಅನಾಗತ ವಾದುದ ಕಂಡು ನಾನು ಬೆರಗಾದೆ. ಅಂತು ಇಂತು ಎನಲಿಲ್ಲ ಚಿಂತೆಯಿಲ್ಲದ ಮಹಾಘನವ ಗುಹೇಶ್ವರಲಿಂಗವ ಬೇರೆ ಅರಸಲಿಲ್ಲ.

ಟೀಕು:— ಮನವೇ ಲಿಂಗವಾಯಿತ್ತಾಗಿ ನೆನೆಯಲಿಲ್ಲವಾಯಿತ್ತೆಂಬುದೀಗ ನೆನಹ ನೆನೆವ ಮನದಲ್ಲಿಲ್ಲವೆಂಬ ಶಬ್ದಕ್ಕರ್ಥ. ತನುವೇ ಆ ಮನೋಮೂರ್ತಿಲಿಂಗಕ್ಕೆ ಪೀಠಿಕೆಯಾದಕಾರಣ ಆ ತನುವಿನ ಮೇಲೆ ಆಶೆ ಇಲ್ಲವೆಂಬುದೀಗ ತನುವಿನಾಶೆ ಮುನ್ನವಿಲ್ಲವೆಂಬಶಬ್ದಕ್ಕರ್ಥ. ಆ ಉನ್ಮನಿತತ್ವವು ತನ್ನ ನಿಲವ ತಾನು ಘನ್ನವಿಟ್ಟರಿಯದೆ ಅಭಿನ್ನದಿಂದೊಳಕೊಂಡ ಘನಕ್ಕೆ ಘನವಾದುದೆಂಬುದೀಗ ಮನ ಮನವನೊಳಕೊಂಡು ಘನ ಘನವನೇನೆಂಬೆನೆಂಬ ಶಬ್ದಕ್ಕರ್ಥ. ಇಂತು ತನ್ನಲ್ಲಿ ತಾನೆ ನಿಜವನೆಯ್ದಿದ ಶರಣಂಗೆ ಅತೀತವಾಗಿ ತನುಮನಗಮನ ಕೆಟ್ಟಿತ್ತೆಂಬುದೀಗ ನೆನೆಯಲಿಲ್ಲದ ನಿಂದ ನಿರಾಳ ಅನಾಗತವಾದುದ ಕಂಡು ನಾನು ಬೆರಗಾದೆನೆಂಬ ಶಬ್ದಕ್ಕರ್ಥ. ಇಂತಪ್ಪ ಪರಬ್ರಹ್ಮದ ನಿಲವ ಅಂತಿತೆಂದೆನಲಿಲ್ಲ ಚಿಂತೆ ಇಲ್ಲದ ಮಹಾಘನಲಿಂಗವ ಬೆರಸಲಿಲ್ಲವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೦೮. ಆಯತವಾಯಿತು ಅನುಭಾವ ಸ್ವಾಯತವಾಯಿತು ಶಿವಜ್ಞಾನ ಸಮಾಧಾನವಾಯಿತು ಸದಾಚಾರ ಇಂತೀ ತ್ರಿವಿಧವು ಏಕಾರ್ಥವಾಗಿ, ಅರಿವಿನ ಹೃದಯಕಣ್ದೆರೆದು ಅನಂತ ಲೋಕಾಲೋಕದ ಅಸಂಖ್ಯಾತಮಹಾಗಣಂಗಳೆಲ್ಲರೂ, ಲಿಂಗಭಾವದಲ್ಲಿ ಭರಿತರಾಗಿ, ಗಗನಸಿದ್ಧಾಂತದಿಂದ ಉಪದೇಶಕ್ಕೆ ಬಂದು, ಭಕ್ತಿರಾಜ್ಯವನೆ ಹೊಕ್ಕು, ನಿಜಲಿಂಗಸುಕ್ಷೇತ್ರವನೆ ಕಂಡು, ಅಮೃತಸರೋವರದೊಳಗಣ, ವಿವೇಕವೃಕ್ಷಪಲ್ಲವಿಸಲು, ವಿರಕ್ತಿ ಎಂಬ ಪುಷ್ಪವಿಕಸಿತವಾಗಲು, ಪರಮಾನಂದದ ಮಠದೊಳಗೆ ಪರಿಣಾಮಪಶ್ಚಿಮಜ್ಯೋತಿಯಬೆಳಗಿನಲ್ಲಿ ಪರುಷದ ಸಿಂಹಾಸನವನಿಕ್ಕಿ, ಪ್ರಾಣಲಿಂಗಮೂರ್ತಗೊಂಡಿರಲು, ದಕ್ಷಿಣದ ದಾಂಟಿ ಉತ್ತರಾ

ಬ್ಧಿಯಲ್ಲಿ ನಿಂದು, ಅಖಂಡ ಪರಿಪೂರ್ಣಪೂಜೆಯ ಮಾಡುವರಿಗೆ ನಮೋ ನಮೋ ಎಂಬೆ ಗುಹೇಶ್ವರಾ.

ಟೀಕು:— ಅಂತರಂಗದಲ್ಲಿ ಅನುಭಾವ ಆಯತವಾಗಿ, ಅಳವಡಲು ಅದೀಗ, ಆಯತವಾಯಿತ್ತು ಅನುಭಾವವೆಂಬಶಬ್ದಕ್ಕರ್ಥ. ಅಂತು ಅನುಭಾವವಳವಡಲು ಸುಜ್ಞಾನ ಸನ್ನಿಹಿತವಾಯಿತ್ತೆಂಬುದೀಗ ಸ್ವಾಯತವಾಯಿತ್ತು ಶಿವಜ್ಞಾನವೆಂಬ ಶಬ್ದಕ್ಕರ್ಥ. ಅಂತು ಶಿವಜ್ಞಾನ ಸನ್ನಿಹಿತವಾದಲ್ಲಿ ಸತ್ಕ್ರಿಯೆಗಳೆಲ್ಲವು ನಿರ್ವೃತಿಯ ನೆಯ್ದಿದವೆಂಬುದೀಗ, ಸಮಾಧಾನವಾಯಿತ್ತು ಸದಾಚಾರವೆಂಬ ಶಬ್ದಕ್ಕರ್ಥ. ಇಂತು ಆಯತ ಸ್ವಾಯತ ಸದಾಚಾರ ತ್ರಿವಿಧವು ಏಕರಸವಾಗಿ, ಆ ಸುಜ್ಞಾನವೇ ಮಹಾಪ್ರಕಾಶವಾಯಿತ್ತೆಂಬುದೀಗ ಇಂತೀ ತ್ರಿವಿಧವು ಏಕಾರ್ಥವಾಗಿ, ಅರಿವಿನ ಹೃದಯ ಕಣ್ದೆರೆದು ಎಂಬ ಶಬ್ದಕ್ಕರ್ಥ. ಅಂತು ಸುಜ್ಞಾನಪ್ರಕಾಶವಾದ ಶಿವಜ್ಞಾನಿಯ ಸಕಲ ಕರಣಂಗಳೆಲ್ಲವು ಅನಂತಲೋಕಂಗಳನು ಅಲೋಕನವ ಮಾಡಿ, ಸಂಖ್ಯೆ ಇಲ್ಲದ ಶಿವಗಣತ್ವವಂ ಧರಿಸಿ, ಲಿಂಗಭಾವದಲ್ಲಿ ಪರಿಪೂರ್ಣಕರಣಂಗಳಾದವೆಂಬುದೀಗ, ಅನಂತ ಲೋಕಾಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರು ಲಿಂಗಭಾವದಲ್ಲಿ ಭರಿತರಾಗಿ ಎಂಬ ಶಬ್ದಕ್ಕರ್ಥ. ಗಗನವೆಂದರೆ ಆತ್ಮತತ್ವ ಆ ಆತ್ಮತತ್ವವಿದ್ಯೆಯಲ್ಲಿ ಸನ್ನದ್ಧನಾಗಿ, ಭಕ್ತಿ ಸಾಮ್ರಾಜ್ಯ ಸಂಪತ್ತ ಹಡದು, ಆ ಸದ್ಭಕ್ತಿಜ್ಞಾನದಿಂದ ಲಿಂಗಕ್ಷೇತ್ರವೆಂಬ ಪ್ರಾಣಲಿಂಗಸ್ಥಲವದ ಕಂಡು, ಲಿಂಗಸುಖಿಯಾದನೆಂಬುದೀಗ ಭಕ್ತಿರಾಜ್ಯವನೆ ಹೊಕ್ಕು, ನಿಜಲಿಂಗಸುಕ್ಷೇತ್ರವನೆ ಕಂಡು ಎಂಬ ಶಬ್ದಕ್ಕರ್ಥ. ಆ ಸುಖಮಯವೆಂಬ ಅಮೃತಸರೋವರದೊಳಗಿರ್ಪ ಸದುಹೃದಯಕಮಲವಿಕಸಿತವಾಗಿ, ಮಹಾವಿಚಾರವೆಂಬ ವಿವೇಕವೃಕ್ಷ ಪಲ್ಲವಿಸಿ, ವಿರಕ್ತಿವಾಸನೆ ಸಂಪೂರ್ಣವಾಗಿರ್ದಿತ್ತೆಂಬುದೀಗ, ಅಮೃತಸರೋವರದೊಳಗಣ, ವಿವೇಕವೃಕ್ಷಪಲ್ಲವಿಸಲು, ವಿರಕ್ತಿ ಎಂಬ ಪುಷ್ಪ ವಿಕಸಿತವಾಗಲು, ಎಂಬ ಶಬ್ದಕ್ಕರ್ಥ. ಇಂತು ವಿರಕ್ತಿವಾಸನೆ ಸಂಪೂರ್ಣಭಾವವನೆಯ್ದಿದ ಪರಮಾನಂದ ಪಿಂಡದೊಳಗೆ ಸುಷುಮ್ನನಾಳದಲ್ಲಿ ಪರಮರಾಜಯೋಗದಲ್ಲಿ ಸಂಯೋಗಿಯಾಗಿ, ಆ ಸುಖಪ್ರಕಾಶದೊಳು ಬ್ರಹ್ಮರಂಧ್ರವೆಂಬ ಪರುಷದ ಪೀಠವ ಮೇಲೆ, ಸ್ವಯಂ ಜ್ಯೋತಿರ್ಲಿಂಗವನು ಮೂರ್ತಿಗೊಳಿಸುತ್ತಿರಲು, ಅದೀಗ ಪರಮಾನಂದದ ಮಠದೊಳಗೆ ಪರಿಣಾಮ, ಪಶ್ಚಿಮಜ್ಯೋತಿಯ ಬೆಳಗಿನಲ್ಲಿ ಪರುಷದ ಸಿಂಹಾಸನದ ಮೇಲೆ



ಪ್ರಾಣಲಿಂಗಮೂರ್ತಿಗೊಂಡಿರಲು, ಎಂಬ ಶಬ್ದಕ್ಕರ್ಥ. ಪೂರ್ವ ಕಕ್ಷೆ ಯೋಗವಳಿದು ಉತ್ತರ ಕಕ್ಷೆ ಯೋಗದಲ್ಲಿ ನಿಜವನೆಯ್ದಿ ಅಖಂಡ ಪರಿಪೂರ್ಣ ಪೂಜೆಯ ಮಾಡುತ್ತಿರ್ಪಾತನೆ ದಿವ್ಯಶಿವಯೋಗಿ. ಎಂಬುದೀಗ ದಕ್ಷಿಣವ ದಾಂಟಿ ಉತ್ತರಾಬ್ಧಿಯಲ್ಲಿ ನಿಂದು ಅಖಂಡ ಪರಿಪೂರ್ಣ ಪೂಜೆಯ ಮಾಡುವರಿಗೆ ನಮೋ ನಮೋ ಎಂಬೆನೆಂಬ ಶಬ್ದಕ್ಕರ್ಥ.

೧೦೯. ಸ್ವಸ್ಥಾನ ಸ್ವಸ್ಥಿರದ ಸುಮನಮಂಟಪದೊಳಗೆ, ನಿತ್ಯ ನಿರಂಜನ ಪ್ರಭೆಯಬೆಳಗು ಶಿವಯೋಗದನುಭಾವ ಏಕಾರ್ಥವಾಗಿ, ಗುಹೇಶ್ವರಾ, ನಿಮ್ಮ ಶರಣನನುಪಮಸುಖಿಯಾಗಿರ್ದನು ॥

ಟೀಕು:— ಸ್ವಸ್ಥಪದ್ಮಾಸನದಲ್ಲಿ ಕುಳ್ಳಿರ್ದು, ಏಕಾಗ್ರಚಿತ್ತದಲ್ಲಿ ದೃಢವಾದ ಸುಮನವೆಂಬ ಮಂಟಪದೊಳಗೆ ನಿತ್ಯವಾದ ಜ್ಞಾನಪ್ರಕಾಶಮಹಾನುಭಾವದೊಳಗೆ ಐಕ್ಯವಾಗಿ, ಲಿಂಗಶರಣನು ಅನುಪಮಸುಖಿಯಾಗಿರ್ದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೧೦. ಆಧಾರದಲ್ಲಿ ಅಭವನು ಸ್ವಾಯತ, ಸ್ವಾದಿಷ್ಠಾನದಲ್ಲಿ ಮೃಡನು ಸ್ವಾಯತ, ಮಣಿಪೂರಕದಲ್ಲಿ ರುದ್ರನು ಸ್ವಾಯತ, ಅನಾಹತದಲ್ಲಿ ಈಶ್ವರನು ಸ್ವಾಯತ, ವಿಶುದ್ಧಿಯಲ್ಲಿ ಸದಾಶಿವನು ಸ್ವಾಯತ, ಆಜ್ಞಾಚಕ್ರದಲ್ಲಿ ಶಾಂತಾತೀತನು ಸ್ವಾಯತ, ಗುಹೇಶ್ವರಲಿಂಗವು, ವ್ಯೋಮ ವ್ಯೋಮವ ಕೂಡಿದಂತೆ.

ಟೀಕು:— ಷಡುಚಕ್ರಸ್ಥಾನದಲ್ಲಿ ಷಡುಸಾದಾಖ್ಯ ತತ್ವಂಗಳು ಸ್ವಾಯತವಾಗಿ, ಸರ್ವಾಂಗವು ಪರಿಪೂರ್ಣಾನುಭಾವವನೆಯ್ದಿದಕಾರಣ, ಆ ಶರಣಮಹಾಲಿಂಗವಲ್ಲಿ ಐಕ್ಯವಾಗಿರ್ದನೆಂಬುದೀ ವಚನದ ತಾತ್ಪರ್ಯಾರ್ಥ

೧೧೧. ಅದು ಮಂದರಗಿರಿಯ ಕೋಡು- ಬ್ರಹ್ಮನ ಶಿಖಿಯ ಬೇಡಿತ್ರಸೀವ ವರದಾನಿಯನೇನೆಂಬೆನು! ಆಡುತ್ತಾಡುತ್ತ, ಅನಲನರಿದು, ಎರಡೊಂದಾದ ಪರಿಯನೋಡಾ! ನೋಡುತ್ತ, ನೋಡುತ್ತ ಅನಲಿನಲ್ಲಿಯೆ ಅರತು ಕೂಡಿದ ಮಹಾಘನವನೇನೆಂಬೆ ಗುಹೇಶ್ವರಾ.

ಟೀಕು:— ಆಧಾರಸ್ಥಾನದಲ್ಲಿ ಉದಯವಾದ ಪ್ರಣವ, ಜ್ಞಾನ ಚಿದಹಂಕಾರದ ಗಿರಿಯಾಗಿರ್ಪ ತ್ರಿಕೂಟದ ಮಧ್ಯದಲ್ಲಿಗೈದಿ ಆನಂದಲೀಲೆಯಿಂದಾಡುತ್ತ, ಅಲ್ಲಿಂದ ಬ್ರಹ್ಮರಂಧ್ರಕೋಡೆಂದೆನಿಸುವ ಸುಷುಮ್ನೆಯ ತುರ್ಯದಲ್ಲಿಗೈಯ್ದಿ ಬ್ರಹ್ಮರಂಧ್ರವನೆದಿ, ನಿಜತತ್ವಸ್ವರೂಪವನೆಯ್ದಿರ್ಪ

ದಿವ್ಯಶಿವಯೋಗಿ, ಆರು ಬಂದು ತನ್ನ ಬೊಧಿಸೆ ದವರಿಗೆ ತನ್ನ ಸ್ವರೂಪವನೆ ವರಪ್ರದಾಯಕವಾಗಿ ಕೊಡುತ್ತಿರ್ಪನಾಗಿ, ಅದೀಗ, ಆಡು ಮುಂದರಗಿರಿಯ ಕೋಡು, ಬ್ರಹ್ಮನ ಶಿಖಿಯೆ ಬೇಡಿತ್ತನೀವ ವರದಾಸಿಯನೇನೆಂಬೆನೆಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗ ತನಗೆ ಸಾಧ್ಯವಾದ ಪರಿಯೆಂತೆಂದೊಡೆ, ಕುಂಡಲಾಗ್ನಿಪ್ರಕಾಶವನು ಪಶ್ಚಿಮದ್ವಾರದಲ್ಲಿ ಶಿವೋಹಂ ಎಂಬ ಶಬ್ದಸಂಯುಕ್ತದಿಂದ, ಆನಂದಲೀಲೆಯಿಂದೆಯ್ದಿ ಜ್ಞಾನಜ್ಞೇಯಂಗಳೆಂಬೆರಡನು ನಿಲಿಸಿ, ಏಕರಸವ ಮಾಡಿ ಅದ ನೋಡುತ್ತ ತನ್ನಲ್ಲಿಯೆ ಅರತು ಏಕವಾಯಿತ್ತೆಂಬುದೀಗ, ಆಡುತ್ತಾಡುತ್ತ ಅನಲವನರಿದು, ಎರಡೊಂದಾದ ಪರಿಯ ನೋಡಾ! ಎಂಬ ಶಬ್ದಕ್ಕರ್ಥ. ಅಂತು ಉಭಯ ಭಾವವಳಿದು, ತನ್ನ ನಿಜವ ತಾ ನೋಡುತ್ತ ನೋಡುತ್ತ ತನ್ನಲ್ಲಿ ತಾನರತು ಮಹಾ ಘನತತ್ವವೇ ಆಯಿತ್ತೆಂಬುದೀಗ ನೋಡುತ್ತ ನೋಡುತ್ತ ಅನಲನಲ್ಲಿಯೆ ಅರತು ಕೂಡಿದ ಮಹಾಘನವನೇನೆಂಬೆನೆಂಬ ಶಬ್ದಕ್ಕರ್ಥ

೧೧೨. ಧರೆಯ ಮೇಲುಳ್ಳ ಆರು ಹಿರಿಯರೆಲ್ಲರನು ನೆರಹಿ ಪರಿಯಾಯ ಪರೀಕ್ಷೆಯನೊರೆದು ಬಣ್ಣವ ನೋಡಿ, ಸರೋವರದ ಪುಷ್ಪದೊಳಗೆ ಭರಿತಪರಿಮಳತುಂಬಿ ಪರಮಜ್ಞಾನಜ್ಯೋತಿ, ಪರಬ್ರಹ್ಮವನು ಮೀರಿ ಪುರುಷರತ್ನದೊಳಡಗಿ, ಗುಹೇಶ್ವರ ನಿಂದ ನಿಲವು ಮೇರು ಗಗನವ ನುಂಗಿತ್ತು.

ಟೀಕುಃ— ತನ್ನಲ್ಲುಳ್ಳ ಪರಮಜ್ಞಾನಾನುಭಾವವನು ವಿಶ್ವದೊಳಗಣ ಎಲ್ಲ ಮಹಾನುಭಾವಿಗಳಿಂದ ಮಥನಿಸುತ್ತಿರಲು, ಅದೀಗ ಧರೆಯ ಮೇಲುಳ್ಳ ಆರು ಹಿರಿಯರೆಲ್ಲರನು ನೆರಹಿ, ಪರಿಯಾಯ ಪರೀಕ್ಷಯನೊರದು ಬಣ್ಣವ ನೋಡಿ ಎಂಬ ಶಬ್ದಕ್ಕರ್ಥ. ಮಹಾಜ್ಞಾನಿಗಳ ಸಂಗದಿಂದ ಮನದೊಳಗೆ ಸುಖರಸವೆಡೆಗೊಳಲು, ಆ ಸುಖರಸವೆಂಬ ಸರೋವರದೊಳಗೆ ತನ್ನ ಮಹಾನುಭಾವದ ಸದ್ವಾಸನೆ ಪರಿಪೂರ್ಣವಾಯಿತ್ತೆಂಬುದೀಗ ಸರೋವರದ ಪುಷ್ಪದೊಳಗೆ ಭರಿತಪರಿಮಳತುಂಬಿ ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣವಾಸನೆಯುಳವಟ್ಟ ಮಹಾಜ್ಞಾನಪರಬ್ರಹ್ಮವಿದು ಎಂಬ ಕುರುಹ ಮೀರಿ ಆ ಶರಣನೊಳಗೆ ಅಡಗಿತ್ತೆಂಬುದೀಗ, ಪರಮಜ್ಞಾನ ಜ್ಯೋತಿ ಪರಬ್ರಹ್ಮವ ಮೀರಿ ಪುರುಷರತ್ನದೊಳಗಡಗಿತ್ತೆಂಬ ಶಬ್ದಕ್ಕರ್ಥ. ಮೇರುವೆಂದರೆ ಅಹಂಕಾರ. ಗಗನವೆಂದರೆ ಆತ್ಮನು. ಅಂತಪ್ಪ ಅಹಂಕಾರ ಆತ್ಮನ ಕೂಡಿದರೆ 'ಅಹಂಪರಮಾತ್ಮಾ' ಎಂದು ತೋರುತ್ತಿರ್ಪುದು.



ಅಂತಪ್ಪ ತೋರಿಕೆಯನು ಆ ಶಿವಶರಣನ ನಿಲವು ತನ್ನೊಳಗೆ ಅಡಗಿಸಿಕೊಂಡಿತ್ತೆಂಬುದೀಗ, ಗುಹೇಶ್ವರ ನಿಂದ ನಿಲವು ಮೇರು ಗಗನವ ನುಂಗಿತ್ತೆಂಬ ಶಬ್ದಕ್ಕರ್ಥ.

೧೧೩. ತಾಳಮರದ ಮೇಲೊಂದು ಬಾವಿ ಇದ್ದಿತ್ತಲ್ಲಾ! ಆ ಬಾವಿಯ ತಡಿಯ ಹುಲ್ಲನೊಂದು ಮೊಲ ಬಂದು ಮೇಯಿತಲ್ಲಾ! ಕಾಯ ಸಹಿತ ಜೀವವ ಬಾಣಸವ ಮಾಡಲರಿಯರು ಗುಹೇಶ್ವರಾ ನಿಮ್ಮಾಣೆ.

ಟೀಕುಃ— ತಾಳಮರನೆಂದರೆ ತನುವೆಂಬವೃಕ್ಷ, ಆ ತನುವೆಂಬ ವೃಕ್ಷದೊಳಗೆ ಸಂಸಾರರಸ ಸಂಪೂರ್ಣವಪ್ಪ ವಿಷಯಕೂಪವಿರ್ಪಕಾರಣ ತಾಳಮರದ ಮೇಲೊಂದು ಬಾವಿ ಇದ್ದಿತ್ತಲಾ ಎಂಬ ಶಬ್ದಕ್ಕರ್ಥ, ಆ ವಿಷಯ ಕೂಪದ ತೀರದಲ್ಲಿ ಸಂಸಾರ ಪ್ರಪಂಚವೆಂಬ ತೃಣಹುಟ್ಟಿರಲು ಆ ತೃಣಪ್ರತಿಪತ್ತನು ಜೀವನು ಬಂದು, ಭಕ್ಷಿಸುತ್ತಿರಲು, ಅದೀಗ ಬಾವಿಯ ತಡಿಯ ಹುಲ್ಲನೊಂದು ಮೊಲ ಬಂದು ಮೇಯಿತ್ತಲ್ಲಾ ಎಂಬ ಶಬ್ಧಕ್ಕರ್ಥ. ಆ ಜೀವವನ್ನು ಮೂಲ ಅಹಂಕಾರಸಹಿತ ಮಹಾಜ್ಞಾನಾಗ್ನಿಯಲ್ಲಿ ದಹನವ ಮಾಡುವದೆ ಲಿಂಗೈಕ್ಯ. ಅಲ್ಲದುದೆ ಅಜ್ಞಾನವೆಂಬುದೀಗ ಕಾಯಸಹಿತಜೀವವ ಬಾಣಸವ ಮಾಡಲರಿಯರೆಂಬ ಶಬ್ದಕ್ಕರ್ಥ.

೧೧೪. ಏಳುತಾಳದ ಮೇಲೆ ಕೇಳುವ ಸುನಾದ ಸ್ಥೂಲ ಸೂಕ್ಷ್ಮ ಕೈಲಾಸದ ರಭಸದ ಗಂಗೆವಾಳುಕ ಸವೋರುದ್ರರ ತಿಂಥಿಣಿ ಗಗನ ಗಂಭೀರದ ಶಿವಸ್ತುತಿಯ ನೋಡಲೊಡನೆ, ಪಿಂಡ ಬ್ರಹ್ಮಾಂಡವಾಯಿತ್ತು. ಅಖಂಡಿತನಿರಾಳ ಗುಹೇಶ್ವರಾ.

ಟೀಕುಃ— ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದ ಶಿವಾನುಭವ ಯೋಗದಿಂ ಕುಂಡಲಾಗ್ನಿಯ ನೆಬ್ಬಿಸಿ, ಪೂರ್ವಯೋಗವುಂ ನಿರ್ಬಂಧಿಸಿ, ನಿಲಸಿ ಪಶ್ಚಿಮಯೋಗದೊಳು, ಸುಷುಮ್ನನಾಳದ ಸಪ್ತಗ್ರಂಥಗಳ ಕಟ್ಟುಚ್ಚಿ, ಬ್ರಹ್ಮರಂಧ್ರವನೆಯ್ದಿ, ಅಲ್ಲ ಸತ್ಪ್ರಣವ ಘೋಷಿಸುತ್ತಿರಲು, ಅದೀಗ, ಏಳುತಾಳದ ಮೇಲೆ ಕೇಳುವ ಸುನಾದವೆಂಬ ಶಬ್ದಕ್ಕರ್ಥ. ಆ ಸತ್ಪ್ರಣವ ಸ್ಥೂಲ ಸೂಕ್ಷ್ಮ ತನುವಿನಲ್ಲಿ ವೇದಿಸುತ್ತಿರಲು, ಆ ಕಾಯವೇ ಕೈಲಾಸವಾಗಿ, ಆ ಸತ್ಪ್ರಣವ ಘೋಷವನಾಲಂಗಿಸುತ್ತಿರಲು, ಆ ಶರಣನ ಕರಣಂಗಳೆಲ್ಲವು ಅಲ್ಲಿರ್ಪ ಪ್ರಾಣಲಿಂಗದ ಸೇವಕರಪ್ಪ ರುದ್ರಗಣಂಗಳಾಗಿರ್ಪರೆಂಬುದೀಗ ಸ್ಥೂಲ ಸೂಕ್ಷ್ಮ ಕೈಲಾಸದ ರಭಸ ಗಂಗೆ ವಾಳುಕ

ಸಮು ರುದ್ರರ ತಿಂಥಿಣಿ ಎಂಬ ಶಬ್ದಕ್ಕರ್ಥ. ಇಂತಪ್ಪ ಪರಮಾತ್ಮ ತತ್ವದ ಶಿವೋಹಂ ಎಂಬ ಸ್ತುತಿಯನು ಭಿನ್ನವಿಲ್ಲದೆ, ಉಚ್ಚರಿಸುತ್ತಿರಲು, ಆ ಶರಣನೊಳಗೆ ಅನಂತ ಬ್ರಹ್ಮಾಂಡಗಳೆಲ್ಲವು ಅಡಗಿ ನಿಜದೊಳಗೆ ಐಕ್ಯವಾದವೆಂಬುದೀಗ ಗಗನ ಗಂಭೀರದ ಶಿವಸ್ತುತಿಯು ನೋಡಲೊಡನೆ ಪಿಂಡ ಬ್ರಹ್ಮಾಂಡವಾಯಿತ್ತು. ಅಖಂಡಿತ ನಿರಾಳ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೧೫. ವಾಮಭಾಗದಲೊಂದು ಶಿಸು ಹುಟ್ಟಿತ್ತ ಕಂಡೆನು ಜೋಜೋ ಎಂದು ಜೋಗುಳವಾಡಿತ್ತ ಕಂಡೆನು. ಜೋಗುಳವಾಡಿದ ಶಿಸು ಅಲ್ಲಿಯೇ ಲಯವಾಯಿತ್ತು ಗುಹೇಶ್ವರನೆಂಬ ಶಬ್ದವಲ್ಲಿಯೇ ಲಯವಾಯಿತ್ತು.

ಟೀಕು:— ವಾಮಭಾಗವೆಂದರೆ ಶಕ್ತಿಗೆ ಹೆಸರು ಅಂತಪ್ಪ ಚಿಚ್ಛಕ್ತಿಯ ಸದ್ಭಾವನಪೀಠದಲ್ಲಿ ಚಿಲ್ಲಿಂಗ ಉದಯವಾಯಿತ್ತೆಂಬುದೀಗ, ವಾಮಭಾಗದಲೊಂದು ಶಿಸು ಹುಟ್ಟಿತ್ತ ಕಂಡೆನೆಂಬ ಶಬ್ದಕ್ಕರ್ಥ, ಆ ಚಿಲ್ಲಿಂಗಪ್ರಕಾಶ ಸರ್ವಾಂಗದಲ್ಲಿ ಆವರಿಸಿ, ತನ್ನ ತಾನೆ ಶಿವೋಹಂ ಎಂದು, ಸ್ತುತಿಸಿಕೊಳುತ್ತಿರ್ದಿತ್ತೆಂಬುದೀಗ, ಜೊಜೋ ಎಂದು ಜೋಗುಳವಾಡಿತ್ತ ಕಂಡೆನೆಂಬ ಶಬ್ದಾರ್ಥ. ಆ ಚಿಲ್ಲಿಂಗದ ಶಿವೋಹಂ ಎಂಬ ಅಹಂಕಾರ ತನ್ನಲ್ಲಿಯೇ ಅರಿತು ಶಬ್ದ ಮುಗ್ಧವಾಯಿತ್ತೆಂಬುದೀಗ ಜೋಗುಳವಾಡಿದ ಶಿಸು ಅಲ್ಲಿಯೇ ಲಯವಾಯಿತ್ತು. ಗುಹೇಶ್ವಶನೆಂಬ ಶಬ್ದವಲ್ಲಿಯೆ ಲಯವಾಯಿತ್ತೆಂಬ ಶಬ್ದಕ್ಕರ್ಥ

೧೧೬. ಬ್ರಹ್ಮ ವಿಷ್ಣುವ ನುಂಗಿ, ವಿಷ್ಣು ಬ್ರಹ್ಮನ ನುಂಗಿ, ಬ್ರಹ್ಮಾಂಡದೊಳಡಗಿ, ಶತಪತ್ರದಳಗಳ ಮೀರಿ ಚಿತ್ರಗುಪ್ತರ ಕೈಯಪತ್ರವ ನಿಲಿಸಿತ್ತು ಗುಹೇಶ್ವರನೆಂಬ ಲಿಂಗೈಕ್ಯವು.

ಟೀಕು:— ಶಿವಜ್ಞಾನೋದಯವಾಗಲೊಡನೆ, ಆ ಚಿದ್ಬ್ರಹ್ಮವು ವಿಷ್ಣುತತ್ವಸಂಬಂಧವಪ್ಪ ಅಂತರ್ದೆಹವನು ಆವರ್ಚಿಸಿ, ಅಂತಪ್ಪ ಅಂತರ್ದೇಹವೆ ಆ ಚಿದ್ಬ್ರಹ್ಮವನಾವರ್ಚಿಸಿತ್ತೆಂಬುದೀಗ, ಬ್ರಹ್ಮ ವಿಷ್ಣುವ ನುಂಗಿ, ವಿಷ್ಣು ಬ್ರಹ್ಮನ ನುಂಗಿ; ಎಂಬ ಶಬ್ದಕ್ಕರ್ಥ. ಆ ನಿಂದ ನಿಲವುಬ್ರಹ್ಮಾಂಡವೆಲ್ಲವನು ತನ್ನೊಳಗಡಗಿಸಿ, ಬ್ರಹ್ಮರಂಧ್ರವ ಶತಪತ್ರದಳಂಗಳೆಲ್ಲವನು ಮೀರಿತ್ತೆಂಬುದೀಗ, ಬ್ರಹ್ಮಾಂಡದೊಳಗಡಗಿ, ಶತಪತ್ರದಳಂಗಳೆಲ್ಲವ ಮೀರಿತ್ತೆಂಬ ಶಬ್ದಕ್ಕರ್ಥ. ಇಂತು ತನ್ನಲ್ಲಿ ತಾನು ನಿಜವನೆಯ್ದಿ, ಸಂಚಿತ, ಪ್ರಾರಬ್ಧ ಆಗಾಮಿ ಎಂಬ ಕರ್ಮಲಿಖಿತವನು ನಿವೃತ್ತಿಮಾಡಿ, ಪರಮ



ಸುಖವೇ ತಾನಾಗಿರ್ದನೆಂಬುದೀಗ, ಚಿತ್ರಗುಪ್ತರ ಕೈಯಪತ್ರವ ನಿಲಿಸಿತ್ತು. ಗುಹೇಶ್ವರನೆಂಬ ಲಿಂಗೈಕ್ಯರ ನಿಲವು ಎಂಬಶಬ್ದಕ್ಕರ್ಥ.

೧೧೭. ಈರೈದು ತತಿಯನರಿದು, ಧಾರೆವಟ್ಟಲನಿಕ್ಕಿ, ಧಾರುಣಿಯ ಮೇಲೆ, ತಂದಿರಿಸಿದವರಾರೊ? ಸೋಮ ಸೂರ್ಯರ ಹಿಡಿದೆಳೆತಂದು ವಾರಿಧಿಯ ತಡೆಯಲ್ಲಿ ಓಲೆಗಳದವರಾರೋ? ಊರಿಲ್ಲದ ಊರಿನೊಳಗೆ ಹೆಮ್ಮಾರಿ ಹೊಕ್ಕುದ ಕಂಡೆ. ಆರಯ್ಯ ಹೋಗಿ ನಾನಿಲ್ಲ ಗುಹೇಶ್ವರಾ.

ಟೀಕು:— ಈರೈದು ತಲೆ ಎಂದರೆ, ದಶೇಂದ್ರಿಯಗಳೆಂಬರ್ಥ, ಆ ದಶೇಂದ್ರಿಯಂಗಳ ಸಂಚಯವ ಭಿನ್ನವ ಮಾಡಿ, ಮಹಾನುಭಾವವಿವೇಕವೆಂಬ ಧಾರೆವಟ್ಟಲನಿಕ್ಕಿ, ಶೋಧಿಸಿ, ಅಸಾರವಬಿಟ್ಟು, ಲಿಂಗಸಾರವ ಹಿಡಿದು, ಆ ಶಿವಸಾರವನು ಏಕಗ್ರಾಹಕತ್ವದಿಂ ತನ್ನ ಸರ್ವಾಂಗದ ಮೇಲೆ ಧಾರಣವ ಮಾಡುತ್ತಿರಲು, ಅದೀಗ ಈರೈದು ತತಿಯನರಿದು, ಧಾರೆ ವಟ್ಟಲನಿಕ್ಕಿ ಧಾರುಣಿಯ ಮೇಲೆ ತಂದಿರಿಸಿದವರಾರೋ ಎಂಬ ಶಬ್ದಕ್ಕರ್ಥ. ಸೋಮನೆಂದಡೆ ಶಕ್ತಿ, ಸೂರ್ಯನೆಂದಡೆ ಶಿವನು, ಅಂತಪ್ಪ ಶಿವಶಕ್ತಿಗಳೆರಡನೂ ಏಕಾಗ್ರಹಕತ್ವದಿಂಪಿಡಿದು, ಆ ಪ್ರಾಣನ ಧರ್ಮವ ಕೊಂಡು, ಆ ದೇಹವೆಂಬ ಶಕ್ತಿಯ ಪ್ರಾರಬ್ದಲಿಪಿಯ ಪೋಲೆಯನುಭವವೆಂಬ ಸಮುದ್ರದ ತೀರದಲ್ಲಿ ನಿವೃತ್ತಿಮಾಡಿದನೆಂಬುದೀಗ, ಸೋಮ ಸೂರ್ಯ ಪಿಡಿದಳತಂದು ವಾರಿಧಿಯ ತಡೆಯಲ್ಲಿ ಓಲೆಗಳೆದವರಾರೋ ಎಂಬ ಶಬ್ದಕ್ಕರ್ಥ, ಊರೆಂದರೆ ದೇಹ ಅಂತಪ್ಪ ಧೇಹಭಾವವಿಲ್ಲದ ನಿರ್ದೇಹದಲ್ಲಿ ಹೆಮ್ಮಾರಿಯಂದರೆ ಮಹಾಮಾಯೆ ಆ ಮಹಾಮಾಯೆ ಆ ದೇಹದೊಳಗೆ ಮೂಲಾಹಂಕಾರ ಸ್ವರೂಪಿಣಿಯಾಗಿರುತ್ತಿರಲು, ಆ ಮೂಲಾಹಂಕಾರವೆಂಬ ಮಾಯೆಯ ನಿವೃತ್ತಿಯ ಮಾಡಿದ ಶಿವಯೋಗಿ ತನ್ನ ನಿಜದೊಳಗೆ ತಾನೆ ಐಕ್ಯವಾದನೆಂಬುದೀಗ, ಊರಿಲ್ಲದ ಊರೊಳಗೆ ಹೆಮ್ಮಾರಿ ಹೊಕ್ಕಡೆ, ಆರಯ್ಯಹೋಗಿ, ನಾನಿಲ್ಲ ಎಂಬ ಶಬ್ದಕ್ಕರ್ಥ.

೧೧೮. ಅನಾದಿಭ್ರೂಮಧ್ಯದಲ್ಲಿ ಐದು ಕುದುರೆಯ ಕಟ್ಟಿದ ಕಂಭ ಮುರಿಯಿತ್ತು. ಎಂಟಾನೆ ಬಿಟ್ಟೋಡಿದವು. ಹದಿನಾರು ಪ್ರಜೆ ಬೊಬ್ಬಿಡುತ್ತಿರ್ದರು. ಶತಪತ್ರಕಮಲಕರ್ಣಿಕಾಕುಹರ ಮಧ್ಯದಲ್ಲಿ ಗುಹೇಶ್ವರಲಿಂಗವು ಶಬ್ದಮುಗ್ಧನಾಗಿರ್ದನು.

ಟೀಕು:— ಅನಾದಿಭ್ರೂಮಧ್ಯವೆಂದರೆ, ಮಹಾಜ್ಞಾನದೃಷ್ಟಿ, ಅಂತಪ್ಪ ಮಹಾಜ್ಞಾನ, ಜ್ಞಾತೃ, ಜ್ಞಾನ, ಜ್ಞೇಯ, ತ್ರಿಕುಟವು ಒಂದಾಗಿಪ್ಪ

ಮಧ್ಯವೇ ಅನಾದಿಭ್ರೂಮಧ್ಯವೆನಿಸುವದು. ಅಂತಪ್ಪ ಭ್ರೂಮಧ್ಯದಲ್ಲಿ ಪಂಚಪ್ರಾಣವಾಯುಗಳ ಬಂಧಿಸಿ, ಆ ಸಂಧಿಸಿದ ಭಾವಸ್ತಂಭವನು ನಿರ್ಗುಣಸಮಾಧಿಯಿಂ ಭಗ್ನವ ಮಾಡಿ, ನಿರ್ಭಾವಸಾನ್ನಿಧ್ಯಾಯತವ ಮಾಡಲು ಆದೀಗ ಅನಾದಿಭ್ರೂಮಧ್ಯದಲ್ಲಿ ಐದು ಕುದುರೆಯ ಕಟ್ಟಿದ ಕಂಭ ಮುರಿಯಿತ್ತೆಂಬ ಶಬ್ದಕ್ಕರ್ಥ. ಆ ಭಿನ್ನಭಾವವಳಿಯಲು, ಅಷ್ಟಮದಂಗ ಳೆಂಬವು ನಷ್ಟವಾದವೆಂಬುದೀಗ, ಎಂಟಾನೆ ಬಿಟ್ಟೋಡಿದವೆಂಬ ಶಬ್ದ ಕ್ಕರ್ಥ. ಆ ಅಷ್ಟಮದಂಗಳು ನಷ್ಟವಾಗಲು ಊರ್ಧ್ವಚಕ್ರದಲ್ಲಿ ಷೋಡ ಶಮುಖವಾಗಿರ್ಪ ಅಮೃತಬಿಂದು ಒಂದೆ ಸಮರಸವಾಗಿ, ಪ್ರಣವಮೋ ಕ್ಷದಿಂದ ಚಿತ್ತಿನ ಮೇಲೆ ಸುರಿವುತ್ತಿರ್ದಿತ್ತೆಂಬುದೀಗ, ಹದಿನಾರು ಮಂದಿ ಬೊಬ್ಬಿಡುತ್ತಿದ್ದರೆಂಬ ಶಬ್ದಕ್ಕರ್ಥ ಇಂತು ಸರ್ವಾಂಗವು ಸುಧಾವರ್ಷ ದೊಳಗೆ ಮುಳುಗಲು, ಅಮೃತವನು ಆ ಮಹಾಲಿಂಗವು ದಣಿಯುಂಡು, ಸಹಸ್ರದಳಕಮಲಕರ್ಣಿಕಾಪೀಠದಲ್ಲಿ ಶಬ್ದಮುಗ್ಧವಾಗಿರ್ದಕಾರಣ ಆ ಶರಣ ಲಿಂಗೈಕ್ಯವಾದನೆಂಬುದೀಗ, ಶತಪತ್ರಕಮಲಕರ್ಣಿಕಾಮಧ್ಯದಲ್ಲಿ ಗುಹೇ ಶ್ವರಲಿಂಗವು ಮುಗ್ಧನಾಗಿರ್ದನೆಂಬ ಶಬ್ದಕ್ಕರ್ಥ.

೧೯೯. ಉದಕದೊಳಗೆ ಕಿಚ್ಚು ಹುಟ್ಟಿ, ಸುಡುವುದ ಕಂಡೆ. ಗಗನದ ಮೇಲೆ ಮಾಮರನ ಕಂಡೆ. ಪಕ್ಕವಿಲ್ಲದ ಹಕ್ಕಿ ಬಯಲ ನುಂಗಿತ್ತ ಕಂಡೆ. ಗುಹೇಶ್ವರಾ.

ಟೀಕು:— ಉದಕವೆಂದರೆ ಮನಸ್ಸು. ಆ ಮನದ ಮಧ್ಯದಲ್ಲಿ ಜ್ಞಾನ ಉದಯಿಸಿ ಅಂತರಂಗ ಬಹಿರಂಗ ವೆಲ್ಲವದು ದಹನವ ಮಾಡಿತ್ತೆಂಬು ದೀಗ, ಉದಕದೊಳಗೆ ಹುಟ್ಟಿ, ಸುಡುತ್ತಿರ್ಪುದ ಕಂಡೆನೆಂಬ ಶಬ್ದಕ್ಕರ್ಥ. ಇಂತು ಸರ್ವಾಂಗದ ಪ್ರಕೃತಿಗುಣಜ್ಞಾನಾಗ್ನಿಯಲ್ಲಿ ದಹನವಾಗಲು, ಆತ್ಮ ನೆಂಬ ತತ್ವದಲ್ಲಿ ವಿವೇಕವೆಂಬ ವೃಕ್ಷ ಹುಟ್ಟಿ, ಪಲ್ಲವಿಸಿತ್ತೆಂಬುದೀಗ, ಗಗನದ ಮೇಲೆ, ಮಾಮರನ ಕಂಡೆನೆಂಬ ಶಬ್ದಕ್ಕರ್ಥ. ಪಕ್ಕವೆಂದರೆ ಅಂತರಂಗ ಬಹಿರಂಗವೆಂಬ ಉಭಯದಳ, ಆ ಉಭಯದಳಂಗಳುಳ್ಳಾತ ಜೀವಹಂಸನು ಆ ಉಭಯದಳವಿಲ್ಲದಾತನು ಪರಮಹಂಸನು ಆ ಪರ ಮಹಂಸನು ನಿರಾಳತತ್ವವನವಗ್ರಹಿಸಿ ನಿಜವನೆಯ್ದಿತ್ತೆಂಬುದೀಗ, ಪಕ್ಕ ವಿಲ್ಲದ ಹಕ್ಕಿ ಬಯಲ ನುಂಗಿತ್ತೆಂಬ ಶಬ್ದಕ್ಕರ್ಥ.

೨೦೦. ಮೃಗದ ಸಂಚದ ತಲೆಯಲ್ಲಿ ಜಗದ ಬಯಲನಾಲಗೆ ಅಘಹರನ ದೃಷ್ಟಿಯಲ್ಲಿ ಬೊಬ್ಬೆಯುಬ್ಬರವಿದ್ದೋನೇ ಗಗನದ ವಾಯುವ



ಬೆಂಬಳಿವಿಡಿದು, ಅಗ್ನಿ ಅಪ್ಪಿನ ಕಳೆಯಲ್ಲಿ ಮೇದಿನಿಯಡಗಿತ್ತು ನೋಡಾ? ಮನದ ಬಗೆಯನವಗ್ರಹಿಸಿ, ಜಗದ ಬಣ್ಣವ ನುಂಗಿ ಗುಹೇಶ್ವರನೆಂಬ ಲಿಂಗದಲ್ಲಿ ನಿರಾಳವಾಯಿತ್ತು.

ಟೀಕು:— ಮೃಗವೆಂದರೆ ಜೀವನು, ಆ ಜೀವನ ಸಂಚದ ತಲೆ ಯಂದರೆ ಸುಜ್ಞಾನ, ಆ ಸುಜ್ಞಾನದಲ್ಲಿ ಜಗವನೆಲ್ಲವನು ತನ್ನೊಳಗಡಗಿ ಸಿಕೊಂಡಿರ್ಪ ಪರಮಾಮೃತವೆಂಬ ಜಿಹ್ವೆ ಇರ್ಪುದೆಂಬುದೀಗ, ಮೃಗದ ಸಂಚದ ತಲೆಯಲ್ಲಿ ಜಗದ ಬಯಲ ನಾಲಿಗೆಯೆಂಬ ಶಬ್ದಕ್ಕರ್ಥ. ಆ ಪರಮಾಮೃತ ಬಿಂದುವನು ಸುಜ್ಞಾನ ಚಕ್ಷುವಿನಿಂದೀಕ್ಷಿಸುತ್ತಿರಲು, ಅಲ್ಲಿ ಬಿಂದು 'ಶಿವೋಹಂಶಿವೋಹಂ' ಎನುತ್ತಿರ್ದಿತ್ತೆಂಬುದೀಗ ಅಘಹರನ ಬೊಬ್ಬೆಯುಬ್ಬರವಿದೇನೋ ಎಂಬಶಬ್ದಕ್ಕರ್ಥ, ಅಲ್ಲಿ ಶಿವೋಹಂ ಶಿವೋಹಂ ಎಂಬ ಅಹಂಕಾರ ತನ್ನನು ಆತ್ಮತತ್ವ ಪ್ರಾಣತತ್ವಂಗಳ ಸಮರಸ ಸಮ್ಮೇ ಳದಿಂ ಶಿವಯೋಗದ ಬಳಿವಿಡಿಪ್ಪೈಯ್ದಲು, ಅಗ್ನಿಅಪ್ಪಿನ ಗುಣಧರ್ಮ ಕರ್ಮದಲ್ಲಿಹ ಸ್ಥೂಲತನುವಡಗಿತ್ತೆಂಬುದೀಗ ಅಗ್ನಿ ಅಪ್ಪಿನ ಕಳೆಯಲ್ಲಿ ಮೇದಿನಿಯಡಗಿತ್ತೆಂಬಶಬ್ದಕ್ಕರ್ಥ. ಇಂತು ಅಂಗಭಾವವಳಿಯಲು, ಮನದ ಸ್ಥಿತಿಗತಿಯು ಅಳಿದು. ಜಗದ ವ್ಯವಹರಣೆಯೂ ತನ್ನೊಳಗೆಯೆ ಅಳಿದು, ಲಿಂಗೈಕ್ಯವಾದನೆಂಬುದೀಗ ಮನದ ಬಗೆಯನವಗ್ರಹಿಸಿ, ಜಗದ ಬಣ್ಣ ವನುಂಗಿ, ಗುಹೇಶ್ವರ ಲಿಂಗದಲ್ಲಿ ನಿರಾಳವಾಯಿತ್ತೆಂಬ ಶಬ್ದಕ್ಕರ್ಥ.

೨೦೧. ಸುಳಿದು ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ ಅರಿಯೆನರಿಯೆ ನೆರೆ ಶಿವಪಥವ ಗುಹೇಶ್ವರಲಿಂಗದ ನಿಜವನರಿದ ಬಳಿಕ, ಅರಿಯೆನರಿಯೆ ಲೋಕದ ಬಳಕೆಯ.

ಟೀಕು:— ಸಂಸಾರಧರ್ಮ ವ್ಯವಹಾರದಲ್ಲಿ ಮನಸ್ಸು ವ್ಯಾಕುಲವಾ ಗಿರ್ಪನ್ನಕ್ಕರ ಶಿವಜ್ಞಾನವರಿಯಲು ತೆರಹಿಲ್ಲವೆಂಬುದೀಗ, ಸುಳಿವ ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ, ಅರಿಯೆನರಿಯೆ ನೆರೆ ಶಿವಪಥವ ನೆಂಬ ಶಬ್ದಕ್ಕರ್ಥ. ಆ ಮನದ ವ್ಯಾಕುಲವಳಿದು, ಅಂಗದಲ್ಲಿ ಮನ ಲೀಯ್ಯವಾದ ಬಳಿಕ, ಆ ಲೋಕದ ಬಳಕೆಯನು ಅರಿಯಲಿಲ್ಲ. ಭಿನ್ನ ವಮಾಡಿ, ಪರಬ್ರಹ್ಮವನು ಅರಿಯಲಿಲ್ಲವೆಂಬುದೀಗ, ಗುಹೇಶ್ವರ ಲಿಂಗದ ನಿಜವನರಿದ ಬಳಿಕ ಅರಿಯೆನರಿಯೆ ಲೋಕದ ಬಳಿಕೆಯ ನೆಂಬ ಶಬ್ದಕ್ಕರ್ಥ.

೧೨೨. ಮನದ ಕಾಲಿತ್ತಲು, ತನುವಿನಕಾಲತ್ತಲು, ಅನುಭಾವದನುವ ನೆನೆವುತ್ತ, ನೆನೆವುತ್ತ ಗಮನಗೆಟ್ಟಿತ್ತು. ಲಿಂಗಮುಖದಲ್ಲಾದ ಸೂಚನೆಯ ಸುಖವ ಕಂಡು, ಗಮನಗೆಟ್ಟಿತ್ತು. ಅನುವಾಯಿತ್ತನುವಾಯಿತ್ತು. ಅಲ್ಲಿಯೇ ತಲ್ಲೀನವಾಯಿತ್ತು. ಗುಹೇಶ್ವರನೆಂಬ ಲಿಂಗೈಕ್ಯಂಗೆ

ಟೀಕು:— ಅನುಭಾವವಿಚಾರದಲ್ಲಿ ಮನ ಮಹಾಪದದಲ್ಲಿ ವೇದ್ಯವಾಗುತ್ತಿರಲು, ತನುವಿನ ಗಮನವೆಲ್ಲವು ನಷ್ಟವಾಯಿತ್ತೆಂಬುದೀಗ, ಮನದ ಕಾಲಿತ್ತಲು, ತನುವಿನ ಕಾಲತ್ತಲು, ಅನುಭಾವದನುವನು ನೆನೆವುತ್ತನೆನೆವುತ್ತ ಗಮನಕೆಟ್ಟಿತ್ತೆಂಬ ಶಬ್ದಕ್ಕರ್ಥ. ಅಂತು ಅಂಗಮುಖವಳಿದು, ಲಿಂಗವೇ ತಾನಾದ ಬಳಿಕ, ಅವಿವೇಕಗಮನ ತಾನು ಕೆಟ್ಟು, ತನ್ನ ನಿಜವು ತನಗೆ ಸಾಧ್ಯವಾಗಿ ನಿಜದಲ್ಲಿ ನಿರ್ಲೇಪವಾಯಿತ್ತೆಂಬುದೀಗ, ಲಿಂಗಮುಖದ ಸೂಚನೆಸುಖವ ಕಂಡು, ಗಮನಗೆಟ್ಟಿತ್ತು ಅನುವಾಯಿತ್ತನುವಾಯಿತ್ತು. ಅಲ್ಲಿಯೆ ತಲ್ಲೀನವಾಯಿತ್ತು ಗುಹೇಶ್ವರನೆಂಬ ಲಿಂಗೈಕ್ಯಂಗೆ ಎಂಬ ಶಬ್ದಕ್ಕರ್ಥ

೧೨೩. ಪರಿಮಳವಿರ್ದು ಗಮನಾಗಮನವಿಲ್ಲವಿದೇನೋ ಬಯಲು ಸಿಡಿಲು ಹೊಯ್ದಡೆ, ಹಿಂದೆ ಹೆಣನ ಸುಡುವರಿಲ್ಲ ಗುಹೇಶ್ವರಾ.

ಟೀಕು:— ಮಹಾನುಭಾವವಾಸನೆ ಅಂತರಂಗಬಹಿರಂಗದೊಳಗೆ ಪರಿಪೂರ್ಣವಾಗಲೊಡನೆ, ಇದು ಸಂಸಾರದ ಗಮನ ಇದು ನಿರ್ಗಮನವೆಂಬ ಈ ಎರಡು ನಷ್ಟವಾದವೆಂಬುದೀಗ, ಪರಿಮಳವಿರ್ದುಗಮನಾಗಮನವಿಲ್ಲವಿದೇನೋ ಎಂಬ ಶಬ್ದಕ್ಕರ್ಥ. ಆ ನಿರ್ದೇಹ ತನ್ನನು ಮಹಾಜ್ಞಾನಾಗ್ನಿ ಬಂದವಗ್ರಹಿಸಲು, ಹಿಂದುಮುಂದಿಲ್ಲದೆ ನಿರ್ಬಯಲಾಯಿತ್ತೆಂಬುದೀಗ, ಬಯಲ ಸಿಡಿಲು ಹೊಯ್ದಡೆ ಹಿಂದೆ ಹೆಣನ ಸುಡುವರಿಲ್ಲವೆಂಬ ಶಬ್ದಕ್ಕರ್ಥ.

೧೨೪. ಬೇರಿಲ್ಲದ ಗಿಡವಿಂಗೆ ಪರಿಮಳವಿಲ್ಲದ ಪುಷ್ಪ ಹುಟ್ಟಿ, ರೂಹಿಲ್ಲದ ಅನಲನು ಅವಗ್ರಹಿಸಿತ್ತು ನೋಡಾ! ವೃಕ್ಷವಲ್ಲದ ವಳದಲ್ಲಿ ಒಂದು ಪಕ್ಷಿ ಹುಟ್ಟಿತ್ತು ನೋಡಾ! ಅತ್ತಲಿತ್ತಲು ಕಾಣದೆ ನೆತ್ತಿಯ ನಯನದಲ್ಲಿ ನೋಡಿತ್ತಲ್ಲಾ! ನಿತ್ಯಾನಂದ ಪರಿಪೂರ್ಣದ ನಿಲವಿನ ಅಮೃತಬಿಂದುವಿನ ರಸವ ದಣಿಯುಂಡು, ಪಶ್ಚಿಮದಲ್ಲಿ ಗುಹೇಶ್ವರಲಿಂಗವ ಸ್ವೀಕರಿಸಿತ್ತಲ್ಲಾ.



ಟೀಕು:— ಶರೀರವೆಂಬ ವೃಕ್ಷಕ್ಕೆ ಮೂಲಾಹಂಕಾರವೇ ಜೀವಾಗಿಪ್ಪುದು. ಅಂತಪ್ಪ ಮೂಲಾಹಂಕಾರವೆಂಬ ಬೇರಿಲ್ಲದೆ ಉದಯಿಸಿದ ಶರೀರವಾವುದೆಂದೊಡೆ, ಚಿಂತ್ತೆಂಬ ಪಿಂಡ, ಆ ಚಿತ್ಪಿಂಡವೆಂಬ ವೃಕ್ಷದಲ್ಲಿ ಭಿನ್ನವಿಲ್ಲದ ಹೃತ್ಪಂಕಜವೆಂಬ ಪುಷ್ಪ ಹುಟ್ಟಿತೆಂಬುದೀಗ ಬೇರಿಲ್ಲದ ಗಿಡ ಪರಿಮಳವಿಲ್ಲದ ಪುಷ್ಪ ನೋಡಾ! ಎಂಬ ಶಬ್ದಕ್ಕರ್ಥ, ಆ ಹೃತ್ಕಮಲವನು ನಿರೂಪವೆನಿಸುವ ಜ್ಞಾನಾಗ್ನಿ ಬಂದು ಆವರ್ಚಿಸಲು, ಅದೀಗ ರೂಹಿಲ್ಲದ ಅನಲನವಗ್ರಹಿಸಿತ್ತೆಂಬ ಶಬ್ದಕ್ಕರ್ಥ, ಆ ಜ್ಞಾನ ಪ್ರಕಾಶದಿಂದ ದೇಹಭಾವ ನಷ್ಟವಾಗಿ, ದ್ವಿದಳವೆಂಬಲ್ಲಿರ್ಪ ಸತ್ಪ್ರಣವು ತಾನೆ ಪರಮಹಂಸನಾಗಿ, ಉದಯವಾಯಿತ್ತೆಂಬುದೀಗ, ವೃಕ್ಷವಿಲ್ಲದ ದಳದಲ್ಲಿ ಒಂದು ಪಕ್ಷಿ ಹುಟ್ಟಿತ್ತೆ ಬ ಶಬ್ದಕ್ಕರ್ಥ, ಆ ಪರಮಹಂಸನೆಂಬ ತತ್ವ ತಾನಲ್ಲದೆ ಮತ್ತೆನೂ ಇಲ್ಲನೆಂಬರಿವು, ಬ್ರಹ್ಮರಂಧ್ರಸ್ಥಾನದಲ್ಲಿ ಮಹಾಜ್ಞಾನಾಕ್ಷಿಯ ತೆಗೆದು, ನೋಡಿ, ನಿತ್ಯಾನಂದ ಪರಿಪೂರ್ಣ ಪರಮಾಮೃತವನು ದಣಿಯುಂಡು ಪಶ್ಚಿಮದ್ವಾರದಲ್ಲಿ ಮಹಾಲಿಂಗವನವಗ್ರಹಿಸಿತ್ತೆಂಬುದೀಗ ಅತ್ತಲಿತ್ತಲುಕಾಣದೆ, ನೆತ್ತಿಯನಯನದಲ್ಲಿ ನೋಡಿತ್ತಲ್ಲಾ ನಿತ್ಯಾನಂದ ಪರಿಪೂರ್ಣನ ನಿಲವಿನ ಅಮೃತವ ದಣಿಯುಂಡು, ಪಶ್ಚಿಮದಲ್ಲಿ ಗುಹೇಶ್ವರಲಿಂಗವ ಸ್ವೀಕರಿಸಿತ್ತೆಂಬ ಶಬ್ದಕ್ಕರ್ಥ.

೧೨೫. ನೆನಹು ಸತ್ತಿತ್ತು ಭ್ರಾಂತು ಬೆಂದಿತ್ತು. ಅರಿವು ಮರೆಯಿತ್ತು. ಕುರುಹುಗೆಟ್ಟಿತ್ತು. ಗತಿಯನರಸಲುಂಟೆ? ಮತಿಯನರಸಲುಂಟೆ? ಅಂಗವೆಲ್ಲಾ ನಷ್ಟವಾಗಿ, ಲಿಂಗಲೀನವಾಯಿತ್ತು. ಕಂಗಳಂಗದ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗುಹೇಶ್ವರಾ.

ಟೀಕು:— ಮನ ಘನವ ವೇಧಿಸಿ, ಆ ಘನ ಮನವ ವೇಧಿಸಿ, ಮನೋಲಯವಾದ ಕಾರಣ, ಆ ಮನದ ಬಯಕೆ ಭ್ರಾಂತು ಜ್ಞಾನಾಗ್ನಿಯಲ್ಲಿ ದಗ್ಧವಾಗಿ, ಪರಮವಶವಾಗಿ, ತನ್ನ ತಾ ಮರೆಯಿತ್ತೆಂಬುದೀಗ, ನೆನಹು ಸತ್ತಿತ್ತು ಭ್ರಾಂತು ಬೆಂದಿತ್ತು ಅರಿವು ಮರಯಿತ್ತೆಂಬ ಶಬ್ದಕ್ಕರ್ಥ. ತಾನೆಂಬುದಲ್ಲಿಯೂ ಇಲ್ಲವೆ, ನೀನೆಂಬುದು ಮುನ್ನವೇ ಇಲ್ಲದೆ, ಪರವಿದು ಇರವಿವೆಂಬ ವಿವೇಕವಿಲ್ಲದೆ, ಅಂಗದೊಳಗೆ ಲಿಂಗವೇಧಿಸಿ, ಲಿಂಗವಿಲ್ಲದೆ, ಇದ್ದಿತ್ತಾಗಿ, ಅದೀಗ ಕುರುಹ ಹುಟ್ಟಿತ್ತು. ಗತಿಯನರಸಲುಂಟೆ? ಮತಿಯನರಸಲುಂಟೆ? ಅಂಗವೆಲ್ಲಾನಷ್ಟವಾಗಿ, ಲಿಂಗಲೀನವಾಯಿತ್ತೆಂಬ ಶಬ್ದಕ್ಕರ್ಥ, ಜ್ಞಾನವೃಷ್ಟಿಯ ಪ್ರಭೆಯ ಪ್ರವಾಹವು ತಾನೆ

ಯಾಗಿ, ಭಿನ್ನವಿಟ್ಟು ನೋಡುವಡೇನು ಬೇರಿಲ್ಲವಾಗಿ, ಕಂಗಳಂಗದ ಕಳೆಯು ಬೆಳಗಿನ ಭಂಗ ಹಿಂಗಿತ್ತು. ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೨೬. ಬೆಕ್ಕು ನುಂಗಿದ ಕೋಳಿ ಸತ್ತು ಕೂಗಿತ್ತ ಕಂಡೆ, ಕೋಗಿಲೆ ಬಂದು ರವಿಯ ನುಂಗಿತ್ತ ಕಂಡೆ, ಸೆಜ್ಜೆ ಬೆಂದು ಶಿವದಾರ ಉಳಿಯಿತ್ತು. ಪ್ರಾಣಲಿಂಗವೆಂಬ ಶಬ್ದ ವ್ರತಗೇಡಿಯಾಯಿತ್ತು. ನೀರಮೇಲಣ ಹೆಜ್ಜೆಯನಾರು ಬಲ್ಲವರಿಲ್ಲ ಗುಹೇಶ್ವರನೆಂಬ ಶಬ್ದವಲ್ಲಿಯೂ ಇಲ್ಲ ಇಲ್ಲಿಯೂ ಇಲ್ಲ.

ಟೀಕು:— ಬೆಕ್ಕೆಂದರೆ ಪರಿಪೂರ್ಣಜ್ಞಾನ, ಅದೆಂತೆಂದೊಡೆ, ದಿವಾರಾತ್ರಿಯಲ್ಲಿ ಕಾಂಬುದಾಗಿ, ಕೋಳಿಯೆಂದರೆ ವೃತ್ತಿಜ್ಞಾನ, ಅಪೂರ್ಣಜ್ಞಾನವು ಆ ವೃತ್ತಿಜ್ಞಾನವನವಗ್ರಹಿಸಲು, ಅಖಂಡಿತಭಾವವಳಿದು, ಪರಿಪೂರ್ಣಜ್ಞಾನವೇ ಆಯಿತ್ತೆಂಬುದೀಗ, ಬೆಕ್ಕು ನುಂಗಿದ ಕೋಳಿ ಸತ್ತು ಕೂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಕರೆಯಕೋಗಿಲೆಯೆಂದರೆ ಕ್ರಿಯಾಶಕ್ತಿ, ಆ ಕ್ರಿಯಾಶಕ್ತಿಯು ರವಿಯೆಂಬ ಮಹಾಜ್ಞಾನ ಪ್ರಕಾಶವನವಗ್ರಹಿಸಿತ್ತೆಂಬುದೀಗ, ಕರೆಯ ಕೋಗಿಲೆಯು ರವಿ ಬಂದು ನುಗಿತ್ತ ಕಂಡೆನೆಂಬ ಶಬ್ದಕ್ಕರ್ಥ ಸೆಜ್ಜೆ ಎಂದರೆ ಮನ ಶಿವದಾರವೆಂದರೆ ಅನುಭಾವ, ಅಲ್ಲಿರ್ಪುದು ಜ್ಞಾನವೆಂಬ ಲಿಂಗ ಅಂತಪ್ಪ ಮನವಳಿದು, ಮಹಾನುಭಾವ ಉಳಿದರೆ, ಪ್ರಾಣಲಿಂಗವೆಂಬ ಭಿನ್ನ ನಾಮ ನಿಯಮವಳಿಯಿತ್ತೆಂಬುದೀಗ, ಸೆಜ್ಜೆ ಬೆಂದು ಶಿವದಾರ ಉಳಿಯಿತ್ತು ಪ್ರಾಣಲಿಂಗವೆಂಬ ಶಬ್ದ ವ್ರತಗೇಡಿಯಾಯಿತ್ತೆಂಬ ಶಬ್ದಕ್ಕರ್ಥ. ನೀರೆಂದರೆ ಮನ. ಆ ಮನವ ಮೆಟ್ಟಿ ನಡೆವ ಮಹಾ ಸತ್ಪಥದ ನಿಜವನಾರು ಅರಿಯಬಾರದು. ಇದೀಗ ನೀರ ಮೇಲಣ ಹೆಜ್ಜೆಯನಾರು ಬಲ್ಲವರಿಲ್ಲವೆಂಬ ಶಬ್ದಕ್ಕರ್ಥ. ಅದು ಕಾರಣ ಆ ಮಹಾಲಿಂಗದ ನಿಲವು ಅಲ್ಲಿ ಇಲ್ಲ ಇಲ್ಲ ಇಲ್ಲವೆಂಬ ಖಂಡಿತವಳಿದು, ಅಖಂಡಿತವಾಯಿತ್ತೆಂಬುದೀಗ ಗುಹೇಶ್ವರನೆಂಬ ಶಬ್ದವಲ್ಲಿಯೂ ಇಲ್ಲ ಇಲ್ಲಿಯೂ ಇಲ್ಲವೆಂಬ ಶಬ್ದಕ್ಕರ್ಥ

೧೨೭. ಅರುಹಿನ ಕುರುವಿದೇನೋ, ಒಳಗೆ ಅನುಮಿಷ ನಂದಿನಾಥನಿರಲು. ಪೂಜಿಸುವ ಭಕ್ತನಾರೋ, ಪೂಜೆಗೊಂಬದೇವರಾರೋ ಮುಂದು ಹಿಂದು ಹಿಂದು ಮುಂದಾದದರೆ ಗುಹೇಶ್ವರಾ ನೀನು ನಾನು, ನಾನು ನೀನಾದಡೆ.



ಟೀಕು:— ತನ್ನಲ್ಲಿ ತನ್ನ ನಿಜವ ನೆರೆಯರಿದೆ ಶರಣಂಗೆ ಅರಿವಿನ ಕುರುಹಿಲ್ಲ ಕುರುಹಿನ ಅರಿವಿಲ್ಲವೆಂಬುದೀಗ, ಅರಿವಿನ ಕುರುಹಿದೇನೋ ಎಂಬಶಬ್ದಕ್ಕರ್ಥ. ಇಂತು ಕುರುಹುಗೆಟ್ಟು, ಅಂತರ್ಮುಖದೊಳಗೆ, ಅನುಮಿಷನಾಗಿರಲು, ಅದೀಗ, ಒಳಗೆ ಅನುಮಿಷ ನಂದಿನಾಥನಿರಲು ಎಂಬ ಶಬ್ದಕ್ಕರ್ಥ. ಇಂತು ಒಳಹೊರಗೆ ಪರಿಪೂರ್ಣ ಬ್ರಹ್ಮ ತಾನಾದ ಬಳಿಕ ದೇವ ಭಕ್ತನೆಂಬ ಭಿನ್ನ ನಾಮವಿಲ್ಲವೆಂಬುದೀಗ, ಪೂಜಿಸುವ ಭಕ್ತನಾರೋ ಪೂಜೆಗೊಂಬ ದೇವನಾರೋ ಎಂಬ ಶಬ್ದಕ್ಕರ್ಥ. ಅದು ಕಾರಣ ಮುಂದಾದ ಶಿವನೇ ಭಕ್ತನಾದ, ಹಿಂದಾದ ಭಕ್ತನೇ ಶಿವನಾದ ನೆಂಬುದೀಗ, ಮುಂದು ಹಿಂದು, ಹಿಂದು ಮುಂದಾದರೆ, ಗುಹೇಶ್ವರಾ ನೀನು ನಾನು, ನಾನು ನೀನಾದರೆ, ಎಂಬ ಶಬ್ದಕ್ಕರ್ಥ.

೧೨೮. ಮಾರಾಯ ಘಾಯ ತಾಗಿ ನೊಂದೆನೆಂದರಿಯೆನಯ್ಯ ಇದೇನೆಂದರಿಯನಯ್ಯಾ! ಕಾಯಪಲ್ಲಟವಾಯಿತ್ತು ಗುಹೇಶ್ವರಲಿಂಗ ಸ್ವಾಯತವಾಗಿ.

ಟೀಕು:— ಅಂತರಂಗ ಬಹಿರಂಗದಲ್ಲಿ ಪರಶಿವತತ್ವವು ಪರಿಪೂರ್ಣವಾಗಿ, ಅವಗ್ರಹಿಸಲೊಡನೆ ಶರಣನಳಿದು, ಲಿಂಗವುಳಿದ ಬಳಿಕ, ಆ ಶರಣಂಗೆ ಅಳಿದನುಳಿದೆ, ನೊಂದೆ, ಬೆಂದೆ ಏನಾದೆಂತಾದೆನೆಂದೆನಲು, ತೆರಹಿಲ್ಲವೆಂಬುದೀವಚನಾರ್ಥ.

೧೨೯. ಪಿಂಡ ಮುಕ್ತನ, ಪದಮುಕ್ತನ, ರೂಪಮುಕ್ತನ ತಿಳಿದು ನೋಡಾ. ಪಿಂಡವೇ ಕುಂಡಲಿಶಕ್ತಿ ಪದವೇ ಆ ಹಂಸನ ಚರಿತ್ರ ಬಿಂದು ಅನಾಹತವೆಂದರಿದು, ಗುಹೇಶ್ವರಲಿಂಗವ ಕೂಡಿದೆನು.

ಟೀಕು:— ಮಹಾಲಿಂಗವನು ಶರಣನವಗ್ರಹಿಸಿ, ಆ ಶಿವಶರಣನ ಆ ಮಹಾಲಿಂಗವವಗ್ರಹಿಸಿ, ಲಿಂಗಶರಣನೆಂಬ ಉಭಯ ಸಂಬಂಧವಳಿದು, ನಿಜತತ್ವವೇ ತಾನಾದ ಬಳಿಕ ಪಿಂಡವೆಂಬ ಆಧಾರಶಕ್ತಿಯೂ ಮುಕ್ತವಾಯಿತ್ತು. ಪದವೆಂಬ ಹಂಸನ ಚರಿತ್ರವೂ ಮುಕ್ತವಾಯಿತ್ತು. ರೂಪೆಂಬ ಅನಾಹತಬಿಂದುವು ಮುಕ್ತವಾಯಿತ್ತು. ಇಂತೀ ತ್ರಿವಿಧವು ಮುಗಿವಾಗಿ, ಶರಣ ತಾನುತಾನಾದನೆಂಬುದೀಗ ವಚನಾರ್ಥ.

೧೩೦. ಅಂಗವಿಲ್ಲಾಗಿ, ಅನ್ಯಸಂಗವಿಲ್ಲಯ್ಯ! ಅನ್ಯಸಂಗವಿಲ್ಲಾಗಿ, ಮತ್ತೊಂದ ವಿವರಿಸಲಿಲ್ಲಯ್ಯಾ! ಮತ್ತೊಂದು ವಿವರಿಸಲಿಲ್ಲಾಗಿ ನಿಸ್ಸಂಗವಾಯಿತ್ತಯ್ಯಾ! ಗುಹೇಶ್ವರ ನಿಮ್ಮ ನಾಮ ಎಂತುಟಯ್ಯಾ.

ಟೀಕು:-- ಸರ್ವಾಂಗವು ಲಿಂಗದಲ್ಲಿ ಐಕ್ಯವಾದ ಬಳಿಕ. ಆ ಶರಣಂಗೆ ಅಂಗವಿಲ್ಲ. ಅಂಗವಿಲ್ಲಾಗಿ ಅನ್ಯಸಂಗವಿಲ್ಲ. ಅನ್ಯಸಂಗವಿಲ್ಲಾಗಿ, ಮತ್ತೊಂದು ವಿವರಿಸಲಿಲ್ಲ. ಮತ್ತೊಂದ ವಿವರಿಸಿ ನುಡಿಯಲಿಲ್ಲಾಗಿ, ನಿಶ್ಶಬ್ದವಾಯಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

೧೩೧. ನೆನೆ ನೆನೆಯೆಂದೊಡೆ ಏನ ನೆನೆವೆನಯ್ಯಾ ಎನ್ನ ಕಾಯವೇ ಕೈಲಾಸವಾಯಿತ್ತು. ಮನವೇ ಲಿಂಗವಾಯಿತ್ತು. ತನುವೇ ಸೆಜ್ಜೆಯಾಯಿತ್ತು. ನೆನೆವಡೆ ದೇವನುಂಟೆ? ನೋಡುವಡೆ ಭಕ್ತನುಂಟೆ? ಗುಹೇಶ್ವರಲಿಂಗ ಲೀಯ್ಯವಾಯಿತ್ತು.

ಟೀಕು:--ಅಂಗದ ಮೇಲೆ ಲಿಂಗವರಿತು, ಮನದ ಮೇಲೆ ಜ್ಞಾನವರಿತು, ಮಹಾಜ್ಞಾನಮೂರ್ತಿ ಶರಣನಾದ ಬಳಿಕ, ಆ ಶರಣ ಮನೋಲಯವಾದ ನಿತ್ಯನಿರಂಜನನಾದ ಕಾರಣ ತಾನಲ್ಲದೆ, ಮತ್ತೇನೂ ಇಲ್ಲವಾಗ, ನೆನೆ ನೆನೆ ಎಂದರೆ ಏನ ನೆನೆವೆನಯ್ಯಾ! ಎಂಬ ಶಬ್ದಕ್ಕರ್ಥ, ಇಂತಪ್ಪ ಶರಣನ ತನುವೆ ಸೆಜ್ಜೆ, ಮನವೇ ಲಿಂಗ, ಅರಿವೆ ಕೈಲಾಸವಾಗಿ ದೇವ ಭಕ್ತನೆಂಬ ಉಭಯನಾಮ ನಷ್ಟವಾಯಿತ್ತೆಂಬುದೀ ವಚನಾರ್ಥ

೧೩೨. ಆನು ನೀನೆಂಬುದು ತಾನು ಇಲ್ಲ. ತಾನಿವ ಬಳಿಕೇನು ಇಲ್ಲ. ಇಲ್ಲಿ ಇಲ್ಲ. ಇಲ್ಲದ ಇಲ್ಲವೆ ಎಲ್ಲಿಂದ ಒಪ್ಪದೋ ಅನುವನರಿತು, ತನುಮರೆದು ಭಾವರಹಿತ ಗುಹೇಶ್ವರಾ.

ಟೀಕು:-- ಲಿಂಗವೆ. ಶರಣ, ಶರಣನೇ ಲಿಂಗವಾದ ಬಳಿಕ ನಾನು ನೀನೆಂಬುದಿಲ್ಲ. ಇಂತು ತಾನು ತಾನಾದ ಕಾರಣ ಏನು ಇಲ್ಲಿ ಇಲ್ಲವೆಂಬುದನರಿದು ನುಡಿಯಲು ಇಲ್ಲ. ತನ್ನನುವ ತಾನರಿದೆನೆಂದು ಆ ಅನುವ ಮರಳಿ ಅರಿಯತೆರಹಿಲ್ಲವೆಂಬುದೀ ವಚನಾರ್ಥ.

೧೩೩. ಗಿಡುವಿನ ಮೇಲಣ ತುಂಬಿ, ಕೂಡೆ ವಿಕಸಿತವಾಯಿತ್ತು. ತುಂಬಿ ನೋಡಾ! ಆತುಮ ತುಂಬಿ, ತುಂಬಿಪರಮಾತುಮ ತುಂಬಿ. ನೋಡಾ! ಗುಹೇಶ್ವರ ಲಿಂಗಕ್ಕೆರಗಿ ನಿಬ್ಬೆರಗಾಯಿತ್ತು ತುಂಬಿ ನೋಡಾ!

ಟೀಕು:-- ಗಿಡವೆಂದರೆ ತನುವಿಗೆ ಪೆಸರು. ಅಂತಪ್ಪ ತನುವಿನ ಮೇಲೆ ಲಿಂಗಸ್ವಾಯತವಾಗಿ, ಸರ್ವಾಂಗದೊಳು ಆ ಲಿಂಗವು ತುಂಬಲು, ಜ್ಞಾನ ವಿಕಾಸವಾಯಿತ್ತೆಂಬುದೀಗ, ಗಿಡುವಿನ ಮೇಲಣ ತುಂಬಿ ಕೂಡೆ ವಿಕಸಿತವಾಯತ್ತು. ತುಂಬಿ ನೋಡಾ! ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣ ಜ್ಞಾನ ಆತ್ಮ ಪರಮಾತ್ಮಂಗಳೊಳಗೆಯೂ ಅಖಂಡ ಪರಿಪೂರ್ಣ



ವಾಗಿದ್ದಿತ್ತೆಂಬುದೀಗ, ಆತುಮ ತುಂಬಿ ತುಂಬಿ ಪರಮಾತುಮ ತುಂಬಿ ನೋಡಾ! ಎಂಬ ಶಬ್ದಕ್ಕರ್ಥ. ಆ ಪರಿಪೂರ್ಣಜ್ಞಾನ ಆ ಮಹಾಲಿಂಗವನು ಅವಗ್ರಹಿಸಿ ಪರಮಕಾಷ್ಟೆಯನೆಯ್ದಿ ತಾನೆಯಾಗಿದ್ದಿತ್ತೆಂಬುದೀಗ, ಗುಹೇಶ್ವರಲಿಂಗಕ್ಕೆರಗಿ ನಿಬ್ಬೆರಗಾಯಿತ್ತು. ತುಂಬಿ. ನೋಡಾ ಎಂಬ ಶಬ್ದಕ್ಕರ್ಥ.

೧೩೪. ಅಂತರಂಗಸನ್ನಿಹಿತ, ಬಹಿರಂಗನಿಶ್ಚಿಂತವೊ ಅಯ್ಯಾ! ತನು ತನ್ನ ಸುಖ, ಮನ ಪರಮ ಸುಖ, ಅದುಕಾರಣ, ಕಾಯ ಮಾಯವೋ ಗುಹೇಶ್ವರ ನಿರಾಳವೋ ಅಯ್ಯಾ.

ಟೀಕು:-- ಅಂತರಂಗದಲ್ಲಿ ಪ್ರಾಣಲಿಂಗ ಸಂಬಂಧ ಪರಿಪೂರ್ಣವಾಗಲು, ಬಹಿರಂಗದ ಕ್ರಿಯಾವರ್ತನೆಗಳೆಲ್ಲವು ಅರಿದು, ನಿಶ್ಚಿಂತವಾಯಿತ್ತೆಂಬುದೀಗ, ಅಂತರಂಗಸನ್ನಿಹಿತ, ಬಹಿರಂಗನಿಶ್ಚಿಂತವೊ ಅಯ್ಯಾ! ಎಂಬ ಶಬ್ದಕ್ಕರ್ಥ. ಅದುಕಾರಣ, ತನುವೇ ತನ್ನ ಸ್ವತಂತ್ರ ಸುಖ, ಅಲ್ಲಿಪ್ಪ ಮನವೇ ಪರಮ ಸುಖವೆಂಬುದೀಗ, ತನು ತನ್ನ ಸುಖ, ಮನ ಪರಮ ಸುಖವೆಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಕಾಯವು ನಿರ್ಮಾಯ ನಿರಾಳವಾಯಿತ್ತೆಂಬುದೀಗ ಅದು ಕಾರಣ ಕಾಯಮಾಯವೊ, ಗುಹೇಶ್ವರ ನಿರಾಳವೊ ಅಯ್ಯಾ ಎಂಬ ಶಬ್ದಕ್ಕರ್ಥ.

೧೩೫. ಅಂಗದ ಮೇಲೆ, ಲಿಂಗವರಿತು, ಲಿಂಗದ ಮೇಲೆ ಅಂಗವರಿತು, ಭಾವ ತುಂಬಿ, ಪರಿಣಾಮವರಿತು. ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದು ಗುಹೇಶ್ವರಾ.

ಟೀಕು:-- ಸರ್ವಾಂಗಲಿಂಗ ಸಂಬಂಧವಾಗಲು, ಸನ್ನಿಹಿತವಾಗಲು, ಆ ಅಂಗವೇ ಲಿಂಗ, ಆ ಲಿಂಗವೇ ಅಂಗವಾಗಿಪ್ಪುದದಾಗಿ, ಆ ಲಿಂಗದಲ್ಲಿ ಅಂಗವು ಅರಿತುದು. ಆ ಲಿಂಗದಲ್ಲಿ ಭಾವ ಪರಪೂರ್ಣವಾಯಿತ್ತು. ಆ ಲಿಂಗದಲ್ಲಿ ಹಡದ ಪ್ರಸನ್ನ ಸುಖವು ಇದಂತೊಮ್ಮೆನ್ನದಿಪ್ಪ ಕಾರಣ, ಪರಿಣಾಮವರತುದೆಂಬ ಶಬ್ದಕ್ಕರ್ಥ. ಇಂತು ನಾಮವಿಲ್ಲದ ನಿರ್ನಾಮ ಲಿಂಗಕ್ಕೆ ನಿತ್ಯನಿಯಮ ವ್ರತಂಗಳಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೩೬. ಆದಿಯನಾದಿಯೊಂದಾದಂದು, ಚಂದ್ರಸೂರ್ಯರೊಂದಾದಂದು, ಧರೆಯಾಕಾಶ ಒಂದಾದಂದು, ಗುಹೇಶ್ವರಲಿಂಗ ನಿರಾಳನು.

ಟೀಕು:-- ಆದಿ ಎಂದಡೆ ಲಿಂಗ, ಅನಾದಿಯೆಂದಡೆ ಶರಣ, ಅದೇನುಕಾರಣವೆಂದಡೆ, ಶರಣಂಗೆ ಮುನ್ನ ಜ್ಞಾನೋದಯವಾಗಿ, ಬಳಿಕ

ಲಿಂಗವ ಧರಿಸಿಕೊಂಬ, ಕಾರಣ ಆದಿಯನಾದಿಯೆಂಬುದಾಯಿತ್ತು ಅಂತಪ್ಪ ಲಿಂಗಶರಣನೊಂದಾದಲ್ಲಿ ಚಂದ್ರಸೂರ್ಯರೆಂಬ ಶಿವಶಕ್ತಿಗಳೇಕರಸವಾದ ರೆಂಬುದೀಗ, ಆದಿಯನಾದಿ ಒಂದಾದಂದು, ಚಂದ್ರಸೂರ್ಯರೊಂದಾದಂದು, ಎಂಬ ಶಬ್ದಕ್ಕರ್ಥ. ಆತ್ಮತತ್ವ ದೇಹವೆಂಬೆರಡು ಏಕರಸವಾಯಿತ್ತೆಂಬುದೀಗ ಧರೆಯಾಕಾಶ ಒಂದಾದಂದು, ಎಂಬ ಶಬ್ದಕ್ಕರ್ಥ. ಇಂತಾಗಲು ಆ ಶರಣನು, ನಿರಾಳತತ್ವವೆಯಾಗಿರ್ದನೆಂಬುದೀಗ ಗುಹೇಶ್ವರಲಿಂಗ ನಿರಾಳವೆಂಬ ಶಬ್ದಕ್ಕರ್ಥ

ಇಂತು ಪ್ರಾಣಲಿಂಗಿಸ್ಥಲದಲ್ಲಿ ಅನುಭಾವಮುಖದಿಂದಾಚರಿಸಿ, ಐಕ್ಯವಾದಪ್ರಾಣಲಿಂಗಿ, ಮುಂದೆ ಜ್ಞಾನಮುಖದಿಂದಾಚರಿಸಿ, ಬೆರೆಸುವ ಭೇದವೇತಿದ್ದುವೆಂದೊಡೆ, ಮುಂದೆ ಶರಣಸ್ಥಲವಾದುದೂ.

**ಪ್ರಾಣಲಿಂಗಿಸ್ಥಲಸಮಾಪ್ತ**

## ಶರಣಸ್ಥಲ-

೧. ವಿರಹದಲುತ್ಪತ್ಯವಾದ ಪರಮಾಯದ ಬೆಳುವೆ ಹತ್ತಿತಲ್ಲಾ! ಸ್ವರೂಪನಿರೂಪವೆಂದರಿಯರು. ಹೆಸರಿಟ್ಟು ಕರೆವ ಕಷ್ಟವನೋಡಾ ಗುಹೇಶ್ವರಾ.

ಟೀಕು:-- ವಿರಹದ ವಿಕಾರದಲುದಯಿಸಿದ ಪ್ರಾಣಗಳು ಮಿಥ್ಯಪಿಂಡವನೆ ಕುರುಹಿಟ್ಟುಕೊಂಡು, ಜಾತಿವರ್ಣಾಶ್ರಮ ನಾಮಗೋತ್ರಂಗಳೊಳಗೆ ಸಿಲ್ಕಿ ಮರುಳಾಗಿ, ಕೆಡುತ್ತಿರ್ಪರೆಂಬುದೀ ವಚನದ ತಾತ್ಪರ್ಯಾರ್ಥ.

೨. ಹಿಂದಣದರಿಯುದುದು, ಮುಂದಣದೇನು ಬಲ್ಲುದೋ ಉದಯಮುಖದಲ್ಲಿ ಹುಟ್ಟಿದ ಪ್ರಾಣಿಗಳು ಅಸ್ತಮಾನಕ್ಕಳಿದವೆಲ್ಲಾ! ಅದಂದಿನ ಘಟಜೀವಿಗಳು ಬಂದ ಬಟ್ಟೆಗೆ ಹೋಪವಲ್ಲಾ! ಗುಹೇಶ್ವರ ಲಿಂಗವು ಆರಿಗೂ ಇಲ್ಲವಯ್ಯಾ.

ಟೀಕು:-- ತಮ್ಮ ಹಿಂದಣ ಪೂರ್ವಾಶ್ರಯದ ಸ್ಥಿತಿಗತಿಯ ನರಿಯದವರು ಮುಂದೆ ಶಿವಾಚಾರದ ಹೊಲಬನರಿಯರು ಉದಯಿಸಿ ಅಸ್ತಮಿಸಿ ಹೋಗುತ್ತಿಹ ಪ್ರಾಣಿಗಳು ಲಿಂಗದ ನಿಜವನರಿಯದೆ ಭವದ ಬಟ್ಟೆಗೊಳಗಾದರೆಂಬುದೀ ವಚನದ ತಾತ್ಪರ್ಯಾರ್ಥ.

೩. ನೀರ ನಡುವೆ ಒಂದು ಗಿಡ ಹುಟ್ಟಿತ್ತು. ಆ ಗಿಡದ ಎಲೆಯ ಮೇಲೆ ಬಂದಿತ್ತೊಂದು ಕೋಡಗ. ಆ ಕೋಡಗದ ಕೊಂಬಿನಲ್ಲಿ ಮೂಡಿತ್ತದ್ಭುತ. ಆ ಅದ್ಭುತವಳಿದಲ್ಲದೆ ಶರಣನಾಗಬಾರದು ಗುಹೇಶ್ವರಾ.

ಟೀಕು:-- ಜಲಬುದ್ಬುದದಿಂದ ಹುಟ್ಟಿತ್ತು ತನುವೆಂಬ ವೃಕ್ಷವೆನುತ್ತಿರಲು, ಅದೀಗ ನೀರ ನಡುವೆ ಒಂದು ಗಿಡು ಹುಟ್ಟಿತ್ತೆಂಬ ಶಬ್ದಕ್ಕರ್ಥ, ಆ ಶರೀರದ ಪ್ರಪಂಚೆಂಬ ದಳಂಗಳ ಸವಿಯುತ್ತಿರ್ಪುದು ಮನವೆಂಬ ಮರ್ಕಟವೆನುತ್ತಿರಲು ಅದೀಗ ಗಿಡುವಿನ ಎಲೆಯ ಮೇಲೆ ಬಂದಿತ್ತು ಕೋಡಗವೆಂಬ ಶಬ್ದಕ್ಕರ್ಥ. ಆ ಮನವೆಂಬ ಮರ್ಕಟನ ಅಹಂಕಾರವೆಂಬ ಕೋಡಿನಲ್ಲಿ ಇದಿರ ಲೆಕ್ಕಸದಿಹದೆಂಬುದೀಗ ಕೋಡಗದ ಕೊಂಬಿನಲ್ಲಿ ಮೂಡಿತದ್ಭುತವೆಂಬ ಶಬ್ದಕ್ಕರ್ಥ. ಅಂತಪ್ಪ ಅದ್ಭುತವಳಿದಲ್ಲದೆ, ಶರಣನಾಗಬಾರದೆಂಬುದೀ ವಚನದ ತಾತ್ಪರ್ಯಾರ್ಥ.

೪. ನೇಮಸ್ತನರಿವು ಪ್ರಪಂಚದಲ್ಲಿ ಹೋಯಿತ್ತು. ಭಕ್ತನರಿವು
ಸಮಾಧಾನದಲ್ಲಿ ಹೋಯಿತ್ತು. ಜಂಗಮದರಿವು ಬೇಡಿವಲ್ಲಿ ಹೋಯಿತ್ತು.
ಇಂತು ಕ್ರಿಯಾಗಮದೊಳಗೆ ಆವಂಗು ಅಂಗವಿಲ್ಲ ಗುಹೇಶ್ವರಾ ನಿಮ್ಮ
ಶರಣರಪೂರ್ವ.

ಟೀಕು:— ವ್ರತನಿಯಮಂಗಳಲ್ಲಿ ನಡೆವರಿಗೆ ಆ ವ್ರತನಿಯಮಂ
ಗಳೆ ಮುಂದುಗೊಂಡಿರ್ಪುವಲ್ಲದೆ ಲಿಂಗ ಮುಂದುಗೊಂಡಿರದು. ಜಂಗ
ಮಕ್ಕೆ ಮಾಡುವ ಭಕ್ತಂಗೆ ಮಾಡಿ ನೀಡಿಹೆನೆಂಬ ದು ಮುಂದುಗೊಂ
ಡಿರ್ಪುದಲ್ಲದೆ ಲಿಂಗ ಮುಂದುಗೊಂಡಿರದು. ಜಂಗಮದರಿವು ಉಪಾಧಿ
ಯಿಂದ ಬೇಡಿ ನಷ್ಟವಾಯಿತ್ತಲ್ಲದೆ ಜ್ಞಾನೋದಯವಿಲ್ಲ ಇಂತಪ್ಪವರು
ಶರಣರಲ್ಲ ನಿಜಶರಣರಪೂರ್ವವೆಂಬುದೀ ವಚನದತಾತ್ಪರ್ಯಾರ್ಥ.

೫. ಹಸಿದಡೆ ಉಣಬಹುದೇ ನಸುಗುನ್ನಿತುರುಚೆಯನು ಅವ
ಸರಕಿಲ್ಲದ ಥೊರೆಗೆ ಅರ್ಥವಿದ್ದಲ್ಲಿ ಫಲವೇನು. ಸಾಣೆಯ ಮೇಲೆ
ಶ್ರೀಗಂಧವ ತೇಯುವರಲ್ಲದೆ ಇಟ್ಟಿಗೆಯ ಮೇಲೆ ತೇಯಬಹುದೆ. ರಂಭೆಯು
ನುಡಿ ಶುಂಭಗೆ ಶೃಂಗಾರವೆ, ಜ್ಞಾನಿಯಕೂಡ, ಜ್ಞಾನಿ ಮಾತಾಡುವ
ನಲ್ಲದೆ, ಅಜ್ಞಾನಿಗಳಕೂಡೆ ಜ್ಞಾನಿ ಮಾತಾಡುವನೆ! ಸರೋವರದೊಳ
ಗೊಂದು ಕೋಗಿಲೆ ಸರಗೆಯ್ಯುತ್ತಿರ್ದರೆ, ಕೊಂಬಿನ ಮೇಲೊಂದು ಕಾಗೆ
ಕರ್ರನ್ನದೆ! ಅಂತಾಯಿತ್ತು. ಭರದಲ್ಲಿ ಬರಡ ಕರದಿಹೆನೆಂದು ಕಂದಲಿ
ಕೊಂಡು ಹಿಂಡೆ, ಕಂದಲೊಡೆದು ಕೈಮುರಿದಂತಾಯಿತ್ತು ಕಾಣಾ ಗುಹೇ
ಶ್ವರಾ.

ಟೀಕು:— ಜ್ಞಾನಿಗಳ ಕೂಡೆ ಮಹಾಜ್ಞಾನಿ ಮಾತಾಡುವನಲ್ಲದೆ,
ಅಜ್ಞಾನಿಗಳು ತನ್ನಕೂಡೆ ಉತ್ತರವ ಕೊಟ್ಟಡೆ ತಾನದನೇನಂನೂ ಅರಿ
ಯದಿಹನು ತಥಾಪಿ ತಾನಾ ಅಜ್ಞಾನಿಗಳಿಗೆ ಬೋಧಿಸಿಹೆನೆಂದು ಬಯಸಂ.
ಬರಡ ಕರದು ಕೈಮುರಿದು, ಕಂಠಲೊಡದಿತ್ತವರಗಾದೆ ತನಗಾದಹುದೆಂದು
ಶಬ್ದಮುಗ್ಧನಾಗಿಹುದಲ್ಲದೆ, ಅಂತಹ ಅಜ್ಞಾನಿಗಳ ಸಂಪರ್ಕಕ್ಕೆಳಸನೆಂ
ಬುದೀ ವಚನದ ತಾತ್ಪರ್ಯಾರ್ಥ.

೬. ಕಂಗಳ ಮುಂದಣ ಕತ್ತಲೆ ಇದೇನೋ ಮನದ ಮುಂದಣ
ಮರವಿಯಿದೇನೋ. ಒಳಗಣ್ಣ ರಣರಂಗ ಹೊರಗಣ ಶೃಂಗಾರ ಬಳ
ಕೆಗೆ ಬಂದ ಬಟ್ಟೆ ಇದೇನೋ ಗುಹೇಶ್ವರಾ.



ಟೀಕು:— ನೋಡುವ ಕಂಗಳ ಮುಂದೆ ಅಜ್ಞಾನವಿರುತ್ತಿರಲು,
ಮನದ ಮುಂದಣ ಮರವು ಬಿಡದು, ಅದು ಕಾರಣ ಅಂತರಂಗದ
ಮರವೆ ತನ್ನ ಗೆಲ್ಲುವ ರಣರಂಗ ಭೂಮಿ ಎಂಬುದೀಗ ಒಳಗಣ
ರಣರಂಗವೆಂಬ ಶಬ್ದಕ್ಕರ್ಥ. ಅದನರಿಯದೆ ಬಹಿರಂಗದಲ್ಲಿ ವಿಲಾಸ
ಮಾಡುತ್ತ ಭವದ ಬಟ್ಟೆಗೆ ಬರುತ್ತಿಹುದೀಗ ಹೊರಗಣ ಶೃಂಗಾರ ಬಳ
ಕೆಗೆ ಬಂದ ಬಟ್ಟೆ ಇದೆನೊ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೭. ಉಚ್ಚೆಯ ಜವುಗಿನ ಬಚ್ಚಲತಂಪಿನಲ್ಲ ನಿಚ್ಚಕ್ಕೆ ನಿಚ್ಚ ಹೊರ
ಳುವ ಹಂದಿಯಂತೆ, ಶಿವನಿಚ್ಛೆಯನರಿಯದೆ, ಮಾತನಾಡುವರ ಮೆಚ್ಚ
ವನೆ ಗುಹೇಶ್ವರಲಿಂಗವು.

ಟೀಕು:— ಶಿವಜ್ಞಾನವನರಿದು. ನುಡಿವನುಡಿಗಳು ಲಿಂಗದಲ್ಲಿ ಭೇದಿ
ಸುವವಲ್ಲದೆ ಶಿವಜ್ಞಾನವಿರಹಿತವಾಗ ನುಡಿವ ನುಡಿಗಳು ಲಿಂಗಕ್ಕೆ ಸಲ್ಲ
ವೆಂಬುದೀ ವಚನದ ತಾತ್ಪರ್ಯಾರ್ಥ.

೮. ಒಂದರ ಮೋರೆಯನೊಂದು ಮೂಸಿನೋಡಿ, ಮತ್ತೊಬ್ಬಿಹೊ
ತ್ತಿಂಗೆ ಕಚ್ಚಿಯಾಡಿಹೋದಂತಾಯಿತ್ತು. ನೋಡಿದರೆ, ಕಲಿಯುಗದೊಳ
ಗಣ ಮೇಳಾಪವಾ ಗುರುವೆಂಬಾತ ಶಿಷ್ಯನಂತವನರಿಯ, ಶಿಷ್ಯನೆಂಬಾತ
ಗುರುವಿನಂತವನರಿವ, ಭಕ್ತನೆಂಬಾತ ಜಂಗಮದಂತವನರಿಯ, ಜಂಗ
ಮವೆಂಬಾತ ಭಕ್ತನಂತವನರಿಯ, ಗುರು ಗುರುವಿನಲ್ಲಿ ಸಮವಿಲ್ಲ. ಶಿಷ್ಯ
ಶಿಷ್ಯನಲ್ಲಿ ಸಮವಿಲ್ಲ. ಭಕ್ತ ಭಕ್ತಗೆ ಸಮವಿಲ್ಲ. ಜಂಗಮ ಜಂಗಮ
ದೊಳಗೆ ಸಮವಿಲ್ಲ. ಇದುಕಾರಣ ಕಲಿಯುಗದೊಳಗ ಉಪದೇಶವಮಾ
ಡುವ ಕಾಳುಗುರಿಕೆಯ ಮಕ್ಕಳನೇನೆಂಬೆನಯ್ಯಾ ಗುಹೇಶ್ವರಾ.

ಟೀಕು:— ಸಂಸಾರಕ್ಕೆ ಹೇಸಿ, ಭವಮಾಲೆಯ ಹರಿಯಬೇ
ಕೆಂದು, ಬಂದು ಎರಗಿದ ಶಿಷ್ಯಂಗೆ ಶ್ರೀಗುರು ಉಪದೇಶವ ಮಾಡಿ
ದರೆ, ಆ ಗುರುವಿನ ಉಪದೇಶವು ಸಫಲ, ಆ ಶಿಷ್ಯನ ಸಂಸ್ಕಾರವು
ಸಫಲ. ಇದನರಿಯದೆ ಉದ್ದೇಶದಿಂದ ಅಜ್ಞಾನಿಗಳಿಗೆ ಸ್ವಾಯತ ಸಂಬಂಧ
ಮಾಡಿದರೆ, ಆ ಗುರುವಿನ ಗುರುತ್ವವು ಕೆಡುವುದು. ಆ ಶಿಷ್ಯನ ಕರ್ಮವು
ಹರಿಯದು. ಶಿವಾಚಾರಕ್ಕೆ ಹಾನಿ ಹೊದ್ದುವುದು ಅದುಕಾರಣ ಅಜ್ಞಾನ
ದೀಕ್ಷೆಯ ಮಾಡಲಾಗದೆಂಬುದೀ ವಚನದ ತಾತ್ಪರ್ಯಾರ್ಥ

೯. ಅಂಬರದೊಳಗೊಂದು, ಅಡವಿ ಹುಟ್ಟಿತ್ತು. ಆ ಅಡವಿಯೊ
ಳಗೊಬ್ಬ ವ್ಯಾಧನಿದ್ದಾನೆ. ಆ ವ್ಯಾಧನಕೈಯಲ್ಲಿ ಸಿಕ್ಕಿತ್ತೊಂದು ಮೃಗವು.

ಆ ಮೃಗವ ಕೊಂದಲ್ಲದೆ ವ್ಯಾಧ ಸಾಯನು. ಅರಿವು ಬರಿದುಂಟೆ ಗುಹೇಶ್ವರಾ.

ಟೀಕುಃ— ಅಂಬರವೆಂದರೆ ಆತ್ಮನು. ಆ ಆತ್ಮತತ್ವದ ಮರವೆಯೊಳಗೆ, ಭವವೆಂಬ ಅಡವಿ ಹುಟ್ಟಿತ್ತೆಂಬುದೀಗ, ಅಂಬರದೊಳಗೊಂದು ಅಡವಿ ಹುಟ್ಟಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಭವಾರಣ್ಯದೊಳಗೆ ಕಾಮನೆಂಬ ವ್ಯಾಧನು ಜೀವನೆಂಬ ಮೃಗವ ತನ್ನ ವಶದಲ್ಲಿ ಹಿಡಿದಿಪ್ಪಕಾರಣ ಅಡವಿಯೊಳಗೊಬ್ಬ ವ್ಯಾಧನಿದ್ದಾನೆ, ಆ ವ್ಯಾಧನ ಕೈಯಲ್ಲಿ ಸಿಲ್ಕಿತ್ತೊಂದು ಮೃಗವೆಂಬ ಶಬ್ದಕ್ಕರ್ಥ. ಆ ಜೀವ ನಷ್ಟವ ಮಾಡಿವಲ್ಲದೆ, ಕಾಮ ಸಾಯನೆಂಬುದೀಗ, ಮೃಗನ ಕೊಂದಲ್ಲದೆ ವ್ಯಾಧ ಸಾಯನೆಂಬ ಶಬ್ದಕ್ಕರ್ಥ. ಇಂತಪ್ಪ ಜೀವಭಾವಹಿಂಗಿದವರಿಗಲ್ಲದೆ, ಜ್ಞಾನ ವೇದ್ಯವಾಗದೆಂಬುದೀಗ ಅರಿವು ಬರಿದುಂಟೆ ಎಂಬ ಶಬ್ದಕ್ಕರ್ಥ.

೧೦. ಒಳಗೆ ನೋಡಿಹೆನೆಂದೊಡೆ, ಒಳಗೆ ನೋಡಲಿಲ್ಲ. ಹೊರಗೆ ನೋಡಿಹೆನೆಂದೊಡೆ, ಹೊರಗೆ ನೋಡಲಿಲ್ಲ. ಜ್ಞಾನವೆಂತುಟೋ ಬಲೆಯ ಬೀಸಿ ಕೊಲ್ಲುವನ ಮನೆಯಲ್ಲಿ ಸತ್ತಡೆ, ಏನು ಕಾರಣ ಅಳುವಿರೋ ಗುಹೇಶ್ವರಾ.

ಟೀಕುಃ— ಅಂತರಂಗದಲ್ಲಿ ಅರಿವನರಿಯದೆ ಬಹಿರಂಗದಲ್ಲಿ ಕ್ರಿಯವನಾಚರಿಸದೆ, ಮತ್ತೆ ಲಿಂಗದ ಕರುಣವೆನಗಿಲ್ಲವೆಂಬ ಠಕ್ಕನ ಕಿಂಕುರ್ವಾಣವು. ಪ್ರಾಣಿಗಳ ಕೊಲ್ಲುವನ ಪುತ್ರಶೋಕವು ಒಂದೇ ಪರಿ ಎಂಬುದೀ ವಚನದ ತಾತ್ಪರ್ಯಾರ್ಥ.

೧೧. ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು. ಲಕ್ಷಕ್ಕೊಮ್ಮೆ ನುಡಿಯಲಾಗದು. ಕೋಟಿಗೊಮ್ಮೆ ನುಡಿಯಲಾಗದು. ನುಡಿಯಲವರೊಡನೆ ಮಾರಿ ಹೊರಲಿ ಗುಹೇಶ್ವರಾ ನಿಮ್ಮ ಶರಣರಲ್ಲದವರೊಡನೆ ಬಾಯಿದೆರೆಯಲಾಗದು.

ಟೀಕುಃ— ಲಿಂಗ ಸಂಬಂಧಿಗಳಪ್ಪ ಶರಣರೊಡನೆ ಸಂಭಾಷಣೆಯ ಮಾಡಿದಡೆ ಪರಿಣಾಮವಹುದು. ಅಜ್ಞಾನಿಗಳ ಕೂಡೆ ಮಾತನಾಡಿದಡೆ, ತನ್ನ ಪರಿಣಾಮ ಕೆಡುವುದು. ಇದುಕಾರಣಲೋಕದ ಅಜ್ಞಾನಿಗಳ ಕೂಡ ಮಾತನಾಡಬಾರದೆಂಬುದೀ ವಚನದ ತಾತ್ಪರ್ಯಾರ್ಥ.

೧೨. ಅಗ್ನಿಯ ಒಡಲೊಳಗೊಬ್ಬ ಆಕಾಶವರ್ಣದ ಸೂಳೆ, ಆ ಸೂಳೆಗೆ ಮುವ್ವರು ಮಕ್ಕಳು ನೋಡಾ ಆ ಮಕ್ಕಳ ಕೈ ಬಾಯಲ್ಲಿ



ಮೂರು ಲೋಕ ಮರುಳಾಗಿ ಅಚ್ಚುಗ ಬಡುತ್ತಿರ್ದರೇನು ಚೋದ್ಯವೋ ಕರಿಯಬಣ್ಣದ ಮುಸುಕನುಗಿದು ಬೆರಸ ಬಲ್ಲ ಶರಣಂಗಲ್ಲದೆ ಪರತತ್ವವೆಂಬುದು ಸಾಧ್ಯವಾಗದು ಗುಹೇಶ್ವರಾ.

ಟೀಕುಃ— ಅಗ್ನಿಯ ಒಡಲೆಂದರೆ, ಅಗ್ನಿಯಂಶಿಕಮಪ್ಪ ಶರೀರ. ಆ ಶರೀರದೊಳಗೆ ಅಜ್ಞಾನ ತಮೋವರ್ಣವನುಳ್ಳ ಮಾಯೆಯೆಂಬ ಅಸಜ್ಜನ ಸ್ತ್ರೀ ಇರ್ಪಳೆಂಬುದೀಗ ಅಗ್ನಿಯ ವಡಲೊಳಗೊಬ್ಬ ಆಕಾಶವರ್ಣದ ಸೂಳೆ ಎಂಬ ಶಬ್ದಕ್ಕರ್ಥ. ಆ ಮಾಯೆಗೆ ಅಧೀನವಾಗಿ ಜನಿಸಿರ್ಪವು ವಿಶ್ವ, ತೈಜಸ, ಪ್ರಾಜ್ಞರೆಂಬ ಜೀವತ್ರಯಂಗಳೆಂಬುದೀಗ, ಆ ಸೂಳೆಗೆ ಮೂವರು ಮಕ್ಕಳು ನೋಡಾ ಎಂಬ ಶಬ್ದಕ್ಕರ್ಥ. ಆ ಜೀವತ್ರಯಂಗಳ ಕೈ ಬಾಯಲ್ಲಿ ಮೂರುಲೋಕವು ಸಿಕ್ಕಿ ಮರುಳಾಗಿ ಕೆಡುತ್ತಿರ್ದರೆಂಬುದೀಗ, ಆ ಮಕ್ಕಳ ಕೈ ಬಾಯಲ್ಲಿ ಮೂರುಲೋಕ ಮರುಳಾಗಿ, ಅಚ್ಚುಗ ಬಡುತ್ತಿರ್ದರೆಂಬ ಶಬ್ದಕ್ಕರ್ಥ. ಈ ಭೇದವನರಿದು, ಕರಿಯಬಣ್ಣವೆಂಬ ಅಜ್ಞಾನದ ಮುಸುಕನಗಿದು ಪರತತ್ವಸಂಧಾನಿಯಾಗದೆ ಇರ್ದಾತ ಶರಣನಲ್ಲನೆಂಬುದೀಗ, ಕರಿಯಬಣ್ಣದ ಮುಸುಕನುಗಿದು ಬೆರಸ ಬಲ್ಲ ಶರಣಂಗಲ್ಲದೆ ಪರತತ್ವ ಸಾಧ್ಯವಾಗದು ಕಾಣಾ ಎಂಬ ಶಬ್ದಕ್ಕರ್ಥ.

೧೩. ಸರ್ಪ ಸಂಸಾರಿಯೊಡನಾಡಿ ಕಟ್ಟುವಡೆಯಿತ್ತು. ಮನದ ತಮಂಧ ಬಿಡದು. ಮನದ ಕಪಟ ಬಿಡದು. ಸಟೆಯೊಡನೆ ದಿಟವಾಡಿ ಬಯಲು ಬಡಿವಡೆಯಿತ್ತು. ಕಾಯದ ಸಂಗದ ಜೀವವುಕ್ಷಣಕ್ಷಣ ಎಂದೂ ಭವ ಹಿಂಗದು ಗುಹೇಶ್ವರಾ.

ಟೀಕು:— ಸಂಸಾರಪಾಶದಲ್ಲಿ ಬದ್ಧವಾಗಿ ಸಿಲ್ಕಿದ ಜೀವಂಗೆ ಅಜ್ಞಾನಮಾಯೆ ಆವರಿಸಿಕೊಂಡಿಪ್ಪಕಾರಣ, ನಿಜತತ್ವವನರಿಯದೆ ತೆರಹಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೪. ವೇದ ವೇಧಿಸಲರಿಯದೆ ಕೆಟ್ಟವು. ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು. ಪುರಾಣ ಪೂರೈಸಲರಿಯದೆ ಕೆಟ್ಟವು. ಹಿರಿಯರು ತಮ್ಮತಾವರಿಯದೆ ಕೆಟ್ಟರು. ತಮ್ಮ ಬುದ್ಧಿ ತಮ್ಮನೆ ತಿಂದಿತ್ತು. ನಿಮ್ಮನೆತ್ತ ಬಲ್ಲರು ಗುಹೇಶ್ವರಾ.

ಟೀಕುಃ— ವೇದಶಾಸ್ತ್ರ, ಪುರಾಣ, ತರ್ಕತಂತ್ರಗಳೆಲ್ಲವು ತಮ್ಮಲ್ಲಿ ತಾವು ಮಥನಿಸುತ್ತಿರ್ದುವಲ್ಲದೆ, ಶಿವತತ್ವದ ನಿಜವನರಿದುದಿಲ್ಲ. ತಮ್ಮ

ತಾವರಿವೆವೆಂಬ ಹಿರಿಯರು ವೃಥಾಹಂಕಾರವಲ್ಲಿ ಕೆಟ್ಟರಲ್ಲದೆ, ತಮ್ಮ ನಿಲವ ತಾವರಿಯರೆಂಬುದೀ ವಚನದ ತಾತ್ಪರ್ಯಾರ್ಥ.

೧೫. ಕರಗಿಸಿ ನೋಡಿರೆ ಅಂಣಾ ಕರಿಯ ಗಟ್ಟಿಯನು. ಆ ಕರಿಯ ಗಟ್ಟಿಯೊಳಗೊಂದು ರತ್ನವಿಪ್ಪುದು. ಆ ರತ್ನದ ಪರೀಕ್ಷೆಯ ಬಲ್ಲೆನೆಂಬವರ ಕಣ್ಣುಗೆಡಿಸಿತ್ತು ನೋಡಾ! ಅದು ಹಿರಿಯರೆಲ್ಲರು ಮರಳಾಗಿ ಹೋದರು. ಕರಿಯ ಗಟ್ಟಿಯ ಬಿಳಿದು ಮಾಡಿ ಮುಖದ ಮುದ್ರಿಯ ನೊಡಯ ಬಲ್ಲವರಿಗಲ್ಲದೆ ಗುಹೇಶ್ವರನ ನಿಲವನರಿಯಬಾರದು ನೋಡಿ ರಂಣಾ

ಟೀಕು:— ಕರಿಯ ಗಟ್ಟಿ ಎಂಬುದು ಅಜ್ಞಾನ ಕಾಳಿಕೆ ಮುಸುಕಿ ಕೊಂಡಿರ್ದ ಚಿತ್ರಗಟ್ಟಿ ಎಂಬರ್ಥ. ಆ ಚಿತ್ತದ ಗಟ್ಟಿಯ ಸವಿವೇಕ ಬೋಧೆಯಿಂ ಕರಗಿಸಲಾಗಿ ನಿರ್ಮಲವಪ್ಪುದು. ನಿರ್ಮಲವಾಗಲು, ಅಲ್ಲಿ ಜ್ಞಾನರತ್ನ ಕಾಣಬಹುದೆಂಬುದೀಗ ಕರಗಿಸಿ ನೋಡಿರೆ ಅಣ್ಣಾ ಕರಿಯಗಟ್ಟಿಯನು ಕರಿಯ ಗಟ್ಟಿಯೊಳಗೊಂದು ರತ್ನವಿಪ್ಪುದೆಂಬ ಶಬ್ದಕ್ಕರ್ಥ. ಆ ಜ್ಞಾನರತ್ನವನರಿದಿಹೆನೆಂಬ ಜ್ಞಾನಿಗಳೆಲ್ಲರೂ ತಲೆ ಕೆಳಗಾಗುತ್ತಿರ್ದರೆಂಬುದೀಗ, ರತ್ನದ ಪರೀಕ್ಷೆಯ ಬಲ್ಲೆವೆಂಬವರೆಲ್ಲರ ಕಣ್ಣುಗೆಡಿಸಿತ್ತು ನೋಡಾ ಅರುಹಿರಿಯರೆಲ್ಲರು ಮರುಳಾಗಿ ಹೋದರೆಂಬ ಶಬ್ದಕ್ಕರ್ಥ. ಆ ಕರಿಯ ಗಟ್ಟಿ ಎಂಬ ಅಜ್ಞಾನವ ಭೇದಿಸಿ ಸುಜ್ಞಾನವೆಂಬ ಬಿಳಿದುಮಾಡಿ, ಅದ ಬಿಳಿದು ಮಾಡಿದೆನೆಂಬ ಮನದ ಜ್ಞಾನ ಮುಖದ ರೂಪಿನ ಮುಖದ ಮುದ್ರೆಯನಳಿಯಬಲ್ಲಾತಂಗಲ್ಲದೆ ನಿಜತತ್ವವ ಕಾಣಬಾರದೆಂಬುದೀಗ ಕರಿಯ ಗಟ್ಟಿಯ ಬಿಳಿದು ಮಾಡಿ ಮುಖದ ಮುದ್ರೆಯ ನೊಡೆಯ ಬಲ್ಲವರಿಗಲ್ಲದೆ ನಿಜತತ್ವವ ಕಾಣಬಾರದೆಂಬ ಶಬ್ದಕ್ಕರ್ಥ.

೧೬. ನದಿಯಜಲ ಕೂಪಜಲ ತಟಾಕಜಲವೆಂಬುದು, ಹಿರಿದು ಕಿರಿದಾದುದನರಿಯರು. ಬೇರೆ ಮತ್ತೊಂದು ಭಾಷೆ, ವ್ರತ ನೇಮಂಗಳ ಹಿಡಿದ ಶೀಲಸಂಬಂಧಿಗಳು ಜಾತ್ಯಾಂಧಕರು. ನಿಮ್ಮನೆತ್ತ ಬಲ್ಲರು ಗುಹೇಶ್ವರಾ.

ಟೀಕು:— ಲಿಂಗಸಂಬಂಧದ ಕೀಲವನರಿದು, ನಿಜತತ್ವವೇದಿಗಳಹ ಬುದ್ಧಿಯ ನರಿಯದೆ, ಸೂತಕಶೀಲ, ನೇಮವನೆ ಪ್ರಾಣವಮಾಡಿ, ಕೊಂಡಿರ್ಪವರೆಲ್ಲರು ಅಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.



೧೭. ಶೀಲಶೀಲವೆಂಬ ನೀವೀಗ ವಾರ್ತೆಯ ಬೆಳುಸೆ ಬಾಲರಾಳಿಯಂತಿ ಆಳಿಗೊಡದು, ಹೇಳ, ಕೇಳಲಿಲ್ಲದ ವಾಳವಳಿಯ ಬಯಲ ಶಬ್ದ ಬರಿಯ ಹೊರಟಿ, ಅಂಗ ಸುಖಿಗಳಗೆ ಲಿಂಗವಿಲ್ಲವಾಗಿ, ಗುಹೇಶ್ವರನೆಂಬ ಶೀಲ ಸೀಮೆಯಮೀರಿ ಕಾಡಿತ್ತು.

ಟೀಕು:— ಶೀಲವೆಂಬ ಸಂದೇಹಸೂತಕವು ಅಂಗ ಸುಖಿಗಳಿಗೆ ಸುಖವಾಗಿಹುದಲ್ಲದೆ, ಶಿವಜ್ಞಾನ ಸಂಪನ್ನ ಶರಣಂಗೆ ಸಲ್ಲದೆಂಬುದೀ ವಚನದ ತಾತ್ಪರ್ಯಾರ್ಥ.

೧೮. ಹಾಳೂರೊಳಗೊಂದು ಮನೆಯ ಮಾಡಿ, ಬದುಕಿಹೆನೆಂದರೆ, ಕಾಳೋರಗ ಬಂದು ಕಡಿಯಿತ್ತು ನೋಡಾ! ಕೇರಿಕೇರಿಯೊಳಗೆಲ್ಲಾ ಹರಿದಾಡುತ್ತಿರ್ದ್ದವು ಮಾರಿಯ ತೂರಿದ ಮದಗಜಂಗಳು. ಚಿತ್ರಗುಪ್ತರ ಕಯ್ಯ ಪತ್ರವ ತೀಳಿದು, ನೋಡಿದರೆ ಹಾಳೂರು ಹಾಳಾಯಿತ್ತು ಗುಹೇಶ್ವರಾ.

ಟೀಕು:— ಹಾಳೂರೆಂದನೆ ಇಲ್ಲವೆಯಾಗಿರ್ಪ ಪಂಚಭೂತಪಿಂಡವೆಂಬುದರ್ಥ. ಆ ಪಂಚಭೂತಪಿಂಡದೊಳಗೆ ಸುಖಿಯಾಗಿ, ಬದುಕಿಹೆನೆಂದಿರಲು, ಸಂಸಾರವೆಂಬ ಸರ್ಪದಷ್ಟವಾಯಿತ್ತೆಂಬುದೀಗ, ಕಾಳೋರಗ ಬಂದು, ಕಡಿಯಿತ್ತು ನೋಡಾ ಎಂಬ ಶಬ್ದಕ್ಕರ್ಥ. ಅಂತರಂಗದ ಕರಣ ಬೀದಿಗಳೊಳಗೆಲ್ಲಾ ಅಷ್ಟ ಮದಂಗಳು ಕ್ರೀಡಿಸುತ್ತಿರ್ದುವೆಂಬುದೀಗ, ಕೇರಿ ಕೇರಿಯೊಳಗೆಲ್ಲ ಹರಿದಾಡುತ್ತಿರ್ದವು ಮಾರಿಯ ತೊರೆದ ಮದಗಜನೆಂಬ ಶಬ್ದಕ್ಕರ್ಥ. ವಿಧಿಕಲ್ಪಿತವೆಂಬ ಪ್ರಾರಬ್ಧಕರ್ಮದ ತಲೆಯ ಬರಹವಳಿದರೆ, ಆ ದೇಹಧರ್ಮವೆಲ್ಲವು ಅಳಿದು ಹೋಹುದೆಂಬುದೀಗ ಚಿತ್ರಗುಪ್ತರ ಕೈಯಪತ್ರವ ತೀಳಿದು, ನೋಡಿದರೆ, ಹಾಳೂರು ಹಾಳಾಯಿತ್ತೆಂಬ ಶಬ್ದಕ್ಕರ್ಥ.

೧೯. ಬಲ್ಲತನವನೇರಿಸಿಕೊಂಡು, ಅಲ್ಲದಾಟವನಾಡಿದರೆ, ಬಲ್ಲತನಕ್ಕೆ ಭಂಗವಾಯಿತ್ತು. ವ್ಯಸನದಿಚ್ಛೆಗೆ ಹರಿದಾಡುವರೆಲ್ಲರು ಬಲ್ಲರೆ ಹೇಳಿರೆ. ಸಮಸ್ತ ಮೇಳಾಪದಭಟ್ಟಗೋಷ್ಠಿಯ ಭಂಡರೆಲ್ಲರು ಬಲ್ಲರೆ ಹೇಳಿರೆ. ಕಾಮ ಕ್ರೋಧ, ಲೋಭ, ಮೋಹ ಮದ ಮತ್ಸರದಿಚ್ಛೆಗೆ ಹರಿವವರು ಹಂದಿಯೊಡನಾಡಿದ ಕಂಡಿಯಂತಾದರು. ಇನ್ನು ಬಲ್ಲರೆ ಗುಹೇಶ್ವರಾ ಮಾಯಾಮುಖರು ನಿಮ್ಮನು?

ಟೀಕು:— ಸಹಜಜ್ಞಾನವಿಲ್ಲದೆ, ಅದ್ವೈತವನಭ್ಯಾಸಮಾಡಿ, ಕಂಡ, ಕಂಡವರೊಡನೆ ಅರಿವನುಂಟು ಮಾಡಿಕೊಂಡು, ಭಟ್ಟಗೋಷ್ಠಿಯ ಮಾಡು

ತ್ರಿಪರ್ಣ ಅಜ್ಞಾನಿಗಳು ಲಿಂಗಕ್ಕೆ ಸಲ್ಲದ ಅನ್ಯಕಾರಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೨೦. ನಾಣ್ಮರೆಯ ನಾಚಿಕೆ ಒಂದು ನೂಲಮರೆಯಲಡಗಿತ್ತು. ಬಲ್ಲೆನೆಂಬ ಅರುಹಿರಿಯರೆಲ್ಲ ಅಲ್ಲಿಯೇ ಮರುಳಾದರು. ನೂಲನಾರಿ ಹತ್ತಿಯ ಬೆಲೆಯ ಹೊಂದ ಹೋದರೆ ಅದು ಅತ್ತಲೇ ಹೋಯಿತ್ತು ಗುಹೇಶ್ವರಾ.

ಟೀಕು:— ಲೋಕದ ಅಭಿಮಾನವೆಲ್ಲವು ಒಂದು ವಸ್ತ್ರದ ಮರೆಯಲ್ಲಿ ಅಡಗಿಹೋಯಿತ್ತು. ಆ ವಸ್ತ್ರವನು ತೊರೆದು ದಿಗಂಬರನಾಟಹೆನೆಂಬ ಹಿರಿಯರು ಸರ್ವಸಂಗವ ಬಿಟ್ಟೆವೆಂಬ ಅಹಂಕಾರದಲ್ಲಿ ಮರುಳಾದರು. ಈ ಅಭಿಮಾನವ ಶಿವಜ್ಞಾನಕ್ಕೆ ಮಾರುಗೊಟ್ಟರೆ, ಆತನೇ ಅಚ್ಚಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೧. ಧರೆಯ ಮೇಲೊಂದು ಅರಿದಪ್ಪ ರತ್ನ ಹುಟ್ಟಿರಲು, ಅದ ನರಸಲರಸ ಹೋಯಿತ್ತಯ್ಯಾ! ನಡು ನೀರೊಳಗೆ ಮುಳುಗಿ ಆಳವರಿದು, ನೋಡಿ ಕಂಡಿಹೆನೆಂದರೆ ಕಾಣಬಾರದು. ಧಾರೆವಟ್ಟಲಕಳದು ಕೊಂಡು ನೀರ ಶೋಧಿಸಿ, ನೋಡಿದರೆ, ದೂರದಲ್ಲಿ ಕಾಣಬರುತ್ತಿಹುದು ನೋಡಾ! ಸಾರಕ್ಕೆ ಹೋಗಿ ಹಿಡಿದುಕೊಂಡಿಹೆನೆಂಬ ಧೀರರೆಲ್ಲರ ಮತಿಯಬಗೆಯ ನುಂಗಿತ್ತು ಗುಹೇಶ್ವರಾ.

ಟೀಕು:— ಧರೆ ಎಂದರೆ ತನುವಿಗೆ ಹೆಸರು. ಆ ತನುವಿನೊಳಗೆ ಜ್ಞಾನರತ್ನ ಹುಟ್ಟಿತ್ತೆಂಬುದೀಗ, ಧರೆಯ ಮೇಲೊಂದು ಅರಿದಪ್ಪ ರತ್ನ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಆ ಸುಜ್ಞಾನವನರಸಿ ನೋಡಿಹೆನೆಂಬೈಸಕ್ಕರ ಮನವ ವ್ಯಾಕುಳ ಪ್ರವಾಹದೊಳಗೆ ಸಿಲ್ಕಿ ಬಿದ್ದಿತ್ತೆಂಬುದೀಗ. ಅದನರಸಲರಸಹೋಯಿತ್ತು ನಡುನೀರೊಳಗೆ ಎಂಬ ಶಬ್ದಕ್ಕರ್ಥ. ಆ ಮನದೊಳಗೆ ಹೊಕ್ಕು ಅರಿದಿಹೆನೆಂದರೆ, ಆ ಮನವೇ ಇದಿರಿಟ್ಟು ತೋರುತ್ತಿಹುದಲ್ಲದೆ, ಆ ಸುಜ್ಞಾನ ತೋರದೆಂಬುದೀಗ, ನೀರೊಳಗೆ ಮುಳುಗಿ, ಆಳವರಿದು ನೋಡಿ, ಕಂಡೆಹೆನೆಂದರೆ ಕಾಣಬಾರದೆಂಬ ಶಬ್ದಕ್ಕರ್ಥ. ಸುವಿಚಾರವೆಂಬ ಧಾರೆವಟ್ಟಲಲ್ಲಿ ಮನವ ಶೋಧಿಸಿ, ಅಜ್ಞಾನವ ಬಿಟ್ಟು, ಸುಜ್ಞಾನವ ಹಿಡಿದಿಹೆನೆಂದು ಉದ್ಯೋಗಿಸುತ್ತಿರಲು, ಆ ಸುಜ್ಞಾನ ತನ್ನ ಕಣ್ಣಮುಂದೆ, ಇದಿರಿಟ್ಟು ತೋರುತ್ತಿಹುದೆಂಬುದೀಗ ಧಾರೆವಟ್ಟಲ ಕಳದು ಕೊಂಡು, ನೀರ ಶೋಧಿಸಿ, ನೋಡಿದರೆ, ದೂರದಲ್ಲಿ ಕಾಣಬರುತ್ತಿಹುದು



ನೋಡಾ! ಎಂಬ ಶಬ್ದಕ್ಕರ್ಥ. ಆ ಸುಜ್ಞಾನವ ಮುಟ್ಟಿ ಗ್ರಹಿಸಿಕೊಂಡಿಹೆವೆಂಬವರ ಮತಿಯೊಳಗೆ ತಾನೆ ಪ್ರತಿಬಿಂಬಿಸಿಕೊಂಡಿರ್ದಿತ್ತೆಂಬುದೀಗ, ಸಾರಕ್ಕೆ ಹೋಗಿ, ಹಿಡಿದುಕೊಂಡಿಹೆನೆಂಬ ಧೀರರೆಲ್ಲರ ಮತಿಯ ಬಗೆಯ ನುಂಗಿತ್ತೆಂಬ ಶಬ್ದಕ್ಕರ್ಥ.

೨೨. ಉಪಚಾರದ ಗುರುವಿಂಗೆ, ಉಪಚಾರದ ಶಿಷ್ಯನು. ಉಪಚಾರದ ಲಿಂಗವು. ಉಪಚಾರದ ಜಂಗಮವು. ಉಪಚಾರದ ಪ್ರಸಾದವ ಕೊಂಡ ಗುರುವಿಂಗೆ ಭವದ ಲೆಂಕನಾಗಿ ಅಂಧಕನ ಕೈಯ್ಯ ಅಂಧಕ ಹಿಡಿದಂತೆ, ಇವರಿಬ್ಬರು ಹೊಲಬುಗೆಟ್ಟರು ಕಾಣಾ ಗುಹೇಶ್ವರಾ!

ಟೀಕು:— ಅಜ್ಞಾನಿ ಗುರುವಿನ ಕೈಯ್ಯಲ್ಲಿ, ಅಜ್ಞಾನಿಶಿಷ್ಯನು ಉಪದೇಶವ ಹಡದಡೆ, ಅವನು ಪೂಜಿಸುವ ಲಿಂಗ, ಅವನು ಆರಾಧಿಸುವ ಜಂಗಮ ಅವನು ಕೊಂಬ ಪ್ರಸಾದ, ಈ ತ್ರಿವಿಧವು ಉಪಚಾರವಲ್ಲದೆ, ಸಹಜವಲ್ಲ. ಇಂತಪ್ಪ ಗುರುಶಿಷ್ಯರಿಬ್ಬರು ಉಭಯ ಭ್ರಷ್ಟರೆಂಬುದೀ ವಚನದ ತಾತ್ಪರ್ಯಾರ್ಥ.

೨೩. ಲಿಂಗಜಂಗಮದ ಸಂಬಂಧ ಸಮವ ಮಾಡಿಹೆನೆಂಬರು. ಗುರು ಮುನ್ನವೊ, ಶಿಷ್ಯ ಮುನ್ನವೊ? ಆವುದು ಮುನ್ನವೆಂದರಿಯರು ನೋಡಾ! ಇದು ಕಾರಣ ಆವ ಸಂಬಂಧವನರಿಯರು ಗುಹೇಶ್ವರಾ.

ಟೀಕು:— ಅಂಗದಲ್ಲಿ ಲಿಂಗ ಸಂಬಂಧವಾಗಿ, ಆ ಲಿಂಗದಲ್ಲಿ ಮನೋಮೂರ್ತಿ ಜಂಗಮ ಸಂಬಂಧವಾಗಿ, ವಿರಳವಿಲ್ಲದೆ ಬೆರಸುವ ಭೇದವ ಬಲ್ಲಾತನೆ ಜ್ಞಾನಿ, ಅಲ್ಲದಾತನೆ ಅಜ್ಞಾನಿ ಎಂಬುದೀ ವಚನದ ತಾತ್ಪರ್ಯಾರ್ಥ.

೨೪. ಕಾಮನ ಸುಟ್ಟು, ಹೋಮವ ನುರುಹಿ, ತ್ರಿಪುರಸಂಹಾರದ ಕೀಲನರಿಯ ಬಲ್ಲರೆ, ಯೋಗಿಯಾದಡೇನು? ಭೋಗಿಯಾದಡೇನು? ಶೈವನಾದಡೇನು? ಸನ್ಯಾಸಿಯಾದಡೇನು? ಅಶನವ ತೊರೆದಾತ, ವ್ಯಸನವ ಮರೆದಾತ ಗುಹೇಶ್ವರಲಿಂಗದಲ್ಲಿ ಅವರು ಹಿರಿಯರೆಂಬೆನು.

ಟೀಕು:— ಸಕಲ ವಿಷಯಂಗಳ ಕಾಮಿಸುವ ಕಾಮವನು ದಹನ ಮಾಡುವದೆಂಬುದೀಗ, ಕಾಮನ ಸುಟ್ಟು ಎಂಬ ಶಬ್ದಕ್ಕರ್ಥ. ಉದರಾಗ್ನಿಯ ತೃಷೆಯನು ಜ್ಞಾನಾಗ್ನಿಯಲ್ಲಿ ದಹನವ ಮಾಡಬೇಕೆಂಬುದೀಗ ಹೋಮವನುರುಹಿ ಎಂಬ ಶಬ್ದಕ್ಕರ್ಥ. ಸ್ಥೂಲ ಸೂಕ್ಷ್ಮ ಕಾರಣವೆಂಬ

ತನುತ್ರಯಂಗಳ ಸಂಚವನರಿದು, ಕೆಡಿಸಬಲ್ಲಾತನೆ ದಿವ್ಯಶಿವಯೋಗಿ, ಎಂಬುದೀಗ ತ್ರಿಪುರಸಂಹಾರದ ಕೀಲವನರಿವಡೆ, ಅದೇ ಶಿವಯೋಗವೆಂಬ ಶಬ್ದಕ್ಕರ್ಥ. ಈ ಭೇದವ ಬಲ್ಲಾತನು ಆರಾದಡೇನು ಆತನೇ ಸುಜ್ಞಾನಿ ಎಂಬುದೀ ವಚನಡ ತಾತ್ಪರ್ಯಾರ್ಥ.

೨೫. ನಾನು ಘನ, ತಾನು ಘನವೆಂಬ ಹಿರಿಯರುಂಟೆ? ಜಗದೊಳಗೆ ಹಿರಿಯರ ಹಿರಿತನದಿಂದೇನಾಯಿತ್ತು? ಹಿರಿದುಕಿರಿದೆಂಬ ಶಬ್ದವಡಗಿಪರೆ, ಆತನೆ ಶರಣ ಗುಹೇಶ್ವರಾ!

ಟೀಕು:— ಜ್ಞಾನೋದಯುವಾಗಿ ಸ್ಥೂಲ ಸೂಕ್ಷ್ಮವೆಂಬ ವಿಪರೀತ ಭಾವ ತಲೆದೋರದಾತನೆ ಶಿವಯೋಗಿ, ಆತನೇ ಹಿರಿಯನು. ಈ ತೆರನನರಿಯದವರು ಅಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೨೬. ನಾವುನೇಮಂಗಳಾಗಿರ್ಪ ಹಿರಿಯರು ಆದಿಯ ಕುಳವನರಿಯರಾಗಿ, ಇದೇನಯ್ಯಾ! ಸೂಕ್ಷ್ಮದ ಗಂಟಲಗಾಣವಿದೇನಯ್ಯಾ! ನೆಳಲರೂಹಿಂಗೆ ಬಯಲು, ಸರಬೆ. ಅಪಾಯರಹಿತ ಗುಹೇಶ್ವರಾ!

ಟೀಕು:— ವೃಥಾ ಹೆಸರಹಿರಿಯರೆಲ್ಲರು. ತಮ್ಮ ನಿಜತತ್ವಸ್ವರೂಪವನರಿಯದೆ, ಕೆಡುತ್ತಿರ್ದರೆಂಬುದೀಗ, ನಾವು ನೇಮಂಗಳಾಗಿರ್ಪ ಹಿರಿಯರು ಆದಿಯ ಕುಳವನರಿಯರಾಗಿ, ಇದೇನಯ್ಯಾ! ಎಂಬ ಶಬ್ದಕ್ಕರ್ಥ. ಈ ನಿಜವು ಅತಿಸೂಕ್ಷ್ಮ ವಿಚಾರ ತಿಳಿದಿಹೆನೆಂದರೆ ಮತಿಗೆ ಜೀರ್ಣಿಸದೆಂಬುದೀಗ ಸೂಕ್ಷ್ಮದ ಗಂಟಲಗಾಣವೆಂಬ ಶಬ್ದಕ್ಕರ್ಥ. ಮಿಥ್ಯಾ ಶರೀರವಿಡಿದು, ಚರಿಸುವವರಿಗೆ ಉಳ್ಳುದೆಲ್ಲವು ಬಯಲ ಜ್ಞಾನ ಅಂತಪ್ಪ ಮಿಥ್ಯಾ ಜ್ಞಾನ ಸರಿಯಲ್ಲವೆಂಬುದೀಗ, ನೆಳಲರೂಹಿಂಗೆ, ಬಯಲು ಸರಬೆ ಎಂಬ ಶಬ್ದಕ್ಕರ್ಥ. ಇಂತಪ್ಪ ಅಪಾಯಬುದ್ಧಿ ಶಿವಜ್ಞಾನಿಗಿಲ್ಲವೆಂಬುದೀಗ ಅಪಾಯ ರಹಿತವೆಂಬ ಶಬ್ದಕ್ಕರ್ಥ.

೨೭. ಜೀವತಾಮಸದ ಮಾಯದ ಬಲೆಯ ಭ್ರಾಂತಿಗೆ ಸೋಲುವ ಶರೀರ ಸಂಸಾರ ಸಂಗವ ಭೇದಿಸಿ, ನೋಡುವರೆ, ದೂರ. ಚಿಂತೆಯನೆ ಗೆಲಿದು, ಸುಳಿದಡೆ, ಗುಹೇಶ್ವರನೆಂದರಿದ ಶರಣಸಾರಾಯನು.

ಟೀಕು:— ಜೀವಭಾವಭ್ರಾಂತಿಯ ಗೆಲಿದು, ಅನ್ಯ ಚಿಂತೆ ಇಲ್ಲದೆ, ಉಳಿದಾತನೆ ಶಿವಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೮. ಹುಟ್ಟಿ ಕೆಟ್ಟಿತ್ತು ಭಾಗ, ಹುಟ್ಟದೆ ಕೆಟ್ಟಿತ್ತು ಭಾಗ. ಮುಟ್ಟಿ ಕೆಟ್ಟಿತ್ತು ಭಾಗ, ಮುಟ್ಟದೆ ಕೆಟ್ಟಿತ್ತು ಭಾಗ. ಇದೇನೋ ಇದೆಂತೋ?



ಅರಿಯ ಬಾರದು. ಇದೇನೋ ಇದೆಂತೋ ಎಂಬ ಕತ್ತಲೆಕಾಣಿರಯ್ಯಾ! ಇದೇನೋ ಇದೆಂತೋ ಎಂಬ ಎರಡು ಮಾತಿನ ನಡುವೆ ಉರಿಹತ್ತಿತ್ತು ಮೂರುಲೋಕ ಗುಹೇಶ್ವರಾ!

ಟೀಕು:— ಹುಟ್ಟಿಯೂ ಶಿವಜ್ಞಾನವಿಲ್ಲದೆ, ಹಲಬರು ಕೆಟ್ಟರು. ಹುಟ್ಟಿಯೂ ಹುಟ್ಟದೆ ಶಿವಜ್ಞಾನಿಗಳಾಗಿ ಹಲಬರು ಭವಗೆಟ್ಟರೆಂಬುದೀಗ, ಹುಟ್ಟಿಕೆಟ್ಟಿತ್ತು ಭಾಗ, ಹುಟ್ಟದೆ ಕೆಟ್ಟಿತ್ತು ಭಾಗವೆಂಬ ಶಬ್ದಕ್ಕರ್ಥ. ಲಿಂಗವ ಮುಟ್ಟಿ, ಲಿಂಗದ ನಿಜವನರಿದು, ಆ ಲಿಂಗದಲ್ಲಿಯೆ ಲಯವಾದವರು ಕೆಲಬರು ಲಿಂಗಮುಟ್ಟಿಯೂ ನಿಜವ ನರಿಯದೆ, ಮುಟ್ಟದೆ ಕೆಟ್ಟರು ಕೆಲಬರೆಂಬುದೀಗ ಮುಟ್ಟಿ ಕೆಟ್ಟಿತ್ತು ಭಾಗ, ಮುಟ್ಟದೆ ಕೆಟ್ಟಿತ್ತು ಭಾಗವೆಂಬ ಶಬ್ದಕ್ಕರ್ಥ. ಈ ಉಭಯ ಸಂದೇಹವೇನೋ ಎಂತೋ ಎಂದು ತೋರುತ್ತಿಪ್ಪ ಅಜ್ಞಾನದೊಳಗೆ ತಾಪತ್ರಯಾಗ್ನಿ ಎದ್ದು ಸುಡುತ್ತಿರ್ದಿತ್ತೆಂಬುದೀಗ, ಇದೇನೋ ಇದೆಂತೋ ಕತ್ತಲೆ ಗವಿಯಿತ್ತು. ಇದೇನೋ ಇದೆಂತೋ ಎಂಬೆರಡು ಮಾತಿನ ನಡುವೆ ಉರಿಹತ್ತಿತ್ತು ಮೂರುಲೋಕವನೆಂಬ ಶಬ್ದಕ್ಕರ್ಥ.

೨೯. ಬಿರುಗಾಳಿ ಬೀಸಿ, ಮರ ಮುರಿವಂತೆ, ಸುಳುಹ ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ, ಸುಳಿಯಬೇಕು. ಸುಳಿವಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು. ಸುಳಿದಡೆ ನೆಟ್ಟನೆ ಭಕ್ತನಾಗಿ, ನಿಲಬೇಕು. ಸುಳಿದು, ಜಂಗಮವಾಗಲರಿಯದ, ನಿಂದು ಭಕ್ತನಾಗಲರಿಯದ, ಉಭಯ ಭ್ರಷ್ಟರನೇನೆಂಬೆ ಗುಹೇಶ್ವರಾ?

ಟೀಕು:— ಸಂಸಾರವಿಕಾರವೆಲ್ಲವನು ತೊರೆದು, ಶಾಂತನಾಗಿ, ಸುಳಿದಾತನೆ ಜಂಗಮ. ಭಯ ಭೀತಿ ಭೃತ್ಯಾಚಾರದಿಂದ ಸಹಜ ಮಾಟವಮಾಡುತ್ತ ನಿಂದಾತನೆ ಭಕ್ತ ಈ ಪಥವನರಿಯದಿರ್ದರೆ, ಆ ಜಂಗಮವು ಆ ಭಕ್ತನು ಉಭಯಭ್ರಷ್ಟರೆಂಬುದೀ ವಚನದ ತಾತ್ಪರ್ಯಾರ್ಥ.

೩೦. ಕಾರಮೇಘವೆದ್ದು, ಧಾರಾವರ್ತಿ ಸುರಿವಾಗ, ಧಾರುಣಿಯೆಲ್ಲವೂ ಮುಳುಗಿತ್ತು ನೋಡಾ! ಕಾರಿರುಳ ಕಣ್ಣೊಳಗೆ ಸೂರ್ಯರನೇಕರು ಮೂಡಿ, ದಾರಿಯ ಹೊಲಬೆಂಬುದು ಕೆಟ್ಟಿತ್ತು ನೋಡಾ! ಮಾರಾಯ ಘಾಯದಲ್ಲಿ ಸಾಯಕೊಂದಲ್ಲಡೆ ಸೂರ್ಯರನೇಕರು ಮಡಿಯರು ಗುಹೇಶ್ವರಾ.

ಟೀಕು:— ಕಾರ ಮುಗಿಲೆಂದರೆ ಅಭ್ರಚ್ಛಾಯಾಮಾತ್ರವಪ್ಪ ಶರೀರವೆಂಬರ್ಥ. ಈ ಶರೀರದೊಳಗೆ ಸಂಸಾರದ ಸಾರವೆಂಬ ವರುಷ ಸುರಿವುತ್ತಿರಲು, ಧಾರುಣಿ ಎಂಬ ಪಿಂಡವೆಲ್ಲಾ ಮುಳುಗಿತ್ತೆಂಬುದೀಗ, ಧಾರಾವರ್ಷಿ ಸುರಿವಾಗ ಧಾರುಣಿ ಎಲ್ಲಾ ಮುಳುಗಿತ್ತು ನೋಡಾ! ಎಂಬ ಶಬ್ದಕರ್ಥ. ಅಜ್ಞಾನಚಕ್ಷುವಿನೊಳಗೆ ಅರಿದು ನೋಡಿಹೆನೆಂದರೆ, ಪ್ರತಿಸೂರ್ಯನ್ಯಾಯದಂತೆ. ಶಿವಭಾವತಪ್ಪಿ ವಿಪರೀತಭಾವ ತಲೆದೋರಿತ್ತೆಂಬುದೀಗ, ಕಾರಿರುಳು ಕಣ್ಣೊಳಗೆ ಸೂರ್ಯರನೇಕರು ಮೂಡಿದರೆಂಬ ಶಬ್ದಕ್ಕರ್ಥ. ಅದುಕಾರಣ ಇಂತಪ್ಪ ಅಜ್ಞಾನಿಗಳಿಗೆ ಶಿವಪಥವನರಿಯಬಾರದೆಂಬುದೀಗ ದಾರಿಯ ಹೋಬೆಂಬುದು ಕೆಟ್ಟಿತ್ತು ನೋಡಾ! ಎಂಬ ಶಬ್ದಕ್ಕರ್ಥ. ಸುಜ್ಞಾನವೆಂಬ ಶಸ್ತ್ರದಲ್ಲಿ ಅಜ್ಞಾನವ ನಷ್ಟವಮಾಡಿದಲ್ಲದೆ, ಆ ವಿಪರೀತಭಾವವಳಿದು, ಶಿವಜ್ಞಾನ ವೇದ್ಯವಾಗದೆಂಬುದೀಗ, ಮಾರಾಯ ಘಾಯದಲ್ಲಿ ಸಾಯಕೊಂದಲ್ಲದೆ, ಸೂರ್ಯರನೇಕರು ಮಡಿಯರೆಂಬ ಶಬ್ದಕ್ಕರ್ಥ.

೩೧. ತಾನು ಮಿಂದು ಕಾಲ ತೊಳೆದ ಬಳಿಕ ಲಿಂಗಕ್ಕೆ ಮಜ್ಜನಕ್ಕೆರೆದರು. ತಾನು ಲಿಂಗವೋ, ಲಿಂಗ ಲಿಂಗವೋ, ಬಲ್ಲರೆ ನೀವು ಹೇಳಿರೆ? ಲಿಂಗ ಸಂಬಂಧವನರಿಯದೆ ಕೆಟ್ಟರು ಗುಹೇಶ್ವರಾ

ಟೀಕು:—ಸ್ವಯಂಜ್ಯೋತಿ ಪ್ರಕಾಶವಸ್ತು ತಾನೆಂದರಿಯದೆ, ಅಜ್ಞಾನದಿಂದ ತಾನು ಮಿಂದು, ಸಾಂಗೋಪಾಂಗವ ಶುದ್ಧವ ಮಾಡಿಕೊಂಡ ಬಳಿಕ, ಲಿಂಗಾರ್ಚನೆ ಮಾಡಿಹೆನೆಂಬವರು ಅಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೩೨. ಕಾರ್ಯವನರಿಯರು, ಕೊರತೆಯನರಿಯರು, ವಾಯಕ್ಕೆ ಬಳಲುವರು. ತಾವು ಜ್ಞಾನಿಗಳೆಂದು ತಾಯಿ ಇಲ್ಲದ ಮಗನ ತಲೆವಿಡಿಯಲರಿಯದ, ದೇವರಾದೆವೆಂದಡೆ ನಾಚಿದೆನು ಗುಹೇಶ್ವರಾ.

ಟೀಕು:—ಶಿವಜ್ಞಾನವಿಲ್ಲದೆ ಅಜ್ಞಾನದಲ್ಲಿ ತಾವು ಶಿವಜ್ಞಾನಿಗಳೆಂಬವರು ವಾಗದ್ವೈತಿಗಳು. ಅದು ಪಥವಲ್ಲ ಮತ್ತೆಂತೆಂದೊಡೆ, ತಾಯಿ ಇಲ್ಲದ ಮಗನೆಂದಡೆ, ಅಜಾತಸ್ವಯಂಭು. ಆ ಅಜಾತಸ್ವಯಂಭುವಿನ ತಲೆ ಎಂದರೆ, ಸುಜ್ಞಾನ ಅಂತಪ್ಪ ಸ್ವಯಂಜ್ಯೋತಿ ಪ್ರಕಾಶವನರಿಯದೆ, ತಾವು ನಿಜವನೆಯ್ದಿದೆವೆಂಬ ಮಾತಲ್ಲವು ಮಿಥ್ಯವೆಂಬುದೀ ವಚನದ ತಾತ್ಪರ್ಯಾರ್ಥ.



೩೩. ನಡೆವರಿಗೊಂದು ಬಟ್ಟೆ, ಮನೆಯೊಡೆಯರಿಗೊಂದು, ಬಟ್ಟೆ, ನಡೆಯದು, ನಡೆಯದು. ಹೋ, ನಡೆಗೆಟ್ಟು ನಿಂದಿತ್ತಲ್ಲಾ. ಗಮನಾಗಮನದ ನುಡಿಯ ಬೆಡಗಿನ ಕೀಲ ಮಡಗಿದಾತ ಬಲ್ಲ ಗುಹೇಶ್ವರಾ.

ಟೀಕು:— ಚರಿಸಿ ಬಂದ ಜಂಗಮಕ್ಕೆ ಬೇರೊಂದಾಳಿಯಾಗಿ, ಮನೆಯ ಭಕ್ತಂಗೆ ಬೇರೊಂದಾಳಿಯಾದರೆ, ಒಂದಕ್ಕೊಂದು ಉತ್ತರತತ್ತರವಾಗಿ ನಡೆಯದು. ಈ ಉಭಯ ಪಥವು ಒಂದೇ ತಿಳಿಯುಹ ಭೇದವ ಸಹಜ ಸಂಬಂಧಿಗಳಲ್ಲದೆ, ಅರಿಯರೆಂಬುದೀ ವಚನಾರ್ಥ.

೩೪. ಏನೆಂದರಿಯರು, ಎಂತೆಂದರಿಯರು, ಅರಿವನರಿದಿಹೆವೆಂಬರು. ಮರವ ಮರೆದಿಹೆವೆಂಬರು ಒಂದನರಿದಿಹೆನೆಂದರೆ, ಮುಖ ಮೂರಾಯಿತ್ತು. ಮೂರು ಮುಖವ ಏಕ ಗ್ರಾಹಕವ ಮಾಡಿದಲ್ಲದೆ ಶರಣನಲ್ಲ ಗುಹೇಶ್ವರಾ.

ಟೀಕ:— ನಿಜದರಿವುವಿಡಿದು, ತಾನಾರೆಂಬುದನರಿದಡೆ, ಆ ಅರಿವು ಅಜ್ಞಾನವ ಮರೆದು, ಮರೆದೆನೆಂಬ ಭಿನ್ನಭಾವ ತೊರೆದುದೆ, ಅದೆ ಮರೆವ ಮರೆದ ಬುದ್ಧಿ ಎಂಬುದೀಗ, ಏನೆಂದರಿಯರು, ಎಂತೆಂದರಿಯರು, ಅರಿವನರಿದಿಹೆವೆಂಬರು, ಮರೆವ ಮರೆದಿಹೆನೆಂಬರು, ಎಂಬ ಶಬ್ದಕ್ಕರ್ಥ. ಇಂತು ನಿಜವ ನರಿದೆನೆಂಬ ಅರಿವಿನ ಮುಂದೆ, ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿವಿಧವು ಬೇರಿಟ್ಟು, ತೋರುವವೆಂಬುದೀಗ, ಒಂದನರಿದಿಹೆನೆಂದರೆ, ಮುಖ ಮೂರಾಯಿತ್ತೆಂಬ ಶಬ್ದಕ್ಕರ್ಥ. ಆ ಜ್ಞಾತೃ ಜ್ಞಾನ ಜ್ಞೇಯಂಗಳನು ಏಕಗ್ರಾಹಕವಮಾಡಲು, ಆತನೇ ಶಿವಶರಣನೆಂಬುದೀಗ, ಮೂರು ಮುಖವ ಏಕಗ್ರಾಹಕವ ಮಾಡಿದಲ್ಲದೆ ಶರಣನಲ್ಲ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೩೫. ಪರಿ ಪರಿಯ ಅವಲೋಹವ ಪರುಷ ಮುಟ್ಟಲು, ಹೊನ್ನು ಪರಿವರ್ತನಕ್ಕೆ ಬಂದು, ಸಲ್ಲುತ್ತಿದ್ದವು ನೋಡಾ! ಪರುಷವ ಮಾಡುವ ಪುರುಷರಿಲ್ಲರೂ, ಪರುಷ ಮುಟ್ಟಿದ ಹೊನ್ನಿನಂತಿರ್ದರು ನೋಡಾ! ಪರುಷ ತಾನಾಗಲು, ಪರುಷ ಹರಿಬ್ರಹ್ಮರಿಗಳವಲ್ಲ. ಸುರರು, ಕಿನ್ನರರೆಲ್ಲರೂ, ನಿಮ್ಮ ವರದಲ್ಲಿ, ಸಿಲುಕಿದರು. ಪರುಷದಂತಿದ್ದರು ನಮ್ಮ ಗುಹೇಶ್ವರನ ಶರಣರು.

ಟೀಕು:— ಪರುಷ ಮುಟ್ಟದ ಲೋಹ ಹೊನ್ನಾಯಿತ್ತಲ್ಲದೆ ಪರುಷವಾಗಲರಿಯದೆಂಬಂತೆ, ಗುರು ಕರುಣವ ಹಡದು, ಲಿಂಗ ದರ್ಶನಸ್ಪ

ರ್ಶನವಮಾಡುವರೆಲ್ಲರೂ, ಕೃತಾರ್ಥ ಜೀವಿಗಳಾಗಿಹರಲ್ಲದೆ, ಲಿಂಗವಾಗಲರಿಯರು. ಇದುಕಾರಣ ಲಿಂಗವಿಡಿದ ಶರಣ, ಲಿಂಗವಾಗಿಹನೆಂಬುದೀ ವಚನದ ತಾತ್ಪರ್ಯಾರ್ಥ.

೩೬. ಮಾಮರದೊಳಗೊಂದು ಮಾಯದ ಮಂಜು ಕವಿದರೆ ಹೂ,ಮಿಡಿ, ಫಲಂಗಳು, ಉದರವಿನ್ನೆಂತೊ? ಮಂಜಿನ ರಸವನುಂಡು, ಫಲನಿಮಿರ್ದು ಬೆಳೆದರೆ, ಆ ಫಲವ ನಾನು ಮುಟ್ಟೆನು ಕಾಣಾ ಗುಹೇಶ್ವರಾ.

ಟೀಕು:— ಮಾಮರವೆಂದರೆ ವಿವೇಕವೆಂಬ ವೃಕ್ಷ, ಆ ವಿವೇಕವೆಂಬ ವೃಕ್ಷದ ಮೇಲೆ ಅಜ್ಞಾನವೆಂಬ ಮಂಜು ಕವಿಯಲು, ಆ ಜ್ಞಾನಾಜ್ಞಾನವಿಡಿದು, ಅರಿದ ಅರವಿನಿಂದ ಚತುರ್ವಿಧ ಫಲಪದಂಗಳು ಬೆಳೆದವೆಂಬುದೀಗ, ಮಾಮರದೊಳಗೊಂದು ಮಾಯದ ಮಂಜು ಕವಿದರೆ, ಹೂ, ಮಿಡಿ, ಫಲಂಗಳು ಉದರವಿನ್ನೆಂತೋ ಮಂಜಿನ ರಸವನುಂಡು, ಫಲಸಿಮಿರ್ದು ಬೆಳೆದವೆಂಬ ಶಬ್ದಕ್ಕರ್ಥ. ಇಂತಪ್ಪ ಫಲಪ್ರಾಪ್ತಿಯಿಂದ ಭವಂಗಳು ಬಂದು ಕಾಡುವವು ಎಂದರಿದು ನಿಜದಿಂದ ತನ್ನ ತಾನರಿಯಲು, ಆ ಫಲಪದಂಗಳು ಕೆಡುವವೆಂಬುದೀಗ, ಆ ಫಲವ ನಾನು ಮುಟ್ಟೆನೆಂಬ ಶಬ್ದಕ್ಕರ್ಥ.

೩೭. ಸಂಸಾರ ಸಂಗವ ಭೇದಿಸಿ ನೋಡುವರೆ, ದೂರವೆ ಕಪಟ ಕನ್ನಡವೆ ರವಿಯ ತಪ್ಪಿಸಿ ಸುಳಿವ ಗುಹೇಶ್ವರನೆಂದರಿದ ಶರಣ ಸಂಸಾರಿಯೇ?

ಟೀಕು:—ಸಂಸಾರ ಸಂಗವನರಿದಡೆ, ಏನೂ ಆಯಾಸವಿಲ್ಲ. ಸಂಸಾರಕ್ಕೆ ಹೇಸಿ, ಆ ಹೇಸಿಕೆಯ ತೊಲಗಿಸಿ ತಾ ಲಿಂಗಸುಖಿಯಾಗಿ, ಭಿನ್ನ ಪ್ರಕಾಶವಿಲ್ಲದಿರ್ಪಾತನೆ ಶಿವಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೩೮. ತನ್ನ ತಾನರಿದಿಹೆನೆಂಬವನ ಮುನ್ನ ನುಂಗಿತ್ತು ಮಾಯೆ, ನಿನ್ನೊಳಗೆ ಅರಿವು ಭಿನ್ನವಾಗಿರುತ್ತಿರಲು, ಮುನ್ನವೆ ನೀನು ಮಾಯಸ್ಥ ನೋಡಾ! ಭಿನ್ನವಿಲ್ಲದ ಅಜ್ಞಾನವ ಭಿನ್ನನ ಮಾಡ ಬಲ್ಲಡೆ, ತನ್ನಲ್ಲಿ ಅರಿವು ನಿಜವಪ್ಪುದು ಗುಹೇಶ್ವರಾ.

ಟೀಕು:—ತನ್ನ ತಾನಾರೆಂಬುದ ನೋಡಿಹೆನೆಂಬನ್ನಕ್ಕರ, ತನ್ನ ಅರಿವಿನ ಮರಹು ತನ್ನನೆ ನುಂಗಿತ್ತು. ಅದುಕಾರಣ ಅರಿವಿಂಗೆ ದೂರಸ್ಥನು.



ಈ ಮರ್ಮವ ನರಿದು, ಅಜ್ಞಾನವ ಸುಜ್ಞಾನದಿಂದ ಭಿನ್ನವ ಮಾಡಿದರೆ, ಆತನೆ ಶಿವಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೩೯. ಸುಖವ ಬಲ್ಲಾತ ಸುಖಿಯಲ್ಲ. ದುಃಖವ ಬಲ್ಲಾತ ದುಃಖಿಯಲ್ಲ. ಸುಖದುಃಖವೆರಡನೂ ಬಲ್ಲಾತ ಜ್ಞಾನಿಯಲ್ಲ. ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲಡೆ, ಬಲ್ಲ ಗುಹೇಶ್ವರಾ.

ಟೀಕು:— ಸುಖದುಃಖವೆರಡನು ಇದಿರಿಟ್ಟು, ಅರಿವುತ್ತ ಭೋಗಿಸುತ್ತಿರ್ಪಾತನು ಲಿಂಗಸುಖಿಯಲ್ಲ. ಮತ್ತೆಂತೆಂದೊಡೆ, ಶ್ರೀಗುರು ಕರಸ್ಥಲದಲ್ಲಿ ಉದಯವಾಗದ ಮುನ್ನವೆ, ತನ್ನಲ್ಲಿ ತಿಳಿವುಹುಟ್ಟಿ, ತಾನೆಂಬ ಮೂಲಾ ಹಂಕಾರವಳಿದಾತನೆ, ಶಿವಶರಣನೆಂಬುದೀಗ, ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲಡೆ ಬಲ್ಲನೆಂಬ ಶಬ್ದಕ್ಕರ್ಥ.

೪೦. ದರ್ಪಣದೊಳಗಣ ರೂಹಿಂಗೆ, ಆ ದರ್ಪಣವೆ ಉತ್ಪತ್ತಿ ಸ್ಥಿತಿ, ಲಯವಲ್ಲದೆ, ಮರ್ತ್ಯಲೋಕದೊಳಗಣ ಪ್ರಕೃತಿಯಲ್ಲಿಲ್ಲವೇಕಯ್ಯ! ಆ ಲೋಕನೊಳಗೆ ಉತ್ಪತ್ತಿ, ಸ್ಥಿತಿ, ಲಯವಿದೇನಯ್ಯಾ ಕರ್ಮಬದ್ಧರು. ಒಂದರ ಪರಿ ಒಂದಕ್ಕಿಲ್ಲ. ಕಂಡರೆ, ದೃಷ್ಟವಹ ಶ್ರೀಗುರು ಹಸ್ತದೊಳಗಣ ಸದ್ಭಕ್ತಂಗೆ ಅಲ್ಲಿಯೇ ಉತ್ಪತ್ತಿ, ಸ್ಥಿತಿ, ಲಯ, ಇದೆಂಥ ಕರ್ಮದ ಪರಿಯೇ? ಮತ್ತಾವ ಪರಿಯು ಅಲ್ಲ. ಲಿಂಗದ ಪರಿಯ ಮಾಡಿದ ಗುಹೇಶ್ವರಾ.

ಟೀಕು:— ಕನ್ನಡಿಯೊಳಗಣ ಪ್ರತಿಬಿಂಬ, ಅಲ್ಲಿಯೇ ತೋರಿ, ಅಲ್ಲಿಯೇ ಅಳಿವಂತೆ, ಶ್ರೀಗುರುವಿನೊಳಗೆ ಉದಯಿಸಿದ ಶರಣನು ಆ ಶ್ರೀಗುರುವಿನೊಳಗೆ ಅಳಿವನಲ್ಲದೆ ಲೋಕದ ಸಂಸಾರಿಗಳ ಹಾಗೆ ಸಾಯನೆಂಬುದೀ ವಚನದ ತಾತ್ಪರ್ಯಾರ್ಥ.

೪೧. ಸುತ್ತಿ, ಸುತ್ತಿ ಬಂದಡಿಲ್ಲ. ಲಕ್ಷ ಗಂಗೆಯ ಮಿಂದಡಿಲ್ಲ. ತುಟ್ಟತುದಿಯ ಮೇರುಗಿರಿಯ ಮೆಟ್ಟಿ, ಕೂಗಿದಡಿಲ್ಲ. ನಿತ್ಯ ನೇಮದಿಂದ ತನುವ ಮುಟ್ಟಿ ಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ ಅಂದಂದಿಂಗೆ ಅತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸ ಬಲ್ಲಡೆ, ಬಚ್ಚಬರಿಯ ಬೆಳಗು ಗುಹೇಶ್ವರ ಲಿಂಗವು.

ಟೀಕು:—ಅನೇಕ ಗಂಗೆಯ ಮಿಂದು, ಜಪ, ತಪ, ನಿತ್ಯ ನಿಯಮಂಗಳ ಮಾಡಿದಡೆ, ಅಗೋಚರ ಪರಬ್ರಹ್ಮವು ಕಾಣಬಾರದು. ಮ

ತ್ತೆಂತು ಕಾಣಬೇಕೆಂದೊಡೆ, ಮನದ ವ್ಯಾಕುಲವಮಾದು ನಿಜದರಿವು ಸಾಧ್ಯವಾದಡೆ, ಆತನೇ ಶಿವಶರಣನೆಂಬುದೀ ವಚನಾರ್ಥ.

೪೨. ಮನದ ಮರವೆ ತನುವಿನಲ್ಲಿ ಇರಲು, ಅದೆಂತೋ ಅರಿವು ಎರಡು ಬೆಟ್ಟಕ್ಕೆ ಒಂದೆ ತಲೆಯೊಡ್ಡಿ ಧರಿಸಿದ ಬಳಿಕ ತಲೆ ಕಾಲಗಿಕ್ಕಿದ ಬಳ್ಳಿಯೆಂತು ಹರಿವುದೋ? ಗುಹೇಶ್ವರಾ, ನಿಮ್ಮ ಶರಣರು ಬಾರದ ಭವದಲ್ಲಿ ಬಂದ ಕಾರಣ ಸುಖಿಗಳಾದರಯ್ಯ.

ಟೀಕು:--ಮನದಲ್ಲಿ ಅಜ್ಞಾನವೆಡೆಗೊಂಡು, ತನು ಮುಖಕ್ಕೆ ಎರಗಿಪ್ಪುದೀಗ, ಮನದ ಮರವೆ, ತನುವಿನೊಳಗೆ ಇರಲು, ಎಂಬ ಶಬ್ದಕ್ಕರ್ಥ. ಎರಡು ಬೆಟ್ಟವೆಂದಡೆ, ಅಹಂಕಾರ ಮಮಕಾರವೆಂಬರ್ಥ. ಆ ಅಹಂಕಾರ ಮಮಕಾರಂಗಳನ್ನು ತನ್ನ ಅರಿವಿನ ಮೇಲೆ ಧರಿಸಿಕೊಂಡು, ನಾನರಿದೆ, ಎನ್ನರಿವು ಎಂಬ ಭಾವವುಳ್ಳನ್ನಕ್ಕರ, ಭವಪಾಶ ತೆಗೆಯಾಗದೆಂಬುದೀಗ, ಎರಡು ಬೆಟ್ಟಕ್ಕೆ ಒಂದೆ ತಲೆಯೊಡ್ಡಿ ಧರಿಸಿದ ಬಳಿಕ ತಲೆಕಾಲಗಿಕ್ಕಿದ ಬಳಿಯೆಂತು ಹರಿವುದೋ ಎಂಬ ಶಬ್ದಕ್ಕರ್ಥ. ಈ ನಿರ್ಣಯವ ನರಿದವರು ಭವಕ್ಕೆ ಬಾರದೆ ಅಭವರಾದರೆಂಬುದೀಗ, ಗುಹೇಶ್ವರಾ ನಿಮ್ಮ ಶರಣರು ಬಾರದ ಭವದಲ್ಲಿ ಬಂದ ಕಾರಣ, ಸುಖಿಗಳಾದರೆಂಬ ಶಬ್ದಕ್ಕರ್ಥ.

೪೩. ಲೋಕ ಒಂದನೆಂದರೆ, ತಾನೊಂದನೆನಬೇಡ. ಮತ್ತಾದೇನನೆಂದಡೆಯೂ ತನ್ನಂದನೆಂದರೆನಬೇಡ. ಭೈತ್ರಕ್ಕೆ ಬೆಂಗುಡನಿಕ್ಕಿದಂತಿರಬೇಕು ಹಿರಿಯರು ಗುಹೇಶ್ವರಾ.

ಟೀಕು:-- ತಾನು ಶಿವಜ್ಞಾನ ಸಂಪನ್ನನಾದಡೆ, ಲೋಕದ ಅಜ್ಞಾಗಳು ತನ್ನನೇನಂದಡೆಯೂ, ತಾನದನೇನೆಂದು ಅರಿಯದೆ, ಮಹಾ ಗಂಭೀರವಾಗಿರಬೇಕೆಂಬುದೀ ವಚನಾರ್ಥ.

೪೪. ನಾಚಿ ಮಾಡುವುದು, ಮಾಡುವುದಲ್ಲ; ನಾಚದೆ ಮಾಡುವುದು, ಮಾಡುವುದಲ್ಲ; ಹೇಸಿ ಮಾಡುವುದು, ಮಾಡುವುದಲ್ಲ; ಹೇಸದೆ ಮಾಡುವುದು ಮಾಡುವುದಲ್ಲ; ಅಲಸಿ ಮಾಡುವುದು ಮಾಡುವುದಲ್ಲ; ಅಲಸದೆ ಮಾಡುವುದು, ಮಾಡುವುದಲ್ಲ; ನಾಚದೆ, ಹೇಸದೆ, ಅಲಸದೆ ಮಾಡಿದಡೆ ಮಾಡುವುದು ಗುಹೇಶ್ವರಾ.

ಟೀಕು:-- ಸಂಸಾರ ಸಂಗವ ನಾಚಿ ಮಾಡಿದಡೆ ಲಜ್ಜೆ ಬಿಡದು. ನಾಚದೆ ಮಾಡಿದಡೆ ವೈರಾಗ್ಯ ಬಿಡದು. ಹೇಸಿ ಮಾಡಿದಡೆ, ಮನದಲ್ಲಿ



ಜಿಗುಪ್ಸೆ ಬಿಡದು. ಹೇಸದೆ ಮಾಡಿದಡೆ ಆ ಉಭಯಭಾವವರಿಯದು. ಅಲಸಿ ಮಾಡಿದಡೆ, ಜಾಡ್ಯ ಬಿಡದು. ಅಲಸದೆ ಮಾಡಿದಡೆ ಅಹಂಕಾರ ಬಿಡದು. ಮತ್ತೆಂತೆಂದೊಡೆ, ಸುಜ್ಞಾನೋದಯವಾಗೆ, ಸಂಸಾರ ಮಿಥ್ಯ ತನ್ನಿಂದ ತಾನೆ ಅಳಿದು ಹೋಗಲು, ಅದೇ ತತ್ವಯುಕ್ತಿ ಎಂಬುದೀ ವಚನದ ತಾತ್ಪರ್ಯಾರ್ಥ.

೪೫. ಬಂದುದನೆಲ್ಲವ ನುಂಗಿ, ಬಾರದುದನೆಲ್ಲವ ಹಿಂಗಿ, ಅರಿಗಿಲ್ಲದವಸ್ಥೆ ಎನಗಾಯಿತ್ತು. ಆ ಅವಸ್ಥೆಯರತು, ನೀನು ನಾನೆಂದರಿದೆ ಗುಹೇಶ್ವರಾ.

ಟೀಕು:--ಶಿವಜ್ಞಾನದ ಸತ್ಪಥಕ್ಕೆ ವರ್ತಿಸುವಂತಹವೆಲ್ಲವನುಗ್ರಹಿಸಿದೆನೆಂಬುದೀಗ, ಬಂದುದನೆಲ್ಲವ ನುಂಗಿ ಎಂಬ ಶಬ್ದಕ್ಕರ್ಥ. ಆ ಶಿವಜ್ಞಾನದ ಬಗೆಗೆ ಬಾರದಂಥಾ ದುಃಪಥವೆಲ್ಲವನೂ ಹಿಂಗಿಸಿದೆನೆಂಬುದೀಗ, ಬಾರದುದನೆಲ್ಲವ ಹಿಂಗಿಸಿದೆನೆಂಬ ಶಬ್ದಕ್ಕರ್ಥ. ಈ ಉಭಯವನುಗ್ರಹಿಸದೆ, ಹಿಂಗಿಸಿದೆನೆಂಬ ಭೇದ ಬುದ್ಧಿ ಮನದಲ್ಲಿ ಇರುತ್ತಿರ್ಪಕಾರಣ ಅರಿಗಿಲ್ಲದವಸ್ಥೆ ಎನಗಾಯಿತ್ತೆಂಬ ಶಬ್ದಕ್ಕರ್ಥ. ಆ ಭೇದಬುದ್ಧಿಯರಿತು, ಅಂಗವೇ ತಾನೆಂದರಿದಾತನೇ ನಿಜಶರಣನೆಂಬುದೀಗ ಆ ಅವಸ್ಥೆಯರಿತು ನೀನು ನಾನೆಂದರಿದೆನೆಂಬ ಶಬ್ದಕ್ಕರ್ಥ.

೪೬. ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು, ಲಿಂಗವಾರ್ತೆಯನುಡಿವರಯ್ಯಾ! ಕಾಯಜೀವಿಗಳೆಲ್ಲ ಕಳವಳಿಸಿ ನುಡಿವರಯ್ಯಾ! ಮನಬಂದ ಪರಿಯಲ್ಲಿ ನುಡಿವವರಿಗೆ ಗುಹೇಶ್ವರನೆಂಬ ಲಿಂಗ ನಿಮಗೆಲ್ಲಿಯದೊ?

ಟೀಕು:--ಅಶನವ್ಯಸನದಲ್ಲಿ ಮಗ್ನರಾಗಿರ್ಪವರುಗಳು ಇಲ್ಲದರಿವನುಂಟುಮಾಡಿಕೊಂಡು, ನುಡಿವರಾಗಿ, ಅವರಿಗೆ ಶಿವಜ್ಞಾನ ಸಾಧ್ಯವಾಗದೆಂಬುದೀ ವಚನಾರ್ಥ.

೪೭. ಆದಿಯನರಿಯರು ಅನಾದಿಯನರಿಯರು. ಒಂದರೊಳಗಿಪ್ಪ ಎರಡನರಿಯರು. ಎರಡರೊಳಗಿಪ್ಪ ಮೂರರದ ಕೀಲವನರಿಯರು. ಮೂರರ ಸಂದು ಆರಾದುದನರಿಯರು. ಆರೆಂದು ನುಡಿವಗಾರುಮಾತು ತಾನಲ್ಲ. ಗುಹೇಶ್ವರನ ನಿಲವನರಿದಡೆ, ಒಂದು ಇಲ್ಲ. ಅರಿಯದಿರ್ದರೆ ಬಹುಮುಖವಯ್ಯಾ.

ಟೀಕು:— ಅದಿಯೇ ಸಕಲ, ಅನಾದಿಯೇ ನಿಃಕಲವೆಂಬುದೀಗ, ಆದಿಯನರಿಯರು, ಅನಾದಿಯನರಿಯರೆಂಬ ಶಬ್ದಕ್ಕರ್ಥ. ಏಕ ಏವ ಪರಬ್ರಹ್ಮವೆಂಬುದೊಂದು ವಸ್ತುವಿನೊಳಗೆ, ಶಿವಶಕ್ತಿ ಎಂಬೆರಡು ಹುಟ್ಟಿತ್ತು. ಆ ಭೇದವ ತಿಳಿವುದರಿದೆಂಬುದೀಗ, ಒಂದರೊಳಗಿರ್ಪ ಎರಡನರಿಯರೆಂಬ ಶಬ್ದಕ್ಕರ್ಥ. ಆ ಶಿವಶಕ್ತಿಯೊಳಗಿರ್ಪ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಂತ್ರಶಕ್ತಿ, ಎಂಬ ತ್ರಿವಿಧವನರಿವುದು ಅಪೂರ್ವವೆಂಬುದೀಗ, ಎರಡರೊಳಗಿರ್ಪ ಮೂರರ ಕೀಲವನರಿಯರೆಂಬ ಶಬ್ದಕ್ಕರ್ಥ. ಆ ಶಕ್ತಿತ್ರಯಂಗಳ ತನುಮಾತ್ರ ಪ್ರಾಣಮಾತ್ರಗಳನು ವಿಭಾಗಿಸಲು, ಷಡುಶಕ್ತಿಗಳಾದವೆಂಬುದೀಗ, ಮೂರರ ಸಂದು ಆರಾದುದನರಿಯರೆಂಬ ಶಬ್ದಕ್ಕರ್ಥ. ಆ ಷಡುಶಕ್ತಿಗಳೊಳಗೆ ಬ್ರಹ್ಮವೆಂಬ ಮಾತು ಮಿಥ್ಯ ಎಂದರಿವುತ್ತಿರಲು, ಅದೆಂದು ನುಡಿವಗಾರುಮಾತು ತಾನಲ್ಲವೆಂಬ ಶಬ್ದಕ್ಕರ್ಥ. ಈ ಭೇದವ ತಿಳಿದು, ನಿಜಶಿವತತ್ವವ ಸಾಧಿಸಿಹೆನೆಂದರೆ, ಆವ ಗಣನೆಗೂ ಬಾರದು. ಅರಿಯದೆ ಕಂಡೆಹೆನೆಂದರೆ, ಅನೇಕ ಮುಖವಾಗಿ ತೋರುತ್ತಿಹುದಾಗಿ, ಅದೀಗ ಗುಹೇಶ್ವರನರಿದಡೆ, ಒಂದು ಇಲ್ಲ, ಅರಿಯದಿರ್ದರೆ ಬಹು ಮುಖವೆಂಬ ಶಬ್ದಕ್ಕರ್ಥ.

೪೮. ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ. ಮಾಡಲಾಗದು ನೇಮವ, ನೋಡಲಾಗದು ಶೀಲವ. ಸತ್ಯವೆಂಬುದೇ ಸುಶೀಲ ಗುಹೇಶ್ವರಲಿಂಗವನರಿಯ ಬಲ್ಲವಂಗೆ.

ಟೀಕು:— ಧನದಾಸೆಯ ವೇಶಿ ಪುರುಷನ ಮೇಲೆ, ಲೋಲುಪ್ತಿ ಇಲ್ಲದೆ ಇಪ್ಪಂತೆ ಶೀಲದ ಮೇಲೆ ವ್ಯಾಮೋಹವುಳ್ಳವರು ಲಿಂಗದಲ್ಲಿ ಲೋಲುಪ್ತರಲ್ಲವೆಂಬುದೀ ವಚನಾರ್ಥ.

೪೯. ಆಕಾರ ನಿರಾಕಾರವೆಂಬೆರಡೂ ಸ್ವರೂಪಂಗಳು ಒಂದು, ಆಹ್ವಾನ ಒಂದು, ವಿಸರ್ಜನ ಒಂದು, ವ್ಯಾಕುಳ ಒಂದು, ನಿರಾಕುಳ ಉಭಯ ಕುಳ ರಹಿತ ಗುಹೇಶ್ವರಾ ನಿಮ್ಮ ಶರಣ ನಿಶ್ಚಿಂತನು.

ಟೀಕು:— ಶಿವಜ್ಞಾನಸಂಪನ್ನನಾದ ಶರಣಂಗೆ, ಆಕಾರವ ವಿಸರ್ಜಿಸಿ ನಿರಾಕಾರವ ಹಿಡಿದೆನೆಂಬುದು, ಪಥವಲ್ಲ. ಅದೇನು ಕಾರಣವೆಂದೊಡೆ. ಸಾಕಾರನಿರಾಕಾರದಲ್ಲಿ ಪರಬ್ರಹ್ಮವು ಸಂಪೂರ್ಣವಾಗಿರ್ಪುದಾಗಿ. ಅದು ಕಾರಣ ಅಂತರಂಗದಲ್ಲಿ ಅರಿವು ಬಹಿರಂಗದಲ್ಲಿ ಮರವೆಯಾಗಿರದೆ, ಬಾಹ್ಯಾಭ್ಯಂತರದಲ್ಲಿ ಸುಜ್ಞಾನಿಯಾಗಿರಬೇಕೆಂಬುದೀ ವಚನಾರ್ಥ.



೫೦. ತುಂಬಿದ ತೊರೆಯ ಹಾಯ್ವೆವೆಂದು, ಹರಿಗೋಲ ನೇರುವ ಅಣ್ಣಗಳು ನೀವು ಕೇಳಿರೆ. ತೊರೆಯೊಳಗಣ ನೆಗಳು ಹರಿಗೋಲ ನುಂಗಿದಡೆ ಗತಿ ಇಲ್ಲ. ಎಚ್ಚತ್ತು ನಡಿಸಿರೆ, ನಡುದೊರೆಯುಲ್ಲಿ ಹುಟ್ಟು ಹಾಕಿದಡೆ ಹರಿಗೋಲು ಮುಳುಗದೆ ಏರಿದವರು ಸತ್ತರು. ಇದರೊಳಹೊರಗನರಿದಾತನಲ್ಲದೆ, ಗುಹೇಶ್ವರ ಲಿಂಗದಲ್ಲಿ ಅಚ್ಚ ಶರಣನಲ್ಲ

ಟೀಕು:— ತುಂಬಿದ ತೊರೆ ಎಂದರೆ, ಸಂಸಾರವೆಂಬ ಜಲಪ್ರವಾಹವೆಂಬರ್ಥ. ಆ ಸಂಸಾರವೆಂಬ ತೊರೆಯನೀಸಾಡುವರೆ ಸಾಧನವಾವುದೆಂದೊಡೆ, ದೇಹವೇ ಹರಿಗೋಲು, ಆ ದೇಹದೊಳಗೆ, ಸಕಲಕರಣಂಗಳು ಪ್ರವೇಶಿಗಳಾಗುತ್ತಿರಲು, ಅದೀಗ ಹರಿಗೋಲನೇರುವರೆಲ್ಲರೂ ಕೇಳಿರೇ ಎಂಬ ಶಬ್ದಕ್ಕರ್ಥ. ಇಂತು ಆ ದೇಹವೆಂಬ ಹರಿಗೋಲ ಮುರಿದು, ನುಂಗುವುದೀಗ, ಆ ಸಂಸಾರಜಲದೊಳಗೆ ಕ್ರೀಡಿಸುತ್ತಿಹ ಕಾಲನೆಂಬ ನೆಗಳು ಅಪನೆಚ್ಚತ್ತು ನಡೆಯಬೇಕೆಂಬುದೀಗ, ತೊರೆಯೊಳಗಣ ನೆಗಳು ಹರಿಗೋಲ ನುಂಗಿದಡೆ, ಗತಿಯಿಲ್ಲ, ಎಚ್ಚತ್ತು ನಡಿಸಿರೆ ಎಂಬ ಶಬ್ದಕ್ಕರ್ಥ. ಈ ಮರ್ಮವನರಿದು, ಆ ಸಂಸಾರಜಲಧಿಯೊಳಗೆ ಹುಟ್ಟೆಂಬ ಶಬ್ದಕ್ಕರ್ಥ. ಭವವ ನಿವೃತ್ತಿ ಮಾಡಲು, ಆ ಕಾಯವಳಿಯದೆ, ಅಂತರ್ಗತವಾಗಿರ್ದ ಸಕಲ ಕರಣಂಗಳೆಲ್ಲವು ಅಳಿದವೆಂಬುದೀಗ ನಡುದಾರಿಯಲ್ಲಿ ಹುಟ್ಟ ಹಾಯ್ಕಿದಡೆ ಹರಿಗೋಲು ಮುಳುಗದೆ ಏರಿದವರು ಸತ್ತರೆಂಬ ಶಬ್ದಕ್ಕರ್ಥ. ಈ ಮರ್ಮವ ತಿಳಿದು, ತನ್ನ ತಾನರಿದಾತನಲ್ಲದೆ ಸುಜ್ಞಾನಿಯಲ್ಲ ಎಂಬುದೀಗ ಇದರೊಳಹೊರಗನರಿದಾತನಲ್ಲದೆ ಅಚ್ಚ ಶರಣನಲ್ಲವೆಂಬ ಶಬ್ದಕ್ಕರ್ಥ.

೫೧. ಬಲ್ಲನಿತ ಬಲ್ಲರಲ್ಲದೆ ಅರಿಯದುದನೆಂತು ಬಲ್ಲರಯ್ಯಾ! ಅರಿವು ಸಾಮಾನ್ಯವೆ? ಅರಿಯುದನಾರಿಗೂ ಅರಿಯ ಬಾರದು. ಗುಹೇಶ್ವರನೆಂಬ ಲಿಂಗವನರಿಯದಡೆರಡು, ಅರಿದಡೊಂದೇ.

ಟೀಕು:— ಮತಿಯ ಹವಣಿಗೆ, ಕಿರಿದು ಕಂಡುದನಾಡಿದಡೇನು ಅದರು ವಾಙ್ಮನಕ್ಕಗೋಚರ ವಸ್ತುವ ಕಂಡವರಲ್ಲ. ಮತ್ತೆ ಅರಿವ ಪರಿ ಎಂತೆಂದೊಡೆ, ತಾನರಿದ ಬಳಿಕ ತಾನಲ್ಲದೆ ಮತ್ತೇನು ಇಲ್ಲದಿರ್ಪುದ ತಾನರಿಯದೆ, ಅರಿವು ಮರವೆಯಾದಡೆ, ದ್ವಂದ್ವಗ್ರಸ್ತವಾಗಿರ್ಪುದೆಂಬುದೀ ವಚನದ ತಾತ್ಪರ್ಯಾರ್ಥ.

೫೨. ಅರಿದೆವರಿದೆವೆಂಬಿರಿ. ಅರಿದ ಪರಿ ಎಂತು ಹೇಳಿರೆ? ಅರಿದವರು ಅರಿದೆವೆಂಬರೆ? ಅರಿಯಬಾರದ ಘನವನರಿದವರು ಅರಿಯದಂತಿರ್ಪರು ಗುಹೇಶ್ವರಾ.

ಟೀಕು:— ನಿಜವನರಿದು, ನಿಜದಲ್ಲಿ ವೇದ್ಯವಾದೆನೆಂಬವರು ತಾನರಿದರಿವ ಇದಿರಿಟ್ಟು ಮಾತನಾಡಿದರೆ, ಅದು ಭಿನ್ನಜ್ಞಾನವಾಗಿ, ಅದನಾಡಲಿಲ್ಲ. ಮತ್ತೆಂತೆಂದೊಡೆ, ಅರಿವನರಿದು, ಇದಿರಿಂಗೆ ತೋರಿ ಮೆರೆಯದಿರ್ದರೆ ಆತ ಸುಜ್ಞಾನಿ ಎಂಬುದೀ ವಚನದ ತಾತ್ಪರ್ಯಾರ್ಥ.

೫೩. ಅಲ್ಪಜ್ಞಾನಿ ಪ್ರಕೃತಿಸ್ವಭಾವ, ಮಧ್ಯಮಜ್ಞಾನಿ ವೇಷಧಾರಿ, ಅತೀತಜ್ಞಾನಿ ಆರೂಢನ್ನಾರೂ ಅರಿಯಬಾರದಯ್ಯ. ಜ್ಞಾನವನರಿಯದಾತ ಅಜ್ಞಾನಿ ನಾಮ ನಷ್ಟ. ಈ ಚತುರ್ವಿಧದೊಳಗೆ ಆರಂಗವು ಇಲ್ಲ ಗುಹೇಶ್ವರಾ ನಿಮ್ಮ ಶರಣ.

ಟೀಕೀ:— ಅಲ್ಪ ಜ್ಞಾನಕ್ಕೆ ಅರಿವು ಮರವೆಯುಳ್ಳ ಕಾರಣ ಅಲ್ಪ ಜ್ಞಾನಿ ಪ್ರಕೃತಿಸ್ವಭಾವಿ ಎಂಬ ಶಬ್ದಕ್ಕರ್ಥ. ಮಧ್ಯಮಜ್ಞಾನಿ ಜ್ಞಾನ ಭಾವವ ಧರಿಸಿಕೊಂಡು, ತಾನು ವ್ಯವಹರಿಸುವದರಿಂದ, ಮಧ್ಯಮಜ್ಞಾನಿ ವೇಷಧಾರಿ ಎಂಬ ಶಬ್ದಕ್ಕರ್ಥ. ಅತೀತಜ್ಞಾನಿಯೇ ಅತ್ಯಂತಶ್ರದ್ಧೆಯುಳ್ಳಾತನಾದ ಕಾರಣ, ಅತೀತಜ್ಞಾನಿ ಆರೂಢನೆಂಬ ಶಬ್ದಕ್ಕರ್ಥ. ಅರಿವನರಿದು, ಅರಿಯದಂತೆ ಮತ್ತವಾಗಿರ್ಪ ತನು ಶೂನ್ಯಜ್ಞಾನಿ ಎಂಬುದೀಗ, ಜ್ಞಾನವನರಿಯದಾತ ಅಜ್ಞಾನಿ ನಾಮ ನಷ್ಟವೆಂಬ ಶಬ್ದಕ್ಕರ್ಥ. ಈ ಚತುರ್ವಿಧ ಖಂಡಿತಂಗಳನುಳಿದು, ಅಖಂಡಿತಜ್ಞಾನಿಯಾದಡೆ, ಆತನೇ ಅಚ್ಚ ಶರಣನೆಂಬುದೀಗ, ಈ ಚತುರ್ವಿಧದೊಳಗೆ ಅವಂಗವು ಇಲ್ಲ ಗುಹೇಶ್ವರಾ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

೫೪. ಕಂಗಳ ನೋಟ ಲಿಂಗಕ್ಕೆ ಬಾರ, ಅಂಗಜೀವಿಗಳಕೂಡೆ ನುಡಿವನೆ ಶರಣನು? ನಡೆನುಡಿಮುಗ್ಧ ಗುಹೇಶ್ವರಾ ನಿಮ್ಮ ಶರಣನು.

ಟೀಕು:— ಜ್ಞಾನದೃಷ್ಟಿಯಲ್ಲಿ ಲಿಂಗವಿದು, ಎಂದು ಕುರುಹಿಟ್ಟರೆ, ಆ ಲಿಂಗಕ್ಕೆ ಭಿನ್ನ ನೋಟ ಭಾರವಾದುದೆಂದರಿದ ಶರಣನು ಅಂಗವಿಕಾರಸಂಬಂಧಿಗಳ ಕೂಡೆ, ಸುಜ್ಞಾನ ಗೋಷ್ಠಿಯ ಮಾಡನೆಂಬುದೀ ವಚನಾರ್ಥ.



೫೫. ದೂರದ ತುದಿಗೊಂಬನಾರಯ್ಯಾ ಗೆಲುವರು ಮೀರಲಿಲ್ಲಾ! ನಿರಾಳದ ನಿಲವನು ಮೀರಿ ಕೊಂಬ ಘನವನು ಬೇರೆ ತೋರಲಿಲ್ಲ. ತೋರಿಕೊಂಬಡೆ ತನ್ನ ಹಿಡಿಯಲಿಲ್ಲಯ್ಯಾ ಒದೆಯಾವಿನ ಹಾಲನಾರಯ್ಯಾ ಕರೆವವರು? ಮೂರು ಲೋಕದೊಳಗೆ ತಾನಿಲ್ಲ ಗುಹೇಶ್ವರಾ.

ಟೀಕು:— ದೂರದ ತುದಿಗೊಂಬೆಂದಡೆ, ಆವ ಅರಿತಕ್ಕೂ ಸಿಲ್ಕದ ಪರಬ್ರಹ್ಮವೆಂಬರ್ಥ. ಆ ಪರಬ್ರಹ್ಮವ ಕಂಡೆಹೆನೆಂದಡೆ ತನ್ನಿಂದನ್ಯವ ಮಾಡಿ, ಅರಸಲಿಲ್ಲವೆಂಬುದೀಗ, ಮೀರಿ ಕಾಂಬ ಘನವನು ಬೇರೆ ತೋರಲಿಲ್ಲನೆಂಬ ಶಬ್ದಕ್ಕರ್ಥ. ಆ ವಸ್ತುವ ತಾ ಕಂಡಡೆ, ತನ್ನ ಕುರುಹು ತಾನು ಲಕ್ಷಿಸಿ ಹಿಡಿಯಲಿಲ್ಲವೆಂಬುದೀಗ, ತೋರಿ ಕಾಂಬಡೆ ತನ್ನ ತಾನು ಹಿಡಿಯಲಿಲ್ಲವೆಂಬ ಶಬ್ದಕ್ಕರ್ಥ. ತನ್ನ ಭಿನ್ನವ ಮಾಡಿ, ಆ ವಸ್ತುವನರಸಿಹೆನೆಂದಡೆ, ಒದೆಯಾಕಳ ಹಾಲ ಕರೆದು ಕೊಂಡು ಸುಖಿಸಿಹೆನೆಂಬಂತೆ ಮನದಾಯಾಸವೆ ಮುಟ್ಟುವದಲ್ಲದೆ, ಕಾರ್ಯವಿಲ್ಲ. ಅದು ಕಾರಣ ತನ್ನ ನಿಲವು ತನ್ನಲ್ಲಿಲ್ಲದೆ ಎಲ್ಲಿಯೂ ಇಲ್ಲವೆಂಬುದೀಗ ಒದೆಯಾವಿನ ಹಾಲನಾರಯ್ಯ ಕರೆವವರು ಮೂರು ಲೋಕದೊಳಗೆ ತಾನಿಲ್ಲವೆಂಬ ಶಬ್ದಕ್ಕರ್ಥ.

೫೬. ನಚ್ಚು ಮಚ್ಚಿಂಗೆ ಪೂಜಿಸಿ, ನಿಶ್ಚಯವೆಂದೆನಲಿಲ್ಲ. ತಾನು ಲಿಂಗವೋ ಪ್ರಾಣ ಲಿಂಗವೊ ಆವುದು ಲಿಂಗ ಬಲ್ಲವರು ನೀವು ಹೇಳಿರೆ. ಅಂಗದಲ್ಲಿ ಅಂಗಿಯಲ್ಲ ಸಂಗದಲ್ಲಿ ವ್ಯಸನಿಯಲ್ಲ. ಲಿಂಗವಿಲ್ಲದ ಸಂಗ ಗುಹೇಶ್ವರಾ ನಿಮ್ಮ ಶರಣ.

ಟೀಕು:— ಅಂಗದ ಲಿಂಗವನು ಮನಮುಟ್ಟಿ ಪೂಜಿಸಿ, ಲಿಂಗದಲ್ಲಿ ಕೃಪೆಯ ಹಡದೆಹೆನೆಂಬುದು ಲಿಂಗಕ್ಕೆ ಭಿನ್ನವೆಂಬುದೀಗ, ನಚ್ಚುಮೆಚ್ಚಿಂಗೆ ಪೂಜಿಸಿ, ನಿಶ್ಚಯವೆಂದೆನಲಿಲ್ಲವೆಂಬ ಶಬ್ದಕ್ಕರ್ಥ. ಅದೇನು ಕಾರಣವೆಂದೊಡೆ ಲಿಂಗವ ಪೂಜಿಸಿಹೆನೆಂಬಾತ ತಾನು ತನ್ನ ತಿಳಿದು ನೋಡಲು, ತಾನೇ ಲಿಂಗವೆಂದರಿವುತ್ತಿರಲು, ಅದೀಗ ತಾನು ಲಿಂಗವೋ, ಪ್ರಾಣಲಿಂಗವೋ ಎಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗ ಸಂಬಂಧವನರಿದ ಕಾರಣ ಅಂಗವಿಡಿದು, ಅಂಗ ಸಂಗಿಯಲ್ಲ. ಲಿಂಗಸಂಪನ್ನನೆಂಬುದೀಗ, ಅಂಗದಲ್ಲಿ ಅಂಗಿಯಲ್ಲ ಸಂಗದಲ್ಲಿ ವ್ಯಸನಿಯಲ್ಲ. ಅಂಗವಿಲ್ಲದ ಸಂಗ ಗುಹೇಶ್ವರಾ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

೫೭. ಎನ್ನಲ್ಲಿ ನಾನು ದೃಷ್ಟವೆಂಬನ್ನಕ್ಕರ ನಿಮ್ಮಲ್ಲಿ ನೀವು ಮೆಚ್ಚುವಿರೆ? ಸಂದೇಹದಿಂದ ಸವೆಯಿತ್ತು ಲೋಕವು. ಕನ್ನಡಿಯುಂಡ ಪ್ರತಿ

ಬಿಂಬ, ಕಬ್ಬಿಣ ಉಂಡ ನೀರು, ಕುಪ್ಪಸ ಉಂಡ ಅರಿಷಿಣದಂತೆ ಗುಹೇಶ್ವರಾ ನಿಮ್ಮ ಶರಣರು.

ಟೀಕು:— ತನ್ನರಿವು ತನಗೆ ದೃಷ್ಟವಾಗಿ ತಾನೆಂಬುದು ತನಗೆ ಸ್ವತಃ ಸಿದ್ಧವಾದಂತೆ ಇದ್ದರೆ ಅದು ತನ್ನ ಮುಂದೆ ತೋರಿಹುದಾಗಿ ಅದು ಭಿನ್ನ ಪದವೆಂಬುದೀಗ ಎನ್ನಲ್ಲಿ ನಾನು ದೃಷ್ಟವೆಂಬನ್ನಕ್ಕರ ನಿಮ್ಮಲ್ಲಿ ನೀವು ಮೆಚ್ಚುವಿರೆಯೆಂಬ ಶಬ್ದಕ್ಕರ್ಥ. ಇಂತಪ್ಪ ಸಂದೇಹವಳಿಯದೆಂಬುದೀಗ ಸಂದೇಹದಿಂದ ಸವಿದಿತ್ತು ಲೋಕವೆಂಬ ಶಬ್ದಕ್ಕರ್ಥ. ದರ್ಪಣ ಉಂಡ ಪ್ರತಿಬಿಂಬಕ್ಕೂ ಆ ದರ್ಪಣಕ್ಕೂ ಭಿನ್ನವಿಲ್ಲವೆಂಬುವ ಹಾಗೆ ಲಿಂಗ ಶರಣನಲ್ಲಿ ಭೇದವಿಲ್ಲವೆಂಬುದೀಗ ದರ್ಪಣ ಉಂಡ ಪ್ರತಿಬಿಂಬವಂತೆ ಎಂಬ ಶಬ್ದಕ್ಕರ್ಥ. ಕಬ್ಬಿಣ ಉಂಡ ನೀರನು ಬಿಸಿಲು ಉಂಡ ಅರಿಷಿಣವನು ಉಪಮಿಸಬಾರದೆಂಬಂತೆ ಲಿಂಗದಲ್ಲಿ ನೆರೆ ಅರಿದ ಅರಿವನು ಬೆರಿಸಬಾರವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೫೮. ಉಗುಳ ನುಂಗಿ ಹಸಿವ ಕಳೆದು ತೆವರ ಮಲಗಿ ನಿದ್ರೆಗೆಯ್ದು ನೋಡಿ ನೋಡಿ ಸುಖಂಬಡೆದೆನಯ್ಯಾ ಗುಹೇಶ್ವರ ನಿಮ್ಮ ವಿರಹದಲ್ಲಿ ಕಂಗಳೇಕರೂವಾಗಿರ್ದೆನಯ್ಯಾ.

ಟೀಕು:— ತನ್ನರಿವಿನ ಸುಖವ ಭಿನ್ನವ ಮಾಡಿ ಶಬ್ದಕ್ಕೆ ತಂದು ಉದ್ಗಾರಿಸುತಿಪ್ಪ ಬಗೆಯ ತಾನು ಅವಗ್ರಹಿಸಿ ಕ್ಷುದ್ರಾ ತೃಷ್ಣೆಯುಮಂ ಪರಿಹರಿಸಿದೆನೆಂಬುದೀಗ ಉಗಳ ನುಂಗಿ ಹಸಿವ ಕಳೆದು ಎಂಬ ಶಬ್ದಕ್ಕರ್ಥ. ತೆವರೆಂದರೆ ಆಧಾರಸ್ಥಾಯಿಯಪ್ಪ ಶಿವಭಾವ. ಅಂತಪ್ಪ ಶಿವಭಾವ ನಮ್ಮ ತನ್ನಲ್ಲಿ ತಾನು ಪರಾಮರಿಸಿ ಅದೃಷ್ಟ ದೃಷ್ಟವಾಗಿತ್ತೆಂಬುದೀಗ ತೆವರ ಮಲಗಿ ನಿದ್ರೆಗೆಯ್ದು ಅದು ನೋಡಿ ನೋಡಿ ಸುಖಂಬಡುತ್ತಿದ್ದೆನೆಂಬ ಶಬ್ದಕ್ಕರ್ಥ. ಆ ಲಿಂಗದಲ್ಲಿ ಲೋಲುಪ್ತಿ ವಿಶ್ರಮಿಸಿ ತನ್ನಲ್ಲಿ ತಾನು ಪರಮ ಕಾಷ್ಠೆಯ ನೆಯ್ದಿದನೆಂಬುದೀಗ ಗುಹೇಶ್ವರಾ ನಿಮ್ಮ ವಿರಹದಲ್ಲಿ ಕಂಗಳೇಕ ರೂವಾಗಿರ್ದನೆಂಬ ಶಬ್ದಕ್ಕರ್ಥ.

೫೯. ಲೋಕ ವಿರಹಿತ ಶರಣ ಶರಣ ವಿರಹಿತ ಲೋಕ. ಹದಿನಾಲ್ಕು ಲೋಕ ಭುವನವು ಒಬ್ಬ ಶರಣನ ಕುಕ್ಷಿಯೊಳಗೆ ಅರಿವು ಮರವು ಹೊಲ್ಲದ ಘನವು ಗುಹೇಶ್ವರ ನಿಮ್ಮ ಶರಣನು.

ಟೀಕು:— ಲೋಕವೆಲ್ಲವು ಮಿಥ್ಯಾ. ಶರಣನೇ ಸುಜ್ಞಾನಿ ಇಂತಾದ ಕಾರಣ ಒಂದಕ್ಕೊಂದು ವಿರಹಿತವಾಗಿರ್ಪುದೆಂಬ ದೀಗ ಲೋಕ ವಿರಹಿತ ಶರಣ ಶರಣ ವಿರಹಿತ ಲೋಕವೆಂಬ ಶಬ್ದಕ್ಕರ್ಥ. ಇಂತಪ್ಪ ಶರಣನು



ತನ್ನ ಕಣ್ಣ ಮುಂದೆ ಆ ಲೋಕವು ಇದಿರಿಟ್ಟು ತೋರಿದರೆ ತನ್ನ ಅರಿವಿಂಗೆ ಭಿನ್ನವಾದಹುದೆಂದರಿದು ಆ ಲೋಕಂಗಳನು ತನ್ನೊಳಗೆ ಅಡಗಿಸಿಕೊಂಡು ಅರಿವು ಮರವೆ ಎರಡೂ ಇಲ್ಲದೆ ಇರುತ್ತಿರಲು ಅದೀಗ ಹದಿನಾಲ್ಕು ಭುವನ ಒಬ್ಬ ಶರಣನ ಕುಕ್ಷಿಯೊಳಗೆ. ಅರಿವು ಮರವಿಲ್ಲದ ಘನವು ಗುಹೇಶ್ವರಾ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

೬೦. ಇಹಲೋಕ ಪರಲೋಕ ತಾನಿದ್ದಲ್ಲಿ. ಗಗನ ಮೇರುಮಂದಿರ ತಾನಿದ್ದಲ್ಲಿ. ಸಕಲ ಭುವನ ತಾನಿದ್ದಲ್ಲಿ. ಸತ್ಯ ನಿತ್ಯ ನಿರಂಜನ ಶಿವತತ್ವ ತಾನಿದ್ದಲ್ಲಿ. ಉತ್ತರೋತ್ತರ ಛತ್ರವಳಿಯ ತಾನಿದ್ದಲ್ಲಿ. ಚಂದ್ರ ಸೂರ್ಯ ತಾರಾ ಮಂಡಲ ತಾನಿದ್ದಲ್ಲಿ. ಅಂತರ ಮಹದಂತರ ತಾನಿದ್ದಲ್ಲಿ. ಸ್ವತಂತ್ರ ಗುಹೇಶ್ವರಲಿಂಗ ತಾನಿದ್ದಲ್ಲಿ.

ಟೀಕು:— ಅನಂತ ಬ್ರಹ್ಮಾಂಡ ನಾನಾ ಲೋಕ ಸಚರಾಚರ ಪ್ರಪಂಚುಗಳೆಲ್ಲವು ಲಿಂಗದಲ್ಲಿ ಅಡಗಿರ್ಪವು. ಆ ಲಿಂಗವೇ ಮಹಾಜ್ಞಾನ ಪ್ರವೇಶಿತವಾಗಿಪ್ಪುದು. ಅಂತಪ್ಪ ಮಹಾ ಜ್ಞಾನವಳವಟ್ಟ ದಿವ್ಯ ಶರಣನ ಸರ್ವಾಂಗದಲ್ಲಿ ಆ ಲಿಂಗವು ಆ ಲೋಕಾದಿಲೋಕಂಗಳೆಲ್ಲವು ಅಡಗಿಪ್ಪವೆಂಬುದೀ ವಚನದ ತಾತ್ಪರ್ಯಾರ್ಥ.

೬೧. ಕೊಂಕಣ ದ್ವೀಪದಲ್ಲಿ ಒಂದು ಕಪಿ ಹುಟ್ಟಿತ್ತು. ತಪವ ಮಾಡುವ ಸಪ್ತ ಋಷಿಗಳ ನುಂಗಿತ್ತು. ನವನಾಥ ಸಿದ್ಧರ ತೊತ್ತುಳದುಳಿದಿತ್ತು. ಅರುಹಿರಿಯರ ತಲೆಯ ಮೆಟ್ಟಿ ಅರೆಯಿತ್ತು. ಕಪಿ ಜನವೈರಿ ಸರ್ಪನ ಹೆಳಿಗೆಯಲ್ಲಿ ನಿದ್ರೆಗೈಯಿತ್ತು. ಯೋಗಿಗಳ ಭೋಗಿಗಳ ಕೊಲ್ಲದ ಕೊಲೆಯ ಕೊಂದಿತ್ತು. ಕಾಮನ ಅರಿಯ ಮೆಟ್ಟಿ ಕೂಗಿತ್ತು. ಕೋಳಿಯ ಹಂಜರ ನಾಸಿಕ ಬೆಕ್ಕ ನುಂಗಿತ್ತು. ಕೋಳಿ ಯರ್ಕಜದ ಅರಿವ ನಮ್ಮ ಅರುಹಿರಿಯರ ಅನುಭಾವಿಗಳ ಮಿಕ್ಕು ಭಾವ ಸೊಕ್ಕನುಂಡು ಕೊಕ್ಕರನಾಯಿತ್ತು. ಹಿಂದಿದ್ದ ಕೋಳಿಯ ಕೊಕ್ಕರನೆ ಕಪಿಯ ಭಾವವ ಅರಿಯದಿದ್ದ ಕಾರಣ ಕೆದರಿದ ಚರಣ ಉಡುಗಿ ಮರಣವರಿಯದೆ ಕರಣ ದೇಹತ್ವವಿಲ್ಲದ ಈ ಮರ್ಮವನರಿದಾತನೆ ಲಿಂಗೈಕ್ಯ. ತಾನೇ ಪ್ರಾಣ ಪುರುಷ. ಇದನರಿದು ನುಂಗಿದಾತ ಪರಮ ಶಿವಯೋಗಿ. ಭಂಗವರಿಯದ ಜನನದ ಹೊಲಬರಿಯದ ಭಾವದ ಜೀವವರಿಯದ ಇದು ಕಾರಣ ಗುಹೇಶ್ವರಾ ನಿಮ್ಮ ಶರಣ ಲಿಂಗಸ್ಪಯ ಶಕ್ತಿಶರಣ ತಾನೇ.

ಟೀಕು:— ಕೊಂಕಣ ದ್ವೀಪವೆಂದರೆ ತಮೋಗುಣಸಂಬಂಧವಪ್ಪ ಕಾರಣ ತನುವೆಂಬ ಶಬ್ದಕ್ಕರ್ಥ. ಆ ತಮೋಗುಣ ಸಂಬಂಧಮಪ್ಪ ಕಾರಣ ತನುವಿನ ಮರವೆಯಿಂದ ತಾನೆಂಬ ಸಂಶಯ ಪವವು ಉದ್ಭವಿಸುತ್ತಿರಲು ಸಂಶಯಾತ್ಮಕಂಮನಃ ವೆಂಬುದಾಗಿ ಅಲ್ಲಿ ಮಾನಸ್ಸು ಸಂಕಲ್ಪ ಉದಯವಾಯಿತೆಂಬುದೀಗ ಕೊಂಕಣ ದ್ವೀಪದಲ್ಲಿ ಒಂದ. ಕಪಿ ಹುಟ್ಟಿತ್ತೆಂಬ ಶಬ್ದಕರ್ಥ. ಆ ಮನವೆಂ. ಮರ್ಕಟನು ಸಪ್ತ ಋಷಿಗಳು ಮೊದಲಾದ ತಪಸ್ವಿಗಳೆಲ್ಲರನು ತಪಸ್ಸೆಂಬ ಪಾಶದ ನಿರ್ಬಂಧದಲ್ಲಿ ಸಂಕಲ್ಪ ಬದ್ಧರ ಮಾಡಿ ತಾನೇ ಅವಗ್ರಹಿಸಿತ್ತೆಂಬುದೀಗ ತಪವ ಮಾಡುವ ಸಪ್ತಋಷಿಗಳ ನುಂಗಿತ್ತೆಂಬ ಶಬ್ದಕ್ಕರ್ಥ. ಆ ಮನಸ್ಸು ಶರೀರ ಸಿದ್ಧರಾದೆಹೆವೆಂಬ ಸಿದ್ಧರುಗಳ ದೇಹೋಹಂ ಎಂಬ ಅಹಂಕಾರದಲ್ಲಿ ಮರ್ದಿಸಿತ್ತೆಂಬುದೀಗ ನವನಾಥಸಿದ್ಧರ ತೊತ್ತಳಮಳಿಯಿತ್ತೆಂಬ ಶಬ್ದಕ್ಕರ್ಥ. ಮನಸ್ಸೆಂಬ ಮರ್ಕಟನು ಶಿವನನರಿದು ಮುಕ್ತರಾದೆಹೆವೆಂಬ ಜ್ಞಾನಿಗಳ ಅರಿವನರುಹಿಸದೆ ಭಿನ್ನಜ್ಞಾನವನೆಯ್ದಿಸಿ ಪ್ರಪಂಚದಲ್ಲಿ ಕೆಡಹಿತ್ತೆಂಬುದೀಗ ಅರುಹಿರಿಯರ ತಲೆಯ ಮೆಟ್ಟಿ ಅರೆಯಿತ್ತೆಂಬ ಶಬ್ದಕ್ಕರ್ಥ. ಆ ಮನಸ್ಸಿನ ಜನ್ಮಸ್ಥಾಯಿಯೇ ಪ್ರಾಣವಾಯು. ಭೂಷಣವೆನಿಪ ಕುಂಡಲಿ ಸರ್ಪನ ಹೆಳಿಗೆಯಪ್ಪ ಆಧಾರ ಚಕ್ರದಲ್ಲಿ ಆ ಮನಸ್ಸು ಮರವೆಯನೆಯ್ದಿ ಇದ್ದಿತ್ತೆಂಬುದೀಗ ಕಪಿ ಜನ ಪೈರಿ ಸರ್ಪನ ಹೆಳಿಗೆಯಲ್ಲಿ ನಿದ್ರೆಗೈಯಿತ್ತೆಂಬ ಶಬ್ದಕ್ಕರ್ಥ. ಆ ಮನಸ್ಸು ಪವನ ಸಾಧನೆಯಿಂದ ಯೋಗಿಗಳೆಂದೆಹವೆಂಬವರ ವ್ಯಾಕುಳಪದದೊಳಗೆ ಕೆಡಹಿತ್ತೆಂಬುದೀಗ ಯೋಗಿಗಳ ಭೋಗಿಗಳ ಕೊಲ್ಲದ ಕೊಲೆಯ ಕೊಂದಿತ್ತೆಂಬ ಶಬ್ದಕ್ಕರ್ಥ. ಆ ಮನಸ್ಸು ಯೋಗಿಗಳೆಂಬವರ ಕಾಮಾದಿ ವಿಷಯ ಸ್ಥಾನದಲ್ಲಿ ತಾನೆ ನಿಂದು ಶಬ್ದಾಡಂಬರದಲ್ಲಿ ವಾಗದ್ವೈತಿಗಳ ನುಡಿಸುತ್ತಿದ್ದತೆಂಬುದೀಗ ಕಾವನ ಅರೆಯ ಮೆಟ್ಟಿ ಕೂಗಿತ್ತೆಂಬ ಶಬ್ದಕ್ಕರ್ಥ. ಕೋಳಿಯೆಂದರೆ ಸತ್‌ಪ್ರಣವು. ಅದೆಂತೆಂದಡೆ ಆ ಕುಕ್ಕುಟನು ಪ್ರಾತಃಕಾಲದಲ್ಲಿ ಎದ್ದು ವಿಶ್ವವೆಲ್ಲಕ್ಕೆಯು ಉದಯದರಿವನೆಚ್ಚರಿಸಿಕೊಟ್ಟು ಧ್ವನಿ ಮಾಡುತ್ತಿಹ ಹಾಗೆ ಸತ್ಪ್ರಣವುವು ಮೂಲ ಜ್ಞಾನದಲ್ಲಿ ಸಮುದ್ಭವಿಸಿ ಆ ಶರಣಂಗೆ ಅರಿವನೆಚ್ಚರಿಸಿಕೊಟ್ಟು ಸೋಹಂ ಎಂದು ಧ್ವನಿ ಮಾಡುತ್ತಿದ್ದುದಾಗಿ ಆ ಸತ್ಪ್ರಣವು ಕುಕ್ಕುಟಂಗೆಯು ಒಂದೇ ಉಪಮಾನ. ಆ ಮನಸ್ಸು ಅಂತಪ್ಪ ಸತ್‌ಪ್ರಣವುವನು ಆ ಪ್ರಣಕ್ಕೆ ಪಂಜರವಾಗುತಿಹ ಚಿದ್ಬಿಂದುವಿನ ಅರಿವನು ಅರಿದಿಹೆವೆಂಬ ವರ



ಮಾಪನ ಶ್ರದ್ಧೆಯೆಂಬ ಬೆಕ್ಕನ್ನು ಅವಗ್ರಹಿಸಿ ತಾನೇ ತೋರುತ್ತಿದ್ದಿತೆಂಬುದೀಗ ಕೋಳಿಯ ಪಂಜರನಾಶಕ ಬೆಕ್ಕ ನುಂಗಿತೆಂಬ ಶಬ್ದಕ್ಕರ್ಥ. ಆ ಮನಸ್ಸು ಸತ್‌ಪ್ರಣವದ ಅರಿವು ಹಿಡಿದು ಪ್ರಣವ ಬ್ರಹ್ಮವಾದಿಗಳೆಂಬ ಅನುಭಾವಿಗಳ ಸುಜ್ಞಾನಿಗಳ ಭಾವದೊಳಗೆ ಭಿನ್ನವಿಡಿಸಿ ತೋರಿ ಅವರ ಭಿನ್ನ ಭಾವದ ಸುಖವ ತಾನೇ ಅವಗ್ರಹಿಸಿ ತಾನು ವಿಪರೀತ ಭಾವವನೆಯ್ದಿ ಅವರ ಮರೆ ಮಾಡಿ ಕಾದುತ್ತಿದ್ದಿತೆಂಬುದೀಗ ಕೋಳಿಯರ್ಕಜದ ಅರಿವನರಿವ ಅರುಹಿರಿಯರು ಅನುಭಾವಿಗಳ ಮಿಕ್ಕ ಭಾವನೊಕ್ಕನುಂಡು ಕೊಕ್ಕರನಾಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಮನೋವಿಕಾರವಳಿದು ನಿರ್ವಿಕಾರಜ್ಞಾನ ಅಳವಡದು ಅಸತ್‌ಪ್ರಣವಾಹಂಕಾರಭಾವ ಆ ವಿಪರೀತ ಭಾವ ಆ ಮನೋಭಾವ ಈ ತ್ರಿವಿಧವು ಅಳಿದು ಕೆವರಿದ ಚರಣವೆಂಬ ನಾನಾ ದುಶ್ಚರಿತಗಳೆಲ್ಲವು ಅಳಿದು ಮರಣವ ಗೆಲಿದು ಕರಣಂಗಳ ರತವೆಂಬುದೀಗ ಹಿಂದಿದ್ದ ಕೋಳಿಯ ಕೊಕ್ಕರನ ಕಪಿಯ ಭಾವವ ಅರಿಯದಿದ್ದ ಕಾರಣ ಕೆದರಿದ ಚರಣ ಉಡುಗಿ ಮರಣವರಿಯದೆ ಕರಣ ಹೇಯತ್ವವಿಲ್ಲದೆ ಎಂಬ ಶಬ್ದಕ್ಕರ್ಥ. ಈ ಮರ್ಮವನರಿವಾತನೇ ಲಿಂಗೈಕ್ಯ. ಆತನೇ ಚೈತನ್ಯಾತ್ಮನು ಆತನೇ ದಿವ್ಯಶಿವಯೋಗಿ ಆತನೇ ಲಜ್ಜಾಭಿಮಾನ ರಹಿತನು. ಆತನೇ ಜನನ ಮರಣ ರಹಿತನು. ಆತನೇ ಭವರಹಿತನು. ಆತನೇ ಜೀವನ್ಮುಕ್ತನು. ಆತನೇ ಪರಶಕ್ತಿಸ್ವರೂಪಿಯು. ಆತನೇ ಪರಶಿವ ತತ್ವವೆಂಬುದೀಗ ಈ ಮರ್ಮವನರಿವಾತನೇ ಲಿಂಗೈಕ್ಯ. ತಾ ಆತನೇ ಪ್ರಣವ ಪುರುಷ ಇದನರಿದು ನುಂಗಿದಾತನೇ ಪರಶಿವಯೋಗಿ ಭಂಗವರಿಯದ ಜನನದ ಹೊಲಬರಿಯದ ಭಾವವ ಜೀವವರಿಯದ ಇದು ಕಾರಣ ಗುಹೇಶ್ವರಾ ನಿಮ್ಮ ಶರಣ ಲಿಂಗ ಸ್ವಯಶಕ್ತಿ ಶರಣ ತಾನೆಂಬ ಶಬ್ದಕ್ಕರ್ಥ.

೬೨. ತನ್ನನರಿದ ಅರಿವೆಂತುಂಟು. ತನ್ನುಮರವ ಮರವೆಂತುಂಟು ಅರಿದವರು ಮರೆದವರು ನಿಮ್ಮ ಪ್ರತಿಬೊಂಬೆಯಂತಿಪ್ಪರು ಕಾಣಾ ಗುಹೇಶ್ವರಾ.

ಟೀಕು: ತಮ್ಮ ತಾವರಿದು ತಮ್ಮ ಪೂರ್ವಾಶ್ರಯವ ಕಳೆದು ಮರೆದು ತಾನೇ ತಾನಾಗಿಪ್ಪ ಶರಣನು ಪರಬ್ರಹ್ಮದಲ್ಲಿ ಬಿಂಬಿಸುತಿರ್ಪನೆಂಬುದೀ ವಚನದ ತಾತ್ಪರ್ಯಾರ್ಥ.

೬೩. ಮಾಯಾ ಮಲಿನ ಮನದಿಂದ ಅಗಲದೆ ಕಾಯದ ದಂದುಗ ಕಳೆಯಿಂದಗಲದೆ ಅರಿವು ಬರಿದೆ ಬಪ್ಪುದೆ ನಿಜವು ಬರಿದೆ ಸಾಧ್ಯವಪ್ಪುದೆ ಮರುಳೆ? ಗುಹೇಶ್ವರಲಿಂಗವನರಿಯಬಲ್ಲಡೆ ನಿನ್ನನೀತಿಳಿದುನೋಡಾ!

ಟೀಕು:— ಮನದೊಳಗೆ ಮಾಯಾ ಮಲವಾವರಿಸಿ ತನುವಿನೊಳಗೆ ಜೀವಕಳೆ ಆವರ್ತಿಸಿರುತ್ತಿರಲು ಸುಜ್ಞಾನವ ಘಟಿಸದು. ನಿಜವು ಸಾಧ್ಯವಾಗದು. ಮತ್ತೆಂತೆಂದೊಡೆ ತನ್ನ ತಾ ತಿಳಿದು ನೋಡಲು ತನ್ನಿಂ ತನ್ನ ಕಾಣಬಹುದೆಂಬುದೀ ವಚನದ ತಾತ್ಪರ್ಯಾರ್ಥ.

೬೪. ಜ್ಞಾನಚಕ್ರ ಪರತತ್ವ ಪರಮಾರ್ಥ ಪರಮಜ್ಞಾನ ಪರಾಪರ ವಾಙ್ಮನಕ್ಕಗೋಚರ ಶಬ್ದಗಂಭೀರ ಉಪಮಾತೀತ ಉನ್ನತ ಪರಶಿವಜ್ಞಾನಜ್ಯೋತಿ ಸುಜ್ಞಾನದ ಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಪರಮಾನಂದದ ಮಹಾನುಹಿಮಂಗೆ ಶಿವಜ್ಞಾನವೇ ಶೃಂಗಾರ ಮಹಾಬೆಳಗೆ ವಿಭೂತಿ ಪಂಚಬ್ರಹ್ಮವೇ ದರ್ಶನ ಗಗನ ಸ್ಥಾನವೇ ಕಂಥೆ ಆಕಾಶವೇ ಕೋಪರ ಅಜಾಂಡ ಬ್ರಹ್ಮಾಂಡವೇ ಕರ್ಣಕುಂಡಲ ಆದಿ ಆಧಾರವೇ ಕಕ್ಷಪಾಳ ಅನಾಹತವೇ ವಡ್ಯಾಣ ಅದ್ವೈತವೇ ಯೋಗವಟ್ಟಗೆ ಅಗಮ್ಯವೇ ಯೋಗವಾವುಗೆ ಅಚಳಿತವೇ ಖರ್ಪರ ಅಪ್ರಮಾಣವೇ ಲಾಕುಳ ಅವಿಚಾರವೇ ಸುಳುಹು ಅಕುಪಿತವೇ ಭಿಕ್ಷೆ ಕೊಂಡುದೆ ಗಮನ ನಿಂದುದೆ ನಿವಾಸ ನಿಶ್ಚಿಂತವೆಂಬಾಶ್ರಮದಲ್ಲಿ ನಿರಾಕುಳವೆಂಬ ಸಿಂಹಾಸನವನ್ನಿಕ್ಕಿ ಗಗನ ಗಂಭೀರ ಬಾವಿಯೊಳಗೆ ಅಗೋಚರದ ಅಗ್ಘವಣಿಯ ತಂದು ಮಹಾಘನ ಪ್ರಾಣಲಿಂಗಕ್ಕೆ ಮಂಗಳದ ಬೆಳಗಿನಲ್ಲಿ ಮಜ್ಜನಕ್ಕೆರೆದು ಬಿಂದ್ವಾಕಾಶವೇ ಕಂಥೆ ಮಹಾದಾಕಾಶವೇ ಅಕ್ಷತೆ ಪರಾಪರವೇ ಪತ್ರಿಪುಷ್ಪ ನಿರ್ಮಳವೇ ಲಿಂಗಾರ್ಚನೆ ಮಹಾಪ್ರಕಾಶವೇ ಮಾಲೆ ನಿತ್ಯನಿರಂಜನವೇ ಧೂಪಾರತಿ ಸಕಲಭುವನಾದಿಭುವನಂಗಳೆ ಸುಯಿಧಾನ ಆಚಾರವೇ ಅರ್ಪಿತ ಮಹತ್ವವೇ ಶೀತಾಳ ಅಖಂಡಿತವೇ ಅಡಿಕೆ ಏಕೋಭಾವವೇ ಎಲೆ ಶುದ್ಧಶಿವಾಚಾರವೇ ಸುಯಿಧಾನದ ಸುಣ್ಣ ವಿವೇಕವಿಚಾರದಿಂದ ವೀಳ್ಯೆಯವನವಧರಿಸುವುದು. ಮಹಾಲಿಂಗದ ಪರಿಣಾಮವೇ ಪ್ರಸಾದ ಸಮ್ಯಜ್ಞಾನವೇ ಸಂತೋಷ ಸಹಜ ನಿರಾಭಾರಿಗಳ ಮೇಳದಿಂದ ನಿಸ್ಸೀಮದ ನಿಭ್ರಾಂತಿನ ಸುಸಂಗದಲ್ಲಿ ನಿರಾಸಪದವೇ ಅನುಕೂಲ ನಿಃಶಬ್ದವೇ ಅನುಭಾವ ಅನುಪಮದ ನಿಃಶೂನ್ಯವೇ ವಿಶ್ರಾಮ ನಿರಾಕಾರವೇ ಗಮನ ನಿರಂತರ ಪಾತಾಳ ಊರ್ಧ್ವ ಪವನ ಸಂಯೋಗ ತ್ರಿಭುವನಗಿರಿಯೆಂಬ ಪರ್ವತವನೇರಿ ಕಾಯ



ವೆಂಬ ಕದಳಿಯ ಹೊಕ್ಕು ಸುಳಿದಾಡುವ ಮಹಾ ಮಹಿಮಂಗೆ ಇಹಲೋಕವೇನು ಪರಲೋಕವೇನು? ಅಲ್ಲಿಂಪತ್ತ ಅಗಮ್ಯ ನಿರಾಳ ಪರಮಜ್ಞಾನದ ಸಿದ್ಧಿ ಮಹಾಲಿಂಗದ ಬೆಳಗು ಗುಹೇಶ್ವರಾ ನಿಮ್ಮ ನಿಜವನರಿದ ಮಹಾಮಹಿಮಂಗೆ ನಮೋ ನಮೋ ಎನುತಿರ್ದೆನು.

ಟೀಕು:—ಪರಮ ಜ್ಞಾನೋದಯವಾಗೆ ಸರ್ವಾಂಗ ಲಿಂಗ ಲೀಯವಾಗೆ ಆ ಮಹಾ ಜ್ಞಾನಪ್ರಕಾಶವೇ ತಾನಾಗಿ ನಿರಾಳವೆಂಬ ನಿರಾಶ್ರಯದಲ್ಲಿ ನಿಜವ ನಿಲವನೆಯ್ದಿ ನಿಂದ ಪರಮ ಶಾಂತ ಮಹಂತ ಶರಣನ ಸ್ವಲೀಲಾಚರಿತ್ರನೆಂತೆಂವಡೆ ಈ ವಚನವಲ್ಲಿಯೇ ವ್ಯಾಖ್ಯಾನವಾಗಿ ಕಾಣಬರುತಿಪ್ಪದಾಗಿ ಬೇರೆ ಪರಿಚ್ಛೇದನವ ಮಾಡಲಿಲ್ಲವೆಂಬುದೀ ವಚನಾರ್ಥ.

೬೫. ಊರದ ಚೇಳಿನ ಏರವ ಬೇನೆಯಲ್ಲಿ ಮೂರು ಲೋಕವೆಲ್ಲ ನರಳಿತ್ತು. ಹುಟ್ಟದ ಗಿಡವ ಬಟ್ಟಿಲೆಯ ತಂದು ಮುಟ್ಟದೆ ಹೂಸಲು ಮಾಬದು ಗುಹೇಶ್ವರಾ.

ಟೀಕು:— ಮಿಥ್ಯೆಯೆಂಬ ವೃಶ್ಚಿಕನು ಅತ್ಯಂತದಿಂದ ಜಗವನೂರಲು ಇಲ್ಲದ ಸಂಸಾರದುಃಖದಲ್ಲಿ ಜಗವೆಲ್ಲ ಹೊರಳುತ್ತಿದ್ದಿತೆಂಬುದೀಗ ಊರದ ಚೇಳಿನ ಏರವ ಬೇನೆಯಲ್ಲಿ ಮೂರು ಲೋಕವೆಲ್ಲ ನರಳಿತ್ತೆಂಬ ಶಬ್ದಕ್ಕರ್ಥ. ಆ ಸಂಸಾರ ವಿಷಯಕ್ಕೆ ಜನನವಿರಹಿತವಹ ಶಿವಜ್ಞಾನ ಕ್ರಿಯೆಯೆಂಬ ಔಷಧಿಯನು ತನುಗುಣಸೋಂಕದೆ ಹೂಸಲು ಆ ಬೇನೆ ಮಾಬುದೆಂಬುದೀಗ ಹುಟ್ಟದ ಗಿಡವ ಬಟ್ಟಿಲೆಯ ತಂದು ಮುಟ್ಟದೆ ಹೂಸಲು ಮಾಬುದೆಂಬ ಶಬ್ದಕ್ಕರ್ಥ.

೬೬. ನಿಮ್ಮಲ್ಲಿ ನೀವು ತಿಳಿದು ನೋಡಿರೆ ಅನ್ಯವಿಲ್ಲ ಕಾಣಿರಣ್ಣಾ. ಅರಿವು ನಿಮ್ಮಲ್ಲಿಯೇ ತದ್ಗತವಾಗಿದೆ. ಅನ್ಯ ಭಾವವ ನೆನೆಯದೆ ತನ್ನೊಳಗೆ ತಾನೇ ಎಚ್ಚರವಿರಬಲ್ಲರೆ ತನ್ನಲ್ಲಿಯ ತನ್ಮಯ ಗುಹೇಶ್ವರಲಿಂಗವು.

ಟೀಕು:— ತನ್ನಲ್ಲಿ ತಾನು ತಿಳಿದು ನೋಡಬಲ್ಲಡೆ ಪರಬ್ರಹ್ಮವು ತನ್ನಲ್ಲಿಯೇ ತದ್ಗತವಾಗಿಪ್ಪದು. ಅದನರಿದು ಆ ವಸ್ತುವನ್ನು ಭಿನ್ನವಿಟ್ಟರಿಯದೆ ಸುಚಿತ್ತನಾಗಿ ಎಚ್ಚತ್ತು ಬಲ್ಲರೆ ಆತನೇ ಶಿವಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೬೭. ಜಗನಗಲವಲ್ಲಿ ಹಬ್ಬಿದ ಬಲೆಯ ಜಗಕ್ಕೆ ತೆಗೆಯದು ನೋಡಾ. ಬಗೆಯದು ಭ್ರಮೆಗೊಳದು. ತನ್ನ ಇರವಿನ ಪರಿ ಇಂತು

ಟಾಗಿ ಜಗವ ಪ್ರಾಣಿಗಳುಲಿದುಲಿದು ಮರಳಿ ಮತ್ತಲ್ಲಿಯೇ ಬೀಳಲು ಬಲಿಯ ನೇಣು ಬಗ್ಗುರಿಯ ಕೈಯ್ಯಲಿರಲು ಬಲಿಯ ನೇಣ ಕಣ್ಣಿಯ ಕಳಚಿ ಶರಣನು ಶರಣೆನುತ್ತ ನಿಂದು ಒಡಲುಪಾಧಿಯನರಿಯದೆ ಬೆಳಗಿನಲ್ಲಿ ನಿಂದು ಬೇಡಿದವರಿಗೆ ಅಣಿಮಾಡಿ ಗುಣಂಗಳನಿತ್ತು ಮನೋಮಧ್ಯದಲ್ಲಿ ನಿಲಿಸಿ ನೆನೆಯುತ್ತಿದ್ದು ಸುಖಿಯಾದ ಪ್ರಾಣನಾಥನು ಕಾಯ ಶೂನ್ಯ ಲಿಂಗಕ್ಕೆ ಪ್ರಾಣ ಶೂನ್ಯ ಶರಣ ಗುಹೇಶ್ವರಲಿಂಗವಲ್ಲಿ ಬೆರಸಿ ಬೇರಿಲ್ಲ.

ಟೀಕು:— ಹದಿನಾಲ್ಕು ಭುವನವ ಮುಸುಕಿದ ಮಾಯೆಯ ಬಲೆ ಆ ಭುವನವುಳ್ಳನ್ನಕ್ಕರ ಉಡುಗದು ಏನನು ಲೆಕ್ಕಿಸದು ತೊಲಗದು. ಅದು ಕಾರಣ ಲೋಕವೆಲ್ಲವು ಆ ಬಲೆಯೊಳಗೆ ಏಳುತ್ತ ಬೀಳುತ್ತ ಪಾಶಬದ್ಧರಾಗಿದ್ದರೆಂಬುದೀಗ ಜಗದಗಲದಲ್ಲಿ ಹಬ್ಬಿದ ಬಲೆಯು ಜಗಕ್ಕೆ ತೆಗೆಯದು ನೋಡಾ. ಬಗೆಯದು ಭ್ರಮೆಗೊಳ್ಳದು ತನ್ನ ಇರವಿನ ಪರಿಯಿಂತುಟು ಜಗದ ಪ್ರಾಣಿಗಳು ಉಲಿದುಲಿದು ಮರಳಿ ಮತ್ತಲ್ಲಿಯೇ ಬೀಳಲು ಬಲಿಯ ನೇಣು ಬಗ್ಗುರಿಯ ಕೈಯ್ಯಲಿರಲು ಎಂಬ ಶಬ್ದಕ್ಕರ್ಥ. ಇಂತಪ್ಪ ಮಾಯಾ ಜಾಲವ ನೆರೆ ಹಿಂಗಿಸಿ ಸುಜ್ಞಾನ ಕಣ್ದೆರೆದು ಶಿವಶರಣನು ಕೃತಾರ್ಥಭಾವಿಯಾಗಿದ್ದನೆಂಬುದೀಗ ಬಲೆಯ ನೇಣ ಕಣ್ಣಿಯ ಕಳಚಿ ಶರಣ ನೋಡುತ್ತಿದ್ದನೆಂಬ ಶಬ್ದಕ್ಕರ್ಥ. ಆ ಶರಣನು ಒಡಲುಪಾಧಿಯಳಿದು ಮಹಾ ಪ್ರಕಾಶದಲ್ಲಿ ನಿಂದು ಅಣಿಮಾದಿ ಗುಣ ವರಪ್ರದಾಯಿಕನಾಗಿದ್ದನೆಂಬುದೀಗ ಒಡಲುಪಾಧಿಯನರಿಯದೆ ಬೆಳಗಿನಲ್ಲಿ ನಿಂದು ಬೇಡಿದವರಿಗೆ ಅಣಿಮಾದಿ ಗುಣಂಗಳನಿತ್ತನೆಂಬ ಶಬ್ದಕ್ಕರ್ಥ. ಮನಸ್ಥಲ ಮಧ್ಯದಲ್ಲಿ ಮಹಾಜ್ಞಾನಲಿಂಗವನಾಲಿಂಗಿಸಿ ನೆನದು ಸುಖಿಯಾಗಿದ್ದನೆಂಬುದೀಗ ಮನೋಮಧ್ಯದಲ್ಲಿ ನಿಲಿಸಿ ನೆನೆಯುತ್ತಿದ್ದು ಸುಖಿಯಾದ ಪ್ರಾಣನಾಥನೆಂಬ ಶಬ್ದಕ್ಕರ್ಥ. ಕಾಯ ಶೂನ್ಯಲಿಂಗಕ್ಕೆ ಪ್ರಾಣಶೂನ್ಯ ಶರಣನಾಗೆ ಬೆರಸಿ ಭೇದವಿಲ್ಲದೆ ಪರಿಪೂರ್ಣನಾಗಿದ್ದ ನೆಂಬುದೀಗ ಕಾಯ ಶೂನ್ಯಲಿಂಗಕ್ಕೆ ಪ್ರಾಣಶೂನ್ಯ ಶರಣ ಗುಹೇಶ್ವರಲಿಂಗದಲ್ಲಿ ಬೆರಸಿ ಬೇರಿಲ್ಲವೆಂಬ ಶಬ್ದಕ್ಕರ್ಥ.

೬೮. ಇಲ್ಲವೆಯ ಮೇಲೊಂದು ಉಂಟೆಂಬ ಪತಿಭಾವ ಅಲ್ಲಿ ಇಲ್ಲಿ ಎನ್ನದೆ ತಾನೇ ನಿಂದುದು ನೋಡಾ! ತನ್ನಲ್ಲಿಯ ಪ್ರಕೃತಿಯ, ತಾನೇ



ಹಿಂಗಿಸಲು ಅಲ್ಲಿಯೇ ಸುಜ್ಞಾನ ಉದಯಿಸಿತ್ತು. ಎಲ್ಲಾ ಎಡೆಯಲ್ಲಿಯೂ ನಿಂದ ನಿಜಪದವ ಗುಹೇಶ್ವರಾ ನಿಮ್ಮ ಶರಣ ಬಲ್ಲ.

ಟೀಕು:— ಇಲ್ಲವೆ ಎಂದರೆ ಮಾಯೆ. ಆ ಮಾಯೆಯ ನಿವೃತ್ತಿಯ ಮಾಡಿ ಜ್ಞಾನೋದಯವಾಗಿ ಪರಬ್ರಹ್ಮದ ನೆಲೆಯರಿಯಲು ಅದು ಅಲ್ಲಿ ಇಲ್ಲಿ ಎನ್ನದೆ ಎಲ್ಲಿಯೂ ತಾನೇಯಾಗಿಪ್ಪುದು. ಅದುಕಾರಣ ತನ್ನ ಪ್ರಕೃತಿ ತನ್ನಲ್ಲಿಯಳಿದು ತನ್ನಲ್ಲಿ ತನ್ನ ನಿಲವು ಪರಿಪೂರ್ಣವಾಗಿ ನಿಂದ ಭೇದವ ಆ ಸುಜ್ಞಾನಿ ಶರಣ ಬಲ್ಲನೆಂಬುದೀ ವಚನದ ತಾತ್ಪರ್ಯಾರ್ಥ.

೬೯. ಒಡಲಲ್ಲಿ ಹುಟ್ಟಿತ್ತು ಭ್ರಮೆಯಿಂದ ಬೆಳೆಯಿತ್ತು. ಒಡನೆ ಹುಟ್ಟಿತ್ತು ತನ್ನನರಿಯದ ಕಾರಣ ನೋಡಾ. ಇದೊಂದು ಸೋಜಿಗವ ಕಂಡ್ಯಾ ಕೂಡೆ ಭರಿತವೆಂದರಿಯಲು ಅಂಗದ ಅಳವಟ್ಟಿತ್ತು ಗುಹೇಶ್ವರಾ.

ಟೀಕು:— ಮಾಯಾ ಮಿಥ್ಯೆಯೆಂಬ ಒಡಲು ಕೊಂಡಲ್ಲಿಯೇ ಉದಯಿಸಿ ಭ್ರಮೆಯಿಂದವೇ ಪ್ರವರ್ತಕವಾಯಿತೆಂಬುದೀಗ ಒಡಲಲ್ಲಿ ಹುಟ್ಟಿತ್ತು ಭ್ರಮೆಯಿಂದ ಬೆಳೆಯಿತ್ತು ಎಂಬ ಶಬ್ದಕ್ಕರ್ಥ. ಇಂತು ತಾನೆಂಬಲ್ಲಿ ಹುಟ್ಟಿತ್ತೆಂಬುದರಿಂದ ಒಡನೆ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಮಾಯೇ ತಾನೆಂದರಿಯದ ಕಾರಣ ಏನೆಂದು ಅರಿಯದಿದ್ದಿತೆಂಬುದೀಗ ತನ್ನನರಿಯದ ಕಾರಣ ಇದೊಂದು ಸೋಜಿಗವ ಕಂಡೆನೆಂಬ ಶಬ್ದಕ್ಕರ್ಥ. ಇಂತಪ್ಪ ಮಾಯೆಯ ನಿವೃತ್ತಿಮಾಡಿ ಜ್ಞಾನೋದಯವಾಗೆ ಜಗದೊಳಗೆ ತಾನೆ ಪರಿಪೂರ್ಣನೆಂದರಿದು ಆ ಪರಬ್ರಹ್ಮವ ಸರ್ವಾಂಗಕ್ಕೆ ಆಲಿಂಗನವ ಮಾಡಿಕೊಳ್ಳಲು ಆತನೇ ಅಚ್ಚಶರಣನೆಂಬುದೀಗ ಕೂಡೆ ಭರಿತನೆಂದರಿಯಲು ಅಂಗದಲಳವಟ್ಟಿತ್ತು ಎಂಬ ಶಬ್ದಕ್ಕರ್ಥ.

೭೦. ಭವವಿರಹಿತಂಗೆ ಭಕ್ತಿಯ ಮಾಡುವರು ನೀವು ಕೇಳಿರಣ್ಣಾ. ಭವಬಾಧೆಯೊಳಗೆ ನಿಲ್ಲದು. ಅಭವಂಗೆ ಭಕ್ತಿಯಮಾಡುವ ಪರಿಯಿಂತು ತಾನಭವನಾದಲ್ಲದೆ ಸಹಜಭಕ್ತಿಯ ಮಾಡಬಾರದು ಗುಹೇಶ್ವರಾ.

ಟೀಕು:—ತಾನು ಭವಬಾಧೆಯೊಳು ಸಿಲುಕಿರುತ್ತ ನಿರ್ಭವ ವಸ್ತುವಿಂಗೆ ಭಕ್ತಿಯ ಮಾಡಿಹೆನೆಂದೊಡೆ ಭವಂಗು ಅಭವಂಗು ಸಂಘಟಿಸದು ಅದುಕಾರಣ ತಾನು ನಿರ್ಭವನಾಗಿ ಲಿಂಗಕ್ಕೆ ಭಕ್ತಿಯ ಮಾಡಬೇಕೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೭೧. ಭವಿಯ ಕಳೆದೆನೆಂಬ ಮರುಳು ಜನಂಗಳು ನೀವು ಕೇಳಿರೆ. ಭವಿಯಲ್ಲವೇ ನಿಮ್ಮ ತನುಮನಗುಣಾದಿಗಳು? ಭವಿಯಲ್ಲವೇ ನಿಮ್ಮ ಪ್ರಾಣ ಗುಣಾದಿಗಳು? ಇವರೆಲ್ಲರು ಭವಿಗಳ ಹಿಡಿದು ಭವಭಾರಿಗಳಾದರು ನಾನು ಭವಿಯ ಪೂಜಿಸಿ ಭವಂನಾಸ್ತಿಯಾದೆನು ಗುಹೇಶ್ವರಾ.

ಟೀಕು:--ಅಂತರಂಗದ ಕರಣವಿಕಾರಂಗಳೆಂಬ ಭವಿಗಳ ಕಳೆಯಲರಿಯದೆ ಬಾಹ್ಯದ ಭವಿಗಳ ಕಳೆದೆನೆಂಬುದು ಅಜ್ಞಾನ. ಅದರಿಂದ ಭವ ಹರಿಯದು. ಮತ್ತೆಂತೆಂದೊಡೆ ಸರ್ವಾಂಗದಲ್ಲಿ ಲಿಂಗ ಲೀಯವಾಗಿ ಭಕ್ತನೆಂಬ ಭಿನ್ನ ಶಬ್ದವಳಿದು ಆ ಭಕ್ತಿಚರಿತ್ರದಿಂ ಲಿಂಗವಾಗಿ ಲಿಂಗವ ಪೂಜಿಸಬಲ್ಲಡಾತನೆ ಲಿಂಗೈಕ್ಯನೆಂಬುದೀ ವಚನದ ತಾತ್ಪರ್ಯಾರ್ಥ.

೭೨. ಭವಿ ಬೀಜವೃಕ್ಷದ ಪದದೊಳಗೆ ಭಕ್ತಿ ಬೀಜವೃಕ್ಷ ಪಲ್ಲವಿಸಿತ್ತು. ಆ ಭಕ್ತಿಬೀಜವೃಕ್ಷದ ಫಲದೊಳಗೆ ಶರಣಬೀಜವೃಕ್ಷ ಪಲ್ಲವಿಸಿತ್ತು. ಆ ಶರಣಬೀಜವೃಕ್ಷದ ಫಲದೊಳಗೆ ಕುಲನಾಶಕನಾದ ಶರಣಗೆ ಒಂದೇ ಬಸುರಲ್ಲಿ ಬಂಧು ಬಳಗಕ್ಕೆ ತನ್ನ ಕುಲಕ್ಕೆ ತಾನೇ ಮಾರಿಯಾದ ಶರಣ ಭವಿ ಭಕ್ತ ಭವಿ ಬೀಜವೃಕ್ಷದ ತಂಪು ನೆಳಲನು ಬಿಟ್ಟು, ಕುಳಿತಲ್ಲಿಯೇ ಬಳಿಯ ಬಯಲಾದ ಶರಣ ನಾದ ಬಿಂದು ಬೀಜ ನಷ್ಟ ಹಾಳಾಗಿ ಹಾರಿ ಹೋದಲ್ಲಿ ಇನ್ನೇನ ಹೇಳಲುಂಟು? ಗುಹೇಶ್ವರನೆಂಬ ಲಿಂಗವನರಿದು ಭವಿಗೆ ಭವಿಯಾದಾತಂಗೆ ಇನ್ನೇನು ಫಲವುಂಟಯ್ಯಾ?

ಟೀಕು:--ಭವಿ ಜನ್ಮವೆಂಬುದು ಮುಂದೆ ಬಹ ಭಕ್ತಿ ಜನ್ಮಕ್ಕೆ ಕಾರಣವಾಗಿ ಆ ಭವಿತ್ವದ ಅವಿವೇಕ ನಿವೃತ್ತಿಯಾಗಿ ಭಕ್ತಿ ವಿವೇಕ ಉದಯವಾಯಿತ್ತೆಂಬುದೀಗ ಭವಿ ಬೀಜ ವೃಕ್ಷದ ಫಲದಲ್ಲಿ ಭಕ್ತಿ ಬೀಜವೃಕ್ಷ ಪಲ್ಲವಿಸಿತ್ತೆಂಬ ಶಬ್ದಕ್ಕರ್ಥ. ಆ ಭಕ್ತಿ ಉದಯವಾಗಿಯೇ ಸದಾಚಾರ ಸದ್ವರ್ತನ ಲಿಂಗಲೇಪವಾದಲ್ಲಿ ಸುಜ್ಞಾನ ಸ್ವರೂಪವಪ್ಪ ಶರಣತ್ವ ಉದಯವಾಯಿತ್ತೆಂಬುದೀಗ ಭಕ್ತಿ ಬೀಜ ವೃಕ್ಷದ ಫಲದೊಳಗೆ ಶರಣ ಬೀಜವೃಕ್ಷ ಪಲ್ಲವಿಸಿತ್ತೆಂಬ ಶಬ್ದಕ್ಕರ್ಥ. ಆ ಸುಜ್ಞಾನ ಶರಣನ ಸರ್ವಾಂಗದಲ್ಲಿ ಲಿಂಗ ಲೇಪವಾಗಲು ಆ ಶರಣನು ತಾನೇ ಜನನ ಮರಣ ವರ್ಜಿತನಾದನೆಂಬುದೀಗ ಆ ಶರಣ ಬೀಜವೃಕ್ಷದ ಫಲದೊಳಗೆ ಕುಲನಾಶಕನಾದ ಶರಣನೆಂಬ ಶಬ್ದಕ್ಕರ್ಥ. ಇಂತಪ್ಪ ಶರಣ ತನ್ನ ಉದರ ಕುಹರದೊಳಿರ್ದ್ದ ಸಕಲ ಕರಣಂಗಳೆಲ್ಲವನು ನಷ್ಟಮಾಡಿ ತನ್ನ ತಾ ಸಂಹರಿಸಿ ಕೊಂಡು ತಾನೇ ಉಳಿದ



ಕಾರಣ ಒಂದೇ ಬಸುರಲ್ಲಿ ಬಂಧು ಬಳಗಕ್ಕೆ ತನ್ನ ಕುಲಕ್ಕೆ ತಾನೇ ಮಾರಿಯಾದನೆಂಬ ಶಬ್ದಕ್ಕರ್ಥ. ಆ ಶರಣನು ಪೂಜಕನಾದ ಭಕ್ತನಲ್ಲ. ಪೂಜಿಸಿದ ಆ ಭಕ್ತನಲ್ಲ. ಈ ಉಭಯವನು ಅಳಿದುಳಿದು ತನ್ನಲ್ಲಿ ತಾನು ಸ್ವಸನಾಗಿ ನಿರ್ವಯಲ ಸಮಾಧಿಯಲ್ಲಿ ನಿಂದನೆಂಬುದೀಗ ಭವಿ ಭಕ್ತ ಭವಿ ಬೀಜವೃಕ್ಷದ ತಂಪುನೆಳಲು ಬಿಟ್ಟು ಕುಳ್ಳಿರ್ದಲ್ಲಿಯೇ ಬಳಿಯ ಬಯಲಾದನೆಂಬ ಶಬ್ದಕ್ಕರ್ಥ. ಅದುಕಾರಣ ಆ ಶರಣನು ನಾದ ಬಿಂದು ಕಳೆ ಎಂಬ ತ್ರಿವಿಧವು ಅಳಿದು ನಿಂದ ನಿಜಪದದಲ್ಲಿ ನಿಯತವಾದನೆಂಬುದೀಗ ನಾದ ಬಿಂದು ಬೀಜ ನಷ್ಟ ಹಾಳಾಗಿ ಹಾರಿ ಹೋದಲ್ಲಿ ಇನ್ನೇನ ಹೇಳಲುಂಟು? ಗುಹೇಶ್ವರಲಿಂಗದಲ್ಲಿ ಭವಿಗೆ ಭವಿಯಾದಾತಂಗೆ ಇನ್ನೇನ ಪದವುಂಟೆಂಬ ಶಬ್ದಕ್ಕರ್ಥ.

೭೩. ಹುಟ್ಟಿದ ಕೂಸಿಂಗೆ ಪಟ್ಟವ ಕಟ್ಟಿ ವಿಭೂತಿಯ ಹೂಸಿ ಲಿಂಗವ ತೋರಿ ಜೋ ಜೋ ಎಂದು ಜೋಗುಳವ ಹಾಡಿದಳು. ಮಾಯಾದೇವಿಯ ಅಕ್ಕ ಜೋಎಂಬ ಸರ ಹರಿದು ತೊಟ್ಟಿಲು ಬಿದ್ದಿತ್ತು. ಕೂಸು ಸತ್ತಿತ್ತು ಗುಹೇಶ್ವರನಳಿದನು.

ಟೀಕು:-- ಸಕಲ ಕರ್ಮಂಗಳಳಿದುಳಿದ ಶಿಷ್ಯಂಗೆ ಜ್ಞಾನಶಕ್ತಿಯೆಂಬ ತಾಯಿ ಜ್ಞಾನಭಸ್ಮವನೇ ಪಟ್ಟವ ಕಟ್ಟಿ ತನ್ನ ಸ್ವಯಂಜ್ಯೋತಿಯನೇ ಲಿಂಗವ ಮಾಡಿ ತೋರಿಸಿ ಶಿವೋಹಂ ಶಿವೋಹಂ ಎಂದು ಬೋಧಿಸುತಿದ್ದಳೆಂಬುದೀಗ ಹುಟ್ಟಿದ ಕೂಸಿಂಗೆ ಪಟ್ಟವ ಕಟ್ಟಿ ವಿಭೂತಿಯ ಹೂಸಿ ಲಿಂಗವ ತೋರಿ ಜೋ ಜೋ ಎಂದು ಜೋಗುಳವಾಡಿದಳು ಮಾಯಾದೇವಿಯ ಅಕ್ಕನೆಂಬ ಶಬ್ದಕ್ಕರ್ಥ. ಆ ಶಿವೋಹಂ ಎಂಬ ಭಿನ್ನಶಬ್ದವು ಅಳಿದು ತೊಟ್ಟಿಲೆಂಬ ತನುವು ಅಳಿದು ಶರಣನು ಲಿಂಗಲೀಯವಾಗೆ ಪರಬ್ರಹ್ಮವೇ ಉಳಿಯಿತ್ತೆಂಬುದೀಗ ಜೋ ಜೋ ಯೆಂಬ ಸರ ಹರಿದು ತೊಟ್ಟಿಲು ಬಿದ್ದಿತ್ತು ಕೂಸು ಸತ್ತಿತ್ತು ಗುಹೇಶ್ವರ ಉಳಿದನೆಂಬ ಶಬ್ದಕ್ಕರ್ಥ.

೭೪. ಅರುವಿನಲ್ಲಿ ಉದಯಿಸಿ ಮರವು ನಷ್ಟವಾಗಿದ್ದ ಶರಣನ ಪರಿಯ ನರಸಲುಂಟೇ? ಗತಿಯ ಹೇಳಲುಂಟೆ? ಶಿಶು ಕಂಡ ಕನಸಿನಂತಿಪ್ಪರು ಗುಹೇಶ್ವರ ನಿಮ್ಮ ಶರಣರು.

ಟೀಕು:— ಸುಜ್ಞಾನೋದಯುವಾಗೆ ಅಜ್ಞಾನವಳಿದ ಶರಣನ ನಿಲವು ಶಿಸು ಕಂಡ ಕನಸಿನಂತೆ ಗೋಪ್ಯವಾಗಿದ್ದೀತೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೭೫. ಗುರುಶಿಷ್ಯ ಸಂಬಂಧಕ್ಕೆ ಅಂಗವ ಧರಿಸುವರಯ್ಯಾ. ನಿಮ್ಮ ಸಂಬಂಧನಕಿಕ್ಕಿ ಅಳುವರಯ್ಯಾ. ಆನು ಕಂಡು ಮರುಗಿ ಅಕಟಕಟ ಎಂದೆನಲ್ಲಾ. ಕೂಗಿಲ್ಲ ಬೊಬ್ಬೆಯಿಲ್ಲ. ಹೋದ ಹೊಲಬನರಿಯ.ರು. ಗ.ಹೇಶ್ವರಾ ಬಾಳುವಲೆಯ ಹಿಡಿದೆನು.

ಟೀಕುಃ— ಶಿಷ್ಯನಲ್ಲಿ ಸುಜ್ಞಾನೋದಯುವಾಗಿ ಕೋಹಂ ಭಾವವಿಲ್ಲದೆ ಗುರುವಿನಲ್ಲಿ ಪರಿಪೂರ್ಣ ಜ್ಞಾನವೆಡೆಗೊಂಡು ಶಿವೋಹಂ ಎಂಬ ಭಾವವಿಲ್ಲದೆ ಅಜ್ಞಾನದಿಂದ ಲಿಂಗಸ್ವಾಯತ ಸಂಬಂದವ ಮಾಡಿಸಿಕೊಂಡು ಇರಲು ಅದು ಲಿಂಗದ ಬಂಧನಕಿಕ್ಕಿವಂತೆ ಎಂಬುದೀಗ ಗುರುಶಿಷ್ಯ ಸಂಬಂಧಕ್ಕೆ ಲಿಂಗವ ಧರಿಸುವರಯ್ಯಾ. ನಿಮ್ಮ ಬಂಧನಕಿಕ್ಕಿ ಆಳುವರಯ್ಯಾ ಎಂಬ ಶಬ್ದಕ್ಕರ್ಥ. ಈ ನಿರ್ಣಯ ನಿಜ ಶರಣನರಿದು ನಿವೃತ್ತಿ ಮಾಡಿ ಶಬ್ದಜಾಲಂಗಳ ಕೆಡಿಸಿ ನಿಃಶಬ್ದವೇದಿಯಾಗಿ ಸುಜ್ಞಾನ ಲಿಂಗವನು ಸದ್ಭಾವ ಹಸ್ತದಲ್ಲಿ ಧರಿಸಿಕೊಂಡನೆಂಬುದೀಗ ಆನು ಕಂಡು ಮರುಗಿ ಮರುಗಿ ಅಕಟಕಟ ಎಂದೆನಲ್ಲಾ ಕೂಗಿಲ್ಲ ಬೊಬ್ಬೆಯಿಲ್ಲ ಹೋದ ಹೊಲಬನರಿಯರು ದೇವಾ ಗುಹೇಶ್ವರಾ ಬಾಳುದಲೆ ಹಿಡಿವೆನು ಎಂಬ ಶಬ್ದಕ್ಕರ್ಥ.

೭೬. ಕಾಯದಲ್ಲಿ ಕಳವಳ ಎಡೆಗೊಂಡ ಬಳಿಕ ಅರಿವಿನಲ್ಲಿ ಮರವೆ ತಾನೆ ನಿಂದಿಪ್ಪದು ನೋಡಾ. ಕಾಯದ ಕಳವಳ ವಾಯವೆಂದರಿಯಲಲ್ಲದೆ ಗುಹೇಶ್ವರನ ನಿಲವು ತಾನೇ ನೋಡಾ.

ಟೀಕುಃ— ತನುವಿನಲ್ಲಿ ವಿಕಾರ ಭ್ರಾಂತುವೆಡೆಗೊಳಲು ಸುಜ್ಞಾನವೇ ಅಜ್ಞಾನವಪ್ಪುದು. ಅಂತಪ್ಪ ಕಾಯುವನೆ ಮಿಥ್ಯೆಯುಂದರಿಯುಲು ಆ ಸುಜ್ಞಾನವೆ ಪರಬ್ರಹ್ಮವೆಂಡೆಂಬುದೀ ವಚನದ ತಾತ್ಪರ್ಯಾರ್ಥ.

೭೭. ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯ. ನಿರಾಳಲಿಂಗಕ್ಕೆ ಬಯಲೆ ಸೆಜ್ಜೆ ವಾಯುುವೇ ಶಿವದಾರ ಬೆಳಗೇ ಸಿಂಹಾಸನ ಅತ್ತಲಿತ್ತ ಚಿತ್ತವ ಹರಿಯಲೀಯದೆ ಮಜ್ಜನಕ್ಕೆರೆದು ಸುಖಿಯಾದೆ ಗುಹೇಶ್ವರಾ.

ಟೀಕುಃ— ಬಿಸಿಲೆಂದರೆ ಸುಜ್ಞಾನ ಪ್ರಕಾಶ. ಆ ಸುಜ್ಞಾನ ಪ್ರಕಾಶವೆಂಬ ಗುರುವಿಂಗೆ ನೆಳಲೆಂಬ ಶಬ್ದವನುಳ್ಳ ಸುಶಾಂತನೆಂಬ ಶಿಷ್ಯನೆಂಬುದೀಗ ಬಿಸಿಲೆಂಬ ಗುರುವಿಂಗೆ ನೆಳಲೆಂಬ ಶಿಷ್ಯನೆಂಬ ಶಬ್ದಕ್ಕರ್ಥ. ಇಂತಪ್ಪ ಸುಜ್ಞಾನ ಪ್ರಕಾಶ ಗುರುವಿಂಗು ಆ ಪರಮ ಶಾಂತನೆಂಬ ಶಿಷ್ಯಂಗು ಭೇದವೇನಂದರೆ ಅಲ್ಲಿ ಸದ್ಭಾವವೆ ಛಾಯಾಮಾತ್ರವಾಗಿಪ್ಪದಾಗಿ ಆ ಸದ್ಭಾವಕ್ಕೆ ಸುಜ್ಞಾನ ಕರ್ತೃವಾದ ಕಾರಣ ಇಂತು ಗುರುಶಿಷ್ಯ ಸಂಬಂಧವಾಗಿತ್ತು. ಇಂತಪ್ಪ ಸದ್ಭಾವ ಶಿಷ್ಯಂಗೆ ಸುಜ್ಞಾನವೆಂಬ ಗುರು ನಿರ್ವಯಲೆಂಬ ಲಿಂಗವ ಸಂಬಂಧವ ಮಾಡಿ ನಿರ್ಲೇಪಾಂಗವೆಂಬ ಸೆಜ್ಜೆಯಲ್ಲಿಯ ಸ್ವಾನುಭಾವವೆಂಬ ಶಿವದಾರದಲ್ಲಿ ಧರಿಸಿಕೊಂಡನೆಂಬುದೀಗ ನಿರಾಳವೆಂಬ ಲಿಂಗಕ್ಕೆ ಬಯಲೇ ಸೆಜ್ಜೆ ವಾಯುುವೇ ಶಿವದಾರವೆಂಬ ಶಬ್ದಕ್ಕರ್ಥ. ಆ ಲಿಂಗಕ್ಕೆ ಮಹಾಪ್ರಕಾಶವೇ ಸಿಂಹಾಸನವಾಗಿ ಸ್ವಸ್ಥನಾದ ಬಳಿಕ ಚಿತ್ತ ಸಮಾಧಾನದಲ್ಲಿ ಲೀನವಾಗಿರಲು ಅದೇ ಲಿಂಗಾರ್ಚನೆ ಎಂಬುದೀಗ ಬೆಳಗೆ ಸಿಂಹಾಸನ ಅತ್ತಲಿತ್ತ ಚಿತ್ತವ ಹರಿಯಲೀಯದೆ ಮಜ್ಜನಕ್ಕೆರದು ಸುಖಿಯಾದೆನೆಂಬ ಶಬ್ದಕ್ಕರ್ಥ.

೭೮. ಕರಣಾದಿ ಗುಣಂಗಳಳಿದು ನವಚಕ್ರಂಗಳು ಭಿನ್ನವಾದ ಬಳಿಕ ಇನ್ನೇನು ಇನ್ನೇನು? ಪುಣ್ಯವಿಲ್ಲ ಪಾಪವಿಲ್ಲ. ಇನ್ನೇನು ಇನ್ನೇನು? ಸ್ವರ್ಗವಿಲ್ಲ ನರಕವಿಲ್ಲ. ಇನ್ನೇನು ಇನ್ನೇನು? ಗುಹೇಶ್ವರನೆಂಬ ಲಿಂಗವೇಧಿಸಿ ಸುಖಿಯಾದ ಬಳಿಕ ಇನ್ನೇನು ಇನ್ನೇನು?

ಟೀಕುಃ— ಅಂತಃಕರಣಂಗಳ ವಿಕಾರವಳಿದು ಬಹಿರಂಗದ ಪ್ರಪಂಚವೆಲ್ಲವು ಅಡಗಿ ನವನಾಳಂಗಳೆಲ್ಲವು ಏಕಮುಖವಾಗಿ ಮಹಾಜ್ಞಾನ ಕಂದೆರವಾದ ಶರಣನು ಪುಣ್ಯ ಪಾಪ ಸ್ವರ್ಗ ನರಕವೆಂಬ ಚತುರ್ವಿಧವನು ಅರಿಯದೆ ಪರಮ ಸುಖಿಯಾಗಿರ್ದನೆಂಬುದೀ ವಚನದ ತಾತ್ಪರ್ಯಾರ್ಥ.

೭೯. ಪೃಥ್ವಿಯು ನತಿಗಳೆದ ಸ್ಥಾವರಂಗಳಿಲ್ಲ. ಉದಕವನತಿಗಳೆದ ತೀರ್ಥಯಾತ್ರೆಗಳಿಲ್ಲ. ಅಗ್ನಿಯುನತಿಗಳೆದ ಹೋಮುಸಮಾಧಿಗಳಿಲ್ಲ. ವಾಯುುವನತಿಗಳೆದ ನೇಮನಿತ್ಯಗಳಿಲ್ಲ. ಆಕಾಶವನತಿಗಳೆದ ಧ್ಯಾನಮೌನಂಗಳಿಲ್ಲ. ಗುಹೇಶ್ವರನೆಂದರಿದಂಗೆ ಇನ್ನಾವಂಗವೂ ಇಲ್ಲ.

ಟೀಕುಃ— ಅಂಗದ ಮೇಲೆ ಲಿಂಗ ಸ್ವಾಯತವಾದ ಬಳಿಕ ಆ ಲಿಂಗವನತಿಗಳೆದು ಸ್ಥಾವರಾದಿಗಳಿಗೆರಗಲಾಗದೆಂಬುದೀಗ ಪೃಥ್ವಿಯನತಿಗಳೆದ ಸ್ಥಾವರಂಗಳಿಲ್ಲೆಂಬ ಶಬ್ದಕ್ಕರ್ಥ. ಆ ಲಿಂಗ ಎಡೆಗೊಂಡಲ್ಲಿ ಪರಮಾನಂದ ರಸ ತನ್ನೊಳಗೆ ಇರುತ್ತಿರಲು ಆ ಪರಮಾನಂದ ಜಲವನತಿ

ಗಳೆದು ತೀರ್ಥಯಾತ್ರೆಯ ಮಾಡಲಾಗದೆಂಬುದೀಗ ಉದಕವನತಿಗಳೆದ ತೀರ್ಥಯಾತ್ರೆಗಳಿಲ್ಲವೆಂಬ ಶಬ್ದಕ್ಕರ್ಥ. ಆ ಲಿಂಗವೆಡೆಗೊಂಡ ಸಂಬಂಧದಿಂ ಜ್ಞಾನಾಗ್ನಿ ತನ್ನೊಳಗಿದ್ದುದನರಿಯದೆ ಹೊರಗೆ ಹೋಮ ಸಮಾಧಿಗಳ ಮಾಡಲಾಗದೆಂಬುದೀಗ ಅಗ್ನಿಯನತಿಗಳೆದ ಹೋಮಸಮಾಧಿಗಳಿಲ್ಲವೆಂಬ ಶಬ್ದಕ್ಕರ್ಥ. ಆ ಲಿಂಗವೆಡೆಗೊಂಡು ಪ್ರಾಣಲಿಂಗ ಸಂಬಂಧ ತನ್ನಲ್ಲಿ ಇರುತ್ತಿರಲು ಅದನರಿಯದೆ ಭಿನ್ನವಾದ ನಿತ್ಯನೇಮಂಗಳ ಮಾಡಲಾಗದೆಂಬುದೀಗ ವಾಯುವನತಿಗಳೆದ ನಿತ್ಯನೇಮಂಗಳಿಲ್ಲವೆಂಬ ಶಬ್ದಕ್ಕರ್ಥ. ಆ ಲಿಂಗವೆಡೆಗೊಂಡು ಮಹಾಜ್ಞಾನ ಕಣ್ದೆರವಾದ ಬಳಿಕ ಧ್ಯಾನ ಮೌನಂಗಳ ಹಿಡಿಯಲಾಗದೆಂಬುದೀಗ ಆಕಾಶವನತಿಗಳೆದ ಧ್ಯಾನ ಮೌನಂಗಳಿಲ್ಲನೆಂಬ ಶಬ್ದಕ್ಕರ್ಥ. ಲಿಂಗವನೇ ಅರಿದು ಲಿಂಗವಾದ ಶರಣಂಗೆ ಮತ್ತೆ ಲಿಂಗವೆಂದರಿಯ ತೆರಹಿಲ್ಲವೆಂಬುದೀಗ ಗುಹೇಶ್ವರನೆಂದರಿದಂಗೆ ಇನ್ನಾವಾಗಲು ಇಲ್ಲವೆಂಬ ಶಬ್ದಕ್ಕರ್ಥ.

೮೦. ಪೃಥ್ವೀ ಜಡನೆಂದರಿದಂಗೆ ಸ್ಥಾವರಾದಿಗಳಲ್ಲಿ ಎರಗಲೇಕೆ? ಅಪ್ಪು ಜಡನೆಂದು ಅರಿದವಂಗೆ ತೀರ್ಥಸ್ಥಾನಂಗಳಲ್ಲಿ ಅತಿಶಯವೇಕಯ್ಯಾ? ತೇಜ ಜಡನೆಂದರಿದವಂಗೆ ಹೋಮಸಮಾಧಿಗಳೇಕಯ್ಯಾ? ವಾಯು ಜಡನೆಂದರಿದವಂಗೆ ಧ್ಯಾನಮೌನಂಗಳ ಹಿಡಿಯಲೇಕಯ್ಯಾ? ಆಕಾಶ ಜಡನೆಂದರಿದವಂಗೆ ಮಂತ್ರರೂಢಿಯೇಕಯ್ಯ? ಇನಿತು ಜಡನೆಂದರಿದವಂಗೆ ವಿಧಿಕಿಂಕರತೆ ಇಲ್ಲಯ್ಯಾ ಗುಹೇಶ್ವರನೆಂಬ ನಿಜವು ಇದು ತಾನೆಂದರಿದ ಮಹಾತ್ಮಂಗೆ.

ಟೀಕು:— ಪಂಚಭೂತಂಗಳನು ಜಡವೆಂದು ವಿಸರ್ಜಿಸಿದ ಶರಣನು ಸ್ಥಾವರಂಗಳಿಗೆ ಎರಗಲಿಲ್ಲ ತೀರ್ಥಸ್ಥಾನಂಗಳಿಗೆ ಹೋಗಲಿಲ್ಲ ಹೋಮ ಸಮಾಧಿಯ ಮಾಡಲಿಲ್ಲ ನಿತ್ಯನೇಮವ್ರತಂಗಳ ಹಿಡಿಯಲಿಲ್ಲ ಧ್ಯಾನಮೌನ ಮಂತ್ರಂಗಳ ಜಪಿಸಲಿಲ್ಲ. ಅದೇನುಕಾರಣವೆಂದರೆ ಆ ಶರಣನೇ ಸರ್ವಾಂಗ ಲಿಂಗ ಸುಖಿಯಾದಕಾರಣವೆಂಬುದೀ ವಚನದ ತಾತ್ಪರ್ಯಾರ್ಥ.

೮೧. ಬಂದ ಬಟ್ಟೆಯ ನಿಂದು ನೋಡಲೊಲ್ಲೆ. ಕಂದ ಕಂದ ಅದೇನು ಸೋಜಿಗವೋ? ಬಿಂದು ಚಂದವಲ್ಲ ಬಂದಪರಿಯನು ಗುಹೇಶ್ವರ ಬಲ್ಲ ಕಂದಾ.

ಟೀಕು:— ಸುಜ್ಞಾನಪ್ರಕಾಶ ಉದಯವಾಗಿ ಲಿಂಗದಲ್ಲಿ ನಿಜವನರಿದು ಶರಣನು ತನ್ನ ಹಿಂದಣ ಕರ್ಮತ್ರಯ ಸಂಬಂಧ ಶರೀರದ ಗುಣಧರ್ಮಕರ್ಮಂಗಳನರಿಯನೆಂಬುದೀಗ ಈ ವಚನದ ತಾತ್ಪರ್ಯಾರ್ಥ.



೮೨. ಪೃಥ್ವಿಯಲೊದಗಿದ ಘಟವು ಪೃಥ್ವಿಯಲ್ಲಡಗಿದರೆ ಆ ಪೃಥ್ವಿಯ ಚರಿತ್ರವೇ ಚರಿತ್ರ ನೋಡಾ! ಅಪ್ಪುವಿನಲೊದಗಿದ ಘಟವು ಅಪ್ಪುವಿನಲಡಗಿದರೆ ಆ ಅಪ್ಪುವಿನ ಚರಿತ್ರವೇ ಚರಿತ್ರ ನೋಡಾ! ಆ ಅಗ್ನಿಯಲೊದಗಿದ ಘಟವು ಅಗ್ನಿಯಲಡಗಿದರೆ ಆ ಅಗ್ನಿಯ ಚರಿತ್ರವೇ ಚರಿತ್ರ ನೋಡಾ! ವಾಯುವಿನಲೊದಗಿದ ಘಟವು ವಾಯುವಿನಲಡಗಿದರೆ ಆ ವಾಯುವಿನ ಚರಿತ್ರವೇ ಚರಿತ್ರವು ನೋಡಾ! ಆಕಾಶದಲೊದಗಿದ ಘಟವು ಆಕಾಶದಲಡಗಿದರ ಆ ಆಕಾಶದ ಚರಿತ್ರವೇ ಚರಿತ್ರ ನೋಡಾ! ಗುಹೇಶ್ವರನೆಂಬ ಲಿಂಗದಲೊದಗಿದ ಘಟವು ಲಿಂಗದಲ್ಲಿ ಅಡಗಿದರೆ ಆ ಲಿಂಗದ ಚರಿತ್ರವೇ ಚರಿತ್ರ ನೋಡಾ!

ಟೀಕು:—ಪೃಥ್ವಿಯ ಸೊಮ್ಮಿಂದಾದ ಶರೀರ ಸ ಚಿತ್ತವೆಂಬ ಪೃಥ್ವಿಯಲಡಗಿದ ಬಳಿಕ ಆ ಸುಚಿತ್ತದ ಚರಿತ್ರವೆಯಾಗಿಪ್ಪುದೆಂಬುದೀಗ ಪೃಥ್ವಿಯಲೊವಗಿದ ಘಟವು ಪೃಥ್ವಿಯಲಡಗಿದರೆ ಆ ಪೃಥ್ವಿಯ ಚರಿತ್ರ ನೋಡಾ ಎಂಬ ಶಬ್ದಕ್ಕರ್ಥ. ಅಪ್ಪುವಿನ ಸೊಮ್ಮಿಂದಾದ ಸಂಸಾರರಸವು ಸುಬುದ್ಧಿಯೆಂಬ ಶಿವಾನಂದವೆಂಬ ಜಲದಲ್ಲಡಗಿದ ಬಳಿಕ ಆ ಸುಬುದ್ಧಿಯ ಚರಿತ್ರವೇಯಾಗಿಪ್ಪುದೆಂಬುದೀಗ ಅಪ್ಪುವಿನಲೊವಗಿದ ಘಟವು ಅಪ್ಪುವಿನಲಡಗಿದರೆ ಆ ಅಪ್ಪುವಿನ ಚರಿತ್ರವೇ ಚರಿತ್ರ ನೋಡಾ ಎಂಬ ಶಬ್ದಕ್ಕರ್ಥ. ಅಗ್ನಿಯ ಸೊಮ್ಮಿಂದಾವ ಸ್ವರೂಪ ಜ್ಞಾನಾಗ್ನಿಯಲ್ಲಿ ದಹನವಾದ ಬಳಿಕ ಆ ಜ್ಞಾನಾಗ್ನಿಯ ಚರಿತ್ರವೆಯಾಗಿಪ್ಪುದೆಂಬುದೀಗ ಅಗ್ನಿಯಲೊದಗಿದ ಘಟವು ಅಗ್ನಿಯಲಡಗಿದರೆ ಆ ಅಗ್ನಿಯ ಚರಿತ್ರವೇ ಚರಿತ್ರ ನೋಡಾ ಎಂಬ ಶಬ್ದಕ್ಕರ್ಥ. ವಾಯುವಿನಿಂದಾದ ಪಂಚಪ್ರಾಣವಾಯುಗಳು ಲಿಂಗಪ್ರಾಣದಲ್ಲಿ ಲೀಯವಾದ ಬಳಿಕ ಲಿಂಗಪ್ರಾಣಚೇಷ್ಟೆಯಾಗಿಪ್ಪುದೆಂಬುದೀಗ ವಾಯುವಿನಲೊದಗಿದ ಘಟವು ವಾಯುವಿನಲಡಗಿದರೆ ಆ ವಾಯುವಿನ ಚರಿತ್ರವೇ ಆ ಚರಿತ್ರ ನೋಡಾ ಎಂಬ ಶಬ್ದಕ್ಕರ್ಥ. ಆಕಾಶದ ಸೊಮ್ಮಿಂದಾದ ಲಜ್ಜಾಭಿಮಾನಶಬ್ದಾಡಂಬರಗಳು ಬಿಂದ್ವಾಕಾಶದಲ್ಲಿ ಲೀಯವಾದ ಬಳಿಕ ಆ ಬಿಂದ್ವಾಕಾಶದ ಚರಿತ್ರವೆಯಾಗಿಪ್ಪುದೆಂಬುದೀಗ ಆಕಾಶದಲೊದಗಿದ ಘಟವು ಆಕಾಶದಲಡಗಿದರೆ ಆ ಆಕಾಶದ ಚರಿತ್ರವೇ ಚರಿತ್ರ ನೋಡಾ ಎಂಬ ಶಬ್ದಕ್ಕರ್ಥ. ಇಂತು ಲಿಂಗವಿಡಿದು ಲಿಂಗಶರೀರವಾದ ಶರಣನ ನಿಲವು ಲಿಂಗದಲ್ಲಿ ಲೀಯವಾದ ಬಳಿಕ ಆ ಲಿಂಗದ ಚರಿತ್ರವೆಯಾಗಿಪ್ಪುದೆಂಬುದೀಗ ಗುಹೇಶ್ವರನೆಂಬ

ಲಿಂಗವಲೊವಗಿದ ಘಟವು ಲಿಂಗಾಂಗದಲ್ಲಡಗಿದವೆ ಆ ಲಿಂಗದ ಚರಿತ್ರವೇ ಚರಿತ್ರ ನೋಡಾ ಎಂಬ ಶಬ್ದಕ್ಕರ್ಥ.

೮೩. ಸಕಲ ಭುವನಾದಿ ಭುವನಂಗಳಿಗೆ ತಂದೆ ಸಕಲ ದೇವಾದಿ ದೇವರ್ಕಳಿಗೆ ತಂದೆ ಭವಭವದಲ್ಲಿ ನೀನೆನ್ನ ತಂದೆ ಗುಹೇಶ್ವರಲಿಂಗ ನಿರಾಳದಲ್ಲಿ ನೀನೆನ್ನತಂದೆ.

ಟೀಕು:— ಶಿವಜ್ಞಾನೋದಯವಾದ ಶರಣನು ಸಕಲ ಜಗದೊಳಗೆ ದೇವ ದಾನವ ಮಾನವ ಚರಾಚರಾದಿಯಾದ ಚೌರ್‍ಯಾಂಸಿಲಕ್ಷ ಜೀವರಾಶಿಗಳೊಳಗೆ ಎಲ್ಲಿಯೂ ಶಿವಾಜ್ಞೆಯಿಂದ ಬಂದು ಕಡೆಯಲ್ಲಿ ನಿಜ ಶಿವತತ್ವದಲ್ಲಿ ನಿಂದೆನೆಂದು ಅದು ಸುಖಿಯಾಗಿರುತ್ತಿರ್ದನೆಂಬುದೀ ವಚನದ ತಾತ್ಪರ್ಯಾರ್ಥ.

೮೪. ಬಟ್ಟೆಗೊಂಡು ಹೋಗುತ್ತೊಂದು ಕೊಟ್ಟು ಹೋದರೆಮ್ಮವರು. ಎಲ್ಲಿಯದು ಲಿಂಗ, ಎಲ್ಲಿಯದು ಜಂಗಮ, ಎಲ್ಲಿಯದು ಪ್ರಸಾದ, ಎಲ್ಲಿಯದು ಪಾದೋದಕವಯ್ಯಾ? ಅಲ್ಲದವರೊಡನಾಡಿ ಎಲ್ಲರು ಮುಂದುಗೆಟ್ಟರಯ್ಯಾ! ಆನು ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ!

ಟೀಕು:— ಮುಖವರಿಯದ ಶಿಷ್ಯಂಗೆ ಮುಖವರಿಯದ ಗುರು ಉದೇಶದಿಂದ ಅಂಗಕ್ಕೆ ಒಂದು ಲಿಂಗವ ತೋರಿ ಹೋದರೆ ಆ ಕೊಂಡ ಶಿಷ್ಯನು ಗುರು ಲಿಂಗ ಜಂಗಮ ಪ್ರಸಾದ ಪಾದೋದಕವನರಿಯದೆ ಕೆಡುತ್ತಿದ್ದನು. ಇದ ನಿವೃತ್ತಿಯ ಮಾಡಿ ತಚ್ಛಿಷ್ಯನು ಗುರುವಿನ ಕೈಯ್ಯಲುಪದೇಶವ ಪಡೆಯಲು ಆ ಲಿಂಗದಲ್ಲಿ ಮನವಳಿದು ಆ ಗುರುವಿನಲ್ಲಿ ತನುವಳಿದು ನಿರ್ವಯಲಲ್ಲಿ ನಿಂದನೆಂಬುದೀಗ ವಚನದ ತಾತ್ಪರ್ಯಾರ್ಥ

೮೫. ಆದಿಯ ಶರಣನ ಮದುವೆಯ ಮಾಡಲು ಯುಗಜುಗದವರೆಲ್ಲ ನಿಬ್ಬಣಹೋದರು. ಹೋದ ನಿಬ್ಬಣಿಗರು ಮರುಳರು. ಮದವಣಿಗನ ಸುದ್ದಿಯನರಿಯಬಾರದು. ಹಂದರವಳಿಯದು. ಹಸೆ ಮುನ್ನ ಉಡುಗದು. ತಂದ ಬಂದವರೆಲ್ಲ ಮಿಂದುಂಡು ಹೋದರು. ಇದರಂತವನರಿಯದೆ ಜಗವೆಲ್ಲ ಬರಿದಾಯಿತ್ತು. ಗುಹೇಶ್ವರನೆಂಬ ಶಬ್ದವನೊಳಕೊಂಡ ಮಹಾಂತಬಯಲು.

ಟೀಕು:— ಆದಿಯೆಂಬುದು ಸುಜ್ಞಾನೋದಯ. ಆ ಸುಜ್ಞಾನೋದಯ ಶರಣಸತಿಗೂ ಮಹಾಲಿಂಗವೆಂಬ ಪುರುಷಂಗೂ ವಿವಾಹವೆಂಬ ಸಮರಸ ಸಂಗವ ಮಾಡುತ್ತಿರಲು ಯುಗಜುಗದಲುಳ್ಳ ಸಮಸ್ತ ಪ್ರಾಣಿ



ಗಳೆಲ್ಲರು ತನ್ನ ಸ್ವಯಾತ್ಮ ಬಂಧುಗಳಾಗಿ ಸಹಜ ಸಂಗಿಗಳಾದರೆಂಬುದೀಗ ಆದಿಯ ಶರಣನ ಮದುಯ ಮಾಡಲು ಯುಗಜುಗದವರೆಲ್ಲ ನಿಬ್ಬಣಹೋದರೆಂಬ ಶಬ್ದಕ್ಕರ್ಥ. ಅಂತು ಶರಣಸತಿಗೂ ಲಿಂಗವೆಂಬ ಪತಿಗೂ ಸಮರಸ ಸಂಗ ಸಂಬಂಧವಾಗಲು ಆ ಲಿಂಗವನಂಥದಿಂಥದೆಂದು ಅರಿಯಬಾರದೆಂಬುದೀಗ ಮದವಣಿಗನ ಸುದ್ದಿಯನರಿಯಬಾರದೆಂಬ ಶಬ್ದಕ್ಕರ್ಥ. ಇಂತಾಗಲು ಭೂಮಿಯೆಂಬ ಹಸೆ ಆಕಾಶವೆಂಬ ಹಂದರ ಈ ಎರಡು ಅಳಿಯದ ಮುನ್ನವೇ ಆ ವಿಶ್ವವೆಲ್ಲವು ಸಂಸಾರಸಾಗರದಲ್ಲಿಮಿಂದು ಪ್ರಾರಬ್ಧ ಕರ್ಮ ಭೋಗವನು ಅನುಭವಿಸಿ ಹೋಗುತಿದ್ದರೆಂಬುದೀಗ ಬಂದ ಬಂದವರೆಲ್ಲ ಮಿಂದುಂಡು ಹೋದರೆಂಬ ಶಬ್ದಕ್ಕರ್ಥ. ಇಂತು ಲೋಕವೆಲ್ಲವು ನಿಜವನರಿಯದೆ ಹೋಗುತ್ತಿಹರಲ್ಲಿ ಆ ಬಗೆಯ ತಾ ಹೊದ್ದದೆ ನಿರ್ವಯಲ ಸಮಾಧಿಯಲ್ಲಿ ನಿಂದ ಶರಣನೆ ಮಹಂತನೆಂಬುದೀಗ ಇದರಂತವನರಿಯದೆ ಜಗವೆಲ್ಲ ಬರಿದಾಯಿತ್ತು, ಗುಹೇಶ್ವರನೆಂಬ ಶಬ್ದವನೊಳಕೊಂಡ ಮಹಂತ ಬಯಲು ಎಂಬ ಶಬ್ದಕ್ಕರ್ಥ.

೮೬. ಮರದೊಳಗಣ ಕಿಚ್ಚು ಮರನ ಸುಟ್ಟಂತಾದೆನಯ್ಯಾ. ಬಯಲ ಗಾಳಿಯ ಪರಿಮಳ ನಾಸಿಕವನಪ್ಪಿದಂತಾದೆನಯ್ಯಾ. ಕರುವಿನ ಬೊಂಬೆಯನುರಿಕೊಂಡಂತಾದೆನಯ್ಯಾ. ಗುಹೇಶ್ವರನೆಂಬ ಲಿಂಗವ ಪೂಜಿಸಿ ಭವಗೆಟ್ಟೆನಯ್ಯಾ.

ಟೀಕು:— ಕಾಷ್ಠದೊಳಗೆ ಅಂತರ್ಗತವಾಗಿದ್ದ ಅಗ್ನಿ ಬಹಿರ್ಗತವಾಗಿ ಆ ಮರನ ದಹಿಸಿತೆಂಬಂತೆ ಗಾಳಿಯೂ ಗಂಧವೂ ಕೂಡೆ ನಾಸಿಕವ ಸೋಂಕಿದಂತೆ ಕರುವಿನ ಪುತ್ತಳಿಯ ನುರಿಯುಂಡು ಕರಗೊಂಡು ನಿಂದ ನಿಜರೂಪಿನಂತೆ ಸುಜ್ಞಾನಲಿಂಗವ ಮುಟ್ಟಿ ಪೂಜಿಸಿದ ಶರಣ ಅವಿರಳ ಲಿಂಗ ಸಂಬಂಧಿಯಾಗಿ ಭವವನಳಿದು ನಿರ್ಭವವಾದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೮೭. ಐವರ ಸಂಗದಿಂದ ಬಂದೆ ನೋಡಯ್ಯ! ಐವರ ಸಂಗದಿಂದ ನಿಂದೆ ನೋಡಯ್ಯಾ! ಐವರು ತಮ್ಮ ತಮ್ಮ ಬಟ್ಟೆಯಲ್ಲಿ ಹೋದರು. ನಾನೊಬ್ಬ ನಿಸ್ಸಂಗಿಯಾಗಿ ಉಳಿದೆನಲ್ಲಾ! ಗುಹೇಶ್ವರನೆಂಬ ನಿತ್ಯ ನಿರಂಜನ ರೂಹಿಲ್ಲದ ಘನವ ಕಂಡೆನಯ್ಯಾ!

ಟೀಕು:— ಐವರೆಂದರೆ ಪಂಚಭೂತಂಗಳು ಅಂತಪ್ಪ ಪಂಚಭೂತಂಗಳ ಸಂಗದಲ್ಲಿ ಉದಯಿಸಿದೆನೆಂಬುದೀಗ ಐವರ ಸಂಗದಲ್ಲಿ ಬಂದೆ

ನೋಡಯ್ಯಾ! ಎಂಬ ಶಬ್ದಕ್ಕರ್ಥ. ಇಂತು ಉದಯನಾದಾತನು ಪಂಚೇಂದ್ರಿಯ ಸಂಗದಲ್ಲಿ ಇದ್ದನೆಂಬುದೀಗ ಐವರ ಸಂಗದಲ್ಲಿ ನಿಂದೆ ನೋಡಯ್ಯಾ ಎಂಬ ಶಬ್ದಕ್ಕರ್ಥ. ಅಂತಪ್ಪ ಪಿಂಡದಲ್ಲಿ ದೇವಂಗೆ ಜ್ಞಾನೋದಯವಾಗಿ ಶಿವಭಾವಸಂಪನ್ನನಾಗಲು ಆ ಪಂಚಭೂತಂಗಳು ತಮ್ಮಲ್ಲಿ ತಾವೇ ನಷ್ಟವನೆಯ್ದುವನೆಂಬುದೀಗ ಐವರು ತಮ್ಮ ತಮ್ಮ ಬಟ್ಟೆಯಲ್ಲಿ ಹೋದರೆಂಬ ಶಬ್ದಕ್ಕರ್ಥ. ಇಂತು ಪಂಚಭೂತ ಪಿಂಡವಳಿದು ಸರ್ವಾಂಗ ಲಿಂಗವಾಗಿ ತಾನಲ್ಲದೆ ಮತ್ತಾರು ತನಗಿಲ್ಲವೆ ನಿಸ್ಸಂಗಿಯಾಗಿ ಮಹಾಘನವೇದ್ಯವಾಯಿತ್ತೆಂಬುದೀಗ ನಾನೊಬ್ಬನೆ ನಿಸ್ಸಂಗಿಯಾಗಿ ಉಳಿದೆನಲ್ಲಾ, ಗುಹೇಶ್ವರನೆಂಬ ನಿತ್ಯ ನಿರಂಜನ ರೂಹಿಲ್ಲದ ಘನವ ಕಂಡೆನೆಂಬ ಶಬ್ದಕ್ಕರ್ಥ.

೮೮. ಸಟೆ ದಿಟವಾದಲ್ಲಿ ಮುಟ್ಟಿಯೂ ಮುಟ್ಟದೆ ಇರಬೇಕು. ಅತಿರತಿಗತಿಮತಿಗೆ ಮಂದವಾಯಿತ್ತು ಎಂಟು ಹಿಟ್ಟು ಪಂಚಮಠ ಉಂಡು ಧರೆಯ ಮೇಲೆ ನರಸುರಾದಿಗಳೆಲ್ಲ ಸಂಭಾರವ ಹೊತ್ತು ಬಂದೈದಾರೆ. ಹಿಟ್ಟು ನಷ್ಟ ಮಠ ಹಾಳು. ಊರಿಗುಪಟಳ. ಘನ ಪಂಚಮಠವ ಸುಟ್ಟು ಗುಹೇಶ್ವರ ಬಿದಿಗರುವಾದ.

ಟೀಕು:—ಮಿಥ್ಯೆಯೆಂಬ ಪ್ರಪಂಚು ತನ್ನಿಂದ ಅನ್ಯವಾಗಿ ಕಣ್ಣಮುಂದೆ ತೋರುತ್ತಿರಲು ಆ ಮಿಥ್ಯೆಯನು ಮುಟ್ಟಿಯೂ ಮುಟ್ಟದೆ ಇರಬೇಕೆಂಬುದೀಗ ಸಟೆ ದಿಟವಾದಲ್ಲಿ ಮುಟ್ಟಿ ಮುಟ್ಟದೆ ಇರಬೇಕೆಂಬ ಶಬ್ದಕ್ಕರ್ಥ. ಆ ಮಿಥ್ಯೆಯಲ್ಲಿ ಅತಿರತಿ ಸುಖವ ಗಮಿಸಿದರೆ ಅರಿವಿನ ಮತಿ ಮಂದವಾಯಿತ್ತೆಂಬುದೀಗ ಅತಿರತಿಗತಿಮತಿಗೆ ಮಂದವಾಯಿತ್ತೆಂಬ ಶಬ್ದಕ್ಕರ್ಥ. ಅಂತು ಮತಿ ಮಂದವಾದ ಬಳಿಕ ಎಂಟು ಹಿಟ್ಟೆಂದರೆ ಅಷ್ಟಮದಂಗಳು ಪಂಚ ಮಠವೆಂದರೆ ಪಂಚ ಭೂತಗ್ರಾಮಂಗಳು ಅಂತಪ್ಪ ಅಷ್ಟಮದ ಪಂಚಭೂತ ದೇಹಮಂ ಧರಿಸಿಕೊಂಡು ನರ ಸುರಾದಿಗಳ ಹಾಂಗೆ ಇಹೆನೆಂಬುದೀಗ ಎಂಟು ಹಿಟ್ಟು ಪಂಚಮಠ ಉಂಟು ಧರೆಯೊಳಗೆ ನರಸುರಾದಿಗಳೆಲ್ಲ ಸಂಭಾರವ ಹೊತ್ತುಕೊಂಡು ಐದಾರೆ ಎಂಬ ಶಬ್ದಕ್ಕರ್ಥ. ಈ ಭೇದವನರಿದು ಸುಜ್ಞಾನಿಯಾದರೆ ಅಷ್ಟಮದ ಪಂಚಭೂತಂಗಳು ನಿವೃತ್ತಿಯಾಗಿ ಕರಣಂಗಳೆಲ್ಲವು ಗತವಾಗಿ ಸರ್ವಾಂಗವು ಮಹಾಜ್ಞಾನಾಗ್ನಿಯಲ್ಲಿ ಅಳಿದು ನಿರ್ವಯಲಾದವೆಂಬುದೀಗ ಹಿಟ್ಟು ನಷ್ಟ ಮಠ ಹಾಳು ಊರಿಗುಪಟಳ ಘನಮಠವ ಸುಟ್ಟು ಗುಹೇಶ್ವರ ಬಿದಿಗರುವಾದನೆಂಬ ಶಬ್ದಕ್ಕರ್ಥ.



೮೯. ಮತಿಯೊಳಗೊಂದು ದುರ್ಮತಿ ಹುಟ್ಟಿದ ಬಳಿಕ ಮತಿಯ ಮರವೆಯೊಳಕೊಂಡು ಭವಕ್ಕೆ ಗುರಿಯ ಮಾಡಿ ಕೆಡಹಿತು ನೋಡಾ! ಅಖಂಡಿತವ ತಂದು ಮತಿಯೊಳಗೆ ವೇಧಿಸಲು ಗತಿಗೆಟ್ಟು ನಿಂದಿತ್ತು ಗುಹೇಶ್ವರಾ!

ಟೀಕು:—ತನ್ನ ಅರಿವಿನೊಳಗೆ ಅಜ್ಞಾನವೆಡೆಗೊಳಲು ಭವಕ್ಕೆ ಭಾಜನವಪ್ಪರು. ಆ ಅಜ್ಞಾನ ನಿವೃತ್ತಿಮಾಡಿ ಆ ಪರಿಪೂರ್ಣಜ್ಞಾನವನಾ ಮತಿಯೊಳಗೆ ವೇಧಿಸಿಕೊಳಲು ಆ ಶರಣ ನಿರ್ಗಮನಿಯಾಗಿ ನಿಜದಲ್ಲಿ ನಿಂದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೯೦. ತಲೆಯಿಲ್ಲದ ಅಟ್ಟೆ ಜಗವ ನುಂಗಿತ್ತು, ಅಟ್ಟೆ ಇಲ್ಲದ ತಲೆ ಆಕಾಶವ ನುಂಗಿತ್ತು. ಅಟ್ಟೆ ಬೇರೆ ತಲೆ ಬೇರಾದರೆ ಮನ ಸಂಚಲಿಸುತ್ತಿದ್ದಿತ್ತು. ಅಟ್ಟೆಯನು ತಲೆಯನು ಬಯಲ ನುಂಗಿದೊಡೆ ಆನು ನುಂಗಿದೆನು ಗುಹೇಶ್ವರನಿಲ್ಲದಂತೆ.

ಟೀಕು:—ತಲೆ ಎಂದರೆ ಜ್ಞಾನ. ಅಟ್ಟೆ ಎಂದರೆ ಅಜ್ಞಾನ. ಅಂತಪ್ಪ ಅಜ್ಞಾನ ಲೋಕವೆಲ್ಲ ನುಂಗಿತೆಂಬುದೀಗ ತಲೆಯಿಲ್ಲದ ಅಟ್ಟೆ ಜಗವ ನುಂಗಿತೆಂಬ ಶಬ್ದಕ್ಕರ್ಥ. ಅಜ್ಞಾನವಳಿದು ಶಿವಜ್ಞಾನ ಆತ್ಮನೆಂಬ ಆಕಾಶವನವಗ್ರಹಿಸಿಕೊಂಡು ಇದ್ದಿತ್ತೆಂಬುದೀಗ ಅಟ್ಟೆ ಇಲ್ಲದ ತಲೆ ಆಕಾಶವ ನುಂಗಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಅಜ್ಞಾನವನು ಬೇರ್ಪಡಿಸಿ ನೋಡುತ್ತಿರಲು ಅಲ್ಲಿ ಮನವು ನಿಶ್ಚಲವನೆಯ್ದುತ್ತಿದ್ದಿತೆಂಬುದೀಗ ಅಟ್ಟೆ ಬೇರೆ ತಲೆ ಬೇರಾದರೆ ಮನ ಸಂಚಲಿಸುತ್ತಿದ್ದಿತ್ತು ಎಂಬ ಶಬ್ದಕ್ಕರ್ಥ. ಆ ಅಜ್ಞಾನ ಸುಜ್ಞಾನಂಗಳೆರಡನು ನಿವೃತ್ತಿ ಮಾಡಿ ನಿಜ ಶಿವತತ್ವ ಸ್ವರೂಪವರಿಯುತ್ತಿರಲು ಅರಿವು ತನ್ನೊಳಗೆ ಲೀಯವಾಯಿತೆಂಬುದೀಗ ಅಟ್ಟೆಯನು ತಲೆಯನು ಬಯಲ ನುಂಗಿದರೆ ಆನು ನುಂಗಿದೆನು ಗುಹೇಶ್ವರನಿಲ್ಲದಂತೆ ಎಂಬ ಶಬ್ದಕ್ಕರ್ಥ.

೯೧. ಅಹಂಕಾರವನೆ ಮರೆದು ದೇಹಗುಣಂಗಳನೆ ಜರಿದು ಇಹಪರವೇ ತಾನೆಂದರಿದ ಕಾರಣ ಸೋಹಂ ಭಾವ ಸ್ಥಿರವಾಯಿತ್ತು. ಸಹಜ ಉದಯದ ನಿಲವಿಂಗೆ ಮಹಾಘನಲಿಂಗದ ಬೆಳಗು ಸ್ಥಾಯಕವಾದ ಕಾರಣ ಗುಹೇಶ್ವರಾ ನಿಮ್ಮ ಶರಣನುಪಮಾತೀತನು.

ಟೀಕು:— ದೇಹಂಕಾರವರಿತು ಇಹಲೋಕ ಪರಲೋಕವೆಂಬೆರಡು ಹಿಂಗದ ಕಾರಣ ತನ್ನ ನಿಜ ತನಗೆ ಅರಿಯ ಬಂದು ಶಿವೋಹಂ ಭಾವ ಸ್ವಸ್ಥನಾಗಿ ಸಹಜವಳವಟ್ಟು ಮಹಾಘನದಲ್ಲಿ ಸಮರಸವಾಗಿದ್ದನೆಂಬುದೀ ವಚನದ ತಾತ್ಪರ್ಯಾರ್ಥ.

೯೨. ಕಾಯ ಭಿನ್ನವಾಯಿತ್ತೆಂದು ಮುಟ್ಟಿಸುವರು ಲಿಂಗವನು. ಮುಟ್ಟಲಾಗದು ಲಿಂಗವನು. ಮುಟ್ಟಿದಾತ ಮುಂದೆ ಹೋದ. ಮುನ್ನ ಮುಟ್ಟಿದವರೆಲ್ಲ ಉಪಜೀವಿಗಳಾದರು. ಇನ್ನು ಮುಟ್ಟಿದವರಿಗೆ ಗತಿಯುಂಟೇ ಗುಹೇಶ್ವರಾ?

ಟೀಕು:-- ಸತ್ತು ಪಾಪಕ್ಕೆ ಹೋದೆಹೆವೆಂದಂಜಿ ಲಿಂಗವ ಧರಿಸಿ ಪೂಜಿಸುವರು. ಸಂಪೂರ್ಣ ಅಂತಪ್ಪವರೆಲ್ಲರು ಅಳಿದು ರುದ್ರಲೋಕದಲ್ಲಿ ಚತುರ್ವಿಧ ಫಲಪದವ ಹಡದು ಉಪಜೀವಿಗಳಾಗಿದ್ದರು. ಇದುಕಾರಣ ಉಪಾಧಿಯಿಂದ ಲಿಂಗವ ಪೂಜಿಸದೆ ಸಹಜ ಲಿಂಗವೇದಿಯಾದರೆ ಆತನೇ ಶರಣನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೯೩. ಬಿತ್ತದ ಬೆಳೆಯದ ರಾಶಿಯ ಕಂಡಲ್ಲಿ ಸುಖಿಯಾಗಿ ನಿಂದವರಾರೊ? ಇದ ಹೇಳಲು ಬಾರದು. ಕೇಳಲು ಬಾರದು. ಗುಹೇಶ್ವರ! ನಿಮ್ಮ ಶರಣನು ಲಕ್ಷಣವಳಿಯದೆ ರಾಶಿಯನಳಿದನು.

ಟೀಕು:-- ಜ್ಞಾನಾಜ್ಞಾನಂಗಳೆರಡು ಇಲ್ಲದ ನಿಜಪದಸುಖದ ಸುಗ್ಗಿಯ ಬೆಳಸಿನ ರಾಸಿಯನು ಆರು ಅರಿಯಬಾರದೆಂಬುದೀಗ ಬಿತ್ತದ ಬೆಳೆಯದ ತುಂಬಿದ ರಾಶಿಯ ಕಂಡಲ್ಲಿ ಸುಖಿಯಾಗಿ ನಿಂದವರಾರೊ, ಎಂಬ ಶಬ್ದಕ್ಕರ್ಥ. ಆ ಸುಖವನುಪಮಿಸಿ ನುಡಿಯಬಾರದೆಂಬುದೀಗ ಹೇಳಲು ಬಾರದು ಕೇಳಲು ಬಾರದು ಎಂಬ ಶಬ್ದಕ್ಕರ್ಥ. ಇಂತಪ್ಪ ನಿಜಪದದ ಘನವ ಮಹಾಜ್ಞಾನಿ ಶರಣನು ಅಭೇದ್ಯ ದೃಷ್ಟಿಯಿಂದ ಕಂಡು ತನ್ನ ಸ್ವರೂಪ ಲಕ್ಷಣವಿದ್ದ ಹಾಗೆ ಆ ಘನವ ವೇದಿಸಿಕೊಂಡು ಸುಖಿಯಾದನೆಂಬುದೀಗ ಗುಹೇಶ್ವರಾ ನಿಮ್ಮ ಶರಣ ಲಕ್ಷಣವಳಿಯದೆ ರಾಶಿಯನಳಿದನೆಂಬ ಶಬ್ದಕ್ಕರ್ಥ.

೯೪. ಅಂತರಂಗದಲ್ಲಿ ಭವಿಯನೊಳಕೊಂಡು ಬಹಿರಂಗದಲ್ಲಿ ಭಕ್ತಿಯನೊಳಕೊಂಡು ಆತ್ಮಸಂಗದಲ್ಲಿ ಪ್ರಸಾದವನೊಳಕೊಂಡು ಇಪ್ಪ ಭಕ್ತರ ಕಾಣೆನಯ್ಯಾ. ನಾನು ಇಂತಪ್ಪ ಲಿಂಗೈಕ್ಯರ ಕಾಣೆನಯ್ಯಾ. ಅಂತರಂಗದಲ್ಲಿ ಸುಳಿದಾಡುವ ತನುಗುಣಾದಿಗಳ ಮನಗುಣಾದಿಗಳ ಕಳದಲ್ಲಿ ಶರಣರಹರೇ? ತನು ಮನ ಧನ ಕೊಟ್ಟಲ್ಲಿ ಭಕ್ತರಹರೇ? ಉಂಬವರ ಕಂಡು ಕೈಯ ನೀಡಿದರೆ ಪ್ರಸಾದಿಗಳಹರೆ? ಅಂತರಂಗ ಬಹಿರಂಗ ಆತ್ಮಸಂಗ ಈ ತ್ರಿವಿಧ ಭೇದವ ಗುಹೇಶ್ವರಾ ನಿಮ್ಮ ಶರಣ ಬಲ್ಲ.



ಟೀಕು:-- ಭವಿಯೆಂದರೆ ನಿಜತತ್ವಕ್ಕೆ ಹೆಸರು. ಅಂತಪ್ಪ ನಿಜ ತತ್ವಕ್ಕೆ ಅಂತರಂಗ ಪರಿಪೂರ್ಣವಾಗಿ ಬಹಿರಂಗದ ಚರಿತ್ರವ ನೋಡಿದರೆ ದಗ್ಧಪಟನ್ಯಾಯದಂತಿಪ್ಪ ಭಕ್ತಿಕ್ರಿಯೆಗಳು ಎಡೆಗೊಂಡಿರ್ಪಾತನೆ ಶರಣನೆಂಬುದೀಗ ಅಂತರಂಗದಲ್ಲಿ ಭವಿಯ ನೊಳಕೊಂಡು ಬಹಿರಂಗದಲ್ಲಿ ಭಕ್ತಿಯ ನೊಳಕೊಂಡು ಇಪ್ಪವರನಾರನು ಕಾಣೆನೆಂಬ ಶಬ್ದಕ್ಕರ್ಥ. ಇಂತು ಅಂತರಂಗ ಬಹಿರಂಗವೆಂಬೆರಡು ಒಂದೆಯಾದ ಪರಮಾತ್ಮ ತತ್ವ ಸಂಗದಲ್ಲಿ ಪ್ರಸನ್ನಪರಿಣಾಮವೆಡೆಗೊಂಡಿರ್ಪಾತನೇ ಭಕ್ತ, ಆತನೇ ಲಿಂಗೈಕ್ಯನೆಂಬುದೀಗ ಆತ್ಮ ಸಂಗದಲ್ಲಿ ಪ್ರಸಾದವನು ಒಳಕೊಂಡಿಪ್ಪ ಭಕ್ತರ ಕಾಣೆನಯ್ಯಾ ನಾನು ಇಂತಪ್ಪ ಲಿಂಗೈಕ್ಯರ ಕಾಣೆನಯ್ಯಾ ಎಂಬ ಶಬ್ದಕ್ಕರ್ಥ. ಇಂತೀ ತ್ರಿವಿಧವನು ಒಂದೇ ಭಾವದಲ್ಲಿ ಬಲ್ಲಾತನೆ ಶರಣ. ಈ ಭೇದವನರಿಯದೆ ಅಂತರಂಗದಲ್ಲಿ ಭವಿಯನೊಳಕೊಂಡು ಬಹಿರಂಗದಲ್ಲಿ ಫಲದಾಯಕ ಭಕ್ತಿಯ ಪಿಡಿದು ನಿಶ್ಚಯ ಬುದ್ಧಿ ಇಲ್ಲದೆ ಕೈಯಾಂತ ಪ್ರಸಾದವ ಕೊಂಡು ಚರಿಸುವವರು ಭಕ್ತರಲ್ಲ ಪ್ರಸಾದಿಗಳಿಲ್ಲ ಶರಣರಲ್ಲ ಎಂಬುದೀ ವಚನದ ತಾತ್ಪರ್ಯಾರ್ಥ.

೯೫. ಲೋಕದ ನಚ್ಚು ಮಚ್ಚು ಬಿಟ್ಟು ನಿಶ್ಚಿಂತವಾಯಿತ್ತು. ಏನು ಹತ್ತಿತೆಂದರಿಯೆನಯ್ಯಾ! ಏನು ಹೊತ್ತಿತೆಂದರಿಯೆನಯ್ಯಾ! ಗುಹೇಶ್ವರನೆಂಬ ಗ್ರಹವಳಕೊಂಡಿತ್ತಾಗಿ ನಾನೇನೆಂಬುದರಿಯೆನಯ್ಯಾ!

ಟೀಕು:-- ಗುರುಕರುಣದಿಂದ ಸುಜ್ಞಾನೋದಯವಾಗಿ ಅಂಗದ ಮೇಲೆ ಲಿಂಗ ಸ್ವಾಯತವಾಗಲು ಆ ಲಿಂಗದ ಸುಖಪ್ರಸನ್ನದ ಲೋಲುಪ್ತಿ ಸರ್ವಾಂಗವನವಗ್ರಹಿಸಲು ಗ್ರಹಾವರಣವಾದಹಾಗೆ ಆವ ಉಕ್ತಿಗೂ ತೆರಹಿಲ್ಲದ ಶಿವಶರಣ ತಾನಾದನೆಂಬುದೀ ವಚನದ ತಾತ್ಪರ್ಯಾರ್ಥ.

೯೬. ಧರೆಯ ಮೇಲಣ ಜನಿತಕ್ಕೆ ಉರಗನೆ ಆಧಾರ ಪಾನನಖ ಕಂಕಣಮುಖ ಮೂವತ್ತೊಂದು ಶಿರವ ನುಂಗಿತ್ತು ನೋಡಾ! ಉತ್ತರಪಥದ ಕೊಡಗೂಸ, ಈಶಾನ್ಯದ ಒಡಲೊಳಗೆ ಅಡಗಿ ಸಾಕಾರದ ಸಂಗವ ನುಂಗಿದ ಭಾಷೆಯನರಿಯದ ಮುಗುದೆ ಅರಿವನೊಳಗಣ ಮರವು ಮರವಿನೊಳಗಣ ಅರಿವು ಗುಹೇಶ್ವರನೆಂಬ ಲಿಂಗವು ತ್ರಿಕಾಲ ಪೂಜೆಯ ನುಂಗಿತು.

ಟೀಕು:-- ಧರೆಯೆಂದರೆ ದೇಹ. ಆ ದೇಹದೊಳಗೆ ಜನಿತವಾವುವೆಂದರೆ, ಪ್ರಕೃತಿ. ಆ ಪ್ರಕೃತಿಯ ಮಿಥ್ಯೆಯನಳಿದು ಮೂಲ ಶಕ್ತಿಯ

ಮಾಡಿ ಆ ಶಕ್ತಿಯ ದೃಢ ಚಿತ್ತದಿಂ ಕುಂಡಲಿಯ ಸರ್ಪನನೆಬ್ಬಿಸಿ ಪಶ್ಚಿಮನಾಳವ ಬಗೆದೆಗೆದು ಮಸ್ತಕದ ಅಮೃತ ಬಿಂದುವನೊಸರಿಸಲು ಆ ಅಮೃತವ ಕುಂಡಲಿಯ ಸರ್ಪನುಣಲು, ಅದೀಗ ಧರೆಯ ಮೇಲಣ ಜನಿತಕ್ಕೆ ಉರಗನೆ ಆಧಾರಪಾನವೆಂಬ ಶಬ್ದಕ್ಕರ್ಥ. ನ ಎಂದರೆ ನಷ್ಟ ಶಬ್ದ. ಖ ಎಂದರೆ ಇಂದ್ರಿಯ ಶಬ್ದ. ಅಂತು ನಖ ಎಂದರೆ ಇಂದ್ರಿಯಂಗಳ ನಷ್ಟ ಶಬ್ದವಾದಕಾರಣ ಆ ಅಮೃತಪಾನ ಸೇವನೆಯಿಂ ಇಂದ್ರಿಯಂಗಳು ನಷ್ಟವಾಗಿ ಕಂ ಎಂದರೆ ಉದಕ ಕಣ ಎಂದರೆ ಆ ಜಲಬಿಂದು ಅಂತು ಕಂಕಣವೆಂದರೆ ಸಂಸಾರ ಹಲಬಿಂದುವೆಂಬ ಶಬ್ದಕ್ಕರ್ಥ. ಆ ಸಂಸಾರಜಲಬಿಂದುವೆಂಬುದು ಇಪ್ಪತ್ತೈದು ತತ್ವ. ಆ ತತ್ವಕ್ಕೆ ಅಧಿಷ್ಠಾಯಕವಾದ ಷಡುಶಕ್ತಿ ಕೂಡಿ ಮೂವತ್ತೊಂದು ಮುಖ ಇನಿತನು ಅಮೃತಪಾನಸೇವನೆ ತಾನೇ ಅವಗ್ರಹಿಸಿತೆಂಬುದೀಗ ನಖ ಕಂಕಣ ಮುಖ ಮೂವತ್ತೊಂದು ಶಿರ ನುಂಗಿತ್ತೆಂಬ ಶಬ್ದಕ್ಕರ್ಥ. ಉತ್ತರಾ ಪಥವೆಂದರೆ ಮೋಕ್ಷಮಾರ್ಗ. ಆ ಮೋಕ್ಷಮಾರ್ಗಕ್ಕೆ ಅನುಕೂಲವಪ್ಪುದು ಜ್ಞಾನ ಶಕ್ತಿ. ಆ ಜ್ಞಾನಶಕ್ತಿ ಈಶಾನ್ಯತತ್ವವೆಂಬ ಪರಮಾತ್ಮನಲ್ಲಿ ವಿಶ್ರಮಿಸಿ ಸಾಕಾರ ಸಂಗವ ತನ್ನೊಳಗಡಗಿಸಿ ಹಂಗ ಹಿಂಗಿ ನಿಶ್ಶಬ್ದವಾಯಿತ್ತೆಂಬುದೀಗ ಉತ್ತರಾಪಥದ ಕೊಡಗೂಸು ಈಶಾನ್ಯದ ಒಡಲೊಳಗಡಗಿ ಸಾಕಾರಸಂಗವ ನುಂಗಿದ ಭಾಷೆಯನರಿಯದ ಮುಗುದೆ ಯೆಂಬ ಶಬ್ದಕ್ಕರ್ಥ. ಇಂತಾಗಲು ಅರಿವಿನೊಳಗೆ ತನ್ನ ತಾ ಕುರುಹಿಡುವುದ ಮರೆದು ಆ ಮರವಿನೊಳಗೆ ನಿಂದ ನಿಜದರಿವು ಕಾಲ ಕಲ್ಪಿತದಿಂದ ಮಾಡುವ ಲಿಂಗಾರ್ಚನೆಯ ಕೆಡಿಸಿತೆಂಬುದೀಗ ಅರಿವಿನೊಳಗಣ ಮರವು ಮರವಿನೊಳಗಣ ಅರಿವು ಗುಹೇಶ್ವರನೆಂಬ ಲಿಂಗವು ತ್ರಿಕಾಲದ ಪೂಜೆಯ ನುಂಗಿತ್ತು ಎಂಬ ಶಬ್ದಕ್ಕರ್ಥ.

೯೭. ಊರಕ್ಕಿ ಊರೆಣ್ಣೆ ಉಣ್ಣಾ, ಮಾರಿಕವ್ವಾ, ತಾಯೇ! ಬಾರಿ ಕಮ್ಮಾರನ ಕಲೆಗಾಯಿ ಎಂಬಂತೆ ಕಾಡ ಹೂ ಕೈಯ ಲಿಂಗವ ಪೂಜಿಸಿದವನ ಭಕ್ತನೆಂಬರು ಅಲ್ಲ. ತಾನು ಲಿಂಗ ತನ್ನ ಮನವೇ ಪುಷ್ಪ ಪೂಜೆಯ ಪೂಜಿಸಿದಾತನೆ ಸದ್ಭಕ್ತ ಗುಹೇಶ್ವರಾ.

ಟೀಕು:— ಭಿನ್ನ ಭಾವವ ಮರೆದು ಲಿಂಗವೇ ತಾನೆಂದರಿದು, ತನ್ನ ಮನವೆಂಬ ಪುಷ್ಪದಲ್ಲಿ ಪೂಜೆಯ ಮಾಡುವಾತನೇ ಸದ್ಭಕ್ತ. ಈ ಮರ್ಮವನರಿಯದೆ ಅನ್ಯೋನ್ಯ ಬುದ್ಧಿಯಿಂದ ಲಿಂಗವ ಪೂಜಿಸುವವರೆಲ್ಲ ಅಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.



೯೮. ವಾಯುವ ಪಿಂಡಿಗೆ ಮಾಯುವ ದೇವರಿಗೆ ವಾಯಕ್ಕೆ ಕಾಯುವ ಬಳಲಿಸದೆ ಪೂಜಿಸಿರೋ. ಕಟ್ಟು ಗುಂಟಕ್ಕೆ ಬಂದ ದೇವರ ಪೂಜಿಸಲು ಸೂಜಿಯ ಪೋಣಿಸಿ ದಾರವ ಮರೆದಡೆ ಹೊಲಿಗೆ ಬಿಚ್ಚಿತ್ತು ಗುಹೇಶ್ವರಾ

ಟೀಕು:— ತನ್ನ ನಿಜವ ತಾನೆಂದರಿಯದೆ ಮಿಥ್ಯಾ ಭಾವದಿಂದ ಮಿಥ್ಯಾ ಲಿಂಗವ ಮಿಥ್ಯೆಯಿಂದ ಪೂಜಿಸಲು ಆಯಾಸವೇ ಕೈ ತಟ್ಟುವದಲ್ಲದೆ ಅಲ್ಲಿ ನಿಜವು ಸಾಧ್ಯವಾಗದು. ಮತ್ತೆಂತೆಂದರೆ ಅನುಭವವೆಂಬ ಸೂಜಿಯಲ್ಲಿ ಮನವೆಂಬ ಸೂತ್ರವ ಪವಣಿಸಲು ಆ ಮಿಥ್ಯಾ ಭಾವದ ಹೊಲಿಗೆ ಬಿಚ್ಚಿ ಸಿಥಿಲವಾಯಿತ್ತೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೯೯. ಭಿತ್ತಿ ಮೂರರ ಮೇಲೆ ಚಿತ್ರವ ಬರೆಯಿತ್ತು. ಪ್ರಥಮ ಭಿತ್ತಿಯ ಚಿತ್ರ ಚಿತ್ರದಂತಿದ್ದಿತ್ತು. ಎರಡನೇ ಭಿತ್ತಿಯ ಚಿತ್ರ ಹೋಗುತ ಬರುತ್ತಿದ್ದಿತ್ತು. ಮೂರನೇ ಭಿತ್ತಿಯ ಚಿತ್ರ ಹೋಯಿತ್ತು. ಮರಳಿ ಬಾರದು ಗುಹೇಶ್ವರಾ ನಿಮ್ಮ ಶರಣ ತ್ರಿವಿಧದಿಂದತ್ತಲೆ.

ಟೀಕು:— ಭಿತ್ತಿ ಮೂರೆಂದರೆ ತನುತ್ರಯಂಗಳೆಂಬರ್ಥ. ಆ ತನುತ್ರಯಂಗಳ ಮೇಲೆ ಲಿಂಗ ತ್ರಯಂಗಳೆಂಬ ವಿಚಿತ್ರ ಪದ ಅಳವಟ್ಟಿತೆಂಬುದೀಗ ಭಿತ್ತಿ ಮೂರರ ಮೇಲೆ ಚಿತ್ರವ ಬರೆಯಿತ್ತು ಎಂಬ ಶಬ್ದಕ್ಕರ್ಥ. ಆ ತನುತ್ರಯದೊಳಗೆ ಪ್ರಥಮವೀಗ ಸ್ಥೂಲತನು, ಅಂತಪ್ಪ ತನುವಿನ ಮೇಲೆ ಇಷ್ಟಲಿಂಗ ಸಂಬಂಧವಾಗಲು ಆ ಲಿಂಗ ಅಲ್ಲಿಯೇ ಲಿಂಗಮಾತ್ರವಾಗಿ ಇದ್ದಿತೆಂಬುದೀಗ ಪ್ರಥಮ ಭಿತ್ತಿಯ ಚಿತ್ರ ಚಿತ್ರದಂತಿದ್ದಿತ್ತು, ಎಂಬ ಶಬ್ದಕ್ಕರ್ಥ. ಆ ಲಿಂಗಭಾವ ಸನ್ನಿಹಿತವಾಗಿ ಸೂಕ್ಷ್ಮ ತನುವಿನ ಮೇಲೆ ಸ್ವಾನುಭಾವ ವಿವೇಕ ಸ್ವಾಯತವಾಗಿ ಸತ್ಪಥದಲ್ಲಿ ಚರಿಸುತ್ತಿದ್ದಿತೆಂಬುದೀಗ ಎರಡನೆಯ ಭಿತ್ತಿಯ ಚಿತ್ರ ಹೋಗುತ್ತ ಬರುತ್ತಿದ್ದಿತೆಂಬ ಶಬ್ದಕ್ಕರ್ಥ. ತ್ರಿತಿಯದಲ್ಲಿ ಸ್ವಾನುಭಾವ ವಿವೇಕ ನಿಜವನೆಯ್ದಿ ತೃಪ್ತಿಲಿಂಗ ಸಂಬಂಧ ಕಾರಣತನುವಿನ ಮೇಲೆ ಅಳವಟ್ಟು ನಿರ್ಣಯದಲ್ಲಿ ನಿಷ್ಪತ್ತಿಯನೆಯ್ದಿತ್ತೆಂಬುದೀಗ ಮೂರನೆಯ ಭಿತ್ತಿಯ ಚಿತ್ರ ಹೋಯಿತ್ತೆಂಬ ಶಬ್ದಕ್ಕರ್ಥ. ಇಂತು ಅಂಗತ್ರಯದಲ್ಲಿ ಲಿಂಗತ್ರಯಸಂಬಂಧವಾಗಿ ಪುನರ್ಜನ್ಮವಿಲ್ಲದೆ ಆ ಅಂಗತ್ರಯಭಾವ ಅರತುದೆಂಬುದೀಗ ಮರಳಿ ಬಾರದು ಗುಹೇಶ್ವರ ನಿಮ್ಮ ಶರಣ ತ್ರಿವಿಧದಿಂದತ್ತಲೆ ಎಂಬ ಶಬ್ದಕ್ಕರ್ಥ.

೧೦೦. ಅಂಗದ ಮೇಲೆ ಲಿಂಗ ಸಂಬಂಧವಾದ ಬಳಿಕ ಪ್ರಾಣದ ಮೇಲೆ ಜ್ಞಾನ ನಿರ್ಧರವಾಯಿತ್ತು ನೋಡಾ! ಒಳಹೊರಗೆಂಬ ಉಭಯವು ಏಕಾರ್ಥವಾಯಿತ್ತು ಗುಹೇಶ್ವರಾ, ನಿಮ್ಮ ನೆರೆದೆನಾಗಿ.

ಟೀಕು:— ಅಂಗದಲ್ಲಿ ಇಷ್ಟಲಿಂಗ ಸಂಬಂಧವಾಗಲು ಅಂಗವೇ ಮಹಾಲಿಂಗವೆಂಬ ಭಾವಪ್ರಸನ್ನವಾಗಿ ಬಾಹ್ಯಾಭ್ಯಂತರವು ಅಳಿದು ಸರ್ವಾಂಗ ಲಿಂಗವಾಗಿ ಆ ಶರಣ ನಿಜದಲ್ಲಿ ನಿಂದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೦೧. ಮುಂದೆ ಮುನ್ನೂರು ಅರವತ್ತು ಸಾವಿರ ಯುಗ ಹೋಹುದು. ಹಿಂದೆ ಮುನ್ನೂರ ಅರವತ್ತು ಸಾವಿರ ಯುಗ ಹೋಯಿತ್ತು. ಇನ್ನು ಕೊಯ್ದಾನೆ ಪುಷ್ಪಂಗಳನು ಉನ್ನತವೆಂಬ ಗಣೇಶ್ವರನ ಕರಡಿಗೆ ತುಂಬದು ನೋಡಾ! ಇನ್ನು ಕೊಯ್ದಾನೆ ಪುಷ್ಪಂಗಳನು ಆ ಕುಲಗಿರಿಗೆ ಮೇರು ಘನವೆಂದರಿಯರು, ಗುಹೇಶ್ವರಾ ನಿಮ್ಮ ಮಹಿಮೆಯ ಹರಿಬ್ರಹ್ಮಾದಿಗಳರಿಯರು.

ಟೀಕು:— ಅನಂತ ಯುಗಂಗಳು ಆಗುತ್ತ ಹೋಗುತ್ತಿಪ್ಪ ಸ್ಥಿತಿಗತಿಯಲ್ಲವು. ಒಬ್ಬ ಶಿವಶರಣ ತನ್ನ ಹೃದಯಕಮಲ ಪುಷ್ಪವನು ಮನೋಹಸ್ತದಲ್ಲಿ ಕೊಯ್ದು ಚಿತ್ಪಿಂಡವೆಂಬ ಕರಡಿಗೆಯಲ್ಲಿ ತುಂಬುವಷ್ಟು ವೇಗದಲ್ಲಿ ಅಡಗಿ ಹೋಯಿತ್ತು. ಇಂತಪ್ಪ ಶರಣಂಗೆ ಅದು ಸರಿಯಲ್ಲ. ಆತನು ಘನಕ್ಕೆ ಘನವಾದ ಕಾರಣ ಆತನ ಮಹಿಮೆಯನು ಹರಿಬಹ್ಮಾದಿಗಳರಿಯರೆಂಬುದೀ ವಚನದ ತಾತ್ಪರ್ಯಾರ್ಥ.

೧೦೨. ಮಹಾ ಮೇರುವಿನ ಮರೆಯಲಿರ್ದ ಭೂತದ ನೆಳಲ ನಾಚರಿಸುವ ಕರ್ಮಿ ನೀ ಕೇಳಾ! ಅದು ಆ ಮಹಾಲಿಂಗಕ್ಕೆ ಮಜ್ಜನವೆಂದೆನೊ, ಪರಿಮಳ ಲಿಂಗಕ್ಕೆ ಪತ್ರೆ ಪುಷ್ಪಂಗಳೆಂದೆನೊ, ಜಗಜ್ಯೋತಿ ಲಿಂಗಕ್ಕೆ ಧೂಪ ದೀಪಾರ್ತಿಯೆಂದೆನೊ, ಅಮೃತ ಲಿಂಗಕ್ಕೆ ಆರೋಹಣವೆಂದೆನೊ, ಗುಹೇಶ್ವರನೆಂಬ ಲಿಂಗದಂತವ ಬಲ್ಲವರಾರೊ?

ಟೀಕು:— ಮೇರು ಗಿರಿಯಲ್ಲಿ ಆಳುತ್ತ ಮುಳುಗುತ್ತಿಪ್ಪ ಸೂರ್ಯನ ಉದಯಾಸ್ತಮಾನದ ಸಂಖ್ಯೆವಿಡಿದು ತ್ರಿಕಾಲ ಲಿಂಗಾರ್ಚನೆಯ ಮಾಡಿಹೆವೆಂಬರು ಅಜ್ಞಾನಿಗಳು. ಅದೇನು ಕಾರಣವೆಂದರೆ ಸದ್ಭಾವನ ಲಿಂಗವು ಪತ್ರೆ ಪುಷ್ಪದ ಹಂಗಿನ ಪೂಜೆಗೆ ಸಿಕ್ಕದಾಗಿ ಜ್ಯೋತಿರ್ಲಿಂಗವ ಆರತಿಯ



ಬೆಳಗಿಗೆ ಗೋಚರಿಸದಾಗಿ ನಿತ್ಯತೃಪ್ತ ಲಿಂಗವು ಅಶನದಿಂದ ತೃಪ್ತಿಯಾಗದಾಗಿ ಇಂತಪ್ಪ ಲಿಂಗವು ನಿಜಲಿಂಗ ಶರಣಗಲ್ಲದೆ ಸಾಧ್ಯವಾಗದೆಂಬುದೀ ವಚನದ ತಾತ್ಪರ್ಯಾರ್ಥ.

೧೦೩. ಹೂವ ಕೊಯ್ಯ ಹೋದರೆ ಹೂ ದೊರೆಕೊಳ್ಳವು. ಅಗ್ಗವಣಿಯ ತುಂಬುವರೆ ಅಗ್ಗವಣಿ ತುಂಬದು. ಪೂಜಿಸ ಹೋದರೆ ಪೂಜೆ ಸೇವೆಗೊಳ್ಳದು. ಇದೇನು ಸೋಜಿಗವೆ ಅಯ್ಯಾ! ಅರಿದು ಮರೆದವನಲ್ಲ. ಬೆರಗು ಹಿಡಿವವನಲ್ಲ. ಗುಹೇಶ್ವರನೆಂಬ ಬುದ್ಧಿ ಇಂತುಟು.

ಟೀಕು:— ಸರ್ವಾಂಗಲಿಂಗಸ್ವಾಯತವಾಗಿ ಲಿಂಗಭಾವದಲ್ಲಿ ಭರಿತನಾದ ಶರಣನ ಸರ್ವೇಂದ್ರಿಯ ದ್ವಾರದೊಳಗೆ ತೋರುವವೆಲ್ಲವು ಲಿಂಗಮಯವಾಗಿರ್ಪವಾಗಿ. ಆತ ಮಾಡುವ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳೆಲ್ಲವು ಲಿಂಗಮಯವಾಗಿರ್ಪವಾಗಿ. ಆತನು ಅನ್ಯಕ್ರಿಯೆಗಳನರಿಯನೆಂಬುದೀ ವಚನದ ತಾತ್ಪರ್ಯಾರ್ಥ.

೧೦೪. ಶರಣ ಲಿಂಗಾರ್ಚನೆ ಮಾಡಲೆಂದು ಪುಷ್ಪಕ್ಕೆ ಕರವ ನೀಡಿದರೆ ಆ ಪುಷ್ಪ ನೋಡೆ ನೋಡಲು ಕರದೊಳಗೆ ಅಡಗಿತ್ತಲ್ಲ. ಅದು ಓಗರದ ಗೊಬ್ಬರವನುಣ್ಣದು. ಕಾಮದ ಗಣ್ಣರಿಯದು. ನಿದ್ರೆಯ ಕಪ್ಪೊತ್ತದು. ಅದು ಅರುಣಚಂದಿರದ ಧರೆಯಲ್ಲಿ ಬೆರೆಯದು. ಲಿಂಗವೇ ವೇದಿಯಾಗಿ ಬೆಳೆದ ಪುಷ್ಪವನು ಗುಹೇಶ್ವರ ನಿಮ್ಮ ಶರಣ ಲಿಂಗಕ್ಕೆ ಪೂಜೆಯ ಮಾಡಿದನು.

ಟೀಕು:— ಶಿವಜ್ಞಾನ ಸಂಪನ್ನನಾದ ಶರಣನು ತನ್ನ ಪ್ರಾಣಲಿಂಗಕ್ಕೆ ಪೂಜೆಯ ಮಾಡಿಹೆನೆಂದು ಸದ್ವಾಸನೆಯೆಂಬ ಪುಷ್ಪವನು ಸುಜ್ಞಾನಹಸ್ತದಲ್ಲಿ ಪಿಡಿಯಲೊಡನೆ ಆ ಸದ್ವಾಸನೆ ಆ ಸುಜ್ಞಾನದೊಳಗೆ ಅಡಗಿತ್ತೆಂಬುದೀಗ ಶರಣ ಲಿಂಗಾರ್ಚನೆಯ ಮಾಡಲೆಂದು ಪುಷ್ಪಕ್ಕೆ ಕರವ ನೀಡಿದಡೆ ಆ ಪುಷ್ಪ ನೋಡೆನೋಡಲು ಕರದೊಳಗಡಗಿತ್ತಲ್ಲಾ ಎಂಬ ಶಬ್ದಕ್ಕರ್ಥ. ಅಂತಪ್ಪ ಸದ್ಭಾವನಾ ಪುಷ್ಪ ಪರಿಪೂರ್ಣ ವಾಸನೆಯನೆಯ್ದಿಪ್ಪುದಾಗಿ ಆ ಪುಷ್ಪ ಅನ್ನೋದಕ ರಸದಲ್ಲಿ ಬೆಳೆಯದು. ಕಾಮಾದಿ ವರ್ಗದಲ್ಲಿರದು. ಅಜ್ಞಾನ ಕತ್ತಲೆಯಲ್ಲಿ ಶಿಲ್ಕದು. ಚಂದ್ರ ಸೂರ್ಯರ ಪ್ರಭೆಗೆ ಸಾಧ್ಯವಾಗದೆಂಬುದೀಗ ಆ ಪುಷ್ಪ ಓಗರದ ಗೊಬ್ಬರವನುಣ್ಣದು, ಕಾಮದ ಗಣ್ಣರಿಯದು. ನಿದ್ರೆಯ ಕಪ್ಪೊತ್ತದು. ಅರುಣ ಚಂದಿರರ ಧರೆಯಲ್ಲಿ ಬೆಳೆಯದು, ಎಂಬ ಶಬ್ದಕ್ಕರ್ಥ. ಅಲ್ಲಿ ಆ ಪುಷ್ಪ ಪ್ರಸನ್ನ ಪರಿಣಾ

ಮೋದಕವನುಂಡು ಲಿಂಗ ಪ್ರಕಾಶದಲ್ಲಿ ವಿಕಸಿತವಾಗಿಪ್ಪುದೆಂಬುದೀಗ ಲಿಂಗವೇದಿಯಾಗಿ ಬೆಳೆವ ಪುಷ್ಪವನು ಎಂಬ ಶಬ್ದಕ್ಕರ್ಥ. ಅಂತಪ್ಪ ಪುಷ್ಪವನು ಆ ಶರಣ ನಿರಂತರ ಲಿಂಗಪೂಜೆಯು ಮಾಡುತ್ತಿಹನೆಂಬುದೀಗ ಗುಹೇಶ್ವರ ನಿಮ್ಮ ಶರಣ ಪ್ರಾಣಲಿಂಗ ಪೂಜೆಯು ಮಾಡಿದನೆಂಬ ಶಬ್ದಕ್ಕರ್ಥ.

೧೦೫ ಗಗನವೇ ಗುಂಡಿಗೆ ಆಕಾಶವೆ ಅಗ್ಗವಣಿ ಚಂದ್ರಸೂರ್ಯರಿಬ್ಬರು ಪುಷ್ಪ ಬ್ರಹ್ಮ ಧೂಪ ವಿಷ್ಣು ದೀಪ ರುದ್ರನೋಗರ ಸುಯಿಧಾನ ನೋಡಾ! ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ!

ಟೀಕು:— ಆತ್ಮಾಕಾಶವೆಂಬ ಬಿಂದಿಗೆಯೊಳಗೆ ಚಿದಾಕಾಶವೆಂಬ ನಿರ್ಮಲ ಪರಮಾಮೃತವ ತುಂಬಿದನೆಂಬುದೀಗ ಗಗನವೆ ಗುಂಡಿಗೆ ಆಕಾಶವೇ ಅಗ್ಗವಣಿ ಎಂಬ ಶಬ್ದಕ್ಕರ್ಥ. ಆ ಅಗ್ಗವಣಿಯನು ಮಹಾಜ್ಞಾನ ಲಿಂಗಕ್ಕೆ ಮಜ್ಜನಕ್ಕೆರೆದು ಶಾಂತಿದಾಂತಿ ಎಂಬ ಪುಷ್ಪದ ಪೂಜೆಯನ್ನು ಮಾಡುತ್ತಿರಲು ಅದೀಗ ಚಂದ್ರ ಸೂರ್ಯರಿಬ್ಬರು ಪುಷ್ಪ ನೋಡಾ! ಎಂಬ ಶಬ್ದಕ್ಕರ್ಥ. ರಜೋಗುಣ ಸಂಬಂಧವಪ್ಪ ಬ್ರಹ್ಮತತ್ವವನೇ ಆ ಸುಜ್ಞಾನಾಗ್ನಿಯಲ್ಲಿಕ್ಕಿ ಪುಷ್ಪವ ಮಾಡಿ ಸತ್ವಗುಣ ಸಂಬಂಧವಪ್ಪ ವಿಷ್ಣು ತತ್ವವನೆ ಆ ಜ್ಞಾನಾಗ್ನಿಯಲ್ಲಿ ಉರಿಹಿ ಆರತಿಯ ಬೆಳಗಿದನೆಂಬುದೀಗ ಬ್ರಹ್ಮ ಧೂಪ ವಿಷ್ಣು ದೀಪವೆಂಬ ಶಬ್ದಕ್ಕರ್ಥ. ತಮೋಗುಣ ಸಂಬಂಧವಪ್ಪ ರುದ್ರತತ್ವವನೆ ಆ ಸುಜ್ಞಾನಾಗ್ನಿಯಲ್ಲಿ ಪಾಕವ ಮಾಡಿಸುವದು ಪರಮಾನಂದವೆಂಬ ನೈವೇದ್ಯವನೆ ಸಮರ್ಪಿತವ ಮಾಡಿದೆನೆಂಬುದೀಗ ರುದ್ರನೋಗರ ಸುಯಿಧಾನ ನೋಡಾ ಎಂಬ ಶಬ್ದಕ್ಕರ್ಥ. ಇಂತು ಶಿವಶರಣನು ಸುಜ್ಞಾನ ಲಿಂಗಾರ್ಚನೆಯು ಮಾಡಿವನೆಂಬುದೀ ವಚನದ ತಾತ್ಪರ್ಯಾರ್ಥ.

೧೦೬ ಸರೋವರದ ಕಮಲದಲ್ಲಿ ತಾನಿಪ್ಪನು. ಕೆಂದಾವರೆಯ ಪುಷ್ಪದನೇಮವೆಂತು! ಹೂ ಮುಟ್ಟದೆ ಕೊಯ್ವ ನೇಮವೆಂತು! ಮುಟ್ಟದೆ ಕೊಯ್ವ ಮುಟ್ಟದ ಪರಿಮಳ ಗುಹೇಶ್ವರ ನಿಮ್ಮ ಶರಣನು.

ಟೀಕು:— ಮನವೆಂಬ ಸರೋವರದ ಮಧ್ಯದ ಹೃತ್ಕಮಲವ ಕೊಯ್ದು ಪ್ರಾಣಲಿಂಗಕ್ಕೆ ಪೂಜೆಯ ಮಾಡಿಹೆನೆಂಬುದು ಅಜ್ಞಾನವೆಂಬುದೀಗ ಸರೋವರದ ಕಮಲದಲ್ಲಿ ತಾನಿಪ್ಪನು, ಕೆಂದಾವರೆಯ ಪುಷ್ಪದ ನೇಮವೆಂತು ಎಂಬ ಶಬ್ದಕ್ಕರ್ಥ. ಆ ಪುಷ್ಪವ ಕೊಯ್ವಾತ ತಾನೆ ಶಿವನೆಂದರಿದು ಅವಿ



ರಳದಿಂ ತನ್ನ ತಾ ಪೂಜೆಯು ಮಾಡಿಕೊಂಡಾತನೆ ಅಚ್ಚ ಶರಣನೆಂಬುದೀಗ ಮುಟ್ಟದೆ ಕೊಯ್ವ ನೇಮವೆಂತು ಮುಟ್ಟದೆ ಕೊಯ್ದು ಮುಟ್ಟದ ಪರಿಮಳ ಗುಹೇಶ್ವರ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

೧೦೭ ಹೊರಗನೆ ಕೊಯ್ದು ಹೊರಗನೆ ಪೂಜಿಸಿದವರ ಕಂಡು ನಾಚಿದೆನಯ್ಯಾ! ಒಳಗೊಂದು ಅನಿಮಿಷ ಲಿಂಗವ ಕಂಡು ಎನ್ನ ಮನೋಪುಷ್ಪದಲ್ಲಿ ಪೂಜೆಯು ಮಾಡಿದರೆ ನಾಚಿಕೆ ಮಾದು ನಿಸ್ಸಂದೇಹಿಯಾದೆನು ಗುಹೇಶ್ವರಾ.

ಟೀಕು:— ಅಜ್ಞಾನದಿಂದ ಲಿಂಗಕ್ಕೆ ಬಹಿರಂಗದ ಸತ್ಕ್ರಿಯೆಗಳಿಂದ ಪೂಜೆಯು ಮಾಡುವದು ಅಕ್ರಮ. ಮತ್ತೆಂತೆಂದರೆ ಅಂತರಂಗ ಶುದ್ಧವಾಗಿ ಪ್ರಾಣಲಿಂಗಕ್ಕೆ ಮನವೆಂಬ ಪುಷ್ಪದಲ್ಲಿ ಪೂಜೆಯು ಮಾಡಲು ಉಭಯ ಸಂಗವಳಿದು ಸಮರಸ ಭಾವಿಯಾದೆನೆಂಬುದೀ ವಚನದ ತಾತ್ಪರ್ಯಾರ್ಥ.

೧೦೮ ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ. ಮತ್ತೆ ದೇವರ ಪೂಜಿಸುವರಾರು ಇಲ್ಲ. ಉತ್ತರಪಥದ ದರ್ಶನಾದಿಗಳಿಗೆ ಸುತ್ತಿದ ಮಾಯೆ ಎತ್ತಲಿಕ್ಕೆ ಹೋಯಿತ್ತು. ಮರನೊಳಗಣ ಕಿಚ್ಚು ಮರನ ಸುಟ್ಟುದ ಕಂಡೆ. ಗುಹೇಶ್ವರನೆಂಬ ಲಿಂಗವಲ್ಲಿಯೇ ನಿಂದಿತ್ತು.

ಟೀಕು:— ಒಂದು ಜೀವಿಯ ಮಲದಿಂದ ಆದುದು ಅರಗು. ಒಬ್ಬ ಜೀವಿಯ ಮಲತ್ರಯಬದ್ಧದಿಂದಾದುದು ಪಂಚಭೂತ ಪಿಂಡವಾದಕಾರಣ ಅರಗಿನ ದೇಗುಲವೆಂದರೆ ಸ್ಥೂಲ ತನುವೆಂಬರ್ಥ. ಅಂತಪ್ಪ ಸ್ಥೂಲ ತನುವಿನಲ್ಲಿ ಸುಜ್ಞಾನ ಲಿಂಗ ಪ್ರಕಾಶಿಸಲು ಆ ಸುಜ್ಞಾನಾಗ್ನಿಯಲ್ಲಿ ಸರ್ವಾಂಗವು ದಗ್ಧವಾಗಿ ದೇವಭಕ್ತನೆಂಬ ಭಿನ್ನಭಾವವಳಿಯಿತ್ತೆಂಬುದೀಗ ಅರಗಿನ ದೇಗುಲದಲ್ಲಿ ಒಂದು ಉರಿಯ ಲಿಂಗವ ಕಂಡೆ ಮತ್ತೆ ದೇವರ ಪೂಜಿಸುವರಾರು ಇಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ ಉತ್ತರ ಕಕ್ಷೆಯಪ್ಪ ಮೋಕ್ಷಮಾರ್ಗ ಕಂಡವರೆಲ್ಲರು ಮಾಯಾತೀತರಾದರೆಂಬುದೀಗ ಉತ್ತರಾಪಥದ ದರ್ಶನಾದಿಗಳೆಲ್ಲರು ಸುತ್ತಿ ಮುತ್ತಿದ ಮಾಯೆ ಎತ್ತಲಿಕ್ಕೆ ಹೊಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಶರಣನ ನಿಲವು ಕಾಷ್ಠದೊಳಗೆ ಅಂತರ್ಗತವಾದ ಅಗ್ನಿ ಬಹಿರ್ಗತವಾಗಿ ಮರನಳಿದು ಅಗ್ನಿಉಳಿದ ಹಾಗೆ ಶರಣನಳಿದು ಲಿಂಗ ಉಳಿದಿಪ್ಪುದೆಂಬುದೀಗ ಮರನೊಳಗಣ ಕಿಚ್ಚು ಮರನ ಸುಟ್ಟುದ ಕಂಡೆ ಗುಹೇಶ್ವರನೆಂಬ ಲಿಂಗವಲ್ಲಿಯೆ ನಿಂದಿತ್ತು ಎಂಬ ಶಬ್ದಕ್ಕರ್ಥ.

೧೦೯. ಮನ ಮುಟ್ಟದ ಮಜ್ಜನ ತನು ತಾಗದ ಬೇಹಾರ ಭಾವ ತಾಗದ ಪೂಜೆ. ಯವೆ ತಾಗದ ನೋಟ ವಾಯು ತಾಗದ ಲಿಂಗದ ಠಾವ ತೋರಾ ಗುಹೇಶ್ವರಾ!

ಟೀಕು:— ಮನೋ ಮೂರ್ತಿ ಲಿಂಗವೆಂದರಿಯುವದಲ್ಲದೆ ಮನ ಮುಟ್ಟಿ ಲಿಂಗಕ್ಕೆ ಮಜ್ಜನಕ್ಕೆರೆದೆನೆಂಬುದು ಭಿನ್ನಭಾವವಾದಕಾರಣ ಮನ ಮುಟ್ಟದ ಮಜ್ಜನವೆಂಬ ಶಬ್ದಕ್ಕರ್ಥ. ಸರ್ವಾಂಗ ಲಿಂಗ ಮೂರ್ತಿಯೆಂದರಿವುದು ನಿಜವಲ್ಲದೆ ಲಿಂಗದಲ್ಲಿ ಸೂತ್ರಧಾರಕನಾಗಿ ಲಿಂಗಾರ್ಚನೆ ಮಾಡಿಹೆನೆಂಬುದು ಭಿನ್ನಭಾವವಾದಕಾರಣ ತನು ತಾಗದ ಬೇಹಾರವೆಂಬ ಶಬ್ದಕ್ಕರ್ಥ. ಭಾವವೇ ಲಿಂಗವೆಂದರಿವುದು ನಿಜವಲ್ಲದೆ ಭಾವದಲ್ಲಿ ಲಿಂಗವ ಭಾವಿಸಿಹೆನೆಂಬುದು ಭಿನ್ನಭಾವವಾದಕಾರಣ ಭಾವ ತಾಗದ ಪೂಜೆಯೆಂಬ ಶಬ್ದಕ್ಕರ್ಥ. ಪ್ರಾಣವಾಯುವಿನ ಪೂರ್ವಾಶ್ರಯವ ಕಳೆದು ಪ್ರಾಣವೇ ಲಿಂಗವಾಗಿಹುದು ಆದೀಗ ನಿಜವು. ಅದನರಿಯದೆ ಪ್ರಾಣಲಿಂಗವಾಯಿತ್ತೆಂದು ಅರಿದ ವಿವೇಕ ಭಿನ್ನವಾದಕಾರಣ ವಾಯು ತಾಗದ ಲಿಂಗವೆಂಬ ಶಬ್ದಕ್ಕರ್ಥ. ಇಂತಪ್ಪ ನಿಲವ ಕಂಡಾತನೆ ಶಿವನೆಂಬುದೀಗ ಲಿಂಗದ ಠಾವ ತೋರಾ ಎಂಬ ಶಬ್ದಕ್ಕರ್ಥ.

೧೧೦. ಒಂದೇ ಹೂವು, ಒಂದೇ ಅಗ್ಗವಣಿ, ಒಂದೇ ಓಗರ, ಒಂದೇ ಪ್ರಸಾದ, ಒಂದೇ ಮನ, ಒಂದೇ ಲಿಂಗ ನಂದಾದೀವಿಗೆ ಕುಂದದ ಬೆಳಗು ಸ್ವತಂತ್ರ ಪೂಜೆಯೊಂದೆ, ಅನಾಹತವೆರಡಾಗಿ ಬಹುಮುಖವಾಗಿ ಕೆಟ್ಟು ಹೋದರು ಗುಹೇಶ್ವರಾ!

ಟೀಕು:— ಲಿಂಗದಲ್ಲಿ ತನ್ನಲ್ಲಿ ಅವಿರಳ ಸಂಬಂಧಿ ಒಬ್ಬ ಶರಣ ಲಿಂಗಾರ್ಚನೆ ಎಂತೆಂದರೆ ಏಕಮೇವ ಪರಬ್ರಹ್ಮ ಎಂಬ ಪರಿಪೂರ್ಣ ವಾಸನೆಯೇ ಪುಷ್ಪವೆಂಬುದೀಗ ಒಂದೇ ಹೂ ಎಂಬ ಶಬ್ದಕ್ಕರ್ಥ. ಪರಬ್ರಹ್ಮದಲ್ಲಿ ತನ್ನಲ್ಲಿ ಏಕ ಸಮರಸವೆಂಬ ಪರಮಾನಂದ ಜಲವೆ ಅಗ್ಗವಣಿಯಾಯಿತ್ತೆಂಬುದೀಗ ಒಂದೇ ಅಗ್ಗವಣಿ ಎಂಬ ಶಬ್ದಕ್ಕರ್ಥ. ನಿತ್ಯತೃಪ್ತಲಿಂಗಕ್ಕೆ ಆ ಶರಣನೊಬ್ಬನೆ ಪದಾರ್ಥವಾದನೆಂಬುದೀಗ ಒಂದೇ ಓಗರವೆಂಬ ಶಬ್ದಕ್ಕರ್ಥ. ಲಿಂಗದಲ್ಲಿ ತನ್ನಲ್ಲಿ ಪರಮ ಸುಖವು ಪ್ರಸನ್ನವಾದ ಪರಿಣಾಮ ಪ್ರಸಾದ ಒಂದೇ ಎಂಬುದೀಗ ಒಂದೇ ಪ್ರಸಾದವೆಂಬ ಶಬ್ದಕ್ಕರ್ಥ. ಭಿನ್ನ ಸ್ಮರಣೆಯಳಿದು ಉನ್ಮನಿ ತತ್ವಸ್ವರೂಪನೈದಿದ ಮನ ಒಂದೇ ಎಂಬುದೀಗ ಒಂದೇ ಮನವೆಂಬ ಶಬ್ದಕ್ಕರ್ಥ. ಆ ಪೂಜೆಗೆ ಸರ್ವಾಂಗಲಿಂಗವೆಂಬ ಮಹಲಿಂಗಸ್ಥಲ ಒಂದೇ ಎಂಬುದೀಗ ಒಂದೇ ಲಿಂಗವೆಂಬ ಶಬ್ದಕ್ಕರ್ಥ. ಸುಜ್ಞಾನ ಪ್ರಕಾಶ ಒಂದೇಯಾಗಿಪ್ಪುದೆಂಬುದೀಗ ನಂದಾದೀವಿಗೆ ಕುಂದದೆ ಬೆಳಗು ಎಂಬ ಶಬ್ದಕ್ಕರ್ಥ. ಇಂತು ಲಿಂಗದಲ್ಲಿದ್ದು ಭಿನ್ನವಿಲ್ಲದ ಶರಣನು ಸ್ವತಂತ್ರ ಪೂಜೆಯ ಮಾಡುತ್ತಿದ್ದನೆಂಬುದೀಗ ಸ್ವತಂತ್ರ ಪೂಜೆ ಒಂದೇ ಎಂಬ ಶಬ್ದಕ್ಕರ್ಥ. ಈ ತೆರದ ಲಿಂಗಾರ್ಚನೆಯನರಿಯದೆ ದ್ವೈತಭಾವದಿಂದ ಕುರುಹಿಟ್ಟುಕೊಂಡು ಲಿಂಗಾರ್ಚನೆಯ ಮಾಡುವವರು ವೃಥಾ ಕೆಟ್ಟರೆಂಬುದೀಗ ಅನಾಹತವೆರಡಾಗಿ ಬಹುಮುಖರಾಗಿ ಕೆಟ್ಟು ಹೋದರೆಂಬ ಶಬ್ದಕ್ಕರ್ಥ.



೧೧೧. ಮನವೇ ಲಿಂಗವಾದ ಬಳಿಕ ನೆನಹುದಿನ್ನಾರನಯ್ಯಾ! ಭಾವವೇ ಐಕ್ಯವಾದ ಬಳಿಕ ಬಯಸುವದಿನ್ನಾರನಯ್ಯಾ! ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ಅರಿವುದಿನ್ನಾರನಯ್ಯಾ ಗುಹೇಶ್ವರಾ.

ಟೀಕು:— ನೆನೆವ ಮನವೇ ಲಿಂಗವಾದ ಬಳಿಕ ಮತ್ತೊಂದು ನೆನೆಯಲಿಲ್ಲ. ಭಾವಿಸುವ ಭಾವವೇ ಲಿಂಗ ಲೀಯ್ಯವಾದ ಬಳಿಕ ಮತ್ತೊಂದಕ್ಕೆ ಅರ್ಥವಿಲ್ಲ. ಭ್ರಮೆಯಳಿದು ನಿಜವು ಉಳಿದು ತಾನು ತಾನಾದ ಬಳಿಕ ಮತ್ತೊಂದನರಿಯಲಿಲ್ಲ ಎಂದು ಈ ವಚನದ ತಾತ್ಪರ್ಯಾರ್ಥ.

೧೧೨. ಗಗನದ ಮೇಲೊಂದು ಸರೋವರ. ಆ ಜಲದಲ್ಲಿ ಮುಖವ ತೊಳೆದು ಹೂವ ಕೊಯ್ವರೆಲ್ಲರು ದೇವರಿಗೆ ಮುಖ ಮಜ್ಜನವೆಂಬುದನರಿದು ಪೂಜಿಸಿ ಹೊಡವಂಟಡೆ ಒಮ್ಮೆ ನಾಯಕ ನರಕ ತಪ್ಪದಲ್ಲಾ! ದೇವಲೋಕದ ಪ್ರಮಥರ ಲಜ್ಜೆಯನೇನ ಹೇಳುವೆ ಗುಹೇಶ್ವರಾ!

ಟೀಕು:— ಬಾಹ್ಯಾಭ್ಯಂತರದೊಳಗೆ ಪರಿಪೂರ್ಣ ಲಿಂಗ ವೇದಿಸಿಕೊಂಡಿದ್ದು ಸರ್ವಾಂಗವು ಪರಮಾಮೃತವಾಗಿಪ್ಪುದನರಿಯದೆ ಗಗನವೆಂಬ ಬ್ರಹ್ಮರಂಧ್ರದೊಳಗಿಪ್ಪ ಅಮೃತವನು ರೇಚಕವೆಂಬ ಹಸ್ತದಲ್ಲಿ ಪಿಡಿದು ಪ್ರಾಣಲಿಂಗಕ್ಕೆ ಮಜ್ಜನಕ್ಕೆರೆದು ಅಲ್ಲಿಪ್ಪ ಶತಪತ್ರ ಕಮಲವ ನಚ್ಚಿಸಿ ತಾವಾ ಪಾದೋದಕವ ಕೊಂಡು, ಸುಖಿಯಾದಿಹೆವೆಂಬವರೆಲ್ಲರು ಖಂಡಿತ ಯೋಗಿಗಳಾಗಿ ರುದ್ರಲೋಕದಲ್ಲಿಯ ಪದವಿಯೊಳಗೆ ಸಿಕ್ಕು ಭಂಗಿತರಾಗಿರ್ದರೆಂಬುದೀ ವಚನದ ತಾತ್ಪರ್ಯಾರ್ಥ.

೧೧೩. ಮಲಿನ ದೇಹಿ ಮಜ್ಜನಕ್ಕೆರೆವನಲ್ಲದೆ ನಿರ್ಮಲ ದೇಹಿಗೆ ಮಜ್ಜನವೇಕೋ? ವಿಷಯವುಂಟೇ ಲಿಂಗನಿಷ್ಪತ್ತಿಯಾದ ಶರಣಂಗೆ? ಅಗಮ್ಯ ಅಗೋಚರ ಅಪ್ರಮಾಣ ಗುಹೇಶ್ವರಾ ನಿಮ್ಮ ಶರಣನು.

ಟೀಕು:— ಮಾಯಾ ಮಲದಲ್ಲಿ ಬದ್ಧನಾದ ಅಜ್ಞಾನಿ ಲಿಂಗಕ್ಕೆ ಮಜ್ಜನಕ್ಕೆರೆವನಲ್ಲದೆ ಮಲತ್ರಯವಳಿದು ನಿರ್ಮಲವಾದ ಲಿಂಗಶರಣನಲ್ಲಿ ಆ ಲಿಂಗ ನಿಷ್ಪತ್ತಿಯಾಗಿಪ್ಪುದಾಗಿ ಆತಂಗೆ ಉಪಾಧಿಯ ಮಜ್ಜನವಿಲ್ಲ. ಅಂತಪ್ಪ ಶರಣಂಗೆ ಆ ವಿಷಯವು ಇಲ್ಲ. ಆ ಶರಣನೆ ಅಗಮ್ಯ ಅಗೋಚರ ಅಪ್ರಮಾಣನೆಂಬುದೀ ವಚನದ ತಾತ್ಪರ್ಯಾರ್ಥ.

೧೧೪. ಮಜ್ಜನಕ್ಕೆರೆವಡೆ ನೀನು ಶುದ್ಧ ನಿರ್ಮಲ ದೇಹಿ. ಪೂಜೆಯ ಮಾಡುವಡೆ ಸಿವಗೆ ಗಗನ ಕಮಲ ಕುಸುಮದ ಅಖಂಡಿತ ಪೂಜೆ. ಧೂಪ ದೀಪಾರತಿಗಳ ಬೆಳಗುವಡೆ ನೀನು ಸ್ವಯಂಜ್ಯೋತಿ ಪ್ರಕಾಶನು. ಅರ್ಪಿತವ ಮಾಡುವಡೆ ನೀನು ನಿತ್ಯ ತೃಪ್ತನು. ಅರ್ಚನೆಯ ಮಾಡುವಡೆ ನೀನು ಮುಟ್ಟಬಾರದ ಘನವೇದ್ಯನು. ನಿತ್ಯನೇಮಂಗಳ ಮಾಡುವಡೆ ನಿನಗೆ ಅನಂತ ನಾಮಂಗಳಾದವು ಗುಹೇಶ್ವರಾ!

ಟೀಕು:— ನಿರ್ಲೇಪಲಿಂಗವು ಅಂತರಂಗ ಬಹಿರಂಗದೊಳಗೆ ಸ್ವಯಂಜ್ಯೋತಿ ಪ್ರಕಾಶವಾದ ಬಳಿಕ ಉಪಾಧಿಯಿಂದ ಮಾಡುವ ಅಷ್ಟವಿಧಾರ್ಚನೆ ಷೋಡಶೋಪಚಾರವೆ ನಿಲುಕಲರಿಯದೆಂಬದೀ ವಚನದ ತಾತ್ಪರ್ಯಾರ್ಥ.

೧೧೫. ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗೇಕೆ? ಬೇಟದ ಮರುಳಿಂಗೆ ಲಜ್ಜೆ ಮುನ್ನುಂಟೆ? ನಿಮ್ಮನರಿದ ಶರಣಂಗೆ ಪೂಜೆಯ ಹಂಬಲದಂದುಗವೇಕೆ? ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ? ಗುಹೇಶ್ವರಲಿಂಗಕ್ಕೆ ಕುರುಹು ಮುನ್ನುಂಟೆ?

ಟೀಕು:— ಲಿಂಗವೇ ಪತಿಯಾಗಿ ಶರಣನೇ ಸತಿಯಾಗಿ ಈ ಉಭಯ ಭಾವವಳಿದು ಸಮರಸದಿಂ ಕೂಡಿದ ಪರಮ ಸುಖವು ಇತರ ಸುಖವಾಸನೆಗೆಯ್ದದಾಗಿ ಅಂತಪ್ಪ ಶರಣನೇ ಲಿಂಗ ಆ ಲಿಂಗವೇ ಶರಣನು. ಅದುಕಾರಣ ಆತಂಗೆ ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬವು ಮುನ್ನವೇ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೧೬. ಮುಂಡಧಾರಿಯ ತಲೆ ಮುಂದೆ ಬಪ್ಪದ ಕಂಡೆ. ಜಟಾಧಾರಿಯ ತಲೆ ನಡೆದು ಹೋಯಿತ್ತ ಕಂಡೆ. ಖಂಡ ಕಪಾಲಿಯ ಖಂಡವ ಕೋಯಿತ್ತ ಕಂಡೆ. ಬಾಲ ಬ್ರಹ್ಮಚಾರಿಯ ಬಾರ ನೆತ್ತಿತ್ತ ಕಂಡೆ. ಭಕ್ತರೆಲ್ಲರು ಸತ್ತು ನೆಲಕ್ಕಿಕ್ಕಿತ್ತ ಕಂಡೆ. ಗುಹೇಶ್ವರಾ ನೀ ಸತ್ತು ಲಿಂಗವಾಯಿತ್ತ ಕಂಡೆ.



ಟೀಕು:— ಮುಂಡವೆಂದರೆ ಅಜ್ಞಾನ ಪ್ರಪಂಚು. ತಲೆಯೆಂದರೆ ಜ್ಞಾನ. ಅಂತಪ್ಪ ಅಜ್ಞಾನ ಪ್ರಪಂಚವ ಧರಿಸಿಕೊಂಡಿಪ್ಪ ಜ್ಞಾನವದು ಜ್ಞಾನಾಜ್ಞಾನ ಸಂಬಂಧವಾದ ಕಾರಣ ಅದು ಮುಂದೆ ಭವಕ್ಕೆ ಬಪ್ಪದೆಂಬುದೀಗ ಮುಂಡಧಾರಿಯ ತಲೆ ಮುಂದೆ ಬಪ್ಪದು ಕಂಡೆನೆಂಬ ಶಬ್ದಕ್ಕರ್ಥ. ಜಟಾಧಾರಿಯೆಂದರೆ ಸತ್‌ಕ್ರಿಯೆಗಳು ಅಂತಪ್ಪ ಸತ್‌ಕ್ರಿಯೆಗಳ ಧರಿಸಿಕೊಂಡಿಪ್ಪ ಸುಜ್ಞಾನ ಅಸತ್‌ಕ್ರಿಯಗಳಲ್ಲಿ ನಡದು ಅಲ್ಲಿಯೇ ವಿಶ್ರಮಿಸಿತ್ತೆಂಬುದೀಗ ಜಟಾಧಾರಿಯ ತಲೆ ನಡೆದು ಹೋಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತಾಗಲು ಖಂಡಿತ ಜ್ಞಾನವಳಿಯಿತ್ತೆಂಬುದೀಗ ಖಂಡ ಕಪಾಲಿಯ ಖಂಡವ ಕೋಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತು ಖಂಡಿತ ಜ್ಞಾನವಳಿದಲ್ಲಿ ಪೂರ್ವಾಚಾರವಪ್ಪ ಬ್ರಹ್ಮಚರ್ಯವೆಲ್ಲವು ಅಳಿದು ಹೋದವೆಂಬುದೀಗ ಬಾಲ ಬ್ರಹ್ಮಚಾರಿಯ ಬಾರನೆತ್ತಿ ಕಂಡೆನೆಂಬ ಶಬ್ದಕ್ಕರ್ಥ. ಬ್ರಹ್ಮವೇ ತಾನಾಗಿ ಚರಿಸುವ ಚರ್ಯೆ ತಾನು ತನ್ನಲ್ಲಿಯೇ ಲೀಯ್ಯವಾಗಲು ಷಡ್ವಿಧ ಪ್ರಭೇದವಾದ ಭಕ್ತಿಯು ನಿಷ್ಪತ್ತಿಯಾದುದೆಂಬುದೀಗ ಭಕ್ತರೆಲ್ಲರು ಸತ್ತು ನೆಲಕ್ಕಿಕ್ಕಿತ್ತು ಕಂಡೆನೆಂಬ ಶಬ್ದಕ್ಕರ್ಥ. ಇಂತು ಭಕ್ತಿ ನಿಷ್ಪತ್ತಿಯಾದಲ್ಲಿ ಲಿಂಗವೆಂಬ ಸತ್ಸ್ವರೂಪು ತನ್ನಲ್ಲಿಯೆ ಲೀಯ್ಯವಾಗಿ ತಾನು ತಾನಾಗಿರ್ದನೆಂಬುದೀಗ ಗುಹೇಶ್ವರಾ ನೀ ಸತ್ತು ಲಿಂಗವಾಯಿತ್ತ ಕಂಡೆನೆಂಬ ಶಬ್ದಕ್ಕರ್ಥ.

೧೧೭. ಎನ್ನಲ್ಲಿ ನಾನು ನೀಜವಾಗಿ ನಿಂದು ಅರಿದಿಹೆನೆಂದರೆ ಅದು ನಿಮ್ಮ ಮತಕ್ಕೆ ಬಪ್ಪದೇ? ಎನ್ನ ನಾನು ಮರೆದು ನಿಮ್ಮನರಿದಡೆ ಅದು ನಿಮ್ಮ ದೋಷವೆಂಬೆ. ಎನ್ನ ನಾ ನಿನ್ನೊಳು ಮರೆದರೆ ಕನ್ನಡಿಯೊಳಗಣ ಪ್ರತಿಬಿಂಬದಂತೆ ಭಿನ್ನವಿಲ್ಲದೆ ಇದ್ದೆನು ಕಾಣಾ ಗುಹೇಶ್ವರಾ!

ಟೀಕು:— ತನ್ನಲ್ಲಿ ತನ್ನನೇ ತಿಳಿದು ತಾನೇ ಶಿವನೆಂದಡೆ ಆ ಅರಿವು ತನ್ನನೇ ತನಗೆ ಅನ್ಯವ ಮಾಡಿ ತೋರಿಹುದಾಗಿ ಅದು ಮಹಾಜ್ಞಾನವಲ್ಲವೆಂಬುದೀಗ ಎನ್ನಲ್ಲಿ ನಾನು ನಿಜವಾಗಿ ನಿಮ್ಮನರಿದಿಹೆನೆಂದರೆ ಅದು ನಿಮ್ಮ ಮತಕ್ಕೆ ಬಪ್ಪದೆಯೆಂಬ ಶಬ್ದಕ್ಕರ್ಥ. ಅದುಕಾರಣ ತಾನೆಂಬುದನು ಮರೆದು ನೀನೆಂಬುವದನು ಇರಬಲ್ಲಡೆ ಅದೆ ನಿಜವೆಂಬುದೀಗ ಎನ್ನ ನಾನು ಮರೆದು ನಿಮ್ಮನರಿದರೆ ಅದು ನಿಮ್ಮ ರೂಪೆಂಬೆನೆಂಬ ಶಬ್ದಕ್ಕರ್ಥ. ಇಂತಪ್ಪ ಶರಣನ ನಿಲವು ದರ್ಪಣ ಪ್ರತಿಬಿಂಬವು ತಾನೂ

ಭೇದವಿಲ್ಲದಂತಿಪ್ಪುದೆಂಬುದೀಗ ಎನ್ನ ನಿನ್ನೊಳು ಮರೆದರೆ ಕನ್ನಡಿಯೊಳಗಣ ಪ್ರತಿಬಿಂಬದಂತೆ ಭಿನ್ನವಿಲ್ಲದಿರ್ದೆನು ಎಂಬ ಶಬ್ದಕ್ಕರ್ಥ.

೧೧೮. ಭಕ್ತಂಗೆ ಉತ್ಪತ್ತಿ ಇಲ್ಲ. ಸ್ಥಿತಿ ಇಲ್ಲ. ಸ್ಥಿತಿ ಇಲ್ಲಾಗಿ ಲಯವಿಲ್ಲ. ಮುನ್ನೆಲ್ಲಿಂದ ಬಂದನಲ್ಲಿಗೆ ಹೋಗಿ ನಿತ್ಯನಾಗಿಪ್ಪ ಗುಹೇಶ್ವರಾ

ಟೀಕು.— ನಿಮ್ಮ ಶರಣನು ಸ್ವಾನುಭಾವ ಸ್ವರೂಪ ತಾನಾಗಿ ಉದಯಿಸಿದ ಶರಣಂಗೆ ಉತ್ಪತ್ತಿಸ್ಥಿತಿಲಯವಿಲ್ಲದ ನಿತ್ಯನಾಗಿ ತಾನು ಮುನ್ನ ಉದಯವಾದ ಮಹಾಘನತತ್ವದಲ್ಲಿಯೆ ವಿಶ್ರಾಂತಿಯ ನೆಯ್ದುಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

೧೧೯. ತುಂಬಿ ಬಂದರೆ ಪರಿಮಳ ಓಡಿತ್ತ ಕಂಡೆ. ಏನು ಸೋಜಿಗ ಹೇಳಾ! ಮನ ಬಂದರೆ ಬುದ್ಧಿ ಓಡಿತ್ತ ಕಂಡೆ. ದೇವ ಬಂದೊಡೆ ದೇಗುಲ ಓಡಿತ್ತ ಕಂಡೆ ಗುಹೇಶ್ವರಾ!

ಟೀಕುಃ— ತುಂಬಿಯೆಂದರೆ ಪರಿಪೂರ್ಣಕ್ಕೆ ಹೆಸರು. ಅಂತಪ್ಪ ಪರಿಪೂರ್ಣ ಶಿವತತ್ವ ಆವರಿಸಲು ಖಂಡಿತಮಪ್ಪ ಸ್ವಾನುಭಾವ ವಾಸನೆ ನಿವೃತ್ತವಾಯಿತ್ತೆಂಬುದೀಗ ತುಂಬಿ ಬಂದರೆ ಪರಿಮಳ ಓಡಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತು ಪರಿಪೂರ್ಣಪಡೆಗೊಂಡು ಮನೋಮೂರ್ತಿ ಲಿಂಗವಾಗಲು ಭಿನ್ನ ಬುದ್ಧಿಯಿಂದ ಲಿಂಗವ ನಂಬಿಹೆನೆಂಬ ಕೃತ ನಿಶ್ಚಯ ಬುದ್ಧಿ ಅಳಿದು ಹೋಯಿತ್ತೆಂಬುದೀಗ ಮನ ಬಂದೊಡೆ ಬುದ್ಧಿ ಓಡಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತು ಶಿವತತ್ವವೇ ತಾನಾಗಿದ್ದ ಕಾರಣ ದೇಹವಳಿದು ನಿರ್ವಯಲಾಯಿತ್ತೆಂಬುದೀಗ ದೇವ ಬಂದೊಡೆ ದೇಗುಲ ಓಡಿತ್ತ ಕಂಡೆನೆಂಬ ಶಬ್ದಕ್ಕರ್ಥ.

೧೨೦. ರಂಗ ಒಂದೇ ಕಂಭ ಒಂದೇ ದೇವರೊಂದೇ ದೇಗುಲ ಒಂದೇ ಗುಹೇಶ್ವರಾ ನಿಮ್ಮ ಮನ್ನಣೆಯ ಶರಣರೇ ದೇವರೆಂಬೆ.

ಟೀಕುಃ— ಲಿಂಗದಲ್ಲಿ ಮನವರಿಸಿಪ್ಪ ಶರಣಂಗೆ ಏಕಮೇವ ನದ್ವಿತೀಯ ಬ್ರಹ್ಮವೆಂಬ ವಿಶಾಲತರವಪ್ಪ ಅಂತರಂಗವೆಂಬ ಮಂಟಪ ಒಂದೇ ಎಂಬುದೀಗ ರಂಗ ಒಂದೇ ಎಂಬ ಶಬ್ದಕ್ಕರ್ಥ. ಆ ಅಂತರಂಗವೆಂಬ ಮಂಟಪಕ್ಕೆ ಏಕೋ ಭಾವವೆಂಬ ಸ್ತಂಭ ಒಂದೇ ಎಂಬುದೀಗ ಕಂಭ ಒಂದೇ ಎಂಬ ಶಬ್ದಕ್ಕರ್ಥ. ಆ ಮಂಟಪದೊಳಗಿಪ್ಪ ಪರವಸ್ತು ಒಂದೇ ಎಂಬುದೀಗ ದೇವರೊಂಧೇ ಎಂಬ ಶಬ್ದಕ್ಕರ್ಥ, ಆ ಪರವಸ್ತು



ವಿಂಗೆ ಚಿದಾಕಾಶವೆಂಬ ದೇವಾಲಯ ಒಂದೇ ಎಂಬುದೀಗ ದೇಗುಲ ಒಂದೇ ಎಂಬ ಶಬ್ದಕ್ಕರ್ಥ. ಇಂತಪ್ಪ ಶರಣರೆ ನಿತ್ಯ ಪರಿಪೂರ್ಣ ತತ್ವವೇದಿಗಳೆಂಬುದೀಗ ಗುಹೇಶ್ವರಾ ನಿಮ್ಮ ಶರಣರೆ ದೇವರೆಂಬೆನೆಂಬ ಶಬ್ದಕ್ಕರ್ಥ.

೧೨೧. ಊರ ಹೊರಗೊಂದು ದೇಗುಲ ದೇಗುಲದೊಳಗೊಬ್ಬ ಗೊರತಿ ನೋಡಯ್ಯಾ! ಗೊರತಿಯ ಕೈಯಲ್ಲಿ ಸೂಜಿ ಸೂಜಿಯ ಮೊನೆಯಲ್ಲಿ ಹದಿನಾಲ್ಕು ಲೋಕ. ಗೊರತಿಯ ಸೂಜಿಯ ಹದಿನಾಲ್ಕು ಲೋಕವನಿಂದಿರುವೆ ನುಂಗಿತ್ತು ಕಂಡೆ ಗುಹೇಶ್ವರಾ.

ಟೀಕುಃ— ಊರೆಂದರೆ ದೇಹ ಅಂತಪ್ಪ ದೇಹಧರ್ಮಕ್ಕೆ ಹೊರಗಾಗಿಪ್ಪ ಚಿತ್ಪಿಂಡವೆಂಬುವದೊಂದು ಶಿವಾಲಯವೆಂಬುದೀಗ ಊರಹೊರಗೊಂದು ದೇಗುಲವೆಂಬ ಶಬ್ದಕ್ಕರ್ಥ. ಅಂತಪ್ಪ ಚಿದಾಕಾಶಗೃಹದೊಳಗೆ ಜ್ಞಾನಶಕ್ತಿಯೆಂಬ ಸ್ತ್ರೀ ಇರುತ್ತಿರ್ಪಳೆಂಬುದೀಗ ದೇಗುಲದೊಳಗೊಬ್ಬ ಗೊರತಿ ನೋಡಯ್ಯಾ ಎಂಬ ಶಬ್ದಕ್ಕರ್ಥ. ಆ ಸುಜ್ಞಾನಶಕ್ತಿ ಮನವೆಂಬುದೊಂದು ಸೂಜಿಯಲ್ಲಿ ಶಿವಾನುಭಾವ ಸೂತ್ರಮಂ ಪವಣಿಸಿ ಹಿಡಿದಿಪ್ಪಳೆಂಬುದೀಗ ಗೊರತಿಯ ಕೈಯಲ್ಲಿ ಸೂಜಿಯೆಂಬ ಶಬ್ದಕ್ಕರ್ಥ. ಅಂತಪ್ಪ ಶಿವಾನುಭಾವ ಸನ್ನಿಹಿತವಾದ ಮನದ ಕೊನೆಯ ಮೇಲೆ ಚತುರ್ದಶ ಭುವನವೆಲ್ಲ ಅಡಗಿಪ್ಪುದೆಂಬುದೀಗ ಸೂಜಿಯ ಮೊನೆಯಲ್ಲಿ ಹದಿನಾಲ್ಕು ಲೋಕವೆಂಬ ಶಬ್ದಕ್ಕರ್ಥ. ಆ ಶಿವಾನುಭಾವ ಸನ್ನಿಹಿತವಾದ ಮನವನು ಆ ಜ್ಞಾನಶಕ್ತಿಯನು ಆ ಲೋಕಂಗಳನು ಮಹಾಜ್ಞಾನವವಗ್ರಹಿಸಿತ್ತೆಂಬುದೀಗ ಸೂಜಿಯ ಗೊರತಿಯ ಹದಿನಾಲ್ಕು ಲೋಕವನೊಂದಿರುವೆ ನುಂಗಿತ್ತ ಕಂಡೆನೆಂಬ ಶಬ್ದಕ್ಕರ್ಥ.

೧೨೨ ಮನಕ್ಕೆ ಮನೋಹರವಾದಡೆ ಮನಕ್ಕೆ ಭಂಗ ನೋಡಾ! ತನುವಿನಲ್ಲಿ ಸುಖವ ಧರಿಸಿಕೊಂಡಡೆ ಆ ತನುವಿಂಗೆ ಕೊರತೆ ನೋಡಾ! ಅರಿವನರಿದು ಸುಖವಾಯಿತೆಂದಡೆ ಆ ಅರಿವಿಂಗೆ ಭಂಗ ನೋಡಾ ಗುಹೇಶ್ವರಾ.

ಟೀಕುಃ—ಮನೋಮೂರ್ತಿ ಲಿಂಗವು ತಾನೆಂದರಿಯದೆ ಲಿಂಗವನರಿದಿಹನೆಂದು ಮನಮುಟ್ಟಿ ಹಾರೈಸುವದು ಭಿನ್ನ ಯುಕ್ತಿ ಎಂಬುದೀಗ ಮನಕ್ಕೆ ಮನೋಹರವಾದಡೆ ಮನಕ್ಕೆ ಭಂಗ ನೋಡಾ ಎಂಬ ಶಬ್ದಕ್ಕರ್ಥ. ಆ

ಶಿವಸುಖವನಂಗಮುಖದಲ್ಲಿ ಧರಿಸಿದರೆ ಅದು ಭಿನ್ನ ಸುಖವಾದಕಾರಣ ಅದು ತನುವಿನಲ್ಲಿ ಆ ಸುಖವಧರಿಸಿಕೊಂಡಡೆ ಆ ತನುವಿಂಗೆ ಕೊರತೆ ನೋಡಾ ಎಂಬ ಶಬ್ದಕ್ಕರ್ಥ. ತಾನರಿದು ಅರಿವಿನ ಸುಖವನಿದಿರಿಂಗೆ ಹೇಳಿದರೆ ಅರಿವಿಂಗೆ ಭಂಗವಾದಕಾರಣ ಅದು ಅರಿವನರಿದು ಸುಖವಾಯಿತ್ತೆಂದಡೆ ಆ ಅರಿವಿಂಗೆ ಭಂಗ ನೋಡಾ ಎಂಬ ಶಬ್ದಕ್ಕರ್ಥ.

೧೨೩. ನಾ ಎಂಬುದೆ ನಂದಿಯಾಗಿ, ಮಾ ಎಂಬುದೆ ಮಹತ್ತಾಗಿ ಶಿ ಎಂಬುದೇ ರುದ್ರನಾಗಿ, ವಾ ಎಂಬುದೆ ಹಂಸಿಯಾಗಿ, ಯಾ ಎಂಬುದೆ ಅರಿವಾಗಿ, ಓಂ ಕಾರವೇ ಗುರುವಾಗಿ, ಸಂಬಂಧವೇ ಅಸಂಬಂಧವಾಗಿ ಅಸಂಬಂಧವೆ ಸಂಬಂಧವಾಗಿ ಎರಡೂ ಒಂದೇಯಾಗಿ ಗುಹೇಶ್ವರ ಲಿಂಗದಲ್ಲಿ ಸಂಬಂಧಿ.

ಟೀಕು:— ನಕಾರ ಚಿತ್ತಮಿತ್ಯುಕ್ತದ ಎಂಬುದಾಗಿ ಆ ಚಿತ್ತವೇ ಲೋಕವೆಲ್ಲಕ್ಕೂ ಆದಿಯಾಗಿಪ್ಪ ಕಾರಣ ಅಂತಪ್ಪ ಚಿತ್ತವೇ ಪ್ರಥಮದಲ್ಲಿ ಅಂಗದ ಅಳವಟ್ಟು ಆ ಚಿತ್ತವೆ ಲೋಕವೆಲ್ಲಕ್ಕೂ ಆದಿಯಾಗಿಪ್ಪ ಕಾರಣ ಅಂತಪ್ಪ ಚಿತ್ತುವೇ ಪ್ರಥಮದಲ್ಲಿ ಅಂಗದಳವಿಟ್ಟು ಅದು ನಂದಿ ಎಂಬ ನಾಮವನೆಯ್ದಿದ ಕಾರಣ ನಾ ಎಂಬುದೆ ನಂದಿಯಾಗಿತ್ತೆಂಬ ಶಬ್ದಕ್ಕರ್ಥ. ಆ ನಕಾರವೇ ಅಂಗದಲ್ಲಿ ಅಳವಡಲು ಮಕಾರೋ ಬುದ್ಧಿರುಚ್ಚತೇ ಎಂಬುದಾಗಿ ಅಂತಪ್ಪ ಮಕಾರಸಂಯುಕ್ತಮಪ್ಪಸುಬುದ್ಧಿಕೃತ ನಿಶ್ಚಯ ಮಹತ್ತಿನಲ್ಲಿ ಇಂಬುಗೊಳ್ಳಲು ಆ ಮಹತ್ತೇ ಎಡೆಗೊಂಡಿತ್ತೆಂಬುದೀಗ ಮಾ ಎಂಬುದೇ ಮಹತ್ತಾಗಿ ಎಂಬ ಶಬ್ದಕ್ಕರ್ಥ. ಶಿಕಾರೋ ರುದ್ರರೂಪಶ್ಚ ಎಂಬುದಾಗಿ ಅಂತಪ್ಪ ಶಿಕಾರವೆ ಶಿವ ಸ್ವರೂಪಾಗಿ ಸರ್ವಾಂಗದ ಮೇಲೆ ಎಡೆಗೊಂಡು ಭವ ಭಾರ ಪಾಶ ವಿಮೋಚನವ ಮಾಡುತ್ತಿರಲು ಅದೀಗ ಶಿ ಎಂಬುದೇ ರುದ್ರವಾಗಿ ಎಂಬ ಶಬ್ದಕ್ಕರ್ಥ. ವ ಕಾರೋ ವಾಯುರುಚ್ಯತೇ ಎಂಬುದಾಗಿ ಅಂತಪ್ಪ ಪ್ರಾಣವಾಯುವೇ ಲಿಂಗವಾಗಿ ಲಿಂಗಪ್ರಾಣವೆನಿಸಲು ಅದೇ ಪರಮಹಂಸನಾಮವನೆಯ್ದಿದ್ದಿತೆಂಬುದೀಗ ವಾ ಯೆಂಬುದೆ ಹಂಸವಾಗಿ ಎಂಬ ಶಬ್ದಕ್ಕರ್ಥ. ಯಕಾರಂ ಜ್ಞಾನಮೇವಚ ಎಂಬುದಾಗಿ ಅಂತಪ್ಪ ಯಕಾರಸಂಯುಕ್ತಮಪ್ಪಸುಜ್ಞಾನವೇ ಬಾಹ್ಯಾಭ್ಯಂತರದೊಳಗೆ ಸಮವೇಧಿಸಿಕೊಂಡಿತ್ತೆಂಬುದೀಗ ಯಾ ಎಂಬುದೇ ಅರಿವಾಗೆ ಎಂಬ ಶಬ್ದಕ್ಕರ್ಥ.



ಶ್ಲೋಕ:— ಓಂಕಾರ ಪ್ರಭವಾ ವೇದಾ ಓಂಕಾರ ಪ್ರಭವಾತ್ಸಸ್ವಸರಂ ತ್ರೈಲೋಕ್ಯಂ ಸಚರಾಚರಂ ಎಂಬುದಾಗಿ ಅಂತಪ್ಪ ಓಂಕಾರವೇ ಸಮಸ್ತ ಲೋಕಕ್ಕೆ ಗುರುವಾಗಿಪ್ಪದು. ಆ ಓಂಕಾರವೇ ತಾನಾಗಿದ್ದನೆಂಬುದೀಗ ಓಂಕಾರವೇ ಗುರುವಾಗೆ ಎಂಬ ಶಬ್ದಕ್ಕರ್ಥ. ಇಂತಪ್ಪ ಷಡಕ್ಷರವೆ ಸರ್ವಾಂಗವಳವಟ್ಟು ಭಿನ್ನವಾಗಿರದೆ ಅಭಿನ್ನವಾಗಿ ಎಡೆಗೊಂಡುದು ಉಭಯ ನಾಮವಳಿದು ಇರ್ಪಾತನೆ ಅಚ್ಚಶರಣನೆಂಬುದೀಗ ಸಂಬಂಧವೆ ಅಸಂಬಂಧವಾಗಿ ಅಸಂಬಂಧವೇ ಸಂಬಂಧವಾಗಿ ಎರಡೂ ಒಂದಾಗಿ ಗುಹೇಶ್ವರ ಲಿಂಗದಲ್ಲಿ ಸಂಬಂಧಿ ಎಂಬ ಶಬ್ದಕ್ಕರ್ಥ.

೧೨೪. ಜಗದಗಲದ ಮಂಟಪಕ್ಕೆ ಮುಗಿಲಗಲಿದ ಮೇಲು ಕಟ್ಟಿನಲ್ಲಿ ಚಿತ್ರವಿಚಿತ್ರವ ನೋಡುತ್ತ ಧ್ಯಾನ ವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರ್ಶನವ ನೋಡುತ್ತ ನೋಡುತ್ತ ಗಗನ ಗಂಭೀರದಲ್ಲಿ ಉದಯವಾಯಿತ್ತ ಕಂಡೆ ಗುಹೇಶ್ವರನೆಂಬ ಲಿಂಗ ತಾನೆಯಾಗಿ.

ಟೀಕು:— ಜಗವೆಲ್ಲವ ತನ್ನೊಳಗಪ್ಪಿಕೊಂಡಿರ್ಪ ಚಿತ್ತೇ ಶರಣನ ಅಂಗವಾಗಿ ಅಂತಪ್ಪ ಚಿದಾಕಾಶವೆಂಬ ಶರೀರ ಮಂಟಪಕ್ಕೆ ಮಹದಾಕಾಶವೆಂಬುದೊಂದು ಮೇಲುಕಟ್ಟ ಕಟ್ಟಿ ಆ ಮಂಟಪದೊಳಗೆ ಸ್ವಸ್ಥವಾಗಿ ಕುಳ್ಳಿರ್ದು ಪರಬ್ರಹ್ಮವೆಂಬುದೊಂದು ವಿಚಿತ್ರವ ಹರುಷದಿಂದ ನೋಡುತ್ತ ನೋಡುತ್ತ ಶಿವಜ್ಞಾನ ಪರಾಯಣನಾಗಿದ್ದನೆಂಬುದೀಗ ಜಗದಗಲದ ಮಂಟಪಕ್ಕೆ ಮುಗಿಲಗಲದ ಮೇಲು ಕಟ್ಟಿನಲ್ಲಿ ಚಿತ್ರ ವಿಚಿತ್ರವ ನೋಡುತ್ತ ನೋಡುತ್ತ ಧ್ಯಾನ ವಿಶ್ರಾಂತಿಯಲ್ಲಿ ನಿಂದಿಪ್ಪೆ ಎಂಬ ಶಬ್ದಕ್ಕರ್ಥ ಆ ಶಿವಜ್ಞಾನದ ನಿರೀಕ್ಷಣೆಯಿಂದ ಅದ್ವಯವೆಂಬ ವಸ್ತು ತಾನೆಯಾಗಿ ಗಗನವೆಂಬ ಪರಮಾತ್ಮ ತತ್ವಸ್ವರೂಪದಲ್ಲಿ ಉದಯಿಸಿ ಸ್ವತಃ ಸಿದ್ಧವಾಗಿದ್ದಿತ್ತೆಂಬುದೀಗ ದಿಟದಿಟವೆಂಬುದೊಂದು ದರ್ಶನವ ನೋಡುತ್ತ ನೋಡುತ್ತ ಗಗನಗಂಭಿರದಲ್ಲಿ ಉದಯವಾಯಿತ್ತ ಕಂಡೆ ಗುಹೇಶ್ವರನೆಂಬ ಲಿಂಗವು ತಾನೆಯಾಗಿ ಎಂಬ ಶಬ್ದಕ್ಕರ್ಥ.

೧೨೫ ಹಿಂದಣ ಅನಂತವನು ಮುಂದಣ ಅನಂತವನು ಒಂದೇ ದಿನ ಒಳಕೊಂಡಿತ್ತು ನೋಡಾ! ಒಂದು ದಿನವನೊಳಕೊಂಡು ಮಾತನಾಡುವ ಮಹಂತನ ಕಂಡು ಬಲ್ಲವರಾರಯ್ಯಾ? ಆದ್ಯರು ವೇದ್ಯರು ಅನಂತ ಹಿರಿಯರು ಲಿಂಗದಂತವನರಿಯದೆ ಅಂತೆ ಹೋದರು ಕಾಣಾ ಗುಹೇಶ್ವರಾ!

ಟೀಕು:--ಹಿಂದೆ ಹೋದ ಅನಂತ ಯುಗಗಳನು ಮುಂದೆ ಬಪ್ಪ ಅನಂತ ಯುಗಗಳನು ಒಂದೇ ದಿನದೊಳಗೆ ಶಿವಜ್ಞಾನವಳಿಗೊಡಲು ಆ ಶಿವಜ್ಞಾನವೇ ಅವಗ್ರಹಿಸಿ ಕೊಂಡಿತ್ತೆಂಬುದೀಗ ಹಿಂದಣ ಅನಂತವನು ಮುಂದಣ ಅನಂತವನು ಒಂದೇ ದಿನ ಒಳಕೊಂಡಿತ್ತು ನೋಡಾ ಎಂಬ ಶಬ್ದಕ್ಕರ್ಥ. ಆ ಒಂದು ದಿನ ಅಳವಟ್ಟ ಶಿವಜ್ಞಾನ ತನ್ನನುದಿನವೆಂಬ ಸಂಖ್ಯೆಯ ಮರೆದು ನಿಃಶಂಕವಾಗಿ ತನ್ನ ಮರದು ತಾನು ತಾನಾಗಿ ಮಾತ ನಾಡುವಾತನೆ ಅಚ್ಚ ಶರಣನೆಂಬುದೀಗ ಒಂದು ದಿನವನೊಳಕೊಂಡು ಮಾತನಾಡುವ ಹಿರಿಯರನಾರನು ಕಾಣೆನೆಂಬ ಶಬ್ದಕ್ಕರ್ಥ. ಈ ಭೇದ ವನರಿಯದೆ ಆರುಹಿರಿಯರೆಲ್ಲರು ವೃಥಾ ಜ್ಞಾನಿಗಳಾಗಿ ಹೋದರೆಂಬುದೀಗ ಆದ್ಯರು ವೇದ್ಯರು ಅನಂತ ಹಿರಿಯರು ಲಿಂಗದಂತವನರಿಯದೆ ಹೋದ ರೆಂಬ ಶಬ್ದಕ್ಕರ್ಥ.

೧೨೬. ಹುಟ್ಟುವರೆಲ್ಲರ ಹುಟ್ಟ ಬೇಡೆಂದೆನೆ ಹೊಂದುವರೆಲ್ಲರ ಹೊಂದ ಬೇಡೆಂದೆನೆ ಪ್ರಳಯದಲ್ಲಿ ಅಳಿವವರ ಅಳಿಯ ಬೇಡೆಂದೆನೆ ಗುಹೇಶ್ವರಾ, ನಿಮ್ಮನರಿದು ನೆರೆದ ಬಳಿಕ ಧರೆಯ ಮೇಲಿಲ್ಲದವರನಿರ ಬೇಡೆಂದೆನೆ.

ಟೀಕು:-- ಲಿಂಗದಲ್ಲಿ ತನ್ನಲ್ಲಿ ಭಿನ್ನವಿಲ್ಲದೆ ಬೆರಸಿ ಸರ್ವಾಂಗ ಲಿಂಗ ಸಂಬಂಧಿಯಾದ ಆರೂಢಜ್ಞಾನಿ ಲೋಕದ ಉತ್ಪತ್ತಿ ಸ್ಥಿತಿ ಲಯ ಪ್ರಪಂಚೆಂಬವೇನುವನು ತನ್ನ ನೋಣಕ್ಕೆ ಎಣಿಕೆಯ ತಾರದೆ ನಿಶ್ಚಿಂತ ನಾಗಿದ್ದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೨೭. ಆದಿಯಾಧಾರ ಉಳ್ಳನ್ನಕ್ಕರ ಉಪಚಾರ. ಎರಡು ಒಂದಾ ದರೆ ಶಿವಾಚಾರ. ಆ ಶಿವಾಚಾರ ಸಯ್ಯಾದರೆ ಬ್ರಹ್ಮಾಚಾರ. ಗುಹೇಶ್ವ ರನರಿದಡೆ ಅನಾಚಾರ.

ಟೀಕು:-- ಲಿಂಗಭಕ್ತನೆಂಬೆರಡು ಹಿಡಿದು ನಡೆವನ್ನಕ್ಕರ ಉಪಚಾರ ಉಂಟೆಂಬುದೀಗ ಆದಿಯಾಧಾರವುಳ್ಳನ್ನಕ್ಕರ ಉಪಚಾರವೆಂಬ ಶಬ್ದಕ್ಕರ್ಥ. ಆ ಎರಡೂ ಭಾವವು ಸಮರಸವಾದ ಅದು ಶಿವಾಚಾರವೆಂಬುದೀಗ ಎರಡೂ ಒಂದಾದರೆ ಶಿವಾಚಾರ ಎಂಬ ಶಬ್ದಕ್ಕರ್ಥ. ಆ ಶಿವಾಚಾರ ತನ್ನಲ್ಲಿ ಐಕ್ಯವಾಗಿ ತನಗೆ ತಾನು ಪ್ರಸನ್ನವಾದರೆ ಅದೇ ತಾನು ಬ್ರಹ್ಮ ವಾಗಿ ಚರಿಸುವ ಚರ್ಯಾ ಎಂಬುದೀಗ ಶಿವಾಚಾರ ಸಯ್ಯಾದಡೆ ಬ್ರಹ್ಮಾ



ಚಾರ ಎಂಬ ಶಬ್ದಕ್ಕರ್ಥ. ತಾನು ಶಿವನಾದೆನೆಂಬ ಭಾವವು ನಷ್ಟವಾಗಿ ಏನೊಂದು ಅರಿಯದಿರ್ದೊಡೆ ಆಚಾರವೆಲ್ಲ ಅಳಿದು ಅನಾಚಾರವಪ್ಪು ದೆಂಬುದೀಗ ಗುಹೇಶ್ವರನರಿದಡೆ ಅನಾಚಾರವೆಂಬ ಶಬ್ದಕ್ಕರ್ಥ.

೧೨೮. ಕಿಚ್ಚಿನೊಳಗೆ ಹಾಕಿದ ಹುಳ್ಳಿಯಂತಾದೆನಯ್ಯಾ! ಬೆಂದ ನುಲಿಯ ಸಂದಿಕ್ಕಿ ಮತ್ತೊಂದು ಮಾಡಬಾರದಯ್ಯಾ! ಗುಹೇಶ್ವರಾ ನಿಮ್ಮ ನಿಲವಿನ ಪರಿ ಇಂತುಟಯ್ಯಾ!

ಟೀಕು:-- ಜ್ಞಾನಾಗ್ನಿಯಲ್ಲಿ ಸರ್ವಾಂಗವು ದಗ್ಧವಾದ ಶರಣನ ತನುಗುಣಾದಿಗಳೆಲ್ಲವು ಅಳಿದು ದಗ್ಧಪಟನ್ಯಾಯದಂತಿರ್ದನೆಂಬುದೀ ವಚ ನದ ತಾತ್ಪರ್ಯಾರ್ಥ.

೧೨೯. ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆ. ಮೊತ್ತದ ಮಾಮರ ನುಲಿಯುತ್ತ ಕಂಡೆ. ಕತ್ತಲೆ ಬೆಳಗಾಯಿತ್ತ ಕಂಡೆ. ಹೊತ್ತರೆ ಎದ್ದು ಹೊಲಬುದಪ್ಪಿದ ಕಂಡೆ. ಇದೇನು ಹತ್ತಿತೆಂದರಿಯೆ ಗುಹೇಶ್ವರಾ.

ಟೀಕು:-- ಸತ್ತ ಕೋಳಿಯೆಂದರೆ ಕುಕ್ಕುಟನ ಗುಣ ಧರ್ಮ ಕರ್ಮವಪ್ಪ ಪ್ರಾತ ಜ್ಞಾನ ಧ್ವನಿ. ಅಂತಪ್ಪ ಸತ್ಪ್ರಣವ ಉದಯವಾ ಯಿತ್ತೆಂಬುದೀಗ ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತೂ ಸತ್ಪ್ರಣವ ಉದಯವಾದಲ್ಲಿ ಷಡುಚಕ್ರದ ಐವತ್ತೆರಡಕ್ಷರಂಗಳೆ ಲ್ಲವು ವಿವೇಕ ವೃಕ್ಷ ಸ್ವರೂಪವನೈದಿ ಶಿವೋಹಂ ಎಂಬ ಧ್ವನಿ ಮಾಡು ತ್ತಿದ್ದವು ಎಂಬುದೀ ಮೊತ್ತದ ಮಾಮರನುಲಿಯಿತ್ತ ಕಂಡೆನೆಂಬ ಶಬ್ದ ಕ್ಕರ್ಥ. ಇಂತಾದಕಾರಣ ಅಜ್ಞಾನ ತಿಮಿರವಳಿದು ಸುಜ್ಞಾನ ಪ್ರಕಾಶ ವಾಯಿತ್ತೆಂಬುದೀಗ ಕತ್ತಲೆ ಬೆಳಗಾಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಸುಜ್ಞಾನೋದಯವೇ ಹೊತ್ತರೆ ಎಂಬ ಶಬ್ದಕ್ಕರ್ಥ. ಅಂತಪ್ಪ ಸುಜ್ಞಾನ ಪ್ರಕಾಶದಿಂದ ಸರ್ವತೊ ದಿಕ್ಕು ತಾನೆಯಾಗಿ ಖಂಡಿತದ ಹೊಲಬು ತಪ್ಪಿತ್ತೆಂಬುದೀಗ ಹೊತ್ತಾರೆ ಎದ್ದು ಹೊಲಬುದಪ್ಪುವದ ಕಂಡೆನೆಂಬ ಶಬ್ದಕ್ಕರ್ಥ. ಇಂತು ಆ ಲಿಂಗಗ್ರಾಹಕವಾದ ಶರಣನು ಇತರವನರಿಯ ದಿದ್ದನೆಂಬುದೀಗ ಏನ ಹತ್ತಿತೆಂಬುದರಿಯೆನೆಂಬ ಶಬ್ದಕ್ಕರ್ಥ.

೧೩೦. ಪರತತ್ವದಲ್ಲಿ ತದ್ಗತವಾದ ಬಳಿಕ ಬೇರೆ ಮತ್ತರಿದಿಹೆನೆಂಬ ಭ್ರಾಂತೇಕೆ? ಅರಿವು ಸಯ್ಯಾಗಿ ಮರಹು ನಷ್ಟವಾದ ಬಳಿಕ ತಾನಾರೆಂಬ ವಿಚಾರವೇಕೆ? ಗುಹೇಶ್ವರನ ಬೆರಸಿ ಭೇದಗೆಟ್ಟ ಬಳಿಕ ಮತ್ತೆ ಸಂಗವ ಮಾಡಿಹೆನೆಂಬ ತವಕವೇಕಯ್ಯಾ?

ಟೀಕುಃ— ತನ್ನ ತಾನರಿದು ಪರತತ್ವದಲ್ಲಿ ತದ್ಗತವಾದ ಶರಣನೆ ಆ ಪರವಸ್ತುವನರಿಯಬೇಕೆಂದು ಅರಸುವದು. ಅಕ್ರಮು. ಅರಿವು ಪರಿಪೂರ್ಣವಾಗಿ ಮರವೆಯಳಿದ ಬಳಿಕ ತನ್ನ ತಾ ತಿಳಿದಿಹನೆಂಬುದು ಅಕ್ರಮು. ಪರಬ್ರಹ್ಮವೇ ತಾನಾಗಿರ್ದ್ದ ಭೇದವನರಿಯದೆ ಮತ್ತೆ ಸಂಗವ ಮಾಡಿಹೆನೆಂಬುದು ಅಕ್ರಮುವೆಂಬುದೀ ವಚನದ ತಾತ್ಪರ್ಯಾರ್ಥ.

೧೩೧. ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡ ನೋಡವ್ವಾ. ಘಳಿಗೆ ಘಳಿಗೆಗೆ ಮಗುವು ಹುಟ್ಟೆ ಕೈಗೆ ಬಾಯಿಗೆ ಬಂದಿತ್ತು ನೋಡವ್ವಾ ಅರಿವು ಕುರಹನು ಮರವೆ ನುಂಗಿತ್ತು ಗುಹೇಶ್ವರನುಳಿದ ನೋಡವ್ವಾ.

ಟೀಕುಃ— ದೇಹ ಪ್ರಕೃತಿ ಮುನ್ನಳಿಯಲು ಪ್ರಾಣಧರ್ಮ ಬಳಿಕಳಿವುದು. ಇಂತು ದೇಹಪ್ರಾಣಂಗಳು ಎರಡು ಅಳಿಯಲೊಡನೆ ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡನೆಂಬ ಶಬ್ದಕ್ಕರ್ಥ. ಗಂಡನೆಂದರೆ ಪ್ರಾಣಧರ್ಮವೆಂಬರ್ಥ. ಹೆಂಡತಿಯಂದರೆ ದೇಹಧರ್ಮವೆಂಬರ್ಥ. ಇಂತು ದೇಹ ಪ್ರಕೃತಿ ಪ್ರಾಣ ಧರ್ಮಗಳೆರಡು ಅಳಿಯಲೊಡನೆ ಸುಜ್ಞಾನವೆಂಬ ಶಿಶು ಉದಯಿಸಿ ಆ ಸುಜ್ಞಾನವೇ ಕರಸ್ಥಲದ ಲಿಂಗವಾಗಿ ಜಿಹ್ವೆಗೆ ಶಿವ ಮಂತ್ರವಾಗಿ ಅಳವಟ್ಟಿತ್ತೆಂಬುದೀಗ ಘಳಿಗೆ ಘಳಿಗೆಗೆ ಮಗು ಹುಟ್ಟೆ ಕೈಗೆ ಬಾಯಿಗೆ ಬಂದಿತ್ತವ್ವಾ ಎಂಬ ಶಬ್ದಕ್ಕರ್ಥ. ಇಂತಪ್ಪ ಸುಜ್ಞಾನವನು ಕರಸ್ಥಲದ ಕುರುಹನು ಮಹಾ ಜ್ಞಾನವವಗ್ರಹಿಸಿ ತನ್ನಲ್ಲಿ ತಾನೆ ವಿಶ್ರಮಿಸಿ ನಿಜ ಉಳಿಯಿತ್ತೆಂಬುದೀಗ ಅರಿವು ಕುರಹನು ಮರವೆ ನುಂಗಿತ್ತು ಗುಹೇಶ್ವರನುಳಿದನೆಂಬ ಶಬ್ದಕ್ಕರ್ಥ.

೧೩೨. ಮರಳುಂಡ ಮನುಷ್ಯನ ಪರಿಯಂತೆ ವಿವರವನರಿಯಬಾರದು ನೋಡಾ! ಶಿವಜ್ಞಾನ ಆದನರಿದಿಹೆನೆಂದು ನೆನೆಯ ಹೋದರೆ ಆದು ಮುಂದು ದೋರದು. ಮರದಿಹೆನೆಂದು ಭಾವಿಸಹೋದರೆ ತೆರಹುಗೊಡದು ಗುಹೇಶ್ವರಾ. ನಿಮ್ಮ ನೆರೆಯರಿಹ ಶರಣರು ನಿಸ್ಸೀಮ ಸುಖಿಗಳು ನೋಡಾ.

ಟೀಕುಃ—ಗ್ರಹ ಬಂದು ಆವರಿಸಿದ ಮನುಷ್ಯನು ತನ್ನ ತಾನರಿಯದೆ ಇತರರೆಂಬುದನರಿಯದೆ ಮರುಳು ಎಡೆಗೊಂಡಿತ್ತೆಂಬುದನರಿಯದೆ ಇಪ್ಪ ಹಾಂಗೆ ಶಿವಜ್ಞಾನ ಪ್ರಕಾಶವವ ಗ್ರಾಹಕವಾದ ಶರಣನು ತನ್ನ ತಾನರಿಯದೆ ಇತರನರಿಯದೆ ಅರಿದೆನೆಂದರಿಯದೆ ಮರದೆನೆಂದರಿಯದೆ ನಿಸ್ಸೀಮನಾಗಿಪ್ಪನೆಂಬುದೀಗ ಈ ವಚನದ ತಾತ್ಪರ್ಯಾರ್ಥ.



೧೩೩. ಮಣ್ಣಿಲ್ಲದ ಹಾಳ ಮೇಲೆ ಕಣ್ಣಿಲ್ಲದಾತ ಮಣಿಯ ಕಂಡ. ಕೈಯಿಲ್ಲದಾತ ಪವಣಿಸಿದ. ಕೊರಳಿಲ್ಲದಾತ ಕಟ್ಟಿಕೊಂಡ. ಅಂಗವಿಲ್ಲದ ಸಿಂಗರಕೆ ಭಂಗವುಂಟೇ ಗುಹೇಶ್ವರಾ?

ಟೀಕುಃ— ಮಣ್ಣೆಂದರೆ ತನುವಿಂಗೆ ಹೆಸರು. ಅಂತಪ್ಪ ದೇಹಧರ್ಮವಳಿದು ನಿಜವುಳಿದ ನಿರ್ವಯಲೊಳಗಿಪ್ಪ ಮಹಾಜ್ಞಾನವೆಂಬ ರತ್ನವನು ಭಿನ್ನ ದೃಷ್ಟಿಯಿಲ್ಲದೆ ಶಿವಜ್ಞಾನ ಕಂಡೆನೆಂಬುದೀಗ ಮಣ್ಣಿಲ್ಲದ ಹಾಳ ಮೇಲೆ ಕಣ್ಣಿಲ್ಲದಾತ ಮಣಿಯ ಕಂಡನೆಂಬ ಶಬ್ದಕ್ಕರ್ಥ. ಆ ರತ್ನವನು ಅಭಿನ್ನ ಹಸ್ತದಿಂ ಪಿಡಿದು ಮಹಾನುಭಾವ ಸೂತ್ರದಿಂದ ಪವಣಿಸಿದನೆಂಬುದೀಗ ಕೈಯಿಲ್ಲದಾತ ಪವಣಿಸಿದನೆಂಬ ಶಬ್ದಕ್ಕರ್ಥ. ನಿರಾಧಾರವೆಂಬ ಕಂಠದಲ್ಲಿ ಆ ರತ್ನವ ಧರಿಸಿಕೊಂಡಿಹನೆಂಬದೀಗ ಕೊರಳಿಲ್ಲದಾತ ಕಟ್ಟಿಕೊಂಡನೆಂಬ ಶಬ್ದಕ್ಕರ್ಥ. ಅದೇ ಮಹಾಜ್ಞಾನ ಶೃಂಗಾರವಾಗುತ್ತಿರಲು ಆ ಮಹಾಜ್ಞಾನಕ್ಕೆ ಆವ ಸಂಗವು ಇಲ್ಲವೆಂಬುದೀಗ ಅಂಗವಿಲ್ಲದ ಸಿಂಗಾರಕ್ಕೆ ಭಂಗವುಂಟೆ ಎಂಬ ಶಬ್ದಕ್ಕರ್ಥ.

೧೩೪. ಕಾಣಿಸದೆ ನೆನೆದರೆ ಕಲ್ಪಿತವಿಲ್ಲದ ಪುರುಷ ಬಂದನೆನಗೆ ನೋಡಾ! ಕಲ್ಪಿತವಿಲ್ಲದೆ ನೆರೆದರೆ ಭಾವಿಸಲಿಲ್ಲದ ಸುಖದೊರಕಿತ್ತು ನೋಡಾ! ಗುಹೇಶ್ವರನೆಂಬ ಲಿಂಗವನರಿದ ಬಳಿಕ ನೀ ನಾನೆಂಬುದು ಇಲ್ಲ ನೋಡಾ!

ಟೀಕುಃ— ಭಿನ್ನ ವಿಚಾರದಿಂದ ಪರವಸ್ತುವ ಕಾಮಿಸದೆ ತನ್ನ ತಾನರಿಯಲು ಅಲ್ಲಿ ಕಲ್ಪಿತವಿಲ್ಲವ ಸಂಬಂಧವಳಪಟ್ಟಿತ್ತೆಂಬುದೀಗ ಕಾಮಿಸದೆ ನೆನೆದರೆ ಕಲ್ಪಿತವಿಲ್ಲದ ಪುರುಷ ಬಂದನೆನಗೆ ನೋಡಾ ಎಂಬ ಶಬ್ದಕ್ಕರ್ಥ. ಆ ಕಲ್ಪಿತ ಸಂಬಂಧದಲ್ಲಿ ನಿರ್ಭಾವವೆಂಬ ಸಮರಸ ಸಂಗದ ಪರಮಾನಂದ ಸುಖ ಸಾಧ್ಯವಾಯಿತೆಂಬುದೀಗ ಕಲ್ಪಿತವಿಲ್ಲದೆ ನೆರೆದರೆ ಭಾವಿಸಲಿಲ್ಲದ ಸುಖ ದೊರಕೊಂಡಿತ್ತು ನೋಡಾ ಎಂಬ ಶಬ್ದಕ್ಕರ್ಥ. ಇಂತು ಸಮರಸ ಸುಖಿಯಾದ ಶರಣಂಗೆ ನೀ ನಾನೆಂಬ ಭಾವವಿಲ್ಲವೆಂಬುದೀಗ ಗುಹೇಶ್ವರನೆಂಬ ಲಿಂಗವನರಿದ ಬಳಿಕ ನೀ ನಾನೆಂಬುದಿಲ್ಲ ನೋಡಾ ಎಂಬ ಶಬ್ದಕ್ಕರ್ಥ.

೧೩೫. ನೆಲ ಹುಟ್ಟದಂದಿನ ದವಳಾರ ದವಳಾರದೊಳಗೊಬ್ಬ ಸೂಳೆ ನೋಡಯ್ಯಾ! ತಲೆಯಿಲ್ಲದಾತ ಸಿಚ್ಚಕ್ಕೆ ಬಪ್ಪ ಕರುಳಿಲ್ಲದಾತ ಕುಂಟ

ಣಿಯಾದ ನೋಡಯ್ಯಾ! ಕೈಕಾಲಿಲ್ಲದೆ ಅಪ್ಪಲೊಡನೆ ಇದ ಕಂಡು ಬೆರಗಾದೆ ಗುಹೇಶ್ವರಾ!

ಟೀಕುಃ—ನೆಲನೆಂದರೆ ತನು ಆ ತನುವೆಂಬ ಭಾವ ತಲೆದೋರದೆ ಇಪ್ಪ ಶರಣನ ಮಹಾನುಭಾವಾಂತರಂಗವೆಂಬ ದವಳಾರದೊಳಗೆ ಚಿಚ್ಛಕ್ತಿ ಎಂಬ ಸ್ತ್ರೀ ಇಪ್ಪಳೆಂಬುದೀಗ ನೆಲಹುಟ್ಟದಂದಿನ ದವಳಾರ ದವಳಾರದೊಳಗೊಬ್ಬ ಸೂಳೆ ನೋಡಯ್ಯಾ ಎಂಬ ಶಬ್ದಕ್ಕರ್ಥ. ಆ ಚಿಚ್ಛಕ್ತಿಯ ಸಂಗಕ್ಕೆ ತಲೆಯಿಲ್ಲದ ಪರಮಾತ್ಮನೆಂಬ ಪುರುಷನ ಸಾನ್ನಿಧ್ಯವಾಗುತ್ತಿರಲು ತಲೆಇಲ್ಲದಾತ ನಿಚ್ಚಕ್ಕೆ ಬಪ್ಪನೆಂಬ ಶಬ್ದಕ್ಕರ್ಥ. ಆ ತಲೆಯಿಲ್ಲದ ಪರಮಾತ್ಮನನ್ನು ಆ ಚಿಚ್ಛಕ್ತಿಯನು ಸಂಗವ ಮಾಡಿಸಿಕೊಡುವರಾರೆಂದರೆ ಸಕಲ ಕರಣಂಗಳೆಂಬ ಕರುಳು ಒಡಲೊಳಗಿಲ್ಲದೆ ನಿರ್ದೇಹಿಯಾಗಿಪ್ಪ ಅಂತರಾತ್ಮನು ಕಾರಣನಾಗಿಪ್ಪನೆಂಬುದೀಗ ಕರುಳಿಲ್ಲದಾತ ಕುಂಟಣಿಯಾದ ನೋಡಯ್ಯಾ ಎಂಬ ಶಬ್ದಕ್ಕರ್ಥ. ಇಂತಪ್ಪ ಶರಣ ಸತಿ ಆ ಪರಮಾತ್ಮನೆಂಬ ಪುರುಷನನ್ನು ಅಭಿನ್ನ ಹಸ್ತದಿಂ ಪಿಡಿದು ನಿರ್ಗಮನದಿಂ ಸಮರಸ ಸಂಗವ ಮಾಡಲು ತಾನು ತಾನಾಗಿರ್ದನೆಂಬುದೀಗ ಕೈಕಾಲಿಲ್ಲದೆ ಅಪ್ಪಲೊಡನೆ ಇದ್ದ ಕಂಡು ಬೆರಗಾದೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೩೬. ಪರತತ್ವದೊಳಗಿರಬಲ್ಲಡೆ ಉಣಲಾಗದು ಉಣದಿರಲಾಗದು ಎಲ್ಲರ ಸಂಗದಲ್ಲಿರಲಾಗದು ಮತ್ತೊಬ್ಬನಿರಲಾಗದು. ತಾಯಿ ಸತ್ತ ಅರು ದಿಂಗಳಿಗೆ ತಾ ಹುಟ್ಟಿದ ಮೂಲ ಗುಹೇಶ್ವರ.

ಟೀಕುಃ— ಪರಶಿವತತ್ವವೇದಿಯಾದ ಶರಣನು ಭಿನ್ನ ರುಚಿಯನುಣಲಾಗದು ಪ್ರಸನ್ನ ಪರಿಣಾಮ ಸುಖವ ಸವಿಯದೆ ಇರಲಾಗದೆಂಬುದೀಗ ಪರತತ್ವದೊಳಗಿರಬಲ್ಲಡೆ ಉಣಲಾಗದು ಉಣದಿರಲಾಗದು ಎಂಬ ಶಬ್ದಕ್ಕರ್ಥ. ಆ ಸುಜ್ಞಾನಿ ಲೋಕ ಪ್ರಪಂಚಗಳ ಮಧ್ಯದಲ್ಲಿ ಇರಲಾಗದು. ಅಥವಾ ವೈರಾಗ್ಯದಿಂದ ಒಬ್ಬನೇ ಅರಣ್ಯಕ್ಕೆ ಹೋಗಲಾಗದು. ಈ ಉಭಯವನು ಅಳಿದು ನಿಸ್ಸಂಗ ಸುಖಿಯಾಗಿರಬೇಕೆಂಬುದೀಗ ಎಲ್ಲರ ಸಂಗಡ ಇರಲಾಗದು ಮತ್ತೊಬ್ಬನೆ ಇರಲಾಗದು ಎಂಬ ಶಬ್ದಕ್ಕರ್ಥ. ಈ ನಿರ್ಣಯವನರಿದ ಶರಣ ತಾನಾಗಿ ತನಗೆ ಮಾತೃ ಸ್ಥಾನವಪ್ಪ ಚಿಚ್ಛಕ್ತಿ ಅಳಿದ ಬಳಿಕ ತನ್ನ ನಿಜ ತನ್ನಲ್ಲಿ ಸ್ವಯಂಭುವಾಗಿದ್ದನೆಂಬುದೀಗ ತಾಯಿ ಸತ್ತ ಅರುದಿಂಗಳಿಗೆ ತಾ ಹುಟ್ಟಿದ್ದ ಮೂಲ ಗುಹೇಶ್ವರಾ ಎಂಬ ಶಬ್ದಕ್ಕರ್ಥ.



೧೩೭. ಸುಳಿಯ ಬಲ್ಲಡೆ ಸುಳಿಯಲೆ ಸ್ವೈ ಗಮನವಿಲ್ಲದೆ ಸುಳಿಯ ಬಲ್ಲಡೆ ನಿರ್ಗಮನಿಯಾಗಿ ನಿಲ್ಲಬಲ್ಲಡೆ ಅದಕ್ಕದೆ ಪರಿಣಾಮ, ಅದಕ್ಕದೆ ಸಂತೋಷ ಗುಹೇಶ್ವರ ಲಿಂಗದಲ್ಲಿ ಅವರೆ ಜಗದಾರಾಧ್ಯರೆಂಬೆನು.

ಟೀಕುಃ— ಲಿಂಗ ಮುಂತಾಗಿ ಸುಳಿಯದೆ ಲಿಂಗಭಾವ ಮುಂತಾಗಿ ಸುಳಿಯ ಬಲ್ಲಡೆ ಸುಳುಹೆ ಲೇಸು. ಸುಳಿದು ಬಂದು ನಿರ್ಗಮನಿಯಾಗಿ ಇರದೆ ಪರಿಪೂರ್ಣ ತತ್ವವೇದಿಯಾಗಿ ನಿರ್ಗಮನಿಯಾಗಿರಬಲ್ಲಡೆ ಆ ನಿರ್ಗಮನವೇ ಲೇಸು. ಇಂತಪ್ಪ ನಿರ್ಣಯವುಳ್ಳವರು ಅವರು ಪರಮಾರಾಧ್ಯರೆಂಬುದೀ ವಚನದ ತಾತ್ಪರ್ಯಾರ್ಥ.

೧೩೮ ತಾ ನಡೆವಡೆ ನಡೆಗೆಟ್ಟ ನಡೆಯ ನಡೆವುದಯ್ಯಾ! ತಾ ನುಡಿವಡೆ ನುಡಿಗೆಟ್ಟ ನುಡಿಯ ನುಡಿವುದಯ್ಯಾ! ರೂಹಿಲ್ಲದ ಸಂಗವ ಮಾಡಬೇಕು. ಭಾವವಿಲ್ಲದ ಭಕ್ತಿಯ ಮಾಡಬೇಕು. ತಾನಾವನೆಂದರಿಯದಂತಿಹುದು ಗುಹೇಶ್ವರಾ.

ಟೀಕುಃ— ಲಿಂಗವಿಕಾರಭಾವವಳಿದ ಲಿಂಗಗೂಡಾದ ಶರಣ ನಡೆದಡೆ ನಡೆದೆನೆಂದರಿಯ. ನುಡಿಯುತ್ತಿಹ ನುಡಿಯ ತಾ ನುಡಿದೆನೆಂದರಿಯ ನಿರಾಳಲಿಂಗದಲ್ಲಿ ಸಂಗಿಯಾಗಿಹ. ಅಲ್ಲಿ ಸಂಗಿಯಾದೆನೆಂದರಿಯ. ಭಕ್ತಿಯ ಮಾಡುತ್ತಿಹ ನಾಮಾಡಿದೆನೆಂದರಿಯನು. ಅದೇನುಕಾರಣವೆಂದರೆ ಆತ ಮಾಡುವ ಸತ್ಕ್ರಿಯೆಗಳೆಲ್ಲವನು ಆತನ ನವಗ್ರಹಿಸಿಕೊಂಡಿಹ ಲಿಂಗ ಮಾಡುತ್ತಿಹುದಲ್ಲದೆ ಆತನದನೇನೆಂದು ಅರಿಯದಪರಮಕಾಷ್ಠೆಯಲ್ಲಿ ಮುಗ್ಧನಾಗಿಹನೆಂಬುದೀ ವಚನದ ತಾತ್ಪರ್ಯಾರ್ಥ.

೧೩೯ ಕಾಲಿಲ್ಲದ ಗಮನ ಕೈಯಿಲ್ಲದ ಸೋಂಕು ಬಾಯಿಲ್ಲದ ರುಚಿ ಭಾವವೆ ಕರ್ಪುರವಾಗಿ ಪರಮದೇಹಿಯೆಂಪು ಬೇಡುವ ಪರಮನ ತೋರಯ್ಯಾ ಗುಹೇಶ್ವರಾ?

ಟೀಕುಃ—ಸರ್ವಾಂಗಲಿಂಗ ಸಂಬಂಧಿಯಾದ ಶರಣನು ಲಿಂಗದೊಳಗೆ ತಾನಳಿದು ಆ ಲಿಂಗವೇ ಉಳಿದ ಬಳಿಕ ಆ ಲಿಂಗಪಿಂಡದ ನಡೆ ನುಡಿ ಸರ್ವ ತನುಗುಣಭಾವಂಗಳೆಲ್ಲವು ಲಿಂಗದ ಗುಣಂಗಳಲ್ಲದೆ ಆತಂಗೆ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೪೦. ಕಣ್ಣೇ ಕಟ್ಟಿಗೆಯಾಗಿ ಕೈಯೇ ಕರ್ಪುರವಾಗಿ ಕಿವಿಯೇ ಸಕಲ ಪುರಾತನರ ಕಾರುಣ್ಯವೆನುತ ಮನದ ಭಿಕ್ಷವನುಂಡು ತನು ಪರಿಣಾಮವ ನೆಯ್ದಿಹ ಘನಮಹಿಮರ ತೋರಾ ಗುಹೇಶ್ವರಾ.

ಟೀಕುಃ--ಕಂಗಳೊಳಗಿಪ್ಪ ರೂಪಗ್ರಹಣವೆಂಬ ಹಸ್ತದೊಳಗೆ ಸುಜ್ಞಾನವೆಂಬ ಲಾಕುಳವ ಪಿಡಿದು ಕರಸ್ಥಲದೊಳಗೆ ಸರ್ವಾಚಾರಸಂಪತ್ತಿನ ಪಾತ್ರ ಸ್ವರೂಪವುಪ್ಪ ಲಿಂಗವ ಹಿಡಿದು ಕೊಂಡು ಇರುತ್ತಿಪ್ಪುದೀಗ ಕಣ್ಣೇ ಕಟ್ಟಿಗೆಯಾಗಿ ಕೈಯ್ಯೇ ಕರ್ಪುರವಾಗಿ ಎಂಬ ಶಬ್ದಕ್ಕರ್ಥ. ಅಂತು ಆ ಲಿಂಗವ ಧರಿಸಿಕೊಂಡು ಕರ್ಣದೊಳಗೆ ಮಹಾನುಭಾವಿಗಳ ಉಪದೇಶಾಮೃತವ ಹಡದು ಮನದಲ್ಲಿ ಲಿಂಗರತಿ ಭಿಕ್ಷವನುಂಡು ಆತನು ಲಿಂಗ ಪ್ರಸಾದ ಪರಿಣಾಮದಲ್ಲಿ ಸುಖವನೆಯ್ದಿಪ್ಪಾತನೆ ಅಚ್ಚ ಶರಣನೆಂಬುದೀಗ ಕಿವಿಯೇ ಸಕಲ ಪುರಾತನರ ಕಾರುಣ್ಯವೆನುತ ಮನದ ಭಿಕ್ಷವನುಂಡು ತನು ಪರಿಣಾಮುವನೆಯ್ದಿಪ್ಪ ಘನ ಮಹಿಮರ ತೋರಾ ಎಂಬ ಶಬ್ದಕ್ಕರ್ಥ.

೧೪೧. ಕಂಗಳ ಕರುಳ ಕೊಯ್ದವರ ಮನದ ತಿರುಳ ಹುರಿದವರ ಮಾತಿನ ಮೊದಲ ಬಲ್ಲವರ ನೆನಗೊವ್ಮೆ ತೊರಾ ಗುಹೇಶ್ವರಾ.

ಟೀಕುಃ-- ಕಂಗಳೊಳಗೆ ಇದಿರಿಟ್ಟು ತೋರುವ ಭಿನ್ನ ರೂಪ ವಿಷಯಂಗಳೆಲ್ಲವನು ಛೇದಿಸಿ ಜ್ಞಾನ ದೃಷ್ಟಿಯನಳವಡಿಸಿಕೊಂಡಿರಲು ಆದೀಗ ಕಂಗಳ ಕರುಳ ಕೊಯ್ದವರ ಎಂಬ ಶಬ್ದಕ್ಕರ್ಥ. ಮನದೊಳಗೆ ತೋರುವ ಸಂಕಲ್ಪ ವಿಕಲ್ಪ ಮುಖ್ಯವಾದ ಸಂಶಯ ಪದಂಗಳೆಲ್ಲವನು ಜ್ಞಾನಾಗ್ನಿಯಲ್ಲಿ ದಹನವ ಮಾಡಿ ಮನೋ ಮೂರ್ತಿ ಲಿಂಗವೆಂದರಿಯುತ್ತಿರಲು ಆದೀಗ ಮನದ ತಿರುಳ ಹುರಿದವರ ಎಂಬ ಶಬ್ದಕ್ಕರ್ಥ. ವಾಗ್ವ್ಯವಹಾರದಿಂದೊದಗುವ ಭಿನ್ನ ಸುಖಂಗಳೆಲ್ಲವನು ಕೆಡಿಸಿ ನಾದ ಬಿಂದು ಕಳೆಗಳ ಸಂಚವ ನಿವೃತ್ತಿ ಮಾಡಿ ಶಬ್ದ ಮುಗ್ಧರಾದರೆಂಬುದೀಗ ಮಾತಿನ ಮೊದಲ ಬಲ್ಲವರ ಎಂಬ ಶಬ್ದಕ್ಕರ್ಥ. ಇಂತಪ್ಪ ನಿಜ ಬುದ್ಧಿಯುಳ್ಳಾತನೆ ಅಚ್ಚ ಶರಣ. ಆ ಶರಣನ ಕಂಡಾತನೆ ಕೃತಾರ್ಥನೆಂಬುದೀಗ ಎನಗೊವ್ಮೆ ತೋರಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೪೨. ಆದಿ ಪುರ ವೇದ ಪುರ ಹಿಮ ಪುರ ಖಂಡಿತ ಅಖಂಡಿತ ಶಿವಶಿವಾ ಗಗನವ ಮನ ನುಂಗಿತ್ತು. ಆದಿ ವೇದವ ನುಂಗಿತ್ತು. ವೇದ ಸ್ವಯಂಭುವ ನುಂಗಿ ಕಾಲ ಕರ್ಮ ಹಿಂಗಿತ್ತು ಗುಹೇಶ್ವರಾ ನಿಮ್ಮ ಶರಣಂಗೆ.

ಟೀಕುಃ--ಆದಿ ಪುರವೆಂದರೆ ಚಿದ್ಬಿಂದು ಪಿಂಡ ವೇದಪುರವೆಂದರೆ ನಾದವೆಂಬ ಪಿಂಡ. ಹಿಮ ಪುರವೆಂದರೆ ಶಾಂತಿರೂಪವಪ್ಪ ಕಳಾಪಿಂಡ.



ಅಂತು ಬಿಂದು ನಾದ ಕಳೆಯೆಂಬ ಈ ಪಿಂಡ ತ್ರಯಂಗಳು ಖಂಡಿತವಾಗಿಪ್ಪವೆಂಬುದೀಗ ಆದಿ ಪುರ ವೇದ ಪುರ ಹಿಮ ಪುರ ಖಂಡಿತ ನೋಡಾ ಎಂಬ ಶಬ್ದಕ್ಕರ್ಥ. ಆ ನಾದ ಬಿಂದು ಕಳೆ ತ್ರಯಂಗಳೊಳಗೆ ಲಿಂಗ ಕಳಾ ಪ್ರಸನ್ನತೆ ನೆಲೆಗೊಳಲು ಅದೇ ಖಂಡಿತವಳಿದು ಅಖಂಡಿತ ರೂಪಾಯಿತ್ತೆಂಬುದೀಗ ಅಖಂಡಿತ ಶಿವಶಿವಾ ಎಂಬ ಶಬ್ದಕ್ಕರ್ಥ. ಇಂತಾದ ಕಾರಣ ಆತ್ಮಾಕಾಶವನು ಮನವನವಗ್ರಹಿಸಿತ್ತೆಂಬುದೀಗ ಗಗನವ ಮನ ನುಂಗಿತ್ತೆಂಬ ಶಬ್ದಕ್ಕರ್ಥ. ಇಂತು ಮನದೊಳ್ಗೆ ಆತ್ಮತತ್ವ ಗ್ರಾಹಕವಾಗಿ ಪರಮಾತ್ಮ ಸ್ವರೂಪ ಪ್ರಕಾಶವಾಗಲು ಆ ಚಿದ್ಬಿಂದುವಿನೊಳಗೆ ಆ ನಾದವಡಗಿ ಆ ನಾದದೊಳಗೆ ಕಳೆಯಡಗಿ ಇಂತು ನಾದ ಬಿಂದು ಕಳೆಗಳು ನಿರ್ವಯಲನೆಯ್ದಿದವೆಂಬುದೀಗ ಆದಿ ವೇದವನುಂಗಿ, ವೇದ ಸ್ವಯಂಭುವ ನುಂಗಿ ಎಂಬ ಶಬ್ದಕ್ಕರ್ಥ. ಇಂತಪ್ಪ ಶರಣ ಕಾಲ ಕಲ್ಪಿತ ಉಪಾಧಿ ರಹಿತನಾಗಿದ್ದನೆಂಬುದೀಗ ಕಾಲ ಕರ್ಮ ಹಿಂಗಿತ್ತು ಗುಹೇಶ್ವರಾ ನಿಮ್ಮ ಶರಣಂಗೆ ಎಂಬ ಶಬ್ದಕ್ಕರ್ಥ.

೧೪೩ ಮನದೊಳಗೆ ಘನವು ವೇದ್ಯವಾದ ಬಳಿಕ ಪುಣ್ಯವಿಲ್ಲ. ಪಾಪವಿಲ್ಲ. ಸುಖವಿಲ್ಲ. ದುಃಖವಿಲ್ಲ. ಕಾಲ ಕರ್ಮವಿಲ್ಲ. ಜನನವಿಲ್ಲ. ಮರಣವಿಲ್ಲ. ಗುಹೇಶ್ವರಾ! ನಿಮ್ಮ ಶರಣನು ಘನಮಹಿಮ ನೋಡಯ್ಯಾ!

ಟೀಕುಃ--ಮನದೊಳಗೆ ಮಹಾಘನ ಪರಬ್ರಹ್ಮವೆಡೆಗೊಂಡು ಆ ಮನ ಪರಬ್ರಹ್ಮದೊಳಗೆ ಲಯವಾಗಿ ಇಪ್ಪ ಶಿವಶರಣಂಗೆ ಪುಣ್ಯ ಪಾಪ ಸ್ವರ್ಗ ನರಕ ಸುಖ ದುಃಖ ಮೊದಲಾದ ಆವ ದುರ್ಗುಣಂಗಳೇನು ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೪೪. ಬೋನದೊಳಗೊಂದು ಆನೆ ಇದ್ದಿತ್ತು. ಬೋನ ಬೆಂದಿತ್ತು. ಆನೆ ಬದುಕಿತ್ತು. ಇದೇನು ಸೋಜಿಗವಯ್ಯ! ದೇವ ಸತ್ತ ದೇವಿ ಕೆಟ್ಟಳು ಆನು ಬದುಕಿದೆನು ಗುಹೇಶ್ವರಾ.

ಟೀಕುಃ-- ಬೋನವೆಂದರೆ ಆತ್ಮತತ್ವ, ಆತ್ಮ ತತ್ವದ ಮಧ್ಯದೊಳಗೆ ಎನ್ನ ನಾನರಿದೆನೆಂಬ ಅಹಂಕಾರ ತಲೆದೋರುತ್ತಿದ್ದಿತೆಂಬುದೀಗ ಬೋನದೊಳಗೊಂದಾನೆ ಇದ್ದಿತ್ತು ಎಂಬ ಶಬ್ದಕ್ಕರ್ಥ. ಆ ಅಹಂಕಾರವನು ಮಹಾಜ್ಞಾನಾಗ್ನಿಯಿಂದ ದಹನವ ಮಾಡಲು ಆತ್ಮತತ್ವವಳಿದು ನಿಜಾಹಂಕಾರ ಉಳಿಯಿತ್ತೆಂಬುದೀಗ ಬೋನ ಬೆಂದಿತ್ತು, ಆನೆ ಉಳಿ

ಯಿತ್ತು, ಎಂಬ ಶಬ್ದಕ್ಕರ್ಥ. ಇಂತಾದಕಾರಣ ಶಿವ ಶಕ್ತಿ ಭಾವಂಗಳೆ
ರಡು ಅಳಿದು ಶಿವ ಶರಣ ತಾನೆ ಲಿಂಗವಾಗಿ ಉಳಿದನೆಂಬುದೀಗ ದೇವ
ಸತ್ತ, ದೇವಿ ಕೆಟ್ಟಳು, ಆನು ಬದುಕಿದೆನೆಂಬ ಶಬ್ದಕ್ಕರ್ಥ.

೧೪೫. ಪರುಷಕ್ಕೆ ಬೆಲೆಇಲ್ಲ. ಪ್ರಾಣಕ್ಕೆ ನಿರ್ಮಾಲ್ಯವಿಲ್ಲ. ರುಚಿಗೆ
ಎಂಜಲವಿಲ್ಲ. ಸುಖಕ್ಕೆ ಅರೋಚಕವಿಲ್ಲ. ಗುಹೇಶ್ವರಾ ನಿಮ್ಮ ಶರಣಂಗೆ
ಭವವಿಲ್ಲ, ಬಂಧನವಿಲ್ಲಯ್ಯಾ!

ಟೀಕುಃ— ತನ್ನ ಪಾವನವ ಮಾಡಿದ ಗುರೂಪದೇಶವೆಂಬ ಪರು
ಷಕ್ಕೆ ತಾನೊಂದು ಕೊಟ್ಟು ತೃಪ್ತಿ ಬಡಿಸಿಹೆನೆಂಬುದಿಲ್ಲ ಎಂಬುದೀಗ
ಪರುಷಕ್ಕೆ ಬೆಲೆಇಲ್ಲವೆಂಬ ಶಬ್ದಕ್ಕರ್ಥ. ಪ್ರಾಣವೇ ಲಿಂಗಕ್ಕೆ ಅರ್ಪಿತ
ವಾದ ಬಳಿಕ ಆ ಪ್ರಾಣವೆ ಲಿಂಗ, ಲಿಂಗವೇ ಪ್ರಾಣವಾದ ಕಾರಣ ಆ
ಪ್ರಾಣಲಿಂಗಕ್ಕೆ ಪೂಜಿಸಿಹೆನೆನಲಿಲ್ಲ. ನಿರ್ಮಾಲ್ಯವ ಕಳೆದೆನೆಂದಡೆ ತಿರಹವಿ
ಲ್ಲವೆಂಬುದೀಗ ಪ್ರಾಣಕ್ಕೆ ನಿರ್ಮಾಲ್ಯವಿಲ್ಲವೆಂಬ ಶಬ್ದಕ್ಕರ್ಥ. ಶಿವ ಸುಖ
ಪ್ರಸನ್ನವೆಡೆಗೊಂಡು ಪರಿಣಾಮವೇ ತಾನಾದ ಬಳಿಕ ಅಲ್ಲಿ ಉಚ್ಛಿಷ್ಟ
ವೆಂಬ ಭಾವ ಸೂತಕವಿಲ್ಲವೆಂಬುದೀಗ ರುಚಿಗೆ ಎಂಜಲವಿಲ್ಲ ವೆಂಬ
ಶಬ್ದಕ್ಕರ್ಥ. ಪರಮಾನಂದ ವೆಡೆಗೊಂಡು ತಾನು ತಾನಾದ ಬಳಿಕ
ಸಂಸಾರವನರಿದು ಹೇಸಿಹೆನೆಂಬ ಭಿನ್ನ ಬುದ್ಧಿಯಿಲ್ಲವೆಂಬುದೀಗ ಸುಖಕ್ಕೆ
ಅರೋಚಕವಿಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ ನಿರ್ಣಯವನರಿದ ನಿಜ
ಶರಣಂಗೆ ಭವ ಬಂಧನವಿಲ್ಲವೆಂಬುದೀಗ ಗುಹೇಶ್ವರಾ ನಿಮ್ಮ ಶರಣಂಗೆ
ಭವವಿಲ್ಲ ಬಂಧನವಿಲ್ಲವೆಂಬ ಶಬ್ದಕ್ಕರ್ಥ.

೧೪೬. ಅಮೃತ ಸೇವನೆಯ ಮಾಡಿ ಆಪ್ಯಾಯನ ಘನವಾಯಿತ್ತು
ಪರುಷ ವೇದಿಯ ಸಾಧಿಸ ಹೋದರೆ ದಾರಿದ್ರ್ಯಘನವಾಯಿತ್ತು ಕಂಡೆ.
ಮರುಜೀವಣಿಯ ಹಣ್ಣು ಮೆದ್ದು ಮರಣವಾಯಿತ್ತು ಕಂಡೆ. ಇವೆಲ್ಲ
ವನು ಸಾಧಿಸಹೋದರೆ ಏನೂ ಇಲ್ಲದಂತಾಯಿತ್ತು. ನಾನು ನಿಜವ
ಸಾಧಿಸಿ ಬದುಕಿದೆನು ಗುಹೇಶ್ವರಾ.

ಟೀಕುಃ— ಶಿವಸುಖಪ್ರಸನ್ನವೆಂಬ ಪರಮಾಮೃತವ ಸೇವನೆಯು
ಮಾಡಲು ನಿತ್ಯತೃಪ್ತಿಯೇ ಸಾಧ್ಯವಾಯಿತ್ತೆಂಬುದೀಗ ಅಮೃತ ಸೇವನೆ
ಮಾಡೆ ಆಪ್ಯಾಯನ ಘನವಾಯಿತ್ತೆಂಬ ಶಬ್ದಕ್ಕರ್ಥ. ಪರುಷವೆಂಬ ಪರ
ವಸ್ತುವ ಸಾಧಿಸಲು ತನುಮನಧನಗಳೆಲ್ಲವು ಪ್ರಯವಾಗಿ ರುಣವೆಡೆ



ಗೊಂಡಿತ್ತೆಂಬುದೀಗ ಪರುಷ ವೇದಿಯ ಸಾಧಿಸ ಹೋದರೆ ದಾರಿದ್ರ್ಯ
ಘನವಾಯಿತ್ತೆಂಬ ಶಬ್ದಕ್ಕರ್ಥ. ಜನನ ಮರಣ ರಹಿತವೆಂಬ ನಿತ್ಯ ಪರಿ
ಪೂರ್ಣ ಪರಮಾನಂದ ರಸದ ತೊಟ್ಟು ಬಿಟ್ಟ ಫಲವನವಗ್ರಹಿಸಲು
ತನ್ನಲ್ಲಿ ತಾನು ಲೀಯ್ಯವಾದನೆಂಬುದೀಗ ಮರುಜೀವಣಿಯ ಹಣ್ಣು ಮೆದ್ದು
ಮರಣವಾಯಿತ್ತು ಕಂಡೆನೆಂಬ ಶಬ್ದಕ್ಕರ್ಥ. ಇವ ಸಾಧಿಸಿಹೆನೆಂಬೈಸ
ಕ್ಕರ ಜ್ಞಾತೃ ಜ್ಞಾನ ಜ್ಞೇಯವೆಂಬ ಮಿಥ್ಯೆ ಇಲ್ಲವಾಯಿತೆಂಬುದೀಗ
ಇವೆಲ್ಲವ ಸಾಧಿಸ ಹೋದರೆ ಏನೂ ಇಲ್ಲದಂತಾಯಿತ್ತೆಂಬ ಶಬ್ದಕ್ಕರ್ಥ.
ಇಂತಪ್ಪ ನಿಜವ ಸಾಧಿಸಿ ಸುಖಿಯಾಗಿರ್ದನೆಂಬುದೀಗ ನಾನು ನಿಜವ
ಸಾಧಿಸಿ ಬದುಕಿದೆನಯ್ಯಾ ಎಂಬ ಶಬ್ದಕ್ಕರ್ಥ.

೧೪೭. ಒಂದು ಇಲ್ಲದ ಬಿಂದುವ, ತಂದೆಯಿಲ್ಲದ ಕಂದನ, ಮಾತೆ
ಯಿಲ್ಲದ ಜಾತನ, ಗಮನವಿಲ್ಲದ ಗಮ್ಯನ, ಮೂವರರಿಯದ ಮುಗ್ಧನ.
ಠಾವ ತೋರಿಸು ಗುಹೇಶ್ವರಾ!

ಟೀಕುಃ— ಆವ ಪ್ರಪಂಚು ಹೊದ್ದದೆ ಇಪ್ಪುದೀಗ ಚಿತ್ತೆಂಬ ಬಿಂದು
ಆ ಬಿಂದುವೇ ಶಿವಶರಣ ದೇಹವೆಂಬುದೀಗ ಒಂದೂ ಇಲ್ಲದ ಬಿಂದುವ
ಎಂಬ ಶಬ್ದಕ್ಕರ್ಥ. ಆ ಶರಣನು ಶಿವಶಕ್ತಿಸಂಯೋಗ ಮಥನದಿಂದಲುದ
ಯಿಸಿದ ತನ್ನಿಂದ ತಾನೇ ಸ್ವಯಂಭುವಾಗಿ ಉದಯಿಸಿದನೆಂಬುದೀಗ ತಂ
ದೆಯಿಲ್ಲದ ಕಂದನ ಮಾತೆಯಿಲ್ಲದ ಜಾತನ ಎಂಬ ಶಬ್ದಕ್ಕರ್ಥ. ಆ ಶರ
ಣನ ನಿರ್ಗಮನವೇ ನಿಲವಾಗಿ ನಿಂದು ಗಮಿಸಿದರೆ ಗಮನ ಭಾವವಿಲ್ಲದೆ
ಇಪ್ಪನೆಂಬುದೀಗ ತಂದೆಯಿಲ್ಲದ ಕಂದನ ಮಾತೆಯಿಲ್ಲದ ಜಾತನ ಎಂಬ
ಶಬ್ದಕ್ಕರ್ಥ. ಆ ಶರಣನ ನಿರ್ಗಮನವೇ ನಿಲವಾಗಿ ನಿಂದು ಗಮಿಸಿದರೆ
ಗಮನ ಭಾವವಿಲ್ಲದೆ ಇಪ್ಪನೆಂಬುದೀಗ ಗಮನವಿಲ್ಲದ ಗಮ್ಯನ ಎಂಬ ಶಬ್ದ
ಕ್ಕರ್ಥ. ಆ ಶರಣನು ಬ್ರಹ್ಮ ವಿಷ್ಣು ರುದ್ರರೆಂಬ ತ್ರಿ ದೇವತೆಗಳರಿಯದ
ಪರಮ ಮುಗ್ಧನು ಆ ಶರಣನ ಕಂಡಾತನೆ ಕೃತಾರ್ಥನೆಂಬುದೀಗ ಮೂವ
ರರಿಯದ ಮುಗ್ಧನ ಠಾವ ತೋರಿಸು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೪೮. ಪೂರ್ವ ಬೀಜ ಬ್ರಹ್ಮಚರ್ಯವೆ? ಅರಿವು ತಾ ಬ್ರಹ್ಮಚ
ರ್ಯವೆ? ಜ್ಞಾನಾಜ್ಞಾನೋದಯ ತಾ ಬ್ರಹ್ಮಚರ್ಯವೆ? ಗುಹೇಶ್ವರಾ,
ನಿಮ್ಮ ಶರಣರ ಪರಿಣಾಮವೇ ಬ್ರಹ್ಮಚರ್ಯವು.

ಟೀಕುಃ— ಮಾತಾಪಿತೃಗಳ ಶುಕ್ಲ ಶೋಣಿತ ಸಂಗದಿಂದಾದ ಕಾ
ಯದ ಹಂಗು ಹಿಂಗದೆ ಆವ ವ್ರತ ನೇಮ ಬ್ರಹ್ಮಚರ್ಯಂಗಳ ಹಿಡಿ

ದಡೆಯು ಅವು ವ್ಯರ್ಥವೆಂಬುದೀಗ ಪೂರ್ವ ಬೀಜ ಬ್ರಹ್ಮಚರ್ಯವೆಂಬ ಶಬ್ದಕ್ಕರ್ಥ. ಘಟಪಟಾದಿಗಳನಿದಿರಿಟ್ಟುಕೊಂಡು ಅರಿವುತ್ತಿಹ ಹಾಗೆ ಪರವಸ್ತುವ ತನ್ನಿಂದಿದಿರಿಟ್ಟು ಅರಿಯುತ್ತಿಹ ಭಿನ್ನ ಜ್ಞಾನ ತಾನು ಅರಿದಲ್ಲವೆಂಬುದೀಗ ಅರಿವು ತಾ ಬ್ರಹ್ಮಚರ್ಯವೆಂಬ ಶಬ್ದಕ್ಕರ್ಥ. ಇದು ಸುಜ್ಞಾನದರಹು. ಇದು ಅಜ್ಞಾನದ ಸ್ಥಿತಿಯೆನ್ನದೆರಡನು ವಿಚಾರಪರದಿಂದ ತಿಳಿಯುತ್ತಿರ್ದ ಜ್ಞಾನಾಜ್ಞಾನ ಸಂಬಂಧ ತಾನು ಅರಿವಲ್ಲವೆಂಬುದೀಗ ಜ್ಞಾನಾಜ್ಞಾನ ಉದಯ ತಾ ಬ್ರಹ್ಮಚರ್ಯವೇ ಎಂಬ ಶಬ್ದಕ್ಕರ್ಥ. ಇವಾವವು ಶರಣಂಗೆ ಬ್ರಹ್ಮಚರ್ಯವಲ್ಲ. ಮತ್ತೆ ಹೇಗೆಂದರೆ ತನ್ನ ನಿಜವ ತಾನೆ ಅರಿದು ತನ್ನಲ್ಲಿ ತಾನು ಪರವಸ್ತು ಆದರೆ ಅದೇ ಬ್ರಹ್ಮಚರ್ಯವೆಂಬುದೀಗ ಗುಹೇಶ್ವರಾ ನಿಮ್ಮ ಶರಣರ ಪರಿಣಾಮವೇ ಬ್ರಹ್ಮಚರ್ಯವೆಂಬ ಶಬ್ದಕ್ಕರ್ಥ.

೧೪೯. ನೆಳಲ ಹೂಳಿಹನೆಂದು ಬಳಲುತ್ತಿದೆ ಜಗವೆಲ್ಲ. ನೆಳಲು ಸಾಯ ಬಲ್ಲುದೆ? ಲಿಂಗಪ್ರಾಣಿಗಳಿಗೆ ಸಮುದ್ರದಾಚೆಯ ತಡೆಯಲ್ಲಿ ಕಳ್ಳನ ಕಂಡು ಇಲ್ಲಿಂದ ಮುನಿದು ಬೈದರೆ ಅವ ಸಾಯಬಲ್ಲನೆ? ಭಾವದಲ್ಲಿ ಹೊಲಿದ ಹೊಲಿಗೆಯ ಭೇದವನರಿಯರು ಕಾಮಿಸಿದವರುಂಟೇ ನಮ್ಮ ಗುಹೇಶ್ವರ ಲಿಂಗವ?

ಟೀಕು:— ನೆಳಲೆಂದರೆ ಮಾಯೆ, ಮಾಯೆಯ ಗೆದ್ದಿಹನೆಂದು ಸಮಸ್ತ ಯೋಗಿಗಳೆಲ್ಲ ಮರುಳಾಗಿ ಹೋದರೆಂಬುದೀಗ ನೆಳಲ ಹೂಳಿಹೆನೆಂದು ಜಗವೆಲ್ಲ ಬಳಲುತ್ತಿದೆ ಎಂಬ ಶಬ್ದಕ್ಕರ್ಥ. ಆ ಮಾಯೆಯ ಮಾಯೆಯೆಂದು ಭಾವಿಸುತ್ತ ಮತ್ತೂ ಗೆದ್ದಿಹೆನೆಂದರೆ ಮತ್ತೂ ಇದಿರಿಟ್ಟು ತೋರುತ್ತಿಹದಲ್ಲದೆ ನಿವೃತ್ತಿಯಾಗದೆಂಬುದೀಗ ನೆಳಲು ಸಾಯಬಲ್ಲುದೆ ಅಂಗ ಪ್ರಾಣಿಗಳಿಗೆ ಎಂಬ ಶಬ್ದಕ್ಕರ್ಥ. ತನ್ನಲ್ಲಿ ತಾನು ಸನ್ನಿಹಿತವಾಗಲರಿಯದೆ ಅನ್ಯವಿಟ್ಟು ಶಿವನಂದಿಹೆನೆಂದರೆ ಕಾಣಬಾರದೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೫೦. ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ ಸಕಲ ವೇದಶಾಸ್ತ್ರಗಳೆಂಬ ನೇಣ ಕಟ್ಟಿ ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ. ಭ್ರಾಂತಿಯೆಂಬ ತಾಯಿ ತೊಟ್ಟಿಲು ಮುರಿದು ನೇಣು ಹರಿದು ಜೋಗುಳ ನಿಂದಲ್ಲದೆ ಗುಹೇಶ್ವರನೆಂಬ ಲಿಂಗವ ಕಾಣಬಾರದು.



ಟೀಕು:— ಅಂಗದ ಮೇಲೆ ಅಜ್ಞಾನ ಭಾವ ಹಿಂಗದೆ ಇಪ್ಪವರು ಅಂತರಂಗದೊಳಗೆ ಜ್ಞಾನವ ಧರಿಸಿಕೊಂಡು ವೇದಶಾಸ್ತ್ರಂಗಳ ಬಲದಿಂದ ವಾಗದ್ವೈತವ ನುಡಿವ ನುಡಿಯೆಲ್ಲವು ಮಾಯಾಧೀನವೆಂಬುದೀಗ ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ ವೇದ ಶಾಸ್ತ್ರಂಗಳೆಂಬ ನೇಣ ಕಟ್ಟಿ ಹಿಡಿದು ತೂಗಿ ಜೋ ಜೋ ಎಂದು ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ ಎಂಬ ಶಬ್ದಕ್ಕರ್ಥ. ಆ ದೇಹ ಭಾವವಳಿದು ಭವಪಾಶ ಛೇದನವಾಗಿ ಉಲುಹು ಅಡಗಿದಲ್ಲದೆ ಲಿಂಗವ ಕಾಣಬಾರದೆಂಬುದೀಗ ತೊಟ್ಟಿಲ ಮುರಿದು ನೇಣ ಹರಿದು ಜೋಗುಳ ನಿಂದಲ್ಲದೆ ಗುಹೇಶ್ವರನೆಂಬ ಲಿಂಗವ ಕಾಣಬಾರದೆಂಬ ಶಬ್ದಕ್ಕರ್ಥ.

೧೫೧. ಮೋಟರ ಮದುವೆಗೆ ಭಂಡರು ಹರೆಯ ಹೊಯಿದು ಮೂಕೊರತೆಯರು ಕಳಸವ ಹೊತ್ತರಲ್ಲಾ! ಉಘೇ ಚಾಂಗು ಭಲಾ ಯೆಂದು ನಿಬ್ಬಣ ನೆರೆದು ಹುದಂಬುಲಕ್ಕೆ ಮುನಿದರಿದೇನೋ ಅಯ್ಯಾ! ತ್ರಿಜಗವೆಲ್ಲಾ ನಿಬ್ಬಣ ಹೋಯಿತ್ತು ಗುಹೇಶ್ವರನರಿಯದ ಹಗರಣವು.

ಟೀಕು:— ಲಿಂಗವನರಿದು ಆ ಲಿಂಗದಲ್ಲಿ ಸಮರಸವಹ ಭೇದವ ತಿಳಿಯಲರಿಯದ ಅಜ್ಞಾನಿಗಳ ಸಂಭ್ರಮವೆಲ್ಲವು ಬೀದಿಯ ಭಂಡಾಟದ ಹಗರಣದಂತಿದ್ದಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

೧೫೨. ಜ್ಯೋತಿ ಕಂಡಿರಲು ಕತ್ತಲೆ ಕಂಡ. ನಿಧಾನ ಕಂಡಿರಲು ಬಡತನ ಕಂಡ. ಪ್ರಸಾದ ಕಂಡುಕೊಂಡಡೆ ಪ್ರಳಯ ಕಂಡ. ಗುಹೇಶ್ವರನ ಕಂಡು ಇದು ಭ್ರಾಂತಿ ಕಂಡ್ಯಾ.

ಟೀಕು:— ಜ್ಯೋತಿಯಿರುತ್ತಿರಲು ಕತ್ತಲೆ ಬಿಡದೆಂಬವನಜ್ಞಾನಿ. ನಿಧಾನ ಸನ್ನಿಧಿಯಲ್ಲಿರುತ್ತಿರಲು ಬಡತನ ಹೋಗದೆಂಬುವ ಮೂರ್ಖ ಪ್ರಾಣಿ ಪ್ರಸಾದವ ಕೊಂಡು ಜನನ ಮರಣವ ಗೆಲಲರಿಯದವ ಭ್ರಾಂತ ಸೂತಕಿ. ಕರಸ್ಥಲದಲ್ಲಿ ಲಿಂಗವಿರುತ್ತಿರಲು ಭವ ಹಿಂಗದೆಂಬವನಜ್ಞಾನಿ ಎಂಬುದೀ ವಚನದ ತಾತ್ಪರ್ಯಾರ್ಥ.

೧೫೩. ಜಲದೊಳಗೆ ಹುಟ್ಟಿ ನೆಲದೊಳಗೆ ಹುದುಗಿರ್ದುದ ಕೆಲಬಲದೊಳಗಿರ್ದವರೆಲ್ಲ ಬಲ್ಲರೆ! ಗಾಳಿಯೊಳಗಿಪ್ಪ ಜ್ಯೋತಿ ಕೆಡದೆ ಇದ್ದುದ ಕಂಡು ನಾನು ಬೆರಗಾದೆ ಬಾಲಕ್ರೀಡೆಯೊಳಗಾಡುತಿಪ್ಪ ನಾರಿಯ ಮಕ್ಕ

ಳೈವರು ಆರೂ ಕಾಣದ ಬಾವಿಯೊಳಗೆ ಬಿದ್ದಿರಲು ಬೇರೆ ಮತ್ತೆ ಜ್ಞಾನವೆಲ್ಲಿಯದೊ ಗುಹೇಶ್ವರಾ! ನಿಮ್ಮ ನರಿಯದ ಬರಿಯರಿವಿನ ಹಿರಿಯರ ಕಂಡರೆ ನಾನು ನಾಚುವೆನಯ್ಯಾ!

ಟೀಕುಃ— ಜಲಬುದ್ಬುದವುಪ್ಪ ಪಿಂಡದೊಳಗೆ ಉದಯಿಸಿ ಆ ತನುವೆಂಬ ಭೂಮಿಯೊಳಗೆ ಹುದುಕೊಂಡಿಪ್ಪ ಮಾಯೆಯನು ಆರೂ ಅರಿಯ ಬಾರದೆಂಬುದೀಗ ಜಲದೊಳಗೆ ಹುಟ್ಟಿ ನೆಲದೊಳಗೆ ಹುದುಗಿರ್ದುದ ಕೆಲಬಲದೊಳಗಿರ್ದ್ದವರೆಲ್ಲ ಬಲ್ಲರೆ ಎಂಬ ಶಬ್ದಕ್ಕರ್ಥ. ಆ ಪ್ರಾಣವಾಯುವಿನ ಮಧ್ಯದಲ್ಲಿ ಅಡಗಿಪ್ಪ ಜ್ಞಾನಜ್ಯೋತಿ ಅಲ್ಲಿಯೇ ತದ್ಗತವಾಗಿದ್ದುದನಾರು ತಿಳಿಯ ಬಾರದೆಂಬುದೀಗ ಗಾಳಯೊಳಗಿರ್ದ್ದ ಜ್ಯೋತಿ ಕೆಡದೆ ಇದ್ದುದ ಕಂಡು ಬೆರಗಾದೆನೆಂಬ ಶಬ್ದಕ್ಕರ್ಥ. ಆವ ಸ್ವಬುದ್ಧಿ ಸ್ವವಿರಕ್ತಿಯು ತಲೆದೊರದೆ ಅಪ್ರಬುದ್ಧಿಕೆಯಿಂದಿಪ್ಪ ಶಿಶುವಿನ ಹಾಂಗೆ ಭ್ರಾಂತಿ ಕ್ರೀಡೆಯಿಂದಿಪ್ಪಳು ಮಾಯೆಯೆಂಬುದೀಗ ಬಾಲಕ್ರೀಡೆಯೋಳಾಡುತಿಪ್ಪ ನಾರಿ ಎಂಬ ಶಬ್ದಕ್ಕರ್ಥ. ಆ ಮಾಯೆಯಿಂದ ಉತ್ಪನ್ನವಾದ ಪಂಚಕರಣಂಗಳು ಗೂಢವುಪ್ಪ ಸಂಸಾರ ರಸವೆಂಬ ವಿಷಯ ಕೂಪದಲ್ಲಿ ಬಿದ್ದು ದುಃಕರಣಂಗಳಾಗಿದ್ದವೆಂಬುದೀಗ ನಾರಿಯ ಮಕ್ಕಳೈವರು ಆರು ಕಾಣದ ಭಾವಿಯೊಳಗೆ ಬಿದ್ದಿರಲು ಎಂಬ ಶಬ್ದಕ್ಕರ್ಥ. ಇಂತಪ್ಪ ಅಜ್ಞಾನದೊಳಗಿಪ್ಪವರೆಲ್ಲರು ಸುಜ್ಞಾನಿಗಳಾದೆವೆಂದು ನುಡಿವ ವಾಗದ್ವೈತಿಗಳೆಲ್ಲರು ಮಿಥ್ಯೆಯೆಂಬುದೀಗ ಬೇರೆ ಮತ್ತೆ ಜ್ಞಾನವೆಲ್ಲಿಯದೋ ಗುಹೇಶ್ವರಾ ನಿಮ್ಮನರಿಯದ ಬರಿಯರಿವಿನ ಹಿರಿಯರ ಕಂಡಡೆ ನಾಚುವೆನಯ್ಯ ಎಂಬ ಶಬ್ದಕ್ಕರ್ಥ.

೧೫೪ ಕುಲಮದ ಛಲಮದ ವಿದ್ಯಾಮದದವರ ತೋರದಿರಾ. ಅವರ ಆರೂಢ ಪದವಿಯನೆನಗೆ ತೋರದಿರಾ. ಅವರ ಗರ್ವಗಂಭೀರತನವೆನಗೆ ತೋರದಿರಾ. ಶಮೆದಮೆಯುಳಿದು ದಶಮುಖನಿಂದ ಲಿಂಗದಲ್ಲಿ ಲೀಯ್ಯವಾದವರನಲ್ಲದೆ ಎನಗೆ ತೋರದಿರಾ ಗುಹೇಶ್ವರಾ.

ಟೀಕುಃ— ಅಂತರಂಗ ಬಹಿರಂಗ ಶುದ್ಧವಾಗಿ ದಶವಾಯು ವಿಕಾರನೆಂದು ಲಿಂಗದಲ್ಲಿ ಲೀಯ್ಯವಾದ ಶಿವಶರಣರು ಇದನರಿಯದ ಅಜ್ಞಾನಿಗಳೆಲ್ಲರು ಭವದುಃಖ ಜೀವಿಗಳೆಂಬುದೀ ವಚನದ ತಾತ್ಪರ್ಯಾರ್ಥ.



೧೫೫. ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರ ಗೋಷ್ಠಿ. ತರ್ಕವೆಂಬುದು ಟಗರ ಹಾರಟೆ. ಭಕ್ತಿಯೆಂಬುದು ತೋರಿ ಉಂಬ ಲಾಭ. ಗುಹೇಶ್ವರನೆಂಬುದು ಮೀರಿದ ಘನವು.

ಟೀಕುಃ— ವೇದ ಶಾಸ್ತ್ರ ಆಗಮ ಪುರಾಣವೆಲ್ಲವು ಪ್ರಪಂಚ ಮಿಥ್ಯೆ ಭಕ್ತಿಯೆಂಬುದು ಫಲದಾಯಕ. ಇವನುಳಿದು ಲಿಂಗದಲ್ಲಿ ಸಮವೇದಿಸಿದರೆ ಅದು ಶರಣ ಸಂಬಂಧವೆಂಬುದೀ ವಚನದ ತಾತ್ಪರ್ಯಾರ್ಥ.

೧೫೬. ಆಶೆಯೆಂಬ ಶೂಲದ ಮೇಲೆ ವೇಷವೆಂಬ ಹೆಣನ ಕುಳ್ಳಿರಿಸಿ ಧರೆಯ ಮೇಲುಳ್ಳ ಹಿರಿಯರು ಹಿಂಗೆ ಸವೆದರು ನೋಡಾ. ಆಶೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು ಹೇಸಿಕೆಯಾಯಿತ್ತು ಗುಹೇಶ್ವರಾ.

ಟೀಕುಃ— ಆಶಾಪಾಶವಲ್ಲಿ ಬದ್ಧರಾಗಿರುತ್ತ ಮತ್ತೆ ಇಲ್ಲದ ಹಿರಿಯತನವ ನೀಗಿಸಿಕೊಂಡು ವಾಗದ್ವೈತವನಾಡುತ್ತಿಪ್ಪವರೆಲ್ಲರು ಭವಭಾರಿ ಜೀವಿಗಳಲ್ಲದೆ ಅವರು ಸುಜ್ಞಾನಿಗಳಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೫೭. ಧರೆಯ ಮೇಲುಳ್ಳ ಅರುಹಿರಿಯರೆಲ್ಲರು ಮರುಳು ಕೊಂಡಾಡುತ್ತಿದ್ದಾರೆ ನೋಡಾ! ಮಂಜಿನ ಮಡಿಕೆಯೊಳಗೆ ರಂಜನೆಯ ಖಂಡವ ತುಂಬಿ ಅಂಜದೆ ಪಾಕವ ಮಾಡಿಕೊಂಡು ಉಂಡು ಖಂಡವ ಮಾರುತಿಪ್ಪರು ನೋಡಾ! ಸಂಜೀವನೆಯ ಬೇರೆ ಕಾಣದೆ ಮರಣಕ್ಕೊಳಗಾದರು ಗುಹೇಶ್ವರನರಿಯದ ಭವಭಾರಕರೆಲ್ಲರು.

ಟೀಕುಃ— ಭೂಮಿಯ ಮೇಲುಳ್ಳ ಹಿರಿಯರೆಲ್ಲರು ಭ್ರಾಂತುಗೊಂಡು ಅಭ್ರಚ್ಛಾಯ ಮಾತ್ರವಪ್ಪ ತನುವೆಂಬ ಭಾಂಡದೊಳಗೆ ಬಹುವರ್ಣ ಕರ್ಮಂಗಳೆಂಬ ಸುಯಿಧಾನವ ತುಂಬಿ ತಾಪತ್ರಯಾಗ್ನಿಯಲ್ಲಿ ಪಾಕವ ಮಾಡುತ್ತಿದ್ದರೆಂಬುದೀಗ ಧರೆಯ ಮೇಲುಳ್ಳ ಅರುಹಿರಿಯರೆಲ್ಲರು ಮರುಳುಗೊಂಡಾಡುತ್ತಿದ್ದಾರೆ. ಮಂಜಿನ ಮಡಿಕೆಯೊಳಗೆ ರಂಜನೆಯ ಖಂಡವ ತುಂಬಿ ಅಂಜದೆ ಪಾಕವ ಮಾಡುತ್ತಿರ್ದ್ದರೆಂಬ ಶಬ್ದಕ್ಕರ್ಥ. ಇಂತು ದುರ್ವಿಷಯ ಸುಖ ಭೋಗಂಗಳ ಅನುಭವಿಸಿ ಇಲ್ಲದ ಜ್ಞಾನದ ಮಾತಿನ ಪಸರವನಿಕ್ಕಿ ವ್ಯವಹರಿಸುತ್ತಿದ್ದರೆಂಬುದೀಗ ಅಂಜದೆ ಪಾಕವ ಮಾಡಿಕೊಂಡುಂಡು ಖಂಡವ ಮಾರುತ್ತಿಪ್ಪರು ನೋಡಾ ಎಂಬ ಶಬ್ದಕ್ಕರ್ಥ. ಆ

ಹಿರಿಯರೆಲ್ಲರು ಜನನಮರಣರಹಿತವೆಂಬ ನಿತ್ಯ ಪರಿಪೂರ್ಣದ ಮೂಲಜ್ಞಾನವನರಿಯದೆ ಭವಭಾರಿಗಳಾದರೆಂಬುದೀಗ ಸಂಜೀವನಿಯ ಬೇರೆ ಕಾಣದೆ ಮರಣಕ್ಕೊಳಗಾದರು ಗುಹೇಶ್ವರಾ ನಿಮ್ಮನರಿಯದ ಭವಭಾರಕರೆಲ್ಲರು ಎಂಬ ಶಬ್ದಕ್ಕರ್ಥ.

೧೫೮. ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಮನೆಮನೆದಪ್ಪದೆ ತಿರುಗುವ ತುಡುಗುಣಿಯಂತೆ ಕಾಡಲಾಗದು ಭಕ್ತನ. ಬೇಡಲಾಗದು ಭವಿಯ. ಕಾಡಿಯೂ ಬೇಡಿಯೂ ಒಡಲ ಹೊರೆದರೆ ಬೇಂಟೆಯ ಶ್ವಾನವೊಲಕ್ಕೆ ಬಾಯಿದೆರದಂತೆ ಗುಹೇಶ್ವರಾ.

ಟೀಕು:— ಮಹಾಲಿಂಗವೇ ಭಕ್ತಿಕಾರಣವಾಗಿ ಕರಸ್ಥಲಕ್ಕೆ ಕ್ರಿಯಾರೂಪಾಗಿ ಬಂದಿರುತ್ತಿರಲು ಆ ಲಿಂಗದಲ್ಲಿ ಬೆರಸಿ ಪರಮಸುಖನ ಸುಖಿಸದರಿಯದೆ ಅನ್ಯವಿಷಯಂಗಳಿಗೆರಗಿ ಆಶಾಪಾಶದಲ್ಲಿ ಬದ್ಧರಾಗಿಪ್ಪವರೆಲ್ಲರು ಜ್ಞಾನಿಗಳಲ್ಲ ಅವರು ಭವಕ್ಕೆ ಭಾಜನರಾಗಿಪ್ಪರೆಂಬುದೀ ವಚನದ ತಾತ್ಪರ್ಯಾರ್ಥ.

೧೫೯. ಬಾಯೇ ಭಗವಾಗಿ ಕೈಯೇ ಇಂದ್ರಿಯವಾಗಿ ಹಾಕುವ ತುತ್ತುಗಳೆಲ್ಲ ಬಿಂದು ಕಾಣಿ ಭೊ! ಪ್ರಥಮ ವಿಷಯ ವಿಂತಿರಲು ಗುಹೇಶ್ವರಾ ಏಕೋದ್ವೈತಾ.

ಟೀಕು:— ಭಿನ್ನ ವಿಷಯಂಗಳಿಗೆರಗಿ ಅನ್ನೋದಕವನುಂಡು ಒಡಲ ಹೊರೆಯುತ್ತಿಪ್ಪರು. ಮತ್ತೆ ಮಾತಿನೊಳಗೆ ಸರ್ವ ವಿಷಯಂಗಳನು ಬಿಟ್ಟೆವೆಂದು ಗಳಹುತ್ತಿಪ್ಪ ವಾಗ್ಬ್ರಹ್ಮವಾದಿಗಳೆಲ್ಲರು ಅಜ್ಞಾನಿಗಳೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೬೦. ಜ್ಞಾನು ಜಂಗೆಯಲ್ಲಿ ಹುಟ್ಟೆ ಜಂಗಮರೆನಿಸಿಕೊಳಬಹುದೇ? ಆ ಠಾವು ಹಿಂಗದಡೆ ಭಂಗಿತನು ಕಂಡ್ಯಾ? ಅಂತರಂಗ ಒಡಗೂಡದನರಿಯರು ಗುಹೇಶ್ವರನೆಂಬುದು ಮೀರಿದ ಘನವು.

ಟೀಕು:— ಅಂತರಂಗದಲ್ಲಿ ಸುಜ್ಞಾನ ಪರಿಪೂರ್ಣವಾಗಿ ಬಹಿರಂಗದಲ್ಲಿ ಶಮೆ ದಮೆ ಶಾಂತಿ ಕಾಣಬರುತ್ತ ಸದ್ಭಕ್ತಿ ಭಿಕ್ಷವ ಬೇಡುತ್ತ ಸುಳಿವುದೀಗ ಜಂಗಮ ಸ್ಥಲಕ್ಕೆ ಲಕ್ಷಣ. ಈ ಮರ್ಮದ ಭೇದವನರಿಯದೆ ಅಂತರಂಗದಲ್ಲಿ ಅಜ್ಞಾನವೆಡೆಗೊಂಡು ಬಹಿರಂಗದಲ್ಲಿ ವೇಷ ಲಾಂಛನವ



ಧರಿಸಿ ಉಪಾಧಿಯಿಂದ ಸುಳಿವುದು ಜಂಗಮ ಸ್ಥಲಕ್ಕೆ ಲಕ್ಷಣವಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೬೧. ಜಂಗಮ ಸ್ಥಲಕ್ಕೆ ಲಕ್ಷಣವಾವುದೆಂದರೆ ಹೇಳುವೆ ಕೇಳಿರಣ್ಣಾ! ಮೂರರ ಹೊಲಿಗೆಯ ಬಿಚ್ಚಿ ಆರು ಮಾಡಬೇಕು. ಆರರ ತಿರುಳ ತೆಗೆದು ಒಂದರೊಳಗೆ ನಿಲಿಸಬೇಕು. ಐದರ ಮುಸಕನುಗಿದು ಐದರ ಕಳೆಯ ಕೆಡಿಸಿ ಐದರ ನಿಲವನಡಗಿಸಿ ಮೂರರ ಮುದ್ರೆಯನೊಡೆದು ನಾಲ್ಕರೊಳಗೆ ನಿಲ್ಲದೆ ಮೂರು ಮುಖವು ಒಂದು ಭಾವವಾಗಿರಬೇಕು. ಈ ಭೇದವನರಿಯದೆ ಸುಳಿವವರ ಕಂಡು ಬೆರಗಾದೆ ಕಾಣಾ ಗುಹೇಶ್ವರಾ!

ಟೀಕು:— ಜಂಗಮಸ್ಥಲಕ್ಕೆ ಲಕ್ಷಣವೆಂತೆಂದರೆ ಸ್ಥೂಲ ಸೂಕ್ಷ್ಮ ಕಾರಣವೆಂಬ ಕಾಯತ್ರಯಂಗಳ ಸಂಚವ ಕೆಡಿಸಿ ಭಕ್ತ ಮಹೇಶ್ವರಸ್ಥಲವೆಂಬ ಎರಡನು ಸ್ಥೂಲ ತನುವಿನ ಮೇಲೆ ಪ್ರತಿಷ್ಠಿಸಿ ಪ್ರಸಾದಿ ಪ್ರಾಣಲಿಂಗಿ ಎಂಬ ಎರಡು ಸ್ಥಲವನು ಸೂಕ್ಷ್ಮ ತನುವಿನ ಮೇಲೆ ಪ್ರತಿಷ್ಠಿಸಿ ಶರಣ ಐಕ್ಯವೆಂಬೆರಡು ಸ್ಥಲವನು ಕಾರಣ ತನುವಿನ ಮೇಲೆ ಪ್ರತಿಷ್ಠಿಸಿ ಇಂತು ಷಡುಸ್ಥಲ ಸಂಪನ್ನನಾಗಬೇಕೆಂಬುದೀಗ ಜಂಗಮಸ್ಥಲಕ್ಕೆ ಲಕ್ಷಣವಾಯಿತೆಂದಡೆ ಹೇಳಿಹೆ ಕೇಳಿರೆ ಮೂರರ ಹೊಲಿಗೆಯ ಬಿಚ್ಚಿ ಆರ ಮಾಡಬೇಕೆಂಬ ಶಬ್ದಕ್ಕರ್ಥ. ಆ ಷಡುಸ್ಥಲವನು ಏಕಮೇವಾದ್ವಿತೀಯಂ ಬ್ರಹ್ಮವೆಂಬಲ್ಲಿ ನಿಲಿಸಿ ಸಮರಸವ ಮಾಡಬೇಕೆಂಬುದೀಗ ಆರರ ತಿರುಳ ತೆಗೆದು ಒಂದರಲ್ಲಿ ನಿಲಿಸಬೇಕೆಂಬ ಶಬ್ದಕ್ಕರ್ಥ. ಪಂಚೀಕರಣವ ಮುಸುಕಿದ ಮಾಯಾ ಪಟಲವ ತೆಗೆದು ಪಂಚೀಕರಣಂಗಳ ಪೂರ್ವ ಕಳೆಯ ಕೆಡಿಸಿ ಪಂಚಭೂತಂಗಳ ನಿಲವ ಹಿಂಗಿಸಬೇಕೆಂಬುದೀಗ ಐದರ ಸುಖವನುಗಿದು ಐದರ ಕಳೆಯ ಕೆಡಿಸಿ ಐದರ ನಿಲವನಡಗಿಸಬೇಕೆಂಬ ಶಬ್ದಕ್ಕರ್ಥ. ಮನವಾಕ್ಕಾಯ ಎಂಬ ತ್ರಿಕರಣಂಗಳ ಹೃದಯದ ಗಂಟನೊಡೆಯಬೇಕೆಂಬುದೀಗ ಮೂರರ ಮುದ್ರೆಯನೊಡೆಯಬೇಕೆಂಬ ಶಬ್ದಕ್ಕರ್ಥ. ಅಂತಃಕರಣ ಚತುಷ್ಟಯಂಗಳ ಭ್ರಮೆಗೆ ಸಿಲುಕದೆ ಜ್ಞಾತೃ ಜ್ಞಾನ ಜ್ಞೇಯಂಗಳೆಂಬ ಅವಗುಣವನರಿದು ತ್ರಿವಿಧವನು ತನ್ನೊಳಗೆ ಏಕೀಭವಿಸಿ ಇರಬೇಕೆಂಬುದೀಗ ನಾಲ್ಕರೊಳಗೆ ನಿಲ್ಲದೆ ಮೂರರ ಮುಖ ಒಂದೇ ಭಾವವಾಗಿರಬೇಕೆಂಬ ಶಬ್ದಕ್ಕರ್ಥ. ಈ ಭೇದವನರಿವಡೆ ಆತನೆ

ಅಚ್ಚ ಜಂಗಮ. ಅಂತಪ್ಪ ಸುಳುಹೆ ಲೋಕಪಾವನ. ಇದನರಿಯದೆ ಸುಳಿ
ವವರೆಲ್ಲ ಉದರ ಪೋಷಕರು. ವೇಷ ಲಾಂಛನ ಡಂಭಕರೆಂಬುದೀ ವಚ
ನದ ತಾತ್ಪರ್ಯಾರ್ಥ.

೧೬೨ ಹಗಲನಿರುಳು ಮಾಡಿ ಇರುಳ ಹಗಲ ಮಾಡಿ ಆಚಾರವ
ಅನಾಚಾರವ ಮಾಡಿ ಅನಾಚಾರವ ಆಚಾರವ ಮಾಡಿ ಭಕ್ತರ ಭವಿಯ
ಮಾಡಿ ಭವಿಯ ಭಕ್ತರ ಮಾಡಿ ನುಡಿವವರ ಮಾತು ಕೇಳಲಾಗದು
ಗುಹೇಶ್ವರಾ.

ಟೀಕು:— ತಮ್ಮ ಉದರ ಕಕ್ಕುಲತೆಗೆ ಚರಿಸಿ ಬರುತ್ತ ಅಲ್ಲಿ ಧನ
ಕನಕವನಿತ್ತಡೆ ಇಲ್ಲದ ನಿರ್ವಂಚಕ ಸದ್ಭಕ್ತನೆ ಅಭಕ್ತರೆಂದು ಭಾವಿಸಿ
ಅನ್ನೋದಕವ ನಿಕ್ಕಿ ಫಲದಾಯಕರಪ್ಪ ಅಭಕ್ತರೆ ಸದ್ಭಕ್ತರೆಂದು ಸದಾ
ಚಾರವನೆ ಅನಾಚಾರವೆಂದು ಅನಾಚಾರವೆ ಸದಾಚಾರವೆಂದು ಇಚ್ಛೆಯ
ನುಡಿವನಕು ಬಚ್ಚನಿಗಳಲ್ಲದೆ ಅವರು ಜಂಗಮರಲ್ಲವೆಂಬುದೀ ವಚ
ನದ ತಾತ್ಪರ್ಯಾರ್ಥ.

೧೬೩. ಇಷ್ಟಲಿಂಗಕೆ ತೋರಿ ಮೃಷ್ಟಾನ್ನವ ಹೊಡೆದವರಿಗೆ ಇಷ್ಟಾ
ರ್ಥ ಸಿದ್ಧಿಯಲ್ಲಿಯದೋ? ಅದೆಲ್ಲಿಹುದೋ ಲಿಂಗ? ಆದೆಲ್ಲಿಹುದೊ
ಜಂಗಮ? ಅದೆಲ್ಲಿಹುದೋ ಪ್ರಸಾದ ಪಾದೋದಕ? ಅಲ್ಲದ ಆಟವ
ಮಾಡಿ ಎಲ್ಲರೂ ಮುಂದುಗೆಟ್ಟರು ಗುಹೇಶ್ವರಾ ನಿಮ್ಮಾಣೆ.

ಟೀಕು:— ಅಂಗೈಯ ಲಿಂಗದ ಕುರುಹ ತೋರಿಕೊಂಡು ತಮ್ಮ
ಉದರವ ಹೊರೆವ ಅಜ್ಞಾನಿಗಳಿಗೆ ಗುರು ಲಿಂಗ ಜಂಗಮ ಪಾದೋ
ದಕ ಪ್ರಸಾದವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೬೪. ಕಂಕುಳೆಂಬುದು ಕವಚಿನ ತವರಮನೆ. ಕರಸ್ಥಳವೆಂಬುದು
ಕೆಟ್ಟ ಹುಣ್ಣು. ಅಮಳೋಕ್ಯವೆಂಬುದು ಬಾಯ ಬಗದಳ. ಅಂಗಸೋಂ
ಕೆಂಬುದು ಪಾಪದ ತವರಮನೆ. ಉತ್ತಮ ಅಂಗವೆಂಬುದು ನೆತ್ತಿಯ
ಮೃತ್ಯು. ಕಂಟಕವೆಂಬುದು ಗಂಟಲ ಗಾಣ. ಮತ್ತೆ ಗುಹೇಶ್ವರನ ಮಾತು
ನಿಮಗೇಕೆಲವೋ?

ಟೀಕು:— ಸರ್ವಾಂಗವೆಂಬ ಹಸ್ತದಲ್ಲಿ ಮಹಾಜ್ಞಾನಲಿಂಗವ ಧರಿ
ಸಿದಾತನೆ ಶರಣ. ಇದನರಿಯದೆ ಅಂಗಭಾವ ಪ್ರಕೃತಿ ಹಿಂಗದೆ ಅಜ್ಞಾನ
ಅಳಿಯದೆ ಕಕ್ಷೆ ಕರಸ್ಥಲ ಅಮಳೋಕ್ಯ ಅಂಗಸೋಂಕು ಉತ್ತುಮಾಂಗ



ಕಂಠವೆಂಬ ಆರು ಸ್ಥಾನದಲ್ಲಿ ಅಂಗವ ಧರಿಸಿಕೊಂಡಿಪ್ಪವರೆಲ್ಲರು ವೇಷ
ಲಾಂಛನ ಧಾರಿಗಳಪ್ಪ ಅಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೧೬೫. ಅರಿವು ಅರಿವೆನುತಿಪ್ಪಿರಿ. ಅರಿವು ಸಾಮಾನ್ಯವೇ? ಹಿಂದಣ
ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯ ನರಿಯ ಬಾರದು. ಮುಂದಣ
ಹೆಜ್ಜೆ ಅಳಿದಲ್ಲದೆ ಒಂದು ಪಾದ ನೆಲೆಗೊಳ್ಳದು. ನೆಲನ ಬಿಟ್ಟು ಆಕಾ
ಶದಲ್ಲಿ ನಿಂದು ಮುಗಿಲೊಳಗೆ ಮಿಂಚಿದಲ್ಲದೆ ತಾನಾಗಬಾರದು. ಗುಹೇಶ್ವ
ರನೆಂಬುದು ಬರಿದೆ ಬರಿದೆ ಹೇಳಿರೆ!

ಟೀಕು:— ಹಿಂದೆ ತಾನು ಶಿವತತ್ವಪದದಲ್ಲಿ ನಿಂದೆನಲ್ಲಾ ಎಂಬ
ವಿಚಾರ ತಿಳಿದಲ್ಲದೆ ತಾ ನಿಂದ ನಿಲವ ಕಾಣಬಾರದೆಂಬುದೀಗ ಹಿಂದಣ
ಹೆಜ್ಜೆಯನರಿದಲ್ಲದೆ ತಾ ನಿಂದ ನಿಲವ ಕಾಣಬಾರದೆಂಬ ಶಬ್ದಕ್ಕರ್ಥ.
ಮುಂದೆ ಚರಿಸಿಹೆನೆಂಬ ದುಃಕ್ರಿಯಾವರ್ತನಗಳನಳಿದಲ್ಲದೆ ಐಕ್ಯಪದ ನೆಲೆ
ಗೊಳ್ಳದೆಂಬುದೀಗ ಮುಂದಣ ಹೆಜ್ಜೆಯನಳಿದಲ್ಲದೆ ಒಂದುಪಾದ ನೆಲೆ
ಗೊಳ್ಳದೆಂಬ ಶಬ್ದಕ್ಕರ್ಥ. ನೆಲನೆಂದರೆ ತನು. ಆಕಾಶವೆಂದರೆ ಆತ್ಮನು.
ಅಂತೂ ದೇಹಧರ್ಮವಳಿದು ಆತ್ಮ ತತ್ವದಲ್ಲಿ ಸ್ವಸ್ಥನಾಗಿ ನಿಂದು ಮುಗಿ
ಲೆಂದರೆ ಮಾಯೆ ಆ ಮಾಯೆಯೊಳಗೆ ನಿವೃತ್ತಿ ಸುಖವನೈದಿ ಸುಜ್ಞಾನ
ಪ್ರಕಾಶವಾದಲ್ಲದೆ ತಾನು ಶಿವತತ್ವವಾಗಬಾರದೆಂಬುದೀಗ ನೆಲನ ಬಿಟ್ಟು
ಆಕಾಶದಲ್ಲಿ ನಿಂದು ಮುಗಿಲೊಳಗೆ ಮಿಂಚಿದಲ್ಲದೆ ತಾನಾಗ ಬಾರದೆಂಬ
ಶಬ್ದಕ್ಕರ್ಥ. ಈ ನಿರ್ಣಯುವನರಿಯದವರು ಶಿವಜ್ಞಾನವಳವಡದೆ ಹೋದ
ರೆಂಬುದೀ ವಚನದ ತಾತ್ಪರ್ಯಾರ್ಥ.

೧೬೬. ಹರಿದು ಹತ್ತಿ ಮುಟ್ಟಿ ಹಿಡಿದಿಹೆವೆಂದು ಜಾರಿ ಉರುಳಿ
ಬಿದ್ದರು ಅನಂತರು. ಹಿಡಿದವರೆಲ್ಲ ಹೆಣನುಂಡು ಹೋದರು. ನಾ ಹಿಡಿದ
ಬಂಡಿ ಒಡಬಂಡಿಯಾಯಿತು ಗುಹೇಶ್ವರಾ.

ಟೀಕು:— ತಾವಾರೆಂಬುದ ನರಿಯದೆ ಬ್ರಹ್ಮವನರಿದು ಕಂಡು ಹಿಡಿ
ದಿಹೆವೆಂಬ ಭಿನ್ನಜ್ಞಾನಿಗಳೆಲ್ಲರು ಆ ಬ್ರಹ್ಮಕ್ಕೆ ತಾವು ಭಿನ್ನರಾಗಿ ದೇಹ
ಧರ್ಮದೊಳಗೆ ಬಿದ್ದರೆಂಬುದೀಗ ಹರಿದು ಹತ್ತಿ ಮುಟ್ಟಿ ಹಿಡಿದಿಹವೆಂದು
ಜಾರಿ ಉರುಳಿ ಬಿದ್ದರು ಅನಂತರೆಂಬ ಶಬ್ದಕ್ಕರ್ಥ. ಆ ದೇಹಧರ್ಮಕ್ಕೆ
ಒಳಗಾಗಿ ಮೃತವಾಗಿಪ್ಪ ಸಂಸಾರ ಸುಖವನುಂಡು ತಾವು ಭಿನ್ನಜ್ಞಾನಿ
ಗಳಾಗಿ ಲಯಕ್ಕೆ ಹೋದರೆಂಬುದೀಗ ಹಿಡಿದವರೆಲ್ಲಾ ಹೆಣನುಂಡು ಹೋದ

ರೆಂಬ ಶಬ್ದಕ್ಕರ್ಥ. ಇಂತಲ್ಲದೆ ಪರಬ್ರಹ್ಮವನರಿದು ನಿಜಪದವ ಹಿಡಿದಾತನೆ ಅಚ್ಚ ಶರಣನೆಂಬುದೀಗ ನಾನು ಹಿಡಿದ ಬಂಡಿ ಒಡಬಂಡಿಯಾಯಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೬೭. ಆದಿ ಆಧಾರ ತನುಗುಣವುಳ್ಳನ್ನಕ್ಕರ ಸಮತೆಯೆಂಬುದೇಕೋ? ಕಾಲಕಲ್ಪಿತ ಉಪಾಧಿಯುಳ್ಳನ್ನಕ್ಕರ ಶೀಲವೆಂಬುದು ಭಂಗ. ಕಾಮವೆಂಬುದರ ಬೆಂಬಳಿಯು ಕೂಸಿನ ಹುಸಿಯು ತಾನೆಂದು ತಿಳಿದನ್ನಕ್ಕರ ಗುಹೇಶ್ವರಾ ನಿಮ್ಮ ನಾಮಕ್ಕೆ ನಾಚವವರ ನಾನೇನೆಂಬೆನು.

ಟೀಕು:— ಆದಿಯೆಂದರೆ ತನು ಆಧಾರವೆಂದರೆ ಪ್ರಾಣ ಈ ಉಭಯ ಕುಲವುಳ್ಳನ್ನಕ್ಕರ ಸಮತೆಯೆಂಬುದು ಘಟಿಸದು. ಕಾಲಕಲ್ಪಿತವುಳ್ಳನ್ನಕ್ಕರ ಅಂಗಕ್ಕೆ ಆಚಾರವಳವಡದು. ಮಿಥ್ಯಾ ಸಂಸಾರದ ಸುಖಕ್ಕೆ ಹರಿವ ತನ್ನ ತಾನೇ ನಾನು ಅಜ್ಞಾನಿಯೆಂದು ತಿಳಿದು ಸುಜ್ಞಾನಿಯಾಗದನ್ನಕ್ಕರ ಲಿಂಗವೆಂಬುದು ಸಾಧ್ಯವಾಗದೆಂಬುದೀ ವಚನದ ತಾತ್ಪರ್ಯಾರ್ಥ.

೧೬೮. ಮದ್ಯಮಾಂಸಾದಿಗಳ ಮುಟ್ಟೆನೆಂದೆಂಬಿರಿ. ನೀವು ಕೇಳಿರೆ ಮದ್ಯವಲ್ಲವೇನು ಅಷ್ಟಮದಂಗಳು? ಮಾಂಸವಲ್ಲವೇನು ಸಂಸಾರಸಂಗವು? ಈ ಉಭಯವನತಿಗಳಿದಾತನೆ ಗುಹೇಶ್ವರಲಿಂಗದಲ್ಲಿ ಲಿಂಗೈಕ್ಯನು.

ಟೀಕು:— ಅಷ್ಟಮದಂಗಳ ದಣಿಯುಂಡು ತನ್ನ ತಾನಾರೆಂದರಿಯದೆ ಮದಸೋಂಕಿಪ್ಪುದೀಗ ಮದ್ಯಸೇವನೆ. ಮಾಂಸಪಿಂಡದ ಸಂಸಾರದ ಸವಿಯ ಮೆಚ್ಚಿ ಅಂಗಸುಖವ ಬಿಡಲಾಗದಿಪ್ಪುದೀಗ ಮಾಂಸಭಕ್ಷಣ. ಈ ಉಭಯದ ವೃತ್ತಿಯನತಿಗಳದು ಲಿಂಗದಲ್ಲಿ ಸಹಜ ಸಂಬಂಧವಳವಟ್ಟಡೆ ಆತನೇ ಅಚ್ಚ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೬೯. ದಾರಿಗೊಂಡು ಹೋದವರೆಲ್ಲರು ನೀವು ಕೇಳಿರೆ! ಮೂರು ಬಟ್ಟೆ ಕೂಡಿದ ಠಾವಿನಲ್ಲಿ ಒಬ್ಬ ಹೆಮ್ಮಾರಿ ಇದ್ದಾಳೆ. ಆ ಮಾರಿಯ ಬಾಯೊಳಗೆ ಮೂರು ಘಟವಿಪ್ಪವು. ನಂಜಿನ ಸೋನೆ ಸುರಿಯುತ್ತಿಪ್ಪುದು. ಕಾಳಕೋಣನ ಮುಖದಲ್ಲಿ ಕತ್ತಲೆ ಕಾಣಲೀಸದು. ಐವಾಯ ಹುಲಿ ಅಗಲಿಸುತ್ತಿಪ್ಪುದು. ಇವೆಲ್ಲವ ಗೆದ್ದಲ್ಲದೆ ಗುಹೇಶ್ವರನ ಕಾಣಬಾರದು.

ಟೀಕು:— ಜಂಗಮಲಾಂಛನವ ಧರಿಸಿಕೊಂಡು ದೇಶಾಂತರವ ಚರಿಸಿ ಪರಬ್ರಹ್ಮವನರಿದಿಹೆನೆಂದೆಂಬುವರಿಗೆ ಈ ನಿರ್ಣಯವ ಹೇಳುತ್ತಿಪ್ಪದೀಗ ದಾರಿಗೊಂಡು ಹೋಹವರೆಲ್ಲರು ನೀವು ಕೇಳಿರೆ ಎಂಬ ಶಬ್ದಕ್ಕರ್ಥ.



ಇಂತು ಚರಿಸುತ್ತಿಪ್ಪವರಿಗೆ ಮೂರು ಬಟ್ಟೆಯೆಂದರೆ ಕರ್ಮಮಾರ್ಗ ಭಕ್ತಿಮಾರ್ಗ ಜ್ಞಾನಮಾರ್ಗವೆಂಬ ತ್ರಿವಿಧ ಮಾರ್ಗತ್ರಯವು ಒಂದಾದ ಠಾವಿನಲ್ಲಿ ಒಬ್ಬ ಹೆಮ್ಮಾರಿ ಇದ್ದಾಳೆಂಬ ಶಬ್ದಕ್ಕರ್ಥ. ಆ ಮಾಯೆಯ ಮುಖದ್ವಾರದೊಳಗೆ ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧವು ಘಟಂಗಳು ಬಿದ್ದಹಾಗೆ ಅಡ್ಡಗಟ್ಟಿಕೊಂಡಿರ್ಪವೆಂಬುದೀಗ ಆ ಮಾರಿಯ ಬಾಯೊಳಗೆ ಮೂರು ಘಟವಿಪ್ಪವೆಂಬ ಶಬ್ದಕ್ಕರ್ಥ. ಅಲ್ಲಿ ವಿಷಮ ಸಂಸಾರ ರಸವೆಂಬುದು ಒಸರುತಿಪ್ಪುದೆಂಬುದೀಗ ನಂಜಿನ ಸೋನೆ ಸುರಿಯುತ್ತಿಪ್ಪುದು ಎಂಬ ಶಬ್ದಕ್ಕರ್ಥ. ಕಾಡಕೋಣವೆಂದರೆ ಭವಾರಣ್ಯದೊಳಗಿಪ್ಪ ಜೀವನೆಂಬ ಪಶು. ಆ ಜೀವನೆಂಬ ಪಶುವಿನ ಮುಖದಲ್ಲಿ ಅಜ್ಞಾನ ತಿಮಿರವಾವರಿಸಿಪ್ಪದೆಂಬುದೀಗ ಕಾಡಕೋಣದ ಮುಖದಲ್ಲಿ ಕತ್ತಲೆ ಕವಿದಿಪ್ಪುದೆಂಬ ಶಬ್ದಕ್ಕರ್ಥ. ಪಂಚಭೂತೇಂದ್ರಿಯಂಗಳೆ ಮುಖವಾಗಿಪ್ಪ ಕಾಲವ್ಯಾಘ್ರನು ಅತಿ ರೌದ್ರದಲ್ಲಿಪ್ಪುದೆಂಬುದೀಗ ಈ ಐವಾಯ ಹುಲಿ ಆಕಳಿಸುತ್ತಿಪ್ಪುದೆಂಬ ಶಬ್ದಕ್ಕರ್ಥ. ಇಷ್ಟುದುರ್ಘಟಂಗಳ ಕಳೆದುದಲ್ಲದೆ ಲಿಂಗವ ಕಾಣಬಾರದೆಂಬುದೀಗ ಈ ಎಲ್ಲವ ಗೆದ್ದಲ್ಲದೆ ಗುಹೇಶ್ವರನ ಕಾಣಬಾರದೆಂಬ ಶಬ್ದಕ್ಕರ್ಥ.

೧೭೦. ಜಂಗಮ ಘನವೆಂಬೆನೆ? ಬೇಡಿ ಕಿರಿದಾಯಿತ್ತು ಲಿಂಗ ಘನವೆಂಬೆನೆ? ಕಲ್ಲು ಕುಟಿಗನ ಕೈಯಲ್ಲಿ ಮಾಡಿಸಿಕೊಂಡು ಕಿರಿದಾಯಿತ್ತು. ಭಕ್ತ ಘನವೆಂಬೆನೆ? ತನುಮನಧನದಲ್ಲಿ ವಂಚಕನಾಗಿ ಕಿರಿದಾಯಿತ್ತು. ಇಂತು ತ್ರಿವಿಧದಲ್ಲಿ ಪರಿಣಾಮವಿಲ್ಲ. ಪರಮಾರ್ಥವಿಲ್ಲ. ಘನವ ಬಲ್ಲವರಾರೋ ಗುಹೇಶ್ವರಾ!

ಟೀಕು:— ಉಪಾಧಿ ವಿಡಿದಿಪ್ಪ ಜಂಗಮರು ಉಪಾಧಿಕನ ಕೈಯೊಳಗಿಪ್ಪ ಲಿಂಗವು ಉಪಾಧಿ ಹಿಡಿದು ಮಾಡುವ ಭಕ್ತನು ಈ ತ್ರಿವಿಧವು ಪರಮಾರ್ಥಕ್ಕೆ ಸಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೭೧. ಭಕ್ತರೆಲ್ಲರು ಲಂದಣಿಗರಾಗಿ ಹೋಯಿತ್ತು. ಜಂಗಮವೆಲ್ಲವು ಉಪಜೀವಿಗಳಾಗಿ ಹೋಯಿತ್ತು. ಇದೇನು? ಇದೆಂತು? ಅರಿಯಬಾರದು ಕಾಯಗುಣನಾಸ್ತಿಯಾದಾತ ಭಕ್ತ ಪ್ರಾಣಗುಣ ನಾಸ್ತಿಯಾದಾತ ಜಂಗಮ. ಉಳಿದವೆಲ್ಲವು ಸಟೆಯೆಂಬೆ ಗುಹೇಶ್ವರಾ.

ಟೀಕು:— ಮಾಟಕೂಟದ ಭಕ್ತರೆಲ್ಲ ಮಾಡಿಕೂಡಿಹೆನೆಂಬ ಸಂಸಾರಕ್ಕೊಳಗಾಗಿ ಸಿಕ್ಕು ಹೋದರೆಂಬುದೀಗ ಭಕ್ತರೆಲ್ಲ ಲಂದಣಿಗರಾಗಿದ್ದ

ರೆಂಬ ಶಬ್ದಕ್ಕರ್ಥ. ಲಾಂಛನ ಧಾರಿಗಳೆಲ್ಲ ಮಾಡಿ ನೀಡಿಹೆವೆಂಬವರ
ನೋಡಿಹೆನೆಂದು ಹೋಯಿತ್ತೆಂಬುದೀಗ ಜಂಗಮವೆಲ್ಲ ಉಪಜೀವಿಗಳಾ
ದರು ಎಂಬ ಶಬ್ದಕ್ಕರ್ಥ. ಈ ಉಭಯವು ತಮ್ಮ ತಾವರಿಯರೆಂಬು
ದೀಗ ಇದೇನೋ ಇದೆಂತೋ ಎಂಬ ಶಬ್ದಕ್ಕರ್ಥ. ಲಿಂಗದ ಗುಣನಾಸ್ತಿ
ಯಾಗಿ ಸದಾಚಾರವೆಡೆಗೊಂಡೊಡೆ ಆತ ಭಕ್ತ. ಪ್ರಾಣಗುಣವಳಿದು
ಸುಜ್ಞಾನ ನೆಲೆಗೊಂಡಡೆ ಆತನೆ ಜಂಗಮ. ಉಳಿದವರೆಲ್ಲರು ಡಂಭಕರೆಂ
ಬುದೀ ವಚನದ ತಾತ್ಪರ್ಯಾರ್ಥ.

೧೭೨ ಜ್ಞಾನದ ಉಬ್ಬುಕೊಬ್ಬಿನಲ್ಲಿ ನುಡಿಯುತ್ತಿಪ್ಪವರಿಗೆಲ್ಲ ನಾಮ
ನಾಸ್ತಿಯಾಗದು. ತನು ಗುಣ ನಾಸ್ತಿಯಾಗದು. ಕರಣಾದಿ ಗುಣಂಗಳು
ನಾಸ್ತಿಯಾಗವು. ಇವೆತ್ತಣ ಉಲುಹೋ ಗುಹೇಶ್ವರಾ?

ಟೀಕು:— ತನುಗುಣ ಮನದ ಅಜ್ಞಾನ ಬಿಡದೆ ಕರಸ್ಥಲದ ಲಿಂಗ
ದಲ್ಲಿ ಹಂಗು ಹರಿಯದೆ ಅಭ್ಯಾಸದ ಅರಿವಿನಲ್ಲಿ ನುಡಿವವರೆಲ್ಲರು ಅಜ್ಞಾ
ನಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೧೭೩. ಜಗವಂದ್ಯರೆಂದು ನುಡಿವರು ನೋಡಾ! ಭವಬಂಧನದ
ಕುಣಿಕೆಯ ಕಳೆಯಲರಿಯರು ನೋಡಾ! ಭವ ತಮ್ಮ ತುಳಿತುಳಿದು
ಕೊಂಡಿತ್ತು ನೋಡಾ! ಶಬ್ದವೇದಿಗಳೆಂದು ನುಡಿದು ನಡೆವರು ನೋಡಾ!
ನಿಃಶಬ್ದ ವೇದಿಸದಿದ್ದರೆ ಗುಹೇಶ್ವರ ನೋಡಿ ನಗುತ್ತಿಪ್ಪ ನೋಡಾ!

ಟೀಕು:— ತಮ್ಮ ನಿಜ ತಾವರಿದು ನಿಃಶಬ್ದವೇದಿಗಳಾದವರು ಜಗ
ವೆಲ್ಲಕ್ಕೆಯು ಹಿರಿಯರು. ಈ ಭೇದವನರಿಯದೆ ಹಿರಿಯರೆನಿಸಿಕೊಂಬವರೆ
ಲ್ಲರು ಭವಭಾರಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೧೭೪. ಲೋಕದವರನೊಂದು ಭೂತ ಹಿಡಿದಡೆ ಆ ಭೂತದಿಚ್ಛೆ
ಯಲಿ ನುಡಿವುತ್ತಿಪ್ಪರು. ಲಾಂಛನಧಾರಿ ವೇಷವ ಧರಿಸಿ ಆಶೆಯಿಂದ
ಘಾಸಿಯಾಗಲೇಕಯ್ಯಾ? ಆನೆಯ ಚೋಹವ ತೊಟ್ಟು ನಾಯಾಗಿ ಬೊಗ
ಳುವರನೇನೆಂಬೆ ಗುಹೇಶ್ವರಾ?

ಟೀಕು:— ಲಿಂಗವಂಗದೊಳಗೆ ವೇದಿಸಿರುತ್ತಿರಲು ಲಿಂಗದ ನಡೆ
ಲಿಂಗದ ನುಡಿ ಲಿಂಗದ ಸರ್ವ ಕ್ರಿಯೆಗಳ ನಡೆವುದೀಗ ಸತ್ಪಥ. ಇದ
ನರಿಯದೆ ಅಂಗವಿಕಾರ ಮುಂತಾಗಿ ನಡೆ ನುಡಿ ಕ್ರಿಯೆಗಳ ಚರಿಸುವ
ರೆಲ್ಲರು ಲಿಂಗಕ್ಕೆ ದೂರವೆಂಬುದೀ ವಚನದ ತಾತ್ಪರ್ಯಾರ್ಥ.



೧೭೫. ಏನೆಂದರಿಯರು ಎಂತೆಂದರಿಯರು. ಬರುಮಾತಿನ ಬ್ರಹ್ಮ
ವನಾಡುತ್ತಿಪ್ಪರು. ರುದ್ರನ ನೊಸಲ ಕಣ್ಣ ಕಿಚ್ಚಿನೊಳಗೆ ತ್ರಿಪುರವ ಸುಡ
ಲರಿಯದೆ ಕಾಮನ ಕಣ್ಣ ಕಿಚ್ಚಿನೊಳಗೆ ತ್ರಿಪುರವ ಸುಡುತ್ತಿಪ್ಪರು.
ಭೂಮಿ ಆಕಾಶವ ಮೆಟ್ಟಿ ಕಾಮುಗಣಂಗಳ ಕೂಡ ಕಾದಿ ಗೆಲಲರಿಯದೆ
ನೀಲಗಿರಿಯ ಮೇಲೆ ನಿಂದು ಉಲಿವ ಉಯ್ಯಾಲೆಯನಾಡುತಿಪ್ಪರಯ್ಯಾ!
ಗುಹೇಶ್ವರಾ, ನಿಮ್ಮನರಿದಿಹನೆಂಬವರೆಲ್ಲಾ ಬಹು ದೂರ ಹೋದರಯ್ಯಾ!

ಟೀಕು:— ನಿಜವನರಿಯದ ಮಾತು ಬರಿಯ ವಾಗದ್ವೈತವೆಂಬು
ದೀಗ ಏನೆಂದರಿಯರು ಎಂತೆಂದರಿಯರು ಬರಿಯ ಬ್ರಹ್ಮವನಾಡುತಿಪ್ಪರು
ಎಂಬ ಶಬ್ದಕ್ಕರ್ಥ. ಅಹಂಕಾರ ಸ್ವಥಾರುದ್ರ ಎಂಬುದಾಗಿ ಅಂತಪ್ಪ
ಶಿವಾಹಂಕಾರ ಜ್ಞಾನ ಚಕ್ಷುವಿನೊಳಗೆ ತ್ರಿಪುರವೆಂಬ ಅಂಗತ್ರಯಂಗ
ಳನು ದಗ್ಧವ ಮಾಡದೆ ವಿಷಯಾಗ್ನಿಯೊಳಗೆ ತನುತ್ರಯಂಗಳ ನಷ್ಟವ
ಮಾಡುತ್ತಿಹರೆಂಬುದೀಗ ರುದ್ರನ ನೊಸಲಕಣ್ಣಕಿಚ್ಚಿನೊಳಗೆ ತ್ರಿಪುರವ
ಸುಡಲರಿಯದೆ ಕಾಮನ ಕಣ್ಣ ಕಿಚ್ಚಿನೊಳಗೆ ತ್ರಿಪುರವ ಸುಡುತ್ತಿಪ್ಪರು
ಎಂಬ ಶಬ್ದಕ್ಕರ್ಥ. ಭೂಮಿ ಆಕಾಶವೆಂಬರೆ ಅನಾತ್ಮ ತತ್ವಂಗಳು ಎಂಬೆ
ರಡು ತತ್ವಂಗಳು ಆ ಅನಾತ್ಮ ತತ್ವಂಗಳೆರಡನೂ ನಿವೃತ್ತಿ ಮಾಡಿ ಕರ
ಣಂಗಳಡಗಿಸಲರಿಯದೆ ನೀಲಗಿರಿಯೆಂಬ ಅಜ್ಞಾನಾಹಂಕಾರದ ಗಿರಿಯ
ಮೇಲೆ ಶಬ್ದಾಡಂಬರದೊಳಗೆ ಓಲಾಡುತ್ತಿಪ್ಪರೆಂಬುದೀಗ ಭೂಮಿ ಆಕಾ
ಶವ ಮೆಟ್ಟಿ ಕಾಮುಗಣಂಗಳ ಕೂಡ ಕಾದಿ ಗೆಲಲರಿಯದೆ ನೀಲಗಿರಿಯ
ಮೇಲೆ ನಿಂದು ಉಲಿವ ಉಯ್ಯಾಲೆಯನಾಡುತ್ತಿಪ್ಪರೆಂಬ ಶಬ್ದಕ್ಕರ್ಥ.
ಇಂತಪ್ಪ ವೃಥಾ ಜ್ಞಾನಾಡಂಬರದವರೆಲ್ಲರು ಕೆಟ್ಟರೆಂಬುದೀಗ ಗುಹೇ
ಶ್ವರಾ ನಿಮ್ಮ ನರಿದಿಹೆನೆಂಬವರೆಲ್ಲರು ಬಹು ದೂರ ಹೋದರೆಂಬ ಶಬ್ದ
ಕ್ಕರ್ಥ.

೧೭೬. ಗಗನದ ಮೇಘಂಗಳೆಲ್ಲ ಸುರಿದು ಭೂಮಿಯ ಮೇಲೆ ಭೂಮಿ
ದಣಿಯುಂಡು ಸಸಿಗಳೆಲ್ಲ ಬೆಳೆದವೆ. ಬಹು ವಿಕಾರದಿಂದ ಬೆಳೆದ ಸಸಿಯ
ವಿಕಾರದಿಂದ ಗ್ರಹಿಸುವ ಕಾಮುವಿಕಾರಿಗಳು ಲಿಂಗವನೆತ್ತ ಬಲ್ಲರು ಗುಹೇ
ಶ್ವರಾ?

ಟೀಕು:— ಕಾಮುವಿಕಾರದಿಂದ ಉದಯಿಸಿ ಆ ಕಾಮವಿಕಾರದ
ಸವಿಯನೆ ಉಂಡು ಮತ್ತರಾಗಿಪ್ಪ ಕಾಮುವಿಕಾರಿಗಳೆಲ್ಲ ಲಿಂಗದ ನಿಜ
ವನರಿಯರೆಂಬುದೀಗ ವಚನದ ತಾತ್ಪರ್ಯಾರ್ಥ.

೧೭೭. ಮರಸುಳ್ಳನ್ನಕ್ಕರ ಎಲೆ ಉಲಿವುದ ಮಾಬುದೆ? ಶರೀರವುಳ್ಳನ್ನಕ್ಕರ ವಿಕಾರ ಮಾಬುದೆ ಅಯ್ಯಾ? ಸುಳುಹು ಉಳ್ಳನ್ನಕ್ಕರ ಸೂತಕ ಹಿಂಗುವದೇ ಗುಹೇಶ್ವರಾ?

ಟೀಕುಃ—ಲಿಂಗದಲ್ಲಿ ಅಂಗವಿಕಾರವಳಿದ ಶರಣಂಗೆ ಅಂಗವಿಕಾರವಿಲ್ಲವಲ್ಲದೆ ಲಿಂಗಸಂಗವನರಿಯದ ಲಿಂಗಜೀವಿಗಳಿಗೆ ಲಿಂಗವಿಕಾರ ಹಿಂಗದೆಂಬುದೀ ವಚನದ ತಾತ್ಪರ್ಯಾರ್ಥ.

೧೭೮. ಅರಿವಿನ ಬಲದಿಂದ ಕೆಲಬರು ಅರಿಯದವರ ಗೆಲಬೇಕೆಂದು ಬರುಮಾತಿನ ಉಯ್ಯಲೆಯನೇರಿ ಓದಲು ಒರಲಿ ಕೆಡವ ದರಿದ್ರರು ಅರಿವು ತೋರದೆ ಇರಬೇಕು. ಕಾಯನಿರ್ಣಯ ನಿಷ್ಪತ್ತಿಯೆಂಬಾತನು ಸೋಂಕಿನ ಸೋಜಿಗವೆಂಬ ಪರಿಣತೆ ಫಲಿಸಬೇಕು. ಅರಿವು ತೋರದೆ ಎರಡೆಂಬ ಭಿನ್ನ ವೇಷವ ತೊಟ್ಟು ಡಂಭಕವ ನುಡಿದಿಹ ಉದ್ದಂಡರ ಗುಹೇಶ್ವರ ಕಂಡಡೆ ಕನಲುವ.

ಟೀಕುಃ—ತಮ್ಮ ನಿಲವ ತಾವರಿಯದೆ ಅನ್ಯರ ಕೂಡೆ ಅನುಭಾವವ ಸಂಪಾದಿಸಿ ತಾವು ಬಲ್ಲಿದರೆನಿಸಿಕೊಂಡಿಹೆವೆಂಬವರು ಅಜ್ಞಾನಿಗಳು ಕಾಯವಿಕಾರ ನಿಷ್ಪತ್ತಿಯಾದಡೆ ತನಗೆ ಅರಿವು ಇದಿರಿಟ್ಟು ತೋರದೆ ಇರಬೇಕು. ಈ ನಿರ್ಣಯವನರಿಯದವರು ಲಿಂಗಕ್ಕೆ ದ್ವೇಷಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೧೭೯. ಹೋಮವ ಮಾಡುವರ ಕಂಡೆ. ಹೊಗೆಯ ನಿಲಿಸುವರ ಕಾಣೆ. ದೂರದಾರಿಯ ನಡೆವರ ಕಂಡೆ. ಕಾಲುಗಳ ನುಂಗುವರ ಕಾಣೆ. ಅರಲುತ್ತ ಬೊಬ್ಬೆಗೊಟ್ಟು ರಣದೊಳಗೆ ಅಳಿದು ಮುಂಡ ಮುಂದೆ ನಡೆದಾಡುವರ ಕಂಡೆ. ಹರಿದ ಸಿರವ ಹಿಡಿದು ಕುಣಿದಾಡುವವರ ಕಾಣೆ ಗುಹೇಶ್ವರಾ.

ಟೀಕುಃ—ಜ್ಞಾನಾಗ್ನಿಯೊಳಗೆ ಕಾಯವೆಂಬ ಶುಷ್ಕವ ಹಾಕಿ ದಗ್ಧವ ಮಾಡುವರಲ್ಲದೆ ರೋಷ ಹರುಷ ವೈರಾಗ್ಯವೆಂಬ ಧೂಮವ ನಾರು ನಿಲಿಸಲರಿಯರೆಂಬುದೀಗ ಹೋಮವ ಮಾಡುವರ ಕಂಡೆ ಹೊಗೆಯ ನಿಲಿಸುವರ ಕಾಣೆನೆಂಬ ಶಬ್ದಕ್ಕರ್ಥ. ವಾಗದ್ವೈತವ ಬೊಬ್ಬಿಟ್ಟು ನುಡಿದು ಲಯಕಾಲದೊಳಗೆ ಅಳಿದು ಪ್ರಪಂಚವೆಂಬ ಘಟವ ಧರಿಸಿಕೊಂಡು ಸುಳಿದಾಡುವರು ಸಂಪೂರ್ಣವಾಗಿ ಕಾಣಬಹುದಲ್ಲದೆ ಸಮಸ್ತ ಕರ್ಮಂಗಗಳೆಲ್ಲವು ಹರಿದು ಸುಜ್ಞಾನವೆಂಬುದನೆ ಬಲುವಿಡಿದು ಸ್ವಲೀಲೆಯಿಂದ



ಪರಮಾನಂದದೊಳಗೆ ಓಲಾಡುವರ ಕಾಣೆನೆಂಬುದೀಗ ಅರಲುತ್ತ ಬೊಬ್ಬೆಗೊಟ್ಟು ರಣದೊಳಗೆ ಅಳಿದು ಮುಂಡ ಮುಂದೆ ನಡದಾಡುವರ ಕಂಡೆ ಹರಿದ ಶಿರವ ಹಿಡಿದು ಕುಣಿದಾಡುವರ ಕಾಣೆ ಕಾಣಾ ಎಂಬ ಶಬ್ದಕ್ಕರ್ಥ.

೧೮೦. ಹೊನ್ನ ತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ? ಸನ್ನಿಹಿತರಾದೆವೆಂಬ ನುಡಿಗೆ ನಾಚರು ನೋಡಾ! ಕನ್ನದಲ್ಲಿ ಸವೆದ ಕಬ್ಬುಣದಂತೆ ಮುನ್ನ ಹೋದ ಹಿರಿಯರು ಲಿಂಗದ ಸುದ್ದಿಯನರಿಯರು. ಇನ್ನಾರು ಬಲ್ಲರು ಹೇಳಾ ಗುಹೇಶ್ವರಾ.

ಟೀಕುಃ—ಲಿಂಗಾನುಭಾವದ ಮಾತು ಬಾಯಿಗೆ ಬಂದಂತೆ ನುಡಿದು ನಾವು ನಮ್ಮಲ್ಲಿ ಸನ್ನಿಹಿತರಾದೆವೆಂಬ ವಾಗ್ಬ್ರಹ್ಮವಾದಿಗಳು ಲಿಂಗಸಂಬಂಧಕ್ಕೆ ದೂರರೆಂಬುದೀ ವಚನದ ತಾತ್ಪರ್ಯಾರ್ಥ.

೧೮೧. ಶಬ್ದಿಯಾದಾತ ತರುಗಳ ಹೋತ. ನಿಃಶಬ್ದಿಯಾದಾತ ಪಾಷಾಣವ ಹೋತ. ಕೊಪಿಯಾದಾತ ಅಗ್ನಿಯ ಹೋತ. ಶಾಂತನಾದಾತ ಜಲವ ಹೋತ. ಬಲ್ಲೆನೆಂಬಾತ ಇಲ್ಲವೆಯ ಹೋತ. ಅರಿವೆನೆಂಬಾತ ಪಶುವ ಹೋತ. ಇದುಕಾರಣ ಅರಿಯನೆನ್ನದೆ ಬಲ್ಲೆನೆನ್ನದೆ ಅರಿವಿನ ಕುರುಹನಳಿದುಳಿದು ಗುಹೇಶ್ವರನೆಂಬ ಲಿಂಗವ ಹೋತವರನಾರನು ಕಾಣೆ.

ಟೀಕುಃ—ಲಿಂಗದಲ್ಲಿ ನಿಜವನರಿದು ತನ್ನ ಕುರಹ ತಾನೇ ಅಳಿದು ತಾನೇ ತಾನಾಗಿ ಉಳಿದಾತನೆ ಶರಣನು. ಇವಲ್ಲದೆ ಬರಿಯ ಜ್ಞಾನದಲ್ಲಿ ಚರಿಸುವ ಹಲವು ಪಥಗಳೆಲ್ಲವು ಲಿಂಗಸಂಬಂಧಕ್ಕೆ ಸಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೮೨. ನಾದದ ಉತ್ಪತ್ತಿಸ್ಥಿತಿಲಯವನು ಹೇಳಿದಡೇನು! ಕೇಳಿದಡೇನು! ಎಲೆ ಮರುಳೇ? ಬಿಂದು ಧವಳದ ಉತ್ಪತ್ತಿಸ್ಥಿತಿಲಯವನ್ನು ಹೇಳಿದಡೇನು! ಎಲೆ ಮರುಳೇ ಮುಗಿಲಗಲದ ಅಂಬರವಾಯುವು ಅಗ್ನಿ ಜಲ ಧರೆಯ ಹೊತ್ತುಕೊಂಡು ಅವ ಹೇಳಿವಡೇನು! ಕೇಳಿದಡೇನು! ಎಲೆ ಮರುಳೆ ಗುಹೇಶ್ವರ ಲಿಂಗದ ಬೋಧೆಗೊಳಗಾಗಿ ಇವೆಲ್ಲವನುಂಟು ಮಾಡಲರಿಯನಾಗಿ ಎನಗಿಲ್ಲವೆನುತಿದ್ದೆನಯ್ಯಾ!

ಟೀಕುಃ—ನಾನು ಶಬ್ದದೊಳಗೆ ಸಿಕ್ಕಿ ಆ ನಾದದ ಅನುವ ಹೇಳುವ ಜ್ಞಾನ ಪ್ರಯೋಜನವಲ್ಲವೆಂಬುದೀಗ ನಾವದ ಉತ್ಪತ್ತಿಸ್ಥಿತಿಲಯವನು ಹೇಳಿದಡೇನು ಕೇಳಿದಡೇನು ಎಲೆ ಮರುಳೆ ಎಂಬ ಶಬ್ದಕ್ಕರ್ಥ. ಮಾಂಸ

ಬಿಂದುವಿನ ಹಂಗಿನೊಳಗೆ ತಾನಿದ್ದು ಬಿಂದು ಧವಳದ ಸ್ಥಿತಿಗತಿಯ ಹೇಳಿದರೆ ಆ ಜ್ಞಾನ ಪ್ರಯೋಜನವಲ್ಲವೆಂಬುದೀಗ ಬಿಂದು ಧವಳದ ಉತ್ಪತ್ತಿ ಸ್ಥಿತಿಲಯವನು ಹೇಳಿದಡೇನು ಕೇಳಿದಡೇನು ಎಲೆ ಮರುಳೆ ಎಂಬ ಶಬ್ದಕ್ಕರ್ಥ. ಸಂಸಾರದಲ್ಲಿ ಕಳತ್ರದಲ್ಲಿ ತಾ ಸಿಲ್ಕಿದ್ದು ಕಳೆಯ ಭೇದವನಾಡುವ ಜ್ಞಾನ ಪ್ರಯೋಜನವಲ್ಲವೆಂಬುದೀಗ ಮಧ್ಯ ದಳದ ಉತ್ಪತ್ತಿ ಸ್ಥಿತಿ ಲಯವನು ಹೇಳಿದಡೇನು ಕೇಳಿದಡೇನು ಎಲೆ ಮರುಳೇ ಎಂಬ ಶಬ್ದಕ್ಕರ್ಥ. ಪಂಚಭೂತಪಿಂಡಗಳ ತಾವು ಧರಿಸಿದ್ದು ಆ ಪಂಚಭೂತಂಗಳ ಉತ್ಪತ್ತಿಯನು ಹೇಳುವ ಜ್ಞಾನ ಪ್ರಯೋಜನವಲ್ಲವೆಂಬುದೀಗ ಮುಗಿಲ ಗಲದ ಅಂಬರವಾಯು ಅಗ್ನಿ ಜಲ ಧರೆಯ ಹೊತ್ತುಕೊಂಡು ಅವ ಹೇಳಿದಡೇನು ಕೇಳಿದಡೇನು ಎಲೆ ಮರುಳೆ ಎಂಬ ಶಬ್ದಕ್ಕರ್ಥ. ಇಂತಪ್ಪ ಗುಣಂಗಳ ಹಂಗು ತಾನು ಹರಿಯದೆ ಇಪ್ಪ ಕಾರಣ ಅವ ನುಡಿಯಲಿಲ್ಲ ಇವನರಿದು ತೋರದಾತ ನುಡಿವಡು ಒಪ್ಪದೆಂಬುದೀಗ ಗುಹೇಶ್ವರ ಲಿಂಗದ ಬೋಧೆಗೊಳಗಾಗಿ ಇವೆಲ್ಲವನುಂಟು ಮಾಡಲರಿಯನಾಗಿ ಎನಗಿಲ್ಲವೆನುತಿರ್ದೆನಯ್ಯಾ ಎಂಬ ಶಬ್ದಕ್ಕರ್ಥ.

೧೮೩. ಮುಂದಣೂರಿಗೆ ಬಟ್ಟೆ ಇದೆ ಹೋಗೆಂದಡೆ ಅಂಧಕನೇನು ಬಲ್ಲನು ಹೇಳಾ! ಸಂಗ್ರಾಮದಲ್ಲಿ ಓಡಿದ ಹಂದೆ ಗೆಲಬಲ್ಲನೆ ಹೇಳಾ! ನಿಂದ ನಿಲವಿನ ಮಡುವ ಕಂದಸೀಸಾಡಬಲ್ಲನೆ ಹೇಳಾ! ಗುಹೇಶ್ವರನೆಂಬ ನಿರಾಳದ ಘನವ ಪಂಚೇಂದ್ರಿಕನೆತ್ತಬಲ್ಲನು ಹೇಳಾ!

ಟೀಕು:— ಅಂಧಕ ಪಥವ ಕಾಣಲರಿಯನೆಂಬಂತೆ ಹಂದೆ ಸಂಗ್ರಾಮವ ಜಯಿಸಲರಿಯನೆಂಬ ಹಾಗೆ ಘಾತವ ಕಾಣಬಾರದ ಜಲವ ಶಿಶು ನೀಗಿಸಲರಿಯನೆಂಬ ಹಾಗೆ ಪಂಚಭೂತಾತ್ಮನ ಹಂಗು ಹಿಂಗದೆ ಪಂಚೇಂದ್ರಿಯದ ಸುಖವ ಮರೆಯದೆ ಇದ್ದ ಭವಭಾರಿ ಜೀವಿ ಲಿಂಗದ ಘನವನರಿದಿಹೆನೆಂದಡೆ ಆ ಲಿಂಗದ ನಿಜವು ಅಳವಡವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೮೪. ಗಗನದ ಮೇಘಂಗಳು ಸುರಿದಲ್ಲಿ ಒಂದು ಹಿರಿಯ ಕೆರೆ ತುಂಬಿತ್ತು. ಆ ಕೆರೆಗೆ ಏರಿ ಮೂರು ಅಲ್ಲಿ ಒಳಗೆ ಹತ್ತು ಭಾವಿ. ಹೊರಗೆ ಐದು ಭಾವಿ. ಆ ಏರಿಯೊಳಗೆ ಒಂಬತ್ತು ತುಂಬನುಚ್ಚಿದರೆ ಆಕಾಶವೆಲ್ಲವು ಜಲಮಯವಾಯಿತ್ತು. ತುಂಬಿದ ಜಲವನುಂಡುಂಡು ಬಂದು ಅಂಜದೆ ನುಡಿವ ಭಂಡಯೋಗಿಗಳನೇನೆಂಬೆ ಗುಹೇಶ್ವರಾ!



ಟೀಕು:—ಗಗವಿಪಿನವೆಂದರೆ ಆತ್ಮನು. ಆ ಆತ್ಮ ವಿಸಿತತ್ವದಿಂದುದ್ಭವಿಪ್ಪುದು ಮಾಯಾಡಂಬರವೆಂಬ ಮೇಘ. ಆ ಮಾಯಾಡಂಬರವೆಂಬ ಮೇಘದಲ್ಲಿ ಸಂಸಾರ ರಸವೆಂಬ ಸೋನೆ ಸುರಿಯುತ್ತಿರಲು ತನುತ್ರಯಂಗಳು ತಡೆದುಕೊಂಡು ಇರುತ್ತಿರಲು ಅದೀಗ ಗಗನದ ಮೇಘಂಗಳು ಸುರಿದರೆ ಒಂದು ಹಿರಿಯ ಕೆರೆ ತುಂಬಿತ್ತು. ಆ ಕೆರೆಗೆ ಏರಿ ಮೂರೆಂಬ ಶಬ್ದಕ್ಕರ್ಥ. ಆ ತನುತ್ರಯಂಗಳೊಳಗೆ ದಶ ನಾಳಂಗಳೆಂಬ ವಿಷಯ ಕೂಪಂಗಳು ಹತ್ತಿ ಹತ್ತಿಪ್ಪವು. ಆ ತನುವಿಂದ ಹೊರಗೆ ಪಂಚವಿಷಯಂಗಳೆಂಬ ವಿಷಯಂಗಳೈದು ಇಪ್ಪವೆಂಬುದೀಗ ಆ ಕೆರೆಯೊಳಗೆ ಹತ್ತು ಬಾವಿ ಹೊರಗೆ ಐದು ಬಾವಿ ಎಂಬ ಶಬ್ದಕ್ಕರ್ಥ. ಅಲ್ಲಿ ನವನಾಳಂಗಳೆಂಬ ತುಂಬನುಚ್ಚಲು ಆ ಸಂಸಾರ ರಸವು ಬ್ರಹ್ಮಾಂಡದೊಳಗೆಲ್ಲ ತಾನೆಯಾಗಿ ಪ್ರವೇಶಿಸಿಕೊಂಡಿತ್ತೆಂಬುದೀಗ ಆ ಏರಿಯೊಳಗೆ ಒಂಬತ್ತು ತುಂಬನುಚ್ಚಲು ಆಕಾಶವೆಲ್ಲವು ಜಲಮಯವಾಯಿತೆಂಬ ಶಬ್ದಕ್ಕರ್ಥ. ಅಂತಪ್ಪ ಸಂಸಾರ ರಸವನುಂಡು ವಾಗದ್ವೈತವ ನಾಡುವವರೆಲ್ಲರು ಮಿಟ್ಟೆಯ ಭಂಡರೆಂಬುದೀಗ ತುಂಬಿದ ಜಲವನುಂಡುಂಡು ಬಂದು ಅಂಜದೆ ನುಡಿವ ಭಂಡ ಯೋಗಿಗಳ ನೇನೆಂಬೆನೆಂಬ ಶಬ್ದಕ್ಕರ್ಥ.

೧೮೫. ರೂಪವನೆ ಕಂಡರು. ನಿರೂಪವನೆ ಕಾಣರು. ಅನುವನೇ ಕಂಡರು. ತನುವನೆ ಕಾಣರು. ಆಚಾರವನೆ ಕಂಡರು ವಿಚಾರವನೇ ಕಾಣರು. ಗುಹೇಶ್ವರಾ ನಿಮ್ಮ ಕುರುಹನೇ ಕಂಡರು. ಕೂಡಲರಿಯದೆ ಕೆಟ್ಟರು.

ಟೀಕು:— ಅಂಗದ ಮೇಲಣ ಇಷ್ಟಲಿಂಗದ ರೂಪವ ಕಾಣಬಹುದಲ್ಲದೆ ಆ ಲಿಂಗದ ಪ್ರಾಣ ಚೈತನ್ಯ ಕಳೆ ತಾವೆಂದರಿಯರೆಂಬುದೀಗ ರೂಪವನೆ ಕಂಡರು ನಿರೂಪವನೆ ಕಾಣರು ಎಂಬ ಶಬ್ದಕ್ಕರ್ಥ. ಆ ಚೈತನ್ಯ ಲಿಂಗದ ಅನುವನು ಇದಿರಿಟ್ಟು ಕಾಣಬಹುದಲ್ಲದೆ ಸರ್ವಾಂಗ ಲಿಂಗಿಗಳಾಗಬಾರದೆಂಬುದೀಗ ಅನುವನೆ ಕಂಡರು ತನುವನೇ ಕಾಣರು ಎಂಬ ಶಬ್ದಕ್ಕರ್ಥ. ಅಂಗದ ಮೇಲಿಪ್ಪ ಆಚಾರವ ಕಾಣಬಹುದಲ್ಲದೆ ಆ ಆಚಾರಕ್ಕೆ ಪ್ರಾಣವಪ್ಪ ಮಹಾನುಭಾವ ವಿಚಾರವ ಕಾಣಬಾರದೆಂಬುದೀಗ ಆಚಾರವನೆ ಕಂಡರು ವಿಚಾರವನೆ ಕಾಣರು ಎಂಬ ಶಬ್ದಕ್ಕರ್ಥ. ತುರ್ಯ ವಸ್ತುವೆಂಬ ಕುರುಹನು ತಮುಗನ್ನಯಿಟ್ಟು ನೋಡಿ ಸುಖಿಸಬಹು

ದಲ್ಲದೆ ತಾನೆಂಬುದನರಿದು ಮರೆಯಬಾರದೆಂಬುದೀಗ ಗುಹೇಶ್ವರಾ ನಿಮ್ಮ ಕುರುಹನೆ ಕಂಡರು ಕೂಡಲರಿಯದೆ ಕೆಟ್ಟರು ಎಂಬ ಶಬ್ದಾರ್ಥ.

೧೮೬. ಇರುಳೊಂದು ಮುಖ ಹಗಲೊಂದು ಮುಖ. ಜೀವವೊಂದು ಮುಖ. ಬುದ್ಧಿಯನರಿಯದಿದೆ ನೋಡಾ! ಪ್ರಾಣಲಿಂಗವೆಂಬ ಭ್ರಾಂತು ನೋಡಾ! ಇದುಕಾರಣ ಮೂರುಲೋಕವೇ ಇದೆಂಬರು. ಸೂರ್ಯ ಹೋಯಿತ್ತು ಗುಹೇಶ್ವರಾ!

ಟೀಕು:—ಜಾಗ್ರದ ವ್ಯವಹಾರಮುಖ ಹಿಂಗದು. ಸ್ವಪ್ನದಲ್ಲಿ ಭ್ರಾಂತು ಯುಕ್ತಿಮುಖ ಹಿಂಗದು ಬುದ್ಧಿಯಲ್ಲಿ ಕೃತನಿಶ್ಚಯವಾಗದು ಮತ್ತೆ ಪ್ರಾಣ ಲಿಂಗಸಂಬಂಧವನರಿದಿಹೆವೆಂಬವರೆಲ್ಲ ಭ್ರಾಂತರು ಇಂತಪ್ಪ ಭಿನ್ನ ವಿಚಾರದಿಂದ ತ್ರಿಜಗದ ಪ್ರಾಣಿಗಳೆಲ್ಲರು ಕೆಡುತ್ತಿದ್ದರೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೮೭. ಭಾವದಲ್ಲಿ ಭ್ರಮಿತರಾದವರ ಸೀಮೆ ಏನು ನಿಸ್ಸೀಮೆ ಏನು. ವಚನದ ರಚನೆಯ ರಂಜನೆಯ ನೆಲೆಯನಾಡುವರು. ಗುಹೇಶ್ವರನಿಪ್ಪ ಗುಪ್ತವೆಂತರಿಯರು.

ಟೀಕು:—ಅಂಗಭಾವದಲ್ಲಿ ಭರಿತರಾದ ವಿಪರೀತ ಭಾವ ಭ್ರಮಿತರು ಸೀಮೆಯೆಂಬ ಆಚಾರದೊಳಗಿದ್ದು ಪ್ರಯೋಜನವಿಲ್ಲ. ನಿಸ್ಸೀಮೆಯೆಂಬ ಜ್ಞಾನದೊಳಗಿದ್ದು ಪ್ರಯೋಜನವಿಲ್ಲ. ವಚನದ ರಚನೆಯ ನುಡಿದು ಪ್ರಯೋಜನವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೮೮. ಅಘಟಿತಘಟಿತನೆ ವಿಪರೀತಚರಿತ್ರನೆ ಸಾವರ ಕೈಯಲ್ಲಿ ಪೂಜೆಗೊಂಬರೆ ಲಿಂಗಯ್ಯಾ! ಸಾವನೋವರ ಕೈಯಲ್ಲಿ ಪೂಜೆಗೊಂಬುದು ಲಜ್ಜೆ ಕಾಣಾ ಗುಹೇಶ್ವರಾ!

ಟೀಕು:—ಲಿಂಗದಲ್ಲಿ ಅವಿರಳ ಸಂಗವನರಿದು ಲಿಂಗಲೀಯ್ಯವಾಗಿ ಲಿಂಗಾರ್ಚನೆಯ ಮಾಡುವಲ್ಲಿ ಇಪ್ಪ ಮಹಾಲಿಂಗ ಸ್ಥಲವು ಮನಕ್ಕೆ ಮನೋಹರವಾಗಿಪ್ಪುದು. ಇದನರಿಯದೆ ಅಜ್ಞಾನದಿಂದಿಪ್ಪ ಜೀವನ ಕೈಯಲ್ಲಿಪ್ಪ ಲಿಂಗ ಲಾಂಛನಮಾತ್ರವು ಏತಕ್ಕೂ ಪ್ರಯೋಜನವಿಲ್ಲವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೧೮೯. ಅಪರಿಮಿತದ ಕತ್ತಲೆಯೊಳಗೆ ಪರಿಮಿತದ ಬೆಳಗನಿಕ್ಕಿದಡೆ ಬೆಳಗು ಅದೆ. ಕತ್ತಲೆಯು ಅದೆ. ಇದೇನು ಚೋದ್ಯವೊ! ಒಂದಕ್ಕೊಂದು ಅಂಜದು. ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು ಬೆರಗಾದೆನು ಗುಹೇಶ್ವರಾ!



ಟೀಕು:— ಅಜ್ಞಾನವನಗಲದವರು ಅಂತರಂಗದೊಳಗೆ ಸುಜ್ಞಾನವ ಧರಿಸಿದರೆ ಜ್ಞಾನಾಜ್ಞಾನಂಗಳೆರಡು ಹಿಂಗದೆ ಇರುತ್ತಿದ್ದವೆಂಬುದೀಗ ಅಪರಿಮಿತದ ಕತ್ತಲೆಯೊಳಗೆ ಪರಿಮಿತದ ಬೆಳಗನಿಕ್ಕಿದಡೆ ಬೆಳಗೂ ಅದೆ ಕತ್ತಲೆಯೂ ಅದೆ ಇದೇನು ಚೋದ್ಯವೊ ಎಂಬ ಶಬ್ದಾರ್ಥ. ಅಜ್ಞಾನಕ್ಕೆ ಸುಜ್ಞಾನವಂಜದು. ಸುಜ್ಞಾನಕ್ಕೆ ಅಜ್ಞಾನವಂಜದು ಎಂಬುದೀಗ ಒಂದಕ್ಕೊಂದು ಅಂಜದೆಂಬ ಶಬ್ದಾರ್ಥ. ಆನೆಯೆಂದರೆ ಅಜ್ಞಾನಾಹಂಕಾರ, ಸಿಂಹವೆಂದರೆ ಅಹಂಕಾರಕ್ಕೆ ವೈರಿಯಪ್ಪ ಸುಜ್ಞಾನ. ಇಂತಪ್ಪ ಅಹಂಕಾರವೆಂಬ ಅಜ್ಞಾನವು ಸುಜ್ಞಾನವು ಒಂದೇ ಅಂಗಭಾಜನದೊಳಗೆ ಸಂಸಾರಸುಖವ ಸೇವಿಸುತ್ತಿದ್ದಿತ್ತೆಂಬುದೀಗ ಆನೆಯೂ ಸಿಂಹವೂ ಒಂದಾಗಿ ಉಂಬುದ ಕಂಡು ಬೆರಗಾದೆನು ಗುಹೇಶ್ವರಾ ಎಂಬ ಶಬ್ದಾರ್ಥ.

೧೯೦. ತತ್ವವೆಂಬುದ ನೀನೆತ್ತ ಬಲ್ಲೆಯೋ? ಸತ್ತು ಮುಂದೆ ನೀನೇನ ಕಾಂಬೆಯೋ? ನಿಂದ ನಿಂದೆಯೋ? ನಿಂದೆ ಮಾನವಾ! ಮಾತಿನಂತುಟಲ್ಲಾ ಶಿವಾಚಾರದ ಸಂದೊಡಕು ಕಾಣಿರಣ್ಣಾ! ರಚ್ಚೆಯ ಮಾತಲ್ಲ ಬೀದಿಯ ಮಾತಲ್ಲ. ಏಕೋರಾತ್ರೆಯ ಬಿಂದು ನೋಡಾ! ಗುಹೇಶ್ವರನ ಕೂಡಿದ ಕೂಟ ಇಂದು ಸುಖ ಮುಂದೆ ಲೇಸು.

ಟೀಕು:—ತಾನು ಶಿವತತ್ವದಲ್ಲಿ ವೇದಿಯಾಗದೆ ತತ್ವದ ಮಾತಿನೊಳಗೆ ಮುಕ್ತಿಯ ಘಟಿಸಿ ಮಡಿವ ಅನಿತ್ಯ ದೇಹಿಯ ಮಾತೆಲ್ಲವು ನಿಂದಿತವಾದ ಕಾರಣ ಆ ಮಾತಿನೊಳಗೆ ಶಿವಾಚಾರವಿಲ್ಲ ಆ ಶಿವಾಚಾರದ ಪರಿಬೇರೆ. ಅದೆಂತೆಂದರೆ ಗುರುಶಿಷ್ಯಸಂಯೋಗಕಾಲದಲ್ಲಿ ಉದಯವಾದ ಶಿವಬಿಂದುವೇ ಶಿವಾಚಾರ. ಆ ಶಿವಾಚಾರದಲ್ಲಿ ಬೇರಿಲ್ಲದೆ ಬೆರಿಸಿ ಆ ಲಿಂಗದಲ್ಲಿ ಸುಖಿಯಾದಾತನೆ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೯೧. ಪೃಥ್ವಿ ಅಪ್ಪು ತೇಜ ವಾಯು ಆಕಾಶದಲ್ಲಿ ಬೆಳೆಯುತ್ತಿದ್ದರೇನು ನೋಡಾ! ಘನಘನವನರಿದೆವೆಂಬ ಮರುಳು ಮಾನವರ ನೋಡಾ! ನಿರ್ಣಯವಿಲ್ಲದ ನಿರ್ವಿಕಾರ ಗುಹೇಶ್ವರನೆಂಬ ಮಹಾಘನವ ತಿಳಿಯರು ನೋಡಾ!

ಟೀಕುಃ—ಪಂಚಭೂತಾಶ್ರಯದಲ್ಲಿ ಹುಟ್ಟಿ ಅಲ್ಲಿಯೇ ಬೆಳೆಯುತ್ತಿಪ್ಪ ಪ್ರಾಣಿಗಳೆಲ್ಲವು ಲಿಂಗದ ಘನವನರಿದನೆಂಬುದೆಲ್ಲವು ಮಿಥ್ಯೆಯೆಂಬುದೀ ವಚನದ ತಾತ್ಪರ್ಯಾರ್ಥ.

೧೯೨. ಎಲ್ಲವನರಿಯ ಬಹುದು. ಸಾವನರಿಯ ಬಾರದು. ಸರ್ವ ವಿದ್ಯೆ ಸಕಲ ಕಲಾ ವ್ಯಾಪ್ತಿಯನೆಲ್ಲವನರಿಯ ಬಹುದಲ್ಲದೆ ಶಿವಜ್ಞಾನವನರಿಯಬಾರದು. ಹರಿ ಬ್ರಹ್ಮ ಕಾಲ ಕಾಮ ದಕ್ಷಾದಿ ದೇವ ದಾನವ ಮಾನವರಿಗೆಲ್ಲ ಸಾವು. ಮಹಾಪುರುಷರಿಗೆಯು ಸಾವು. ಶಿವಶಿವಾ! ಸಾವನರಿದು ಲೋಕಪ್ರಪಂಚ ಮರೆದು ಲಿಂಗದಲ್ಲಿ ನೆನಹು ನೆಲೆಗೊಂಡ ಮಹಾಮಹಿಮಂಗೆ ಸಾವನರಿಯಬಹುದು. ಈ ಸಾವನರಿಯದ ಅರೆಮರುಳುಗಳ ಅರಿವು ಮಾನಹಾನಿ ಕಾಣಾ ಗುಹೇಶ್ವರಾ!

ಟೀಕುಃ— ಎಲ್ಲ ಕಳೆಯನರಿಯಬಹುದು. ಸಾವಿನ ಸಂಚವನರಿಯಬಾರದು. ಸಾವಿನ ಸಂಚವನರಿಯಬಾರದ ಕಾರಣ ಎಲ್ಲ ಕಳಾ ವ್ಯಾಪ್ತಿಯೊಳಡಗಿದ ಲಿಂಗದ ಕಳೆಯನೆಂತು ಅರಿಯ ಬಾರದು. ಅದು ಕಾರಣ ಹರಿಬ್ರಹ್ಮಾದಿಗಳು ಮೊದಲಾದ ದೇವ ದಾನವ ಮಾನವ ಮಹಾ ಪುರುಷರಿಗೂ ಸಾವುಂಟು. ಈ ಸಾವಿನ ಸಂಚವನರಿದು ಲಿಂಗದಲ್ಲಿ ಬೆರಿಸಿದ ಶರಣ ಸಾವ ಜೀವಿಗಳ ಪರಿಯನೇನೆಂದೂ ಅರಿಯನೆಂಬುದೀ ವಚನದ ತಾತ್ಪರ್ಯಾರ್ಥ.

೧೯೩. ಆಗ ಹುಟ್ಟಿ ಬೇಗ ಸಾವ ಕಾಯಗೊಂಡ ಮಾನವಾ, ನೀ ದೇವರೆನಿಸಿಕೊಂಬುದು ಆವುದು ಅಂತರ ಹೇಳಾ! ದೇವರು ಸಾವರೇ? ದೇವರಿಗೂ ಸಾವರಿಗೂ ಆವುದಂತರ ಹೇಳಾ! ದೇವರಿಗೆ ದೇವಲೋಕ. ಮಾನವರಿಗೆ ಮರ್ತ್ಯ ಲೋಕ. ಗುಹೇಶ್ವರಲ್ಲಯ್ಯಂಗೆ ಇನ್ನಾವ ಲೋಕವು ಇಲ್ಲ.

ಟೀಕುಃ— ಕಾಮವಿಕಾರದ ಸಂಗದಲ್ಲಿ ಹುಟ್ಟಿ ಕ್ಷಣ ಬೇಗದಲ್ಲಿ ಅಳಿದು ಹೋಗುತ್ತಿಹ ಅಜ್ಞಾನ ಜೀವಿ ಅಭ್ಯಾಸದಿಂದ ಬ್ರಹ್ಮವಿದ್ಯವ ಸಾಧಿಸಿ ಅಹಂಬ್ರಹ್ಮವೆಂದು ತಾನೆ ದೇವರೆಂಬುದು ಅಸತ್ಯ. ಅದೆಂತೆಂದರೆ ತಾನೆಂಬ ಅಹಂಕಾರಕ್ಕೆ ಅಳಿವುಂಟು. ತತ್ವವೆಂಬ ನಿರಹಂಕಾರಕ್ಕೆ ಅಳಿವಿಲ್ಲ. ಆದುಕಾರಣ ದೇವತ್ವಕ್ಕೂ ಸಾವಿಂಗೂ ಸಂಬಂಧವಿಲ್ಲ. ಸಾವರಿಗೆ ಇಹಲೋಕ. ದೇವರಿಗೆ ದೇವಲೋಕ. ಅಂತೂ ಒಂದಕ್ಕೊಂದು



ಅಂತರ ಸಮವಿಲ್ಲ. ಈ ಉಭಯವನು ಅತಿಗಳೆದು ನಿಲಬಲ್ಲಡೆ ಆತನೇ ಶಿವಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೯೪. ಅತ್ತಲಿತ್ತಲೂ ಕಾಣಲಿಲ್ಲ. ಬಯಲ ದಾಳಿ ಬಿಟ್ಟಿತ್ತಲ್ಲ. ಸರಳ ಮಂಡಲ ಮಂಜಿನ ಕಾಳಗತ್ತಲೆ ಕವಿಯಿತ್ತು. ರವಿಯ ರಥದಚ್ಚು ಮುರಿಯಿತ್ತು. ಶಶಿವಂಶದ ನಿಲವನು ರಾಹು ಗೆದ್ದುದ ಕಂಡು ಓರಿಯರು ಹೊಲಬು ಗೆಟ್ಟರು ಗುಹೇಶ್ವರಾ.

ಟೀಕುಃ—ಸರ್ವತೋ ದಿಕ್ಕು ತಾನೆಯಾದ ಮಾಯಾ ಸಂಸಾರದ ಮಿಥ್ಯಾಲೋಕವೆಲ್ಲವನು ಆವರಿಸಿತ್ತೆಂಬುದೀಗ ಅತ್ತಲಿತ್ತಲೂ ಕಾಣಲಿಲ್ಲ ಬಯಲ ದಾಳಿ ಮುಟ್ಟಿತ್ತಲ್ಲಾ ಎಂಬ ಶಬ್ದಕ್ಕರ್ಥ. ಈ ಮಾಯಾ ಮಿಥ್ಯೆ ಆವರಿಸಲು ಇಂದ್ರಿಯ ಕರಣ ವಿಷಯಾದಿಗಳೆಂಬ ವಿಷಮತರವಾಗಿ ಕಾಮನ ಸರಳುಗಳು ಪರಿವೇಷ್ಟಿಸಿಕೊಂಡು ಅಜ್ಞಾನ ತನುವೃತ್ತಿ ಪರಿವರ್ತಿಸಿಕೊಂಡು ಇದ್ದಿತೆಂಬುದೀಗ ಸರಳ ಮಂಡಲದ ಮಂಜಿನ ಕಾಳಕತ್ತಲೆ ಕವಿಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತಾದರೂ ರವಿಯೆಂಬ ಸುಜ್ಞಾನಕ್ಕೆ ಶಿವಭಕ್ತಿಪಥವೇ ರಥವಾಗಿಪ್ಪದು. ಅದಕ್ಕೆ ಕೃತನಿಶ್ಚಯವೇ ಅಚ್ಚು. ಅಂತಪ್ಪ ಸುಜ್ಞಾನದ ಭಕ್ತಿಪಥದ ಕೃತನಿಶ್ಚಯ ಭಿನ್ನವಾಯಿತ್ತೆಂಬುದೀಗ ರವಿಯ ರಥದಚ್ಚು ಮುರಿಯಿತ್ತೆಂಬ ಶಬ್ದಕ್ಕರ್ಥ. ಇಂತು ಸುಜ್ಞಾನದ ಪಥದ ಕೃತನಿಶ್ಚಯ ಭಿನ್ನವಾಗಲು ಶಶಿವಂಶದ ನಿಲವೆಂಬ ಪರಮಶಾಂತಿಯ ನಿಲವನು ಕ್ರೋಧವೆಂಬ ರಾಹು ಗ್ರಹಣವಾಯಿತ್ತೆಂಬುದೀಗ ಶಶಿವಂಶದ ನಿಲವನು ರಾಹು ಗೆದ್ದುದ ಕಂಡೆನೆಂಬ ಶಬ್ದಕ್ಕರ್ಥ. ಈ ಅಜ್ಞಾನ ಬುದ್ಧಿ ಆವನೊಬ್ಬನನ್ನು ಆವೃರ್ತಿಸಿಕೊಂಡಿಪ್ಪದು. ಆವರೆಲ್ಲರು ಭವಭಾರಿಗಳೆಂಬುದೀಗ ಹಿರಿಯರೆಲ್ಲರು ಹೊಲಬುಗಟ್ಟರು ಎಂಬ ಶಬ್ದಕ್ಕರ್ಥ.

೧೯೫. ಸನಕ ಸನಂದಾದಿ ಮುನಿ ಜನಂಗಳೆಲ್ಲರು ಭಸ್ಮಾಂಗಿಗಳೆಲ್ಲರು ಇವರು ಸತ್ಯರೆಂಬುದು ಹುಸಿ ನಿತ್ಯರೆಂಬುದು ಹುಸಿ. ಅನಿತ್ಯರೆಂಬುದು ದಿಟ. ಗುಹೇಶ್ವರಾ.

ಟೀಕುಃ— ಶಿವಜ್ಞಾನ ಸಂಪನ್ನರಾದ ಮನು ಮುನಿ ದೇವದಾನವ ಮಾನವರಾದಡು ಆಗಲಿ, ಅವರು ಸತ್ಯರಲ್ಲ ನಿತ್ಯರಲ್ಲ ಅನಿತ್ಯರೆಂಬುದೀ ಚವನದ ತಾತ್ಪರ್ಯಾರ್ಥ.

೧೯೬. ಹನ್ನೆರಡು ಯುಗ ಪ್ರಳಯವಾದಲ್ಲಿ ಆರಿ ಬ್ರಹ್ಮಂಗೆ ಪ್ರಳಯ ಆದಿ ಬ್ರಹ್ಮನ ಪ್ರಳಯ ಅಳಿದುಳಿದಲ್ಲಿ ಮೀನಜರಿಗೊಂದು ಸಿಂಪಿನ ಪ್ರಳಯ. ಮೀನಜರಿಗೆ ಮೀನ ಪ್ರಳಯವಾದಲ್ಲಿ ಆ ಸಹಸ್ರನೆಂಬ ಗಣೇಶ್ವರಂಗೆ ಒಂದು ಪ್ರಳಯ. ಆ ಸಹಸ್ರನೆಂಬ ಗಣೇಶ್ವರನು ಅಳಿದುಳಿದಲ್ಲಿ ಅಕ್ಷಯನೆಂಬ ಗಣೇಶ್ವರಂಗೆ ಒಂದು ತಲೆಯ ಪ್ರಳಯ. ಆ ಅಕ್ಷಯನೆಂಬ ಗಣೇಶ್ವರಂಗೆ ಅರವತ್ತು ಕೋಟಿ ತಲೆ. ಇಂಥ ರುದ್ರಾವತಾರ ಹಲವಳಿದರೆ ಗುಹೇಶ್ವರನೇನೆಂದೂ ಅರಿಯ.

ಟೀಕು:— ಅನಂತ ಯುಗ ಪ್ರಳಯವಾದಲ್ಲಿ ಅನಂತ ಬ್ರಹ್ಮ ತತ್ವಕ್ಕೆ ಪ್ರಳಯವಾದಲ್ಲಿ ಅನಂತ ರುದ್ರರಿಗೆ ಪ್ರಳಯವಾದಲ್ಲಿ ಮಹಾಜ್ಞಾನಾತೀತನಪ್ಪ ನಿರಾಳ ಶಿವತತ್ವವೇನೆಂದೂ ಅರಿಯರೆಂಬುದೀ ವಚನದ ತಾತ್ಪರ್ಯಾರ್ಥ.

೧೯೭. ಖೇಚರರಾಗಲಿ ಭೂಚರರಾಗಲಿ ಲಾಂಛನಧಾರಿಯಾಗಲಿ ಮರಣವಾರಿಗೂ ಮನ್ನಣೆ ಇಲ್ಲ. ಸನಕ ಸನಂದಾದಿಗಳಿಗೂ ಮರಣ ಮನ್ನಣೆ ಇಲ್ಲ. ಇದುಕಾರಣ ಗುಹೇಶ್ವರಾ. ನಿಮ್ಮ ಶರಣರು ಕಾಲನ ಬಾಧೆಗೆ ಕಲ್ಪಿತರಾಗರು.

ಟೀಕು:— ಲಿಂಗದಲ್ಲಿ ಬೆರಸಿ ಬೇರಿಲ್ಲದ ಶರಣರ ತಪ್ಪಿಸಿ ದೇವ ದಾನವ ಮಾನವರಿಗೆಯೂ ಮರಣವುಂಟೆಂಬುದೀ ವಚನದ ತಾತ್ಪರ್ಯಾರ್ಥ.

೧೯೮. ಕಾಮಿಸುವ ಕಲ್ಪಿಸುವ ಬ್ರಹ್ಮನೆಂಬವ ವ್ರತಗೇಡಿ. ವಿಷ್ಣುವೆಂಬವ ಸತ್ತು ಬಿದ್ದ. ರುದ್ರನೆಂಬವ ಅಬದ್ಧ ಅವಿಚಾರಿ. ಎಲ್ಲರ ಕೊಂದ ಕೊಲೆ ನಿಮ್ಮ ತಾಗುವದು ಗುಹೇಶ್ವರ.

ಟೀಕು:— ಅಂಗದಲ್ಲಿ ಲಿಂಗಸಂಗಿಯಾದ ಶರಣನ ಸ್ಥೂಲ ತನುವಿನೊಳಗೆ ಇಪ್ಪ ಬ್ರಹ್ಮತತ್ವದ ರಜೋಗುಣಂಗಳೆಲ್ಲವು ಅಳಿದು ಕಾಮಿತ ಕಲ್ಪಿತಂಗಳಿಲ್ಲದೆ ಕ್ರಿಯಾ ವ್ರತಂಗಳೆಲ್ಲ ಅಳಿದವೆಂಬುದೀಗ ಕಾಮಿಸುವ ಕಲ್ಪಿಸುವ ಬ್ರಹ್ಮನೆಂಬವ ವ್ರತಗೇಡಿ ಎಂಬ ಶಬ್ದಕ್ಕರ್ಥ. ಇಂತಾಗಲು ಆ ಶರಣನು ಸೂಕ್ಷ್ಮ ತನುವಿನೊಳಗಿಪ್ಪ ವಿಷ್ಣು ತತ್ವದ ಸಾತ್ವಿಕ ಭಾವವಳಿದು ಪ್ರಾಣವಿಕಾರ ಹಿಂಗಿದವೆಂಬುದೀಗ ವಿಷ್ಣುವೆಂಬವ ಸತ್ತು ಬಿದ್ದನೆಂಬ ಶಬ್ದಕ್ಕರ್ಥ. ಇಂತಾಗಲು ಆ ಶರಣನ ಸೂಕ್ಷ್ಮತನುವಿನೊಳಗಿಪ್ಪ



ವಿಷ್ಣು ತತ್ವದ ಸಾತ್ವಿಕ ಭಾವವಳಿದು ಪ್ರಾಣವಿಕಾರ ಹಿಂಗಿದವೆಂಬುದೀಗ ವಿಷ್ಣುವೆಂಬವ ಸತ್ತು ಬಿದ್ದನೆಂಬ ಶಬ್ದಕ್ಕರ್ಥ. ಇಂತಾಗಲು ಆ ಶರಣನ ಕಾರಣ ತನುವಿನ ತಮೋವೃತ್ತಿಗಳೆಲ್ಲವು ಅಳಿದು ಬದ್ಧವಿಚಾರ ಹಿಂಗಿ ಅಬದ್ಧ ವಿಚಾರ ವಿವೇಕವಾಯಿತ್ತೆಂಬುದೀಗ ರುದ್ರನೆಂಬವ ಅಬದ್ಧ ಅವಿಚಾರಿಯೆಂಬ ಶಬ್ದಕ್ಕರ್ಥ. ಇಂತೀ ತನುತ್ರಯಂಗಳೊಳಗಿಪ್ಪ ತತ್ವತ್ರಯಂಗಳನು ನಷ್ಟವ ಮಾಡಿದ ಯುಕ್ತಿ ಪರಶಿವನ ತಾಗುವದೆಂಬುದೀಗ ಅವಿಚಾರದಲ್ಲಿ ಇವರೆಲ್ಲರ ಕೊಂದ ಕೊಲೆ ನಿಮ್ಮ ತಾಗುವದು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೯೯. ಮಾಯಾ ಮಂಜಿನ ಸಂಗ್ರಹದ ಘಟಾಘಟಿತರೆಲ್ಲರು ಕುಂಜರನ ಪಂಜರದಲ್ಲಿ ಸಂಜೀವಿತರಾಗಿಪ್ಪರು. ಎಂಜಲವನುಂಡುಂಡು ಬಂದು ಅಂಜದೆ ನುಡಿಯುತ್ತಿಪ್ಪರು. ರಂಜನಗೊಳಗಪ್ಪುದೆ? ಆಗರದ ಸಂಚವನರಿಯರು. ರಂಜಕನು ಅಲ್ಲ ಭಂಜಕನು ಅಲ್ಲ ಗುಹೇಶ್ವರಾ ನಿಮ್ಮ ಶರಣ ಸಂಜೀವನ ರಹಿತನು.

ಟೀಕು:— ಮಾಯಾಮಿಥ್ಯೆಯನೆ ಸಂಗ್ರಹಿಸಿಕೊಂಡಿಪ್ಪ ತನುವಿಡಿದಿಪ್ಪವರೆಲ್ಲರು ಅಹಂಕಾರದಲ್ಲಿ ಸಂಬಂಧಿಗಳಾಗಿಪ್ಪರೆಂಬುದೀಗ ಮಾಯಾ ಮಂಜಿನ ಸಂಗ್ರಹದ ಘಟಾಘಟಿತರೆಲ್ಲರು ಕುಂಜರನ ಪಂಜರದಲ್ಲಿ ಸಂಜೀವಿತರಾಗಿಪ್ಪರು ಎಂಬ ಶಬ್ದಕ್ಕರ್ಥ. ಇಂತಪ್ಪ ಅಜ್ಞಾನದೇಹಿಗಳು ಭವಭವಂಗಳಲ್ಲಿ ಉಂಡುಂಡು ಮಿಕ್ಕ ಪ್ರಾರಬ್ಧ ಕರ್ಮದ ಎಂಜಲವನೆ ಉಣುತ್ತ ಮತ್ತೆ ಬ್ರಹ್ಮದ ಅಭ್ಯಾಸದ ಎಂಜಲದ ಮಾತುಗಳ ಕಲಿತು ಬಂದು ಅನುಭಾವವ ನುಡಿಯುತ್ತಿಪ್ಪರೆಂಬುದೀಗ ಎಂಜಲವನುಂಡುಂಡು ಬಂದು ಅಂಜದೆ ನುಡಿಯುತ್ತಿಪ್ಪರು ಎಂಬ ಶಬ್ದಕ್ಕರ್ಥ. ಅಂತಪ್ಪ ವಾಗದ್ವೈತ ರಂಜನಗೆ ಬ್ರಹ್ಮವು ಸಿಕ್ಕಲರಿಯದೆಂಬುದೀಗ ರಂಜನೆಗೆ ಒಳಗೊಪ್ಪುದೆ ಎಂಬ ಶಬ್ದಕ್ಕರ್ಥ. ಆಗರವೆಂದರೆ ಸುಖ ಸುಖದ ಸಂಚವನಾರಿಗೂ ಅರಿಯಬಾರದೆಂಬುದೀಗ ಆಗರದ ಸಂಚವನರಿಯರೆಂಬ ಶಬ್ದಕ್ಕರ್ಥ. ಇಂತಪ್ಪ ಡಂಭಕ ಗುಣವ ನಿವೃತ್ತಿ ಮಾಡಿ ನಿರಂಜಕನಾಗಿ ಭೋಕ್ತೃ ಕರ್ಮ ರಹಿತನಾಗಿಪ್ಪಾತನೆ ಅಚ್ಚ ಶರಣನೆಂಬುದೀಗ ರಂಜಕನು ಅಲ್ಲ ಭುಜಂಕನು ಅಲ್ಲ ಗುಹೇಶ್ವರಾ ನಿಮ್ಮ ಶರಣ ಸಂಜೀವನ ರಹಿತನೆಂಬ ಶಬ್ದಕ್ಕರ್ಥ.

೨೦೦. ಆದಿ ತ್ರೈಯುಗದಲ್ಲಿ ದೇವ ದಾನವ ಮಾನವರು ಮಾಯಾ ಮೋಹದಲ್ಲಿ ಹುಟ್ಟಿ ತೊಳಲುತ್ತೈದಾರೆ ಬಳಲುತ್ತೈದಾರೆ. ಆವ ವೇಷ

ವಾದರೇನು ತಾಮಸಧಾರಿಗಳನು ಕಾಮ ಕ್ರೋಧ ಲೋಭ ಬಿಡದ ನಾನಾ ವಿಧದ ಡಂಭಕರು. ಹೂಳದ ಹುಣ್ಣಿಂಗೆ ಆರಯ್ಯಾ ಮದ್ದಸಿಕ್ಕುವರು? ಏನು ಕಾರಣ ಗುಹೇಶ್ವರಾ ಸೋರೆಯ ಬಣ್ಣದ ಹಿರಿಯರು

ಟೀಕುಃ— ಸೃಷ್ಟಿ ಹುಟ್ಟುವಂದು ಮಾಯಾ ಮಿಥ್ಯೆಯಿಂದ ದೇವ ದಾನವ ಮಾನವರೆಲ್ಲರು ದೇಹವೆಂಬ ಹಗರಣವ ಧರಿಸಿಕೊಂಡು ತಾಮಸ ವೃತ್ತಿಯಲ್ಲಿದ್ದರೆಂಬುದೀಗ ಆದಿ ತ್ರೈಯುಗದಲ್ಲಿ ದೇವ ದಾನವ ಮಾನವರು ಮಾಯಾ ಮೋಹದಲ್ಲಿ ಹುಟ್ಟಿ ತೊಳಲಿ ಬಳಲುತ್ತೈದಾರೆ. ಆವ ವೇಷವಾದರೇನು ತಾಮಸಧಾರಿಗಳು ಎಂಬ ಶಬ್ದಕ್ಕರ್ಥ. ಇಂತು ತಾಮಸವನ್ನೈದಿ ಕಾಮ ಕ್ರೋಧಾದಿಗಳಲ್ಲಿ ಬದ್ಧರಾಗಿಪ್ಪವರೆಲ್ಲರು ಹೂಳದ ಹುಣ್ಣೆಂಬ ಮಾಯಾ ಯೋಸಿಗೆ ಮರುಳಾಗಿಪ್ಪರು. ಅದಕ್ಕೆ ಭವರೋಗ ಹರಣೆಂಬ ವೈದ್ಯವ ಮಾಡಲರಿಯರೆಂಬುದೀಗ ಹೂಳದ ಹುಣ್ಣಿಂಗೆ ಆರಯ್ಯಾ ಮದ್ದಸಿಕ್ಕುವರು ಎಂಬ ಶಬ್ದಕ್ಕರ್ಥ. ಇಂತಪ್ಪವರೆಲ್ಲರು ಲಿಂಗಕ್ಕೆ ಸಲ್ಲದ ಅಪ್ರಯೋಜಕರೆಂಬುದೀಗ ಸೋರೆಯ ಬಣ್ಣದ ಹಿರಿಯರೆಂಬ ಶಬ್ದಕ್ಕರ್ಥ.

೨೦೧. ಯುಗಜುಗವ ಒಲ್ಲೆವೆಂಬವರು ನಿಚ್ಚಕ್ಕೆ ನಿಚ್ಚ ಬಪ್ಪ ಚಿಕ್ಕುಟ ಸಾವನರಿಯರು. ಬಾಯ ಬಾಗಲ ತಲೆ ಹೊಲದ ಹುಲ್ಲೊಣಗಿತ್ತು. ನಿಮ್ಮ ಅನುವಿನಲ್ಲಿಪ್ಪನು ಕಾಣಾ ಗುಹೇಶ್ವರಾ!

ಟೀಕುಃ—ತ್ರಿಕಾಲ ಜ್ಞಾನವನರಿದೆನೆಂಬ ಜ್ಞಾನಿಗಳೆಲ್ಲರು ಅಂದಂದಿಂಗೆ ಜನನಮರಣವಪ್ಪ ನಿದ್ರೆಯ ಸಂಚವ ಗೆಲಲರಿಯರೆಂಬುದೀಗ ಯುಗಜುಗವ ಬಲ್ಲೆವೆಂಬವರು ನಿಚ್ಚಕ್ಕೆ ನಿಚ್ಚ ಬಪ್ಪ ಚಿಕ್ಕುಟ ಸಾವನರಿಯರು ಎಂಬ ಶಬ್ದಕ್ಕರ್ಥ. ಈ ಭೇದವನರಿಯದ ಶರಣನು ಬಾಯ ಬಾಗಿಲ ತಲೆ ಹೊಲನೆಂದರೆ ವಾಗದ್ವೈತದ ಅರಿವೆಂಬರ್ಥ. ಆ ಅರಿವ ಮುಂದುಗೊಂಡಿಪ್ಪ ಪ್ರಪಂಚವೆಂಬ ತೃಣವನು ಸುಜ್ಞಾನಾಗ್ನಿಯಲ್ಲಿ ಉರುಹಿದನೆಂಬುದೀಗ ತೃಣ ಒಣಗಿತ್ತೆಂಬ ಶಬ್ದಕ್ಕರ್ಥ. ಈ ನಿರ್ಣಯದಲ್ಲಿ ನಿಜವನರಿದ ಶರಣ ನಿಶ್ಶಬ್ದವೇದಿಯಾಗಿಪ್ಪನೆಂಬುದೀಗ ನಿಮ್ಮನುವಿನಲ್ಲಿದ್ದ ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೦೨. ರುದ್ರನೆಂಬಾತನೊಬ್ಬ ಗಣೇಶ್ವರನು. ಭದ್ರನೆಂಬಾತನೊಬ್ಬ ಗಣೇಶ್ವರನು. ಶಂಕರನೆಂಬಾತನೊಬ್ಬ ಗಣೇಶ್ವರನು. ಶಶಿಧರನೆಂಬಾತ



ನೊಬ್ಬ ಗಣೇಶ್ವರನು. ಪೃಥ್ವಿಯೇ ಪೀಠ ಆಕಾಶವೇ ಲಿಂಗ ಅಂತಹನೊಬ್ಬ ಗಣೇಶ್ವರನು. ಬಲ್ಲಾಳನ ವಧುವ ಬೇಡಿದಾತ ಬಬ್ಬ ಗಣೇಶ್ವರನು. ಶೀಯಾಳನ ಮಗನ ಭಿಕ್ಷವ ಬೇಡಿದಾತನೊಬ್ಬ ಗಣೇಶ್ವರನು. ಕಾಮದಹನವ ಮಾಡಿದಾತನೊಬ್ಬ ಗಣೇಶ್ವರನು. ಬ್ರಹ್ಮಕಪಾಲವಿಷ್ಣು ಕಂಕಾಳವನಿಕ್ಕಿ ಆಡುವಲ್ಲಿ ನೀಲಕಂಠನೆಂಬಾತನೊಬ್ಬ ಗಣೇಶ್ವರನು. ಇವರೆಲ್ಲರು ನಮ್ಮ ಗುಹೇಶ್ವರನ ಲಿಂಗದಲ್ಲಿ ಅಡಗಿಪ್ಪರು.

ಟೀಕುಃ— ಅನಂತ ತತ್ವಂಗಳೆಲ್ಲವು ಪರಶಿವ ತತ್ವದಿಂದಲೇ ಉದಯಿಸಿದ ಕಾರಣ ಅನಂತಕೋಟಿ ರುದ್ರಾದಿಗಳೆಂಬವರು ಆ ಪರಶಿವ ತತ್ವದಲ್ಲಿಯೇ ಅಡಗಿಪ್ಪರಲ್ಲದೆ ಬೇರಿಟ್ಟು ತೋರಲರಿಯರೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೦೩. ದೇವಲೋಕದವರೆಲ್ಲರು ವ್ರತಗೇಡಿಗಳೆಂಬೆ. ಮರ್ತ್ಯಲೋಕದವರ ಭಕ್ತದ್ರೋಹಿಗಳೆಂಬೆ. ದೇವಸಂಭ್ರಮಗಣಪದವಿಯ ಪಡೆದವರೆಲ್ಲ ಕುಂಭಕರ್ಣನಂತೆ ಅತಿ ನಿದ್ರಿತರೆಂಬೆ. ಅನಂತಶೀಲರ ಕಂಡಡೆ ಕೈಕೂಲಿಕಾರರೆಂಬೆ ಗುಹೇಶ್ವರಲಿಂಗೈಕ್ಯವನರಿಯರಾಗಿ.

ಟೀಕುಃ— ದೇವಲೋಕದವರೆಲ್ಲ ವೀರಶೈವ ವ್ರತದಲ್ಲಿ ನಿಯತರಾಗಿ ನಿರ್ವಯಲನೈದಿಸಲರಿಯರಾಗಿ ಅವರು ವ್ರತಗೇಡಿಗಳೆನಿಸಿಕೊಂಡರು. ಮರ್ತ್ಯಲೋಕದವರೆಲ್ಲ ಲಿಂಗದಲ್ಲಿ ಷಡ್ವಿಧ ಭಕ್ತಿರೂಪವನರಿದು ಚರಿಸಲರಿಯರಾಗಿ ಭಕ್ತದ್ರೋಹಿಗಳೆನಿಸಿಕೊಂಡರು. ದೇವಸಂಭ್ರಮಗಣ ಪದವಿಯ ಪಡೆದವರೆಲ್ಲರು ಚತುರ್ವಿಧ ಪದಂಗಳ ಹಡೆದೆವೆಂಬ ಅಹಂಕಾರವ ಮರವೆಯೊಳಗೆ ತಮ್ಮ ತಾವರಿಯದೆ ಮರೆದೊರಗಿಪ್ಪ ಕಾರಣ ನಿದ್ರಾವೇಶಿಗಳೆನಿಸಿಕೊಂಡರು. ಶೀಲವಂತರೆಲ್ಲರು ಫಲದಾಯಕರಾದ ಕಾರಣ ಕೈಕೂಲಿಕಾರರೆನಿಸಿಕೊಂಡರು. ಏನು ಕಾರಣವೆಂದರೆ ಇವರೆಲ್ಲರು ಲಿಂಗೈಕ್ಯವನರಿಯರಾಗಿ ಲಿಂಗಕ್ಕೆ ದೂರಸ್ಥರೆನಿಸಿಕೊಂಡರೆಂಬುದೀ ವಚನದ ತಾತ್ಪರ್ಯಾರ್ಥ.

೨೦೪. ಹರಿ ಹೊಲಬನರಿಯ. ಬ್ರಹ್ಮ ಮುಂದನರಿಯ. ರುದ್ರ ಲೆಕ್ಕವ ಮರೆದು ಜಪವನೆಣಿಸುವ. ಈಶ್ವರ ಪವನಯೋಗದಲ್ಲಿ ಮಗ್ನನಾದ. ಸದಾಶಿವನು ಭಾವದಲ್ಲಿ ಭ್ರಮಿತನಾದ. ಒಂದೊಡಲೊಳಗಣ ಬಾಲಕರೈವರು ನಿಮ್ಮನೆತ್ತ ಬಲ್ಲರು ಗುಹೇಶ್ವರಾ!

ಟೀಕು:—ಬ್ರಹ್ಮತತ್ವವೇ ಜಾಗ್ರಾವಸ್ಥೆಯಲ್ಲಿ ಬಂಧವಾಗಿಪ್ಪಕಾರಣ ಬ್ರಹ್ಮ ಮುಂದನರಿಯನೆನಿಸಿಕೊಂಡನು. ವಿಷ್ಣುತತ್ವವೆ ಸ್ವಪ್ನಾವಸ್ಥೆಯಲ್ಲಿ ಭ್ರಮಿತವಾಗಿಪ್ಪಕಾರಣ ಅವ ಹೊಲಬನರಿಯನೆನಿಸಿಕೊಂಡನು. ರುದ್ರತತ್ವವೇ ಸುಷುಪ್ತ್ಯವಸ್ಥೆಯಲ್ಲಿ ಮರವೆಯನೆಯ್ದಿದ ಕಾರಣ ತನ್ನ ನಸ್ಯವ ಮಾಡಿ ಸ್ಮರಿಸುತ್ತಿರ್ದಪನೆಂದೆನಿಸಿ ಕೊಂಡನು. ಈಶ್ವರತತ್ವವೇ ತೂರ್ಯಾವಸ್ಥೆಯೊಳಗಾಗಿ ಪ್ರಾಣ ಪವನನೊಳಗೆ ತನ್ನ ತಾನರಿಯದೆ ಇದ್ದಕಾರಣ ಪ್ರಾಣ ಪವನ ಯೋಗದಲ್ಲಿ ಮುಗ್ಧನಾದನೆನಿಸಿಕೊಂಡನು. ಸದಾಶಿವತತ್ವವೇ ಸ್ವಭಾವದಲ್ಲಿ ಭ್ರಮಿಸುತ್ತಿಪ್ಪ ಕಾರಣ ಭಾವದಲ್ಲಿ ಭ್ರಮಿತನೆನಿಸಿಕೊಂಡನು. ಅದೆಂತೆಂದೊಡೆ ಜಾಗ್ರಾವಸ್ಥಾಸ್ಥಿತೋ ಬ್ರಹ್ಮ ಸ್ವಪ್ನಂ ವಿಷ್ಣುಸ್ಸಮಾಶ್ರಿತಃ ಸುಷುಪ್ತಸ್ತಥಾ ರುದ್ರಸ್ತೂರ್ಯಾಯಾಮೀಶ್ವರಸ್ತಥಾ ಅತೀತಾಯಾಂ ಸಮಾಖ್ಯೋಯಂ ಎಂದುದಾಗಿ ಈ ಐದು ತತ್ವಂಗಳು ಬ್ರಹ್ಮಾಂಡದೊಳಗೆ ಹುಟ್ಟಿ ಅಲ್ಲಿಯೇ ಅಳಿವಪ್ಪುದೇ ಕಾರಣವಾಗಿ ಆ ಬ್ರಹ್ಮಾಂಡದೊಳಗಣ ವ್ಯಾಪಾರವ ಬಲ್ಲರಲ್ಲದೆ ಅಲ್ಲಿಂದತ್ತತ್ತಲಿಪ್ಪ ಮಹಾಘನವನಾರು ಅರಿಯರೆಂಬುದೀ ವಚನದ ತಾತ್ಪರ್ಯಾರ್ಥ.

೨೦೫. ಕಾಯವೆ ಸತ್ತು ಮಾಯವೇ ಉಳಿಯಿತ್ತು. ಎರಡರ ಸುಖದುಃಖವನರಿಯರು ನೋಡಾ! ಅದೇನೆಂದರಿಯರು ಅದೆಂತೆಂದರಿಯರು ನೋಡಾ! ಹಿರಿಯರೆಲ್ಲರು ವೃಥಾ ಹೋದರು ನೋಡಾ! ಕಣ್ಣ ಮುಂದಣ ಕಪ್ಪ ಕಳಿಯಲರಿಯರು ನೋಡಾ! ಗುಹೇಶ್ವರನೆಂಬ ಶಬ್ದಕ್ಕೆ ನಾಚರು ನೋಡಾ!

ಟೀಕು:—ಕಾಯವೆಂಬ ಜೀವನ್ಮೃತವ ಧರಿಸಿಪ್ಪವರಲ್ಲಿ ಮಾಯೆ ಯಳಿಯದೆ ಇಪ್ಪಳೆಂಬುದೀಗ ಕಾಯವೇ ಸತ್ತು ಮಾಯವೇ ಉಳಿಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ಕಾಯದ ಮಾಯದೊಳಗಿಪ್ಪ ಸುಖದುಃಖವನಾರು ಅರಿಯರೆಂಬುದೀಗ ಈ ಎರಡರ ಸುಖದುಃಖವನಾರು ಅರಿಯರಲ್ಲಾ ಎಂಬ ಶಬ್ದಕ್ಕರ್ಥ. ಇಂಥವರೆಲ್ಲ ತಮ್ಮ ತಮ್ಮ ಕಣ್ಣ ಮುಂದಣ ಅಜ್ಞಾನವೆಂಬ ಕತ್ತಲೆಯ ಕಳೆಯಲರಿಯದೆ ಕೆಟ್ಟರೆಂಬುದೀ ವಚನದ ತಾತ್ಪರ್ಯಾರ್ಥ.

೨೦೬. ಅಮರದ ಹೊಲಬನರಿಯದೆ ಜಗವೆಲ್ಲ ಎರಡಾಯಿತ್ತು. ಅಂಗದ ಹೊಲಬನರಿಯದೆ ಯೋಗಿಗಳೆಲ್ಲ ಭಂಗಿತರಾದರು. ಸಂಗದ ಹೊಲಬನರಿಯದೆ ಶರಣರು ಭಂಗಿತರಾದರು. ಲಿಂಗದ ಹೊಲಬನರಿ



ಯದೆ ಭಕ್ತ ಶೀಲವಂತನಾದ. ಆದಿಮಧ್ಯಾವಸಾನದಲ್ಲಿ ಗುಹೇಶ್ವರಲಿಂಗವು ಅರಿವಿನ ಮರೆಯಲ್ಲಿಹುದನಾರು ಅರಿಯರಣ್ಣಾ!

ಟೀಕು:— ಅಮರವೆಂದರೆ ನಿತ್ಯಪದವಿ. ಅಂತಪ್ಪ ನಿತ್ಯಪದವಿಯನರಿದು ಪರಮಾಮೃತವನುಣಲರಿಯದೆ ಅಜ್ಞಾನದಿಂದ ಬರಡು ಹೋಗಿದ್ದರೆಂಬುದೀಗ ಅಮರದ ಹೊಲಬನರಿಯದೆ ಜಗವೆಲ್ಲ ಬರಡಾಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಅಂಗವಿಕಾರದ ಮಿಥ್ಯೆಯ ಗೆಲಲರಿಯದೆ ಅಂತರಂಗದಲ್ಲಿ ಶಿವಯೋಗಿಗಳಾದೆವೆಂಬವರೆಲ್ಲ ತನು ತಾಮಸಕ್ಕೊಳಗಾದರೆಂಬುದೀಗ ಅಂಗದ ಹೊಲಬನರಿಯದೆ ಯೋಗಿಗಳೆಲ್ಲ ಭಂಗಿತರಾದರು ಎಂಬ ಶಬ್ದಕ್ಕರ್ಥ. ಮಹಾನುಭಾವಿಗಳ ಸಂಗದಲ್ಲಿ ಆಡಿ ತಮ್ಮ ಭವಪಾಶವ ಹರಿದು ಕೊಳಲರಿಯದವರು ಭವಭಾರಿಗಳಾದರೆಂಬುದೀಗ ಸಂಗದ ಹೊಲಬನರಿಯದೆ ಶರಣರು ಭಂಗಿತರಾದರು ಎಂಬ ಶಬ್ದಕ್ಕರ್ಥ. ಸರ್ವಾಂಗಲಿಂಗಸಂಬಂಧವಹ ಭೇದವನರಿಯದೆ ಬಹಿರಂಗದ ದುಶ್ಶೀಲವ ಹಿಡಿವರೆಲ್ಲರು ಸೂತಕಿಗಳಾದರೆಂಬುದೀಗ ಲಿಂಗದ ಹೊಲಬನರಿಯದೆ ಭಕ್ತ ಶೀಲವಂತನಾದನೆಂಬ ಶಬ್ದಕ್ಕರ್ಥ. ಆದಿ ಮಧ್ಯಾವಸಾನವೆಂಬ ತ್ರಿವಿಧದ ತೆರೆಯ ಮರೆಯಲ್ಲಿ ಅಡಗಿಪ್ಪ ಮಹಾಲಿಂಗವನಾರು ಅರಿಯರೆಂಬುದೀಗ ಆದಿ ಮಧ್ಯಾವಸಾನದಲ್ಲಿ ಗುಹೇಶ್ವರನೆಂಬ ಲಿಂಗವು ಅರಿವಿನ ಮರೆಯಲ್ಲಿಹುದನಾರು ಅರಿಯರಲ್ಲಾ ಎಂಬ ಶಬ್ದಕ್ಕರ್ಥ.

೨೦೭. ಅರಿಯದಂತಿರಲೊಲ್ಲದೆ ಅರಿದು ಕುರುಹಾದೆಯಲ್ಲಾ! ಹಿರಿಯರೆಲ್ಲರು ನೆರೆದು, ನಿಮ್ಮ ಕಟ್ಟಿದರೆ ಅಯ್ಯಾ ಉಪಚಾರಕ್ಕೆ ಓಸುಗರ ಸಾವಿಂಗೆ ಸಂಗಡವಾದೆಯಲ್ಲಾ ಗುಹೇಶ್ವರಾ!

ಟೀಕು. ನಿರಾಳ ನಿರ್ಮಾಯನಾಗಿಪ್ಪ ಮಹಾ ಘನ ಲಿಂಗವು ಭಕ್ತಿಕಾರಣವಾಗಿ ಭಕ್ತರ ಕರಸ್ಥಲಕ್ಕೆ ಇಷ್ಟಲಿಂಗವಾಗಿ ಬರಲು ಆ ಲಿಂಗವ ನಿಲವನರಿಯದೆ ಧರಿಸಿಕೊಂಡಿಪ್ಪ ಲಾಂಛನ ಧಾರಿಗಳಿಗೆ ಜನನ ಮರಣ ಹಿಂಗದು. ಅವರ ಕೈಯಲ್ಲಿಪ್ಪ ಲಿಂಗದಲ್ಲಿ ಲಿಂಗಕಳೆ ಸಂಪೂರ್ಣವಿಲ್ಲವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೦೮. ಅಜ್ಞಾನಿಯಾದವಂಗೆ ಅರಿವು ತಾನೆಲ್ಲಿಹುದೋ? ಸುಜ್ಞಾನಿಯಾದವಂಗೆ ಮರಹು ತಾನಲ್ಲಹುದೋ. ನಾನರಿವೆನೆಂಬಾತ ಇದಿರ ಕೇಳಲುಂಟೆ? ಭ್ರಾಂತಿನ ಭ್ರಮೆಯೊಳಗೆ ಬಳಲುತ್ತಿರಲು ಮಾತಿನ ಮಾಲೆಯೊಳಗೆ ಅರಿವೆಂಬುದುಂಟೆ? ಸೂತಕ ಹಿಂಗದೆ ಸಂದೇಹವಳಿಯದೆ ಮುಂ

ದಣ ಸೂಕ್ಷ್ಮವ ಕಾಂಬ ಪರಿಎಂತೋ? ಜ್ಯೋತಿಯ ಬಸಿರೊಳಗೆ ಜನಿಸಿದ ಕಾಂತಿಯ ಪ್ರಭೆಯ ಬೆಳಗು ಗುಹೇಶ್ವರಾ ನಿಮ್ಮ ಶರಣ.

ಟೀಕುः— ಅಜ್ಞಾನಿಗೆ ಅರಿವಿಲ್ಲವೆಂಬುದೇ ಸಹಜ. ಸುಜ್ಞಾನಿಗೆ ಮರಹಿಲ್ಲವೆಂಬುದೇ ಸಹಜ. ತನ್ನ ತಾನರಿದವಂಗೆ ಇದಿರ ಕೇಳಲಿಲ್ಲವೆಂಬುದೇ ಸಹಜ. ಭ್ರಾಂತಿಯ ಭ್ರಮೆ ಬಳಲುತ್ತಿರಲು ಮಾತಿನ ಮಾಲೆಯೊಳಗೆ ಅರಿವಿಲ್ಲವೆಂಬುದೆ ಸಹಜ. ಸೂತಕ ಸಂದೇಹಕ್ಕೆ ಶಿವಪಥವ ಕಾಣಬಾರದೆಂಬುದೇ ಸಹಜ. ಭ್ರಾಂತಿನ ಭ್ರಮೆಯೊಳಗೆ ಬಳಲುತ್ತಿರಲು ಮಾತಿನ ಮಾತಿನೊಳಗೆ ಅರಿವಿಲ್ಲವೆಂಬುದೆ ಸಹಜ. ಸೂತಕ ಸಂದೇಹಕ್ಕೆ ಸೂಕ್ಷ್ಮ ಶಿವಪಥವ ಕಾಣಬಾರದೆಂಬುದೇ ಸಹಜ. ತನ್ನ ತಾನರಿಯದ ಈ ಸಂದೇಹ ಪಥವೆಲ್ಲವು ಅಳಿದು ಸುಜ್ಞಾನಿ ಜ್ಯೋತಿ ಬೆಳಗೆ ಉದಯಿಸಿ ತನ್ನ ತಾನರಿದಾತನೆ ಅಚ್ಚ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೦೯. ಇರುಳ ನುಂಗಿತ್ತು ಇರುಳಿಲ್ಲ. ಹಗಲ ನುಂಗಿತ್ತು ಹಗಲಿಲ್ಲ. ಅರಿವ ನುಂಗಿತ್ತು ಅರಿವಿಲ್ಲ. ಮರೆವ ನುಂಗಿತ್ತು ಮರೆವಿಲ್ಲ. ಕಾಯವ ನುಂಗಿತ್ತು ಕಾಯವಿಲ್ಲ. ಜೀವವ ನುಂಗಿತ್ತು ಜೀವವಿಲ್ಲ. ಇವೆಲ್ಲವ ನುಂಗಿತ್ತು. ಇದೇನಯ್ಯಾ? ಸಾವ ನುಂಗದು ಗುಹೇಶ್ವರಾ!

ಟೀಕುः— ಶಿವಜ್ಞಾನ ಪ್ರಕಾಶವಾಗಲೊಡನೆ ದಿವಾರಾತ್ರಿಗಳೆಂಬವೆರಡು ಆ ಶಿವಜ್ಞಾನ ಪ್ರಭೆಯೊಳಗೆ ಅಡಗಿ ಹೋದವೆಂಬುದೀಗ ಇರುಳ ನುಂಗಿತ್ತು ಇರುಳಿಲ್ಲ ಹಗಲ ನುಂಗಿತ್ತು ಹಗಲಿಲ್ಲವೆಂಬ ಶಬ್ದಕ್ಕರ್ಥ. ಇಂತು ದಿವಾರಾತ್ರಿ ಭಾವಂಗಳಳಿದಲ್ಲಿ ಜ್ಞಾನಾಜ್ಞಾನಂಗಳೆರಡು ಅಳಿದವೆಂಬುದೀಗ ಅರಿವ ನುಂಗಿತ್ತು ಅರಿವಿಲ್ಲ ಮರವೆನುಂಗಿತ್ತು ಮರೆವಿಲ್ಲವೆಂಬ ಶಬ್ದಕ್ಕರ್ಥ. ಇಂತು ಅರಹು ಮರವೆಗಳೆರಡು ಅಳಿದಲ್ಲಿ ಕಾಯಜೀವಂಗಳೆಂಬ ಉಭಯ ಭಾವಂಗಳೆರಡು ಅಳಿದವೆಂಬುದೀಗ ಕಾಯವನುಂಗಿತ್ತು ಕಾಯವಿಲ್ಲ ಜೀವವ ನುಂಗಿತ್ತು ಜೀವವಿಲ್ಲ. ಎಂಬ ಶಬ್ದಕ್ಕರ್ಥ. ಇಂತಿವೆಲ್ಲವು ಮೂಲಜ್ಞಾನದೊಳಗೆ ಅಳಿದಲ್ಲಿ ತಾನೆಂಬ ಭಾವ ತನ್ನಲ್ಲಿ ಅಳಿಯದೆ ಇದ್ದಿತೆಂಬುದೀಗ ಇದೇನಯ್ಯಾ ಸಾವ ನುಂಗದು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೧೦. ಅಡಿಗಡಿಗೆ ತೊಳೆದು ಕುಡಿವರೆ ಹೊಟ್ಟೆ ಜಲಗರ ಕುತ್ತ ಬೆಳೆಯಿತ್ತು. ಅಚ್ಚ ಪ್ರಸಾದಿಯಾದರೆ ಹಿಂದೆ ಪರಿಯಾಣ ಉಳಿಯು



ವವೆ? ಇವರೆಲ್ಲರು ನಿಮ್ಮ ಪೂಜಿಸಿ ವ್ರತಗೇಡಿಗಳಾದರು. ನಾ ನಿಮ್ಮ ಪೂಜಿಸಿ ಬದುಕಿದೆನು ಗುಹೇಶ್ವರಾ.

ಟೀಕುः— ಪಾದೋದಕವ ಕೊಂಡರೆ ಸರ್ವಾಂಗವು ಪರಮಾನಂದ ರಸಮೂರ್ತಿಯಾಗಿರಬೇಕು. ಪ್ರಸಾದವ ಕೊಂಡರೆ ಪ್ರಸನ್ನ ಪರಿಣಾಮಿಯಾಗಿ ಲಿಂಗ ಭಾಜನವೆಂಬ ಪ್ರಸಾದ ಕಾಯ ಸಹಿತ ನಿರ್ವಯಲಾಗಬೇಕು. ಈ ತೆರನನರಿಯದೆ ಇಪ್ಪವರೆಲ್ಲರು ಭವಭಾರಿಗಳು. ಈ ತೆರನನರಿದವರೆಲ್ಲರು ಲಿಂಗೈಕ್ಯರೆಂಬುದೀ ವಚನದ ತಾತ್ಪರ್ಯಾರ್ಥ.

೨೧೧. ಮಜ್ಜನಕ್ಕೆರವಡೆ ಭೂತ ವಿಚಾರ. ಪ್ರಮಥಗಣಂಗಳೆಲ್ಲರು ಪ್ರೇತರು. ವೀರತತ್ವಗಣಂಗಳೆಲ್ಲರು ಬ್ರಹ್ಮರಾಕ್ಷಸರು. ಅರ್ಧನಾರೀಶ್ವರರೆಲ್ಲರು ಚಿಕ್ಕಮಕ್ಕಳಮೇಲೆ ತಪ್ಪಸಾಧಿಸಿಕೊಂಡು ಉಂಬರು. ಈ ನಾಲ್ಕು ಸ್ಥಲದೊಳಗೆ ಆವುದೂ ಅಲ್ಲ ಗುಹೇಶ್ವರಾ ನಿಮ್ಮ ಲಿಂಗೈಕ್ಯವು.

ಟೀಕುः— ಲಿಂಗಾರ್ಚನೆಯ ಮಾಡಿ ಆ ಪೂಜಾಫಲದಿಂದ ರುದ್ರಲೋಕದ ಪದವಿಯ ಹಡೆದು ರುದ್ರರಾಗಿಪ್ಪವರೆಲ್ಲರು ಅಲ್ಪಸುಖದ ಉಪಾಧಿಯೊಳಗಿಪ್ಪರಾಗಿ ಇವರುಗಳು ಮಹಾಲಿಂಗಾರ್ಚಕರಾಗಿ ನಿರ್ವಯಲ ಸ್ಥಲದಲ್ಲಿಪ್ಪ ಶರಣರಿಗೆ ಸರಿಬಾರರೆಂಬುದೀ ವಚನದ ತಾತ್ಪರ್ಯಾರ್ಥ.

೨೧೨. ಭಕ್ತಿಯೆಂಬುದು ಯುಕ್ತಿಯೊಳಗು. ಪೂಜೆಯೆಂಬುದು ನಿರ್ಮಾಲ್ಯದೊಳಗು. ಪ್ರಸಾದವೆಂಬುದು ಓಗರದೊಳಗು. ಆಚಾರವೆಂಬುದು ಅನಾಚಾರದೊಳಗು. ಧರ್ಮವೆಂಬುದು ಅಧರ್ಮದೊಳಗು. ಸುಖವೆಂಬುದು ದುಃಖದೊಳಗು. ವ್ರತವೆಂಬುದು ವೈರಾಗ್ಯದೊಳಗು. ನೇಮವೆಂಬುದು ಉದ್ಯೋಗದೊಳಗು. ಆಶೆಯೆಂಬುದು ಹಿಂಸೆಯೊಳಗು. ಇವಾವಂಗಳು ಇಲ್ಲದೆ ಗುಹೇಶ್ವರಾ ನಿಮ್ಮ ಶರಣ ಸುಖಿಯಾಗಿದ್ದನು.

ಟೀಕುः— ಲಿಂಗಕ್ಕೆ ಭಕ್ತಿ ಮಾಡಿಹೆನೆಂದರೆ ಆ ಭಕ್ತಂಗೆ ಯುಕ್ತಿ ಇದಿರಿಟ್ಟು ತೋರುತ್ತಿಹುದಾಗಿ ಆ ಭಕ್ತಿಯು ಸಹಜವಲ್ಲ. ಪೂಜೆಯ ಮಾಡಿಹೆನೆಂದರೆ ಪೂಜಿಸಿದ ತುದಿಯೊಳಗೆ ನಿರ್ಮಾಲ್ಯವೆಂಬುದ ಕಳೆಯಬೇಕಾದ ಕಾರಣ ಆ ಪೂಜೆಯು ಸಹಜವಲ್ಲ. ಪ್ರಸಾದವ ಕೊಂಡಿಹೆನೆಂದರೆ ಓಗರವೆಂಬುದೊಂದು ಭಾವ ಇದಿರಿಟ್ಟು ತೋರಿಹುದಾಗಿ ಆ ಪ್ರಸಾದವು ಸಹಜವಲ್ಲ. ಆಚಾರವು ಹಿಡಿದು, ನಡೆದಿಹೆನೆಂದರೆ ಆಚಾರಕ್ಕೆ ಅನಾಚಾರ ಮುಂದುಗೊಂಡಿಹುದಾಗಿ ಆ ಆಚಾರವು ಸಹಜವಲ್ಲ. ಧರ್ಮ

ವೆಂಬುದ ಹಿಡಿದು ನಡೆದಿಹೆನೆಂದರೆ ಅಧರ್ಮ ಮುಂದುಗೊಂಡಿಪ್ಪುದಾಗಿ ಅಧರ್ಮವು ಸಹಜವಲ್ಲ. ಸುಖವೆಂಬುದನನುಭವಿಸಿಹೆನೆಂದಿರಲು ದುಃಖ ವೆಂಬುದು ಇದಿರಿಟ್ಟು ತೋರಿಹುದಾಗಿ ಆ ಸುಖವು ಸಹಜವಲ್ಲ. ವ್ರತ ವೆಂಬುದ ಹಿಡಿದು ನಡೆದಿಹೆನೆಂದಿರಲು ಈ ವ್ರತಕ್ಕೆ ವೈರಾಗ್ಯ ಮುಂದು ಗೊಂಡಿಪ್ಪುದಾಗಿ ಆ ವ್ರತವು ಸಹಜವಲ್ಲ. ನಿಯಮಂಗಳ ಹಿಡಿದು ನಡೆದಿಹನೆಂದರೆ ಅಲ್ಲಿ ಉದ್ಯೋಗ ಮುಂದುಗೊಂಡಿಹುದಾಗಿ ಆ ನೇಮವು ಸಹಜವಲ್ಲ. ಅಹಿಂಸೆಗೆ ಧರ್ಮವೆಂದು ಹಿಡಿದು ನಡೆದಿಹೆನೆಂದರೆ ಹಿಂಸೆ ಮುಂದುಗೊಂಡಿಪ್ಪುದಾಗಿ ಆ ಹಿಂಸೆ ಎಂಬುದು ಸಹಜವಲ್ಲ. ಈ ತೆರ ನಾವಾವು ಅಲ್ಲದೆ ಸಹಜ ಲಿಂಗಾನುಭಾವ ಸಂಬಂಧಿಯಾಗಿಪ್ಪಾತನೆ ಶರಣ ನೆಂಬುದೀ ವಚನದ ತಾತ್ಪರ್ಯಾರ್ಥ.

೨೧೩. ಭಕ್ತನೆಂಬವ ಸೂತಕಿ. ಲಿಂಗೈಕ್ಯನೆಂಬವ ವ್ರತಗೇಡಿ. ಶರಣ ಸತಿ ಲಿಂಗ ಪತಿ ಎಂಬ ಶಬ್ದ ಸರ್ವ ಗುಣ ಸಾಹಿತ್ಯನೆಂಬಾತ ಕರ್ಮೇಂದ್ರಿಯ ಭೋಗಕ್ಕೆ ಬಾರದ ಭೋಗಿ. ಗುಹೇಶ್ವರಾ ನಿಮ್ಮ ಶರಣ ಆವ ಭೀತ ನಲ್ಲ ಆವ ಕರ್ಮಿಯಲ್ಲ.

ಟೀಕು:— ಭಕ್ತನೆಂಬಾತಂಗೆ ನಾನು ಮಾಡಿಹೆನೆಂಬ ಸೂತಕ ಮುಂದುಗೊಂಡಿಪ್ಪುದಾಗಿ ಭಕ್ತನೆಂಬಾತ ಸೂತಕಿ ಎಂಬ ಶಬ್ದಕ್ಕರ್ಥ. ಲಿಂಗೈಕ್ಯನೆಂಬಾತ ನಾನು ಲಿಂಗದಲ್ಲಿ ಬೆರಸಿವೆನೆಂಬ ಭಿನ್ನ ಸುಖ ಮುಂದುಗೊಂಡಿಪ್ಪನಾಗಿ ಆತ ವ್ರತಗೇಡಿ ಎಂಬ ಶಬ್ದಕ್ಕರ್ಥ. ಶರಣ ಸತಿ ಲಿಂಗ ಪತಿ ಎಂದಾತಂಗೆ ಸರ್ವೇಂದ್ರಿಯಂಗಳು ಲಿಂಗದಲ್ಲಿ ಸಮರ್ಪಿತವಾದವೆಂದು ಅರಿವಿನ ಸೂತಕ ಮುಂದುಗೊಂಡಿಪ್ಪುದಾಗಿ ಶರಣ ಸತಿ ಲಿಂಗ ಪತಿ ಎಂಬ ಶಬ್ದಕ್ಕರ್ಥ. ಸರ್ವ ಗುಣ ಸಾಹಿತ್ಯ ಎಂಬಾತ ಕರ್ಮೇಂದ್ರಿಯ ಭೋಗಕ್ಕೆ ಬಾರದ ಭೋಗಿ ಎಂಬ ಶಬ್ದಕ್ಕರ್ಥ. ಇಂತಪ್ಪ ನಿರ್ಣಯವನತಿಗಳೆದು ನಿರ್ಣಯ ನಿಜದಲ್ಲಿ ನಿಂದಿಪ್ಪಾತನೆ ಶರಣನೆಂಬುದೀಗ ಗುಹೇಶ್ವರಾ ನಿಮ್ಮ ಶರಣನು ಆವ ಭೀತನಲ್ಲ ಆವ ಕರ್ಮಿಯಲ್ಲ ಎಂಬ ಶಬ್ದಕ್ಕರ್ಥ.

೨೧೪. ಭವಿಯೆಂಬುದು ಹುಸಿ. ಭಕ್ತಿಯೆಂಬುದು ಉಪದೇಶ. ಶೀಲ ವೆಂಬುದು ಸಂಕಲ್ಪ. ಸಮತೆಯೆಂಬುದು ಸೂತಕ. ಇಂತೀ ಚತುರ್ವಿಧದೊಳಗಿಲ್ಲ. ಗುಹೇಶ್ವರಾ ನಿಮ್ಮ ಶರಣ ನಿಸ್ಸಮ.



ಟೀಕು:— ಲಿಂಗ ಸಂಬಂಧದಲ್ಲಿ ನಿಸ್ಸೀಮನಾಗಿ ನೆರೆಯೇರಿದ ಶರಣ ಭವಿಯೆಂಬ ಮಿಥ್ಯೆಯನರಿಯ ತೆರಹಿಲ್ಲ. ಭಕ್ತಿಯೆಂಬುದು ತಥ್ಯವೆಂದರಿಯ ತೆರಹಿಲ್ಲ. ಸಮತೆಯೆಂಬ ಸೂತಕ ಧರಿಸಿಹೆನೆಂದರೆ ತೆರಹಿಲ್ಲ. ಶೀಲವೆಂಬ ಸಂಕಲ್ಪವ ತಾ ಚರಿಸಿಹೆನೆಂದೊಡೆ ತೆರಹಿಲ್ಲ. ಈ ಚತುರ್ಗುಣಂಗಳನು ಹೊದ್ದದೆ ಅಚ್ಚ ಶಿವಜ್ಞಾನಾರೂಢನಾಗಿಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

೨೧೫. ಊರೊಳಗೊಬ್ಬ ದೇವ. ಮಡುವಿನಲೊಬ್ಬ ದೇವ. ಅಡವಿಯಲೊಬ್ಬ ದೇವ. ಮಡಿಲಲೊಬ್ಬ ದೇವ. ನೀರು ನೀರ ಕೂಡಿ ಬಯಲು ಬಯಲ ಕೂಡಿ ನರನೆಂಬ ದೇವ ತಾ ನಿರಾಳವು. ಲಿಂಗವೆಂಬುದೊಂದು ಅನಂತ ಹೆಸರು. ಗುಹೇಶ್ವರನೆಂಬುದದೇನೋ!

ಟೀಕು:— ಪುಣ್ಯ ನಕ್ಷತ್ರದಲ್ಲಿ ಪುಣ್ಯ ಗಂಗಾತೀರದಲ್ಲಿ ಗಿರಿ ಗುಹೆ ವನಾಂತರಂಗದಲ್ಲಿ ದೇವರಿಪ್ಪರೆಂದು ಹೋಗುವದೆಲ್ಲವು ಭ್ರಾಂತು. ಕರಸ್ಥಳದಲ್ಲಿಯೂ ದೇವರಿಪ್ಪರೆಂಬ ಭಿನ್ನ ಶಬ್ದ ಹುಸಿ. ಮತ್ತೆಂತೆಂದರೆ ಜಲಬಿಂದುವಿಂದಾತ ತನುವ ನಿವೃತ್ತಿ ಮಾಡಿ ಬಯಲ ಮುಖದಿಂದ ಪ್ರಾಣ, ಆ ಪ್ರಾಣ ಅಲ್ಲಿಯೇ ನಿವೃತ್ತಿಮಾಡಿ ತನ್ನ ತಾನರಿದರೆ ಆತನೇ ದೇವನೆಂಬುದೀ ವಚನದ ತಾತ್ಪರ್ಯಾರ್ಥ.

೨೧೬. ತನುವಿನ ಕೊರತೆಗೆ ಸುಳಿ ಸುಳಿದು ಮನದ ಕೊರತೆಗೆ ನೆನನೆನದು ಭಾವದ ಕೊರತೆಗೆ ತಿಳಿತಿಳಿದು ಶಬ್ದದ ಕೊರತೆಗೆ ಉಳಿದುಳಿದು ಗುಹೇಶ್ವರನೆಂಬ ಲಿಂಗವು ಮನದಲ್ಲಿ ನೆಲೆಗೊಳ್ಳಲಾಗಿ.

ಟೀಕು:— ಗಮಿಸಿ ಬಳಲುವದೆಲ್ಲವು ತನುವಿನ ಕೊರತೆಯೆಂದರಿವುದು. ಅರಿದು ಬಳಲುವದೆಲ್ಲವು ಭಾವದ ಕೊರತೆ ಎಂದರಿವುದು. ನುಡಿದು ಬಳಲುವದೆಲ್ಲವು ಶಬ್ದದ ಕೊರತೆ ಎಂದರಿವುದು. ಅದೇನುಕಾರಣ ಈ ಪ್ರಕೃತಿಗಳು ಬಿಡವೆಂದರೆ ಮಹಾಲಿಂಗವು ಮನಸ್ಥಲದಲ್ಲಿ ವೇದಿಸಿದ ಕಾರಣ ಎಂದರಿವುದೀಗ ಈ ವಚನದ ತಾತ್ಪರ್ಯಾರ್ಥ.

೨೧೭. ಹುಸಿವುಳ್ಳಾತ ಭಕ್ತನಲ್ಲ. ಭಾದೆಯುಳ್ಳಾತ ಜಂಗಮ ವಲ್ಲ. ಆಶೆಯುಳ್ಳಾತ ಶರಣನಲ್ಲ. ಇಂತಪ್ಪ ಆಶೆ ಹುಸಿಬಾಧೆಯ ನಿರಾಕರಿಸಿ ಇರಬಲ್ಲರೆ ಗುಹೇಶ್ವರಾ ನಿಮ್ಮ ಶರಣ.

ಟೀಕು:— ಸರ್ವೇಂದ್ರಿಯಂಗಳ ವಿಷಯದ ಆಶೆಯ ಲಿಂಗದಲ್ಲಿ ಸವಿಸಿಯಲ್ಲದೆ ಆತ ಶರಣನಲ್ಲನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೧೮. ಆಶೆಯ ವೇಷವ ಧರಿಸಿ ಭಾಷೆ ಪಲ್ಲಟವಾದರೆ ಎಂತಯ್ಯಾ ಶರಣ ಪಥ ವೇದ್ಯವಹುದು? ತ್ರಿಭುವನದ ಮಸ್ತಕದ ಮೇಲೆ ಇಪ್ಪ ಮೂರು ಗಿರಿಯ ಹುಡಿಗಟ್ಟಿದನ್ನಕ್ಕರ ಎಂತಯ್ಯಾ ಶಿವ ಪಥ ಸಾಧ್ಯವಹುದು? ಭದ್ರೆ ನಿಭದ್ರೆಯರೆಂಬವರ ಮೂಲ ನಾಶವ ಮಾಡದನ್ನಕ್ಕರ ಎಂತಯ್ಯಾ ಲಿಂಗೈಕ್ಯವು? ಅತಳ ಲೋಕದಲ್ಲಿ ಕುಳ್ಳಿರ್ದು ಬ್ರಹ್ಮಲೋಕವ ಮುಟ್ಟಿದೆನೆಂಬವರೆಲ್ಲ ಭವಭಾರಕ್ಕೊಳಗಾಗುದ ನಾನು ಕಂಡು ಬೆರಗಾದೆನು ಗುಹೇಶ್ವರಾ!

ಟೀಕು:— ಆಶಾ ಪಾಶ ಹಿಂಗದನ್ನಕ್ಕರ ಶರಣ ಪಥ ಸಾಧ್ಯವಲ್ಲವೆಂಬುದೀಗ ಆಶೆಯ ವೇಷವ ಧರಿಸಿ ಭಾಷೆ ಪಲ್ಲಟವಾದರೆ ಏಕಯ್ಯಾ ಶರಣ ಪಥ ಸಾಧ್ಯವಹುದು ಎಂಬ ಶಬ್ದಕ್ಕರ್ಥ. ಮೂರು ಲೋಕದ ಮಸ್ತಕದ ಮೇಲೆ ಭಾರವಾಗಿರುತಿರ್ಪ ರಾಜಸ ಸಾತ್ವಿಕ ತಾಮಸಾಹಂಕಾರವೆಂಬ ತ್ರಿವಿಧವನು ಛೇದಿಸದನ್ನಕ್ಕರ ಶಿವ ಪಥ ಸಾಧ್ಯವಾಗದೆಂಬುದೀಗ ತ್ರಿಭುವನದ ಮಸ್ತಕದ ಮೇಲೆ ಇಪ್ಪ ಮೂರು ಗಿರಿಯ ಹುಡಿಗುಟ್ಟದನ್ನಕ್ಕರ ಎಂತಯ್ಯಾ ಶಿವ ಪಥ ಸಾಧ್ಯವಹುದು ಎಂಬ ಶಬ್ದಕ್ಕರ್ಥ. ಭದ್ರೆಯೆಂದರೆ ಮಂಗಳ ಶಬ್ದ ಅಂತಪ್ಪ ಮಂಗಳ ಸ್ವರೂಪವನುಳ್ಳ ಚಿಚ್ಛಕ್ತಿಯನು ವಿಭದ್ರೆಯೆಂದರೆ ಅಮಂಗಲ ಶಬ್ದ ಅಂತಪ್ಪ ಅಮಂಗಳ ಸ್ವರೂಪವನುಳ್ಳ ಮಾಯಾಶಕ್ತಿಯನು ಛೇದಿಸಿ ನೋಡಿ ಈ ಎರಡೂ ಭಾವಗಳನುಂಟುಮಾಡಿ ಇದಿರಿಟ್ಟು ತೋರುವ ಮೂಲಾಹಂಕಾರವ ನಷ್ಟವ ಮಾಡದನ್ನಕ್ಕರ ಲಿಂಗೈಕ್ಯವಲ್ಲವೆಂಬುದೀಗ ಭದ್ರೆ ನಿಭದ್ರೆ ಎಂಬವರ ಮೂಲ ನಾಶವ ಮಾಡದನ್ನಕ್ಕರ ಲಿಂಗೈಕ್ಯವಿಲ್ಲವೆಂಬುವ ಶಬ್ದಕ್ಕರ್ಥ. ಇಹಲೋಕದಲ್ಲಿಯ ಸ್ಥಿತಿಯ ವರ್ತಮಾನದೊಳಗೆ ಮುಳುಗಿರ್ದು ಶಿವಲೋಕವೆಲ್ಲವು ಎನ್ನೊಳಡಗಿತ್ತೆಂದು ನುಡಿಯುವ ಮಾತು ಮಿಥ್ಯೆ ಎಂಬುದೀಗ ಅತಳ ಲೋಕದಲ್ಲಿ ಕುಳ್ಳಿರ್ದು ಬ್ರಹ್ಮಲೋಕವ ಮುಟ್ಟಿದೆನೆಂಬವರೆಲ್ಲ ಭವಭಾರಕ್ಕೊಳಗಾದುದ ನಾನು ಕಂಡು ಬೆರಗಾದೆನು ಎಂಬ ಶಬ್ದಕ್ಕರ್ಥ.

೨೧೯. ತನು ಬತಲೆ ಇದ್ದೊಡೇನು ಮನ ಸುಖಿಯಾಗದನ್ನಕ್ಕರ? ಮುಂಡೆ ಬೋಳಾದಡೇನು ಭಾವ ಬಯಲಾದನ್ನಕ್ಕರ? ಭಸ್ಮವ ಹೂಸಿ



ದೊಡ್ಡೇನು ಕರಣಾದಿಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ? ಇಂತೀ ಆಶೆಯ ವೇಷದ ಭಾಷೆಗೆ ನೀ ಸಾಕ್ಷಿಯಾಗಿ ಛೀಯೆಂದು ಕಳೆಯುವೆನು ಗುಹೇಶ್ವರಾ.

ಟೀಕು:— ಅಂಗ ವಿಕಾರ ಮನ ವಿಕಾರ ಕರಣ ವಿಕಾರಂಗಳನೆಲ್ಲವನು ಹಿಂಗಿಸಿ ಲಿಂಗದಲ್ಲಿ ಅವಿರಳ ಜ್ಞಾನಿಯಾಗಿದ್ದಾತನೆ ಅಚ್ಚ ಶರಣ. ಇದನರಿಯದೆ ಆವ ವೇಷಲಾಂಛನವ ಧರಿಸಿದಡೆಯು ಆತ ಸುಜ್ಞಾನಿಯಲ್ಲ ಎಂಬುದೀ ವಚನದ ತಾತ್ಪರ್ಯಾರ್ಥ.

೨೨೦. ಭಸ್ಮವ ಹೂಸಿ ಬತ್ತಲೆ ಇದ್ದರೇನು ಬ್ರಹ್ಮಚಾರಿಯೇ? ಅಶನವನುಂಡು ವ್ಯಸನವ ಮರೆದಡೇನು ಬ್ರಹ್ಮಚಾರಿಯೇ? ಭಾವ ಬತ್ತಲೆ ಇದ್ದು ಮನವು ಗಂಭೀರವಾಗಿದ್ದರೆ ಅದು ಸಹಜ ನಿರ್ವಾಣ ಕಾಣಾ ಗುಹೇಶ್ವರಾ.

ಟೀಕು:— ಲಿಂಗದಲ್ಲಿ ತನ್ನಲ್ಲಿ ಭಿನ್ನಭಾವ ಅಳಿದು ಅರಿವು ನೆರೆ ಘಟಿಸಿದಾತನೆ ನಿರ್ವಾಣಿ. ಇದಲ್ಲದೆ ಭಸ್ಮವ ಹೂಸಿಕೊಂಡು ಬತ್ತಲೆ ಇದ್ದು ಅನ್ನಪಾನಂಗಳ ಕೊಂಡು ವ್ಯಸನಂಗಳ ಮರೆದೆನೆಂಬಾತ ಶರಣನಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೨೨೧. ಶರಣ ಸಂಬಂಧವನರಿದಾತನೆಂತಿರ್ದಡೇನಯ್ಯಾ? ತಿಳಿದು ನೋಡಿ ನಡೆಯದಿರ್ದಡೆ ಭಕ್ತಿವಿರೋಧಿ. ತೆರಹನುಳಿದು ಮರವೆಯುಳಿದು ಸುಳಿವನಾಗಿ ಉಪಜೀವಿತನಲ್ಲ ಕೇಳಿರಣ್ಣಾ. ಗುಹೇಶ್ವರನ ಶರಣನ ಸಂಗ ಸುಖದ ಉರವಣಿಯ ಸೋಂಕು ಲೋಕಕ್ಕೆ ವಿರೋಧ.

ಟೀಕು:— ಲಿಂಗದಲ್ಲಿ ನೆರೆಯರಿದು ನಿರ್ಲಜ್ಜನಾದ ಶರಣ ಲೋಕಾಚಾರ ಲಜ್ಜೆಯನರಿದು ನಡೆಯನಾಗಿ ಆತನ ನಡೆ ನುಡಿಗಳು ಲೋಕಕ್ಕೆ ವಿರೋಧವಾಗಿಹುದೆಂಬುದೀ ವಚನದ ತಾತ್ಪರ್ಯಾರ್ಥ.

೨೨೨. ನೆಲನಿಲ್ಲದ ಭೂಮಿಯ ಮೇಲೊಂದು ಗಿಡವು ಹುಟ್ಟಿತ್ತು. ಸಿಡಿಲ ಬಣ್ಣದವೆಂಟು ಹೂವಾದವು ನೋಡಾ! ಕೊಂಬಿನೊಳಗೆ ಫಲದೋರಿ ಬೇರಿನೊಳಗೆ ಹಣ್ಣಾಗಿತ್ತು. ಅದು ಕಾಣದ ಠಾವಿನಲ್ಲಿ ತೊಟ್ಟು ಬಿಟ್ಟು ಬಿದ್ದ ಹಣ್ಣ ಮೆದ್ದವನಲ್ಲದೆ ಶರಣನಲ್ಲ ಗುಹೇಶ್ವರಾ!

ಟೀಕು:— ಭೂತಪಿಂಡವೆಂಬ ಭಾವ ಹಿಂಗಿ ಭಕ್ತಿಯೆಂಬ ಪಿಂಡ ದೊರಕೊಂಡಿತ್ತೆಂಬುದೀಗ ನೆಲನಿಲ್ಲದ ಭೂಮಿ ಎಂಬ ಶಬ್ದಕ್ಕರ್ಥ.

ಅಂತಪ್ಪ ಭಕ್ತಿಪಿಂಡದೊಳಗೆ ಸದ್ವಿವೇಕವೆಂಬ ಶಿಶು ಹುಟ್ಟಿ ಬೆಳೆಯಲು ಅಲ್ಲಿಪ್ಪ ಅಷ್ಟತನುಗಳೆಲ್ಲ ಸದ್ವಾಸನಾಸ್ವರೂಪವನೆಯ್ದಿ ನಿಜವು ವಿಕಸಿತವಾಗಿ ಜ್ಯೋತಿರ್ವರ್ಣವ ಧರಿಸಿದ್ದವೆಂಬುದೀಗ ಸಿಡಲ ಬಣ್ಣದ ಎಂಟು ಹೂವಾದವು ನೋಡಾ! ಎಂಬ ಶಬ್ದಕ್ಕರ್ಥ. ಆ ಪುಷ್ಪ ಸರ್ವಾಚಾರ ಸಂಪತ್ತೆಂಬ ಶಾಖೆಗಳಲ್ಲಿ ಫಲವಾಗಿ ಮೂಲಜ್ಞಾನವೆಂಬ ಫಲರಸ ಪರಿಪಕ್ವವಾಯಿತ್ತೆಂಬುದೀಗ ಕೊಂಬಿನೊಳಗೆ ಫಲದೋರಿ ಬೇರಿನಲ್ಲಿ ಹಣ್ಣಾಯಿತ್ತೆಂಬ ಶಬ್ದಕ್ಕರ್ಥ. ಆ ಫಲ ಅಸಾಧ್ಯಸ್ಥಲವೆಂಬ ಮಹಾಘನದಲ್ಲಿ ತೊಟ್ಟು ಬಿಟ್ಟು ಬೀಳಲು ಆ ಫಲವ ಮಹಾಜ್ಞಾನಾರೂಢನಾಗಿ ನಿರ್ಭಾವ ಹಸ್ತದಿಂದ ಪಿಡಿದು ಅಭಿನ್ನಸುಖದಿಂದ ಭೋಗಿಸಿದಾತನೆ ಅಚ್ಚ ಶರಣನು. ಅಲ್ಲದಾತನು ಶರಣ ಪಥಕ್ಕೆ ಸಲ್ಲನೆಂಬುದೀಗ ಅದು ಕಾಣದ ಠಾವಿನಲ್ಲಿ ತೊಟ್ಟು ಬಿಟ್ಟು ಬಿದ್ದ ಹಣ್ಣ ಮೆದ್ದವನಲ್ಲದೆ ಶರಣನಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೨೨೩. ಧ್ಯಾನ ಸೂತಕ ಮೌನ ಸೂತಕ ಜಪ ಸೂತಕ ಅನುಷ್ಠಾನ ಸೂತಕ ಗುಹೇಶ್ವರನೆಂಬ ಲಿಂಗವನರಿದ ಬಳಿಕ ಸೂತಕ ಹಿಂಗಿತ್ತು ಯಥಾ ಸ್ವಯಿಚ್ಛೆ.

ಟೀಕು:— ಲಿಂಗವನರಿದು ಲಿಂಗದಲ್ಲಿ ಸುಖಿಯಾದ ಶರಣನು ಸರ್ವ ಸೂತಕವನು ಅರಿಯದೆ ಸ್ವತಂತ್ರನಾಗಿಪ್ಪ ಎಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೨೪. ಕುರುಹ ಮುಟ್ಟದೆ ಕೂದಲು ಹರಿಯದೆ ಬೋಳಾಗಬೇಕು. ಕಾಯ ಬೋಳೋ ಕಪಾಳ ಬೋಳೋ ಹುಟ್ಟುವುದು ಬೋಳೋ ಹುಟ್ಟದೆ ಹೋಹುದು ಬೋಳೋ ಗುಹೇಶ್ವರಾ?

ಟೀಕು:— ತನ್ನ ತಾನರಿದು ಅಂತರಂಗದೊಳಗಣ ಕರಣ ವಿಕಾರವೆಂಬವೆಲ್ಲವನು ನಿವೃತ್ತಿಮಾಡಿ ಮನ ಬೋಳಾದರೆ ಅದೇ ಬೋಳು. ಜನನ ಮರಣಂಗಳ ಗೆಲಿದರೆ ಅದು ಬೋಳು. ಈ ತೆರನರಿಯದೆ ಬೋಳಾದರೆ ಅದೆಲ್ಲವು ಮಿಥ್ಯೆ ಬೋಳೆಂಬುದೀ ವಚನದ ತಾತ್ಪರ್ಯಾರ್ಥ.

೨೨೫. ನಿರಾಳ ಸ್ಥಾನದಲ್ಲಿ ಆಪ್ಯಾಯನವಿಲ್ಲದೆ ಹೋಯಿತ್ತು ಅದೇನಯ್ಯಾ? ಪಲವು ನಾಮವಾದೆಯಲ್ಲಾ! ಚಂದ ಚಂದದ ಚರಿತ್ರನಲ್ಲ. ನಿಲ್ಲು ನಿಲ್ಲು ಮಾಣು. ನಿಮ್ಮಿಚ್ಛೆಯ ಪಡೆದವರೆಮ್ಮವರು ಇಂತಹ ದೇವರು ಅಂತಹ ದೇವರು ನಾಮ ಉರಿಸದು ಒಲ್ಲೆ ಕಾಣಾ ಗುಹೇಶ್ವರ.



ಟೀಕು:— ನಿರಾಳ ಲಿಂಗವು ತಾನೆಂದರಿವ ಪ್ರಸನ್ನತ್ವವಿಲ್ಲದೆ ವೃಥಾ ವಾಗ್ವಾದವಾಗಿ ಹೋಯಿತೆಂಬುದೀಗ ನಿರಾಳ ಸ್ಥಾನದಲ್ಲಿ ಆಪ್ಯಾಯನವಿಲ್ಲದೆ ಹೋಯಿತ್ತು ಅದೇನೆಂದೆನಯ್ಯಾ ಎಂಬ ಶಬ್ದಕ್ಕರ್ಥ. ಅದುಕಾರಣ ಅದು ಬ್ರಹ್ಮ ಇದು ಬ್ರಹ್ಮವೆಂಬ ಹಲವು ನಾಮಂಗಳೆಲ್ಲವು ವೃಥಾ ವಿಲಾಸದ ಮಿಥ್ಯೆ ಎಂಬುದೀಗ ಹಲವು ನಾಮಂಗಳ ಆದೆಯಲ್ಲಾ ಚಂದ ಚಂದದ ಚರಿತ್ರವಲ್ಲಾ ನಿಲ್ಲು ಮಾಣು ಎಂಬ ಶಬ್ದಕ್ಕರ್ಥ. ಇಂತಪ್ಪ ಬಹುವಾಕ್ಯಂಗಳ ಉಪಾಧಿ ಚೇತ್ರಂಗಳು ಸ್ವಚ್ಛಂದ ಚರಿತ್ರನಪ್ಪ ಶರಣಂಗೆ ಉರಿಸದೆಂಬುದೀಗ ಇಂತಹೆ ದೇವರು ಅಂತಹ ದೇವರು ಎಂಬ ನಾಮವು ಉರಿಸದು ಒಲ್ಲೆ ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೨೬. ಆದಂತೆ ಆದೆನು ಜಗದ ಆಗುವ ಕಂಡು ಬಲ್ಲೆನಾಗಿ ಒಲ್ಲೆನು. ಜಗನಿಲ್ಲದು ಕಂಡೆಯ್ಯಾ. ಮಾಡಿ ಮಾಡಿ ಕೆಡಿಸದಿರಾ ನೀನಾಡಿಂಗೆ ಮರುಳಾಗದಿರಾ ಬೇಡು ಗುಹೇಶ್ವರಾ ನಿರಾಳವನೆನ್ನಲ್ಲಿ.

ಟೀಕು:— ಜಗದಲ್ಲಿ ಉದಯಿಸಿದ ಶರಣ ಆ ಜಗದ ಆಗು ಹೋಗವನರಿದು ನಿವೃತ್ತಿಮಾಡಿ ಲಿಂಗದಲ್ಲಿ ಆಗಾಗಿ ನಿರಾಳಸ್ಥಲದಲ್ಲಿ ನಿಂದು ಇಪ್ಪನಾಗಿ ಆದಂತೆ ಆದೆನು ಜಗದ ಆಗುವ ಕಂಡು ಬಲ್ಲೆನಾಗಿ ಒಲ್ಲೆನು ಜಡನಿಲ್ಲದು ಕಂಡೆಯ್ಯಾ ಎಂಬ ಶಬ್ದಕ್ಕರ್ಥ. ಆ ಶರಣ ಆ ಲಿಂಗಕ್ಕೆ ಉಪಾಧಿ ಸುಖಂಗಳ ಹಾರದೆ ಆ ಲಿಂಗವು ಲೋಕಕ್ಕೆ ಮೆಚ್ಚಿದ ಭೇದವ ತನಗೆ ಮೆಚ್ಚಿಸಿಕೊಳ್ಳದೆ ಆ ಲಿಂಗಕ್ಕೆ ತಾನೆ ಅದಿಷ್ಠಾಯಕನಾಗಿದ್ದನೆಂಬುದೀಗ ಮಾಡಿ ಮಾಡಿ ಕೆಡಿಸದಿರಾ ನೀನಾಡಿಂಗೆ ಮರುಳಾಗದಿರಾ ಬೇಡು ಗುಹೇಶ್ವರಾ ನಿರಾಳವನೆನ್ನಲ್ಲಿ ಎಂಬ ಶಬ್ದಕ್ಕರ್ಥ.

೨೨೭. ಊರೊಳಗಣ ಕಿಚ್ಚು ಕಾನನದಲ್ಲಿ ಉರಿಯಿತ್ತು. ಕಾನನದ ಕಿಚ್ಚು ಬಂದು ಊರೊಳಗೆ ಉರಿಯಿತ್ತು. ಆರಿಸಿರೋ! ಆರಿಸಿರೋ! ನಾಲ್ಕು ದಿಕ್ಕಿನ ಬೇಗೆಯ ಆ ಬೂಭೂಕಾರವೆ ದೃಷ್ಟಿ ಮುಟ್ಟದಡೆ ಅಷ್ಟ ಸಹಸ್ರವಾಯಿತ್ತು ಲೆಕ್ಕವಿಲ್ಲದ ಮರಣ ನಡೆಯಿತ್ತು ಗುಹೇಶ್ವರಾ!

ಟೀಕು:— ಊರೆಂದರೆ ಪಂಚಭೂತಗ್ರಾಮವಪ್ಪ ದೇಹ. ಆ ದೇಹದೊಳಗೆ ಉದಯಿಸಿದ ಮಹಾ ಜ್ಞಾನಾಗ್ನಿ ಭವವೆಂಬ ಅರಣ್ಯವ ದಹನವ ಮಾಡಿತ್ತೆಂಬುದೀಗ ಊರೊಳಗಣ ಕಿಚ್ಚು ಕಾನನದಲ್ಲಿ ಉರಿಯಿತ್ತೆಂಬ ಶಬ್ದಕ್ಕರ್ಥ. ಆ ಭವಾರಣ್ಯವೆಲ್ಲವು ಬಯಲಾಗಿ ಆ ಜ್ಞಾನಾಗ್ನಿಯಿಂದವೆ

ತನು ದಗ್ಧವಾಯಿತ್ತೆಂಬುದೀಗ ಕಾನನದ ಕಿಚ್ಚು ಬಂದು ಊರೊಳಗೆ ಉರಿಯಿತ್ತೆಂಬ ಶಬ್ದಕ್ಕರ್ಥ. ಆ ಜ್ಞಾನಾಗ್ನಿಯ ಪ್ರಭೆ ಸರ್ವತೋ ದಿಕ್ಕು ತಾನೆಯಾಗಿರುತ್ತಿರಲು ಅದನ್ನು ವಿವೇಕ ಬುದ್ಧಿಯಿಂ ನೋಡಿ ಕಾಣುತ್ತಿರಲು ಅದೀಗ ಆರಿಸಿರೋ ಆರಿಸಿರೋ ನಾಲ್ಕು ದಿಕ್ಕಿನ ಬೇಗೆಯನೆಂಬ ಶಬ್ದಕ್ಕರ್ಥ. ಅತ್ಯಂತ ಉಬ್ಬರದ ವೃತ್ತಿ ಜ್ಞಾನದ ಪ್ರಭೆಯನು ಮಹಾಜ್ಞಾನ ದೃಷ್ಟಿಯಲ್ಲಿ ಲೀನವ ಮಾಡುತ್ತಿರಲು ಅಲ್ಲಿ ಇದಿರಿಟ್ಟು ತೋರುತ್ತಿದ್ದ ಸಕಲ ಕರಣಂಗಳೆಲ್ಲವು ಲಯವಾದವೆಂಬುದೀಗ ಆ ಬೂಭೂಕಾರವ ದೃಷ್ಟಿ ಮುಟ್ಟಿದರೆ ಅಷ್ಟ ಸಹಸ್ರವಾಯಿತ್ತು ಲೆಕ್ಕವಿಲ್ಲದ ಮರಣ ನಡೆಯಿತ್ತೆಂಬ ಶಬ್ದಕ್ಕರ್ಥ.

೨೨೮. ಪರಿಣಾಮದೊಳಗೆ ಮನದ ಪರಿಣಾಮವೇ ಚಲುವ. ಸಂಗದೊಳಗೆ ಶರಣರ ಸಂಗವೇ ಚಲುವ. ಕಾಯಕೊಂಡು ಹುಟ್ಟಿದ ಮೂಢರೆಲ್ಲ ಸಾಯದ ಸಂಚವನರಿಯುವದೆ ಚಲುವ ಗುಹೇಶ್ವರಾ.

ಟೀಕು:— ಮನದ ಸಂಕಲ್ಪ ವಿಕಲ್ಪವ ಕೆಡಿಸಿ ಆ ಮನ ಲಿಂಗವೇದಿಯಾಗಲು ಅದೇ ಪರಮ ಸುಖ. ಮಹಾನುಭಾವಿಗಳ ಸಂಗದಲ್ಲಿದ್ದು ಕರ್ಕಶವಿಲ್ಲದೆ ಸಮರಸಗೋಷ್ಠಿಯನಾಡಬಲ್ಲಡೆ ಅದೇ ಪರಮ ಸುಖ. ಶರೀರದ ಅನಿತ್ಯತ್ವವನರಿದು ನಿತ್ಯವಾದ ವಸ್ತುವ ಸಾಧ್ಯವ ಕೊಳಬಲ್ಲಡೆ ಅದೇ ಪರಮ ಸುಖವೆಂಬುದೀ ವಚನದ ತಾತ್ಪರ್ಯಾರ್ಥ.

೨೨೯. ಜಗಸೃಷ್ಟನಹ ಅಜನ ಕೊಂಬು ಮುರಿಯಿತ್ತು. ಧರೆಯ ಚಂದ್ರಸೂರ್ಯರಿಬ್ಬರು ನೆಲಕ್ಕೆ ಬಿದ್ದರಲ್ಲ. ಉದಯದಿಂದಲೇ ಅಸ್ತಮಾನವಹುದು. ಊರು ಬೆಂದು ಉಲುಹು ಉಳಿದುದು. ಇದೇನು ಸೋಜಿಗವೋ? ದೇವ ಸತ್ತ ದೇವಿ ಕೆಟ್ಟಳು ಆನು ಬದುಕಿದೆನು ಗುಹೇಶ್ವರಾ.

ಟೀಕು:— ಜಗಸೃಷ್ಟನೆಂದರೆ ಲೋಕವ ಹುಟ್ಟಿಸುವ ಬ್ರಹ್ಮನು. ಆ ಬ್ರಹ್ಮನ ಕೊಂಬೆಂದರೆ ರಾಜಸ ಅಹಂಕಾರವೆಂಬ ಶಬ್ದಕ್ಕರ್ಥ. ಇಂತಪ್ಪ ರಾಜಸಾಹಂಕಾರ ಭಿನ್ನವಾಗಲು ಅದೀಗ ಜಗಸೃಷ್ಟನಹ ಅಜನ ಕೊಂಬು ಮುರಿಯಿತ್ತೆಂಬ ಶಬ್ದಕ್ಕರ್ಥ. ಚಂದ್ರನೆಂದರೆ ಶಕ್ತಿಯಿಂದ ಸೂರ್ಯನೆಂದರೆ ಶಿವಾಂಶ. ಅಂತೂ ಶಾಂತಿ ದಾಂತಿಗಳೆರಡು ಭಿನ್ನವಾಗಿ ಶರೀರದಲ್ಲಿ ಗತವಾಗಿ ಹೋದವೆಂಬುದೀಗ ಚಂದ್ರ ಸೂರ್ಯರಿಬ್ಬರು ನೆಲಕ್ಕೆ ಬಿದ್ದರೆಂಬ ಶಬ್ದಕ್ಕರ್ಥ. ಇಂತಾಗಲು ಜನನಗೆಟ್ಟರೆ ಮರಣವೇ ಪರ



ಬ್ರಹ್ಮದಲ್ಲಿ ಮನೋ ಲಯವಪ್ಪುದೆಂಬುದೀಗ ಉದಯನೆಂದರೆ ಅಸ್ತಮಾನವಹುದು ಎಂಬ ಶಬ್ದಕ್ಕರ್ಥ. ಅದುಕಾರಣ ಊರೆಂಬ ದೇಹ ಜ್ಞಾನಾಗ್ನಿಯಲ್ಲಿ ದಗ್ಧವಾಗಿ ಶಬ್ದ ಮಥನಂಗಳೆಲ್ಲವು ನಿಂದುವೆಂಬುದೀಗ ಊರು ಬೆಂದು ಉಲುಹು ಉಳಿದುದು ಎಂಬ ಶಬ್ದಕ್ಕರ್ಥ. ಇಂತು ದೇಹಭಾವ ನಷ್ಟವಾಗಿ ವಾಗ್ವ್ಯವಹಾರ ಅಳಿಯಲು ಶಿವಶಕ್ತಿಗಳೆರಡು ನಿವೃತ್ತಿಯಾಗಿ ಆ ಶಿವಶರಣ ಪರಮ ಸುಖಿಯಾಗಿದ್ದನೆಂಬುದೀಗ ದೇವ ಸತ್ತ ದೇವಿ ಕೆಟ್ಟಳು ಆನು ಬದುಕಿದೆನು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೩೦. ಅಂಗ ಲಿಂಗದಲ್ಲಿ ತರಹರವಾಗಿ ಮನ ಜ್ಞಾನದಲ್ಲಿ ತರಹರವಾಗಿ ಭಾವ ನಿರ್ಭಾವದಲ್ಲಿ ತರಹರವಾಗಿ ಸಮತೆ ಶಾಂತಿಯಲ್ಲಿ ತರಹರವಾಗಿ ಬಲ್ಲರೆ ಆತನೇ ಅಚ್ಚ ಶರಣನು ಕಾಣಾ ಗುಹೇಶ್ವರಾ.

ಟೀಕು:— ಅಂಗ ಲಿಂಗದಲ್ಲಿ ಲೀಯ್ಯವಾಗಲು ಮನ ಜ್ಞಾನದಲ್ಲಿ ಅಳಿವುದು. ಆ ಮನ ಜ್ಞಾನದಲ್ಲಿ ಅಳಿಯಲು ಭಾವ ಭಾವಿಸಲರಿಯದೆ ನಿರ್ಭಾವನಪ್ಪುದು. ಆ ನಿರ್ಭಾವ ಸಮತೆಯಲ್ಲಿ ಅಳಿಯಲು ಆ ಸಮತೆ ಪರಮ ಶಾಂತಿಯಲ್ಲಿ ನಿಲುವುದು. ಆ ಪರಮಶಾಂತಿ ತಾನಾಗಿರಬಲ್ಲರೆ ಆತನೆ ಅಚ್ಚ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೩೧. ಉದಕದ ಕೈಕಾಲು ಮುರಿದು ಅಗ್ನಿಯ ಕಿವಿ ಮೂಗನರಿದು ವಾಯುವಿನ ತಲೆಯ ಕೊಯಿದು ಆಕಾಶವ ಶೂಲದಲ್ಲಿಕ್ಕಿದ ಬಲ್ಲಿದ ತಳವಾರನೀತನು. ಅರಸ ಪ್ರಧಾನ ಮಂತ್ರಿ ಮೂವರ ಮುಂದುಗೆಡಿಸಿದ ಬಲ್ಲಿದ ತಳವಾರನೀತನು. ಒಂಭತ್ತು ಬಾಗಿಲ ಕದವನಿಕ್ಕಿ ಬಲಿದು ಬೀಗವ ಹೂಡಿ ನವಸಾಸಿರ ಮಂದಿಯ ಕೊಂದುಳಿದನು ಗುಹೇಶ್ವರಾ.

ಟೀಕು:— ಉದಕವೆಂದರೆ ಮನಸು. ಆ ಮನಸಿನ ಸಂಕಲ್ಪ ವಿಕಲ್ಪಂಗಳ ಚರಿತ್ರವನು ಛೇದಿಸುತ್ತಿರಲು ಅದೀಗ ಉದಕದ ಕೈಕಾಲ ಮುರಿದು ಎಂಬ ಶಬ್ದಕ್ಕರ್ಥ. ಅಗ್ನಿಯಂಶದಿಂದಾದ ದುರಭಿಮಾನ ಅಹಂಕೃತಿಗಳ ಛೇದಿಸುತ್ತಿರಲು ಅದೀಗ ಅಗ್ನಿಯ ಕಿವಿ ಮೂಗನರಿದು ಎಂಬ ಶಬ್ದಕ್ಕರ್ಥ, ಇಂತಿವನು ನಿವೃತ್ತಿ ಮಾಡಿ ಆಕಾಶವೆಂಬ ಆತ್ಮತತ್ವವನು ಶಿವಜ್ಞಾನವೆಂಬಲ್ಲಿ ನಿಲಿಸಿದನೆಂಬುದೀಗ ಆಕಾಶವ ಶೂಲದಲ್ಲಿ ಇಕ್ಕಿದನೆಂಬ ಶಬ್ದಕ್ಕರ್ಥ. ಇನಿತಿನಿತನು ಪರಮ ಯೋಗಾರೂಢದಲ್ಲಿ ಸಮಾಧಾನಕ್ಕೆ ತಂದು

ಅಜ್ಞಾನ ಪ್ರವೇಶವಾಗದ ಹಾಗೆ ಎಚ್ಚತ್ತಿಪ್ಪ ಏಕಾಗ್ರ ಚಿತ್ತಸ್ವರೂಪವನು ಆ ಶರಣನೆಂಬುದೀಗ ಬಲ್ಲಿದ ತಳವಾರನೀತನೆಂಬ ಶಬ್ದಕ್ಕರ್ಥ. ಏಕಾಗ್ರ ಚಿತ್ತ ಧ್ಯಾನದಿಂದ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿತತ್ವಂಗಳ ಗುಣಧರ್ಮ ಕರ್ಮಂಗಳ ಕೆಡೆಮೆಟ್ಟಿ ನವದ್ವಾರಂಗಳ ಭಿನ್ನವ ಬಂಧಿಸಿದನೆಂಬುದೀಗ ಅರಸು ಪ್ರಧಾನ ಮಂತ್ರಿ ಮೂವರ ಮುಂದುಗೆಡಿಸಿ ಒಂಭತ್ತು ಬಾಗಿಲ ಕದವನಿಕ್ಕಿ ಬರಿದು ಬೀಗವ ಹೂಡಿದ ಎಂಬ ಶಬ್ದಕ್ಕರ್ಥ. ಇಂತು ನವದ್ವಾರಂಗಳ ಭಿನ್ನವ ಬಂಧಿಸಿ ಸುಜ್ಞಾನವೆಂಬ ಶಸ್ತ್ರದಿಂದ ಅತ್ಯಂತ ಸೂಕ್ಷ್ಮತರವೆನಿಸುವ ಸಕಲ ಕರಣಂಗಳೆಲ್ಲವನು ನಷ್ಟವ ಮಾಡಿ ಆ ಶರಣನೆ ನಿಜವಾಗಿ ಉಳಿದನೆಂಬುದೀಗ ನವಸಾಸಿರ ಮಂದಿಯ ಕೊಂದುಳಿದನು ಎಂಬ ಶಬ್ದಕ್ಕರ್ಥ.

೨೩೨. ಕಾಯದ ಕಳವಳವ ಗೆಲಿದರೇನು, ಮಾಯದ ತಲೆಯನರಿಯದನ್ನಕ್ಕರ? ಮಾಯದ ತಲೆಯನರಿದರೇನು, ಜ್ಞಾನದ ನೆಲೆಯನರಿಯದನ್ನಕ್ಕರ? ಜ್ಞಾನದ ನೆಲೆಯನರಿದರೇನು, ತಾನು ತಾನಾಗದನ್ನಕ್ಕರ? ತಾನು ತಾನಾದ ಶರಣನ ನಿಲವಿಂಗೆ ಒಂದು ದಾರಿ ಮೇರೆಯುಂಟೇ ಗುಹೇಶ್ವರಾ.

ಟೀಕುಃ— ಅಂಗವಿಕಾರವು ಹಿಂಗಿಸಿ ಮಾಯಾ ನಿವೃತ್ತಿಯ ಮಾಡಿ ಸುಜ್ಞಾನದ ನೆಲೆಯ ಹರಿದಾತನೆ ಪರಬ್ರಹ್ಮವೆಂದರಿದ ಶಿವಶರಣನ ನಿಲವು ಪ್ರಮಾಣಕ್ಕೆ ಬಾರದೆಂದುದೀ ವಚನದ ತಾತ್ಪರ್ಯಾರ್ಥ.

೨೩೩. ಆಡುತ್ತಾಡುತ್ತ ಬಂದ ಕೋಡಗ ಜಪವ ಮಾಡುವ ತಪಸ್ವಿಯ ನುಂಗಿತ್ತಲ್ಲಾ! ಬೇಡ ಬೇಡೆಂದಿತ್ತು. ಮುಂದಣ ಕೆರೆಯು ಮೊಲನೊಂದು ಮುಂದಣ ಮೊಲನ ಹಿಂದಣ ಕೋಡಗವ ಕಂಬಳಿ ನುಂಗಿತ್ತು ಗುಹೇಶ್ವರಾ!

ಟೀಕುಃ— ವಿಪರೀತ ಚರಿತ್ರವ ಮುಂದುಗೊಂಡು ಚರಿಸುತ್ತಿಪ್ಪ ಮನವೆಂಬ ಮರ್ಕಟನು ಶಿವತತ್ವ ಪರಿಜ್ಞಾನ ವಿವೇಕಿಸುತ್ತಿಪ್ಪ ಶಿವಯೋಗಿಯನು ಮನಸ್ವರೂಪಾಗಿ ಅವಗ್ರಹಿಸಿ ಕೊಂಡಿದ್ದಿತೆಂಬುದೀಗ ಆಡುತ್ತಾಡುತ್ತ ಬಂದ ಕೋಡಗ ಜಪವ ಮಾಡುವ ತಪಸ್ವಿಯ ನುಂಗಿತ್ತಲ್ಲಾ ಎಂಬ ಶಬ್ದಕ್ಕರ್ಥ. ಆ ಮನಸ್ಸೀ ಗ್ರಾಹಕತ್ವವನು ಪ್ರಜ್ಞಾನವೆಂಬ ಜೀವನು ನಿವೃತ್ತಿ ಮುಖದಿಂ ಸಲ್ಲವಿಡುತ್ತಿರಲು ಅದೀಗ ಬೇಡ ಬೇಡೆಂದಿತ್ತು ಮುಂದಣ ಕೆರೆಯು ಮೊಲನೊಂದು ಎಂಬ ಶಬ್ದಕ್ಕರ್ಥ. ಪ್ರಜ್ಞಾ



ನಂಬ ಜೀವನ ಸರವನ್ನು ಮನವೆಂಬ ಮರ್ಕಟವನು ಮಹಾಜ್ಞಾನವವಗ್ರಹಿಸಿಕೊಂಡು ಶಿವಶರಣ ಪರಮ ಸುಖಿಯಾದನೆಂಬುದೀಗ ಮುಂದಣ ಕೆರೆಯು ಮೊಲನ ಹಿಂದಣ ಕೋಡಗವ ಕಂಬಳಿ ನುಂಗಿತ್ತು ಎಂಬ ಶಬ್ದಕ್ಕರ್ಥ.

೨೩೪. ಧರೆಯು ಬ್ರಹ್ಮಾಂಡವು ಚಂದ್ರ ಸೂರ್ಯ ತಾರಾ ಮಂಡಲವು ಇಲ್ಲಿಂದತ್ತಲೆ ನೋಡಾ! ನರನಲ್ಲ ಸುರನಲ್ಲ ಭ್ರಾಂತನಲ್ಲ ಶರಣನು. ಲಿಂಗ ಸನ್ನಿಹಿತ ಅಪಾರ ಮಹಿಮನು. ಸುರಾಸುರರೆಲ್ಲರು ನಿಮ್ಮ ವರದಲ್ಲಿ ಸಿಲುಕಿದರು. ಸರಸದೊಳಗಲ್ಲ ಹೊರಗಲ್ಲ ಕೇಳು ಭಾವಾ ಗುಹೇಶ್ವರಾ.

ಟೀಕುಃ— ಚತುರ್ದಶ ಭುವನ ಬ್ರಹ್ಮಾಂಡವೆಂಬ ನಾನಾ ಪ್ರಪಂಚು ಅದು ಕಕ್ಷ. ಈ ಬ್ರಹ್ಮಾಂಡದೊಳಗಡಗಿದ ದೇವ ದಾನವ ಮಾನವಾದಿಗಳೆಲ್ಲರು ಅಧೋಮುಖರು. ಲಿಂಗ ಶರಣನು ಈ ಪ್ರಪಂಚವೆಲ್ಲವನು ಅಳಿದುಳಿದು ಆ ಮಹಾಲಿಂಗಕ್ಕೆ ತಾನೇ ಭಾವಸ್ವರೂಪನಾಗಿಪ್ಪ ಕಾರಣ ಆ ನಿರಾಳತತ್ವದಲ್ಲಿ ಲೀನವಾಗಿಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

೨೩೫. ಕಿಚ್ಚಿನ ದೇವನು ಕೆಂಡದ ದೇವನು ಮಾದಿಯ ದೇವನು ಮಸಣದ ದೇವನು ತಿರಕ ಗೊರವನೆಂದು ಅಲ್ಲಲ್ಲಿ ಒಂದೊಂದನಾಡುತಿಪ್ಪರಯ್ಯಾ! ನಾ ನಿಮ್ಮ ಪೂಜಿಸಿ ನಷ್ಟ ಸಂತಾನಗಾಗಿ ಬಟ್ಟ ಬಯಲಲ್ಲಿ ಬಿದ್ದು ಕೆಟ್ಟೆನು ಗುಹೇಶ್ವರಾ.

ಟೀಕುಃ— ತಮುತಮುಗೆ ಖಂಡಿತ ಬುದ್ಧಿಯಿಂದ ಶಿವನು ಅಂತಹ ದೇವನು ಇಂತಹ ದೇವನು ಎಂದು ನುಡಿಯುವ ಮಾತುಗಳೆಲ್ಲವು ಮಿಥ್ಯೆ. ಮತ್ತೆಂತೆಂದೊಡೆ ಅಗಮ್ಯ ಅಗೋಚರ ನಿರಾಳವೆಂದರಿದು ಆ ಲಿಂಗದಲ್ಲಿ ಬೆರಸಿ ಹುಟ್ಟುಗೆಟ್ಟಾತನೆ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೩೬. ಕಾಮನ ಕೈ ಮರೆದರೆ ಮೋಹ ಮುಂದುಗೆಟ್ಟಿತ್ತು. ಅಮಿಷ ತಾಮಸ ಧಾರಿಗಳೆಲ್ಲ ಎಳತಟವಾದರು. ಅಕ್ಕಟಾ! ಅಯ್ಯಾ! ನಿಮ್ಮ ಕಂಡವರಾರು? ಅಳವಿಲ್ಲದ ಸ್ನೇಹಕ್ಕೆ ಮರಣವೆ ಮಹಾನೌಮಿ. ಗುಹೇಶ್ವರನ ಮರೆಯುದೆ ರಣಭೂಮಿಗಳು ಉಲಿದವು.

ಟೀಕುಃ— ಲಿಂಗದ ಮೇಲೆ ಕೈ ಲಿಂಗದ ಮೇಲೆ ಶ್ರದ್ಧೆ ಕೈ ಮರೆದರೆ ಆ ಲಿಂಗದಲ್ಲಿ ಅತಿ ಪ್ರೀತಿಗೆಟ್ಟಿತ್ತು. ಗೆಡಲಾಗಿ ಕಾಂಕ್ಷೆ ತಾಮಸಂಗ ಳೆಡೆಗೊಂಡು ನಿಜ ಬುದ್ಧಿ ನಷ್ಟವಾಗಿಪ್ಪುದಾಗಿ ಅಲ್ಲಿ ಬಳಿಕ ಅರಿದಿಹೆ

ನೆಂದರೆ ದೇಹವಾಸನವೇ ಅವಧಿಯಲ್ಲಡೆ ಲಿಂಗದ ನಿಜವನರಿಯಬಾರದೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೩೭. ಕಲ್ಯಾಣವರಿಯೆ ಕಟಕವರಿಯೆ ಬೇಂಟೆಯನಾಡುತ್ತಿದ್ದ. ಎನ್ನ ಕೈ ನೋಡಿ ಭೋ ಕಲಿ ವೀರ ಸುಭಟರು. ಎನ್ನ ಕೈ ನೋಡಿ ಭೋ ಅರುಹಿರಿಯರು. ಕಾದಿಗೆಲಿದು ಗುಹೇಶ್ವರ ಲಿಂಗದಲ್ಲಿಗೆ ತಲೆವರಿಗೆಯ ನಿಕ್ಕಿ ಬಂದೆನೆನ್ನ ಕೈ ನೋಡಿ ಭೋ!

ಟೀಕುಃ— ಶಿವಶರಣನು ಜಗತ್ಪ್ರಖ್ಯಾತವಾಗಲು ಸಂಸಾರವ ಬೇಂಟೆಯನಾಡಿ ತನುವಿಕಾರ ಮನವಿಕಾರ ಇಂದ್ರಿಯ ವಿಕಾರ ಮಾಯಾ ಭ್ರಾಂತ ವಿಕಾರವೆಂಬೆಲ್ಲವನು ಕೊಂದು ಮಹಾಲಿಂಗದ ನಿಲವನವಗ್ರಹಿಸಿದ ತನ್ನ ನಿಲವನ್ನು ಸಕಲ ಶರಣರಿಗೆ ಉಪದೇಶಾರ್ಥವಾಗಿ ನಿರೂಪಿಸುತ್ತಿರ್ದನೆಂಬುದೀ ವಚನದ ತಾತ್ಪರ್ಯಾರ್ಥ.

೨೩೮. ಆಸುರವಾದುದು ಬಸಿರವಾಯಿತ್ತು. ಒಲ್ಲೆನೊಲ್ಲೆನು ನೀ ಕೊಡುವ ವರವನು. ನಾ ಬೇಡಿದ್ದು ನಿಮ್ಮ ಮುಖದಲಿಲ್ಲ ಗುಹೇಶ್ವರಾ.

ಟೀಕುಃ— ಲಿಂಗವ ಬೆರಸಿಹೆನೆಂದು ಬಯಸಿ ವೈರಾಗ್ಯವ ಧರಿಸಲು ಅದು ಆಸುರವೆನಿಸುವದು. ಅದೇ ಲಿಂಗಕ್ಕೆ ಸಲ್ಲದೆ ಬಿಸರವಾಯಿತ್ತಾಗಿ ಅದು ಮರೆದು ಉಪಾಧಿರಹಿತನಾಗಿ ತನ್ನ ತಾನರಿದು ಸುಖಿಯಾದಾತನೇ ಅಚ್ಚ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೩೯. ಅತಿರಥ ಸಮರಥರೆನಿಪ ಹಿರಿಯರು ಮತಿಗೆಟ್ಟು ಮರುಳಾದರಲ್ಲಾ. ದೇವ ಸತ್ತ ಬ್ರಹ್ಮ ಹೊತ್ತ ವಿಷ್ಣು ಕಿಚ್ಚ ಹಿಡಿದ ಗಂಗೆ ಗೌರಿಯರಿಬ್ಬರು ಬರುಮುಂಡೆಯರಾದರ. ಇದ ಕಂಡು ಬೆರಗಾದೆ ಗುಹೇಶ್ವರಾ.

ಟೀಕುಃ— ಲಿಂಗದಲ್ಲಿ ಐಕ್ಯವಹ ಭೇದವನರಿಯದೆ ಎಲ್ಲ ಹಿರಿಯರು ಮತಿಗೆಟ್ಟರೆಂಬುದೀಗ ಅತಿರಥ ಸಮರಥರೆನಿಪ ಹಿರಿಯರೆಲ್ಲ ಮತಿಗೆಟ್ಟು ಮರುಳಾದರಲ್ಲ ಎಂಬ ಶಬ್ದಕ್ಕರ್ಥ. ಇಂತು ನಿಜವ ನೈದು ಖರ ಯುಕ್ತಿ ಹೀನವಾಗಲು ಅಂತರಂಗದೊಳಗಿಪ್ಪ ಪರಶಿವ ತತ್ವದಲ್ಲಿಯೇ ಗತವಾಯಿತ್ತೆಂಬುದೀಗ ದೇವ ಸತ್ತನೆಂಬ ಶಬ್ದಕ್ಕರ್ಥ. ಇಂತು ಶಿವ ತತ್ವವಸ್ತುವಿಸೆ ಬ್ರಹ್ಮತತ್ವಾಂಶಭೂತಮಪ್ಪ ಸ್ಥೂಲತನು ತನ್ನೊಳಗೆ ವಿಶ್ರಮಿಸಲು ಅದೀಗ ಬ್ರಹ್ಮ ಹೊತ್ತನೆಂಬ ಶಬ್ದಕ್ಕರ್ಥ. ಇಂತು ಸ್ಥೂಲ



ತನುವಿನೊಳಗೆ ಆ ಶಿವತತ್ವವಡಗಿಹೋಗಲು ವಿಷ್ಣು ತತ್ವಾಂಶಭೂತಮಪ್ಪ ಸೂಕ್ಷ್ಮ ತನುವಿನೊಳಗೆ ಉಪತಾಪಾಗ್ನಿಯೆ ಏಕ ಗ್ರಹಣವಾಗಿ ಇರುತ್ತಿದ್ದಿತ್ತೆಂಬುದೀಗ ವಿಷ್ಣು ಕಿಚ್ಚು ಹಿಡಿದನೆಂಬ ಶಬ್ದಕ್ಕರ್ಥ. ಇಂತಾಗಲು ಗಂಗೆ ಎಂಬ ಆದಿಶಕ್ತಿ ಗೌರಿ ಎಂಬ ಪರಶಕ್ತಿಗಳೆಂಬ ಇಬ್ಬರಿಗೂ ಆ ಲಿಂಗ ಸಂಗದ ಸಮರತಿ ಘಟಿಸದೆ ಸತಿಪತಿಭಾವ ನಷ್ಟವಾಗಿದ್ದಿತೆಂಬುದೀಗ ಗಂಗೆಗೌರಿಯರಿಬ್ಬರು ಬರುಮುಂಡೆಯರಾದರೆಂಬ ಶಬ್ದಕ್ಕರ್ಥ. ಈ ಸ್ಥಿತಿಯನು ಶಿವಶರಣ ಕಂಡು ಚೋದ್ಯಂ ಬಡುತ್ತಿಪ್ಪನೆಂಬುದೀಗ ಇದ ಕಂಡು ಬೆರಗಾದೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೪೦. ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು. ಮುಂದಣ ಕವಿಗಳೆನ್ನ ಕರುಣದ ಕಂದಗಳು. ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸು. ಹರಿಬ್ರಹ್ಮರೆನ್ನ ಕಕ್ಷಕುಳ. ನೀಮಾವ. ನಾನಳಿಯ ಗುಹೇಶ್ವರಾ.

ಟೀಕುಃ— ಹಿಂದಣ ಕವಿಗಳೆಂದರೆ ಅನಾಗತವ ಬಲ್ಲ ಜ್ಞಾನಿಗಳೆಂಬರ್ಥ. ಮುಂದಣ ಕವಿಗಳೆಂದರೆ ಅತೀತವ ಬಲ್ಲ ಜ್ಞಾನಿಗಳೆಂಬರ್ಥ. ಅತೀತವೆಂದರೆ ಆತ್ಮತತ್ವ. ಅಂತಪ್ಪ ಆತ್ಮತತ್ವ ವಿವೇಕವರಿವ ಕವಿಗಳೆಂದರೆ ವರ್ತಮಾನವ ಹೇಳಬಲ್ಲರೆಂಬರ್ಥ. ಇಂತಪ್ಪ ಅತೀತ ಅನಾಗತ ವರ್ತಮಾನಂಗಳ ಹೇಳಬಲ್ಲರೆಂಬರ್ಥ. ಇಂತೀ ಅತೀತ ಅನಾಗತ ವರ್ತಮಾನಂಗಳ ಹೇಳಬಲ್ಲವರೆಲ್ಲರು ಮಹಾಜ್ಞಾನಿ ಶರಣನ ಅಂಶೀಭೂತರಾಗಿ ಆತನ ಕರುಣದ ಕಂದಗಳಾಗಿಪ್ಪರು. ಅಂತಪ್ಪ ಮಹಾ ಶರಣನ ಕಕ್ಷದೊಳಗೆ ಹರಿಬ್ರಹ್ಮಾದಿಗಳಡಗಿಪ್ಪರೆಂಬುದೀಗ ಹರಿಬ್ರಹ್ಮರೆನ್ನ ಕಕ್ಷಕುಳವೆಂಬ ಶಬ್ದಕ್ಕರ್ಥ. ಆ ಪರಶಿವ ತತ್ವದಲ್ಲಿ ಹುಟ್ಟಿದ ಚಿಚ್ಛಕ್ತಿ ಆ ಶಿವತತ್ವಕ್ಕೆ ಮಗಳಾಗಿಪ್ಪರು. ಆ ಚಿಚ್ಛಕ್ತಿಯ ಸಂಗವ ಮಾಡುವ ಪುರುಷನೆ ಶರಣನಾಗಿ ಆ ಪರಶಿವತತ್ವಕ್ಕೆ ಆ ಶರಣ ಮಗಳ ಗಂಡನಾದ ಸಂಬಂಧದಿಂದ ನೀ ಮಾವ, ನಾನಳಿಯ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೪೧. ದೇವಲೋಕದ ಗಣಂಗಳೆಲ್ಲ ಎನ್ನ ಹೊರಗೆಂಬರು. ಅದು ದಿಟವೇ? ಸತ್ಯ ಸಾತ್ವಿಕ ಸದ್ಭಕ್ತರೆನ್ನ ಹೊರಗೆಂಬರು. ಅದು ದಿಟವೇ? ಹದಿನಾಲ್ಕು ಭುವನದೊಳಗೆ ಅವರು ತಾವಿರಲಿ ನಾ ನಿಮ್ಮೊಳಗು ಗುಹೇಶ್ವರಾ.

ಟೀಕುಃ—ಲೋಕವಿರೋಧಿ ಶರಣ ಶರಣ, ವಿರೋಧಿ ಲೋಕವಾದ ಕಾರಣ ಆ ಲೋಕದವರೆಲ್ಲರು ಆ ಶರಣನ ನಿಂದಿಸಿದರೆ ಆ ಶರಣನ ನಿಂದೆ

ತಾಗದು. ಆ ಲೋಕವೇ ಬ್ರಹ್ಮಾಂಡವೆಂಬ ಪ್ರಪಂಚವೊಳಗೆ ಹೊವಕುಳಿಗೊಳುತಿಹರು. ಆ ಶಿವಶರಣನೇ ಬ್ರಹ್ಮಾಂಡಗಳನಂತವನು ಮೀರಿ ತೋರುತ್ತಿಹನೆಂಬುದೀ ವಚನದ ತಾತ್ಪರ್ಯಾರ್ಥ.

೨೪೨. ಪಂಚ ಮಹಾಪಾತಕಂಗಳಾವವೆಂದರಿಯರು. ಭವಿಯ ತಂದು ಭಕ್ತನ ಮಾಡುವದೇ ಪ್ರಥಮ ಪಾತಕ. ಭಕ್ತರಿಗೆ ಶರಣೆಂಬುದೇ ದ್ವಿತೀಯ ಪಾತಕ. ಗುರುಲಿಂಗಜಂಗಮದ ಪ್ರಸಾದವ ಕೊಂಡಡೆ ನಾಲ್ಕನೇಯ ಪಾತಕ. ಗುಹೇಶ್ವರನಲ್ಲಿ ಹಿರಿದು ಭಕ್ತಿಯ ಮಾಡುವುದು ಪಂಚ ಮಹಾ ಪಾತಕ.

ಟೀಕು:— ಚಿಚ್ಛಕ್ತಿಯಿಂದುದಯಿಸಿದ ಸದ್ಭಕ್ತಿಸ್ಥಲಸ್ವಯಂಭುವಾಗಿ ಅಳವಟ್ಟಾತನೇ ಭಕ್ತ. ಇದಲ್ಲದೆ ಭವಿಯ ತಂದು ಶಿವದೀಕ್ಷೆಯ ಕೊಟ್ಟು ಭಕ್ತನ ಮಾಡಿಹೆನೆಂದರೆ ಅದು ಮಿಥ್ಯೆಯಾದಕಾರಣ ಅದೇ ಪಾತಕವೆಂದರಿಯುವದೀಗ ಪಂಚ ಮಹಾಪಾತಕಂಗಳಾವವೆಂದರಿಯರು ಭವಿಯ ತಂದು ಭವಿ ಭಕ್ತನ ಮಾಡುವದೆ ಪ್ರಥಮ ಪಾತಕವೆಂಬ ಶಬ್ದಕ್ಕರ್ಥ. ಆ ಭಕ್ತನು ಶರಣನಲ್ಲಿ ತನ್ನಲ್ಲಿ ಅವಿರಳವಾಗಿಪ್ಪನಲ್ಲದೆ ಭಿನ್ನಬುದ್ಧಿಯಿಂದ ಶರಣೆನ್ನನು. ತಥಾಪಿ ಭಿನ್ನಬುದ್ಧಿಯಿಂದ ಶರಣೆಂದೊಡೆ ಅದೇ ಪಾತಕವೆಂಬುದೀಗ ಭಕ್ತರಿಗೆ ಶರಣೆಂದರೆ ದ್ವಿತೀಯ ಪಾತಕವೆಂಬ ಶಬ್ದಕ್ಕರ್ಥ. ಆ ಭಕ್ತನು ತನ್ನ ನಿಜವ ತಾನರಿದು ತನ್ನೊಳಗೆ ಗುರು ತತ್ವ ಆ ಗುರುತತ್ವದೊಳಗೆ ತಾನಡಗಿ ತಾನೇ ಗುರುತತ್ವವಾಗಿಹನಲ್ಲದೆ ಇದನರಿಯದೆ ಉಪಾಧಿಯಿಂದ ಇದಿರಿಟ್ಟುಕೊಂಡು ಭಿನ್ನ ಬುದ್ಧಿಯಿಂದ ಗುರು ಶರಣೆಂದರೆ ಅದೇ ಗುರು ಭಿನ್ನವಾದ ಕಾರಣ ಅದೇ ಪಾತಕವೆಂಬುದೀಗ ಗುರುವೆಂಬುದೇ ತೃತೀಯ ಪಾತಕವೆಂಬ ಶಬ್ದಕ್ಕರ್ಥ. ಆ ಭಕ್ತನು ಶುದ್ಧ ಸಿದ್ಧ ಪ್ರಸಿದ್ಧವೆಂಬ ಪ್ರಸಾದ ತ್ರಯಂಗಳನು ತನುತ್ರಯಂಗಳಲ್ಲಿ ಆಲಿಂಗಿಸಿ ತಾನೇ ಪ್ರಸಾದ ಮೂರ್ತಿಯಾಗಿಹನಲ್ಲದೆ ಒಡಲುಪಾಧಿಯಿಂದ ಪ್ರಸಾದವ ಕೊಂಡರೆ ಅದೇ ಪ್ರಸಾದ ಭಿನ್ನವಾದ ಕಾರಣ ಅದೇ ಪಾತಕವೆಂಬುದೀಗ ಗುರುಲಿಂಗಜಂಗಮದ ಪ್ರಸಾದವಕೊಂಡಡೆ ನಾಲ್ಕನೆಯ ಪಾತಕವೆಂಬ ಶಬ್ದಕ್ಕರ್ಥ. ಆ ಭಕ್ತ ಸರ್ವಾಂಗಲಿಂಗವಾಗಿಪ್ಪನಲ್ಲದೆ ಉಪಾಧಿಯಿಂದ ಮಹಾಲಿಂಗಕ್ಕೆ ಭಕ್ತಿಯ ಮಾಡಿದಡೆ ಆ ಲಿಂಗಕ್ಕೆ ಮಿಥ್ಯಾ ಭಾವವಾದಕಾರಣ ಅದೇ ಪಾತಕವೆಂಬುದೀಗ ಗುಹೇಶ್ವರಲಿಂಗಕ್ಕೆ ಹಿರಿದು ಭಕ್ತಿಯ ಮಾಡುವುದು ಪಂಚ ಮಹಾಪಾತಕವೆಂಬ ಶಬ್ದಕ್ಕರ್ಥ.



೨೪೩. ಅಗವ್ಯ ಅಗೋಚರವೆನಿಸಿಕೊಂಡು ಅವರಿವರ ಕೈಗೆ ಎಂತು ಬಂದೆ ಉಗುರುಗಳೆಲ್ಲ ಸುತ್ತಿದವೇ ಅಯ್ಯಾ! ಅಗ್ಗವಣಿಯನು ಪತ್ರೆ ಅರತವೆ ಅಯ್ಯಾ! ಎನ್ನ ಕರಸ್ಥಲದೊಳಗಿದ್ದು ಎನ್ನೊಡನೆ ನುಡಿಯೆ ಅಯ್ಯಾ! ನಿನ್ನ ಹಲ್ಲ ಕಳೆದರೆ ಒಡೆಯರುಂಟೆ ಗುಹೇಶ್ವರಾ?

ಟೀಕು:— ಅಗಮ್ಯ ಅಗೋಚರ ಅಪ್ರಮಾಣವೆನಿಸಿಕೊಂಡ ಲಿಂಗವು ಶರಣನ ಕರಸ್ಥಲದೊಳಗಡಗಲು ಆ ಶರಣನು ಲಿಂಗದ ಹಂಗು ಹರಿಯ ಮರೆದು ಆ ಲಿಂಗಕ್ಕೆ ತಾನೇ ಅಧಿಷ್ಠಾಯಕನಾಗಿ ತನ್ನ ಮಹಾಜ್ಞಾನಾರೂಢದ ಮಹದಹಂಕಾರ ಪ್ರತಾಪವ ಮೆರೆವುತ್ತಿಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

೨೪೪. ಶ್ವೇತ ಪೀತ ಕೃಷ್ಣ ಹರಿತ ಕಪೋತ ಮಾಂಜಿಷ್ಠ ಗೌರವ ಷಡುವರ್ಣವೆಂದೆನ್ನ. ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ ಎಂದೆನ್ನ. ಲಿಂಗವಿಂತುಟೆನ್ನ. ಲಿಂಗೈಕ್ಯವನುಡಿಯ ಅಭಂಗನ ನಿಲವ ಭಂಗಿತರೆತ್ತ ಬಲ್ಲರು ಗುಹೇಶ್ವರಾ?

ಟೀಕು:— ಮಹಾಲಿಂಗದಲ್ಲಿ ಅವಿರಳ ಸಂಬಂಧಿಯಾದ ಶರಣನು ತನ್ನಲ್ಲಿ ತಾನು ಪರವಶನಾಗಿಪ್ಪನಲ್ಲದೆ ಶಬ್ದಸಂದಣಿಯೊಳಗೆ ಸಿಲ್ಕಿ ಬಳಲುವನಲ್ಲ ಅಂತಪ್ಪ ಶರಣನ ನಿಲವನಾರಿಗೂ ಅರಿಯಬಾರದೆಂಬುದೀ ವಚನದ ತಾತ್ಪರ್ಯಾರ್ಥ.

೨೪೫. ಆಡಾಡ ಬಂದ ಕೋಡಗ ಹಂದರವನೇರಿತ್ತಲ್ಲಾ. ನೋಡ ಬಂದವರ ಕಣ್ಣೆಲ್ಲ ಒಡೆದವು. ಬೆಣ್ಣೆಯ ತಿಂದವರ ಹಲ್ಲೆಲ್ಲಾ ಹೋದವು. ಇದೇನು ಸೋಜಿಗವೋ ಗುಹೇಶ್ವರಾ?

ಟೀಕು:— ಸ್ವಾನುಭಾವ ವಿವೇಕದಿಂದ ಆಚರಿಸುತ್ತಿದ್ದ ಮನವ, ತನ್ನ ತಾನರಿದು ಜ್ಞಾತೃಭಾವವ ಮರೆದು ಜ್ಞಾನಭಾವವ ಅರಿದು ಜ್ಞೇಯವೆಂಬ ಅತೀತ ಸ್ಥಾನದಲ್ಲಿ ವಿಶ್ರಮಿಸಿತ್ತೆಂಬುದೀಗ ಆಡಾಡ ಬಂದ ಕೋಡಗ ಹಂದರವನೇರಿತ್ತಲ್ಲಾ ಎಂಬ ಶಬ್ದಕ್ಕರ್ಥ. ಆ ಮನವು ವಿಶ್ರಮಿಸಲು ಆ ಮನದ ಪರಿಭಾವವ ನಿರೀಕ್ಷಿಸಲೆಂದು ಐದಿದ ಸಕಲ ಕರಣಂಗಳ ಭಿನ್ನ ದೃಷ್ಟಿಗಳೆಲ್ಲಾ ನಷ್ಟವಾದವೆಂಬುದೀಗ ನೋಡ ಬಂದವರ ಕಂಣೆಲ್ಲಾ ಒಡೆದವು ಎಂಬ ಶಬ್ದಕ್ಕರ್ಥ. ಇಂತು ಕರಣಂಗಳೆಲ್ಲ ನಷ್ಟವಾಗಿ ಉಳಿದ ಮಹಾ ವಿವೇಕವೆಲ್ಲ ಎಂಬ ನವನೀತವನಾರೋಗಿಸಿ ಇದಹಂ ಎಂಬ

ಮಥನದಂತಗಳೆಲ್ಲವು ಭಗ್ನವಾದವೆಂಬುದೀಗ ಬೆಣ್ಣೆಯ ತಿಂದವರ ಹಲ್ಲೆಲ್ಲಾ ಹೋದವು ಎಂಬ ಶಬ್ದಾರ್ಥ.

೨೪೬. ಕೆಂಡದ ಮಳೆ ಕರೆದಲ್ಲಿ ಉದಕವಾಗಿರಬೇಕು. ಜಲಪ್ರಳಯವಾದಲ್ಲಿ ವಾಯುವಿನಂತೆ ಇರಬೇಕು. ಮಹಾಪ್ರಳಯವಾದಲ್ಲಿ ಆಕಾಶದಂತೆ ಇರಬೇಕು. ಜಗಪ್ರಳಯವಾದಲ್ಲಿ ತನ್ನ ತಾ ಬಿಡಬೇಕು. ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು.

ಟೀಕು:— ಮಹಾಜ್ಞಾನ ಪ್ರಕಾಶವಾಗಿ ತನ್ನ ತಾನರಿದ ಶರಣ ಕಾಲಾಗ್ನಿ ಪ್ರಳಯ ಮೀರೆದಪ್ಪಿ ಬಂದರೆ ಅಲ್ಲಿ ಪರಿಪೂರ್ಣವನು ಭಾವ ಪ್ರಾಣರೂಪಾಗಿರಬೇಕೆಂಬುದೀಗ ಕೆಂಡದ ಮಳೆ ಕರೆವಲ್ಲಿ ಉದಕದಂತಿರಬೇಕೆಂಬ ಶಬ್ದಕ್ಕರ್ಥ. ಆ ಶರಣ ಜಲಪ್ರಳಯ ಮೀರೆದಪ್ಪಿ ಬಂದರೆ ಅಲ್ಲಿ ಪರಿಪೂರ್ಣವನು ಭಾವಪ್ರಾಣರೂಪಾಗಿರಬೇಕೆಂಬುದೀಗ ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕೆಂಬ ಶಬ್ದಕ್ಕರ್ಥ. ಅನಂತ ಕೋಟಿ ಬ್ರಹ್ಮಾಂಡಂಗಳೆಲ್ಲವು ಒಂದು ಬಾರಿ ಮಹಾತತ್ವದಲ್ಲಿ ಲಯವನೆಯ್ದುತ್ತಿರಲು ಆ ಕಾಲದಲ್ಲಿ ಆ ಶರಣನು ಮಹದಾಕಾಶಸ್ವರೂಪನಾಗಿ ಎಲ್ಲವನು ತಾನೇ ಒಳಕೊಂಡಿರಬೇಕೆಂಬುದೀಗ ಮಹಾ ಪ್ರಳಯವಾದಲ್ಲಿ ಆಕಾಶದಂತಿರಬೇಕೆಂಬುದೀಗ ಶಬ್ದಕ್ಕರ್ಥ. ಆ ಜಗತ್ತೆಂಬ ಸಚರಾಚರವಳಿದಲ್ಲಿ ತಾನೇ ಶಿವನೆಂಬ ಮೂಲಾಹಂಕಾರವ ವಿಚ್ಛೇದನವ ಮಾಡಬೇಕೆಂಬುದೀಗ ಜಗಪ್ರಳಯವಾದಲ್ಲಿ ತನ್ನ ತಾ ಬಿಡಬೇಕೆಂಬ ಶಬ್ದಕ್ಕರ್ಥ. ಇನಿತಿನಿತು ಗುಣವುಳ್ಳ ಶಿವಶರಣನು ತಾನೆ ಶಿವನಾಗಿಹನೆಂಬುದೀಗ ಗುಹೇಶ್ವರಲಿಂಗ ತಾನಾಗಬೇಕೆಂಬ ಶಬ್ದಕ್ಕರ್ಥ.

೨೪೭. ಅರೆಯ ಮೇಲಣ ಹುಲ್ಲೆಗೆ ಕೆಂಗರಿಯ ಬಾಣವ ತೊಟ್ಟವನೆ ತಪ್ಪದೆ ತಾಗಿತ್ತಲ್ಲಾ. ಅದು ಒಂದೇ ಬಾಣದಲ್ಲಿ ಅಳಿಯಿತ್ತಲ್ಲಾ. ನಾರಿ ಹರಿಯಿತ್ತು ಬಿಲ್ಲು ಮುರಿಯಿತ್ತು ಹುಲ್ಲೆ ಎತ್ತ ಹೋಯಿತ್ತು ಗುಹೇಶ್ವರಾ!

ಟೀಕು:—ಅರೆಯೆಂದರೆ ಜಡರೂಪವಪ್ಪ ಕಾಯವೆಂಬರ್ಥ. ಆ ಜಡ ಪಿಂಡದ ಮೇಲೆ ಮಾಯೆಯೆಂಬ ಹರಿಣಿ ಇಪ್ಪಳೆಂಬುದೀಗ ಅರೆಯ ಮೇಲಣ ಹುಲ್ಲೆ ಎಂಬ ಶಬ್ದಕ್ಕರ್ಥ. ಕೆಂಗೆರೆಯ ಬಾಣವೆಂದರೆ ಸುಜ್ಞಾನವೆಂಬ ಸರಳೆಂಬರ್ಥ. ಅಂತಪ್ಪ ಮಾಯೆ ಎಂಬ ಮೃಗಕ್ಕೆ ಶರಣನೆಂಬ ಬೇಟೆಕಾರನು ನಿಷ್ಠೆ ಎಂಬ ಬಿಲ್ಲು ಹಿಡಿದು ಭಾವವೆಂಬ ನಾರಿಯೊಳಗೆ ಸುಜ್ಞಾನವೆಂಬ ಬಾಣವ ಹೂಡಿ ಪರಿಪೂರ್ಣವಾಗಿ ತೆಗೆದು ಎಸೆಯಲು ಆ ಮಾಯಾ ಮೃಗವು ಒಂದೇ ಬಾಣದಲ್ಲಿ ಅಳಿಯಿತ್ತೆಂಬುದೀಗ ಅರೆಯ ಮೇಲಣ ಹುಲ್ಲೆಗೆ ಕೆಂಗೆರೆಯ ಹೂಡಿ ಪರಿಪೂರ್ಣವಾಗಿ ತೆಗೆದು ಎಸೆಯಲು ಆ ಮಾಯಾಮೃಗವು ಒಂದೇ ಬಾಣದಲ್ಲಿ ಅಳಿಯಿತ್ತೆಂಬುದೀಗ ಅರೆಯ ಮೇಲಣ ಹುಲ್ಲೆಗೆ ಕೆಂಗರೆಯ ಬಾಣವ ತೊಟ್ಟವನೆ ತಪ್ಪದೆ ತಾಗಿತ್ತಲ್ಲ, ಅದು ಒಂದೇ ಬಾಣದಲ್ಲಿ ಅಳಿಯಿತ್ತಲ್ಲ ಎಂಬ ಶಬ್ದಕ್ಕರ್ಥ. ಇಂತಾಗಲು ಆ ಭಾವವೆಂಬ ನಾರಿಯು ಅಳಿದು ನಿಷ್ಠೆಯು ವಿಶ್ರಮಿಸಿ ಆ ಮಾಯೆಯು ಅಳಿಯಿತ್ತೆಂಬುದೀಗ ನಾರಿ ಹರಿಯಿತ್ತು ಬಿಲ್ಲು ಮುರಿಯಿತ್ತು ಹುಲ್ಲೆ ಎತ್ತ ಹೋಯಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.



೨೪೮. ನಾ ದೇವನಲ್ಲದೆ ನೀ ದೇವನೆ? ನೀ ದೇವನಾದರೆ ಎನ್ನನೇಕೆ ಸಲಹೆ? ಆರೈದು ಒಂದ ಕುಡಿತೆ ನೀರನೆರವೆ. ಹಸಿದಾಗ ಒಂದು ತುತ್ತು ಓಗರವನಿಕ್ಕುವೆ. ನಾ ದೇವ ಕಾಣಾ ಗುಹೇಶ್ವರಾ!

ಟೀಕು:—ಲಿಂಗದ ಹಂಗು ಹರಿಯಳಿದು ತಾನೇ ಲಿಂಗವಾಗಿ ನಿಂದ ಶರಣನಲ್ಲಿ ಆ ಲಿಂಗವಡಗಿಪ್ಪುದಾಗಿ ಆ ಲಿಂಗಕ್ಕೆ ಆ ಶರಣನೇ ಅಧಿಷ್ಠಾಯಕನಾಗಿದ್ದನೆಂಬುದೀ ವಚನದ ತಾತ್ಪರ್ಯಾರ್ಥ.

೨೪೯. ಒಕ್ಕುದ ಮಿಕ್ಕುದ ಕೊಂಬ ನಿಷ್ಕಲ ಪ್ರಸಾದಿ ನೀ ಕೇಳಾ! ಒಕ್ಕುದಾವುದು ಮಿಕ್ಕುದಾವುದು ಬಲ್ಲಡೆ ನೀ ಹೇಳಾ! ಒಕ್ಕುದಹುದೇ ಕಾಯ? ಮಿಕ್ಕುದಹುದೇ ಪ್ರಾಣ? ಇದು ತಕ್ಕುದೆಂದರಿದು ಕೊಳಬಲ್ಲರೆ ಸಿಕ್ಕುವನು ನಮ್ಮ ಗುಹೇಶ್ವರನು.

ಟೀಕು:— ಅಂಗವ ಲಿಂಗಕ್ಕರ್ಪಿಸಿ ಪ್ರಾಣವನಾ ಲಿಂಗರತಿಸುಖಕ್ಕೆ ಸಮರ್ಪಿಸಿ ಆವ ಅರ್ಪಿತದಲ್ಲಿ ಭಿನ್ನವಿಲ್ಲದೆ ಪ್ರಸಾದವ ಕೊಳಬಲ್ಲಾತನೆ ಅಚ್ಚ ಪ್ರಸಾದಿ. ಈ ಕ್ರಮವನರಿಯದಾತ ಪ್ರಸಾದಿಯಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೨೫೦. ಕಲ್ಲ ಹೋರಿನೊಳಗೊಂದು ಕಾರ್ಯವ ಕಾಂಬೊಡೆ ಕಲ್ಲ ಬೆದಕದೆ ಕಪ್ಪೆಯ ಸೋಂಕದೆ ಅಲ್ಲಿಯ ಉದಕವ ಕುಡಿಯಬಲ್ಲಡೆ ಅದು ಯೋಗ. ಬಲ್ಲಡೆ ನಿಮ್ಮಲ್ಲಿ ನೀವೇ ತಿಳಿಯಿರೇ? ಅರಿವ ಯೋಗಕ್ಕದು ಚಿನ್ನವಯ್ಯಾ! ಕಲ್ಲು ಕಪ್ಪೆಯೊಳಗಣ ಹುಲ್ಲುರಿಯದೆ ಅಟ್ಟುಂಬಂತೆ ಗುಹೇಶ್ವರಾ.

ಟೀಕು:—ಕಲ್ಲೆಂದರೆ ಜಡವಪ್ಪ ಕಾಯವೆಂಬರ್ಥ. ಆ ಜಡ ಪಿಂಡದ ಅಂತರ್ಮುಖದೊಳಗೆ ವಿವೇಕವೆಂಬ ನಾಳವಿಪ್ಪದು. ಆ ನಾಳದಲ್ಲಿ ತನ್ನ ತಾ ನೋಡಿ ಕಾಣಬೇಕೆಂಬುದೀಗ ಕಲ್ಲಹೋರಿನೊಳಗೊಂದು ಕಾರ್ಯವ ಕಾಂಬೊಡೆ ಎಂಬ ಶಬ್ದಕ್ಕರ್ಥ. ಆ ತನು ಗುಣಂಗಳ ಮರೆದಲ್ಲಿ ಶಾಂತಿಯೆಂಬ ಬಿಂದುವ ಅನ್ಯವ ಮಾಡಿ ಪರಿಕಿಸದೆ ತನ್ನಲ್ಲಿ ತಾನೇ ಪರಮಾನಂದ ಜಲವನುಂಬುದೇ ಪರಮ ಶಿವಯೋಗವೆಂಬುದೀಗ ಕಪ್ಪೆಯ ಸೋಂಕದೆ ಅಲ್ಲಿಯ ಉದಕವ ಕುಡಿಯ ಬಲ್ಲರೆ ಅದು ಯೋಗವೆಂಬ ಶಬ್ದಕ್ಕರ್ಥ. ಇಂತಾಗಲು ಆ ದೇಹದೊಳಗಣ ತಮೋಗುಣ ಕರಣ ಗುಣಂಗಳೆಂಬ ಪ್ರಪಂಚವಳಿದು ಅಳಿಯದೆ ಲಿಂಗ ತನುಗುಣಂಗಳಾಗಿ ಆ ಶರಣ ತನ್ನಲ್ಲಿ ತಾನೆ ಮಹಾ ಜ್ಞಾನಾಗ್ನಿಯೊಳಗೆ ಸಮರಸ ಪಾಕವಾದನೆಂಬುದೀಗ ಆ ಕಲ್ಲು ಕಪ್ಪೆಯೊಳಗಣ ಹುಲ್ಲುರಿಯದೆ ಅಟ್ಟಂಬಂತೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೫೧. ನೀರಿಲ್ಲದ ನೆಳಲಿಲ್ಲದ ಬೇರಿಲ್ಲದ ಗಿಡ ಹುಟ್ಟಿತ್ತು. ತಲೆಯಿಲ್ಲದ ಮೃಗ ಬಂದು ಮೇಯಿತ್ತಾ ಗಿಡವ. ಕಣ್ಣಿಲ್ಲದ ಕುರುಡನು ಕಂಡನಾ ಮೃಗವನು. ಕೈಯಿಲ್ಲದ ವ್ಯಾಧನು ಎಚ್ಚನಾ ಮೃಗವ. ಕಿಚ್ಚಿಲ್ಲದ ನಾಡಿಗೊಯಿದು ಸುಟ್ಟು ಬಾಣಸವ ಮಾಡಿ ಲಿಂಗಕ್ಕೆ ಅರ್ಪಿತವಾಯಿತ್ತು ಗುಹೇಶ್ವರಾ.

ಟೀಕು:— ನೀರೆಂದರೆ ಮನಸ್ಸು. ನೆಳಲೆಂದರೆ ಮಾಯೆ. ಬೇರೆಂದರೆ ಮೂಲಾಹಂಕಾರ. ಇಂತು ಮನಪ್ರಕೃತಿ ಮಾಯೆಪ್ರಕೃತಿ ಮೂಲಾಹಂಕಾರ ಪ್ರಕೃತಿಗಳೆಂಬ ಈ ತ್ರಯವು ಅಳಿದುಳಿದು ಶಿವಯೋಗಿಯಲ್ಲಿ ವಿವೇಕವೆಂಬ ವೃಕ್ಷ ಉದಯವಾಗಲು ನೀರಿಲ್ಲದ ನೆಳಲಿಲ್ಲದ ಬೇರಿಲ್ಲದ ಗಿಡ ಹುಟ್ಟಿತ್ತೆಂಬ ಶಬ್ದಕ್ಕರ್ಥ. ಆ ವಿವೇಕ ವೃಕ್ಷವನು ತಲೆ ಯೆಂದರೆ ಜ್ಞಾನವಿಲ್ಲದ ಮಾಯಾಮೃಗವು ಅವಿಚಾರ ರೂಪಿಂ ಬಂದು ತನ್ನ ಸುಖವಂ ಸವಿಯುತ್ತಿದ್ದಿತ್ತು. ಅದೆಂತೆಂದರೆ ವಿಚಾರಕ್ಕಳವಡದು. ಘನವ ವಿಚಾರಿಸುವವೇ ಮಾಯೆಯಾದ ಕಾರಣ ಅದೀಗ ತಲೆ ಇಲ್ಲದ ಮೃಗ ಬಂದು ಮೇಯಿತ್ತಾ ಗಿಡವ ಎಂಬ ಶಬ್ದಕ್ಕರ್ಥ. ಆ ಮಾಯೆಯನು ಶರಣನು ಭಿನ್ನದೃಷ್ಟಿಯಿಲ್ಲದೆ ನೋಡಿ ಕಂಡು ಭಿನ್ನ ಹಸ್ತವಳಿದು ಅಭಿನ್ನ ಹಸ್ತದಲ್ಲಿ ಭಾವವೆಂಬ ಬಿಲ್ಲ ತುಂಬಿ ತೆಗೆದು ಜ್ಞಾನವೆಂಬ ಬಾಣವ ಹೂಡಿ ಎಸದು ಕೆಡಹುದು. ಆ ಮಾಯೆಯಳಿದು ವಿದ್ಯಾಶಕ್ತಿಯಾಯಿತ್ತೆಂಬುದೀಗ ಕಣ್ಣಿ



ಲ್ಲದ ಕುರುಡನು ಕಂಡನಾ ಮೃಗವ ಕೈಯಿಲ್ಲದ ವ್ಯಾಧನು ಎಚ್ಚನಾ ಮೃಗವ ಎಂಬ ಶಬ್ದಕ್ಕರ್ಥ. ಅಸದ್ವಿದ್ಯೆಯ ಸುಖವನು ಉದರಾಗ್ನಿಯರತ ಮಹಾಜ್ಞಾನಾಗ್ನಿಯಲ್ಲಿ ಸಮರಸಪಾಕವ ಮಾಡಿ ಮಹಾಲಿಂಗಕ್ಕೆ ನಿವೇದಿಸುತ್ತಿರಲು ಅದೀಗ ಕಿಚ್ಚಿಲ್ಲದ ನಾಡಿಗೊಯಿದು ಸುಟ್ಟು ಬಾಣಸವ ಮಾಡಿ ಲಿಂಗಕ್ಕರ್ಪಿತವಾಯಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೫೨. ನೀ ನಾನೆಂಬ ಭಾವವಾರಿಂದಾಯಿತ್ತು ಹೇಳಾ? ನೀನೆಂಬುದ ಅಜ್ಞಾನ. ನಾನೆಂಬುದೇ ಮಾಯಾಧೀನ. ನೀನೆನ್ನದೆ ನಾನೆನ್ನದೆ ಇಪ್ಪ ಸುಖವ ಭಿನ್ನವಿಲ್ಲದೆ ಅರಿಯಬಲ್ಲರೆ ಆ ಸುಖವು ನಿಮಗರ್ಪಿತ ಕಾಣಾ ಗುಹೇಶ್ವರಾ.

ಟೀಕು:— ತನ್ನ ನಿಜವ ತಾನರಿದು ತಾನಲ್ಲದೆ ಮತ್ತಾವುದು ಇಲ್ಲವೆಂದರಿದ ಮಹಾಜ್ಞಾನಿ ನೀ ನಾನೆಂಬ ಭಿನ್ನವನರಿಯನಾಗಿ ಆ ಪರಮ ಸುಖ ಪ್ರಸಾದದಲ್ಲಿ ಪರಿಣಾಮಿಯಾಗಿಪ್ಪನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೫೩. ಇಪ್ಪತ್ತೈದು ತತ್ವದ ಹತ್ತೆಂಬ ದಾರದಲ್ಲಿ ಬಳಲುವ ವ್ಯರ್ಥಗೇಡಿ ಮನವನೇನೆಂಬೆನಯ್ಯಾ! ತನ್ನ ತಾ ತಿಳಿಯಲು ತನಗೆ ತಾನನ್ಯವಲ್ಲ ಮರುಳೇ! ಮುತ್ತೈಯ್ಯನ ಬೆಣ್ಣೆಯ ಶಿಶು ತಾ ನುಂಗಿತ್ತು. ಶಿಶುವಿನ ಸುಖವನೇನೆಂಬೆ ಗುಹೇಶ್ವರಾ?

ಟೀಕು:—ಪಂಚವಿಂಶತಿ ತತ್ವದಲ್ಲಿ ಬದ್ಧರಾಗಿ ದಶ ವಾಯುಗಳ ಗುಣ ಪ್ರಕೃತಿವಿಡಿದು ಬಳಲುತ್ತಿಪ್ಪದು ಮನವೆಂಬುದೀಗ ಇಪ್ಪತ್ತೈದು ತತ್ವದ ಹತ್ತೆಂಬ ದಾರದಲ್ಲಿ ಬಳಲುವ ವ್ಯರ್ಥಗೇಡಿ ಮನವನೇನೆಂಬೆನಯ್ಯಾ ಎಂಬ ಶಬ್ದಕ್ಕರ್ಥ. ಆ ಮನವು ತನ್ನಲ್ಲಿ ತಾನೇ ತಿಳಿದು ನೋಡಲು ತಾನೇ ಪರಶಿವ ತತ್ವವೆಂದರಿಯಲು ಆ ಪರಶಿವ ತತ್ವದಿಂದುದಿಸಿದಾಕೆ ಚಿಚ್ಛಕ್ತಿ, ಆ ಚಿಚ್ಛಕ್ತಿಯಿಂದುದಯಿಸಿದಾತನೆ ಶರಣ, ಅದು ಕಾರಣ ಆ ಶರಣ ಪರಶಿವ ತತ್ವದ ಮಗಳ ಮಗನಾದ ಕಾರಣ ಆ ಶಿವತತ್ವಕ್ಕೆ ಮೊಮ್ಮಗನಾಗಿ ಆ ಪರಿಪೂರ್ಣ ವಿವೇಕವೆಂಬ ನವನೀತವ ದಣಿಯುಂಡು ಪರಮ ಸುಖ ಸ್ವರೂಪನಾಗಿದ್ದನೆಂಬುದೀಗ ತನ್ನ ತಾ ತಿಳಿಯಲು ತನಗೆ ತಾನನ್ಯವಲ್ಲ ಮುತ್ತಯ್ಯನ ಬೆಣ್ಣೆಯ ಶಿಶು ನುಂಗಿತ್ತು ಮತ್ತೆ ಶಿಶುವಿನ ಸುಖವನೇನೆಂಬೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೫೪. ಶಬ್ದವೆಂಬೆನೆ? ಶ್ರೋತ್ರದೆಂಜಲು. ಸ್ಪರ್ಶನವೆಂಬೆನೆ? ತ್ವಕ್ಕಿನೆಂಜಲು. ರೂಪೆಂಬೆನೆ? ನೇತ್ರದೆಂಜಲು. ರುಚಿಯೆಂಬೆನೆ? ಜಿಹ್ವೆಯೆಂಜಲು. ಪರಿಮಳವೆಂಬೆನೆ? ಘ್ರಾಣದೆಂಜಲು. ನಾನೆಂಬೆನೆ? ಅರಿವಿನೆಂಜಲು. ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಣ ಬೆಳಗು ಗುಹೇಶ್ವರಲಿಂಗವು.

ಟೀಕುಃ—ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಈ ಐದು ವಿಷಯಂಗಳು ಪಂಚೇಂದ್ರಿಯಂಗಳ ಉಚ್ಛಿಷ್ಟ. ಇವ ನಿವೃತ್ತಿ ಮಾಡಿ ಅರಿವಿನ ಮುಖದಿಂದ ನಾನು ಶಿವನೆಂಬ ಅಭಿಮಾನ ಅಹಂಕಾರದ ಉಚ್ಛಿಷ್ಟ ಇಂತೀ ಆರು ಸೂತಕಂಗಳ ನಿವೃತ್ತಿಮಾಡಿ ಮಹಾಜ್ಞಾನ ಪ್ರಕಾಶವೇ ತಾನಾಗಿರ ಬಲ್ಲಾತನೇ ಅಚ್ಚ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೫೫. ಹಸಿವರಿತಲ್ಲದೆ ಪ್ರಸಾದಿಯಲ್ಲ. ತೃಷ್ಣೆಯರಿತಲ್ಲದೆ ಪಾದೋದಕಿಯಲ್ಲ. ನಿದ್ರೆ ಅರಿತಲ್ಲದೆ ಭವವಿರಹಿತನಲ್ಲ. ಅನಲ ಪವನ ನಿಂದಲ್ಲದೆ ಪ್ರಾಣಲಿಂಗಿಯಲ್ಲ. ಇದುಕಾರಣ ಗುಹೇಶ್ವರಲಿಂಗವೆಲ್ಲರಿಗೆ ಎಲ್ಲಿಯದೋ?

ಟೀಕುಃ— ಹಸಿವರಿತು ಸರ್ವಾಂಗವು ಲಿಂಗದಲ್ಲಿ ಅರ್ಪಿತವಾಗಿರಬಲ್ಲಡೆ ಆತ ಪ್ರಸಾದಿ. ಅಲ್ಲದಿದ್ದರೆ ಆತ ಪ್ರಸಾದಿಯಲ್ಲ. ತೃಷ್ಣೆಯರಿತು ತಾನೆ . ಪರಮಾನಂದ ರಸಮೂರ್ತಿಯಾಗಿರಬಲ್ಲಡೆ ಆತನೇ ಪಾದೋದಕ ಸಂಬಂಧಿ. ಅಲ್ಲದಿದ್ದರೆ ಪಾದೋದಕ ಸಂಬಂಧಿಯಲ್ಲ. ಜಾಗ್ರಸ್ವಪ್ನಗಳಳಿದು ಲಿಂಗ ವ್ಯಸನಿಯಾಗಿರಬಲ್ಲಡೆ ಆತ ಭವ ವಿರಹಿತನು. ಅಲ್ಲದಿರ್ದಡಾತ ಭವಭಾರಕನು. ಅಗ್ನಿವಿಕಾರದ ರೂಪು ಲಕ್ಷಣ ವಾಯು ವಿಕಾರ ಪ್ರಾಣ ಲಕ್ಷಣಂಗಳಳಿದಡೆ ಆತನೆ ಪ್ರಾಣಲಿಂಗಸಂಬಂಧಿ. ಅಲ್ಲದಿರ್ದೊಡೆ ಆತ ಪಾದೋದಕ ಸಂಬಂಧಿಯಲ್ಲ. ಜಾಗ್ರಸ್ವಪ್ನಂಗಳಳಿದು ಲಿಂಗವ್ಯಸನಿಯಾಗಿರಬಲ್ಲಡೆ ಆತ ಭವ ವಿರಹಿತನು. ಅಲ್ಲದಿರ್ದೊಡೆ ಆತ ಭವಭಾರಕನು. ಅಗ್ನಿವಿಕಾರದ ರೂಪು ಲಕ್ಷಣ ವಾಯುವಿಕಾರ ಪ್ರಾಣ ಲಕ್ಷಣಂಗಳಳಿದಡೆ ಆತನೆ ಪ್ರಾಣಲಿಂಗ ಸಂಬಂಧಿ. ಅಲ್ಲದಿರ್ದೊಡೆ ಆತ ವಾಯುಪ್ರಾಣಿ. ಈ ಭೇದ ಅಚ್ಚ ಶರಣರಿಗಲ್ಲದೆ ಮತ್ತಾರಿಗು ಅಳವಡದೆಂಬುದೀ ವಚನದ ತಾತ್ಪರ್ಯಾರ್ಥ.

೨೫೬. ಪಿಂಡ ಬ್ರಹ್ಮಾಂಡದೊಳಗೆ ತಂಡ ತಂಡ ಲೋಕ. ಗಂಡಗಂಡರ ನಿರಿಸಿ ಬಡವರೊಡೆಯರ ನುಂಗಿ ನಾಡೊಳಗೆ ಗಿಡು ನಡೆದು ಮಡ



ವೆಲ್ಲವ ತೊಡೆದು ನಡು ರಂಗದಲ್ಲಿ ಕೊಡನೋಡಲೀಯದೆ ಮಡದಿಯೊಡಗೂಡಿ ಗಗನವ ಅಡಿಗೆಯ ಮಾಡಿ ಉಂಡು ಸುಖಿಯಾದೆ ಗುಹೇಶ್ವರಾ.

ಟೀಕುಃ— ಪಿಂಡ ಬ್ರಹ್ಮಾಂಡಯೋರೈಕ್ಯಂ ಎಂಬುದಾಗಿ ಪಿಂಡದೊಳಗೆ ಅನಂತ ಲೋಕಂಗಳು ಅಡಗಿಪ್ಪವೆಂಬುದೀಗ ಪಿಂಡಬ್ರಹ್ಮಾಂಡದೊಳಗೆ ತಂಡತಂಡದ ಲೋಕವೆಂಬ ಶಬ್ದಕ್ಕರ್ಥ. ಆ ಲೋಕಪ್ರಪಂಚಗಳು ಮಹಾಜ್ಞಾನಾರೂಢರ ಮುಸುಕಲಮ್ಮದೆ ಬಡವರೊಡೆಯರೆಂದರೆ ಜ್ಞಾನಾಜ್ಞಾನಸಂಬಂಧಿಗಳು ಆ ಜ್ಞಾನಿಗಳ ನುಂಗಿ ಕೊಂಡಿಪ್ಪುದೆಂಬುದೀಗ ಗಂಡಗಂಡರನಿರಿಸಿ ಬಡವರೊಡೆಯರ ನುಂಗಿ ಎಂಬ ಶಬ್ದಕ್ಕರ್ಥ. ಇದನರಿದ ಶರಣನು ವಿವೇಕ ವೃಕ್ಷದ ಸ್ವರೂಪಾಗಿ ಚರಿಸುತ್ತಿರಲು ಅದೀಗ ನಾಡೊಳಗೆ ಗಿಡು ನಡಿಯಿತ್ತೆಂಬ ಶಬ್ದಕ್ಕರ್ಥ. ಇಂತು ವಿವೇಕರೂಪಿಂದ ಆಚರಿಸುತ್ತಿರಲು ಸಂಸಾರ ಸಾಗರದ ಭವ ಮುಖ ಘಾತಂಗಳಳಿದವೆಂಬುದೀಗ ಮಡುವನೆಲ್ಲವ ತೊಡದನೆಂಬ ಶಬ್ದಕ್ಕರ್ಥ. ಇಂತು ಸಂಸಾರವಳಿದ ಅಂತರಂಗದಲ್ಲಿ ನಿರುಪಾಧಿಕ ಜ್ಞಾನದ ಎಚ್ಚರಿಂದ ಸರ್ವಾಂಗವು ಭಿನ್ನವಾಗದೆ ಲಿಂಗಾಂಗವಾಗಿರುತ್ತಿಪ್ಪದೀಗ ನಡುರಂಗದಲ್ಲಿ ಕೊಡನೊಡೆಯಲೀಯ ದೆ ಎಂಬ ಶಬ್ದಕ್ಕರ್ಥ. ಇಂತು ಸರ್ವಾಂಗವು ಲಿಂಗವಾಗಲು ಚಿತ್ತೆಂಬ ಶಕ್ತಿಯಲ್ಲಿ ಸಮರಸ ಸಂಗವಮಾಡಿ ಮಹಾಜ್ಞಾನಾಗ್ನಿಯಲ್ಲಿ ಗಗನವೆಂಬ ಆತ್ಮತತ್ವವನು ಪರಿಪಾಕವ ಮಾಡಿ ಮಹಾಲಿಂಗ ಮುಖಕ್ಕೆ ಸಮರ್ಪಿಸಿ ಸುಖಿಯಾಗಿಪ್ಪನೆಂಬುದೀಗ ಗಗನವನಡಿಗೆಯಮಾಡಿ ಉಂಡು ಸುಖಿಯಾದೆ ಗುಹೇಶ್ವರ ಎಂಬ ಶಬ್ದಕ್ಕರ್ಥ.

೨೫೭. ಪರಮ ಸುಖ ಪರಿಣಾಮದ ಇರವ ಬಲ್ಲವರಾರು? ಅದು ದೊರಕೊಳ್ಳದು ನೋಡಾ! ತನತನಗೆ ತನ್ನ ಇರವ ಲಿಂಗದಲ್ಲರಸಿ ಪರವ ಮನದಲ್ಲಿ ಹಿಡಿದು ಇಹ ಪರವೆಂಬುದೊಂದು ಭ್ರಾಂತವಳಿದು ನಿರತಿಶಯ ಸುಖದೊಳಗೆ ನಿಜಲಿಂಗವಾಗಿರಬಲ್ಲ ಗುಹೇಶ್ವರಾ ನಿಮ್ಮ ಶರಣನನುಪಮ ಪ್ರಸಾದಿ.

ಟೀಕುಃ—ಪರಮಸುಖ ಪ್ರಸನ್ನ ಪರಿಣಾಮ ತನಗೆ ದೊರೆಕೊಂಬ ಪರಿಯೆಂತೆಂದರೆ ತನ್ನ ನಿಲವೆಂತಿದ್ದುದು ಆಧಾವದಲ್ಲಿ ಸರ್ವಾಂಗ ಲಿಂಗದಲ್ಲಿ ನಿಕ್ಷೇಪಿಸಿ ಆ ಪರಬ್ರಹ್ಮವನೆ ಮನದೊಳಗೆ ಸಮವೇಧಿಸಿ ನಿರತಿಶಯ ಸುಖಪ್ರಸನ್ನವನೆ ಮಹಾಲಿಂಗದಲ್ಲಿ ಸಮರ್ಪಿಸಿ ಸುಖಿಯಾಗಿಪ್ಪಾತನೆ ಅಚ್ಚ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೨೫೮. ಗಂಗಾದೇವಿಯ ಹುಳಿಯು ಕಾಸಿ ಗೌರೀದೇವಿಯ ಕುಳನಟ್ಟು ಭಕ್ತನ ಬಾಡನಟ್ಟು ದೇವನ ಸಾಸುವೆಗಲಸಿ ಬ್ರಹ್ಮನಡ್ಡಣಿಗೆ ವಿಷ್ಣು ಪರಿಯಾಣ ರುದ್ರನೋಗರ ಈಶ್ವರ ಮೇಲೋಗರ ಸದಾಶಿವ ತುಪ್ಪ ಉಣಲಿಕ್ಕೆ ಕೈಕಾಲು ಮುರಿಯಿತ್ತು ಗುಹೇಶ್ವರಾ.

ಟೀಕು:—ಲಿಂಗಾನುಭಾವದಲ್ಲಿ ಸಂಪನ್ನನಾದ ಶರಣನು ತನ್ನ ಜ್ಞಾನಾಗ್ನಿಯಲ್ಲಿ ಆಧಾರ ಶಕ್ತಿಯಪ್ಪ ಚಿಚ್ಛಕ್ತಿಯನು ಪರಮಾನಂದ ರಸಮಯವಪ್ಪಂತು ತಿಳಿಯೆ ಕಾಸಿ ಜಗಕ್ಕೆ ಗುರುಸ್ವರೂಪಿಯಪ್ಪ ಪರಶಕ್ತಿಯನು ಪ್ರಸಿದ್ಧ ಮುಖಕ್ಕೆ ತಂದು ಪದಾರ್ಥವ ಮಾಡಿದನೆಂಬುದೀಗ ಗಂಗಾದೇವಿಯ ಹುಳಿಯು ಕಾಸಿ ಗೌರೀ ದೇವಿಯ ಕುಳನಟ್ಟು ಎಂಬ ಶಬ್ದಕ್ಕರ್ಥ. ಆ ಸ್ವಯಂ ಪ್ರಕಾಶವಪ್ಪ ಬೋನಕ್ಕೆ ಆ ಶರಣನು ತನ್ನ ಭಕ್ತಿ ಪಿಂಡವೆಂಬ ಪದಾರ್ಥವ ಸಮರಸ ಪಾಕವ ಮಾಡಿದನೆಂಬುದೀಗ ಭಕ್ತನ ಬಾಡ ನಟ್ಟು ಎಂಬ ಶಬ್ದಕ್ಕರ್ಥ. ಆ ಪದಾರ್ಥದೊಳಗೆ ಪರಶಿವ ತತ್ವವನೊಡಗಲಸಿದನೆಂಬುದೀಗ ದೇವನ ಸಾಸುವೆಗಲಸಿ ಎಂಬ ಶಬ್ದಕ್ಕರ್ಥ. ಆ ಪದಾರ್ಥವ ಬ್ರಹ್ಮ ತತ್ವಾಂಶವಪ್ಪ ಸ್ಥೂಲತನುವೆಂಬ ಅಡ್ಡಣಿಗೆಯ ಮೇಲೆ ಇಟ್ಟನೆಂಬುದೀಗ ಬ್ರಹ್ಮನಡ್ಡಣಿಗೆ ಎಂಬ ಶಬ್ದಕ್ಕರ್ಥ. ವಿಷ್ಣು ತತ್ವಾಂಶಮಪ್ಪ ಸೂಕ್ಷ್ಮತನುವೆಂಬ ಪರಿಯಾಣವನು ಆ ಅಡ್ಡಣಿಗೆಯ ಮೇಲೆ ಇಟ್ಟನೆಂಬುದೀಗ ವಿಷ್ಣು ಪರಿಯಾಣವೆಂಬ ಶಬ್ದಕ್ಕರ್ಥ. ರುದ್ರತತ್ವಾಂಶಮಪ್ಪ ಕಾರಣ ತನುವನು ಶುದ್ಧ ಬೋನವ ಮಾಡಿ ಆ ಪರಿಣಾಮದಲ್ಲಿ ತುಂಬಿದನೆಂಬುದೀಗ ರುದ್ರನೋಗರವೆಂಬ ಶಬ್ದಕ್ಕರ್ಥ. ಆ ಸಕಲ ಪದಾರ್ಥಂಗಳನು ಹಿಡಿದು ಅಲ್ಲಿ ಮಹಾನುಭಾವವೆಂಬುದು ಈಶ್ವರತತ್ವಾಂಶವಾದ ಕಾರಣ ಅವಿವೇಕವ ಮೇಲು ಸಾಧನವಾಗಿ ಗಡಣಿಸಿದನೆಂಬುದೀಗ ಈಶ್ವರ ಮೇಲೋಗರವೆಂಬ ಶಬ್ದಕ್ಕರ್ಥ. ಸದಾಶಿವ ತತ್ವವೇ ತೃಪ್ತಿಸ್ಥಾನವಾದ ಕಾರಣ ಆ ತೃಪ್ತಿಯನೆ ಅಭಿಗರವಾಗಿ ಗಡಣಿಸಿದನೆಂಬುದೀಗ ಸದಾಶಿವನು ತುಪ್ಪವೆಂಬ ಶಬ್ದಕ್ಕರ್ಥ. ಇಂತಪ್ಪ ಸ್ವಯಂ ಪ್ರಕಾಶಪದಾರ್ಥವನು ಆ ಶರಣನು ಶರಣಮುಖಲಿಂಗಕ್ಕೆ ಸಮರ್ಪಿಸಿ ಪ್ರಸನ್ನ ಪರಿಣಾಮವನೆಯ್ದಲು ಅಲ್ಲಿ ಭೋಕ್ತ್ರವ್ಯೆವನುಂಬ ಹಸ್ತವು ಲಯವಾಗಿ ಗಮನವೆಂಬ ಚರಣವು ನಷ್ಟವಾಗಿ ನಿರ್ಗಮನಿಯಾಗಿರ್ದನೆಂಬುದೀಗ ಉಣಲಿಕ್ಕೆ ಕೈಕಾಲು ಮುರಿಯಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.



೨೫೯. ಉಂಡೆನುಟ್ಟೆನೆಂಬ ಸಂದೇಹ ನಿನಗೇಕಯ್ಯಾ! ಉಂಬುದೇ ಅಗ್ನಿ ಉಡುವುದೇ ಪೃಥ್ವೀ? ನೀನೆಂದು ಉಂಡೆ ನಾನೆಂದು ಕಂಡೆ ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ ಸತ್ತೆನೆಂಬ ಅಂಜಿಕೆ ನಿನಗೆ ಬೇಡಾ. ಅಂಜದಿರು ಗುಹೇಶ್ವರಾ ನಿನಗಾವ ನಾಚಿಕೆಯು ಇಲ್ಲ.

ಟೀಕು:— ಅರ್ಪಿತ ಅನರ್ಪಿತವೆಂಬೆರಡು ಅಳಿದುಳಿದ ಪ್ರಸಾದಿಗೆ ಆನುಂಡೆನೆಂಬ ಸಂದೇಹವಿಲ್ಲ ಅಥವಾ ಆ ಲಿಂಗಮುಖದಲ್ಲಿ ಉಂಡು ಆ ಸುಖವನಂಗಕ್ಕೆ ಆವರಣವ ಮಾಡಿಕೊಂಡೆನೆಂಬ ಉಪಮೆಯು ಇಲ್ಲ. ಅದೇಕೆಂದರೆ ಉದರಾಗ್ನಿಯು ಹಂಗು ಆ ಸುಖವನಾವರಿಸಿ ಕೊಂಡೆನೆಂದರೆ ತನುವಿನ ಹಂಗಾದ ಕಾರಣ ಈ ಭೇದವ ಭಿನ್ನವಿಟ್ಟುನೋಡದೆ ಇಪ್ಪುದೀಗ ಉಂಡೆ ಉಟ್ಟೆನೆಂಬ ಸಂದೇಹ ನಿನಗೆ ಬೇಡವೆಂಬುದೆ ಉಂಬುದೇ ಅಗ್ನಿ ಉಡುವುದೆ ಪೃಥ್ವೀ ನೀನೆಂದುಂಡೆ ನಾನೆಂದು ಕಂಡೆನೆಂಬ ಶಬ್ದಕ್ಕರ್ಥ. ಅಥವಾ ಆ ಸುಖವನು ಉಣ್ಣದೆ ಉಡದೆ ಸುಖಿಯಾದೆನೆಂಬುದು ಮಾಯಾ ಭ್ರಮೆ. ಆ ಮಾಯಾ ಭ್ರಮೆಯನು ಪರಿತ್ಯಾಗವಮಾಡಿ ಉಂಡೆ ಉಣ್ಣೆ ಕಂಡೆ ಕಾಣೆನೆಂಬ ಭಿನ್ನಭಾವವಿಲ್ಲದಿಪ್ಪುದೆ ಮಹಾಜ್ಞಾನಲಿಂಗದ ಆರೋಗಣೆಯೆಂಬುದೀಗ ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ ಸತೆನೆಂಬ ಅಂಜಿಕೆ ನಿನಗೆ ಬೇಡ ಅಂಜದಿರು ಗುಹೇಶ್ವರಾ ನಿನಗಾವ ನಾಚಿಕೆಯು ಇಲ್ಲ ಎಂಬ ಶಬ್ದಕ್ಕರ್ಥ.

೨೬೦. ಮೇರು ಮಂದಿರದಲ್ಲಿ ಈರೈದರ ತಲೆ ಧಾರುಣಿಯ ಜನರು ಬಣ್ಣಿಸುತ್ತಿಪ್ಪರು. ಜ್ಞಾನಾಮೃತ ರಸದಲ್ಲಿ ಓಗರವ ಮಾಡಿ ಆರೋಗಣೆಯ ಮಾಡಿದೆನು. ವಿಷಮಾಕ್ಷ ಹರ ಭಸ್ಮ ವಿಭೂಷಣ ಶಶಿಧರ ಶರಣು ಶರಣೆನುತ್ತಿರ್ದೆನು. ಇಂದ್ರಾಗ್ನಿಯ ಪುರ ಪಟ್ಟಣದಲ್ಲಿ ಚಂದ್ರಹಾರವ ಬೇಡಿದಡೆ ಕಂಡ ಕಪಾಲದಲಿ ಉಂಡು ತೃಪ್ತಿ ಅಖಂಡಿತ ನಿರಾಳ ಗುಹೇಶ್ವರಾ.

ಟೀಕು:—ಮೇರುವೆಂದರೆ ತನುತ್ರಯಂಗಳಿಗೆ ಹೆಸರು ಆಧಾರ ಕರ್ತೃವಪ್ಪ ಅಹಂಕಾರ. ಅದೇ ಅಹಂಕಾರದಲ್ಲಿ ದಶನಾಳ ಆ ದಶನಾಳಂಗಳೊಳಗೆ ದಶವಾಯುಗಳು ತಲೆದೊರುತ್ತಿಪ್ಪವೆಂಬುದೀಗ ಮೇರು ಮಂದಿರದಲ್ಲಿ ಈರೈದರ ತಲೆ ಎಂಬ ಶಬ್ದಕ್ಕರ್ಥ. ಆ ದಶವಾಯುಗಳ ಸಂಚದ ಭೇದವನೆಲ್ಲರು ಹೇಳುತ್ತಿಪ್ಪರೆಂಬುದೀಗ ಧಾರುಣಿಯ ಜನರೆಲ್ಲಾ ಬಣ್ಣಿಸುತ್ತಿರ್ಪರು ಎಂಬ ಶಬ್ದಕ್ಕರ್ಥ. ಆ ದಶವಾಯುಗಳ ಸಂಚವ ಕೆಡಿಸಿ ಜ್ಞಾನಾ

ಮೃತ ರಸದಲ್ಲಿ ಸರ್ವಾಂಗವನು ಸಮರಸ ಪಾಕವ ಮಾಡಿ ಸುಖಿಸಿದನೆಂಬುದೀಗ ಜ್ಞಾನಾಮೃತರಸದಲ್ಲಿ ಓಗರವ ಮಾಡಿ ಆರೋಗಣೆಯ ಮಾಡಿದನು ಎಂಬ ಶಬ್ದಕ್ಕರ್ಥ. ಆ ಆರೋಗಣೆಯ ಮಾಡಿದ ಪರಮಾನಂದದಿಂದ ಸುಖಿಯಾಗಿ ತನ್ನ ತಾನೇ ಶಿವನೆಂದರಿದು ತನ್ನ ತಾನೇ ಸ್ತುತಿಸುತ್ತಿದ್ದನೆಂಬುದೀಗ ವಿಷಮಾಕ್ಷ ಹರ ಭಸ್ಮ ವಿಭೂಷಣ ಶಶಿಧರ ಶರಣು ಶರಣೆನುತ್ತಿರ್ದನು ಎಂಬ ಶಬ್ದಕ್ಕರ್ಥ. ಇಂತಪ್ಪ ರಾಜಯೋಗಿ ಸಗುಣ ಯೋಗದ ಅಗ್ನಿಮಂಡಲದ ಮೇಲಣ ತ್ರಿಕೋಣ ಮಂಡಲವೆಂಬ ಕುಂಡಲಿಯ ಮೇಲೆ ಕುಳ್ಳಿರ್ದು ಊರ್ಧ್ವಚಕ್ರವೆಂಬ ಇಂದ್ರಿಯಪುರದಲ್ಲಿ ಅನುಭಾವ ಸೂತ್ರವ ಸಂಬಂಧಿಸಿ ಅಲ್ಲಿಪ್ಪ ಅಮೃತ ಆಹಾರವನು ಆರೋಗಿಸಿ ಇಂತು ಸಗುಣ ನಿರ್ಗುಣ ಯೋಗಂಗಳ ಎರಡರಲ್ಲಿಯೂ ಸುಖಿಯಾಗಿ ಅಖಂಡ ಪರಿಪೂರ್ಣವಾಗಿದ್ದನೆಂಬುದೀಗ ಇಂದ್ರಾಗ್ನಿಯ ಪುರ ಪಟ್ಟಣದಲ್ಲಿ ಚಂದ್ರಹಾರವ ಬೇಡಿದಡೆ ಕಂಡ ಕಪಾಲದಲ್ಲಿ ಉಂಡ ತೃಪ್ತಿ ಅಖಂಡಿತ ನಿರಾಳ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೬೧. ಶಿಷ್ಯನ ಮುಖದಿಂದಾದ ಗುರುವಿಂಗೆ ಶಿಷ್ಯನ ಪ್ರಸಾದ ಗುರುವಿಂಗಲ್ಲದೆ ಗುರುವಿನ ಪ್ರಸಾದ ಶಿಷ್ಯಂಗಿಲ್ಲ. ಇದು ಕಾರಣ ಗುರುವೇ ಓಗರ ಓಗರವೇ ಅರ್ಪಿತ ಪ್ರಸಾದವೆಂದು ಉಂಡುಂಡು ಸವೆದರೆಲ್ಲಾ! ಸುಡು ಸುಡು ಶಬ್ದಸೂತಕರ ಕೈಯಲ್ಲಿ ಸ್ಥಾವರ ವಿಧಿವಶವಾಯಿತ್ತು ಗುಹೇಶ್ವರಾ.

ಟೀಕು:— ಶಿಷ್ಯನ ಜ್ಞಾನ ಪ್ರಕಾಶದಿಂದ ಉದಯವಾದ ಗುರು ಆ ಶಿಷ್ಯ ಪ್ರಸಾದವನೆ ಸ್ವೀಕರಿಸುತಿಹನಲ್ಲದೆ ಆ ಶಿಷ್ಯನು ಗುರುವಿನ ಕೈಯಲ್ಲಿ ಉಪಾಧಿ ಪ್ರಸಾದವ ಕೊಳ್ಳನೆಂಬುದೀಗ ಆ ಶಿಷ್ಯನ ಮುಖದಿಂದಾದ ಗುರುವಿಂಗೆ ಶಿಷ್ಯನ ಪ್ರಸಾದ ಗುರುವಿಂಗಲ್ಲದೆ ಗುರುವಿನ ಪ್ರಸಾದ ಶಿಷ್ಯಂಗಲ್ಲವೆಂಬ ಶಬ್ದಕ್ಕರ್ಥ. ಆ ಶಿಷ್ಯಂಗೆ ಆ ಗುರುವೇ ಬೋನ. ಅದೆಂತೆಂದರೆ ಆ ಶಿಷ್ಯನು ಗುರುತತ್ವ ಪದಾರ್ಥವನೆ ಅವಗ್ರಹಿಸಿ ಆ ಸುಖವ ಸವಿಯುತ್ತಿಹನಾಗಿ ಆ ಗುರುವೇ ಓಗರವೆಂಬ ಶಬ್ದಕ್ಕರ್ಥ. ಅಂತಪ್ಪ ಗುರುತತ್ವ ಪದಾರ್ಥವೇ ಆ ಶಿಷ್ಯಂಗೆ ಅರ್ಪಿತವೆಂಬುದೀಗ ಓಗರವೇ ಅರ್ಪಿತವೆಂಬ ಶಬ್ದಕ್ಕರ್ಥ. ಈ ಭೇದವನರಿಯದೆ ಉಪಾಧಿಯಿಂದ ಪ್ರಸಾದವ ಕೊಂಡೆವು ಕೊಟ್ಟೆವು ಎಂಬ ನುಡಿಯೆಲ್ಲವು ಮಿಥ್ಯೆ. ಅದೇ ಪ್ರಸಾದ ಭಿನ್ನವೆಂಬುದೀಗ



ಪ್ರಸಾದ ಪ್ರಸಾದವೆಂದು ಉಂಡುಂಡು ಸವಿವರಲ್ಲಾ ಸುಡು ಸಡು ಶಬ್ದಸೂತಕನ ಕೈಯಲ್ಲಿ ಸ್ಥಾವರ ವಿಧಿವಶವಾಯಿತ್ತು ಗುಹೇಶ್ವರ ಎಂಬ ಶಬ್ದಕ್ಕರ್ಥ.

೨೬೨. ಒಳಗೆ ನೋಡಿಹೆನೆಂದರೆ ಒಳಗು ನಿರಾಳ. ಹೊರಗು ನೋಡಿಹೆನೆಂದರೆ ಹೊರಗು ನಿರಾಳ. ಹೊಲದಲ್ಲಿ ಆವಿಲ್ಲ. ಮನೆಯಲ್ಲಿ ಕರುವಿಲ್ಲ. ನೆಲಹಿನ ಮೇಲಣ ಬೆಣ್ಣೆ ಇದು ದಿಟವೋ! ನಾರಿವಾಣದ ಕಾಯೊಳಗಣ ತಿಳಲು ಒಡೆಯದೆ ನಿಲಬಲ್ಲರೆ ಜಡವು ಗುಹೇಶ್ವರಾ!

ಟೀಕು:— ಲಿಂಗದಲ್ಲಿ ಸರ್ವಾಂಗವು ಅರ್ಪಿತವಾದ ಶರಣಂಗೆ ಅಂತರಂಗದೊಳಗೂ ನಿರ್ವಯಲೆ ಇಪ್ಪುದು. ಬಹಿರಂಗದೊಳಗು ನಿರ್ವಯಲೆ ಇಪ್ಪುದೆಂಬುದೀಗ ಒಳಗೆ ನೋಡಿಹೆನೆಂದಡೆ ಒಳಗೂ ನಿರಾಳ, ಹೊರಗೆ ನೋಡಿಹೆನೆಂದರೆ ಹೊರಗು ನಿರಾಳವೆಂಬ ಶಬ್ದಕ್ಕರ್ಥ. ಹೊಲನೆಂದರೆ ಭಕ್ತಿಸ್ಥಲನೆಂಬ ಕ್ಷೇತ್ರ. ಮನೆಯೆಂದರೆ ಅಂತರಂಗದ ಜ್ಞಾನಸ್ಥಲ. ಇಂತಪ್ಪ ಭಕ್ತಿಕ್ಷೇತ್ರದಲ್ಲಿ ಲಿಂಗವೆಂಬ ತಾಯಿಯಿದ್ದು ಅಂತರಂಗದೊಳಗೆ ಶರಣನೆಂಬ ಶಿಶು ಇದ್ದು ಆ ತಾಯಿ ಆ ಶಿಶುವಿಂಗೆ ಪರಿಣಾಮವೆಂಬ ಅಮೃತವನು ಇದಿರಿಟ್ಟು ಉಣಲಿಲ್ಲಾಗಿ ಅಲ್ಲಿ ಉಣಲೂ ಇಲ್ಲ ಎಂಬುದೀಗ ಹೊಲದಲ್ಲಿ ಆವಿಲ್ಲ ಮನೆಯಲ್ಲಿ ಕರುವಿಲ್ಲ ನೆಲಹಿನ ಮೇಲಣ ಬೆಣ್ಣೆ ಇದು ದಿಟವು ಎಂಬ ಶಬ್ದಕ್ಕರ್ಥ. ನಾರಿವಾಣದ ಕಾಯಿಯೆಂದರೆ ಅಂಗವೆಂಬ ಶಬ್ದಕ್ಕರ್ಥ. ಆ ಅಂಗದ ಗುಣ ಧರ್ಮ ಕರ್ಮಂಗಳ ನಿರ್ಬಂಧದಿಂದ ಭಿನ್ನವ ಮಾಡದೆ ಆ ಅಂಗಗುಣಂಗಳೇ ಲಿಂಗಗುಣಂಗಳಾಗಿ ಆ ಲಿಂಗಕಾಯದೊಳಗಿಪ್ಪ ಪರತತ್ವವೆಂಬ ನಿರ್ಬೀಜವನು ಭಿನ್ನವಿಲ್ಲದೆ ತನ್ಮಯಾರ್ಪಣ ಮಾಡಿಕೊಳಬಲ್ಲಾತನೆ ಅಚ್ಚ ಪ್ರಸಾದಿ ಎಂಬುದೀಗ ನಾರಿವಾಣ ಕಾಯದೊಳಗಣ ತಿರುಳ ನೊಡೆಯದೆ ಜಡವು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೬೩. ಹಸಿವಿಲ್ಲದೆ ಉಣಬಲ್ಲಡೆ ಉಪಾಧಿಯಿಲ್ಲದೆ ಬೇಡಬಲ್ಲಡೆ ಅದು ಮರ್ಮ. ಅದು ಸಂಬಂಧ. ಗಮನವಿಲ್ಲದೆ ಸುಳಿಯ ಬಲ್ಲಡೆ ನಿರ್ಗಮನಿಯಾಗಿ ನಿಲಬಲ್ಲಡೆ ಅದು ಮರ್ಮ. ಅದು ಸಂಬಂಧ. ಅವರ ನಡೆ ಪಾವನ. ಅವರ ನುಡಿ ತತ್ವ. ಅವರು ಜಗದಾರಾಧ್ಯರೆಂಬೆ ಗುಹೇಶ್ವರಾ.

ಟೀಕು:— ಅಂಗದ ಆಪ್ಯಾಯನವಳಿದು ಲಿಂಗದ ಆಪ್ಯಾಯನಿಯಾದ ಶರಣ ನಿತ್ಯತೃಪ್ತನಾಗಿಯೂ ಮತ್ತೆಯೂ ಲಿಂಗಭೋಗೋಪಭೋಗಂಗಳ ಭೋಗಿಸುತಿಪ್ಪದೆಂಬುದೀಗ ಹಸಿವಿಲ್ಲದೆ ಉಣಬಲ್ಲರೆ ಎಂಬ ಶಬ್ದಕ್ಕರ್ಥ. ಲಿಂಗ ಮುಖದಲ್ಲಿ ನಿಷ್ಕಾಮಿಯಾಗಿ ಕಾಮಿಸಿ ಬೇಡಿದಡೆಯೂ ನಿರ್ದೋಷಿಯಾದ ಕಾರಣ ಅದೀಗ ಉಪಾಧಿಯಿಲ್ಲದೆ ಬೇಡಬಲ್ಲಡೆ ಅದು ಮರ್ಮ ಅದು ಸಂಬಂಧವೆಂಬ ಶಬ್ದಕ್ಕರ್ಥ. ಪರಿಪೂರ್ಣ ತಾನೆಂದರಿದು ನಿರ್ಗಮನಿಯಾಗಿಪ್ಪ ಕಾರಣ ಆ ಶರಣ ಸುಳಿದಡು ಗಮನಿಯಲ್ಲವೆಂಬುದೀಗ ಗಮನವಿಲ್ಲದೆ ಸುಳಿಯಬಲ್ಲಡೆ ನಿರ್ಗಮನಿಯಾಗಿ ನಿಲಬಲ್ಲಡೆ ಅದು ಮರ್ಮ ಅದು ಸಂಬಂಧವೆಂಬ ಶಬ್ದಕ್ಕರ್ಥ. ಇಂತಪ್ಪ ಶರಣರೆ ಜಗಕ್ಕೆ ಗುರುಸ್ವರೂಪರೆಂಬುದೀಗ ಅವರು ಜಗದಾರಾಧ್ಯರೆಂಬೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೬೪. ಉಂಡಿಹೆನೆಂದರೆ ಹಸುವಿಲ್ಲ. ಕಂಡಿಹೆನೆಂದರೆ ಪ್ರತಿಯಿಲ್ಲ. ನೋಡಿಹೆನೆಂದರೆ ಉದಕದೊಳಗಣ ಜ್ಯೋತಿಯಂತೆ. ಗುಹೇಶ್ವರಾ ನಿಮ್ಮ ನಾಮವ ಹಿಡಿದು ಬಿಟ್ಟರೆ ಭಂಗವಯ್ಯಾ!

ಟೀಕು:— ಲಿಂಗ ಸುಖಸಾರಾಯದಲ್ಲಿ ಪ್ರಸನ್ನ ಪರಿಣಾಮಿಯಾದ ಶರಣಂಗೆ ಉಂಡಿಹೆನೆಂದಡೆ ತೃಷ್ಣೆಯಿಲ್ಲ. ಇದಿರಿಟ್ಟು ತೋರುವಡೆ ಮತ್ತೊಂದು ಪ್ರತಿಯಿಲ್ಲವಾಗಿ ಕಂಡಿಹೆನೆಂಬ ಅರ್ಥವಿಲ್ಲ. ಇಂತು ಉದಕವೆಂಬ ಮನೋಮೂರ್ತಿಯೊಳಗೆ ತೊಳಗಿ ಬೆಳಗುವ ಜ್ಯೋತಿಯಾಗಿಪ್ಪ ಪರಬ್ರಹ್ಮವನು ಏಕ ಗ್ರಾಹಕತ್ವದಿಂ ದೃಢವಿಡಿದು ಬಳಿಕ ಹಿಂಗಲಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೨೬೫. ಉಂಡರೇನೋ ಉಣ್ಣದಿದ್ದರೇನೋ ಸೋಂಕಿತವೇನೊ ಅಸೋಂಕಿತವೇನೊ? ಹುಟ್ಟುವದಿಲ್ಲಾಗಿ ಹೊಂದುವದಿಲ್ಲ. ಸತ್ತ ಬದುಕಿ ನಿಶ್ಚಿಂತವಾಯಿತ್ತು ಗುಹೇಶ್ವರಾ!

ಟೀಕು:— ಲಿಂಗದಲ್ಲಿ ನಿಜವನೆಯ್ದಿ ಸುಖಿಯಾದ ಶರಣ ಉಂಡರೆ ಉಪಾಧಿಕನಲ್ಲ ಉಣ್ಣದಿದ್ದಡೆ ಉಪವಾಸಿಯಲ್ಲ. ಅದೆಂತೆಂದರೆ ಆ ಶರಣನು ಜನನ ಮರಣವರ್ಜಿತನಾಗಿ ತಾನಳಿದು ತಾನೇ ಉಳಿದ ಕಾರಣ ಆವ ಲೇಪವೂ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.



೨೬೬. ಅಂಬರವಿಲ್ಲದ ಮೇರುವ ಅಂಬುಧಿ ಇಲ್ಲದ ಗುಂಪುವ ತಂದವರಿಲ್ಲದೆ ಬಂದಿತ್ತು. ನಿಜವನೊಳಕೊಂಡಿತ್ತು. ಸಾಧನವಿಲ್ಲದ ಓಗರವ ಭೋಜನವಿಲ್ಲದ ತೃಪ್ತಿಯಾಯಿತ್ತು ನೋಡಾ. ಕ್ರಿಯಾ ವಿರಹಿತ ಯೋಗ ಫಲದಾಯಕ ಹೀನ ಭಕ್ತಿ ಆಯತ ಸ್ವಾಯತವಯರಿದೆ ಹೊಯಿತ್ತು ಗುಹೇಶ್ವರಾ.

ಟೀಕು:— ಅಂಬರವೆಂದರೆ ಆತ್ಮತತ್ವ ಆ ಆತ್ಮತತ್ವ, ತಾನೆಂಬ ಅಹಂಕಾರವಿಲ್ಲದ ಶಿವೋಹಮೆಂಬ ಮೇರುವನು ಭವವೆಂಬ ಸಮುದ್ರವಿಲ್ಲದ ಮಹಾ ಘನ ಗಂಭೀರದ ಆಘಾತವನು ವೃತ್ತಿಜ್ಞಾನದಿಂದ ಅರಿದು ನೆಲೆಗೊಳಿಸದೆ ನಿಜ ಯುಕ್ತಿ ಸಾಧನದಿಂದ ಅಳವಟ್ಟು ನಿಜ ನಿಂದಿತ್ತೆಂಬುದೀಗ ಅಂಬರವಿಲ್ಲದ ಮೇರುವ ಅಂಬುಧಿ ಇಲ್ಲದ ಗುಂಪವ ತಂದವರಿಲ್ಲದೆ ಬಂದಿತ್ತು ನಿಜವನೊಳಕೊಂಡಿತ್ತು ಎಂಬ ಶಬ್ದಕ್ಕರ್ಥ. ಉಪಾಧಿಯಿಲ್ಲದ ಸ್ವಯಂಪ್ರಕಾಶವೆಂಬ ಪದಾರ್ಥವನು ಅಕಾಯವೆಂಬ ಪರಿಯಾಣದಲ್ಲಿ ಗಡಣಿಸಿ ಆ ಪದಾರ್ಥವ ಭಿನ್ನರುಚಿಯಿಂದ ಭೋಗಿಸದೆ ಆ ಸುಖಸ್ವರೂಪ ತಾನಾಗಿ ಭೋಗಿಸಿ ನಿತ್ಯನಾಗಬಲ್ಲರೆ ಅದೇ ಅಚ್ಚ ಪ್ರಸಾದಿ ಎಂಬುದೀಗ ಸಾಧನವಿಲ್ಲದ ಓಗರವ ಭಾಜನವಿಲ್ಲದೆ ಗಡಣಿಸಿ ಭೋಜನವಿಲ್ಲದೆ ತೃಪ್ತಿಯಾಯಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ನಿಷ್ಕ್ರಿಯಾಜ್ಞಾನವು ಸಹಜ ಸಮರಸ ಸದ್ಭಕ್ತಿಯಿಂದ ಆಯತ ಸ್ವಾಯತವೆಂಬ ಭಿನ್ನಭಾವಂಗಳಳಿದವೆಂಬುದೀಗ ಕ್ರಿಯಾ ವಿರಹಿತ ಯೋಗ ಫಲದಾಯಕ ವಿಹೀನ ಭಕ್ತಿ ಆಯತ ಸ್ವಾಯತವರಿಯದೆ ಹೋಯಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೬೭. ಬೆಲ್ಲದ ಪುತ್ತಳಿಯ ಕೈಯಲ್ಲಿ ಹಿಡಿದು ಎಲ್ಲಿ ಚುಂಬಿಸಿದಡೂ ಇನಿದಹುದು. ಬಳ್ಳಿಯ ಬೇವಿನ ಹಣ್ಣ ಮೆಲ್ಲನೆ ಚುಂಬಿಸಿದಡೆ ಇನಿದಹುದೇ? ಎಲ್ಲ ಮಿಥ್ಯೆಯನು ಬಲ್ಲೆವೆಂದೆಂಬರು. ಅವರು ಸಲ್ಲದೆ ಹೋದರಯ್ಯಾ ಗುಹೇಶ್ವರಾ?

ಟೀಕು:— ಸರ್ವಾಂಗ ಲಿಂಗ ಸಂಬಂಧಿಯಾದ ಶರಣನ ಬಾಹ್ಯಾಭ್ಯಂತರದಲ್ಲಿಯೂ ಪ್ರಸನ್ನ ಪರಿಣಾಮಿಯಾಗಿಹನಲ್ಲದೆ ಖಂಡಿತ ಸುಖಿಯಲ್ಲ. ಈ ಭೇದವನರಿಯದೆ ನಾವು ಪ್ರಸನ್ನ ಪ್ರಸಾದಿಗಳೆಂಬ ವಾಗ್ವಾದಿಗಳು ಭವ ಭಾರಕೊಳಗಾದರೆಂಬುದೀ ವಚನದ ತಾತ್ಪರ್ಯಾರ್ಥ.

೨೬೮. ನಿರವಯ ನಿರ್ಗುಣ ನಿಶೂನ್ಯ ಲಿಂಗಕ್ಕೆ ಶರಣರು ತಮ ತನುಗುಣಾದಿಗಳನರ್ಪಿಸಿಹನೆಂಬುದೇ ಮಹಾ ಪಾಪ. ಅವು ತಮ್ಮ ತನು

ವಿನಲ್ಲಿಪ್ಪುದೇ ಭಂಗ ಅದೇ ಕರ್ಮ. ಈ ಉಭಯನಾಸ್ತಿಯಾಗದ ಸುಳುಹು ಮುಂದೆ ಕಾಡಿತಯ್ಯಾ ಗುಹೇಶ್ವರಾ!

ಟೀಕು:— ನಿರವಯ ನಿರಾಳ ನಿರ್ನಾಮಲಿಂಗವು ಆ ಶರಣನ ಒಳ ಹೊರಗೆ ಸರ್ವಾಂಗದೊಳಗೆ ಎಲ್ಲಿಯೂ ವೇದಿಸಿ ತಾನೆಯಾಗಿರಲು ಆ ಸುಖವೇ ಆ ಲಿಂಗಕ್ಕೆ ಅರ್ಪಿತ. ಅದೇ ಪ್ರಸಾದ ಅವೇ ಪ್ರಸಾದಿಯಾಗಿಹನಲ್ಲದೆ, ಇದು ಮರೆದು ಭಿನ್ನ ಭಾವದಿಂದ ಕಾಯಗುಣ ಪ್ರಾಣಗುಣ ಕರಣಗುಣಂಗಳೇ ಧರ್ಮ ಕರ್ಮಗಳನ್ನು ಭಿನ್ನವಿಟ್ಟು ಹಿಡಿದು ಲಿಂಗಕ್ಕರ್ಪಿಸಿಹೆನೆಂಬ ತಾಮಸಿಯಲ್ಲ. ನಿರ್ಣಯವನರಿಯದ ಸುಳುಹು ಮುಂದೆ ಭವಕ್ಕೆ ಬಪ್ಪುದೆಂಬುದೀ ವಚನದ ತಾತ್ಪರ್ಯಾರ್ಥ.

೨೬೯. ನೋಡಲಿಲ್ಲದ ಶೃಂಗಾರ ಮಾತಾಡಲಿಲ್ಲದ ಶಬ್ದ ಬೇಡಲಿಲ್ಲದ ವರವ ನೋಡಿರೇ. ನಿರಾಳವ ಬಾಡಲಿಲ್ಲದ ಶಶಿಯ ಬೆಳಗು ಕೂಡವೆ ಕೂಡಿತ್ತೊಂದು ಸುಖವ ಕಂಡೆ. ನಾನು ಇಲ್ಲದ ಉಪಕಾರ ಮೆಲ್ಲದ ಸವಿಯಿಂದ ಸುಖಿಯಾದೆ ಗುಹೇಶ್ವರಾ.

ಟೀಕು:—ಸರ್ವಾಂಗ ಲಿಂಗ ಸಂಬಂಧಿಯಾದ ಶರಣನ ಕಣ್ಣಮುಂದೆ ತಾನಲ್ಲದೆ ಅನ್ಯವಿಲ್ಲಾಗಿ ತನ್ನ ಸ್ವರೂಪನು ಭಿನ್ನವಿಟ್ಟು ನೋಡದೆ ಸುಖಿಯಾಗಿಹ ಕಾರಣ ನೋಡಲಿಲ್ಲದ ಶೃಂಗಾರವೆಂಬ ಶಬ್ದಕ್ಕರ್ಥ. ಶಬ್ದಸಂಧಣೆಯ ಹಂಗು ಹರಿದು ನಿಶ್ಶಬ್ದವೇದಿಯಾದ ಶರಣ ನುಡಿದದು ತಾನೆ ಅಶಬ್ದಬ್ರಹ್ಮ ಮೂರ್ತಿಯಾಗಿಹನಾದ ಕಾರಣ ಮಾತಾಡಲಿಲ್ಲ ಎಂಬ ಶಬ್ದಕ್ಕರ್ಥ. ಆ ಶರಣ ಫಲಭೋಗವಿರಹಿತನಾಗಿ ತನ್ನ ನಿಜವ ತಾನೇ ವರಂಬಡೆದನೆಂಬುದೀಗ ಬೇಡಲಿಲ್ಲದ ವರವೆಂಬ ಶಬ್ದಕ್ಕರ್ಥ. ಆ ಶರಣನ ಹರುಷದ ಬೆಳಸು ತಾಪತ್ರಯವಾಗಿ ಎಲ್ಲ ಕರಗಿ ಕೊರಗದೆ ತನ್ನ ತಾನೆ ಪರಮ ಸುಖ ಸ್ವರೂಪಿಂದ ಇದ್ದಿತ್ತೆಂಬುದೀಗ ನೋಡಿರೇ ನಿರಾಳವನು ಬಾಡಲಿಲ್ಲಿದ ಶಶಿಯ ಬೆಳಗು ಕೂಡದೆ ಕೂಡಿತ್ತೊಂದು ಸುಖವ ಕಂಡೆ ನಾನು ಎಂಬ ಶಬ್ದಕ್ಕರ್ಥ. ಆ ಶರಣ ಕೊಂಬಲ್ಲಿ ಕೊಡುವಲ್ಲಿ ಉಪಕಾರಂಗಳ ಮರೆದು ಕೊಡುತ್ತ ಕೊಳುತ್ತಿಪ್ಪನಾಗಿ ಇಲ್ಲದ ಉಪಕಾರನೆಂಬ ಶಬ್ದಕ್ಕರ್ಥ. ತನ್ನ ನಿಜದ ಸುಖದ ಸವಿಯ ತಾನು ತಾನಾಗಿ ರುಚಿಸಿದನೆಂಬುದೀಗ ಮೆಲ್ಲದ ಸವಿಯಿಂದ ಸುಖಿಯಾದೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.



೨೭೦. ನಾನು ಸಜೀವವೊ ನೀನು ಸಜೀವವೊ? ನಿನಗೆ ಎನಗೆಯೂ ಸಂಬಂಧವಯ್ಯಾ! ನಿನ್ನನೆಂತು ಪ್ರಾಣಲಿಂಗವೆಂದು ಪೂಜಿಸುವೆನಯ್ಯ? ಎನ್ನ ಪ್ರಸಾದವು ನಿನಗೆ. ನಿನ್ನ ಪ್ರಸಾದವು ಎನಗೆ. ಎನಗೆಯೂ ನಿನಗೆಯೂ ಏಕ ಪ್ರಸಾದ ಕಾಣಾ ಗುಹೇಶ್ವರಾ.

ಟೀಕು:—ಲಿಂಗದ ಪ್ರಾಣಕಳೆ ಚೈತನ್ಯಕಳೆ ಜ್ಞಾನಕಳೆಯೆಲ್ಲವನು ಶರಣ ತಾನೆ ಗ್ರಹಿಸಿಕೊಂಡ ಕಾರಣ ಆ ಶರಣ ತಾನೇ ಶರಣ ಮುಖಲಿಂಗವಾಗಿ ಸುಚೈತನ್ಯನಾಗಿದ್ದನು. ಅಲ್ಲಿ ಲಿಂಗವೆಂಬ ಭಾವವಳಿದು ನಿರ್ಜಿವಿಯಾಯಿತ್ತೆಂಬುದೀಗ ನಾನು ಸಜೀವವೊ ನೀನು ಸಜೀವವೊ ಎಂಬ ಶಬ್ದಕ್ಕರ್ಥ. ಅದುಕಾರಣ ಅಂತಪ್ಪ ಶರಣನು ಭಿನ್ನ ಬುದ್ಧಿಯಿಂದ ಲಿಂಗವೇ ಪ್ರಾಣವೆಂದು ಪೂಜಿಸಲಾಗದೆಂಬುದೀಗ ನಿನ್ನನೆಂತು ಪ್ರಾಣಲಿಂಗವೆಂದು ಪೂಜಿಸುವೆನೆಂಬ ಶಬ್ದಕ್ಕರ್ಥ. ಆ ಶರಣನ ಸುಖಪ್ರಸನ್ನಪರಿಣಾಮವೇ ಲಿಂಗದ ಪರಿಣಾಮ ಆ ಲಿಂಗದ ಪರಿಣಾಮವೇ ತನ್ನ ಪರಿಣಾಮವಾಗಿ ಇಂತು ಉಭಯ ಪರಿಣಾಮವೆನಿಸದೆ ಒಂದೇ ಪರಿಣಾಮಸ್ವರೂಪನಾಗಿದ್ದನೆಂಬುದೀಗ ಎನ್ನ ಪ್ರಸಾದ ನಿನಗೆ ನಿನ್ನ ಪ್ರಸಾದ ಎನಗೆ, ಎನಗೆಯೂ ನಿನಗೆಯೂ ಏಕ ಪ್ರಸಾದ ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೭೧. ತಲೆಯ ಮೇಲೆ ತಲೆ ಇದ್ದಿತ್ತಲ್ಲಾ! ತಲೆ ತಲೆಯು ತಲೆ ನುಂಗಿತ್ತಲ್ಲಾ! ಸತ್ತು ಹಾಲ ಸವಿಯಬಲ್ಲರೆ ರಥದ ಕೀಲ ಬಲ್ಲರೆ ಯೋಗವು. ಶಿಶು ಕಂಡ ಕನಸಿನಂತುಳ್ಳ ತೃಪ್ತಿ ನಿಮ್ಮಲ್ಲಿಯುಂಟೆ ಹೇಳಾ ಗುಹೇಶ್ವರಾ!

ಟೀಕು:—ತಲೆಯೆಂದರೆ ಜ್ಞಾನ, ಆ ಜ್ಞಾನವನರಿವ ವೃತ್ತಿ ಜ್ಞಾನದ ಮೇಲೆ ಮಹಾಜ್ಞಾನವಿದ್ದಿತ್ತೆಂಬುದೀಗ ತಲೆಯ ಮೇಲೆ ತಲೆ ಇದ್ದಿತ್ತಲ್ಲಾ ಎಂಬ ಶಬ್ದಕ್ಕರ್ಥ. ಆ ಮಹಾಜ್ಞಾನವ ತಾನೆಂದು ನೆರೆಯರಿಯಲು ಜ್ಞಾನ ವೃತ್ತಿ ಜ್ಞಾನಂಗಳೆಂಬೆರಡನು ಆ ಮಹಾಜ್ಞಾನವಗ್ರಹಿಸಿತ್ತೆಂಬುದೀಗ ತಲೆ ತಲೆಯು ತಲೆ ನುಂಗಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತು ತಾನಳಿದು ತಾನುಳಿದು ಪರಮಾಮೃತವನಾರೋಗಿಸಿ ಸುಖಿಯಾಗಬೇಕೆಂಬುದೀಗ ಸತ್ತು ಹಾಲು ಸವಿಯಬಲ್ಲರೆ ಎಂಬ ಶಬ್ದಕ್ಕರ್ಥ. ರಥವೆಂದರೆ ದೇಹ ಆ ದೇಹ ನಿರ್ವಯಲಹ ಸಂಚವನರಿಯಲ್ಲರೆ ಅದೇ ಮರಮಯೋಗವೆಂಬುದೀಗ ರಥದ ಕೀಲ ಬಲ್ಲರೆ ಯೋಗವೆಂಬ ಶಬ್ದಕ್ಕರ್ಥ. ಇಂತು ತಾನು

ತಾನಾದ ಅರಿವಿನ ತೃಪ್ತಿ ಶಿಶು ಕಂಡ ಕನಸಿನ ಹಾಗೆ ಅನಿರ್ವಾಚ್ಯವಾಗಿಹುದೆಂಬುದೀಗ ಶಿಶು ಕಂಡ ಕನಸಿನಲುಳ್ಳ ತೃಪ್ತಿ ನಿಮ್ಮಲ್ಲಿಯುಂಟೇ ಹೇಳಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೭೨. ಅರಿವಿನೊಳಗೊಂದು ಮರವೆ ಅದೆ ಮರವೆಯೊಳಗೊಂದು ಅರಿವದೆ. ಅರಿವು ಮರವೆ ಎಂಬೆರಡು ಅಳಿದರೆ ನಿರ್ವಯಲವು ಅದೆ. ತಾನೆಂಬಲ್ಲಿ ನಿಃಷ್ಪತ್ತಿಯದೆ. ಇದೇನು ಹೇಳಾ ಗುಹೇಶ್ವರಾ!

ಟೀಕುಃ—ಅರಿವು ಮನದಲ್ಲಿ ಉಳ್ಳನ್ನಕ್ಕರ ಮರಹು ಬೆನ್ನ ಬಿಡದು. ಅರಿವು ಮರವೆಗಳೆರಡು ಅಳಿದಲ್ಲಿ ತನ್ನ ನಿಲವು ತನಗೆ ಕಾಣಬಹುದು. ಅಹಂ ಪರಬ್ರಹ್ಮವೆಂಬಲ್ಲಿ ತಾನು ನಿಃಷ್ಪತ್ತಿಯಾಗಬಲ್ಲರೆ ಅದೇ ಪರಮರಾಜಯೋಗವೆಂಬುದೀ ವಚನದ ತಾತ್ಪರ್ಯಾರ್ಥ.

೨೭೩. ಜೂಜಿನ ವೇಧೆಯುಂಟು. ಜಾಗರದ ಬಲವಿಲ್ಲ. ಆಗಳೂಗೆಲಲುಂಟೆ ಪ್ರಾಣ ಪಥನಕವ ರತುನವ ಸರ ಹರಿದು ಸೂಸಿ ಬಿದ್ದರೆ ಮಾಣಿಕವ ಬೆಲೆಯಿಟ್ಟು ಬಿಲಿತವರಿಲ್ಲ. ಸರ್ಪಿಣಿ ಸರ್ಪನ ನುಂಗಿ ದೀಪವನೆ ನುಂಗಿತ್ತು ಇದು ಯೋಗದ ದೃಷ್ಟಾಂತ ಗುಹೇಶ್ವರಾ.

ಟೀಕುಃ—ಅನವರತ ಅನುಭವ ಮುಖದಿಂದ ತತ್ವವನರಿಯುತ್ತಿಪ್ಪ ವೇಧೆಯುಂಟಾದಡೇನು ತನ್ನ ತಾನೆಚ್ಚರವ ಶಕ್ತಿಯಿಲ್ಲದನ್ನಕ್ಕರ ಎಂಬುದೀಗ ಜೂಜಿನ ವೇಧೆಯುಂಟು ಜಾಗರದ ಬಲವಿಲ್ಲವೆಂಬ ಶಬ್ದಕ್ಕರ್ಥ. ಇದು ಕಾರಣ ಸಾವನ್ನಕ್ಕರ ಸರವ ಮಾಡಲಿಲ್ಲವೆಂಬುದೀಗ ಆಗಳೂಗೆಲಲುಂಟೆ ಪ್ರಾಣ ಪಥನಕವವೆಂಬ ಶಬ್ದಕ್ಕರ್ಥ. ತನ್ನ ಸ್ವರೂಪ ಜ್ಞಾನರತ್ನ ಭಿನ್ನವಾಗಿ ತನ್ನಿಂದನ್ಯವಾದರೆ ತಾನೆ ಆರಿಸಿ ನೋಡಿಕೊಂಡು ಧರಿಸಿ ಸುಖಿಯಹುದಲ್ಲದೆ ಆದನ್ನು ಇದಿರಿಂಗೆ ತೋರಿ ಮಾರುದು ಕ್ರಮವಲ್ಲವೆಂಬುದೀಗ ರತುನದ ಸರಹರಿದು ಸೂಸಿ ಬಿದ್ದರೆ ಮಾಣಿಕವ ಬೆಲೆಯಿಟ್ಟು ಬಿಲಿತವರಿಲ್ಲವೆಂಬ ಶಬ್ದಕ್ಕರ್ಥ. ಸರ್ಪಿಣಿಯೆಂದರೆ ಆಧಾರ ಶಕ್ತಿ ಸರ್ಪನೆಂದರೆ ಕುಂಡಲಿಯ ಸರ್ಪ. ಆ ಆಧಾರಶಕ್ತಿಯೊಳಗೆ ಕುಂಡಲಿಯ ಸರ್ಪನಡಗಿ ಸಗುಣ ಯೋಗವನು ಮೀರಿ ಲೋಕಂಗಳೆಲ್ಲವನು ಆ ಪ್ರಭೆ ನುಂಗಿತ್ತೆಂಬುದೀಗ ಸರ್ಪಿಣಿ ಸರ್ಪನ ನುಂಗಿ ದೀಪವ ನುಂಗಿತ್ತೆಂಬ ಶಬ್ದಕ್ಕರ್ಥ. ಇದೇ ಸಗುಣ ನಿರ್ಗುಣವೆಂಬುಭಯವು ಏಕರಸವಾದ ಪರಮ ರಾಜಯೋಗವೆಂಬುದೀಗ ಇದು ಯೋಗದ ದೃಷ್ಟಾಂತ ಗುಹೇಶ್ವರವೆಂಬ ಶಬ್ದಕ'ರ್ಥ.



೨೭೪. ಭೂತಳದ ಮತಿವಂತರು ಆತ್ಮನ ಸ್ಥಲವಿಡಲು ಮಾತು ಮಾಣಿಕವ ನುಂಗಿ ಜಾತಿ ಧರ್ಮವ ನುಡುಗಿ ವ್ರತದ ಭ್ರಮೆಗಳು ಸುಟ್ಟು ಚಿತ್ತದ ಭಸ್ಮವ ಧರಿಸಿ ಅಣಿಮಾಡಿ ಗುಣಂಗಳ ಗತಿಯ ಪಥವ ಮೀರಿ ಭ್ರಾಂತ್ಯಳಿದು ಜ್ಯೋತಿ ಬೆಳಗುತಿದೆ ಗುಹೇಶ್ವರಾ.

ಟೀಕುಃ—ಪರಮಾತ್ಮಸ್ವರೂಪ ತಾನೆಂದರಿಯದೆ ಮತಿಯ ಬಲುಮೆ ವಿಡಿದು ಆತ್ಮನ ನಿಲವನರಿದಿಹೆನೆಂಬುದೆಲ್ಲವು ಮಾತಿನ ಮಥನವಲ್ಲದೆ ನಿಜವಲ್ಲ. ಅದೇನು ಕಾರಣವೆಂದರೆ ಆ ಮಾತು ಪರಮಾತ್ಮ ತತ್ವವೆಂಬ ಜ್ಞಾನರತ್ನವ ನುಂಗಿ ಉಗಳದೆ ಯಿಪ್ಪುದಾಗಿ ಇದೀಗ ಭೂತಳದ ಮತಿವಂತರು ಆತ್ಮನಸ್ಥಲ ವಿಡಿದು ಮಾತು ಮಾಣಿಕವ ನುಂಗಿತ್ತೆಂಬ ಶಬ್ದಕ್ಕರ್ಥ. ಇದರ ಸಕೀಲ ಸಂಬಂಧವನರಿದು ಜಾತಿವರ್ಣ ಆಶ್ರಮ ನಾಮ ಗೊತ್ರಂಗಳ ತ್ಯಜಿಸಿ ವ್ರತ ನೇಮ ಉಪವಾಸಂಗಳ ತೊರೆದು ಇತ್ಯಾದಿ ಭ್ರಮೆಯ ಜ್ಞಾನಾಗ್ನಿಯಲ್ಲಿ ದಹಿಸಿದನೆಂಬುದೀಗ ಜಾತಿ ಧರ್ಮವನುಡುಗಿ ವ್ರತದ ಭ್ರಮೆಗಳ ಸುಟ್ಟು ಅವಶೇಷಿತವಾಯಿತ್ತೆಂಬುದೀಗ ಶಬ್ದಕ್ಕರ್ಥ. ಇಂತು ಅವಶೇಷಿತವಾದ ಚಿದ್ವಿಭೂತಿಯ ಧರಿಸಲು ಅಣಿಮಾಡಿ ಗುಣಂಗಳ ಗತಿಯ ಪದವನು ಮೀರಿ ಸಕಲ ಭ್ರಾಂತ್ಯಳಿದು ಪರಂಜ್ಯೋತಿಯಾಗಿ ಆ ಶರಣ ತೊಳಗಿ ಬೆಳಗುತ್ತಿದ್ದನೆಂಬುದೀಗ ಅಣಿಮಾಡಿ ಗುಣಂಗಳ ಗತಿಯ ಪದವನು ಮೀರಿ ಭ್ರಾಂತ್ಯಳಿದು ಜ್ಯೋತಿ ಬೆಳಗುತ್ತಿದೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೭೫. ನೋಡುವದು ನೋಡಲರಿಯದೆ ಕೆಟ್ಟಿತ್ತು ಲೋಕವೆಲ್ಲಾ! ನೋಡುವದು ನೋಡ ಬಲ್ಲರೆ ಕೂಡಲಿಲ್ಲ ಅಗಲಲಿಲ್ಲ. ನೋಟದ ಕೂಟದ ಅಗಲದ ಸುಖವನು ಗುಹೇಶ್ವರಾ ನಿಮ್ಮ ಶರಣ ಬಲ್ಲ.

ಟೀಕುಃ— ಪರಬ್ರಹ್ಮವನರಿದಿಹೆನೆಂದು ನೋಡುತ್ತಿಪ್ಪುದೀಗ ಜ್ಞಾನ. ಆ ನೋಡುವ ಸುಜ್ಞಾನವೆ ತಾನೆಂದರಿದು ನೋಡಲರಿಯದೆ ಜ್ಞಾನಿಗಳೆಲ್ಲರು ಭಿನ್ನ ವಿವೇಕಿಗಳಾಗಿ ಕೆಟ್ಟರೆಂಬುದೀಗ ನೋಡುವದು ನೋಡಲರಿಯದೆ ಕೆಟ್ಟಿತ್ತು ಲೋಕವೆಲ್ಲ ಎಂಬ ಶಬ್ದಕ್ಕರ್ಥ. ಆ ಜ್ಞಾನವೆ ತಿಳಿದು ನೋಡಿ ಜ್ಞಾತೃ ಸ್ವರೂಪನಾಗಬಲ್ಲರೆ ಬಳಿಕ ಸಮರಸ ಭಾವದಿಂದ ತಾನೆಯಾಗಿಹನಲ್ಲದೆ ಅಲ್ಲಿ ಕೂಡಿಹೆನಗಲಿಹೆನೆನಲಿಲ್ಲವೆಂಬುದೀಗ ನೋಡುವದು ನೋಡ ಬಲ್ಲರೆ ಕೂಡಲಿಲ್ಲ ಅಗಲಲಿಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ

ಜ್ಞಾನದ ಶುದ್ಧ ಜ್ಞಾತೃ ತತ್ವದ ಸಮರಸ ಭೇದವನು ಮಹಾಜ್ಞಾನಿ
ಬಲ್ಲನೆಂಬುದೀಗ ನೋಟದ ಕೂಟದ ಅಗಲದ ಸುಖವನು ಗುಹೇ
ಶ್ವರಾ ನಿಮ್ಮ ಶರಣ ಬಲ್ಲನೆಂಬ ಶಬ್ದಕ್ಕರ್ಥ.

೨೭೬. ಭುವನ ಹದಿನಾಲ್ಕರ ಭವನದ ಕೀಲನೆ ಕಳೆದು ಉರವ
ಣಿಸುವ ಪವನಂಗಳ ತರಹರಿಸಿದಡದು ಯೋಗ. ಚತುರಸದೊಳಗಣ
ನಿಲವ ಕಾಣಬೇಕು ವಜ್ರ ನಿಲದ ಹೊದಿಕೆಯಲ್ಲಿದ್ದ ಭುವನಂಗಳ ಹೊದ್ದಿ
ಮಾಣಿಕವ ನುಂಗಿ ಉಗುಳದು ಗುಹೇಶ್ವರಾ.

ಟೀಕು:-- ಚತುರ್ದಶಲೋಕಂಗಳೆಲ್ಲವೂ ಒಂದು ಪಿಂಡದಲಡಗಿಪ್ಪ
ಭೇದವನರಿದು ಸರ್ವಂ ಖಲ್ಪಿದಂ ಬ್ರಹ್ಮ ಎಂಬ ವಿಕಾರದಿಂ ಆ ಭುವನಂ
ಗಳನು ನಿವೃತ್ತಿ ಮಾಡಿ ದಶವಾಯುಗಳ ಸಂಚನ ನಷ್ಟವ ಮಾಡಬ
ಲ್ಲಡೆ ಅದೆ ಪರಮ ಯೋಗವೆಂಬುದೀಗ ಭುವನ ಹದಿನಾಲ್ಕರ ಭವನದ
ಕೀಲನೆ ಕಳದು ಉರವಣಿಸುವ ಪವನಂಗಳ ತರಹರಿಷಬಲ್ಲರೆ ಅದು
ಯೋಗವೆಂಬ ಶಬ್ದಕ್ಕರ್ಥ. ಆ ದಶವಾಯುಗಳ ಸಂಚವನು ಕೆಡಿಸಿ ಅಂ
ತಃಕರಣ ಚತುಷ್ಟಯಂಗಳ ಮಧ್ಯದಲ್ಲಿಯೇ ಏಕರಸವಾಗಿಪ್ಪ ಪರಮ
ಚೈತನ್ಯಾತ್ಮನ ಸ್ವರೂಪವನರಿಯಬೇಕೆಂಬುದೀಗ ಚತುರಸದೊಳಗಣ ನಿಲವ
ಕಾಣಬೇಕೆಂಬ ಶಬ್ದಕ್ಕರ್ಥ. ವಜ್ರವೆಂದರೆ ಅಭೇದ್ಯಕ್ಕೆ ಹೆಸರು. ನಿಲವೆಂ
ದರೆ ಅಜ್ಞಾನಕ್ಕೆ ಹೆಸರು. ಅಂತು ನಿಲವೆಂಬ ಅಜ್ಞಾನವನು ಆ ಅಜ್ಞಾನ
ದೊಳಗಿಪ್ಪ ಭುವನಂಗಳನು ಆ ವಜ್ರವೆನಿಸುವ ಅಭೇದ್ಯ ಬುದ್ಧಿಯವಗ್ರ
ಹಿಸಿ ಮಹಾ ಜ್ಞಾನರತ್ನವ ನುಂಗಿ ವಾಕ್ಯಕ್ಕೆ ತಾರದೆ ಅನಿರ್ವಾಚ್ಯವಾಗಿದ್ದಿ
ತೆಂಬುದೀಗ ವಜ್ರನಿಲದ ಹೊದಕೆಯಲ್ಲಿದ್ದ ಭುವನಂಗಳ ಹೊದ್ದಿ ಮಾಣಿ
ಕವ ನುಂಗಿ ಉಗುಳದು ಎಂಬ ಶಬ್ದಕ್ಕರ್ಥ.

೨೭೭. ತಾನಿದ್ದು ತನ್ನನರಿಯದೆ ಇನ್ನೆಂದಿಂಗೆ ಶರಣನಪ್ಪನಯ್ಯಾ!
ಪವನ ಸ್ಥಾನವನರಿದ ಬಳಿಕ ಬಂದು ಬಂದು ಸುಳಿಯಲಿಲ್ಲ. ಇದರಂತ
ವನಾರು ಬಲ್ಲರು ಗುಹೇಶ್ವರಾ ನಿಮ್ಮ ಶರಣರಲ್ಲದೆ?

ಟೀಕು:--ಗುರುಕಟಾಕ್ಷದಿಂದ ಜ್ಞಾನೋದಯವಾದಲ್ಲಿಯೇ ತನ್ನ
ತಾ ತಿಳಿದು ನೋಡಿ ಕಂಡು ತಾನೆ ಚೈತನ್ಯಾತ್ಮನೆಂದರಿದು ಸುಖಿಯಾಗಿರ
ಬೇಕಲ್ಲದೆ ಇದನರಿಯದೆ ವಾಗದ್ವೈತದಲ್ಲಿ ಬಳಸಿ ಮಿಥ್ಯಾ ಪ್ರಪಂಚಗೊ
ಳಗಾಗಿ ಭವ ಬಾಧೆಗೊಳಗಾಗಲಾಗದೆಂಬುದೀ ವಚನದ ತಾತ್ಪರ್ಯಾರ್ಥ.



೨೭೮. ಆಕಾಶವ ನುಂಗಿದ ಸರ್ಪನ ಫಣಿಯ ಮಣಿಯೊಳಗಣ ಕಪ್ಪೆ
ವಾಯುವನಲನ ಸಂಚವ ನುಂಗಿತ್ತದೇನೊ? ರೂಹಿಲ್ಲದ ತಲೆಗೆ ಮೊಲೆ
ಮೂರಾಯಿತ್ತ ಕಂಡೆ. ಉಂಡಾಡುವ ಶಿಶುವಿನ ಕಯ್ಯಲ್ಲಿ ಮಾಣಿಕದಾರ
ತಿಯ ಕಂಡೆ. ಕಾಯವಿಲ್ಲದ ಹೆಣನ ವಾಯುವಿಲ್ಲದೆ ಜವನೆಳದೊಯ್ದ
ನೆಂಬ ವಾಯಕ್ಕೆ ವಾಯುವನೇನೆಂಬೆ ಗುಹೇಶ್ವರಾ?

ಟೀಕು:-- ಶಿವಯೋಗ ಸಾಧನ ಸಂಪತ್ತಿಯಿಂದ ಕುಂಡಲಿಯ ಬಲಿ
ದೆತ್ತಲು ಆ ಕುಂಡಲಿಯ ಸರ್ಪನು ಸುಷುಮ್ನಾ ನಾಳವನೆಯ್ದಿ ಬ್ರಹ್ಮರಂಧ್ರ
ದಲ್ಲಿ ವ್ಯೋಮ ಚಕ್ರವನವಗ್ರಹಿಸಲು ಅದೀಗ ಆಕಾಶವ ನುಂಗಿದ ಸರ್ಪ
ನೆಂಬ ಶಬ್ದಕ್ಕರ್ಥ. ಆ ಕುಂಡಲಿಯ ಸರ್ಪನ ಶಿರಸ್ಸಿನಲ್ಲಿಪ್ಪ ಸುಜ್ಞಾನವೆಂಬ
ರತ್ನದೊಳಗೆ ಪ್ರವೇಶಿತವಾಗಿಪ್ಪ ಪರಮ ಶಾಂತಿಯೆಂಬ ಬಿಂದು ಅಗ್ನಿ ವಾ
ಯುಗಳ ಸಂಚದಿಂದಾದ ತನುಗುಣವನವಗ್ರಹಿಸಿತ್ತೆಂಬುದೀಗ ಆಕಾಶವ
ನುಂಗಿದ ಸರ್ಪ್ಪನ ಫಣಿಯ ಮಣಿಯ ಮೇಲಣ ಕಪ್ಪೆ ವಾಯುವನಲನ
ಸಂಚವ ನುಂಗಿತ್ತಲ್ಲಾಯೆಂಬ ಶಬ್ದಕ್ಕರ್ಥ. ಆ ಪರಮ ಶಾಂತಿಯ ನಿಲವಿನ
ಲ್ಲಿಹ ನಿರವಯ ಜ್ಞಾನ ಆ ಜ್ಞಾನ ತನುತ್ರಯಂಗಳೆಂಬ ಸ್ಥಾನಂಗಳೊಳಗೆ
ಪ್ರವೇಶಿಸಿ ಪರಿಪೂರ್ಣಾಮೃತವ ತುಂಬಿ ಕೊಂಡು ಇದ್ದಿತ್ತೆಂಬುದೀಗ ರೂ
ವಿಲ್ಲದ ತಲೆಗೆ ಮೊಲೆ ಮೂರಾಯಿತ್ತೆಂಬ ಶಬ್ದಕ್ಕರ್ಥ. ಆ ಅಮೃತದ
ಸುಖವ ಸುಖಿಸುವ ಶೇಷನೆಂಬ ಶರಣನಲ್ಲಿ ಆ ಮಹಾ ಜ್ಞಾನ ಕರತಳಾ
ಮಳಕವಾಗಿದ್ದಿತ್ತೆಂಬುದೀಗ ಉಂಡಾಡುವ ಶಿಶುವಿನ ಕಯ್ಯಲ್ಲಿ ಮಾಣಿಕ್ಯ
ದಾರತಿಯ ಕಂಡೆನೆಂಬ ಶಬ್ದಕ್ಕರ್ಥ. ಇಂತು ಅಕಾಯವಾಗಿಪ್ಪ ಶರಣನು
ಮೃತನಾದರೆ ಜವನೊಯ್ದನೆಂಬುದೆಲ್ಲವು ಮಿಥ್ಯೆಯೆಂಬುದೀಗ ಕಾಯವಿ
ಲ್ಲದ ಹೆಣನನು ವಾಯುವಿಲ್ಲದೆ ಜವನೊಯ್ದನೆಂದರೆ ವಾಯಕ್ಕೆ ವಾಯುವ
ನೇನೆಂಬೆ ಗುಹೇಶ್ವರಾಯೆಂಬ ಶಬ್ದಕ್ಕರ್ಥ.

೨೭೯. ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ! ಶಿವನೇ
ಚೈತನ್ಯಾತ್ಮನು. ಶಕ್ತಿಯೇ ಚಿತ್ತು. ಇಂತು ಚೈತನ್ಯಾತ್ಮನೆ ಚಿತ್ಸ್ವರೂಪ
ನೆಂದರಿಯ ಬಲ್ಲರೆ ಆತನೆ ಶರಣ ಗುಹೇಶ್ವರಾ.

ಟೀಕು:—ಶಿವಶಕ್ತಿಗಳೆಂಬ ಪ್ರಕೃತಿ ಪುರುಷ ಭಾವಂಗಳ ನಿವೃತ್ತಿ
ಮಾಡಿ ಶಿವನೆಂಬುದೆ ಚೈತನ್ಯಾತ್ಮನೆಂದರಿದು ಆ ಚೈತನ್ಯಾತ್ಮನಲ್ಲಿ ಚಿಚ್ಛಕ್ತಿ
ಪ್ರಕಾಶವ ಮಾಡಲು ಆತನೇ ಪ್ರಾಣಲಿಂಗ ಸಂಬಂಧಿಯೆಂಬುದೀ ವಚ
ನದ ತಾತ್ಪರ್ಯಾರ್ಥ.

೨೮೦. ಆಕಾಶದ ಬೀಜ ಅಗ್ನಿಯಲೊದಗಿ ಶಾಖೆಯಿಲ್ಲದೆ ನೊಳೆತು ಪಲ್ಲವಿಸಿತ್ತು. ಅರಿದೆನೆಂಬವನನಾರಡಿಗೊಂಡಿತ್ತು. ಈ ನಿರ್ಣಯವನರಿಯದವ ಮಾನವ. ಗುಹೇಶ್ವರನೆಂಬುದು ಬಯಲ ವಿಕಾರ.

ಟೀಕು:— ಆತ್ಮತತ್ವದ ನಿರ್ಬೀಜಸ್ಥಲವು ಜ್ಞಾನಾಗ್ನಿಯಲ್ಲಿ ಸಂಪರ್ಕ್ಯವಾಗಲು ಅನಾತ್ಮತತ್ವ ವಾಸನೆಯಳಿದು ಮಹಾನುಭಾವ ವಿವೇಕವಂಕುರಿಸಿತ್ತೆಂಬುದೀಗ ಆಕಾಶದ ಬೀಜ ಅಗ್ನಿಯಲೊದಗಿ ಶಾಖೆಯಿಲ್ಲದೆ ನೊಳೆತು ಪಲ್ಲವಿಸಿತ್ತೆಂಬ ಶಬ್ದಕ್ಕರ್ಥ. ಆ ಅನುಭವವನರಿದಿಹೆನೆಂಬ ಜ್ಞಾನಾಗ್ನಿಯ ಕಣ್ಣು ಮುಂದೆ ಇದಿರಿಟ್ಟು ಲಕ್ಷವಾಗಿ ತೋರಿ ತನ್ನ ತಪ್ಪಿಸಿಕೊಂಡು ಕಾಡುತ್ತಿದ್ದಿತೆಂಬುದೀಗ ಅರಿದಿಹೆನೆಂಬವನಾರಡಿಗೊಂಡಿತ್ತೆಂಬ ಶಬ್ದಕ್ಕರ್ಥ. ಈ ನಿರ್ಣಯವನರಿಯದಾತನೆ ಅಜ್ಞಾನಿ. ತಿಳಿಯ ಬಲ್ಲಾತನೆ ನಿರಾಮಯನೆಂಬುದೀಗ ಈ ನಿರ್ಣಯವನರಿಯದ ಮಾನವ ಗುಹೇಶ್ವರನೆಂಬುದು ಬಯಲ ವಿಕಾರವೆಂಬ ಶಬ್ದಕ್ಕರ್ಥ,

೨೮೧. ಹರಿದರಸಿಹೆನೆಂದರೆ ಮನದ ವಿಕಾರ. ಸುಳಿದರಸಿಹೆನೆಂದರೆ ಪವನ ವಿಕಾರ. ನಿಂದರಸಿಹೆನೆಂದರೆ ಕಾಯ ವಿಕಾರ. ಒಳಗರಸಿಹೆನೆಂದರೆ ಜ್ಞಾನ ವಿಕಾರ. ಅರಸನಿಲ್ಲದೆ ಬೆರಿಸ ಬಲ್ಲರೆ ಆತನೆ ಶರಣ ಗುಹೇಶ್ವರಾ.

ಟೀಕು:— ಮನದ ವ್ಯಾಕುಳದಲ್ಲಿ ಹರಿಯುತ್ತಿರಲು ನಿಜವನರಿಯಬಾರದು. ಪವನ ಗತಿಯಿಂದ ಜಗದಲ್ಲಿ ಸುಳಿದಾಡುವರು ನಿಜವನರಿದಿಹನೆಂದರೆ ಅದು ಕಾಯನಿಗ್ರಹವಾದ ಕಾರಣ ವಸ್ತು ಸುಸಾಧ್ಯವಾಗದು. ಎಲ್ಲಿಯೂ ಅರಸದೆ ತಾನೆ ಶಿವತತ್ವವೆಂದರಿಯಲು ಆ ಪರತತ್ವ ಸಾಧ್ಯವಾಯಿತ್ತೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೨೮೨. ಹತ್ತು ಬಣ್ಣದ ಗಿಡುವಿಂಗೆ ಹತ್ತೆಲೆ ಹತ್ತು ಹೂ ಹತ್ತು ಕಾಯಾಗಿತ್ತು. ಹತ್ತು ಹತ್ತು ಘನದಲ್ಲಿ ಅಳವಟ್ಟ ಹತ್ತು ಹತ್ತು ಆಚಾರಕ್ರಮದಲ್ಲಿ ವಿಚಾರವ ಕಾಣಬಲ್ಲರೆ ಆ ಕಾಯ ಲಿಂಗಮಯವಹುದು ಕಾಣಾ ಗುಹೇಶ್ವರಾ!

ಟೀಕು:— ದಶವಾಯುಗಳಿಂದ ಬದ್ಧವಾದ ದೇಹವೆಂಬುದೀಗ ಹತ್ತು ಬಣ್ಣದ ಗಿಡವೆಂಬ ಶಬ್ದಕ್ಕರ್ಥ. ಆ ದೇಹವೆಂಬ ವೃಕ್ಷದಲ್ಲಿ ದಶನಾಳಂಗಳೆ ಶಾಖೆಗಳಾದ ಕಾರಣ ಆ ದಶನಾಳಂಗಳೆಂಬ ಶಾಖೆಗಳೊಳಗೆ ಪ್ರಾಣವಾಯು ದಶಮುಖ ಪ್ರಪಂಚನನೆಯ್ದಿಪ್ಪುದಾಗಿ ಆ ಪ್ರಪಂಚುಗಳೆ



ಪರ್ಣಂಗಳಾದವೆಂಬುದೀಗ ಹತ್ತೆಲೆ ಎಂಬ ಶಬ್ದಕ್ಕರ್ಥ. ಆ ಪ್ರಪಂಚುಗಳೊಳಗೆ ದಶೇಂದ್ರಿಯ ವಾಸನೆಯೆಂಬ ಪುಷ್ಪಂಗಳು ವಿಕಸಿತವಾಗಿಪ್ಪವೆಂಬುದೀಗ ಹತ್ತು ಹೂವೆಂಬ ಶಬ್ದಕ್ಕರ್ಥ. ಆ ಹತ್ತು ವಾಯುವಿನ ಸಂಚವ ಕೆಡಸಿ ಹತ್ತು ನಾಳಂಗಳ ಮೂಲ ಪ್ರಕೃತಿ ಗುಣದಶಕಗಳನು ಕೆಡಿಸಿ ಘನದಲ್ಲಿ ವೇದ್ಯವಾಗಲು ಆ ದಶೇಂದ್ರಿಯಂಗಳು ಆ ದಶೇಂದ್ರಿಯಂಗಳೊಳಗಿಪ್ಪ ದಶ ವಿಷಯಂಗಳು ಆಚಾರಲಿಂಗದಲ್ಲಿ ಸಮರಸವನೆಯ್ದಿದವೆಂಬುದೀಗ ಹತ್ತು ಆಚಾರಕ್ರಮದಲ್ಲಿ ವಿಚಾರವ ಕಾಣಬಲ್ಲರೆ ಕಾಯವೆ ಲಿಂಗಮಯವಹುದು ಕಾಣಾ ಗುಹೇಶ್ವರ ಎಂಬ ಶಬ್ದಕ್ಕರ್ಥ.

೨೮೩. ಪ್ರಾಣ ಲಿಂಗದಲ್ಲಿ ಸಮನಿಸದು, ಲಿಂಗ ಪ್ರಾಣದಲ್ಲಿ ಸಮನಿಸದು. ಪ್ರಾಣ ಲಿಂಗ ಲಿಂಗ ಪ್ರಾಣವೆಂಬುದು ಸಂಶಯವಲ್ಲದೆ ನಿಜವಲ್ಲ ಕೇಳಾ! ದಶಪ್ರಾಣವಳಿದು ಲಿಂಗವೇ ತಾನೆಂದರಿಯಬಲ್ಲರೆ ಅದೇ ಪ್ರಾಣಲಿಂಗ ಗುಹೇಶ್ವರಾ!

ಟೀಕು:— ಪ್ರಾಣಲಿಂಗವೇ ಪ್ರಾಣವೆಂದರೆ ಆ ಮಾತಿನೊಳಗೆ ಭಿನ್ನ ತೋರುತ್ತದೆ. ಈ ಉಭಯವನು ಅಳಿದು ದಶವಾಯುಗಳ ಸಂಚವ ನಿವೃತ್ತಿ ಮಾಡಿ ಸರ್ವಾಂಗಲಿಂಗವಾಗಿರಬಲ್ಲರೆ ಆತನೆ ಪರಮ ಚೈತನ್ಯಾತ್ಮನೆಂಬುದೀ ವಚನದ ತಾತ್ಪರ್ಯಾರ್ಥ.

೨೮೪. ತನು ಒಂದು ದ್ವೀಪ. ಮನ ಒಂದು ದ್ವೀಪ. ಆಪ್ಯಾಯನ ಒಂದು ದ್ವೀಪ. ವಚನ ಒಂದು ದ್ವೀಪ. ಇಂತೀ ನಾಲ್ಕು ದ್ವೀಪದೆಡೆಯ ಬೆಸಗೊಂಬರೆ ಗುಹೇಶ್ವರಾ ನಿಮ್ಮ ಸ್ಥಾನಂಗಳು.

ಟೀಕು:— ತನುವೆಂಬ ದ್ವೀಪದಲ್ಲಿ ಸತ್ಕ್ರಿಯಾಜ್ಞಾನವೆಡೆಗೊಂಡಿಪ್ಪುದು. ಮನವೆಂಬ ದ್ವೀಪದಲ್ಲಿ ಪ್ರಕಾಶಜ್ಞಾನವೆಡೆಗೊಂಡಿಪ್ಪುದು. ಆಪ್ಯಾಯನವೆಂಬ ದ್ವೀಪದಲ್ಲಿ ಪರಿಣಾಮ ಜ್ಞಾನವೆಡೆಗೊಂಡಿಪ್ಪುದು. ವಚನವೆಂಬ ದ್ವೀಪದಲ್ಲಿ ಶಬ್ದಜ್ಞಾನವೆಡೆಗೊಂಡಿಪ್ಪುದು. ಇಂತು ಚತುರ್ವಿಧ ಖಂಡಮಂಡಲದೊಳಗೆ ಒಂದೇ ಮಹಾಜ್ಞಾನ ಚತುರ್ವಿಧ ಮುಖವಾಗಿ ವೇಧಿಸಿಕೊಂಡಿಪ್ಪುದೆಂದರಿಯಲು ಅದೇ ಸರ್ವಾಂಗ ಲಿಂಗಸಂಬಂಧವೆಂಬುದೀ ವಚನದ ತಾತ್ಪರ್ಯಾರ್ಥ.

೨೮೫. ಆದಿಯಲ್ಲಿ ಶಿವದಾರವ ಕಂಡೆ. ಬೀದಿಯಲ್ಲಿ ಬಿದ್ದ ಸೆಜ್ಜೆಯ ಕಂಡೆ. ಪ್ರಾಣಲಿಂಗವ ಬಚ್ಚಿಟ್ಟುಕೊಂಡೆನು. ಕಾಯವಳಿದು ಜೀವ ನಿಮ್ಮಲ್ಲಿಗೆ ಬಂದರೆ ಎನ್ನಿಂದ ವ್ರತಗೇಡಿಗಳಿಲ್ಲ ಗುಹೇಶ್ವರಾ!

ಟೀಕು:— ಮೂಲ ಸ್ವಾನುಭಾವವೆಂಬ ಸೂತ್ರವೀಗ ಆದಿಯಲ್ಲಿ ಶಿವದಾರವೆಂಬ ಶಬ್ದ. ಬೀದಿಯಲ್ಲಿ ಬಿದ್ದ ಸೆಜ್ಜೆಯೆಂದರೆ ಲೌಕಿಕದ ಮಧ್ಯದಲ್ಲಿಪ್ಪ ಕಾಯ. ಆ ಅನುಭವಸೂತ್ರವೆಂಬ ಶಿವದಾರದಲ್ಲಿ ತನುವೆಂಬ ಸೆಜ್ಜೆಯಲ್ಲಿ ಸಂಬಂಧಿಸಿ ಪ್ರಾಣವೆಂಬ ಲಿಂಗವ ಧರಿಸಿಕೊಂಡಿರುತ್ತಿರಲು ಅದೀಗ ಆದಿಯಲ್ಲಿ ಶಿವದಾರವ ಕಂಡೆ. ಬೀದಿಯಲ್ಲಿ ಬಿದ್ದ ಸೆಜ್ಜೆಯ ಕಂಡೆ. ಪ್ರಾಣಲಿಂಗವ ಬಚ್ಚಿಟ್ಟುಕೊಂಡೆನೆಂಬ ಶಬ್ದಕ್ಕರ್ಥ. ಆ ತನುವೆಂಬ ಸೆಜ್ಜೆಯಲ್ಲಿ ಚೈತನ್ಯಾತ್ಮವೆಂಬ ಪ್ರಾಣಲಿಂಗವ ಬಿಜಯಂಗೈಸಿಕೊಂಡಿಪ್ಪ ಶರಣನು ಸರ್ವಾಂಗ ಲಿಂಗ ಸಂಬಂಧಿಯಾದ ಕಾರಣ ಆತನು ನಿಂದಲ್ಲಿಯೇ ನಿರ್ವಯಲನಾಗಿಪ್ಪನಲ್ಲದೆ ದೇಹವೆಂಬ ಕಂಥೆಯ ಕಳೆದು ಪ್ರಾಣಮುಕ್ತನ ಖಂಡಿತನಲ್ಲವೆಂಬುದೀಗ ಕಾಯವಳಿದು ಜೀವ ನಿಮ್ಮಲ್ಲಿಗೆ ಬಂದರೆ ಎನ್ನಿಂದ ವ್ರತಗೇಡಿಗಳಿಲ್ಲ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೮೬. ಇದ್ದುದ್ದು ಹೇಳಲಿಲ್ಲ. ಇದ್ದುದ ತೋರಲಿಲ್ಲ. ಹೊದ್ದಿದಾಶ್ರಮವ ನಾನೇನೆಂಬೆನು? ಶಿವನೇ ಭದ್ರಕಾಳಿಯ ಬಸುರೊಳಗಿದ್ದ ಬಾವಿಯ ಸರ್ಪನು ಸಿದ್ಧರಸದ ಘುಟಿಕೆಯ ನುಂಗಿ ಎದ್ದು ಆಡಿತ್ತು ನೋಡಾ. ಹದ್ದಿನ ಹೆಡೆಯಲ್ಲಿ ಮಾಣಿಕವಿದ್ದಿಹುದು. ಇಲ್ಲೆಂಬ ಎದ್ದು ಹೇಳುವ ಕನಸು ತಾನಲ್ಲ ಗುಹೇಶ್ವರಾ!

ಟೀಕು:— ಲಿಂಗದಲ್ಲಿ ಅವಿರಳ ಸಂಬಂಧಿಯಾದ ಶರಣನು ಆ ಲಿಂಗ ಸಂಗದ ಸುಖವ ತೋರಿ ದರ್ಶನವ ಮಾಡಿ ನುಡಿಯಲಿಲ್ಲವೆಂಬುದೀಗ ಇದ್ದುದ ಹೇಳಲಿಲ್ಲ ಇದ್ದುದ ತೋರಲಿಲ್ಲ ಎಂಬ ಶಬ್ದಕ್ಕರ್ಥ. ಇಂತು ತೋರಬಾರದ ಘನದ ಸಮರಸ ಭಾವವನು ಉಪಮಿಸಬಾರದೆಂಬುದೀಗ ಹೊದ್ದಿದ ಆಶ್ರಮವ ನಾನೇನೆಂಬೆ ಶಿವನೆ ಎಂಬ ಶಬ್ದಕ್ಕರ್ಥ. ಭದ್ರವೆಂದರೆ ಮಂಗಳ ಶಬ್ದಕ್ಕೆ ಹೆಸರು. ಕಾಳಿಯೆಂದರೆ ಸಂಹಾರ ರೂಪಿಣಿ ಎಂದರ್ಥ. ಇಂತು ಆ ಶರಣನ ಸಕಲ ಕರಣಂಗಳೆಲ್ಲವನು ತಾನೇ ಲಯವನೈದಿಸಿಪ್ಪ ಮಂತ್ರ ಶಕ್ತಿಯ ಆಧಾರಸ್ಥಲವೆಂಬ ಅಂತರದೊಳಗೆ ಪರಮಾಮೃತಕೂಪವಿಪ್ಪುದೆಂಬುದೀಗ ಭದ್ರಕಾಳಿಯ ಬಸಿರೊಳಗಿದ್ದ ಬಾವಿಯೆಂಬ ಶಬ್ದಕ್ಕರ್ಥ. ಆ ಅಮೃತಕೂಪದಲ್ಲಿ ನಿರಂತರವಿ



ರ್ಪುದು ಕುಂಡಲಿಯ ಸರ್ಪನೆಂಬುದೀಗ ಬಾವಿಯ ಸರ್ಪನೆಂಬ ಶಬ್ದಕ್ಕರ್ಥ. ಆ ಕುಂಡಲಿಯ ಸರ್ಪನು ಸಿದ್ಧರಸವೆಂಬ ಪರಮಾನಂದವೆಂಬ ಬಿಂದುವನವಗ್ರಹಿಸಿ ತತ್‌ಪರಮಾನಂದಲೀಲೆಯಲಿ ಓಲಾಡುತ್ತಿದ್ದಿತ್ತೆಂಬುದೀಗ ಸಿದ್ಧರಸದ ಘುಟಿಕೆಯ ನುಂಗಿ ಎದ್ದು ಆಡಿತ್ತು ನೋಡಾ ಎಂಬ ಶಬ್ದಕ್ಕರ್ಥ. ಹದ್ದೆಂದರೆ ಪರಮ ಹಂಸ. ಅದೆಂತೆಂದರೆ ಹದ್ದು ಅಂಬರದಲ್ಲಿ ಸ್ವಲೀಲೆಯಿಂದ ಚರಿಸಿ ಆಡುತ್ತಿಪ್ಪುದಾಗಿಯೂ ಆ ಪರಮ ಹಂಸನು ಆತ್ಮನೆಂಬ ಆಕಾಶದಲ್ಲಿ ಸ್ವಲೀಲಾಪರನಾಗಿಪ್ಪ ಕಾರಣದಿಂದ ಉಭಯನಾಮಕ್ಕೂ ಲಕ್ಷ್ಯ ಭಾವ ಒಂದೇ ಆದುದಾಗಿ ಏಕಾರ್ಥ. ಅಂತಪ್ಪ ಪರಮ ಹಂಸನ ಬ್ರಹ್ಮರಂಧ್ರದಲ್ಲಿ ಮಹಾಜ್ಞಾನರತ್ನವ ಕಂಡೆನೆಂದು ಇದಿರಿಟ್ಟುಕೊಂಡು ಸ್ವಪ್ನಭಾವದ ಹಾಗೆ ನುಡಿಯುವ ಮಾತಿಗೆ ಶರಣನ ನಿಲವು ಕಾಣಬಾರದೆಂಬುದೀಗ ಹದ್ದಿನ ಹೆಡಿಯ ಮೇಲೆ ಮಾಣಿಕವಿದ್ದಿಹುದಿಲ್ಲವೆಂದು ಎದ್ದು ಹೇಳುವ ಕನಸು ತಾನಲ್ಲ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೮೭. ಅದ್ವೈತನ ಕರಸ್ಥಲದೊಳಗೆ ಅನಂತನೆಂಬ ಗಿಣಿ ಮೂರ್ತಗೊಂಡು ಅತೀತಿ ಅನಾಗತ ವರ್ತಮಾನವೆಂಬ ಕೊರೆಯ ಕೂಳನುಂಡು ಓದಿತ್ತು ಅಗಣಿತ ಪುರಾಣ. ಅನಾಮಯ ಶಾಸ್ತ್ರವನು ಅನುಪಮ ವೇದವೆಂದು ನಿಃಸ್ಥಲವ ಸ್ಥಲವಿಡಲು ನಿರ್ಮಳಾತ್ಮಂಗೆ ಇಹವಿಲ್ಲ ಪರವಿಲ್ಲ. ಆದಿ ಮಧ್ಯ ಅಂತ್ಯ ನಿರಾಳ ಗುಹೇಶ್ವರನ ಅನುಭಾವಿಗೆ ಸರ್ವಾಂಗ ಲಿಂಗವು.

ಟೀಕು:— ಪ್ರಾಣಲಿಂಗ ಸಂಬಂಧದಲ್ಲಿ ಅವಿರಳವಾಗಿಪ್ಪ ಶರಣನ ಮನದ ಪರಸ್ಥಲದಲ್ಲಿ ಶಿವೋಹಂ ಶಿವೋಹಂ ಎನುತಿಪ್ಪ ಪರಮಹಂಸನು ಅಪ್ರಮಾಣವಾಗಿ ಮೂರ್ತಿಗೊಂಡು ಇರುತ್ತಿದ್ದಿತ್ತೆಂಬುದೀಗ ಅದ್ವೈತನ ಕರಸ್ಥಲದೊಳಗೆ ಅನಂತನೆಂಬ ಗಿಣಿ ಮೂರ್ತಿಗೊಂಡಿತ್ತು ಎಂಬ ಶಬ್ದಕ್ಕರ್ಥ. ಆ ಪರಮಹಂಸನು ಅತೀತ ಅನಾಗತ ವರ್ತಮಾನವೆಂಬ ತ್ರಿಕಾಲಜ್ಞಾನಂಗಳೆಲ್ಲವನು ತಾನೆ ಆಹಾರಗೊಂಡು ಸಕಲ ವೇದ ಶಾಸ್ತ್ರ ಪುರಾಣಂಗಳೆಲ್ಲವನು ತಾನೆ ಅವಗ್ರಹಿಸಿ ನಿಜತತ್ವ ವಿವೇಕದೊಳು ಪರಿಪೂರ್ಣ ಭಾವನೆಯಿದ್ದಿತೆಂಬುದೀಗ ಅತೀತ ಅನಾಗತ ವರ್ತಮಾನವೆಂಬ ಕೊರೆಯ ಕೂಳನುಂಡು ಓದಿತ್ತು ಅಗಣಿತ ಪುರಾಣ ಅನಾಮಯ ಶಾಸ್ತ್ರವನು ಅನುಪಮ ವೇದವೆಂದು ನಿಃಸ್ಥಲವ ಸ್ಥಲವಿಟ್ಟಿತ್ತು ಎಂಬ ಶಬ್ದಕ್ಕರ್ಥ. ಇಂತು

ನಿಜತತ್ವದೊಳಗೆ ಪರಿಪೂರ್ಣ ಭಾವವನೆಯ್ದಿ ನಿರ್ಮಲಾತ್ಮಕನೆನಿಸಿದ ಶರಣ ಆದಿ ಮಧ್ಯ ಅವಸಾನಂಗಳಿಲ್ಲದೆ ಇಹ ಪರವೆಂಬ ಉಭಯ ಲೋಕಂಗಳನು ಅಳಿದು ನಿತ್ಯ ನಿರಾಳ ನಿರವಯನಾಗಿಪ್ಪನೆಂಬುದೀಗ ನಿರ್ಮಲಾತ್ಮಂಗೆ ಇಹವಿಲ್ಲ ಪರವಿಲ್ಲ. ಆದಿ ಮಧ್ಯ ಅಂತ್ಯ ನಿರಾಳ ಗುಹೇಶ್ವರನು ಅನುಭಾವಿಗೆ ಸರ್ವಾಂಗ ಲಿಂಗವು ಎಂಬ ಶಬ್ದಕ್ಕರ್ಥ.

೨೮೮. ಅಂಗೈಯ್ಯೊಳಗಣ ಸಿಂಹಾಸನವಿದೇನೋ! ಅಂಗೈಯ್ಯ ಮೇಲೆ ಸಿಂಹಾಸನವೆಂದೇನೋ! ಧೂಪ ದೀಪ ನಿವಾಳಿಯಿದೇನೋ! ಶರಣಂಗೆ ಕಳಸದ ಮೇಲೆ ನೆಲೆಗಟ್ಟೆಂಬುದೇನೋ! ಗುಹೇಶ್ವರನೆಂಬ ನಿರಾಳ.

ಟೀಕುಃ—ಲಿಂಗ ಶರಣ ಶರಣ ಲಿಂಗವೆಂಬ ಭಿನ್ನ ಭಾವ ಹಿಂಗಿ ಆ ಶರಣನೇ ಲಿಂಗವಾಗಿ ಅವಶೇಷಿಸಿ ಉಳಿದ ಬಳಿಕ ಕರಸ್ಥಲದಲ್ಲಿ ಲಿಂಗವ ಹಿಡಿದು ಉಪಾಧಿಯಿಂದ ಅಷ್ಟವಿಧಾರ್ಚನೆ ಷೋಡಶೋಪಚಾರವ ಇದಿರಿಟ್ಟು ಮಾಡಲಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೨೮೯. ಕಂಗಳಲ್ಲಿ ನಟ್ಟ ಗಾಯುವನಾರಿಗೂ ತೋರಬಹುದೇ? ಮನಸೋಂಕಿದ ಸುಖವ ಮೊಟ್ಟೆಯ ಕಟ್ಟಬಹುದೇ? ಆತನಿಂದ ಸುಖವು ಆತಂಗೆ ಸಾಧ್ಯವಾಯಿತ್ತು. ಆತ ನಿಂದ ನಿಲವನೇನೆಂಬೆ ಗುಹೇಶ್ವರಾ?

ಟೀಕುಃ— ಮಹಾಲಿಂಗದ ಮಹಿಮೆ ಅಪ್ರಮಾಣತರವಾಗಿ ಬಂದು ಶರಣನ ಸುಜ್ಞಾನವೆಂಬ ದೃಷ್ಟಿಯೊಳಗೆ ಅಳವಟ್ಟ ಬಳಿಕ ಅದ ಕಂಡೆನೆನ್ನಬಾರದು. ಅದನಾರಿಗೂ ತೊರಬಾರದು. ಅದೇಕೆಂದರೆ ಆ ನಿಲವು ತಾನೇ ಮನೋ ಮೂರ್ತಿ ಲಿಂಗವಾದ ಕಾರಣ ಅನುಪಮವಾಯಿತ್ತೆಂಬುದೀಗ ಕಂಗಳಲ್ಲಿ ನಟ್ಟ ಛಾಯವನಾರಿಗೂ ತೋರಬಹುದೇ, ಮನಸೋಂಕಿದ ಸುಖವ ಮೊಟ್ಟೆಯ ಕಟ್ಟಬಹುದೇ, ಎಂಬ ಶಬ್ದಕ್ಕರ್ಥ. ಇಂತಪ್ಪ ಶರಣನ ನಿಲವು ಆ ಶರಣಂಗೆ ಸಾಧ್ಯವಾಗಿಪ್ಪುದಲ್ಲದೆ ಉಳಿದವರಿಗೆ ಅಸಾಧ್ಯವೆಂಬುದೀಗ ಆತ ನಿಂದ ನಿಲವು ಆತಂಗೆ ಸಾಧ್ಯವಾಗಿತ್ತು ಆತನಿಂದ ನಿಲವನೇನೆಂಬೆ ಗುಹೇಶ್ವರ ಎಂಬ ಶಬ್ದಕ್ಕರ್ಥ.

೨೯೦. ಅರಿದಿಹೆ ನರಿದಿಹೆನೆಂದರೆ ಅದೇಕೋ ಮುಂದೆ ಮರವೆ! ಅರಿದಿಹೆನೆಂಬುದು ನಿನ್ನಲ್ಲಿ ಲೇಸಾಗಿ ಉಳ್ಳಡೆ ನಿನ್ನರಿವೆಲ್ಲವ ಹುರಿಹಂಚು ಮಾಡಿ ಹೋದಡರಿ ಮರುಳೇ ಸ್ವತಂತ್ರ ಮನದೊಳಗಿದ್ದು ನಿಜವನರಿದಿಹೆ



ನೆಂದರೆ ಮೂರ್ತಿ ಕಿರಿದಲ್ಲ ನಿಲ್ಲು ಮಾಣು. ಗುಹೇಶ್ವರನ ಘನ ಗಟ್ಟಿಯನರಿದಡೆ ನಿನ್ನರಿವೆಲ್ಲವ ಹುರಿಹಂಚುಮಾಡಿ ನೀನರಿ ಮರುಳೆ ಅನುಭಾವಿಯಾದಡೆ.

ಟೀಕುಃ— ಅರಿದಿಹೆನೆಂಬುದು ಅಜ್ಞಾನ. ಅದೇನು ಕಾರಣವೆಂದರೆ ಇನ್ನು ಆವುದಾನೊಂದು ವಸ್ತುವನರಿದಿಹೆನೆಂಬ ಅರ್ಥವಿದ್ದಿಹುದಾಗಿ ಅರಿವೆಂಬ ವಸ್ತುವನರಿವುದು ಉಳ್ಳೊಡೆ ಆ ಅರಿದೆನೆಂಬಾತ ತಾನೆ ವಸ್ತುವೆಂದರಿದು ಭಿನ್ನ ವಿವೇಕವೆಲ್ಲವನು ತ್ಯಜಿಸಬೇಕೆಂಬುದೀಗ ಅರಿದಿಹೆನೆಂದರೆ ಅದೇಕೋ ಮುಂದೆ ಮರವೆ ಅರಿದಿಹೆನೆಂಬುದು ನಿನ್ನಲ್ಲಿ ಲೇಸಾಗಿ ಉಳ್ಳಡೆ ನಿನ್ನರಿವೆಲ್ಲವ ಹುರಿ ಹಂಚು ಮಾಡಿ ಹೋದಡೆ ನೀನರಿ ಮರುಳೆ ಎಂಬ ಶಬ್ದಕ್ಕರ್ಥ. ಈ ಭೇದವನರಿಯದೆ ಪರಿಪೂರ್ಣ ಘನದೊಳಗೆ ತಾನಿದ್ದು ತೆರಹು ಮಾಡಿಕೊಂಡು ನಿಜವನರಿದಿಹೆನೆಂದರೆ ಅದು ಖಂಡಿತವಾದುದಾಗಿ ಅದೇ ಕಲ್ಪಿತವೆಂದೆನಿಸುವುದೆಂದರಿದು ತಾನೆ ಪರಶಿವತತ್ವ ಸ್ವರೂಪನಾಗಿರಬೇಕೆಂಬುದೀಗ ಸ್ವತಂತ್ರ ಘನದೊಳಗಿದ್ದು ನಿಜವನರಿದಿಹೆನೆಂದರೆ ಮೂರ್ತಿ ಕಿರಿದಲ್ಲಾ ನಿಲ್ಲು ಮಾಣು ಗುಹೇಶ್ವರನೆಂಬ ಘನಗಟ್ಟಿಯನರಿವಡೆ ನಿನ್ನರಿವೆಲ್ಲವ ಹುರಿಹಂಚುಮಾಡಿ ನೀನರಿ ಮರುಳೇ ಅನುಭಾವಿಯಾದಡೆ ಎಂಬ ಶಬ್ದಕ್ಕರ್ಥ.

೨೯೧. ಎನ್ನ ಕಂಗಳೊಳಗಣ ರೂಹಿಂಗೆ ಆನು ಬೇಟಗೊಂಡು ಬಳಲುವಂತೆ ಹಿಡಿದು ನೆರೆಯಲಿಲ್ಲಯ್ಯಾ! ತೂರ್ಯದ ತವಕವ ನೇನೆಂಬೆನಯ್ಯಾ! ಸಂಗ ಸಂಯೋಗವಿಲ್ಲದ ರತಿಸುಖವನರಸಲುಂಟೆ? ಗುಹೇಶ್ವರ ಲಿಂಗದ ಕೃತಕದ ಆಳಿಯನೇನೆಂಬೆ!

ಟೀಕುಃ—ತನ್ನ ಜ್ಞಾನವೆಂಬ ದೃಷ್ಟಿಯ ಮುಂದೆ ಇದಿರಿಟ್ಟು ಅರಿವ ವಸ್ತು ತಾನೆಂದರಿಯದೆ ತನ್ನನನ್ಯವಮಾಡಿ ಹಿಡಿದು ನೆರೆದಿಹೆನೆಂಬ ತೂರ್ಯದ ತವಕವ ಭಿನ್ನ ಬುದ್ಧಿಯೆಂಬುದೀಗ ಎನ್ನ ಕಂಕಳೊಳಗಣ ರೂಹಿಂಗೆ ಆನು ಬೇಟಗೊಂಡು ಬಳಲುವಂತೆ ತೂರ್ಯದ ತವಕವನೇನೆಂಬೆನೆಂಬ ಶಬ್ದಕ್ಕರ್ಥ. ಇಂತು ಸಂಗ ಸಂಯೋಗವಿಲ್ಲದ ಘನದಲ್ಲಿ ಸಂಗ ಸಮರಸ ರತಿಯನರಸಿಹೆನೆಂಬುದು ಭಿನ್ನ ಭಾವವೆಂಬುದೀಗ ಸಂಗ ಸಂಯೋಗವಿಲ್ಲದ ಸಮರತಿಯನರಸಲುಂಟೆ ಎಂಬ ಶಬ್ದಕ್ಕರ್ಥ. ಅದು

ಕಾರಣ ಆ ಮಹಾ ಘನ ವಸ್ತುವಿನ ನಿಲವು ಆರಿಗೂ ಅರಿಯಲೀಸದೆ ಕಾಡು ತ್ತಿದ್ದಿತ್ತೆಂಬುದೀಗ ಗುಹೇಶ್ವರ ಲಿಂಗದ ಕೃತಕವ ಆಳಿಯನೇನೆಂಬೆನೆಂಬ ಶಬ್ದಕ್ಕರ್ಥ.

೨೯೨. ಅರಿವೆಯನೊಂದು ಒರಲಿ ಕೊಂಡರೆ ಆಕಾಶವನುಡು ಮೇಯಿತ್ತಲ್ಲಾ. ಕತ್ತಲೆಯ ಬೆಳಗವ ತಾನೆ ನುಂಗಿತ್ತಲ್ಲಾ. ಗುಹೇಶ್ವರಾ ಸತ್ತವರು ಬದುಕಿದವರ ಹೊತ್ತರು.

ಟೀಕುಃ— ಅರಿವೆಯೆಂದರೆ ಜ್ಞಾನ. ಆ ಸುಜ್ಞಾನದ ಖಂಡಿತ ಭಾವ ಹುರಿಹಂಚಾಗಿ ಹೋಯಿತ್ತೆಂಬುದೀಗ ಅರಿವೆಯನೊಂದು ಒರಲೆ ಕೊಂಡರೆ ಎಂಬ ಶಬ್ದಕ್ಕರ್ಥ. ಇಂತು ಖಂಡಿತ ಜ್ಞಾನ ಜೀರ್ಣವಾಗಲು ಆಕಾಶ ವೆಂದರೆ ಆತ್ಮತತ್ವ. ಉಡುವೆಂದರೆ ನಕ್ಷತ್ರ. ಆ ನಕ್ಷತ್ರ ಲಕ್ಷಣವುಳ್ಳ ಕಂಗಳ ನಾಳದ ಸೂಕ್ಷ್ಮ ತೇಜತತ್ವವು ಆ ಆತ್ಮ ತತ್ವವನವಗ್ರಹಿಸಿಕೊಂಡಿತ್ತೆಂಬು ದೀಗ ಆಕಾಶವನುಡು ಮೇಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತು ಆತ್ಮ ತತ್ವ ಮಹಾಜ್ಞಾನ ದೃಷ್ಟಿಯೊಳಗೆ ಲಯವಾಗಲು ಅರಿವೆ ಮರವೆಗಳೆರಡು ಅಲ್ಲಿಯೇ ಅಳಿದವೆಂಬುದೀಗ ಕತ್ತಲೆಯ ಬೆಳಗುವ ತಾನೆ ನುಂಗಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತಾದ ಕಾರಣ ಮನೋಲಯವಾದ ಶರಣ ಸಕಲ ಚೈತನ್ಯಾತ್ಮ ತತ್ವವ ಧರಿಸಿಕೊಂಡು ಸಮರಸವನೆಯ್ದಿದನೆಂಬುದೀಗ ಗುಹೇ ಶ್ವರಾ ಸತ್ತವರು ಬದುಕಿದವರ ಹೊತ್ತರು ಎಂಬ ಶಬ್ದಕ್ಕರ್ಥ.

೨೯೩. ಉರಿವ ಕಿಚ್ಚಿನೊಳಗೆ ಹಾಕಿದರೆ ಬೆಂದಿತ್ತೆಂದರಿಯಬಾ ರದು. ಬೇಯದೆಂದರಿಯಬಾರದು. ಹಿಡಿದು ಸುಟ್ಟು ಬೂದಿಯ ಹೂಸಿ ಕೊಂಡರೆ ಮರಳಿ ಹುಟ್ಟಲಿಲ್ಲ ಕಾಣಾ ಗುಹೇಶ್ವರಾ.

ಟೀಕುಃ— ಮಹಾ ಜ್ಞಾನಾಗ್ನಿ ಪ್ರಕಾಶದೊಳಗೆ ಆನೆಂಬ ಅಹಂಕಾ ರವ ಹಾಕಿದರೆ ಅದು ಅಲ್ಲಿಯೇ ಅಳಿದು ಮರಳಿ ಗುಣ ನಾಮ ಕರ್ಮಂ ಗಳಿಲ್ಲದೆ ನಿರ್ವಯಲಾಯಿತ್ತೆಂಬುದೀಗ ಉರಿಯುವ ಕಿಚ್ಚಿನೊಳಗೆ ಹಾಕಿ ದಡೆ ಬೆಂದಿತ್ತೆಂದರಿಯಬಾರದು ಬೇಯದೆಂದರಿಯಬಾರದು ಎಂಬ ಶಬ್ದ ಕ್ಕರ್ಥ. ಅದೇಕೆಂದರೆ ಅದನರಿವುದಕ್ಕೆ ಬೇರೊಂದು ಭಿನ್ನಜ್ಞಾನವಿಲ್ಲಾಗಿ ಆ ಅಹಂಕಾರವ ದಹಿಸಿದ ಚಿದ್ವಿಭೂತಿಯನು ಒಳಹೊರಗೆನ್ನದೆ ಸರ್ವಾಂ ಗಕ್ಕೆ ಆವರಣವ ಮಾಡಿಕೊಳ್ಳಲು ಜನನ ಮರಣಂಗಳರತು ತಾನೇ



ಪರಬ್ರಹ್ಮವಪ್ಪನೆಂಬುದೀಗ ಹಿಡಿದು ಸುಟ್ಟು ಬೂದಿಯ ಹೂಸಿ ಕೊಂಡಡೆ ಮರಳಿ ಹುಟ್ಟಲಿಲ್ಲ ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೯೪. ತನ್ನನರಿದವಂಗೆ ಇದಿರೆಂಬುದಿಲ್ಲ. ತನ್ನನರಿಯದವಂಗೆ ಇದಿ ರೆಂಬುದುಂಟು. ಅರಿವು ಮರವು ಕುರುಹು ಅಳಿಯಿತ್ತು ಬೆರಗಾಯಿತ್ತು. ಬೆರಗು ಬೆರಗಿನೊಳಗೆ ಕರಿಗೊಂಡಿತ್ತು. ಇದೇನು? ಭ್ರಾಂತು ಭ್ರಾಂತನೇ ನುಂಗಿ ಗುಹೇಶ್ವರಾ ಭವಿಯ ಬೆಂಬತ್ತಿ ಭವಿಯಾದ ಕಾರಣ.

ಟೀಕುಃ— ತನ್ನ ತಾನರಿಯಲು ತಾನಲ್ಲದೆ ಮತ್ತೆ ಅನ್ಯವಿಲ್ಲವೆಂ ಬುದೀಗ ತನ್ನನರಿದವಂಗೆ ಇದಿರೆಂಬುದಿಲ್ಲವೆಂಬ ಶಬ್ದಕ್ಕರ್ಥ. ತನ್ನ ತಾನರಿಯದವಂಗೆ ಇದಿರಿಟ್ಟು ಅರಸುವ ಅರಿಕೆಯುಂಟಾದ ಕಾರಣ ಅದೀಗ ತನ್ನ ತಾನರಿಯದವಂಗೆ ಇದಿರೆಂಬುದುಂಟು ಎಂಬ ಶಬ್ದಕ್ಕರ್ಥ. ಇದ ನುಳಿದು ನಿಜವ ನಿಜದಿಂದರಿಯಲು ಖಂಡಿತಜ್ಞಾನವು ಅಖಂಡಿತದ ಮುಂದೆ ಇದಿರಿಟ್ಟು ತೋರುವ ಕುರುಹು ಆ ಅರಿವು ಕುರುಹಿನಲ್ಲಿ ಒಡಗಲಿಸಿದ ಮರವೆಯು ಅಳಿದು ಪರಮಕಾಷ್ಠಿಯ ನೆಯ್ದಿದನೆಂಬುದೀಗ ಅರಿವು ಮರಹು ಕುರುಹಳಿಯಿತ್ತು ಬೆರಗಾಯಿತ್ತು ಎಂಬ ಶಬ್ದಕ್ಕರ್ಥ. ಆ ಪರ ಮಕಾಷ್ಠಿಯೊಳಗೆ ಕರಿಗೊಂಡು ನಿಂದು ಸಕಲಭ್ರಾಂತಿಯನಳಿದು ಭವಿ ಭಕ್ತನೆನಿಸದೆ ತಾನೆ ಲಿಂಗವಾಗಿ ಇದ್ದಿತ್ತೆಂಬುದೀಗ ಬೆರಗು ಬೆರಗಿನೊ ಳಗೆ ಕರಿಗೊಂಡಿತ್ತು ಇದೇನು ಭ್ರಾಂತು ಭ್ರಾಂತನೆ ನುಂಗಿ ಗುಹೇಶ್ವರಾ ಭವಿಯ ಬೆಂಬತ್ತಿ ಭವಿಯಾದಕಾರಣ ಎಂಬ ಶಬ್ದಕ್ಕರ್ಥ.

೨೯೫. ಕೆಂಡದ ಗಿರಿಯ ಮೇಲೆ ಒಂದು ಅರಗಿನ ಕಂಬವಿದ್ದಿತ್ತು ನೋಡಾ ಅಯ್ಯಾ! ಅರಗಿನ ಕಂಬದ ಮೇಲೆ ಒಂದು ಹಂಸವಿದ್ದಿತ್ತು. ಕಂಬ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರಾ.

ಟೀಕುಃ— ಕೆಂಡದ ಗಿರಿಯೆಂದರೆ ಶಿವೋಹಂಕಾರಸ್ವರೂಪವಪ್ಪ ಮಹಾ ಜ್ಞಾನಾಗ್ನಿಪ್ರಕಾಶವೆಂಬರ್ಥ. ಆ ಮಹಾಜ್ಞಾನಾಗ್ನಿಯ ಮಹದಹಂಕಾ ರದ ಗಿರಿಯ ಅತ್ಯತಿಷ್ಠದ್ದಶಾಂಗುಲಸ್ಥಾನದಲ್ಲಿ ಆ ಶರಣನ ಭಾವವೆಂಬ ಸ್ತಂಭ ನ್ಯಸ್ತವಾಗಿರುತ್ತಿದ್ದಿತ್ತೆಂಬುದೀಗ ಕೆಂಡದ ಗಿರಿಯ ಮೇಲೆ ಒಂದು ಅರಗಿನ ಕಂಭವಿದ್ದಿತ್ತು ನೋಡಾ ಅಯ್ಯಾ ಎಂಬ ಶಬ್ದಕ್ಕರ್ಥ. ಆ ಭಾವ ಸ್ತಂಭದ ಮೇಲೆ ಪರಮ ಹಂಸನೆಂಬುದೊಂದು ತತ್ವವು ತೋರು ತ್ತಿದ್ದಿತ್ತೆಂಬುದೀಗ ಅರಗಿನ ಕಂಭದ ಮೇಲೆ ಒಂದು ಹಂಸೆ ಇದ್ದಿತ್ತಲ್ಲಾ

ಎಂಬ ಶಬ್ದಕ್ಕರ್ಥ. ಆ ಮಹಾಜ್ಞಾನಾಗ್ನಿಯೊಳಗೆ ಆ ಭಾವವನೆ ದಗ್ಧವ ಮಾಡಲು ಆ ಭಾವ ನಿರ್ಭಾವವಾಗಿ ಇದಿರಿಟ್ಟು ತೋರುವ ಪರಮ ಹಂಸನು ನಿರ್ವಯಲಾಗಿತ್ತೆಂಬುದೀಗ ಕಂಭ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

ಗದ್ಯಃ—ಸ್ವಸ್ತಿಸಮಸ್ತಭುವನಜನದ ತಿಮಿರಹರಕಾರಣಸ್ವರೂಪರು ಭಕ್ತದೇಹಿಕದೇವರು ಭಕ್ತವತ್ಸಲರು ಸರ್ವಾಂಗಪ್ರಾಣಲಿಂಗಮೂರ್ತಿವಿಲಾಸರು ಹುಲಿಗೆರೆಯ ಪುರವರಾಧೀಶ್ವರರು ಶ್ರೀಪೂರ್ವಸ್ವಯಂಭುಪ್ರಸನ್ನಚನ್ನದಕ್ಷಿಣಶ್ರೀಸೋಮನಾಥದೇವರ ದಿವ್ಯಶ್ರೀಪಾದಪದ್ಮಾರಾಧಕರು ತ್ರಿಕಾಂಡನಿಷ್ಠರು ಋಗ್ಯಜುಸ್ಸಾಮಾಥರ್ವಣಾಂತರ್ಗತ ಪ್ರತಿಪಾದ್ಯಪ್ರಮುಖರು ಶೃತಿಸ್ಮೃತಿಪುರಾಣಾಗಮೇತಿಹಾಸಾದಿ ನಾನಾಶಾಸ್ತ್ರಕೋವಿದರು ಪರಮವೀರಶೈವಾಚಾರ ಸಕಲಪ್ರಸಾದಪಂಚಾಕ್ಷರೀಮಂತ್ರಸಿದ್ಧರು ನಿತ್ಯಪರಿಪೂರ್ಣಸಚ್ಚಿದಾನಂದ ನಿರಂಜನಪರಂಜ್ಯೋತಿಸ್ವರೂಪಮಹಾಲಿಂಗದೇವರು ತಮ್ಮ ದಿವ್ಯಾಜ್ಞಾನಾನಂದಸಿದ್ಧವರಪ್ರಸನ್ನಪ್ರಸಾದವನು ನಿಜತಚ್ಛಿಷ್ಯಭಕ್ತಿಭಂಡಾರಿಜಕ್ಕಣಾಚಾರ್ಯರ್ಗಂಗೆ ಸತ್‌ಪ್ರೇಮಮಹಾನುಭಾವಸಂಬೋಧೆಸಂಬಂಧನಿರೂಪಣಕಾರಣಾರ್ಥ ವಿರಚಿತಮಪ್ಪಪ್ರಭುದೇವರಷಟ್‌ಸ್ಥಲದೊಳು ಶರಣನವರ್ಣಂ ಪಂಚಮ ಪರಿಚ್ಛೇದಃ

---

## ಐಕ್ಯಸ್ಥಲ.

೧. ಸತ್ತು ಹುಟ್ಟಿ ಕೆಟ್ಟವರೆಲ್ಲರೂ ದೇವಲೋಕಕ್ಕೆ ಹೋದರೆಂಬ ಬಾಲ ಭಾಷೆಯ ಕೇಳಲಾಗದು. ಸಾಯದ ಮುನ್ನ, ಸ್ವಯವನರಿದಡೆ ದೇವನೊಲಿವ ನಮ್ಮ ಗುಹೇಶ್ವರನು.

ಟೀಕು:— ಹುಟ್ಟಿದವರಿಗೆ ಮರಣವೆ ಪ್ರಾಪ್ತಿ. ಮರಣವಾದವರಿಗೆ ಮರಳಿ ಜನ್ಮವೆ ಪ್ರಾಪ್ತಿ. ಇಂತಲ್ಲದೆ ಇದ್ದಲ್ಲಿ ಅಜ್ಞಾನಿಯಾಗಿ ನಡೆದು, ಸತ್ತ ಬಳಿಕ ಮುಕ್ತಿಯ ಹಡೆದೆನೆಂಬುದೆಲ್ಲವೂ ಅಜ್ಞಾನವೆಂದರಿದು ತಾನು ಅಲ್ಲಿಯೆ ತನ್ನ ನರಿದಾತನೆ ಲಿಂಗೈಕ್ಯನೆಂಬುದೀ ವಚನದ ತಾತ್ಪರ್ಯಾರ್ಥ.

೨. ಕೋಣವನು ಕುದುರೆಯನು ಹಾವನು ಹದ್ದನು ಮೊಲವನು ಇಲಿಯನು ಮೇಳವಿಸುವಂತೆ, ಮೇಳವಿಲ್ಲದವನ ಒಗತನ ಅಳಿಯ ಬಾಳುವೆ ಕಾಡಬೆಕ್ಕಿಂಗೆ ತುಯ್ಯಲನಿಕ್ಕುವಂತೆ ಕೇಳು ಗುಹೇಶ್ವರಾ ಬೋಳಿಂಗೆ ತೊಂಡಿಲ ಮುಡಿಸುವಂತೆ.

ಟೀಕುಃ— ನಿರಾಳಲಿಂಗದಲ್ಲಿ ಭಾವ ನಿರ್ಭಾವವಾಗಿ ಲಿಂಗೈಕ್ಯವಾಗಲರಿಯದೆ, ಲಿಂಗದಲ್ಲಿ ಭಿನ್ನವಾಗಿದ್ದು, ಮತ್ತೆ ಲಿಂಗೈಕ್ಯವಾದಿಹೆನೆಂಬವನ ಮಾತು ಮಹಾಲಿಂಗದಲ್ಲಿ ಸಂಬಂಧ ಸಮನಿಸದೆ ಒಂದನೊಂದು ಹೊದ್ದದೆ ಅಸಂಗತವಾಗಿಪ್ಪುದೆಂಬುದೀ ವಚನದ ತಾತ್ಪರ್ಯಾರ್ಥ.

೩. ಲಿಂಗವಂತಗೆ ಲಿಂಗದ ವಾರ್ತೆಯ ನುಡಿವುದೆ ಭಂಗ ಹಂಗು ನೋಡಾ! ಹಂಗಿನ ಶಬ್ದ ನೋಡಾ! ಕೊಡನ ತುಂಬಿದ ಹಾಲನೊಡೆಯ ಹಾಯ್ಕಿ, ಇನ್ನುಡುಗಿಹೆನೆಂದರೆ ಉಂಟೇ ಗುಹೇಶ್ವರಾ?

ಟೀಕುಃ— ಸರ್ವಾಂಗವು ಲಿಂಗದಲ್ಲಿ ಐಕ್ಯವಾದ ಲಿಂಗೈಕ್ಯನು ತಾನೆ ಲಿಂಗವೆಂದರಿಯದೆ ಲಿಂಗಕ್ಕೆ ಅನ್ಯವಾಗಿ, ಲಿಂಗದ ವಾರ್ತೆಯ ಮಾತನಾಡುವುದೆ ಮಿಥ್ಯೆ ಎಂದರಿವುದು. ಸಂಚ ತಪ್ಪಿ ನಡೆದು, ಮತ್ತೆ ಎತ್ತಿಹೆನೆಂದರೆ, ಘಟಿಸದಾಗಿ, ಅದು ಬೆಕ್ಕ ಹಾಲನುಡುಗುವಂತೆ ಇದ್ದಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

೪. ಶಬ್ದಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು, ತಮ್ಮ ತಾವರಿಯರು. ಇದುಕಾರಣ, ಮೂರು ಲೋಕವೆಲ್ಲವು ಬರಿ ಸೂರೆ ಹೋಯಿತ್ತು ಗುಹೇಶ್ವರ.

ಟೀಕು:— ತನ್ನ ನಿಲವ ತಾನರಿಯದೆ, ವೃಥಾ ವಾಗದ್ವೈತದಲ್ಲಿ ತಾನೆ ಬ್ರಹ್ಮವಾದೆನೆಂದು, ನುಡಿವ ನುಡಿಯೆಲ್ಲವು ಮಿಥ್ಯೆಯೆಂಬುದೀ ವಚನದ ತಾತ್ಪರ್ಯಾರ್ಥ.

೫. ಉರವಣಿಸುವ ಮನ ಮುಟ್ಟುವನ್ನಬರ ಕಾಡುವುದು. ಘನ ಘನದಲ್ಲಿ ಮನ ನಂಬುವನ್ನಕ್ಕರ ಕಾಡುವುದು. ಮಹಂತ ಗುಹೇಶ್ವರನೆಂಬ ಶಬ್ದವುಳ್ಳನಕ್ಕರ ಕಾಡುವುದು.

ಟೀಕು:— ತಾನೆ ಲಿಂಗವೆಂದರಿಯದೆ, ಲಿಂಗದಲ್ಲಿ ಬಳಸಿಹೆನೆಂಬ ಉರವಣೆಯುಳ್ಳನ್ನಕ್ಕರ ಮಹಾ ಘನವ ಮನದಲ್ಲಿ ವೇದ್ಯವ ಮಾಡಿಕೊಂಡಿಹೆನೆಂಬನ್ನಕ್ಕರ ಮಹಲಿಂಗೈಕ್ಯ ಪದವು ಸಾಧ್ಯವಾಗದೆ ಕಾಡುತ್ತಿಪ್ಪುದು. ತನ್ನ ತಾನರಿದರೆ ಬಯಸಲಿಲ್ಲ ನುಡಿಯಲಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೬. ಕದನದೊಳಗಳ ಕಣ್ಣು ಕೆಂಪು. ಕದನದೊಳಗಣ ಮನದ ಕಣ್ಣು ಕೆಂಪು. ಇದಾವನಾವನ ಕಾಡವಯ್ಯ! ಪದ್ಮದೊಳಗೆ ಬಿಂದು ಸಿಲುಕಿ, ಅಲ್ಲಿಯೆ ಅದೆ ನೋಡಿರೆ. ಗುಹೇಶ್ವರನೆಂಬ ಅನುಗ್ರಹ ತನ್ನ ನುಂಗಿ ಲಿಂಗವಿಲ್ಲೆನುತಿದ್ದೆನು.

ಟೀಕು:— ಲಿಂಗದ ತನ್ನ ಐಕ್ಯ ಭೇದವನರಿಯದೆ, ಅನುಭವದ ಹೋರಾಟಿಯ ಕದನದೊಳಗೆ ತನ್ನ ಅರಿವಿನ ಕಣ್ಣು ಕೆಂಚನೆ ಮಾಡಿಕೊಂಡು, ಮನದ ಮುಖವ ಗಂಟಿಕ್ಕಿಕೊಂಡು, ಕಂಡ ಕಂಡವರೊಡನೆ ಮಥನಿಸುತ್ತಿಪ್ಪವರ ಆ ಲಿಂಗೈಕ್ಯ ಪದವು ಕಾಡುತ್ತಿದ್ದಿತ್ತೆಂಬುದೀಗ, ಕದನದೊಳಗೆ ಕಣ್ಣು ಕೆಂಪು, ಕದನದೊಳಗಣ ಮನದ ಕೆಂಪು ಇದಾವನಾವನ ಕಾಡದಯ್ಯಾಯೆಂಬ ಶಬ್ದಕ್ಕರ್ಥ. ಇದನರಿವ ಪರಿಯೆಂತೆಂದರೆ, ಹೃದಯ ಕಮಲದಲ್ಲಿ ಅಂತರ್ಗತವಾಗಿಪ್ಪ ಚಿದ್ಬಿಂದು ಪ್ರಕಾಶವನು ತಿಳಿದು ನೋಡಲು, ಆ ಮಹಾ ಪ್ರಕಾಶವ ತಾನಾಗಿ ನಿರ್ಭೇದ್ಯವಾಗಿದ್ದಿತ್ತೆಂಬುದೀಗ, ಪದ್ಮದೊಳಗೆ ಬಿಂದು ಸಿಲ್ಕಿ ಅಲ್ಲಿಯೆ ಅದೆ ನೋಡಿರೆ ಗುಹೇಶ್ವರನೆಂಬ ಅನುಗ್ರಹ ತನ್ನ ನುಂಗಿ ಲಿಂಗವಿಲ್ಲೆನುತ್ತಿದ್ದೆನುಯೆಂಬ ಶಬ್ದಕ್ಕರ್ಥ.

೭. ಭಾವವಳಿಯದೆ, ಬಯಕೆ ಸವೆಯದೆ ಐಕ್ಯವು ಆವ ಘನವೆಂದಡಹುದೆ, ಶಬ್ದಸಂಭ್ರಮದ ಮದವಳಿಯದೆ, ತನ್ನ ಇದಿರಿನಲ್ಲಿ ಪ್ರತಿಯುಳ್ಳಡೆ, ಎನೆಂದಡು ಆಹುದೆ ಗುಹೇಶ್ವರನೆಂಬ ಶಬ್ದಸುಳಿಯದೆ, ಬೇಸತ್ತು ಬಯಲಾದಡೆ, ಆಯತವಾಹುದೆ.



ಟೀಕು:—ತನ್ನ ನಿಲವ ತಾನಾರೆಂದು ತಿಳಿದು ನೋಡಿ, ಲಿಂಗದಲ್ಲಿ ನಿರ್ಭಾವಿಯಾಗಿರಲರಿಯದೆ, ಭಿನ್ನ ಭಾವವ ಭಾವಿಸಿತ್ತು. ಅನರ್ಥ ವಸ್ತುವ ಬಯಸಿ ಬಳಲುತ್ತ ಮತ್ತೆ ತಾನೆ ಲಿಂಗೈಕ್ಯನು ಎನ್ನಿಂದಲಾರು ತತ್ವವೇದಿಗಳಿಲ್ಲವೆನುತ್ತ, ಶಬ್ದಸಂಭ್ರಮದ ಮದದಲ್ಲಿ ಮುಳುಗುತ್ತ ಇದಿರಿಟ್ಟು ಅರಿವನರಿವುತ್ತ ಇಪ್ಪವರಿಗೆ ಲಿಂಗೈಕ್ಯ ಪದ ಘಟಿಸದೆಂಬುದೀ ವಚನದ ತಾತ್ಪರ್ಯಾರ್ಥ.

೮. ಕೆರೆಯಲುಂಡು, ತೊರೆಯ ಹೊಗಳುವರು. ಅತಿ ಉತ್ಕೃಷ್ಟದ ಪರಬ್ರಹ್ಮವನೆ ನುಡಿವರು. ಸಹಜ ಪಿನಾಕಿಯ ಬಲೆಯಲ್ಲಿ ಸಿಲುಕಿ ಭವ ಹರಿಯಲರಿಯರು. ರುದ್ರ ಛತ್ರವನುಂಡು, ಇಲ್ಲವೆಯ ನುಡಿವ ಹಿರಿಯರಿಗೆ ಮಹದ ಮಾತೇಕೋ ಗುಹೇಶ್ವರಾ?

ಟೀಕು:—ಅಂಗವಿಕಾರದ ಸಂಗಸುಖವನುಂಡು, ಲಿಂಗೈಕ್ಯನಾದೆನೆಂದು ಪರಬ್ರಹ್ಮವ ನುಡಿವ ವಾಗದ್ವೈತಿಗಳೆಲ್ಲರು ಶಿವನಿಕ್ಕಿದ ಮಾಯಾ ಸೂತ್ರದಲ್ಲಿ ಮಗ್ನರಾಗಿ, ಆ ಶಿವನ ಧರ್ಮದ ಕವಿಲೆಗಳಾಗಿಪ್ಪರಲ್ಲದೆ ಸಹಜ ಲಿಂಗೈಕ್ಯರಲ್ಲ. ಅದುಕಾರಣ ಇಲ್ಲದ ವಾಗ್ಬ್ರಹ್ಮವ ನುಡಿಯಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

೯. ಪಂಚಭೂತಸಂಗದಿಂದ ಜ್ಯೋತಿಯಾಯಿತ್ತು. ಪಂಚಭೂತ ಸಂಗದಿಂದ ಕರ್ಪುರವಾಯಿತ್ತು. ಎರಡರ ಸಂಗವೇನಾಯಿತ್ತು ಹೇಳಾ ವಾಙ್ಮನಕ್ಕತೀತ ಗುಹೇಶ್ವರ?

ಟೀಕು:— ಉರಿಕರ್ಪುರವೆರಡು ಪಂಚಭೂತಾತ್ಮಕವಪ್ಪ ಸ್ವರೂಪುಗಳಾಗಿಪ್ಪವು. ಆ ಸ್ವರೂಪು ಸ್ವರೂಪಾದ ಅವಿರಳ ಪ್ರಕಾಶ ಸಂಗದಿಂದ ನಿರ್ವಯಲಾದ ಹಾಗೆ, ಅಂಗವು ಸ್ವರೂಪು, ಆ ಅಂಗದ ಮೇಲಣ ಲಿಂಗವು ಸ್ವರೂಪು ಈ ಎರಡು ಮಹಾಘನತತ್ವವೇದ್ಯದಿಂದ ಲಿಂಗಾಂಗ, ಅಂಗಲಿಂಗವೆಂಬುಭಯನಾಮವಳಿದು ನಿಜಲಿಂಗೈಕ್ಯವಾದ ಭೇದವ ವಾಕ್ಯಕ್ಕೆ ತರಬಾರದೆಂಬುದೀ ವಚನದ ತಾತ್ಪರ್ಯಾರ್ಥ.

೧೦. ಎರಡೆಂಬರಯ್ಯ! ಕರಣದ ಕಂಗಳಲ್ಲಿ ನೋಡಿದವರು ಎರಡುವನತಿಗಳೆದು ಒಂದೆಂಬರಯ್ಯ! ಕಾಮಿಸುವದಿಲ್ಲಾಗಿ, ಕಲ್ಪಿಸುವದಿಲ್ಲಾಗಿ

ಭಾವಿಸುವದಿಲ್ಲಾಗಿ, ಬಯಸುವದಿಲ್ಲಾಗಿ ಗುಹೇಶ್ವರನೆಂಬುದಿಲ್ಲಾಗಿ ಮುಂಡೆ ಬಯಲೆಂಬುದಿಲ್ಲ.

ಟೀಕುಃ—ಅಂತರ್ಮುಖದಲ್ಲಿ ಜ್ಞಾನವಿಡಿದು, ಲಿಂಗವ ನೋಡಿದರೆ, ದ್ವಂದ್ವಗ್ರಸ್ತವಾಗಿಪ್ಪುದಾಗಿ, ಅದೀಗ ಎರಡೆಂಬರಯ್ಯಾ! ಕರಣದ ಕಂಗಳಲ್ಲಿ ನೋಡಿವವರು ಎಂಬ ಶಬ್ದಕ್ಕರ್ಥ. ಅದನತಿಗಳೆದು ಅರಿವುವಿಡಿದು, ಲಿಂಗವನಿದಿರಿಟ್ಟು, ನೋಡಿ ಕಂಡು, ಒಂದೆಂಬುದು ಭಿನ್ನಜ್ಞಾನವೆಂಬುದೀಗ, ಎರಡವನತಿಗಳೆದು, ನಿರ್ಭಾವಿಯಾದ ಬಳಿಕ ಕಾಮಿಸಲಿಲ್ಲ. ಭಾವಿಸಲಿಲ್ಲ ಬಯಸಲಿಲ್ಲ. ನಿರ್ವಯಲು, ಇದು ನಿರ್ವಯಲೆಂಬ ಮಾತು ತಾನು ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧೧. ಹುಲ್ಲ ಕಿಚ್ಚುವ ಕಲ್ಲ ಬೀಜವ ನೀರ ನೆಳಲು ಗಾಳಿಯ ನಾರು ಅಗ್ನಿಯುಹಾನವ, ಬಿಸಿಲಿನ ರುಚಿಯು ತನ್ನ ಬೆಳಗವನಾರು ಬಲ್ಲರು ಗುಹೇಶ್ವರಾ ನಿಮ್ಮ ಶರಣರಲ್ಲದೆ?

ಟೀಕುಃ— ತೃಣಕಾಷ್ಠದೊಳಗೆ, ಅಗ್ನಿ ಪರಿಪೂರ್ಣವಾಗಿಪ್ಪುದೆಂಬುದೀಗ, ಹುಲ್ಲಕಿಚ್ಚುವಯೆಂಬ ಶಬ್ದಕ್ಕರ್ಥ. ಕಲ್ಲೆಂದರೆ ಜಡವಪ್ಪ ದೇಹ, ಆ ದೇಹಕ್ಕೆ ಬೀಜವಾವುದೆಂದರೆ, ಮೂಲಾಹಂಕಾರವೆ ಬೀಜವಾಗಿಪ್ಪುದೆಂಬುದೀಗ, ಕಲ್ಲಬೀಜವಯೆಂಬ ಶಬ್ದಕ್ಕರ್ಥ. ನೀರೆಂದರೆ ಮನಸು, ನೆಳಲೆಂದರೆ ಮಾಯಾಭ್ರಮೆ, ಆ ಮನಸನೆಡೆಗೊಂಡಿಪ್ಪುದು ಮಾಯಾಭ್ರಮೆ ಎಂಬುದೀಗ, ನೀರನೆಳಲೆಂಬ ಶಬ್ದಕ್ಕರ್ಥ. ಗಾಳಿ ಎಂದಡೆ ಪ್ರಾಣವಾಯು ನಾರೆಂದಡೆ ಆ ಪ್ರಾಣವಾಯುವ ಬದ್ಧವ ಮಾಡಿ ಸುತ್ತಿಕೊಂಡಿಪ್ಪ ಭವಪಾಶವೆಂಬುದೀಗ, ಘಾಳಿಯ ನಾರೆಂಬ ಶಬ್ದಕ್ಕರ್ಥ. ಅಗ್ನಿಯೆಂದರೆ, ಅಗ್ನಿತನುಗುಣಸಂಬಂಧಮಪ್ಪ ದೇಹ, ಆ ದೇಹದಲ್ಲಿ ಹುಟ್ಟಿದ ಸಂಸಾರದ ರಸವೆಂಬ ಅಗ್ನಿಯ ಹಗಿನವನೆಂಬ ಶಬ್ದಕ್ಕರ್ಥ. ಬಿಸಿಲೆಂದರೆ ತಾಪತ್ರಯ ಪ್ರಭೆಯ ತಿಗ್ಮವೆಂಬುದೀಗ, ಬಿಸಿಲಿನ ರುಚಿಯುನೆಂಬ ಶಬ್ದಕ್ಕರ್ಥ. ಇಂತೀ ಗುಣಂಗಳ ಲೇಸಾಗಿ, ಅರಿದು ನಿವೃತ್ತಿಮಾಡಿ, ಅವಶೇಷಿಸಿ ಇಪ್ಪ ತನ್ನ ಸ್ವಯಂ ಪ್ರಕಾಶವ ತಾನೆ ಅರಿವುತ್ತಿರಲು, ಅದೀಗ, ತನ್ನ ಬೆಳಗುವನಾರು ಬಲ್ಲರು ಗುಹೇಶ್ವರಾ ನಿಮ್ಮ ಶರಣರಲ್ಲದೆಂಬ ಶಬ್ದಕ್ಕರ್ಥ.

೧೨. ಹೊರಸಿನ ಎಕ್ಕೆಯಲ್ಲಿ ಶಂಖದ ಮಣಿಯ ಪವಣಿಸ ಬಲ್ಲವರು ನೀವಾರಾದಡು ಪವಣಿಸಿರಯ್ಯಾ! ಇದ ನಾನರಿಯೆನಯ್ಯಾ! ಒಂದು



ತಾಳೆ ಮರದ ಮೇಲೆ ಮೂರು ರತ್ನವಿಹುದ ನಾ ಬಲ್ಲೆ. ಒಂದು ರತ್ನ ಉತ್ಪತ್ತಿಸ್ಥಿತಿಲಯಕ್ಕೊಳಗಾಯಿತ್ತು. ಒಂದು ರತ್ನ ಹದಿನಾಲ್ಕು ಭುವನಕ್ಕೆ ಬೆಲೆಯಾಯಿತ್ತು. ಇನ್ನೊಂದು ರತ್ನಕ್ಕೆ ಬೆಲೆಯಿಲ್ಲವೆಂದು ಗುಹೇಶ್ವರ ಲಿಂಗೈಕ್ಯವು ನಿಃಶಬ್ದಬ್ರಹ್ಮಮುಚ್ಯತೆ.

ಟೀಕುಃ— ಲಿಂಗದ ತನ್ನ ಸಾಮರಸ್ಯವನರಿಯದೆ, ಲಿಂಗೈಕ್ಯವ ಸಾಧಿಸಿಹೆನೆಂಬಾತನ ಬುದ್ಧಿ, ಹೊರಸಿನ ಎಕ್ಕೆಗೆ ಶಂಖದ ಮಣಿಯ ಪವಣಿಸುವರು ನೀವಾರಾದಡು ಪವಣಿಸಿರಯ್ಯ ಎಂಬ ಶಬ್ದಕ್ಕರ್ಥ. ಇದನತಿಗಳೆದಂಥ ಯೋಗವೆಂತೆಂದಡೆ, ತಾಳ ಮರನೆಂದಡೆ ಶರೀರ ಅದೆಂತೆಂದಡೆ, ತಾಳಮರನು ಮದ್ಯ ರಸಕ್ಕೆ ಪ್ರಯೋಜನವಲ್ಲದೆ, ಯಾತಕ್ಕು ಪ್ರಯೋಜನವಲ್ಲ. ಶರೀರವು ಅಷ್ಟಮದವೆಂಬ ಮದ್ಯರಸಕ್ಕೆ ಪ್ರಯೋಜನವಲ್ಲದೆ, ಮತ್ತೇತಕ್ಕೂ ಪ್ರಯೋಜನವಲ್ಲ. ಇಂತಾಗಿ ತಾಳಮರನೆಂದರೆ ಶರೀರವೆಂಬರ್ಥ. ಅಂತಪ್ಪ ದೇಹದ ದುಃಕೃತಿಯ ಹಿಂಗಿಸಲು, ಅಲ್ಲಿ ಕರ್ಮಜ್ಞಾನ, ಭಕ್ತಿಜ್ಞಾನ, ಮಹಾಜ್ಞಾನವೆಂಬ ಮೂರು ರತ್ನಂಗಳು ಎಡೆಗೊಂಡಿರುತ್ತಿಪ್ಪವೆಂಬುದೀಗ, ಒಂದು ತಾಳದ ಮರದಮೇಲೆ ಮೂರು ರತ್ನವಿಹುದ ನಾ ಬಲ್ಲೆನೆಂಬ ಶಬ್ದಕ್ಕರ್ಥ. ಕರ್ಮಜ್ಞಾನವ ಹಿಡಿದಾತನು ಭವಭಾರಕ್ಕೊಳಗಾದನೆಂಬುದೀಗ, ಒಂದು ರತ್ನ ಉತ್ಪತ್ತಿಸ್ಥಿತಿಲಯಕ್ಕೊಳಗಾಯಿತ್ತೆಂಬ ಶಬ್ದಕ್ಕರ್ಥ. ಭಕ್ತಿಜ್ಞಾನವ ಬಳಸಿದಾತ ಮೂರು ಲೋಕಕ್ಕೆ ಪೂಜ್ಯನೆಂಬುದೀಗ, ಒಂದು ರತ್ನ ಹದಿನಾಲ್ಕು ಭುವನಕ್ಕೆ ಬೆಲೆಯಾಯಿತ್ತು ಎಂಬ ಶಬ್ದಕ್ಕರ್ಥ. ಮಹಾಜ್ಞಾನವ ಬಳಸಿದಾತನು ಪರಮ ಶಿವತತ್ವಸ್ವರೂಪನು ತಾನೆಯಾಗಿ, ಉಪಮಾತೀತನಾಗಿದ್ದನೆಂಬುದೀಗ, ಇನ್ನೊಂದು ರತ್ನಕ್ಕೆ ಬೆಲೆ ಇಲ್ಲವೆಂಬ ಶಬ್ದಕ್ಕರ್ಥ. ಈ ನಿಜವು ಸಾಧ್ಯವಾಗಲಾಗಿ, ಆ ಶರಣನ ನಿಲವು ವಾಙ್ಮನಕ್ಕಗೋಚರವಾಗಿದ್ದಿತ್ತೆಂಬುದೀಗ, ಗುಹೇಶ್ವರಾ ಲಿಂಗೈಕ್ಯವು ನಿಃಶಬ್ದಬ್ರಹ್ಮಮುಚ್ಯತೇ ಎಂಬ ಶಬ್ದಕ್ಕರ್ಥ..

೧೩. ಅಂಗದ ಧರೆಯ ಮೇಲೆ ಮೂರು ಭಾವಿಯುಂಟು. ಮೊದಲ ಭಾವಿಯ ಮುಟ್ಟಿದಾತ ಅಂಗಸಂಗಿಯಾದನು. ನಡುವಣ ಭಾವಿಯ ಮುಟ್ಟಿದಾತ ಉತ್ಪತ್ತಿಸ್ಥಿತಿಲಯಕ್ಕೊಳಗಾದನು. ಮೇಲಣ ಭಾವಿಯ ಮುಟ್ಟಿದಾತ ಜೀವನ್ಮುಕ್ತನಾದನು. ಇವ ತಟ್ಟದೆ ಮುಟ್ಟದೆ ಹೊದರು ನೋಡಾ! ಪರಬ್ರಹ್ಮವ ದಾಂಟಿ ಗುಹೇಶ್ವರನೆಂಬ ಲಿಂಗದಲ್ಲಿ ಹಂಗು ಹರಿದ ಶರಣರು.

ಟೀಕು:— ಅಂಗದ ಧರೆ ಎಂದರೆ ತನುವೆಂಬ ಭೂಮಿಯೆಂಬರ್ಥ. ಆ ತನುವೆಂಬ ಭೂಮಿಯ ಮೇಲೆ ಜೀವಾತ್ಮಭಾವಿ, ಅಂತರಾತ್ಮಭಾವಿ, ಪರಮಾತ್ಮಭಾವಿ, ಎಂಬ ತ್ರಿವಿಧಭಾವನಂಗಳುಂಟಾಗಿಪ್ಪವೆಂಬುದೀಗ ಅಂಗದ ಧರೆಯ ಮೇಲೆ, ಮೂರು ಭಾವಿಯುಂಟು ಎಂಬ ಶಬ್ದಕ್ಕರ್ಥ. ಅಲ್ಲಿ ಜೀವಭಾವಿಯಾಗಿದ್ದಾತ ಶರೀರಬದ್ಧನಾಗಿದ್ದನೆಂಬುದೀಗ, ಮೊದಲ ಭಾವಿಯ ಮುಟ್ಟಿದಾತ ಅಂಗಸಂಗಿಯಾದನು ಎಂಬ ಶಬ್ದಕ್ಕರ್ಥ. ಅಂತರಾತ್ಮಭಾವಿಯಾಗಿದ್ದಾತ ತನ್ನ ಸ್ವರೂಪನರಿಯನಾಗಿ, ಜನನಮರಣಂಗಳಿಗೆ ಒಳಗಾದನೆಂಬುದೀಗ, ನಡುವಣ ಭಾವಿಯ ಮುಟ್ಟಿದಾತ ಉತ್ಪತ್ತಿಸ್ಥಿತಿಲಯಕ್ಕೊಳಗಾದನು ಎಂಬ ಶಬ್ದಕ್ಕರ್ಥ. ಪರಮಾತ್ಮ ಭಾವಿಯಾಗಿದ್ದಾತ ಜೀವನ್ಮುಕ್ತನಾದನೆಂಬುದೀಗ, ಮೇಲಣ ಭಾವಿಯ ಮುಟ್ಟಿದಾತ ಜೀವನ್ಮುಕ್ತನಾದನು ಎಂಬ ಶಬ್ದಕ್ಕರ್ಥ. ಇಂತೀ ಆತ್ಮತ್ರಯಂಗಳನು ಭಾವಿಸಿ ಭಿನ್ನನಾಗದೆ ನಿರ್ಭಾವಿಯಾಗಿ ತಾನೆ ಪರಬ್ರಹ್ಮ ಸ್ವರೂಪನಾಗಿಪ್ಪಾತನೆ ಶರಣನೆಂಬುದೀಗ, ಇವ ತಟ್ಟದೆ, ಮುಟ್ಟದೆ ಹೋದರು ನೋಡಾ ಪರಬ್ರಹ್ಮವ ದಾಂಟಿ ಗುಹೇಶ್ವರನೆಂಬ ಲಿಂಗದಲ್ಲಿ ಹಂಗುಹರಿದ ಶರಣರು ಎಂಬ ಶಬ್ದಕ್ಕರ್ಥ.

೧೪. ಒಂಟೆಯ ಮರಿ ಮೂರೊಂಟೆಯ ನಿಕ್ಕಿತ್ತು. ಕಟ್ಟಗ್ರದಿ ರುಹೆ ಕತ್ತಲೆಯ ನುಂಗಿತ್ತು. ಬೆಟ್ಟವ ಬೆಳ್ಳಕ್ಕಿ ನುಂಗಿತ್ತು. ಸುಟ್ಟುದು ಎದ್ದು ಕುಳ್ಳಿದ್ದುದಯ್ಯ. ಕಟ್ಟಿದ್ದುದ ತಾರದೆ, ಗುಹೆಶ್ವರನಲ್ಲಿಯೆ ಅಡಗಿತ್ತು ನೋಡಾ.

ಟೀಕು:— ಒಂಟೆಯೆಂದರೆ ಜೀವಂಗೆ ಹೆಸರು. ಅದೆಂತೆಂದರೆ, ಒಂಟೆಯು ಜಡವಾಗಿಪ್ಪುದು. ಸರ್ವರಿಗೂ ಹಾಸ್ಯಾಪಮಾನಕ್ಕೆ ಕಾರಣವಾಗಿಪ್ಪುದು. ಏತಕ್ಕು ಪ್ರಯೋಜನವಲ್ಲದಿಪ್ಪುದು. ಅಜ್ಞಾನಚೈತನ್ಯವಾಗಿಪ್ಪುದಾಗಿ, ಇಷ್ಟು ಗುಣಂಗಳು ಜೀವಂಗೆ ಉಂಟಾದ ಕಾರಣ, ಒಂಟೆಗೂ ಜೀವಂಗೂ ಲಕ್ಷಣಾರ್ಥ ಒಂದೇ ಸಂಬಂಧವಾಯಿತ್ತು. ಅಂತಪ್ಪ ಒಬ್ಬ ಜೀವನ ಉದರದಲ್ಲಿ ಉದಿಸಿದೆ, ಅಜ್ಞಾನದಲ್ಲಿ ಇಪ್ಪ ತೈಜಸಪ್ರಾಜ್ಞರೆಂಬ ಜೀವತ್ರಯಂಗಳು ಹುಟ್ಟಿದವೆಂಬುದೀಗ, ಒಂಟೆಯ ಮರಿ ಮೂರೊಂಟೆಯನಿಕ್ಕಿತ್ತು. ಎಂಬ ಶಬ್ದಕ್ಕರ್ಥ. ಈ ಭೇದವನರಿದು, ಅತ್ಯಂತ ಆರೂಢ ಜ್ಞಾನವನವಧರಿಸಲು, ಆ ಜ್ಞಾನದೊಳಗೆ ಅಜ್ಞಾನವೆಂಬ ಕತ್ತಲೆಯಳಿ



ಯಿತ್ತೆಂಬುದೀಗ, ಕಟ್ಟಗ್ರದಿ ರೂಹೆ ಕತ್ತಲೆಯ ನುಂಗಿತ್ತೆಂಬ ಶಬ್ದಕ್ಕರ್ಥ. ಬೆಟ್ಟವೆಂದರೆ ಅಹಂಕಾರದ ಗಿರಿಯೆಂಬ ಶಬ್ದಕ್ಕರ್ಥ. ಆ ಅಹಂಕಾರದ ಗಿರಿಯನು ಶುಭ್ರವರ್ಣವುಳ್ಳ ಪರಮಹಂಸನೆಂಬ ತತ್ವವ ಗ್ರಹಿಸಿತ್ತೆಂಬುದೀಗ, ಬೆಟ್ಟವ ಬೆಳ್ಳಕ್ಕಿ ನುಂಗಿತ್ತೆಂಬ ಶಬ್ದಕ್ಕರ್ಥ. ಇಂತು ಪರಮಹಂಸನೊಳಗೆ, ಅಹಂಕಾರವಳಿದು, ಜ್ಞಾನಾಗ್ನಿಯಿಂದ ಸರ್ವಾಂಗವು ದಹನವಾಗಿ ನಿಜತತ್ವ ಸಮಾಧಿಯಲ್ಲಿ ಎಚ್ಚತ್ತು ಸ್ವಸ್ಥನಾಗಿ ಕುಳ್ಳಿರಲು ಅದೀಗ ಸುಟ್ಟುದು ಎದ್ದು ಕುಳ್ಳಿರ್ದುದು. ಎಂಬ ಶಬ್ದಕ್ಕರ್ಥ. ಇಂತು ನಿಜ ಸಮಾಧಿಯಲ್ಲಿ ಹಿಡಿಕಟ್ಟನೊಳಗಾದ ಪರಬ್ರಹ್ಮವು ತನ್ನಲ್ಲಿ ಇದಿರಿಟ್ಟು ತೋರದೆ ನಿರ್ವಯಲಾಯಿತ್ತೆಂಬುದೀಗ, ಕಟ್ಟಿದ್ದುದ ತೋರದೆ ಗುಹೇಶ್ವರನಲ್ಲಿಯೆ ಅಡಗಿತ್ತು ನೋಡಾ ಎಂಬ ಶಬ್ದಕ್ಕರ್ಥ.

೧೫. ಸ್ಥೂಲವ ಬ್ರಹ್ಮನಳವಡಿಸಿಕೊಂಡಾ! ಸೂಕ್ಷ್ಮವ ವಿಷ್ಣುವಳವಡಿಸಿಕೊಂಡಾ! ಕಾರಣವ ರುದ್ರನಳವಡಿಸಿಕೊಂಡಾ! ನಿಷ್ಕಾಯವ ಈಶ್ವರನಳವಡಿಸಿಕೊಂಡಾ! ನಿರಂಜನವ ಸದಾಶಿವನಳವಡಿಸಿಕೊಂಡಾ! ನಿರವಯಲವನತೀತನಳವಡಿಸಿಕೊಂಡಾ! ಈ ಷಟ್‌ಸ್ಥಲದವರೆಲ್ಲಾ ಬಯಲನಳವಡಿಸಿಕೊಂಡು ಬಯಲಾಯಿತ್ತು ಕಾಣಾ ಗುಹೇಶ್ವರಾ.

ಟೀಕು:— ಸ್ಥೂಲತನುವಿನ ಹಂಗ ಬ್ರಹ್ಮತತ್ವದಲ್ಲಿ ನಿಲಿಸಿ, ಸೂಕ್ಷ್ಮತನುವಿನ ಹಂಗ ವಿಷ್ಣುತತ್ವದಲ್ಲಿ ನಿಲಿಸಿ, ಕಾರಣ ತನುವಿನ ಹಂಗ ರುದ್ರತತ್ವದಲ್ಲಿ ನಿಲಸಿದನೆಂಬುದೀಗ ಸ್ಥೂಲತನುವ ಬ್ರಹ್ಮನಳವಡಿಸಿಕೊಂಡಾ! ಸೂಕ್ಷ್ಮ ತನುವ ವಿಷ್ಣುವಳವಡಿಸಿಕೊಂಡಾ! ಕಾರಣ ತನುವ ರುದ್ರನಳವಡಿಸಿಕೊಂಡಾ ಎಂಬ ಶಬ್ದಕ್ಕರ್ಥ. ಇಂತೀ ಅಂಗತ್ರಯವು ಅಳಿದು ನಿಃಕಾಯವನು ಈಶ್ವರತತ್ವದಲ್ಲಿಯೆ ನಿಲಿಸಿ, ಆ ನಿಃಕಾಯವಳಿದುಳಿದ ಜ್ಞಾನ ತನುವೇ ಸದಾಶಿವತತ್ವದಲ್ಲಿ ನಿಲಿಸಿ, ಆ ಜ್ಞಾನವಳಿದುಳಿದ ನಿರ್ವಯಲ ಪರಬ್ರಹ್ಮದಲ್ಲಿ ನಿಲಿಸಿದನೆಂಬುದೀಗ ನಿಃಕಾಯವ ಈಶ್ವರನಳವಡಿಸಿಕೊಂಡನು. ನಿರಂಜನವ ಸದಾಶಿವನಳವಡಿಸಿಕೊಂಡನು. ನಿರವಯಲ ವ್ಯೋಮಾತೀತನಳವಡಿಸಿಕೊಂಡನೆಂಬ ಶಬ್ದಕ್ಕರ್ಥ. ಇಂತೀ ಷಡುಸ್ಥಲವು ಷಡ್ಬ್ರಹ್ಮಸ್ಥಲದಲ್ಲಿ ಲೀಯ್ಯವಾಗಲು, ಆ ಶರಣ ನಿರ್ವಯಲಾಗಿ, ಹೋದನೆಂಬುದೀಗ, ಈ ಷಡುಸ್ಥಲದವರೆಲ್ಲಾ ಬಯಲನಳವಡಿಸಿಕೊಂಡು ಬಯಲಾಯಿತ್ತು ಕಾಣಾ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೧೬. ಪೃಥ್ವಿಯೊಳಗಿಲ್ಲಾ! ಆಕಾಶದೊಳಗಿಲ್ಲಾ! ಚತುರ್ದಶಭುವನಾಭುವನಂಗಳೊಳಗೆಯೂ ಇಲ್ಲಾ! ಹೊರಗೆಯೂ ಇಲ್ಲಾ! ಏನಾಯಿತ್ತೆಂದರಿಯೆನಯ್ಯಾ! ಗುಹೇಶ್ವರಾ ಅಂದೂ ಇಲ್ಲ. ಇಂದೂ ಇಲ್ಲ. ಎಂದೂ ಇಲ್ಲ.

ಟೀಕುಃ— ಪಂಚಭೂತಂಗಳು ಮುಖ್ಯವಾದ ಅನಂತ ಲೋಕಂಗಳೊಳಗೆ, ಹೊರಗೆ ಶಿವನು ಪ್ರತ್ಯಕ್ಷವಾದರೆ ಸಚರಾಚರ ಜೀವರಾಸಿಗಳಿಗೆ ಭವಬಂಧನವೇಕೆ ಪ್ರಾಪ್ತಿಸಿತ್ತು. ಪುಣ್ಯಪಾಪಂಗಳೇಕೆ ಸಂಕಲ್ಪವಾಯಿತ್ತೆಂಬ ಕಾರಣವುಂಟೆಂಬ ಮಾತು ಹುಸಿ, ಇಲ್ಲೆಂಬ ಮಾತು ಮುನ್ನವೆ ಹುಸಿ, ಮತ್ತೆಲ್ಲಿಪ್ಪುದೆಂದರೆ, ಆದಿಮಧ್ಯಾಂತವೆಂಬ ತ್ರಿವಿಧವು ಅಳಿದ ಮಹಾಲಿಂಗದಲ್ಲಿ ಐಕ್ಯವಾದ ಶರಣಂಗೆ ಕಾಯವಿಲ್ಲ. ಕಾಯವಿಲ್ಲದ ಕಾರಣ ಏನುವನು ಉಪಮಿಸಲಿಲ್ಲದ ಕಾರಣ ಅದೆ ಮಹಾಲಿಂಗೈಕ್ಯವೆಂಬುದೀ ವಚನದ ತಾತ್ಪರ್ಯಾರ್ಥ.

೧೭. ಹುಟ್ಟುವಾತ ನಾನಲ್ಲಯ್ಯ! ಹೊಂದುವಾತ ನಾನಲ್ಲಯ್ಯ! ಏನೆಂಬೆನಯ್ಯ! ಅದೆಂತೆಂಬೆನಯ್ಯ! ನಿಜವನರಿದ ಬಳಿಕ ಮರಳಿ ಹುಟ್ಟುಲುಂಟೆ ಗುಹೇಶ್ವರಾ?

ಟೀಕುಃ— ತನ್ನ ನಿಜವ ತಾನೆ ಅರಿದು, ಮಹಾಲಿಂಗದಲ್ಲಿ ಐಕ್ಯನಾದ ಶರಣಂಗೆ, ಉತ್ಪತ್ತಿಸ್ಥಿತಿಗತಿರಹಿತವಾಗಿ ನಿಜತತ್ವಸ್ವರೂಪನಾಗಿದ್ದನೆಂಬುದೀ ವಚನದ ತಾತ್ಪರ್ಯಾರ್ಥ.

೧೮. ಅರಿದೆನೆಂಬುದು ತಾ ಬಯಲು, ಅರಿಯೆನೆಂಬುದು ತಾ ಬಯಲು, ಅರುಹಿನ ಕುರುಹಿನ ಮರವೆಯೊಳಗೆ ಗುಹೇಶ್ವರನೆಂಬುದು ತಾ ಬಯಲು.

ಟೀಕುಃ— ನಿಜವನರಿದು, ಅರಿಯದಂತಿರಲೊಲ್ಲದೆ, ಅರಿದೆನೆಂದು, ಇದಿರಿಂಗೆ ತೋರಿ ಮಾಡುವ ಮಾತು ಮಿಥ್ಯ. ಪರಬ್ರಹ್ಮವು ತಾನಾಗಿದ್ದು, ಅದನರಿಯದೆ ನಿಜತತ್ವವನರಿದೆನೆಂದು ನುಡಿವ ಜ್ಞಾನಾಜ್ಞಾನದ ಮಾತು ತಾನು ಮಿಥ್ಯ. ಅರುಹಿನ ಕುರುಹು ತಾನೆಂದರಿದು, ಕುರುಹ ಮರೆದು ನಿರ್ವಯಲಾದನೆ, ಅವೇ ಲಿಂಗೈಕ್ಯವೆಂಬುದೀ ವಚನದ ತಾತ್ಪರ್ಯಾರ್ಥ.



೧೯. ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು. ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು. ವಾಯುವಿನ ಸಂಚದ ಪರಿಮಳದ ನಿಲುವಿನಂತೆ ಲಿಂಗೈಕ್ಯನ ಸಂಬಂಧವಿದು ಗುಹೇಶ್ವರಾ.

ಟೀಕುಃ— ನಿರ್ಮಲ ಮಹಾಲಿಂಗದಲ್ಲಿ ಐಕ್ಯವಾದ ಪರಿಯೆಂತೆಂದಡೆ, ಮುತ್ತಿನೊಳಗೆ ಕರಿಗೊಂಡಿಪ್ಪ ಸುಪ್ಪಾಣಿಯಂತೆ, ಸ್ಫಟಿಕದ ಘಟದೊಳಗಿಪ್ಪ ನಿರ್ಮಲದಂತೆ, ವಾಯುವಿನೊಳಗಡಗಿದ ಪರಿಮಳದ ನಿಲವಿನಂತೆ, ಭಿನ್ನವಿಲ್ಲದೆ ಲಿಂಗೈಕ್ಯವಾಗಿಪ್ಪುದೆಂಬುದೀ ವಚನದ ತಾತ್ಪರ್ಯಾರ್ಥ.

೨೦. ಅರಿದರಿದು, ಅರಿವು ಬಂಜೆಯಾಯಿತ್ತು. ಮರಮರದು ಮರಹು ಬಂಜೆಯಾಯಿತ್ತು. ಗುಹೇಶ್ವರನೆಂಬ ಶಬ್ದ ನಿನೆ ಬಂಜೆಯಾಯಿತ್ತು.

ಟೀಕುಃ— ತನ್ನ ತಾನರಿದ ಬಳಿಕ ಅನ್ಯವಿಟ್ಟುಕಾಂಬ ಅರಿವು ನಷ್ಟವಾಯಿತ್ತು. ಆ ಅರಿವು ನಷ್ಟವಾದಲ್ಲಿ ಆ ಅರಿವಿನ ಮರವೆಯು ನೆರೆ ಮರೆದ ಬಳಿಕ, ಅಲ್ಲಿ ನಿಃಶಬ್ದವಾಯಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

೨೧. ಹಸಿವಿನ ಪ್ರೇಮಕ್ಕೆ ಬೋನವ ಹಿಡಿವರು. ತೃಷೆಯ ಪ್ರೇಮಕ್ಕೆ ಮಜ್ಜನಕ್ಕೆರೆವರು. ದೇವರಿಲ್ಲ ಭಕ್ತರಿಲ್ಲ. ನಾನು ಇಲ್ಲ ನೀನು ಇಲ್ಲ, ಗುಹೇಶ್ವರಾ, ಪೂಜಿಸುವರೂ ಇಲ್ಲಾ ಪೂಜೆಗೊಂಬವರೂ ಇಲ್ಲ.

ಟೀಕುಃ— ಲಿಂಗದಲ್ಲಿ ನಿಜವನರಿಯದವರು ಅವಿರಳ ಲಿಂಗಾರ್ಚನೆಯನರಿಯದೆ ಕೆಡುತ್ತಿದ್ದರು. ತನ್ನ ಸ್ವರೂಪವ ನರಿದ ನಿಜ ಶರಣ, ತಾನೆ ಲಿಂಗವಾಗಿಪ್ಪನಾಗಿ, ಆವ ಪೂಜೆಯ ಜಂಜಡವು ಇಲ್ಲದೆ ದೇವ ಭಕ್ತನೆಂಬ ಉಭಯ ನಾಮವು ಇಲ್ಲದೆ ಇದ್ದನೆಂಬುದೀ ವಚನದ ತಾತ್ಪರ್ಯಾರ್ಥ.

೨೨. ಎರಡೆಂಭತ್ತು ಕೋಟಿ ವಚನವ ಹಾಡಿ, ಹಲವ ಹಂಬಲಿಸಿತ್ತೆನ್ನ ಮನವು ಮನವನರಿಯದು. ಘನ ಮನವನರಿಯದು, ಗುಹೇಶ್ವರನೆಂಬ ಲಿಂಗವನರಿದ ಬಳಿಕನಿತವೆಲ್ಲ ಒಂದು ಮಾತಿನೊಳಗು.

ಟೀಕುಃ— ಮನವು ಘನದಲ್ಲಿ ವಿಶ್ರಾಂತಿಯನೆಯ್ದುವೆ, ಘನವು ಮನದಲ್ಲಿ ವಿಶ್ರಾಂತಿಯನೆಯ್ದಡೆ, ಹೇಗೆ ಲಿಂಗವ ಭಜಿಸಿ ಹಾಡಿದಡು ಪ್ರಯೋ

ಜನವಿಲ್ಲ. ಆ ಮನದ ತಾಳೋಷ್ಠಸಂಪುಟದ ಮಥನವಡಗಿದಡೆ, ಆತನೆ ಲಿಂಗೈಕ್ಯನೆಂಬುದೀ ವಚನದ ತಾತ್ಪರ್ಯಾರ್ಥ.

೨೩. ಅವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯರೆಲ್ಲ ಬಂದು ಬೆಂಡ ದಂಡೆಯನೆ ಮುಡಿಸಿ, ಅಂಡಜವೆಂಬ ಅರಿಷಿಣವ ಮಿಂದು, ಉರಿಯೆಂಬ ಹಚ್ಚಡದ ಹೊದಿಕೆಯಲ್ಲಿ ನಿಬ್ಬಣಗಿತ್ತಿಯರು ಬಪ್ಪ ಬರವ ಕಂಡು, ನೀರವಾಡಿಗೆಯ ಮಾಡಿ, ವಾಯದ ಕೂಸಿಂಗೆ ಮಾಯದ ಮದವಣಿಗ, ಸಂಗಸಂಯೋಗವಿಲ್ಲದೆ ಬಸುರಾಯಿತ್ತು. ಕೂಸೆದ್ದು ಕುಣಿದಾಡಿ, ಸೂಲಗಿತ್ತಿಯನವಗ್ರಹಿಸಿತ್ತು. ಗುಹೇಶ್ವರನೊಬ್ಬ ಇಬ್ಬ ಮೂವರು ತ್ರಿದೇವತೆಗಳು ಬಲ್ಲರೆ ಆ ಲಿಂಗದ ಘನವೆಯಾ.

ಟೀಕು:— ಶರಣನೆಂಬ ಸತಿಗೂ ಲಿಂಗವೆಂಬ ಪತಿಗೂ, ಸಂಗ ಸಮರತಿಯುಹ ಕಾಲವೇ ವಿವಾಹವಾಗಿಪ್ಪುದಾಗಿ, ಅದೀಗ, ಅವಿರಳ ವಿಟನ ಮದುವೆಯೆಂಬ ಶಬ್ದಕ್ಕರ್ಥ. ಆ ಸಂಗ ಸಮರತಿಯುಹ ಕಾಲದಲ್ಲಿ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಮಂತ್ರಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿಯೆಂಬ ಷಡುಶಕ್ತಿಯರೆಲ್ಲರೂ, ಆ ಸಂಗಕ್ಕೆ ಅನೂಕೂಲಭಾವವನೆಯ್ದಿ ಸುಜ್ಞಾನಾಗ್ನಿಯನೆ ಮುಡಿದುಕೊಂಡರೆಂಬ ಶಬ್ದಕ್ಕರ್ಥ. ಅಂಡವೆಂದರೆ ಚಿದ್ಬ್ರಹ್ಮಾಂಡ, ಜಾಯೆಂದರೆ, ಅಲ್ಲಿಂದ ಹುಟ್ಟಿದ ಸುಜ್ಞಾನಕ್ರಿಯೆಗಳು ಅಂತಪ್ಪ ಸುಜ್ಞಾನ ಕ್ರಿಯೆಗಳನೆ, ಅಂಗಲೇಪನ ಮಾಡಿಕೊಂಡು, ಆ ಶರಣನಲ್ಲಿ ಷಡುಶಕ್ತಿಯರು ಆ ತತ್ವದಲ್ಲಿ ಏಕರಸಭಾವವನೆಯ್ದುವದಕ್ಕೆ ಉದ್ಯೋಗವಾಗುತ್ತಿಪ್ಪಲ್ಲಿಯೆಂಬುದೀಗ, ಅಂಡಜವೆಂಬ ಅರಿಸಿನವ ಮಿಂದು ಉರಿಎಂಬ ಹಚ್ಚಡದ ಹೊದಿಕೆಯಲ್ಲಿ ನಿಬ್ಬಣಗಿತ್ತಿಯರು ಬಪ್ಪ ಬರವ ಕಂಡೆನೆಂಬ ಶಬ್ದಕ್ಕರ್ಥ. ಇಂತೀ ಸಮರಸಕ್ಕೆ ಬಪ್ಪ ಕಾಲದೊಳು ನೀರೆಂದರೆ ಮನ, ಆ ಮನವ ಪರಮಾನಂದ ರಸವಪ್ಪಂತು ಆ ಜ್ಞಾನದಿಂದ ಪಾಕವ ಮಾಡಿ, ಆ ವಸ್ತುವಿನಲ್ಲಿ ಸಮವೇಧಿಸಲು, ಸತಿ ಭಾವವು ಇಲ್ಲದೆ ಪತಿಯೆಂಬ ಭಾವವು ಇಲ್ಲದೆ ಆ ಸಂಯೋಗ ಸಂಬಂಧವೆ ಸಮರತಿಯಾಗಿ ತನ್ನ ನಿಜವು ತನ್ನಲ್ಲಿ ಗರ್ಭೋತ್ಪತ್ತಿಯಾಯಿತ್ತೆಂಬುದೀಗ, ನೀರವಾಡಿಗೆಯ ಮಾಡಿ ವಾಯದ ಕೂಸಿಂಗೆ ಮಾಯದ ಮದವಣಿಗ, ಸಂಗಸಂಯೋಗವಿಲ್ಲದೆ, ಬಸುರಾಯಿತ್ತೆಂಬ ಶಬ್ದಕ್ಕರ್ಥ. ಇಂತು ತನ್ನ ನಿಜವು ತನ್ನಲ್ಲಿ ಹುಟ್ಟಿದ ಆ ನಿಜದ ನಿಲವು ಸ್ವಲೀಲಾಪರವನೆಯ್ದಿ ಪರಮಾನಂದದಲ್ಲಿ ಓಲಾಡಿ ಚಿಚ್ಛಕ್ತಿಯನವಗ್ರಹಿಸಿ ನಿಂದಿತ್ತೆಂಬುದೀಗ, ಕೂಸೆದ್ದು



ಕುಣಿದಾಡಿ, ಸೂಲಗಿತ್ತಿಯನವಗ್ರಹಿಸಿತೆಂಬ ಶಬ್ದಕ್ಕರ್ಥ. ಇಂತಪ್ಪ ಮಹಾಶರಣನ ನಿಲವನು ಬ್ರಹ್ಮ, ವಿಷ್ಣು, ರುದ್ರ, ಮೊದಲಾದವರು ಅರಿಯರೆಂಬುದೀಗ, ಗುಹೇಶ್ವರ ಒಬ್ಬ ನಿಬ್ಬ ಮೂವರು ತ್ರಿದೇವತೆಗಳು ಬಲ್ಲರೆ ಆ ಲಿಂಗವ ಘನವನು ಎಂಬ ಶಬ್ದಕ್ಕರ್ಥ.

೨೪. ಸತ್ತಾತನೊಬ್ಬ, ಹೊತ್ತಾತನೊಬ್ಬ ಇವರಿಬ್ಬರನು ಒಯ್ದು ಸುಟ್ಟಾತನೊಬ್ಬ, ಮದವಣಿಗನಾರೊ ಮದವಳಿಗೆಯಾರೊ? ಮದುವೆಯ ನಡುವೆ ಮರಣ ಅಡ್ಡಬಿದ್ದಿತ್ತು. ಹಸೆಯಳಿಯದ ಮುನ್ನ ಮದವಣಿಗನಳಿದ ಗುಹೇಶ್ವರಾ ನಿಮ್ಮ ಶರಣನೆಂದೂ ಅಳಿಯ.

ಟೀಕು:— ಶರಣನಲ್ಲಿ ಲಿಂಗೈಕ್ಯವಾಗಲು, ಆ ಶರಣ ಆ ಲಿಂಗವನು ಶರಣಮುಖಲಿಂಗವಾಗಿ, ಧರಿಸಿಕೊಂಡಿರುತ್ತಿರಲು, ಅಲ್ಲಿ ಲಿಂಗಶರಣ, ಶರಣಲಿಂಗವೆಂಬ ದ್ವೈತಭಾವವನು ಮಹಾಜ್ಞಾನಾಗ್ನಿಯಿಂದ ದಹನವ ಮಾಡಿ, ಅದೀಗ, ಸತ್ತಾತನೊಬ್ಬ ಹೊತ್ತಾತನೊಬ್ಬ ಇಬ್ಬರನು ಒಯ್ದು ಸುಟ್ಟಾತನೊಬ್ಬನೆಂಬ ಶಬ್ದಕ್ಕರ್ಥ. ಇಂತು ಜ್ಞಾನಾಗ್ನಿಯಲ್ಲಿ ಜ್ಞಾತೃಜ್ಞಾನಂಗಳೆರಡು ಏಕರಸವಾಗಲು, ಶರಣಸತಿ ಲಿಂಗಪತಿ ಎಂಬ ಭಾವ ಕೈಗೂಡದ ಮುನ್ನವೆ ಉಭಯವು ನಾಸ್ತಿಯಾಯಿತ್ತೆಂಬುದೀಗ, ಮದವಣಿಗನಾರೊ, ಮದವಳಿಗಿತ್ತಿಯಾರೋ ಮದುವೆಯ ನಡುವೆ ಮರಣವಡ್ಡಬಿದ್ದಿತ್ತೆಂಬ ಶಬ್ದಕ್ಕರ್ಥ. ಹಸಿ ಎಂದರೆ ಸದಾಚಾರ, ಆ ಸದಾಚಾರವಿದ್ದಂತೆ ಇದ್ದಿತ್ತು. ಆ ಲಿಂಗವೆಂಬ ಭಾವವಳಿದು, ನಿರ್ಭಾವ ಉಳಿಯಿತ್ತೆಂಬುದೀಗ, ಹಸಿಯುಳಿಯದ ಮುನ್ನ ಮದವಣಿಗನಳಿದ ಗುಹೇಶ್ವರಾ ನಿಮ್ಮ ಶರಣನೆಂದೂ ಅಳಿಯನೆಂಬ ಶಬ್ದಕ್ಕರ್ಥ.

೨೫. ಪಾದವಿಲ್ಲದ ಗುರುವಿಂಗೆ ತಲೆ ಇಲ್ಲದ ಶಿಷ್ಯನು. ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು. ಈ ಗುರುಶಿಷ್ಯರಿಬ್ಬರೂ ಸತ್ತ ಸಾವ ನಿಮ್ಮಲ್ಲಿ ಅರಸುವೆ ಗುಹೇಶ್ವರಾ.

ಟೀಕು:— ಪಾದವೆಂದರೆ ಆಚಾರದ ಚರ್ಯೆ. ಆ ಆಚಾರದ ಚರ್ಯೆ ಮರಿತು ಸುಜ್ಞಾನ ಪರಿಪೂರ್ಣವಾದ ಚಿದ್ಗುರುವಿಂಗೆ, ತಲೆ ಎಂಬ ವೃತ್ತಿಜ್ಞಾನವಿಲ್ಲದ ಅಖಂಡ ಜ್ಞಾನವುಳ್ಳಾತನೆ ಶಿಷ್ಯನೆಂಬುದೀಗ, ಪಾದವಿಲ್ಲದ ಗುರುವಿಂಗೆ, ತಲೆ ಇಲ್ಲದ ಶಿಷ್ಯನೆಂಬ ಶಬ್ದಕ್ಕರ್ಥ. ಇಂತು ಆಚಾರವೆಂಬುವಳಿದು, ನಿರ್ಗಮನಿಯಮದ ಗುರುವಿನಲ್ಲಿ ಭಿನ್ನ ವ್ರತ ನಿಯಮಂ

ಗಳಳಿಮು, ಅಲ್ಲಿ ಲೀನವಾದ ಶಿಷ್ಯನು ನಿಸ್ತರಂಗ ಯುಕ್ತನೆಂಬುದೀಗ, ಅನಾಚಾರಿ ಗುರುವಿಂಗೆ, ವ್ರತಗೇಡಿ ಶಿಷ್ಯನು ಎಂಬ ಶಬ್ದಕ್ಕರ್ಥ. ಈ ಗುರುಶಿಷ್ಯರೆಂಬ ಎರಡು ಭಾವವು ಸಮರಸವಾಗಿ. ಪರಬ್ರಹ್ಮದಲ್ಲಿ ಐಕ್ಯವಾದುದನು ನಿಜತತ್ವದಲ್ಲಿಯೆ ಕಾಣಬಹುದೆಂಬುದೀಗ, ಈ ಗುರುಶಿಷ್ಯರಿಬ್ಬರೂ ಸತ್ತ ಸಾವ ನಿಮ್ಮಲ್ಲಿ ಅರಸುವೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೬. ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತನು ಬ್ರಹ್ಮನು. ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತನು ವಿಷ್ಣುವು. ಉತ್ತಮಾಂಗದಲ್ಲಿ ಲಿಂಗವ ಧರಿಸಿ ಕೊಂಡಾತನು ರುದ್ರನು. ಅಮಳೋಕ್ಯದಲ್ಲಿ ಲಿಂಗವ ಧರಿಸಿ ಕೊಂಡಾತನು ಈಶ್ವರನು. ಮುಖಸೆಜ್ಜೆಯಲ್ಲಿ ಲಿಂಗವ ಧರಿಸಿ ಕೊಂಡಾತನು ಸದಾಶಿವನು. ಅಂಗಸೆಜ್ಜೆಯಲ್ಲಿ ಲಿಂಗವ ಧರಿಸಿ ಕೊಂಡಾತನು ಉಪಮಾತೀತನು. ಇವರೆಲ್ಲರು ಬಯಲನೆ ಪೂಜಿಸಿ ಬಯಲಾಗಿ ಹೋದರು. ನಾ ನಿತ್ಯವ ಪೂಜಿಸಿ ಮಿಥ್ಯವನಳಿದ ಇರವಿನಲ್ಲಿ ಸುಖಿಯಾದೆನು ಗುಹೇಶ್ವರಾ.

ಟೀಕು:— ಬ್ರಹ್ಮ ತತ್ವದ ಸುಚಿತ್ತವೆಂಬ ಕಕ್ಷವಲ್ಲಿ ಆಚಾರಲಿಂಗ ಗ್ರಹಣವಾಯಿತ್ತೆಂಬುದೀಗ, ಕಕ್ಷೆಯಲ್ಲಿ ಲಿಂಗವ ಧರಿಸಿ ಕೊಂಡಾತನು ಬ್ರಹ್ಮನು ಎಂಬ ಶಬ್ದಕ್ಕರ್ಥ. ವಿಷ್ಣುತತ್ವದ ಸುಬುದ್ಧಿ ಎಂಬ ಕೃತನಿಶ್ಚಯ ಹಸ್ತದಲ್ಲಿ ಗುರುಲಿಂಗ ಗ್ರಹಣವಾಯಿತ್ತೆಂಬುದೀಗ, ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತ ವಿಷ್ಣುವು ಎಂಬ ಶಬ್ದಕ್ಕರ್ಥ. ರುದ್ರತತ್ವದ ಅಹಂಕಾರವೆಂಬುದರ ಮಸ್ತಕದ ಮೇಲೆ, ಶಿವಲಿಂಗ ಗ್ರಹಣವಾಯಿತ್ತೆಂಬುದೀಗ, ಉತ್ತಮಾಂಗದಲ್ಲಿ ಲಿಂಗವ ಧರಿಸಿ ಕೊಂಡಾತನು ರುದ್ರನು ಎಂಬ ಶಬ್ದಕ್ಕರ್ಥ. ಈಶ್ವರ ತತ್ವದ ಅಂತರಂಗದಲ್ಲಿ ಜಂಗಮಲಿಂಗ ಗ್ರಹಣವಾಯಿತ್ತೆಂಬುದೀಗ, ಅಮಳೋಕ್ಯದಲ್ಲಿ ಲಿಂಗವ ಧರಿಸಿ ಕೊಂಡಾತನು ಈಶ್ವರನು ಎಂಬ ಶಬ್ದಕ್ಕರ್ಥ. ಸದಾಶಿವ ತತ್ವದ ಮುಖ ಸೆಜ್ಜೆಯೊಳಗೆ, ಪ್ರಸಾದಲಿಂಗ ಗ್ರಹಣವಾಯಿತ್ತೆಂಬುದೀಗ, ಮುಖಸೆಜ್ಜೆಯಲ್ಲಿ ಲಿಂಗವ ಧರಿಸಿ ಕೊಂಡಾತನು ಸದಾಶಿವನು ಎಂಬ ಶಬ್ದಕ್ಕರ್ಥ. ಉಪಮಾತೀತ ತತ್ವದ ಸರ್ವಾಂಗದಲ್ಲಿ ಮಹಾಲಿಂಗ ಗ್ರಹಣವಾಯಿತ್ತೆಂಬುದೀಗ, ಅಂಗಸೆಜ್ಜೆಯಲ್ಲಿ ಲಿಂಗವ ಧರಿಸಿ ಕೊಂಡಾತನು ಉಪಮಾತೀತನು ಎಂಬ ಶಬ್ದಕ್ಕರ್ಥ. ಈ ಆರುತತ್ವಂಗಳೊಳಗೆ ಷಡುಲಿಂಗಸ್ಥಲಂಗಳು ಐಕ್ಯವಾಗಿ ನಿರ್ವಯಲಾಗಲು, ಅಲ್ಲಿ ಶರಣನು ನಿತ್ಯಪರಿಪೂರ್ಣನು ತಾನಾಗಿ



ಮಾಯಾ ಮಿಥ್ಯವನಳಿದುಳಿದು ಇದ್ದನೆಂಬುದೀಗ ಇವರೆಲ್ಲರು ಬಯಲನೆ ಪೂಜಿಸಿ ಬಯಲಾಗಿ ಹೋದರು ನಾನು ನಿತ್ಯವ ಪೂಜಿಸಿ ಮಿಥ್ಯವನಳಿದ ಇರವಿನಲ್ಲಿ ಸುಖಿಯಾದೆನು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೭. ಹೊರಗನೆ ಕೊಯ್ದು, ಹೊರಗನೆ ಪೂಜಿಸಿ, ಹೊರಗಾಗಿ ಹೋಯಿತ್ತು ತ್ರಿಜಗವೆಲ್ಲ. ಅದನರಿಯದಂತೆ ಲಿಂಗವ ಪೂಜಿಸ ಹೋದರೆ ಕೈ ಲಿಂಗದಲ್ಲಿ ಸಿಲ್ಕಿತ್ತಲ್ಲಾ! ಮನ ದೃಢದಿಂದ ನಿಮ್ಮ ನೆನದಿಹೆನೆಂದರೆ, ತನು ಸಂದಣಿಸಿತ್ತು ಗುಹೇಶ್ವರಾ.

ಟೀಕು:— ಲಿಂಗದ ನಿಜವ ನರಿಯದೆ, ಅಜ್ಞಾನದಿಂದ ಲಿಂಗಾರ್ಚನೆಯ ಮಾಡುವರೆಲ್ಲರ ಲಿಂಗಾರ್ಚನೆಯು ಮಿಥ್ಯೆಯಾಗಿ ಹೋಯಿತ್ತೆಂಬುದೀಗ, ಹೊರಗನೆ ಕೊಯ್ದು, ಹೊರಗನೆ ಪೂಜಿಸಿ, ಹೊರಗಾಗಿ ಹೋಯಿತ್ತು ತ್ರಿಜಗವೆಲ್ಲ ಎಂಬ ಶಬ್ದಕ್ಕರ್ಥ. ನಿಜವನರಿವ ಶರಣ ಲಿಂಗಾರ್ಚನೆಗೆ ಕೈದುಡುಕದ ಮುನ್ನವೆ ತಾನೆ ಲಿಂಗವೆಂದರಿಯಲು, ಕೃತನಿಶ್ಚಯವೆಂಬ ಹಸ್ತ, ಆ ಲಿಂಗದಲ್ಲಿ ಪರವಶವಾಯಿತ್ತೆಂಬುದೀಗ, ಅದನರಿದಂತೆ, ಲಿಂಗವ ಪೂಜಿಸ ಹೋದರೆ ಕೈ ಲಿಂಗದಲ್ಲಿ ಸಿಲ್ಕಿತ್ತಲ್ಲಾ ಎಂಬ ಶಬ್ದಕ್ಕರ್ಥ. ಆ ಲಿಂಗವ ಮನವಮುಟ್ಟಿ, ನೆನೆದಿಹೆನೆಂದು ಉದ್ಯೋಗಿಸುತ್ತಿರಲು, ಸರ್ವಾಂಗ ಲಿಂಗವಾಯಿತ್ತೆಂಬುದೀಗ, ಮನ ದೃಢದಿಂದ ನೆನೆದಿಹೆನೆಂದರೆ ತನು ಸಂದಣಿಸಿತ್ತು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೨೮. ಶಯನಾಸನಪರವಿಲ್ಲೆಂದುದು, ಜ್ಞಾನಾಜ್ಞಾನ ನೋಟತಾನಲ್ಲಾ! ಅರಿವಿನ ಭಾವ ಸ್ವತಂತ್ರವಿಲ್ಲ ಕಾಣಾ! ಆ ಕಾಯದಲ್ಲಿ ಅದ್ವೈತಚಾರಿತ್ರ ಅರಿವಿನಲನುಗ್ರಹಿಸಿ, ಸಕಾಯದಲ್ಲಿ ಸದ್ವೈವ ಚರಿತ್ರ ಮರಹು ಉದಯಿಸದ ನಿರ್ಣಯ ಪವನ ಬ್ರಹ್ಮರಂಧ್ರರಹಿತ ಶಯನಾಸನವೆಂದಲ್ಲಿ ಗುಹೇಶ್ವರನೆನಲು ಹೇಸಿತ್ತು.

ಟೀಕು:— ತನ್ನ ತಾನರಿದ ಶರಣಂಗೆ ಶಯನವ ಮಾಡುವಡೆ, ಪರಸ್ಥಾನವಿಲ್ಲ. ಶಯನವೆಂದೇನು ಎಂದಡೆ ತನ್ನ ತಾನೆ ಮೈಮರೆದಿಹ, ಅಂತಹ ಮೈಮರಹವೆ ತನ್ನಲಲ್ಲದೆ ಅನ್ಯವಿಲ್ಲ. ಆಸನವೆಂದಡೆ ಕುಳ್ಳಿರುಹ, ಆ ಶರಣ ತನ್ನ ತಾನು ನಿಜ ಸಮಾಧಿಯಲ್ಲಿ ಕುಳ್ಳಿದ್ದನೆಂದರೆ ಬೇರೊಂದು ಆಸನಕ್ಕೆ ತಾವಿಲ್ಲವೆಂಬುದೀಗ ಶಯನಾಸನ ಪರವಿಲ್ಲೆಂದು ಎಂಬ ಶಬ್ದಕ್ಕರ್ಥ. ಈ ನಿಜವ ಜ್ಞಾನಾಜ್ಞಾನ ವಿಷಯದಿಂದ ನೋಡಿಹೆನೆಂದರೆ,

ಅದು ನೋಟವಲ್ಲ. ಅದೇನು ಕಾರಣವೆಂದರೆ, ಅರಿವು ಸ್ವತಂತ್ರ ಭಾವದಿಂದ ತನ್ನ ತಾ ಭಾವಿಸಲ್ಲರಿಯದಾಗಿ, ಅದೀಗ ಜ್ಞಾನಾಜ್ಞಾನ ಭಾವ ತಾ ನೋಟವಿಲ್ಲ ಅರಿವಿನ ಭಾವ ಸ್ವತಂತ್ರವಿಲ್ಲನೆಂಬ ಶಬ್ದಕ್ಕರ್ಥ. ಈ ಭೇದವನರಿದ, ಮಹಂತನು ಅಕಾಯದಲ್ಲಿ ಅಪ್ರೈತ ಚರಿತ್ರನಾಗಿ, ಅರಿವು ನಿಜವಾಗಿ, ಸಕಾಯದಲ್ಲಿ ಸಪ್ರೈವ ಚರಿತ್ರನಾಗಿ, ಮರಹುವಿಡಿದ ನಿರ್ಣಯದ ಯೋಗವಿರಹಿತನಾಗಿ ಭಿನ್ನಭಾವವಳಿದು, ನಿಜವನೆಯ್ದಿದನೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೨೯. ನೀರಿಲ್ಲದ ಒರಳಿಂಗೆ ನೆಳಲಿಲ್ಲದ ಒನಿಕೆ, ರೂಹಿಲ್ಲದ ನಾರಿಯರು, ಬೀಜವಿಲ್ಲದ ಅಕ್ಕಿಯ ತಳಿಸುತ್ತಲಿ, ಬಂಜೆಯ ಮಗನ ಜೋಗುಳವಾಡುತ್ತೈದಾರೆ. ಉರಿಯು ಚಪ್ಪರವನಿಕ್ಕಿ ಗುಹೇಶ್ವರನ ಕಂದನುಲಿವೆಯುನಾಡಿದನು.

ಟೀಕುಃ— ನೀರೆಂದರೆ ಮನಸ್ಸು, ಆ ಮನದ ಸಂಕಲ್ಪ ವಿಕಲ್ಪವಳಿದ ತನುವೆಂಬ ಒರಳಿನಲ್ಲಿ ಏಕೋಭಾವವೆಂಬ ಒನಿಕೆಯ ದೃಢವಿಡಿದು ಷಡುಶಕ್ತಿಯರೆಂಬ ನಾರಿಯರು ನಿರ್ಬೀಜವಪ್ಪ ಸತ್ತೆಂಬ ತಂಡುಲವ ನಿರ್ಮಲವಪ್ಪಂತು ಮಥನವ ಮಾಡುತ್ತಿರಲು, ಅದೀಗ ನೀರಿಲ್ಲದ ಒರಳಿಂಗೆ ನೆಳಲಿಲ್ಲದ ಒನಕ್ಕೆ ರೂಹಿಲ್ಲದ ನಾರಿಯರು ಬೀಜವಿಲ್ಲದ ಅಕ್ಕಿಯ ತಳಿಸುತ್ತೈದಾರೆ ಎಂಬ ಶಬ್ದಕ್ಕರ್ಥ. ಇಂತಾಗಲು, ಅಜಾತನೆಂಬ ಶಿವತತ್ವ ನಿಜದಿಂದ ಉದಯವಾಗಲು, ಆ ಶಕ್ತಿಗಳೆಲ್ಲವು ಏಕರಸವಾಗಿ ಶಿವೋಹಂ ಶಿವೋಹಂ ಎಂಬ ಭಾವವನೆಯ್ದಿದುವೆಂಬುದೀಗ, ಬಂಜೆಯ ಮಗನ ಜೋಗುಳವಾಡುತ್ತೈದಾರೆ ಎಂಬ ಶಬ್ದಕ್ಕರ್ಥ. ಆ ಶಿವೋಹಂಮೆಂಬ ಸುಖದಾನಂದದಿಂದ ಮಹಾಜ್ಞಾನವೆಂಬ ಮಂಟಪದೊಳಗೆ, ಓಲಾಡುತ್ತಿದ್ದನೆಂಬುದೀಗ, ಉರಿಯ ಚಪ್ಪರವನಿಕ್ಕಿ ಗುಹೇಶ್ವರನ ಕಂದನು ಲೀಲೆಯುಲಾಡಿದನು ಎಂಬ ಶಬ್ದಕ್ಕರ್ಥ.

೩೦. ಅರಿದು ನೆನೆಯಲಿಲ್ಲ, ಮರೆದು, ಪೂಜಿಸಲಿಲ್ಲ, ತೆರಹಿಲ್ಲದ ಘನಕ್ಕೆ ಕುರಹು ಮುನ್ನಿಲ್ಲ. ತನಗೆ ಗುರುವಿಲ್ಲ. ಗುರುವಿಂಗೆ ತಾನಿಲ್ಲ! ಗುರುವಿಗೆ ಶಿಷ್ಯನು ಹೊಡೆವಡದ ಕಾರಣ ಮುನ್ನಿಲ್ಲ. ಬಯಲ ಬಿತ್ತಲು ಇಲ್ಲ. ಬೆಳೆಯಲು ಇಲ್ಲ. ಒಕ್ಕಲೂ ಇಲ್ಲ. ತೋರಲೂ ಇಲ್ಲ. ಗುಹೇಶ್ವರನೆಂಬ ಲಿಂಗಕ್ಕೆ ಕುರುಹು ಮುನ್ನಿಲ್ಲ.



ಟೀಕುಃ— ತಾನಾರೆಂಬುದ ತಿಳಿದು, ನೋಡಿ, ತನ್ನ ತಾನರಿದಬಳಿಕ, ಮತ್ತೊಂದ ನೆನೆಯಲಿಲ್ಲವೆಂಬುದೀಗ, ಅರಿದು ನೆನೆಯಲಿಲ್ಲವೆಂಬ ಶಬ್ದಕ್ಕರ್ಥ. ಲಿಂಗವೆಂದು ಇದಿರಿಟ್ಟು ತೋರುವ ಭಾವವ ಮರೆದು ಲಿಂಗ ಲಿಂಗಲೆಪವಾದ ಬಳಿಕ ಪೂಜಿಸುವುದು ನಾಸ್ತಿಯಾಯಿತ್ತೆಂಬುದೀಗ, ಮರೆದು ಪೂಜಿಸಲಿಲ್ಲವೆಂಬ ಶಬ್ದಕ್ಕರ್ಥ. ಇಂತಾಗಲು ತೆರಹಿಲ್ಲದ ಘನವು ಬಾಹ್ಯಾಭ್ಯಂತರದೊಳಗೆ, ಪರಿಪೂರ್ಣವಾಗಿ, ಅವಗ್ರಹಿಸಿ ಕುರುಹುಗೆಟ್ಟು ನಿರ್ವಯಲಾಯಿತ್ತೆಂಬುದೀಗ ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲವೆಂಬ ಶಬ್ದಕ್ಕರ್ಥ. ಇಂತಾಗಲು, ತಾನೆ ಗುರು ತಾನೆ ಶಿಷ್ಯನಾಗಿ. ಅಲ್ಲಿ ಗುರುಶಿಷ್ಯಸಂಬಂಧವೆನಿಸುವ ಭಿನ್ನ ಭಾವ ನಾಸ್ತಿಯಾಯಿತ್ತೆಂಬುದೀಗ, ತನಗೆ ಗುರುವಿಲ್ಲ, ಗುರುವಿಂಗೆ ತಾನಿಲ್ಲ, ಗುರುವಿಗೆ ಶಿಷ್ಯನು ಹೊಡೆವಡೆದಕಾರಣ ಮುನ್ನಿಲ್ಲವೆಂಬ ಶಬ್ದಕ್ಕರ್ಥ. ಇಂತಾಗಲು, ನಿರ್ವಯಲಾಗಿಪ್ಪ ಲಿಂಗೈಕ್ಯನ ನಿಲವ ಕ್ರಿಯಾಕಾಶಕ್ಕೆ ತಂದು, ಕುರುಹು ವಿಡಿದಿಹೆನೆಂದರೆ ಅಲ್ಲಿಯೇನು ಇಲ್ಲವೆಂಬುದೀಗ ಬಯಲಬಿತ್ತಲು ಇಲ್ಲ. ಬೆಳೆಯಲು ಇಲ್ಲ. ಒಕ್ಕಲು ಇಲ್ಲ. ತೋರಲು ಇಲ್ಲವು ಗುಹೇಶ್ವರನೆಂಬ ಲಿಂಗಕ್ಕೆ ಕುರುಹು ಮುನ್ನಿಲ್ಲವೆಂಬ ಶಬ್ದಕ್ಕರ್ಥ.

೩೧. ದೃಷ್ಟಕ್ಕೆ, ದೃಷ್ಟ ಮುಂದಿಲ್ಲ ಇಲ್ಲ ಇಲ್ಲ ಮಾಡಿದಡೇನಹುದೊ, ಮಾಡದಿದ್ದಡೇನಹುದೊ, ಗುಹೇಶ್ವರನೆಂಬ ಅರಿವಿನ ಕುರುಹು ಮುಂದಿಲ್ಲ. ಇಲ್ಲ ಮಾಡಿದಡೇನಹುದೊ?

ಟೀಕುಃ— ಲಿಂಗದಲ್ಲಿ ಅಂಗ ಲಯ್ಯವಾಗಿ, ಜ್ಞಾನದಲ್ಲಿ ಮನೋಲಯವಾದ ಬಳಿಕ ಆ ಶರಣ ಸತ್ಕ್ರಿಯೋಪಚಾರಂಗಳ ಮಾಡಿದಡೆಯು ಉಪಾಧಿಕನಲ್ಲ ಮಾಡದಿದ್ದಡೆಯು ತಾಮಸಿಯಲ್ಲ. ಈ ಉಭಯವು ಆತಂಗಿಲ್ಲವಾಗಿ ಸ್ವತಂತ್ರ ಮಹಿಮನಾಗಿ, ತನ್ನ ಲೀಲೆಯಲ್ಲಿ ತಾನೆ ಇಪ್ಪನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೩೨. ನಿಜವನರಿದ ನಿಶ್ಚಿಂತನೆ ಮರಣವ ಗೆಲಿದ ಮಹಂತನೆ, ಘನಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ ಬಯಲ ಒಡಗಿದ ಭರಿತನೆ, ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ.

ಟೀಕುಃ— ತನ್ನ ನಿಜವ ತಾನರಿದು ನಿಶ್ಚಿಂತನಾಗಿ, ಉತ್ಪತ್ತಿ, ಸ್ಥಿತಿ, ಲಯಂಗಳಡಗಿ, ಮಹಘನದಲ್ಲಿ ಪರವಶನಾಗಿ, ಪರಮಪರಿಣಾಮಿಯಾಗಿ

ಪರಿಪೂರ್ಣ ತತ್ವರೂಪನಾಗಿ, ನಿಜದಲ್ಲಿ ನಿಂದಾತನೆ ಮಹಾಘನ ಲಿಂಗೈಕ್ಯನೆಂಬುದೀ ವಚನದ ತಾತ್ಪರ್ಯಾರ್ಥ.

೩೩. ಭವಿಯ ಕಳೆದಿಹೆನೆಂಬ ಅಪ್ರಮಾಣಿಗಳು ನೀವು ಕೇಳಿರೊ. ಭವಿಯ ಕಳದೆಹೆನೆಂಬ ಭವಭಾರಿಗಳು ನೀವು ಕೇಳಿರೊ. ಭವಿಗೆ ಕೊಡಲಾಗದೆಂಬ ಭಕ್ತನ ಮಾತ ಕೇಳಲಾಗದು. ನಾನು ಭವಿವಿಡಿದ ಭಕ್ತಿಯಿಂದ ಸುಖಿಯಾದೆ ಗುಹೇಶ್ವರಾ.

ಟೀಕುः— ಭವ ವಿರಹಿತನಾಗಿ, ಭಕ್ತನಾದಲ್ಲಿ ಆ ಭಕ್ತಿ ಮಹಲಿಂಗದಲ್ಲಿ ಪರಮ ವಿಶ್ರಾಂತಿಯನೆಯ್ದಲು, ಗುರು, ಲಿಂಗ, ಜಂಗಮ, ಮೂಲವಾದ ಸರ್ವ ಕ್ರಿಯೆಗಳೆಲ್ಲವು ನಷ್ಟವಾಗಿ ತಾನೆ ಲಿಂಗವಾದಾತನೆ ಭವಿಯೆಂಬುದೀ ವಚನದ ತಾತ್ಪರ್ಯಾರ್ಥ.

೩೪. ಬಯಲು, ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ, ಬಯಲಾಯಿತಯ್ಯ! ಬಯಲ ಜೀವನೆ ಬಯಲ ಭಾವನೆ ಬಯಲು ಬಯಲಾದೆ ಗುಹೇಶ್ವರಾ.

ಟೀಕುः— ನಿಜ ನಿರವಯ ತತ್ವದಲ್ಲಿ ಹುಟ್ಟಿ, ನಿಜ ನಿರವಯವಾಗಿ, ಬೆಳದು, ನಿಜ ನಿರವಯ ಭಾವದಲ್ಲಿ ಭರಿತನಾಗಿ, ಬಯಲೆಂಬ ಮಿಥ್ಯ ಜೀವಭಾವವನು ಬಯಲು ಮಾಡಿ ನಿರಾಳ ಲಿಂಗದಲ್ಲಿ ನಿರ್ವಯಲಾದಾತನೆ ಲಿಂಗೈಕ್ಯನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೩೫. ನಾರು ಬೇರಿನ ಕುಟಿಲ ಕುಹಕನ ಕಪಟ ಯೋಗವಿದು ನಿಲ್ಲಿ ಭೋ. ಕಾಯಸಮಾಧಿ, ಕರಣಸಮಾಧಿ ಜೀವಸಮಾಧಿ, ಯೋಗ ಬಲಿದು ನಿಲ್ಲಿ ಭೋ ನಿಜ ಸಹಜ ಸಮಾಧಿ ಗುಹೇಶ್ವರಾ.

ಟೀಕುः— ಮಹಾಲಿಂಗದಲ್ಲಿ ತಾನು ತನ್ನಲ್ಲಿ ಮಹಾಲಿಂಗ ಐಕ್ಯವಾಗಿ, ಬೆರಸಿ ಭೇದವಿಲ್ಲರೆ ಇರಬಲ್ಲರೆ ಅದೆ ಪರಮ ರಾಜಯೋಗ. ಈ ಭೇದವನರಿಯದ ಯೋಗವೆಲ್ಲವು ಕುಟಿಲ, ಕುಹಕ ತಂತ್ರನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೩೬. ವಸ್ತುಕ ವರ್ಣಕ ತ್ರಿಸ್ಥಾನದ ಮೇಲೆ ನುಡಿವ ನುಡಿಗಳು ಇತ್ತಿತ್ತಲ್ಲದೆ, ಅತ್ತ ಅತ್ತಲಾರೂ ಬಲ್ಲರು. ಇವರೆತ್ತಲೆಂದರಿಯರು. ಗಿಣಿ ನಿಂಡು ಗೆಡವರು ಗುಹೇಶ್ವರಾ ನಿಮ್ಮ ನವರೆತ್ತ ಬಲ್ಲರು.



ಟೀಕುः— ಲಿಂಗದಲ್ಲಿ ನಿಜವನರಿದು, ಬೆರಸಿ ಬೇರಿಲ್ಲದಿಪ್ಪಾತನೆ ಲಿಂಗೈಕ್ಯನು. ಇದನರಿಯದೆ ವಾಗದ್ವೈತದಿಂದ ನಾವು ಲಿಂಗೈಕ್ಯರೆಂದು ನುಡಿದುಕೊಂಬವರೆಲ್ಲರೂ, ಅಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೩೭. ಅಕ್ಷರದ ಅಭ್ಯಸವ ಮಾಡಿ, ಬರವ ತೊಡೆವ ಪರಿಯೆಂತೊ? ಸ್ವರೂಪದಾವುದು ನಿರೂಪದಾವುದೆಂದರಿಯರಾಗಿ, ಆದಿನಿರಾಳ ಮಧ್ಯನಿರಾಳ ತುದಿನಿರಾಳ ಗುಹೇಶ್ವರ.

ಟೀಕುः— ಅಭ್ಯಸದಿಂದ ಅದ್ವೈತವ ಸಾಧಿಸಿ ಲಿಂಗದಲ್ಲಿ ಬೆರಸಿದೆನೆಂಬುದು ಲಿಂಗೈಕ್ಯವಲ್ಲ. ಜ್ಞಾತೃಜ್ಞಾನ, ಜ್ಞೇಯಂಗಳೆಂಬ ಆದೆ ಮಧ್ಯ ಅವಸಾನಂಗಳು ಅಳಿದುಳಿದು, ತನ್ನ ತಾನರಿದು, ನಿಜದಲ್ಲಿ ನಿಂದಾತನೆ ಲಿಂಗೈಕ್ಯನೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೩೮. ಕೈಯಲ್ಲಿ ಕರಸ್ಥಲ, ಮನದಲ್ಲಿ ಪರಸ್ಥಲ ತನುವೆಲ್ಲ ಹುಸಿಸ್ಥಲ. ಶರಣನೆಂತೆಂಬೆ? ಮಾತಿನಂತುವೆಲ್ಲ ಕ್ರಿಯಾಸಮಸ್ಥಲ. ಉತ್ಪತ್ತಿ ಸ್ಥಿತಿಲಯರಹಿತ ನಿಜಸ್ಥಲ ಗುಹೇಶ್ವರನೆಂಬ ಲಿಂಗೈಕ್ಯವೈಕ್ಯ.

ಟೀಕುः— ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡು, ಮನಸ್ಥಲದಲ್ಲಿ ಪರವ ಹಿಡಿದು ಕೊಂಡು, ಇಂತು ಎರಡಿಟ್ಟುಕೊಂಡು, ಇಪ್ಪಾತನ ತನುತ್ರಯಂಗಳು ಮಿಥ್ಯವೆಂಬುದೀಗ, ಕೈಯಲ್ಲಿ ಕರಸ್ಥಲ ಮನದಲ್ಲಿ ಪರಸ್ಥಲ ತನುವೆಲ್ಲ ಹುಸಿಸ್ಥಲ, ಎಂಬ ಶಬ್ದಕ್ಕರ್ಥ. ಈ ಭಿನ್ನಭಾವವಳಿದು ಅಂಗದಲ್ಲಿ ಲಿಂಗವರತು ಮಾಡುವ ಕ್ರಿಯೆಗಳೆಲ್ಲ ನಷ್ಟವಾಗಿ ಉತ್ಪತ್ತಿ ಸ್ಥಿತಿಲಯರಹಿತನಾಗಿ ನಿಜಸ್ಥಲದಲ್ಲಿ ನಿಂದಾತನೆ ಮಹಾಲಿಂಗೈಕ್ಯನೆಂಬುದೀಗ ಮಾತಿನಂತುಟಲ್ಲ. ಕ್ರಿಯಾ ಸಮಸ್ಥಲ ಉತ್ಪತ್ತಿಸ್ಥಿತಿಲಯರಹಿತ ನಿಜಸ್ಥಲ ಗುಹೇಶ್ವರನೆಂಬ ಲಿಂಗೈಕ್ಯವೆಂಬುದೀಗ ಶಬ್ದಕ್ಕರ್ಥ.

೩೯. ತೋರಿವ ಭೇದವ ತೋರಿನಂತೆ ಕಂಡಾತನಲ್ಲದೆ, ದೃಷ್ಟಿವಾಳಕ ತಾನಲ್ಲ. ಬೇರೊಂದು ವಿವರಿಸದೆ, ಆತ ವಿಚಾರಿದಲ್ಲದೆ, ಅರಿಯಬಾರದು. ಅರಿವನರಿದು ಮರಹ ಮರೆಯದೆ ಮನದ ಬೆಳಗಿನೊಳಗಣ ಉರಿಯನರಿಯದೆ, ವಾದಿಸಿ ಕೆಟ್ಟು ಹೋದರು. ಗುಹೇಶ್ವರ ಸಲೆ ಕೊಂಡ ಮಾರಿಂಗೆ.

ಟೀಕುಃ— ನಿಜದರಿವು ತನ್ನ ಹೃದಿಜ್ಞಾನದ ಮುಂದೆ ತೋರಲು, ಅದನಲ್ಲಿಯೆ ನಿಜವೆಂದು ಕಂಡಾತನಲ್ಲದೆ ಜ್ಞಾನಿಯಲ್ಲ ವೆಂಬುದೀಗ, ತೋರಿದ ಭೇದವ ತೋರಿದಂತೆ ಕಂಡಾತನಲ್ಲದೆ, ದೃಷ್ಟಿವಾಳಕ ತಾನಲ್ಲ ವೆಂಬ ಶಬ್ದಕ್ಕರ್ಥ. ಅಖಂಡ ವಸ್ತುವ ವಿವರಿಸದೆ, ಷಡುವರ್ಣಂಗಳ ವಿಾರಿ, ಷಡಂಗಯೋಗಾತೀತನಾಗಿ ಬೆರಸ ಬಲ್ಲರೆ, ಆವೆ ಲಿಂಗೈಕ್ಯ ವೆಂಬುದೀಗ, ಬೇರೊಂದು ವಿವರಿಸದೆ, ಆರ ಮೀರಿದಲ್ಲದೆ ಅರಿಯಬಾರದು ಯೆಂಬ ಶಬ್ದಕ್ಕರ್ಥ. ಇದಲ್ಲದೆ, ಅರಿವನರಿದು, ಅಜ್ಞಾನವು ಮರೆದು ಮನದೊಳಗೆ ತೊಳಗಿ ಬೆಳಗುವ ಪರಂಜ್ಯೋತಿಯ ನರಿಯದೆ ಹಲಬ ರೆಲ್ಲರೂ, ಕೆಟ್ಟರೆಂಬುದೀಗ, ಅರಿವನರಿದು ಮರಹ ಮರೆಯದೆ, ಮನದ ಬೆಳಗಿನೊಳಗಣ ಪರಿಯನರಿಯದೆ ವಾದಿಸಿ ಕೆಟ್ಟು ಹೋದರು ಗುಹೇಶ್ವರಾ ಸಲೆ ಕೊಂಡ ಮಾರಿಂಗೆ ಎಂಬ ಶಬ್ದಕ್ಕರ್ಥ.

೪೦. ಪರಿಣಾಮ ಪರಿಮಿತ ದೊರೆಕೊಂಡಾತಂಗೆ, ಬಳಿಕೆ ಕೊಂಬಿರಿ. ಮಾತಿನವರೊಡನೆ ಗೋಷ್ಠಿ, ಬಳಿಕೆ ಕೊಂಬಿರಿ. ಸಂಭ್ರಮಿಗಳೊಡನೆತ್ತಣ ದನುಭಾವ? ಐವತ್ತೆರಡು ಅಕ್ಷರ ತಮ್ಮಲ್ಲಿ ತಾವು ಉಲಿದಂತೆ ಉಲಿದವು. ಗುಹೇಶ್ವರನೆಂಬ ಲಿಂಗವನರಿದಾತಂಗ ಬಳಿಕೇಕೋ?

ಟೀಕಃ— ತನ್ನ ತಾನರಿದು ನಿಜತತ್ವದಲ್ಲಿ ಮನೋಲಯವಾಗಿ, ಶಬ್ದ ಮುಗ್ಧವಾದ ಲಿಂಗೈಕ್ಯನು ವೃಥಾ ವಾಗದ್ವೈತಿಗಳೊಡನೆ ಅನುಭಾವ ಗೋಷ್ಠಿಯ ಮಾಡಿ, ಹೊರುವನಲ್ಲವೆಂಬುದೀಗ, ಈ ವಚನದ ತಾತ್ಪ ರ್ಯಾರ್ಥ.

೪೧. ಒತ್ತಿ ಹಣ್ಣ ಮಾಡಿದಡೆ, ಅದೆತ್ತಣ ರುಚಿಯಪ್ಪುದೊ? ಕಾಮಿಸಿ, ಕಲ್ಪಿಸಿ, ಭಾವಿಸಿದರೆ ಅದೆ ಭಂಗ ನೋಡಾ! ಭಾವಿಸುವ ಭಾವನೆಗಿಂದ ಸಾವುದೆ ಲೇಸು ಕಾಣಾ ಗುಹೇಶ್ವರಾ.

ಟೀಕುಃ— ಭಾವದಲ್ಲಿ ಭರಿತನೆಂದರಿದು, ಲಿಂಗದಲ್ಲಿ ಸಮಶೋಧಿಸಿದಾತನೆ ಲಿಂಗೈಕ್ಯನು. ಇದಲ್ಲದೆ, ಭಿನ್ನ ಭಾವದಿಂದ ಲಿಂಗವ ಭಾವಿಸಿ ಬೆರಸಿಹೆನೆಂಬಾತನು ಲಿಂಗೈಕ್ಯನಲ್ಲವೆಂಬುದೀಗ ಈ ವಚನದ ತಾತ್ಪ ರ್ಯಾರ್ಥ.

೪೨. ನಿಮ್ಮ ನೆನೆವುತಿದ್ದಿತ್ತು. ಮತ್ತೆ ನೆನವು ಮುಖವೆಂತೆಂದ ರಿಯದೆ, ಪೂಜೆಯ ಪೂಜಿಸುತ್ತಿದ್ದಿತ್ತು. ಪೂಜೆಯ ಮುಖವೆಂತೆಂದರಿಯದೆ,



ಆಡಿ ಹಾಡಿ ಬೇಡುತ್ತಿದ್ದಿತ್ತು. ಬೇಡುವ ಮುಖವಾವುದೆಂದರಿಯಡೆ, ಕಾಯದಲಿಲ್ಲ. ಜೀವದಲಿಲ್ಲ. ಭಾವದಲಿಲ್ಲ. ಭರಿತವು ಅದು ತಾವಪ್ಪನು. ತಾನಲ್ಲದುದೇನ ಹೇಳುವೆ ಕೌತುಕವ? ಗುಹೇಶ್ವರನೆಂಬ ಹೆಸರೊಳಗಿದ್ದುದ ಬೆಸಗೊಂಬುವರಿಲ್ಲ ನಿರಾಳವಾದ ಘನವ.

ಟೀಕುಃ— ಅಂಗದಲ್ಲಿ ಲಿಂಗೈಕ್ಯವಾಗಿ, ಮನದಲ್ಲಿ ಜ್ಞಾನವೆಡೆಗೊಂಡು, ಅಂತರಂಗ ಬಹಿರಂಗವೆಂಬದೆ ನಿಜತತ್ವದ ಸ್ವರೂಪನು ತಾನಾದ ಬಳಿಕ ನೆನೆಯಲಿಲ್ಲ. ಪೂಜಿಸಲಿಲ್ಲ. ಆಡಿ ಹಾಡಿ ವರವ ಬೇಡಲಿಲ್ಲ. ಅರಸಿ ಭಾವಿಸಲಿಲ್ಲ ಜೀವದೊಳಗೆ ಇದ್ದಹುದೆನಲಿಲ್ಲ. ಅಪ್ಪುದೆನಲಿಲ್ಲ. ಆಗದೆನಲಿಲ್ಲ. ಆವ ಜ್ಞಾನಕ್ಕೆ ಗೋಚರವಾಗಿಪ್ಪದೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೪೩. ನಿತ್ಯ ನಿರಂಜನ ತಾನೆಂದರಿಯದೆ, ತತ್ವಮಸಿಯೆಂದು ಹೊರಗನೆ ಬಳಸಿ ಸತ್ತರಲ್ಲಾ! ಜಗವೆಲ್ಲ ನಾಯ ಸಾವ ಸತ್ತರಲ್ಲಾ! ತಮ್ಮ ತಾವರಿಯದೆ, ಸತ್ತವರ ಹೆಸರ ಪತ್ರವನೋದಿದಡೆತ್ತಣ ಮುಕ್ತಿ ಗುಹೇಶ್ವರಾ ?

ಟೀಕುಃ— ನಿತ್ಯ ನಿರಂಜನ ನಿರ್ಮಯನೆಂಬ ಪರಬ್ರಹ್ಮವು ತಾವೆಂದರಿಯದೆ, ಸೋಹಂಮೆಂದು ಇದಿರಿಟ್ಟುಕೊಂಡು ಕೇಳಿ ತತ್ವಂ ಅಸಿ ಎಂಬ ಉಪದೇಶವ ನಂಬಿ ತಾನೆ ಪರವಸ್ತುವಾದೆನೆಂಬ ಜ್ಞಾನಿಗಳೆಲ್ಲರು ಅಜ್ಞಾನ ಭಾವಿಗಳು. ಆವರು ಪ್ರಾರಬ್ಧ ಕರ್ಮದ ಲಿಖಿತಕ್ಕೆ ಪ್ರಾರಬ್ಧರಾಗಿಹರಾಗಿ, ಅವರು ಮುಕ್ತರಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೪೪. ಹುಟ್ಟಿದ ನೆಲೆ ತೃಷ್ಣೆ ಬಿಡದವರಿಗೆ, ಲಿಂಗಾನುಭಾವದ ಮಾತೇಕೊ? ಮಾತಿನ ಮಹಂತರು ಹಿರಿಯರು ಗುಹೇಶ್ವರನೆಂಬ ಲಿಂಗ ಸಾರಾಯವು ತೋರದು ಬಹು ಮುಖಿಗಳಿಗೆ.

ಟೀಕುಃ— ಶುಕ್ಲ ಶೋಣಿತಾತ್ಮಕ ಸಂಯೋಗದ ಕಾಮವಿಕಾರದಿಂದ ಹುಟ್ಟಿದವರೆಲ್ಲರು ಆ ಕಾಮವಿಷಯದಲ್ಲಿಯೆ ಲೋಲುಪ್ತರಾಗಿಹರು. ಅಂತಪ್ಪವಂಗೆ ಲಿಂಗಾನುಭಾವ ಘಟಿಸದೆಂಬುದೀಗ, ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗಾನುಭಾವದ ಮಾತೇಕೊ ಎಂಬ ಶಬ್ದಕ್ಕರ್ಥ. ಇಂತಪ್ಪ ಮಾತಿನ ಮಾಲೆಯ ವಾಗದ್ವೈತಿಗಳಿಗೆ ಲಿಂಗೈಕ್ಯ ಪದವು ಸಾಧ್ಯವಾಗದೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೪೫. ಭೂಮಿಯೊಳಗಿಲ್ಲ, ಆಕಾಶದೊಳಗಿಲ್ಲ, ಚತುರ್ದಶಭುವನದೊಳಗಿಲ್ಲ, ಹೊರಗಿಲ್ಲ, ಏನೆಂದರಿಯರು, ಎಂತೆಂದರಿಯರು ಹೇಳಯ್ಯ ಕೃತಯುಗದಂದಿನ ಮಾತು ಬೇಡ. ಗುಹೇಶ್ವರಾ ಅಂದೂ ಇಲ್ಲ ಇಂದೂ ಇಲ್ಲ.

ಟೀಕು:— ಪರಿಪೂರ್ಣ ಪರಮಾನಂದ ಪರಾಪರ ಐಕ್ಯವಾಗಿಪ್ಪ ಮಹಾಲಿಂಗವು ನಿರ್ಮಯಲ ನಿರಾಳವಾಗಿಪ್ಪುದಲ್ಲದೆ, ಭೂಮಿ ಆಕಾಶ ಬ್ರಹ್ಮಾಂಡದೊಳಹೊರಗೆ ಖಂಡಿತವಾಗಿ, ಅಡಗಿರದು. ಆ ವಸ್ತುವಿಂತಿಪ್ಪುದೆಂಬ ಯುಗಾಂತರಗಳ ಮಾತಿಂಗೆ ಸಿಕ್ಕದೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೪೬. ಅರಸವಿಲ್ಲವ ಮಹಾಘನವನರಸುವದೇನೊ, ತಿಳಿವುದೇನೋ? ತಿಳುಹಿನ ಮುಂದಣ ಸುಳುಹು ತಾನೇನೊ? ಸರಸದ ಸಮತೆಯ ಪರಿಣಾಮವ ನೋಡಾ! ಗುಹೇಶ್ವರನೆಂಬುದು ಅದೆ ಕಂಡಾ.

ಟೀಕ:— ಅರಸುವ ಅರಿಕೆಗೆ ಸಿಕ್ಕದ ವಸ್ತುವ ಅರಸಿ ನೋಡಿಹೆನೆಂದರೆ, ಕಾಣಬಾರದು. ಅದೇನು ಕಾರಣವೆಂದರೆ ಅರಸುವಾತನು ತಾನೆ ಆ ವಸ್ತುವಾದ ಕಾರಣ, ವಿಚಾರಕ್ಕೆ ಅಸಾಧ್ಯವಾದ ವಸ್ತುವ ತಿಳಿದರಿ ಕೊಂಬಾತ ತಾನೆ ಆ ಪರವಸ್ತುವಾದ ಕಾರಣ ನುಡಿದು ಕುರುಹಿಂಗೆ ತಂದಿಹೆನೆಂದಡೆ ಆ ವಸ್ತು ನಿಃಶಬ್ದಬ್ರಹ್ಮವೆನಿಸಿಪ್ಪುದು. ಅದು ನುಡಿಗೆ ಸಿಕ್ಕದು. ಇಂತು ನಿಜವನರಿದಡೆ, ಬೇರೆ ಅರಸಲಿಲ್ಲ. ತಾನೆ ವಸ್ತುವೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೪೭. ಉಪಮೆಯು ಉಪಮಿಸಲರಿಯದೆ, ಉಪಮಾತೀತನೆನುತಿದ್ದಿತ್ತು. ಅರಿವು ಅರಿವಿನ ಮರೆಯಲಿದ್ದುದನರಿಯದೆ, ಅರಿವು ಪರಾಪರವೆನುತಿದ್ದಿತು. ಧ್ಯಾನ ಧ್ಯಾನಿಸಲರಿಯದೆ ಧ್ಯಾನವು ರೂಪಾತೀತನೆಂದು ಧ್ಯಾನ ತತ್‌ಧ್ಯಾನಗೊಂಡಿತ್ತು. ಜ್ಞಾತೃ, ಜ್ಞಾನ, ಜ್ಞೇಯಕ್ಕೆ ಇನ್ನಾವ ಜ್ಞಾನವೋ? ವೇದ ವಿಜ್ಞಾನವೆಂದುದಾಗಿ, ತತ್ವಮಸಿ ವಾಕ್ಯಂಗಳೆಲ್ಲವು ಹುಸಿಯಾಗಿ ಹೋದವು. ಸಚ್ಚಿದಾನಂದವೆಂದುದಾಗಿ, ದ್ವೈತಾದ್ವೈತಿಗಳೆಲ್ಲ ಸಂಹಾರವಾಗಿ ಹೋದರು. ಬಂದು ಬಾರದ ನಿಂದ ನಿರಾಳ ಗುಹೇಶ್ವರಾ.



ಟೀಕು:— ಶರಣನಲ್ಲಿ ಲಿಂಗೈಕ್ಯವಾಗಿ, ಲಿಂಗದಲ್ಲಿ ಶರಣನೈಕ್ಯವಾಗಿ ನಿಂದ ಮಹಾಘನವನುಪಮಿಸಬಾರದು. ಅದು ಧ್ಯಾನಾತೀತವಾಗಿಪ್ಪುದಾಗಿ, ಧ್ಯಾನಿಸಬಾರದು. ಅದು ರೂಪಾತೀತವಾಗಿಪ್ಪುದಾಗಿ, ರೂಹಿಸಬಾರದು. ಜ್ಞಾತೃ, ಜ್ಞಾನ, ಜ್ಞೇಯುಗಳಿಗೆ ಎಂತು ತಿಳಿಯಬಾರದು. ಅದು ಪ್ರಾಣಿಗಳೆತ್ತ ಬಲ್ಲರು? ಆತನ ಘನವ ಚಿಟುಕು ಮುನ್ನೂರು ಅರುವತ್ತು ಕೂಡಿದರೆ ವಿಘಳಿಗೆ, ಆ ವಿಘಳಿಗೆ, ಅರುವತ್ತು ಕೂಡಿದರೆ ಒಂದು ಘಳಿಗೆ, ಆ ಘಳಿಗೆ ಅರುವತ್ತು ಕೂಡಿದರೆ ಒಂದು ದಿನ, ದಿನ ಮೂವತ್ತು ಕೂಡಿದರೆ ಒಂದು ಮಾಸ, ಹನ್ನೆರಡು ಮಾಸ ಕೂಡಿದರೆ ಒಂದು ವರುಷ. ವರುಷ ಅರುವತ್ತು ಕೂಡಿದರೆ ಒಂದು ಸಂವತ್ಸರ. ಇಂತೀ ಕಾಲಚಕ್ರಗಳು ತಿರುಗಿ ಬರುತ್ತಿಹವು ಕಾಣಿರೊ. ನಾಲ್ಕು ಯುಗಂಗಳು ಬೇರೆ ಬೇರೆ ಕಟ್ಟಿದ ಕಟ್ಟೆಯೊಳು ಕೃತಯುಗ ಹದಿನೇಳು ಲಕ್ಷವು ಇಪ್ಪತ್ತೆಂಟು ಸಾವಿರ ವರುಷ ವರ್ತಿಸಿ ನಿಂದಿತ್ತು. ತ್ರೇತಾಯುಗ ಹನ್ನೆರಡುಲಕ್ಷತೊಂಭತ್ತಾರುಸಾವಿರ ವರುಷ ವರ್ತಿಸಿ ನಿಂದಿತ್ತು. ದ್ವಾಪರಯುಗ ಎಂಟು ಲಕ್ಷವು ಅರುವತ್ತು ನಾಲ್ಕು ಸಾವಿರ ವರುಷ ವರ್ತಿಸಿ ನಿಂದಿತ್ತು. ಈ ಕಲಿಯುಗದ ನಾಲ್ಕು ಲಕ್ಷವು ಮೂವತ್ತೆರಡು ಸಾವಿರ ವರುಷ ವರ್ತಿಸಿ ನಿಂದಿತ್ತು. ಇಂತೀ ನಾಲ್ಕು ಯುಗಂಗಳು ಕೂಡಿ ಒಂದಾಗಿ ಮೇಳೈಸಿದರೆ ನಾಲ್ವತ್ತು ಮೂರು ಲಕ್ಷವು ಇಪ್ಪತ್ತು ಸಾವಿರ ವರುಷ ಕಟ್ಟಳೆಯಿತ್ತು. ಈ ನಾಲ್ಕು ಯುಗಂಗಳು ಇಪ್ಪತ್ತೊಂದು ಬಾರಿ ತಿರುಗಿದರೆ ಸುರಪತಿಗೆ ಪರಮಾಯು, ಬ್ರಹ್ಮಂಗೆ ಜಾವ. ಅಂಥ ಅಷ್ಟಾಸತಿ ಸಹಸ್ರರೂಪನಿರ್ವಾಚ್ಯವಾದ ಕಾರಣ ತತ್ವಮಸಿ ಶಬ್ದಕ್ಕೊಳಗಾಗದು. ಅದು ದ್ವೈತಾದ್ವೈತಂಗಳ ಹೊದ್ದದಾಗಿ ದ್ವೈತಾದ್ವೈತಿಗಳ ಮೀರಿ ನಿಂದಿತ್ತು. ಇಂತಪ್ಪ ನಿರಾಳವೀಗ ಮಹಾಲಿಂಗ ತತ್ವವೆಂಬುದೀ ವಚನದ ತಾತ್ಪರ್ಯಾರ್ಥ.

೪೮. ಯುಗಜುಗ ಮಡಿವಲ್ಲಿ ಬ್ರಹ್ಮಾಂಡಗಳಳಿವಲ್ಲಿ ಲಿಂಗವೆಂದರಿವರಾರೊ? ಶಿವ, ಶಿವಾ! ವಾಯುದಲೊದಗಿದ ಮಾಯಾ ವಾದಿಗಳು ದೇವರೆಂದರಿದವರಾರೊ? ಶಿವ ಶಿವಾ! ಅಗ್ನಿ ತೃಣದೊಳಗಡಗಿ, ಲಯವಾದುದ ಗುಹೇಶ್ವರಾ ನಿಮ್ಮ ಶರಣ ಬಲ್ಲ.

ಟೀಕು:— ಅಣುರೇಣುತೃಣಕಾಷ್ಠದೊಳಗೆ ಪರಿಪೂರ್ಣ ಶಿವನೆಂಬ ಭೇದವ ವಿವೇಕಿಸಿ ನೋಡಾ! ತನ್ನ ತಾನರಿದು, ಸುಖಿಯಾಗಿಪ್ಪ ಲಿಂಗೈ

ಕ್ಯನು ಅನಂತಕೋಟಿ ಬ್ರಹ್ಮಾಂಡಗಳಳಿವಲ್ಲಿ ಆ ಜಗವ ಆಗು ಹೋಗುವನೇನೆಂದು ಅರಿಯನು. ಈ ಸ್ಥಿತಿಗತಿಯನು ಮಿಥ್ಯಾ ದೇಹಿಗಳಿಗೆ ಅರಿಯ ಬಾರದೆಂಬುದೀಗ ವಚನವ ತಾತ್ಪರ್ಯಾರ್ಥ.

೪೯. ಕಾಲಚಕ್ರದವಚನ॥ ಏಕಂ ಏಕವಾದ ವಸ್ತುವ ಲೋಕಲೋಕಂಗಳರಿಯವು. ಸ್ಥೂಲಸೂಕ್ಷ್ಮವೆನುತ್ತಿಪ್ಪವರೆಲ್ಲರೂ; ಆತನೀತ ಬೇರೆ ಮತ್ತೊಬ್ಬಾತನೆಂಬ ಭ್ರಮೆಯಲ್ಲಿ ಭೂತದು ಕೆಲವು ಕಾಲ ಅದು, ತೊಡೆದು ಹೋಯಿತ್ತು. ಬಳಿಕ ಶೂನ್ಯ ವರ್ತಿಸುತ್ತಿದ್ದಿತೊಂದು ಕೆಲವು ಕಾಲ. ಅದು ತೊಡೆದು ಹೋಯಿತ್ತು. ಬಳಿಕ ಕಾಳಾಂಧರ ವರ್ತಿಸುತ್ತಿದ್ದಿತೊಂದು ಕೆಲವು ಕಾಲ ಅದು ತೊಡೆದು ಹೋಯಿತ್ತು. ಬಳಿಕ ಮಹಾಪ್ರಕಾಶದ ಮಹಾಬೆಳಗು. ಇಂತಹ ಕಾಲಂಗಳು ಈ ಪರಿಯಲ್ಲಿ ತಿರಿಗಿ ಬರುತ್ತಿಹವು ಕಾಣಿರೆ. ಅಂತಹ ಕಾಲಂಗಳು ಅರಿಯವು. ಅಂತಹ ದಿನಂಗಳು ಅರಿಯವು. ಅಂತಹ ದೇವರುಗಳು ಅರಿಯರು. ಅಪ್ರಮಾಣ ಅಗಮ್ಯ, ಅಗೋಚರ ಉಪಮಿಸಬಾರದು. ಅಂತಿಂತೆನಲಿಲ್ಲ. ಗುಹೇಶ್ವರಲಿಂಗ ನಿರಂಜನ ನಿರಾಳ, ನಿರಾಮಯ.

ಟೀಕು:— ಪಂಚಭೂತಬ್ರಹ್ಮಾಂಡ ಪ್ರಪಂಚುಗಳು ಅನಂತ ಕೋಟಿ, ಕಲ್ಪಾಂತರಯುಗಂಗಳಲ್ಲಿ ಅನಂತ ಹೋಗುತ್ತಿಪ್ಪವು. ಅನಂತ ದೇವತೃಂಗಳೆಲ್ಲ ಲಯವಾಗಿ ಹೋಗುತ್ತಿಪ್ಪವು. ಅನಂತ ಪ್ರಪಂಚುಗಳೆಲ್ಲವು ತೋರಿ ಅಡಗುತ್ತಿಪ್ಪವು. ಇಂತಪ್ಪ ಸರ್ವಲಯ ಕಾಲದಲ್ಲಿ ಉತ್ಪತ್ತಿಸ್ಥಿತಿ ಲಯಕ್ಕೊಳಗಾಗದೆ, ಆದಿಮಧ್ಯಾವಸಾನ ರಹಿತವಾಗಿಪ್ಪ ಮಹಾ ಲಿಂಗವು ಇವನೇನೆಂದು ಅರಿಯದಿಪ್ಪದು. ಆ ಮಹಾಲಿಂಗದಲ್ಲಿ ಮನೋಲಯವಾದಾತನೆ ಲಿಂಗೈಕ್ಯನೆಂಬುದೀಗ, ಈ ವಚನವ ತಾತ್ಪರ್ಯಾರ್ಥ.

೫೦. ಹಿಂದೆ ಏಸು ಪ್ರಳಯ ಹೋಯಿತೆಂದರಿಯೆ, ಮುಂದೆ ಏಸು ಪ್ರಳಯ ಬಂದುದೆಂದರಿಯೆ. ತನ್ನ ಸ್ಥಿತಿಯ ತಾನರಿದರೆ, ಅದೆ ಪ್ರಳಯುವಲ್ಲಾ! ತನ್ನ ವಚನ ತನಗೆ ಹಗೆಯಾದರೆ ಅದೇ ಪ್ರಳಯುವಲ್ಲಾ! ಇಂಥ ಪ್ರಳಯ ನಿನ್ನಲ್ಲುಂಟೆ ಗುಹೇಶ್ವರಾ?

ಟೀಕು:— ಈ ಋಷಿಯರು ಅಷ್ಟಾಸಹಸ್ರ ಬಾರಿ ತಿರಿಗಿದರೆ ಬ್ರಹ್ಮಂಗೆ ಆಯುಷ್ಯ ನೂರು ಅಪ್ಪದು. ವಿಷ್ಣುವಿಂಗೆ ಜಾವವಪ್ಪದು, ಆ ವಿಷ್ಣುವಿನ ಒಂದುದಿನದೊಳಗೆ ಬ್ರಹ್ಮ ನಾಲ್ಕು ಬಾರಿ ಹುಟ್ಟಿ, ನಾಲ್ಕು ಬಾರಿ



ಹೊಂದುವ, ವಿಷ್ಣುವಿನ ಒಂದು ದಿನವಪ್ಪದು. ಸಮಸ್ತ ಈರೇಳು ಭುವನಂಗಳೆಲ್ಲ ಭೂತಸಂಹಾರ ಅಂಥ ಭೂತಸಂಹಾರಗಳು ಹದಿನೆಂಟು ಲಕ್ಷವು ಇಪ್ಪತ್ತೆಂಟು ಸಹಸ್ರವಪ್ಪದು. ಪೃಥ್ವಿಯಲ್ಲಾ ಜಲಪ್ರಳಯ ಅಂಥ ಜಲಪ್ರಳಯುವೆಂಟು ಭಾರಿ ತಿರುಗಿದರೆ ವಿಷ್ಣುವಿಂಗೆ ಮರಣ, ರುದ್ರಂಗೆ ನಿಮಿಷ, ರುದ್ರನ ಒಂದು ದಿನವಪ್ಪದು. ಅತಳ, ವಿತಳ, ಸುತಳ, ಮಹೀತಳ, ರಸಾತಳ, ತಳಾತಳ, ಪಾತಾಳ ಇಂತು ಕೆಳಗೇಳು ಭುವನಂಗಳು, ಮೇಲೆ ಸತ್ಯಲೋಕ, ಜನಲೋಕ, ತಪೋಲೋಕ, ಮಹರ್ಲೋಹ, ಸ್ವರ್ಗಲೋಕ, ಭುವರ್ಲೋಕ, ಭೂಲೋಕ, ಮೊದಲಾಗಿ ಇಂತೀ ಲೋಕಂಗಳೆಲ್ಲ ಮುಳುಗಿ, ಮಹಾಪ್ರಳಯವಾದಲ್ಲಿ ರುದ್ರಲೋಕ ಒಂದುಳಿಯೆ, ಆ ರುದ್ರಂಗೆ ಒಂದು ದಿನ, ಅಂಥ ದಿನ ಮುನ್ನೂರ ಅರವತ್ತು ಕೂಡಲು, ಒಂದು ವರುಷ, ಅಂಥ ವರುಷ ಶತಕೋಟಿ ಕೂಡೆ ರುದ್ರಂಗೆ ಪರಮಾಯಾ, ಅಂಥ ರುದ್ರರು ಅನೇಕರು ಹೋದರಲ್ಲಾ ಮತ್ತಂ, ಪಶುಪತಿ, ಶಂಕರ, ಶಶಿಧರ, ಸದಾಶಿವ ಗೌರೀಪತಿ, ಮಹಾದೇವ, ಈಶ್ವರರೆಂಬವರು ಅಂದಿನ ದಿನದಲ್ಲಿ ಇವರು ಪ್ರಮಥ ಗಣೇಶ್ವರರು. ತಪೋರಾಜ್ಯವನುಂಬರು, ತಪಕ್ಕೆ ಬಿಜಯಂಗೈವರು. ಆ ರುದ್ರರು ಲೋಕಲೋಕಂಗಳು ಕೂಡಿ, ಭೂತ ವರ್ತಿಸುತ್ತಿದ್ದಿತ್ತೊಂದು ಕೆಲಕಾಲ ತನ್ನ ನಿಜವ ತಾನೆ ಅರಿದು, ತನ್ನಲ್ಲಿ ತಾನು ಸುಖಿಯಾದ ನಿಜಲಿಂಗೈಕ್ಯನು ವಿಶ್ವ ಪ್ರಪಂಚಿನ ಅಗುಡಿಗೆಯನರಿಯನು. ಅದೇನು ಕಾರಣವೆಂದರೆ, ತನ್ನ ಸ್ಥಿತಿಯ ತಾನು ಕುರುಹಿಟ್ಟರಿಯ ತೆರಹಿಲ್ಲಾಗಿ, ಅನ್ಯವನರಿಯಲೆಂತು ತೆರಹಿಲ್ಲ. ಇಂತಪ್ಪ ಲಿಂಗೈಕ್ಯಂಗೆ, ಅವು ಪ್ರಳಯುವು ಇಲ್ಲವೆಂಬುದೀಗ, ಈ ವಚನವ ತಾತ್ಪರ್ಯಾರ್ಥ.

೫೧. ಘನವ ಮನ ಕಂಡು, ಆದನೊಂದು ಮಾತಿಂಗೆ ತಂದು ನುಡಿದರೆ, ಅವಕವೆ ಕಿರಿದು ನೋಡಾ! ಅದೇನು ಇಲ್ಲದ ನಿಸ್ಸಂಗದ ಸುಖವು ಗುಹೇಶ್ವರಾ.

ಟೀಕು:— ಮಹಾಘನಲಿಂಗೈಕ್ಯದ ನಿರ್ಣಯುವ ಮನದಲ್ಲಿ ಕಂಡು, ಮನೋಲಯುವಾಗಲರಿಯದೆ ಅದ ವಾಕ್ಯಕ್ಕೆ ತಂದು ನುಡಿವಾತ ಲಿಂಗೈಕ್ಯನಲ್ಲಾ! ಆ ಮನದಲ್ಲಿ ತಾನೆಂಬರಿವು ಆ ಅರಿವು ಲಯುವಾಗಿ ಸಾಮರಸ್ಯವಾಗಿ ನಿಸ್ಸಂಗ ಸುಖಿಯಾಗಿರಬಲ್ಲರೆ ಅದೇ ಲಿಂಗೈಕ್ಯವೆಂಬುದೀ ವಚನದ ತಾತ್ಪರ್ಯಾರ್ಥ.

೫೨. ಸಚರಾಚರ ಒಂದು ಕಿಂಚಿತ್ ಚತುರ್ಯುಗವೆಂಬುದೊಂದು ಕಿಂಚಿತ್, ಅಪ್ಪುವೆಂಬುದೊಂದು ಕಿಂಚಿತ್, ಆಗದೆಂಬುದೊಂದು ಕಿಂಚಿತ್, ತಾನು ಶುದ್ಧವಾದ ಶರಣಂಗೆ ಗುಹೇಶ್ವರನೆಂಬುದೊಂದು ಕಿಂಚಿತ್.

ಟೀಕು:-- ತನ್ನ ತಾನರಿದು ಲಿಂಗದಲ್ಲಿ ಐಕ್ಯವಾದ ಶರಣಂಗೆ ಸಕಲ ಲೋಕದೊಳಗಾದ ನಾನಾ ಪ್ರಪಂಚುಗಳೆಲ್ಲವು ತೃಣಪ್ರತಿಪತ್ತಾಗಿ, ಎಣಿಕೆ ಇಲ್ಲದೆ ಇಪ್ಪವು ಅಹುದು, ಅಲ್ಲ. ಇದು ಲಿಂಗದ ನಿಜವು ಎಂಬ ಎಲ್ಲವು ಕಿಂಚಿನ್ಮಾತ್ರವಾಗಿಪ್ಪವೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೫೩. ತಾ ಸುಖಿಯಾದಡೆ ನಡೆಯಲು ಬೇಡಾ! ತಾ ಸುಖಿಯಾದಡೆ ನುಡಿಯಲು ಬೇಡಾ! ತಾ ಸುಖಿಯಾದಡೆ ಪೂಜಿಸಲು ಬೇಡಾ! ತಾ ಸುಖಿಯಾದಡೆ ಉಣಬೇಡ ಗುಹೇಶ್ವರಾ.

ಟೀಕು:-- ಲಿಂಗದಲ್ಲಿ ನಿಜವನೆಯ್ದಿ ಪರಮ ಸುಖಿಯಾದ ಲಿಂಗೈಕ್ಯನು ನಿರ್ಗಮನಿಯಾಗಿರಬೇಕಲ್ಲದೆ, ಉಪಾಧಿಯಿಂದ ಉಣಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

೫೪. ನಾದ ಮುನ್ನವೋ, ಬಿಂದು ಮುನ್ನವೋ, ಜೀವ ಮುನ್ನವೋ ಕಾಯ ಮುನ್ನವೋ? ಜೀವ ಕಾಯದ ಕುಳಸ್ಥಳಂಗಳ ಬಲ್ಲವರು ನೀವು ಹೇಳಿರೇ, ಗುಹೇಶ್ವರ ನೀನು ಮುನ್ನವೋ, ನಾನು ಮುನ್ನವೋ, ಬಲ್ಲವರು ನೀವು ಹೇಳಿರೆ?

ಟೀಕು:— ನಾದಕ್ಕೆ ಬಿಂದುವೆ ಪ್ರತಿ, ಬಿಂದುವಿಂಗೆ ನಾದವೆ ಪ್ರತಿ, ಅಂತು ನಾದವಿಲ್ಲದೆ, ಬಿಂದುವಿಲ್ಲ. ಬಿಂದುವಿಲ್ಲದೆ ನಾದವಿಲ್ಲ. ಅದು ಕಾರಣ ನಾದವು ಬಿಂದು ಸಮರಸಭಾವಸಂಬಂಧವೆಂಬುದೀ ನಾದ ಮುನ್ನವೋ ಬಿಂದು ಮುನ್ನವೋ, ಬಲ್ಲರೆ ನೀವು ಹೇಳಿರೆ, ಎಂಬ ಶಬ್ದಕ್ಕರ್ಥ- ಜೀವವು ಕಾಯವು ಸಮರಸ ಭಾವವಾಗಿಪ್ಪದೆಂಬುದೀಗ, ಜೀವ ಮುನ್ನವೋ ಕಾಯ ಮುನ್ನವೋ, ಬಲ್ಲರೆ ನೀವು ಹೇಳಿರೆ ಎಂಬ ಶಬ್ದಕ್ಕರ್ಥ. ಲಿಂಗವೆ ಶರಣ, ಶರಣನೆ ಲಿಂಗವಾಗಿ ಸಮರಸ ಭಾವವಾಗಿಪ್ಪದಾಗಿ, ಅಲ್ಲಿ ಒಂದು ಮುಂದು ಒಂದು ಹಿಂದೆಂಬ ಭಾವ ತೋರ



ದೆಂಬುದೀಗ ಗುಹೇಶ್ವರ ನೀನು ಮುನ್ನವೋ, ನಾನು ಮುನ್ನವೋ, ಬಲ್ಲರೆ ನೀವು ಹೇಳಿರೆ ಎಂಬ ಶಬ್ದಕ್ಕರ್ಥ.

೫೫. ಅರಿವರತು, ಬೆರಗು ಹತ್ತಿತ್ತೆಂಬ ಜ್ಞಾನವಿದೆನೋ? ನಾಹಂ ಎಂಬಲ್ಲಿ ತಾನಾರು ಕೊಹಂ ಎಂಬಲ್ಲಿ ಮುನ್ನಾರು ಪರಬ್ರಹ್ಮ ಸೋಹಂ ಎಂಬಲ್ಲಿ ಮುನ್ನ ತಾನೇನಾಗಿದ್ದನೋ? ಚಿದೋಹಂ ಎಂಬ ಹಮ್ಮಿನ ಭವ ಮಾಲೆ ಇದೇನು ಹೇಳಾ? ನಿಃಶಬ್ದಬ್ರಹ್ಮಮುಚ್ಯತೆಯೆಂಬ ಶಬ್ದವಿಡಿದು, ಬಳಲುವ ಕಾರಣವಿದೇನು ಹೇಳಾ ಗುಹೇಶ್ವರಾ?

ಟೀಕು:-- ಲಿಂಗದಲ್ಲಿ ನಿಜವನರಿದು, ಬೆರಸಿದ ಲಿಂಗೈಕ್ಯನು ತನ್ನ ಲಿಂಗೈಕ್ಯಪದವ ವಿವರಿಸಿ ನುಡಿದರೆ, ಅದೆ ಭಿನ್ನವೆಂದರಿದು, ನಾಹಂ ಎನ್ನದೆ, ಕೋಹಂ ಎನ್ನದೆ, ಸೋಹಂ ಎನ್ನದೆ, ಚಿದೋಹಂ ಎನ್ನದೆ, ಇರಬೇಕು. ನಿಃಶಬ್ದಬ್ರಹ್ಮಮುಚ್ಯತೆಯೆಂಬ ಶಬ್ದವನು ನುಡಿಯದಿರಬೇಕೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೫೬. ವಸುಧೆ ಇಲ್ಲದ ಬೆಳಸು ರಾಜಾನ್ನ ಹೆಸರಿಲ್ಲದ ಓಗರ ವೃಷಭ ಮುಟ್ಟದ ಹಯನು. ಬೆಣ್ಣೆಯ ಹೊಸೆವರಿಲ್ಲದೆ, ಕಂಡುಂಡ ಶಿಶು ಕಂಡ ಕನಸಿನಂತೆ, ಗುಹೇಶ್ವರನೆಂಬುದು ಹೆಸರಿಲ್ಲದ ಬಯಲು.

ಟೀಕು:-- ವಸುಧೆಯೆಂದರೆ, ಪೃಥ್ವೀ ತತ್ವಾಂಶವಪ್ಪ ಕಾಯ, ಆ ಕಾಯವಾದಲ್ಲಿ ಪರಮ ಹರುಷದ ಬೆಳಸು ಬೆಳಯಿತ್ತೆಂಬುದೀಗ, ವಸುಧೆಯಿಲ್ಲದ ಬೆಳಸು ರಾಜನ್ನವೆಂಬ ಶಬ್ದಕ್ಕರ್ಥ. ಆ ಪರಮ ಹರುಷದಿಂದಾದ ಮನವೆಂಬ ಶುದ್ಧ ದ್ರವ್ಯವನು ಜ್ಞಾನಾಗ್ನಿಯಿಂದ ಪಾಕವ ಮಾಡಲು, ಅದು, ಅನ್ನಬ್ರಹ್ಮವೆಂಬ ನಾಮವನೆಯ್ದಿ, ನಿರ್ನಾಮವಾಗಿಪ್ಪ ಕಾರಣ, ಹೆಸರಿಲ್ಲದ ಓಗರವೆಂಬ ಶಬ್ದಕ್ಕರ್ಥ. ಶಿವಶಕ್ತಿ ಸಂಗರಹಿತವಾಗಿಪ್ಪ ಭಕ್ತಿಯೆಂಬ ಸುರಧೇನುವಿನಿಂದಾದ ವಿವೇಕವೆಂಬ ನವನೀತವನು ಕಾರಣ ಮಥನವಿಲ್ಲದೆ ಕಳದುಕೊಂಡು, ಆ ಭೋಗಕ್ಕೆ ಗಡಣಿಸಿ ಮಹಾಲಿಂಗಕ್ಕೆ ನಿವೇದಿಸಿ, ಆರೋಗಣೆಯ ಮಾಡುತ್ತಿರಲು ಅದೀಗ ವೃಷಭ ಮುಟ್ಟದ ಹಯನು ಬೆಣ್ಣೆಯ ಹೊಸೆವರಿಲ್ಲದೆ, ಕಂಡು, ಉಂಡೆನೆಂಬ ಶಬ್ದಕ್ಕರ್ಥ. ಈ ಸುಖದ ಸಾರಾಯವ ತಾನಲ್ಲದೆ ಮತ್ತಾರಿಗು ಹೇಳಲಿಕ್ಕೆ ತೆರಹಿಲ್ಲವಾದ ಕಾರಣ, ಶಿಸು ಕಂಡ ಕನಸಿನಂತೆ ಗುಹೇಶ್ವರನೆಂಬುದು ಹೆಸರಿಲ್ಲದ ಬಯಲು ಎಂಬ ಶಬ್ದಕ್ಕರ್ಥ.

೫೭. ಧರೆಯಗಲದ ಹುಲ್ಲೆ ಹರಿದು ಮೇಯಿತ್ತ ಕಂಡೆ. ಬಲೆಯ ಬೀಸುವ ಗಂಡರಾರು ಇಲ್ಲ. ಹರಿದು ಹಿಡಿದೆಹೆನೆಂದರೆ, ತಲೆ ಕಾಣಬರುತ್ತದೆ. ಶಿರವ ಹಿಡಿದಿಹೆನೆಂಬ ಗರುವರಿನ್ನಾರೂ ಇಲ್ಲ. ಹರಿದಾಡುವ ಹುಲ್ಲೆಯ ಕಂಡು, ಹಲವು ಬೆಳ್ಳಾರವವ ಬಿಟ್ಟು ಬೇಟೆಕಾರ ಬಲೆಯ ಬೀಸಿದರೆ ಹುಲ್ಲೆಯಂಜಿ ಹೋಯಿತ್ತು. ಮರುಳದ ಎಲ್ಲೆ ಹುಲ್ಲೆಯ ನೆಸೆಯಬೇಕೆಂದು ಸರಳ ಬಿಟ್ಟು, ಬಾಣವನೊಂದು, ಕೈಯಲ್ಲಿ ಹಿಡಿದು, ಹಳ್ಳ ಕೊಳ್ಳವ ದಾಂಟಿ, ಹುಟ್ಟು, ಬಿಟ್ಟವ ಕಳಿದು, ಅತ್ತ ಬಯಲ ಮರನ ತಾ ಮರೆ ಗೊಂಡಿತ್ತು. ಹತ್ತೆ ಸಾರಿದ ಮೃಗವ ತಾನೆಚ್ಚಡೆ ನಾರಿ ಹರಿದು, ಬಿಲ್ಲು ಮುರಿದು, ಹುಲ್ಲೆ ಸತ್ತಿತ್ತು. ಅದ ಕಿಚ್ಚಿಲ್ಲದ ನಾಡಿಗೊಯ್ದು ಸುಟ್ಟು ಬಾಣಸವ ಮಾಡಲು, ಸತ್ತ ಹುಲ್ಲೆ ಕರಗಿಸಲುಳಿಯಿತ್ತು ನಿಶ್ಚಿಂತವಾಯಿತ್ತು ಗುಹೇಶ್ವರಾ ನಿಮ್ಮ ಶರಣರ ಬಿದಿರ ಬಾಣಸದ ಮನೆಗೆ ಬಂದನು.

ಟೀಕು:— ಪಂಚಶತಕೋಟಿ ವಿಸ್ತೀರ್ಣ ಭೂಮಂಡಲ ಮೊದಲಾದ ಎಲ್ಲ ಲೋಕಂಗಳನು ಮಾಯೆಯೆಂಬ ಹರಿಣಿ ಮೋಹವೆಂಬ ಮುಖದ್ವಾರದಿಂದ ಅಗಿದಗಿದು ತಿನ್ನುತ್ತಿಹಳೆಂಬುದೀಗ, ಧರೆಯಗಲದ ಹುಲ್ಲೆ ಹರಿದು, ಮೇಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಮಾಯೆಯನು ಕರ್ಮ ಭಕ್ತಿ ಜ್ಞಾನವೆಂಬ ಬೆಳ್ಳಾರ ಬೀಸಿಹಿಡಿದು ಕೊಲುವಂತಹ ಜ್ಞಾನಿಗಳಾರೂ ಇಲ್ಲವೆಂಬುದೀಗ ಬಲೆಯ ಬೀಸುವ ಗಂಡರಾರು ಇಲ್ಲವೆಂಬ ಶಬ್ದಕ್ಕರ್ಥ. ಆ ಮಾಯೆಯನು ಲಕ್ಷಿಸಿ ಹಿಡಿದಿಹೆನೆಂದರೆ ಅರಿವಿನ ಮುಂದೆ ತೋರುತ್ತಿಹುದೆಂಬುದೀಗ, ಹರಿದು ಹಿಡಿದಿಹೆನೆಂದರೆ ತಲೆ ಕಾಣ ಬರುತ್ತದೆಯೆಂಬ ಶಬ್ದಕ್ಕರ್ಥ. ಅದ ಹಿಡಿವಡೆ ಸುಜ್ಞಾನವೆಂಬ ಶಿರವನೆ ದೃಢ ವಿಡಿಯಲು ಆ ಮಾಯೆ ತಾನೆ ತನ್ನ ವಶಕ್ಕೆ ಸಿಕ್ಕುವದೆಂಬುದೀಗ, ಶಿರವ ಹಿಡಿದಿಹೆನೆಂಬ ಗರುವರಿನ್ನಾರು ಇಲ್ಲವೆಂಬ ಶಬ್ದಕ್ಕರ್ಥ. ಈ ಕ್ರಮವನರಿದು, ಚಾಂಚಲ್ಯ ವ್ಯವಹಾರಿಯಾಗಿಪ್ಪ ಮಾಯೆಯನು ಸುಜ್ಞಾನದಿಂದ ನಿರೀಕ್ಷಿಸಿ ಸದ್ಭಾವವೆಂಬ ಬಲೆಯ ಬೀಸಲು, ಆ ಮಾಯೆ ತನ್ನ ತಪ್ಪಿಸಿಕೊಂಡಿರುತಿಪ್ಪರೆಂಬುದೀಗ, ಹರಿದಾಡುವ ಹುಲ್ಲೆಯ ಕಂಡು, ಹಲವು ಬೆಳ್ಳಾರವಬಿಟ್ಟು ಬೇಟೆಕಾರ ಬಲೆಯ ಬಿಸಿದರೆ, ಹುಲ್ಲೆಯಂಜಿ ಹೋಯಿತ್ತು. ಎಂಬ ಶಬ್ದಕ್ಕರ್ಥ. ಇದನರಿದು ಏಕನಿಷ್ಠೆಯೆಂಬ ಬಿಲ್ಲ ಝೇಂಕಾರಗೆಯ್ದು ಕೃತನಿಶ್ಚಯವೆಂಬ ಹಸ್ತದಲ್ಲಿ ದೃಢವಿಡಿದು, ಈಷಣತ್ರಯ



ಮುಖ್ಯವಾದ ಸಕಲಪ್ರಪಂಚಗಳೆಂಬ ಬೆಟ್ಟ ಹುಟ್ಟ ಹಳ್ಳ, ಕೊಳ್ಳ, ಅರಣ್ಯವೆಂಬವೆಲ್ಲವ ದಾಂಟಿ ಮಿಥ್ಯೆಯೆಂಬ ವೃಕ್ಷವ ಸಾರಿಪ್ಪ, ಆ ಮಾಯೆಯನು, ಆ ಬಾಣದಿಂದ ಶರಣನು ಎಚ್ಚ ಕೆಡಹಲು, ಭಾವವು ಅಳಿದು, ಆ ಮನವು ಅಳಿದು, ಏಕನಿಷ್ಠೆಯು ನಿಸ್ತರಂಗವಾಗಿ ಜ್ಞಾನವು ನಿರ್ಧರಿಸಿ, ಇಂತು ಮಾಯೆ ಲೋಪವಾಗಿ ಶುದ್ಧ ವಿದ್ಯೆ ಉಳಿಯಿತ್ತೆಂಬುದೀಗ, ಮರುಳು ತಲೆಯಲ್ಲಿ ಹುಲ್ಲೆಯನೆಸೆಯಲೆಂದು ಸರಳ ಬಿಟ್ಟು ಬಾಣವನೊಂದು ಕೈಯ್ಯಲ್ಲಿ ಹಿಡಿದು, ಹಳ್ಳ, ಕೊಳ್ಳವ, ದಾಂಟಿ ಬೆಟ್ಟ ಗಟ್ಟವ ಕಳಿದು, ಅತ್ತ ಬಯಲಮರನ ತಾ ಮರೆಗೊಂಡಿತ್ತು. ಹತ್ತೆ ಸಾರಿದ ಮೃಗವ ತಾನೆಚ್ಚಡೆ ನರ ಹರಿದು, ಬಿಲ್ಲು ಮುರಿದು, ಹುಲ್ಲೆ ಸತ್ತಿತ್ತು ಎಂಬ ಶಬ್ದಕ್ಕರ್ಥ. ಉಳಿದ ಶದ್ಧವಿದ್ಯೆಯನು ಉದರಾಗ್ನಿಯ ತೃಷ್ಣೆಯರಿತ ಮಹಾಜ್ಞಾನ ಪ್ರಕಾಶದಲ್ಲಿ ಸಮರಸಪಾಕವ ಮಾಡಿ, ಆ ಸುಖವ ಸುಖಿಸಲು, ಅಲ್ಲಿ ಇದಂ ಹಂ ಎಂಬ ಮಿಥ್ಯಾಭಾವವು ಅಳಿದು, ಏಕರಸವಾಗಿ ಸತ್ತು ಉಳಯಿತ್ತೆಂಬುದೀಗ ಕಿಚ್ಚಿಲ್ಲದ ನಾಡಿಗೊಯ್ದು, ಸುಟ್ಟು ಬಾಣಸವ ಮಾಡಲು ಸತ್ತ ಹುಲ್ಲೆ ಕರಗಿಸಲುಳಿಯಿತ್ತೆಂಬ ಶಬ್ದಕ್ಕರ್ಥ. ಇಂತಾಗೆ ನಿಶ್ಚಿಂತ ನಿವಾಸಿಯಾದ ಶರಣ ಜ್ಞೇಯವೆಂಬ ನಿವಾಸದಲ್ಲಿ ಪರಮ ಸುಖಿಯಾಗಿದ್ದನೆಂಬುದೀಗ ನಿಶ್ಚಿಂತವಾಯಿತ್ತು ಗುಹೇಶ್ವರಾ ನಿಮ್ಮ ಶರಣನು ಕಟ್ಟದಿರ ಬಾಣಸದ ಮನೆಗೆ ಬಂದನು ಎಂಬ ಶಬ್ದಕ್ಕರ್ಥ.

೫೮. ಕಾಯದೊಳಗೆ ಕರುಳುಳ್ಳನ್ನಕ್ಕರ ಹಸಿವು ಮಾಣದು. ಕಾಯದೊಳಗಣ ಕರುಳ ತೆಗದು, ಕಂಗಳ ಮೇಲಿರಿಸಿ, ಇದನಡಿಗೆಯ ಮಾಡಿ ಗಡಣಿಸುತ್ತಿದ್ದೆನು ಏನೆಂಬೆ ಗುಹೇಶ್ವರಾ.

ಟೀಕು:— ಅಂಗದೊಳಗೆ ಕರಣಾದಿ ಗುಣಂಗಳುಳ್ಳನ್ನಕ್ಕರ ಅಂಗದಾಪ್ಯಾಯನವು ತೃಷ್ಣೆಯು ಬಿಡದೆಂಬುದೀಗ ಕಾಯದೊಳಗೆ ಕರುಳುಳ್ಳನ್ನಕ್ಕರ ಹಸಿವು ಮಾಣದೆಂಬ ಶಬ್ದಕ್ಕರ್ಥ. ಆ ಅಂಗದೊಳಗಿಪ್ಪ ಕರಣಂಗಳೆಲ್ಲವನು ನಿವೃತ್ತಿಮುಖಕ್ಕೆ ತಂದು, ಸುಜ್ಞಾನವೆಂಬ ದೃಷ್ಟಿಯ ಮೇಲಿರಿಸಲು, ಆ ಕರಣಂಗಳೆಲ್ಲವೂ ಜ್ಞಾನಾಗ್ನಿಯ ಪ್ರಭೆಯಲ್ಲಿ ಅಳಿದು ಲಿಂಗಕರಣಂಗಳಾಗಲು, ಆ ಸುಖವು ಮಹಾ ಲಿಂಗದಲ್ಲಿ ಅರ್ಪಿಸಿ, ತಾನು, ತಾನಾದ ತನೆ ಲಿಂಗೈಕ್ಯನೆಂಬುದೀಗ ಕಾಯದೊಳಗಣ ಕರುಳ ತೆಗೆದು

ಕಂಗಳ ಮೇಲಿರಿಸಿ, ಇವನಡಿಗೆಯ ಮಾಡಿ, ಗಡಣಿಸುತ್ತಿದ್ದೆನು ಗುಹೇಶ್ವರಾಯೆಂಬ ಶಬ್ದಕ್ಕರ್ಥ.

೫೯. ಆರು ಬಣ್ಣದ ಮೃಗವು ತೋರಿಯಡಗಿತ್ತು. ಬಯಲ ಮೂರು ಲೋಕದೊಳಗೆ ಸಾರಿ ಹೆಜ್ಜೆಯ ನೋಡಿ ತೊರೆಯ ಬೆಂಬಳಿವಿಡಿದು, ತೋಯದಲ್ಲಿಗೆ ಬಂದಿತ್ತು. ಸೊಹಂ ಸೋಹಮೆಂದೆನುತ್ತಿದ್ದ ಮೃಗವು ಇಹಪರವ ಮೀರಿ ನಿಂದಿತ್ತು. ತೋರಲಿಲ್ಲದ ಬಿಲ್ಲು ಬೇರೆನಿಸದ ಬಾಣ, ಅರುವಿನ ಕೈಯ್ಯಲ್ಲಿ ಕುರುಹ ಬಾಣಸವ ಮಾಡಿ ತೆರಹಿಲ್ಲದ ಪಾಕದಲ್ಲಿ ಅಡಿಗೆಯ ಮಾಡಿದ ಬೋನವ ಅರ್ಪಿತವ ಮಾಡಿದ ಪ್ರಸಾದದಿಂದ ಸುಖಿಯಾದೆ ಗುಹೇಶ್ವರಾ.

ಟೀಕುಃ—ಷಡುವರ್ಣಾತ್ಮಕ ಸ್ವರೂಪಾಗಿಪ್ಪುದು ಮಾಯೆ. ಆ ಮಾಯೆಯೆಂಬುದು ಅನಿತ್ಯವಪ್ಪುದೆ ಕಾರಣವಾಗಿ, ತೋರಿಯಡಗಿತ್ತು, ಅಡಗಿ ತೋರುತ್ತಿಪ್ಪುದೆಂಬುದೀಗ, ಆರು ಬಣ್ಣದ ಮೃಗವು ತೋರಿಯಡಗಿತ್ತೆಂಬ ಶಬ್ದಕ್ಕರ್ಥ. ಆ ಮಾಯೆಯೆಂಬ ಮೃಗವನು ಸಂಹಾರವ ಮಾಡಿಹೆನೆಂದು ವಿಚಾರಿಸಿ ನೋಡಲು, ಅದು ವಿಶ್ವದೊಳಗೆಲ್ಲಿಯು ತಾನೆಯಾಗಿದ್ದಿತ್ತೆಂಬುದನರಿದು, ಆ ಮಾಯೆಯ ಸಿಂದ ನಿಲವನರಿಯಲು, ತೊರೆ ಎಂದರೆ ಹರಿವ ಮನ, ಆ ಮನದ ಬೆಂಬಳಿಯಲು, ಬಂದು ಆ ಮಾಯಾ ಮೃಗವು ಶರಣನ ಕಣ್ಣ ಮುಂದೆ ಗುರಿಯಾಗಿದ್ದಿತೆಂಬುದೀಗ, ಬಯಲ ಮೂರು ಲೋಕದೊಳಗ ಸಾರಿ ಹೆಜ್ಜೆಯ ನೋಡಿ, ತೊರೆಯ ಬೆಂಬಳಿವಿಡಿದು, ತೋಯದಲ್ಲಿಗೆ ಬಂದಿತ್ತು ಎಂಬ ಶಬ್ದಕ್ಕರ್ಥ. ಅಂತು ಶರಣನ ಕಣ್ಣಮುಂದೆ ಸಿಕ್ಕಿದ ಮಾಯಾ ಭ್ರಾಂತು ಜೀವನು ಸೋಹಂ ಸೋಹಂಮೆಂಬ ಪದದ ಅಹಂಕಾರದಿಂದ ತಾನಲ್ಲದೆ ಮತ್ತಾರು ಇಲ್ಲವೆಂದು ಅಹಂಕಾರವನ್ನೈದೆ ಇಹಪರವೆಂಬ ಸುಖವನು ತೋರಲೀಸದೆ ತಾನೆ ಘನವನಾಡಿ ತೋರುತ್ತಿದ್ದಿತೆಂಬುದೀಗ, ಸೋಹಂ ಸೋಹಂ ಎಂದೆನುತ್ತಿದ್ದ ಮೃಗವು ಇಹಪರವ ಮೀರಿ ನಿಂದಿತ್ತು ಎಂಬ ಶಬ್ದಕ್ಕರ್ಥ. ಆ ಮಾಯಾ ಮೃಗವನು ಭಿನ್ನ ಭಾವವಿಲ್ಲದ ಸದ್ಭಾವವೆಂಬ ಬಿಲ್ಲಿನಲ್ಲಿ ಏಕೋನಿಷ್ಠೆಯೆಂಬ ಬಾಣವ ತೊಟ್ಟು, ಏಕಾಗ್ರ ಚಿತ್ತದಿಂದ ಲಕ್ಷಿಸಿ ಎಸೆದು ಕೆಡೆಹಲು, ಆ ಮಾಯೆಯಳಿದು ಶುದ್ಧವಿದ್ಯೆಯುಳಿಯಲು ಆಸದ್ವಿದ್ಯೆಯ ಕುರುಹನು ಮಹಜ್ಞಾನಾಗ್ನಿಯಿಂದ ಸಮರಸ ಪಾಕವ ಮಾಡಿದನೆಂಬುದೀಗ,



ತೋರಲಿಲ್ಲದ ಬಿಲ್ಲು ಬೇರೆನಿಸದ ಬಾಣ ಅರುವಿನ ಕೈಯ್ಯಲ್ಲಿ ಕುರುಹ ಬಾಣಸವ ಮಾಡಿ, ತೆರಹಿಲ್ಲದ ಪಾಕದಲ್ಲಿ ಅಡಿಗೆಯ ಮಾಡಿದನೆಂಬ ಶಬ್ದಕ್ಕರ್ಥ. ಇಂತು ಸಮರಸವಾದ ಮಹಾ ಪದಾರ್ಥವನು ಮಹಾಲಿಂಗೈಕ್ಯ ಅರ್ಪಿಸಿ ಸೇವ್ಯ ಪ್ರಸಾದಿಯಾಗಿ ಸುಖಿಯಾದೆನೆಂಬುದೀಗ, ಅಡಿಗೆಯ ಮಾಡಿದಬೋನವನರ್ಪಿತವಮಾಡಿದ ಪ್ರಸಾದದಿಂದ ಸುಖಿಯಾದೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೬೦. ನಿರಾಳವೆಂಬ ಶಿಸುವಿಂಗೆ, ಪೃಥ್ವಿಯೆಂಬ ತೊಟ್ಟಿಲು, ನಿಜೈಕ್ಯವೆಂಬ ತಾಯಿ ಬಂದು, ಮೊಲೆಗೊಟ್ಟು, ಬೆಣ್ಣೆಯನಿಕ್ಕಿ ವಾಯು ಬಂದು ತೊಟ್ಟಿಲ ತೂಗಿ ಜೋಗುಳವಾಡಿದಡೆ, ಆಕಾಶ ಬಂದು ಶಿಸುವನೆತ್ತಿಕೊಂಡು, ಬೆಳಸಿತ್ತಲ್ಲಾ! ನಿರಾಳವೆಂಬ ಹಸಿವು ತೃಷೆಯು ಶಿಸುವಿಂಗೆ ಬೇಕೆಂದು ಮುಗ್ಧೆಯಾ ಬೆಸಗೊಳಲರಿಯರು ಮೂರು ಲೋಕವು ಗುಹೇಶ್ವರ.

ಟೀಕುಃ—ನಿರ್ಜಯನಿರಾಳವೆಂಬ ಮಹಾಜ್ಞಾನತತ್ವಕ್ಕೆ ದೇಹವೇ, ಆಸ್ತ್ಮಾಯ ಸ್ಥಾನವಾಯಿತ್ತೆಂಬುದೀಗ, ನಿರಾಳವೆಂಬ ಶಿಸುವಿಂಗೆ ಪೃಥ್ವಿ ಎಂಬ ತೊಟ್ಟಿಲು ಯೆಂಬ ಶಬ್ದಕ್ಕರ್ಥ. ಆ ಉದಯಿಸಿದ ಜ್ಞಾನವೆಂಬ ಶಿಸುವನು ಪರಶಕ್ತಿಯೆಂಬ ತಾಯಿ ಎತ್ತಿಕೊಂಡು ಪರಮಾಮೃತವೆಂಬ ಮೊಲೆಯುನುಂಡು ಪರಿಪೂರ್ಣಾನುಭಾವವೆಂಬ ನವನೀತವನುಣಿಸಿ ನಿತ್ಯ ತೃಪ್ತಿಯುನೆಯ್ದಿಸಿದಳೆಂಬುದೀಗ, ನಿಜೈಕ್ಯವೆಂಬ ತಾಯಿ ಬಂದು ಮೊಲೆಯುಕೊಟ್ಟು, ಬೆಣ್ಣೆಯ ನಿಕ್ಕಿದಳೆಂಬ ಶಬ್ದಕ್ಕರ್ಥ. ಆ ಶಿಸುವಿನ ದೇಹವೆಂಬ ತೊಟ್ಟಿಲು, ಪರಮ ಚೈತನ್ಯವೆಂಬ ಪ್ರಾಣವಾಯು ತೂಗಿ, ಶಿವೋಹಂ, ಶಿವೋಹಂ, ಎಂದು ಜೋಗುಳವಾಡುತ್ತಿರಲು, ಆ ಶಿಸುವ ಮಹಾದಾಕಾಶವವಗ್ರಹಿಸಿಕೊಂಡು, ಮಹತ್ತತ್ವದಲ್ಲಿ ನಿಜವನೆಯ್ದಿತ್ತೆಂಬುದೀಗ, ವಾಯು ಬಂದು ತೊಟ್ಟಿಲ ತೂಗಿ, ಜೋಗುಳವಾಡಿದಡೆ, ಆಕಾಶ ಬಂದು ಶಿಶುವನೆತ್ತಿಕೊಂಡು, ಬೆಳೆಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಇಂತಪ್ಪ ನಿರಾಳದಲ್ಲಿ ಬೆರಸಿ ಸುಖಿಯಾಗಬೇಕೆಂದು ಇಚ್ಛಿಸುವ ಮಹಚ್ಛ್ರದ್ಧೆಪರಶಕ್ತಿಯೆಂಬಾಕೆಯುನರಿಯದವರಿಗೆ ಅ ಶ್ರದ್ಧೆಯಾಗಿಪ್ಪುದೆಂಬುದೀಗ ನಿರಾಳವೆಂಬ ಹಸಿವು ತೃಷೆಯಾ ಶಿಸುವಿಂಗೆ ಬೇಕೆಂದು ಮುಗ್ಧೆಯು ಬೆಸಗೊಳಲರಿಯರು ಮೂರು ಲೋಕವ್ವು ಗುಹೇಶ್ವರಾಯೆಂಬ ಶಬ್ದಕ್ಕರ್ಥ.

೬೧. ಉಲಿವ ಮರದ ಪಕ್ಷಿಯಂತೆ, ದೆಸೆದೆಸೆಯನಾಲಿಸುತ್ತಿದ್ದೆ. ಅರಿವವರಿಲ್ಲ. ಅರಿವವರಿಲ್ಲ. ಅರಿದು ಮರೆಯಿತ್ತಯ್ಯ! ಮಡುವಿನೊಳಗೆ ಬಿದ್ದ ಆಲಿಕಲ್ಲಿನಂತೆ, ತನ್ನ ತಾನಿದ್ದನು ಗುಹೇಶ್ವರಯ್ಯನು.

ಟೀಕು:— ತನ್ನ ತಾನರಿದ ಮಹಂತ ಶರಣನು, ಆವ ದೆಸೆ ದಿಕ್ಕ ನೋಡಿದಡೆಯು ಅಲ್ಲೆಲ್ಲಿಯು ತಾನೆಯಾಗಿಹನಲ್ಲದೆ ಮತ್ತೇನು ಅನ್ಯವಿಲ್ಲ ಅನ್ಯವನರಿಯಲಿಲ್ಲಾಗಿ, ಅಂಬುಧಿಯೊಳಗೆ ಬಿದ್ದ, ಪಯೋದಘನದಂತೆ, ಅಭಿನ್ನನಾಗಿದ್ದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೬೨. ಮೂರರಲ್ಲಿ ಮುಟ್ಟಲಿಲ್ಲ. ಆರರಲ್ಲಿ ತೋರಲಿಲ್ಲ. ಉಂಟರಲ್ಲಿ ಕಂಡುದಿಲ್ಲ. ಒಂದರಲ್ಲಿ ನಿಂದುದಿಲ್ಲ. ಏನೆಂದೆಂಬೆ, ಎಂತೆಂಬೆ? ಕಾಯದಲ್ಲಿ ಅಳಿದುದಿಲ್ಲ. ಜೀವದಲ್ಲಿ ಉಳಿದುದಿಲ್ಲ. ಗುಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲ.

ಟೀಕು:— ಭಿನ್ನಭಾವವಳಿದು, ನಿರ್ಭಾವಿಯಾದ ಲಿಂಗೈಕ್ಯನ ನಿಲವು ಅಂಗತ್ರಯದ ಹಂಗ ಮುಟ್ಟದೆಂಬುದೀಗ ಮೂರರಲ್ಲಿ ಮುಟ್ಟಲಿಲ್ಲವೆಂಬ ಶಬ್ದಕ್ಕರ್ಥ. ನಿಲವ ಷಡುವರ್ಣಂಗಳೊಳಗೆ ತೋರಿಕೆಯಾಗಿ, ತೋರದೆಂಬುದೀಗ, ಆರರಲ್ಲಿ ತೋರಲಿಲ್ಲವೆಂಬ ಶಬ್ದಕ್ಕರ್ಥ. ಆ ನಿಲವು ಅಷ್ಟತನುಗಳಲ್ಲಿ ಸಿಕ್ಕಿ ದೃಶ್ಯವಾಗದೆಂಬುದೀಗ, ಎಂಟರಲ್ಲಿ ಕಂಡುದಿಲ್ಲವೆಂಬ ಶಬ್ದಕ್ಕರ್ಥ. ಆ ನಿಲವು "ಏಕಮೇವ ನ ದ್ವಿತೀಯಂ ಬ್ರಹ್ಮವೆಂಬ ವಾಕ್ಯದಲ್ಲಿ ಸಿಲ್ಕಿ ಎಣಿಕೆಗೆ ಬಾರದೆಂಬುದೀಗ, ಒಂದರಲ್ಲಿ ನಿಂದುದಿಲ್ಲವೆಂಬ ಶಬ್ದಕ್ಕರ್ಥ. ಆ ನಿಲವು ಕಾಯಜೀವಭ್ರಾಂತುಗಳೊಳಗಿದ್ದು ಉತ್ಪತ್ತಿಸ್ಥಿತಿಲಯಕ್ಕೊಳಗಾಗದೆ ನಿಃಶಬ್ದವೇದಿಯಾಗಿದ್ದಿತ್ತೆಂಬುದೀಗ, ಕಾಯದಲ್ಲಿ ಅಳಿದುದಿಲ್ಲ, ಜೀವದಲ್ಲಿ ಉಳಿದುದಿಲ್ಲ, ಗುಹೇಶ್ವರನೆಂಬ ಲಿಂಗವು ಶಬ್ದಕ್ಕೆ ಬಂದುದಿಲ್ಲವೆಂಬ ಶಬ್ದಕ್ಕರ್ಥ.

೬೩. ವಾಯು ನಿದ್ರೆ ಗೆಯ್ದಗೆ, ಆಕಾಶ ಜೋಗುಳವಾಡಿತ್ತು. ಬಯಲು ಬಳಲಿದೆನೆಂದರೆ, ನಿರಾಳ ಮೊಲೆಗೊಟ್ಟಿತ್ತು. ಆಕಾಶವಡಗಿತ್ತು. ಜೋಗುಳ ನಿಂದಿತ್ತು. ಗುಹೇಶ್ವರನೈದಾನೆ ಇಲ್ಲದಂತೆ.

ಟೀಕು:— ಸ್ವಾನುಭವ ಸನ್ನಿಹಿತವಾದ ಶರಣನ ಪ್ರಾಣವಾಯು ವಳಿದು, ಪರಮ ಚೈತನ್ಯಾತ್ಮಕನಲ್ಲಿ ವಿಶ್ರಮಿಸಲು, ಆಕಾಶವೆಂಬ ಆತ್ಮತತ್ವ, ಶಿವೋಹಂ, ಶಿವೋಹಮೆನುತ್ತಿದ್ದಿತ್ತೆಂಬುದೀಗ, ವಾಯುನಿದ್ರೆ ಗೆಯ್ದಡೆ



ಆಕಾಶ ಜೋಗುಳವಾಡಿತ್ತೆಂಬ ಶಬ್ದಕ್ಕರ್ಥ. ಆ ಶಿವೋಹಂ ಆ ಶಿವೋಹಮೆಂಬ ಪದವು ನಿಃಶಬ್ದವೇದಿಸದೆಂಬ ಬಯಕೆಯಲ್ಲಿ ಇರಲು, ಅಲ್ಲಿ ಪರಮಾಮೃತವೆಂಬ ನಿತ್ಯ ತೃಪ್ತಿ ಸಾಧ್ಯವಾಯಿತ್ತೆಂಬುದೀಗ, ಬಯಲು ಬಳಲಿದೆನೆಂದರೆ ನಿರಾಳ ಮೊಲೆಗೊಟ್ಟಿತ್ತೆಂಬ ಶಬ್ದಕ್ಕರ್ಥ. ಇಂತು ತನ್ನಲ್ಲಿ ತಾನು ನಿತ್ಯ ತೃಪ್ತಿಯನೈದಲು, ಆತ್ಮತತ್ವಭಾವವು, ಸೋಹಂ ಸೋಹಮೆಂಬ ಧ್ವನಿಯು ಅಳಿದು, ನಿಃಶಬ್ದ ಬ್ರಹ್ಮವಾಯಿತ್ತಾಗಿ ನಿರ್ವಯಲೆಯಾಯಿತ್ತೆಂಬುದೀಗ, ಆಕಾಶವಡಗಿತ್ತು ಜೋಗುಳ ನಿಂದಿತ್ತು ಗುಹೇಶ್ವರನಯಿದಾನೆ ಇಲ್ಲದಂತೆಯೆಂಬ ಶಬ್ದಕ್ಕರ್ಥ.

೬೪. ಉಪಾಧಿಕ ಮನವು, ಉಪಾಧಿಕ ರಹಿತ ಮನವು ನಿಂದಲ್ಲಿಯೆ, ನಿವಾತವಾಯಿತ್ತು. ಲಿಂಗಉದಯದಲ್ಲಿ ಪ್ರಜ್ವಲಿಸುತ್ತಿದೆ ಗುಹೇಶ್ವರನೆಂಬ ಲಿಂಗ ತಾನೆಯಾಗಿ.

ಟೀಕು:— ಮನದುಪಾಧಿಯಳಿದು, ನಿರುಪಾಧಿಯನೆಯ್ದಿದ ಸಕಲೇಂದ್ರಿಯ ಕರಣಂಗಳ ವ್ಯಾಕುಳವಡಗಿತ್ತು. ಆ ನಿರುಪಾಧಿಕ ಮನವು ಮನೋಲಯವಾಗಲು, ಅಲ್ಲಿ ನಿಂದುದೆ ನಿವಾತವಾಯಿತ್ತೆಂಬುದೀಗ, ಉಪಾಧಿಕ ಮನವು ಉಪಾಧಿಕ ರಹಿತ ಮನವು ನಿಂದಲ್ಲಿಯೆ ನಿವಾತವಾಯಿತ್ತೆಂಬ ಶಬ್ದಕ್ಕರ್ಥ. ಅಂತು ನಿಂದಲ್ಲಿ ನಿವಾತವಾದ ಪರಮಾನಂದಭಾವವು ನಿರ್ಭಾವವಾಗಿ, ಚಿದ್ಬಿಂದು ಪರಿಪೂರ್ಣ ಪ್ರಕಾಶವಾಯಿತ್ತೆಂಬುದೀಗ, ಆನಂದದ ಭಾವವು ಬಿಂದು ತಾನುಳಿದು ನಿಂದಲ್ಲಿಯೆ ನಿವಾತವಾಯಿತ್ತೆಂಬ ಶಬ್ದಕ್ಕರ್ಥ. ಇಂತಾಗಲು ಮಹಲಿಂಗಪ್ರಭೆ, ಆ ಶರಣನ ಸರ್ವಾಂಗದಲ್ಲಿ ತಾನೆಯಾಗಿ ತೊಳಗಿ ಬಳಗಿ, ಪ್ರಕಾಶಿಸುತ್ತಿದ್ದುದೆಂಬುದೀಗ, ಲಿಂಗವು ಉದಯದಲ್ಲಿ ಪ್ರಜ್ವಲಿಸುತ್ತಿದೆ ಗುಹೇಶ್ವರ ಲಿಂಗವಾಗಿ ಎಂಬ ಶಬ್ದಕ್ಕರ್ಥ.

೬೫. ಶಿಸು ತಾಯ ಮೊಲೆವಾಲನೊಸೆದುಂಡು, ತೃಪ್ತನಾಗಿ ಹೆಸರ ಬೆಸಗೊಂಬಡದು ಉಪಮೆಗೆ ಸಾಧ್ಯವಲ್ಲಯ್ಯಾ! ಕಣ್ಣಾಲಿ ಕಪ್ಪನುಂಗಿ, ಸಣ್ಣ ಬಣ್ಣಗಳುಡಿಗೆಯ ಬಣ್ಣದೊಳಗಣ ಭ್ರಮೆ ಇನ್ನಾರಿಗಳವಡಬು, ಬಣ್ಣ ಸಮುಚ್ಚಯವಾಗಿ, ಬಣ್ಣ ಬಗೆಯನೆ ನುಂಗಿ, ಗುಹೇಶ್ವರನೆಂಬ ನಿಲವ ನಿಜದ ನಿಃಪತಿ ನುಂಗಿತ್ತು.

ಟೀಕುಃ— ಶರಣನಲ್ಲಿ ಜ್ಞಾನವೆಂಬ ಲಿಂಗ ಉದಯವಾದ ಕಾರಣ, ಆ ಶರಣನೆ ಆ ಲಿಂಗಕ್ಕೆ ಮಾತೃಸ್ಥಾನ. ಅಂತಪ್ಪ ಶರಣನ ಪ್ರಸನ್ನ ಸುಖವೆಂಬ ಪರಿಣಾಮಾಮೃತವನು, ಆ ಲಿಂಗವು ಆರೋಗಿಸಿ ನಿತ್ಯ ತೃಪ್ತಿಯಲ್ಲಿ ನಿಂದಿರುತ್ತಿರಲು, ಆ ನಿಲವು ಉಪಮಾತೀತವಾಗಿದ್ದಿತೆಂಬುದೀಗ, ಶಿಸು ತಾಯ ಮೊಲೆವಾಲನೊಸೆದುಂಡು ತೃಪ್ತನಾಗಿ ಹೆಸರ ಬೆಸಗೊಂಬಡದು, ಉಪಮೆಗೆ ಸಾಧ್ಯವಿಲ್ಲವೆಂಬ ಶಬ್ದಕ್ಕರ್ಥ. ಇಂತಾಗಲು ಸುಜ್ಞಾನವೆಂಬ ಚಕ್ಷುವಿನಲ್ಲಿ ಅಜ್ಞಾನವೆಂಬ ಕಾಳಿಕೆಯಳಿದು, ಖಂಡಿತ ಜ್ಞಾನದ ಬಾಯಿಯೊಳಗಣ ಮಾಯಾಭ್ರಮೆ ಎಲ್ಲವು ಲೋಪವಾಯಿತ್ತೆಂಬುದೀಗ, ಕಣ್ಣಾಲಿ ಕಪ್ಪ ನುಂಗಿ ಸಣ್ಣ ಬಣ್ಣಗಳುಡಿಗೆಯ ಬಣ್ಣದೊಳಗಣ ಭ್ರಮೆ ಇನ್ನಾರಿಗಳವಡದೆಂಬ ಶಬ್ದಕ್ಕರ್ಥ. ಇಂತು ಬಹು ವರ್ಣಂಗಳಡಗಿ ತಾನೆ ಕಡೆಯಾಣಿಯಾಗಿ ಉಳಿದ ನಿಲವು ಆ ಶರಣನಲ್ಲಿ ನಿಃಪತಿಯಾಯಿತ್ತೆಂಬುದೀಗ, ಬಣ್ಣ ಸಮುಚ್ಚಯವಾಗಿ, ಬಣ್ಣ ಬಗೆಯ ಗುಹೇಶ್ವರನೆಂಬ ನಿಲವ ನಿಜದ ನಿಃಪತಿ ನುಂಗಿತ್ತೆಂಬ ಶಬ್ದಕ್ಕರ್ಥ.

೬೬. ಅಂಗೈಯೊಳಗಣ ನಾರಿವಾಳದ ಸಸಿ, ಅಂಬರದೆರಳೆಯ ನುಂಗಿತ್ತಲ್ಲಾ! ಕಂಭದೊಳಗಣ ಮಾಣಿಕ್ಯದ ಬಿಂದು ನವಕೋಟಿ ಬ್ರಹ್ಮರ ನುಂಗಿತ್ತಲ್ಲಾ! ಅಂಡಜನೆಂಬ ತತ್ತಿಯು ಹಲವು ಪಕ್ಷಿಯ ನುಂಗಿ ನಿರ್ವಯಲಾಯಿತ್ತು ಗುಹೇಶ್ವರಾ.

ಟೀಕುಃ— ನಾರಿವಾಳದ ಸಸಿಯೆಂದರೆ ಬೇಡಿದವರಿಗೆ ಬೇಡಿದ ಇಷ್ಟಾರ್ಥ ಸಿದ್ಧಿಯ ಕೊಡುವ ಕಲ್ಪತರುವಿಂಗೆ ಹೆಸರು. ಅಂತು ಅಂಗೈಯೊಳಗಿದ್ದು ಇಷ್ಟಾರ್ಥ ಸಿದ್ಧಿಯ ಕೊಡುವ ಇಷ್ಟಲಿಂಗವು ಅಂಗದೊಳಗೆ, ಪ್ರಾಣದೊಳಗೆ ಪರಿಪೂರ್ಣಭಾವವಸೆಯ್ದು, ಆ ಶರಣನನವಗ್ರಹಿಸಿ ಆತ್ಮತತ್ವಮಧ್ಯದಲ್ಲಿಪ್ಪ ಮಹದಹಂಕಾರವೆಂಬ ಕಳಳನು ತಾನೆ ಅವಗ್ರಹಿಸಿ ನಿಜದಲ್ಲಿ ನಿರ್ಧರಿಸಿತ್ತೆಂಬುದೀಗ, ಅಂಗೈಯೊಳಗಣ ನಾರಿವಾಳದ ಶಶಿ ಅಂಬರದೆರಳೆಯ ನುಂಗಿತ್ತಲ್ಲಿಯೆಂಬ ಶಬ್ದಕ್ಕರ್ಥ. ಆ ಶರಣನ ಏಕೋಭಾವವೆಂಬ ಸ್ತಂಭದೊಳಗೆ ಇದ್ದ ಮಹಾಜ್ಞಾನರತ್ನ ಬಿಂದು ನವಕೋಟಿ ಬ್ರಹ್ಮತತ್ವದ ಉತ್ಪತ್ತಿಸ್ಥಿತಿಲಯಂಗಳ ತನ್ನೊಳಗಡಗಿಸಿಕೊಂಡಿತ್ತೆಂಬುದೀಗ, ಕಂಭದೊಳಗಣ ಮಾಣಿಕ್ಯದ ಬಿಂದು ನವಕೋಟಿಬ್ರಹ್ಮರ ನುಂಗಿತ್ತಲ್ಲಾಯೆಂಬ ಶಬ್ದಕ್ಕರ್ಥ. ಆ ಮಹಾಜ್ಞಾನಬಿಂದುವೆಂಬ ಚಿದ್ಬ್ರಹ್ಮಾಂಡ



ಪಂಚವಿಂಶತಿ ತತ್ವಗಳೊಳಗೆ ಲಯ ತಾನೆಯಾಗಿಪ್ಪ ಹಂಸನ ಪದದ ಬಹುಗತಿಗಳೆಲ್ಲವನು ತನ್ನೊಳಗೆ ಅವಗ್ರಹಿಸಿ ನಿರ್ವಯಲಾಯಿತ್ತೆಂಬುದೀಗ, ಅಂಡಜವೆಂಬ ತತ್ತಿ ಹಲವು ಪಕ್ಷಿಯ ನುಂಗಿ ನಿರ್ವಯಲಾಯಿತ್ತು ಗುಹೇಶ್ವರಾಯೆಂಬ ಶಬ್ದಕ್ಕರ್ಥ.

೬೭. ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಹು ಜನನ ಮರಣವ ನಿಲಿಸಿ, ಜ್ಞಾನ ಜ್ಯೋತಿಯ ಉದಯ ಭಾನುಕೋಟಿಯ ಮೀರಿ ಸ್ವಾನುಭಾವದ ಉದಯ ಜ್ಞಾನಶೂನ್ಯದಲಡಗಿದ ಘನವನೇನೆಂಬೆ ಗುಹೇಶ್ವರಾ?

ಟೀಕ:— ಮನದ ಮನೋಹರವಾದ ರಮಣೀಯವಾದ ತೂರ್ಯದಲ್ಲಿ ಉದಯವಾದ ಮಹಾಜ್ಞಾನದ ನಿಲವು ಜನನಮರಣವ ಕೆಡಿಸಿತ್ತೆಂಬುದೀಗ, ಮನದ ಕೊನೆಯ ಮೊನೆಯಮೇಲೆ, ನೆನೆದ ನೆನಹು ಜನನ ಮರಣವ ನಿಲಿಸಿತ್ತೆಂಬ ಶಬ್ದಕ್ಕರ್ಥ. ಇಂಥ ಜ್ಞಾನಜ್ಯೋತಿಯ ಮಹಾಪ್ರಭೆ ಶತಕೋಟಿ ಸೂರ್ಯಪ್ರಕಾಶವ ಮೀರಿ ಪರಿಪೂರ್ಣ ಸ್ವಾನುಭಾವದ ಮಹಾಜ್ಞಾನ ಶೂನ್ಯದಲ್ಲಿ ವಿಶ್ರಮಿಸಿ ನಿಂದ ನಿಜದ ನಿಲವ ಉಪಮೆಗೆ ತರಬಾರದೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೬೮. ಭಾವಕ್ಕಿಂಬಿಲ್ಲ ಶಬ್ದ. ವಿಶಾಸಲು ನೋಡಾ! ನುಡಿಗೆ ಎಡೆ ಇಲ್ಲ. ಎಡೆಗೆ ಕಡೆಯಿಲ್ಲ. ಗುಹೇಶ್ವರನೆಂಬ ಶಬ್ದವೇದಿಸಲೊಡನೆ.

ಟೀಕುಃ— ಭಾವದಲ್ಲಿ ಭರಿತವಾದ ಲಿಂಗೈಕ್ಯನು ತಾನೆಂಬ ತನ್ನ ಕುರುಹನರಿವಡೆ, ತೆರಹ ಕಾಣನಾಗಿ ನುಡಿವಡೆ ಎಡೆತೆರಹಿಲ್ಲದೆ ಶಬ್ದಗಂಭೀರನಾಗಿದ್ದನೆಂಬುದೀಗ, ಈ ವಚನದ ತಾತ್ಪರ್ಯಾರ್ಥವು.

೬೯. ನೆನೆಹ ನೆನೆವ ಮನದಲ್ಲಿಲ್ಲ, ತನುವಿನಾಸೆ ಮುನ್ನವಿಲ್ಲ. ನೆನೆವ ಮನವ ನತಿಗಳೆದ ಘನಕ್ಕೆ ಘನವನೆಂತೆಂಬೆ? ತನ್ನಲ್ಲಿ ತಾನಾಯಿತ್ತು ಭಿನ್ನವಿಲ್ಲದೆ, ನಿಂದ ನಿಜವನೇನೆಂಬೆ? ಅನಾಯಾಸದನುವ ಕಂಡು, ಆನು ಬೆರಗಾದೆನಯ್ಯ. ಇಂತಿದ್ದುದು ಅಂತೆ ಅದೆ ಚಿಂತೆ ಇಲ್ಲದರನುಭಾವ ಗುಹೇಶ್ವರ.

ಟೀಕುಃ— ಲಿಂಗದ ನಿಜವ ನಿಲವ ಮನದಲ್ಲಿ ನೆನವುತ್ತಿರಲು, ಮಹಾಘನಲಿಂಗವಾಯಿತ್ತಾಗಿ, ಅಂಗದ ತೃಷೆಯು ಅಳಿಯಿತ್ತೆಂಬುದೀಗ, ನೆನಹ ನೆನವ ಮನದಲ್ಲಿಲ್ಲ. ತನುವಿನಾಶೆ ಮುನ್ನವಿಲ್ಲನೆಂಬ ಶಬ್ದಕ್ಕರ್ಥ.

ಆ ಮನದ ನೆನಹನತಿಗಳೆದ ಘನವು ತನ್ನಲ್ಲಿ ತಾನೆ ನಿಂದು ನಿಸ್ತರಂಗವಾಗಿ, ಭಿನ್ನವಿಲ್ಲದೆ ತನ್ನ ನಿಜವೆ ತನಗೆ ಸಹಜವಾಗಿದ್ದಿತ್ತೆಂಬುದೀಗ, ನೆನಹ ನೆನೆವ ಮನವನತಿಗಳೆದ ಘನಕ್ಕೆ ಮನವನೆಂತೆಂಬೆ? ತನ್ನಲ್ಲಿ ತಾನಾಯಿತ್ತು. ಭಿನ್ನವಿಲ್ಲದೆ ನಿಂದ ನಿಜವನೇನೆಂಬೆನೆಂಬ ಶಬ್ದಕ್ಕರ್ಥ. ಇಂತಪ್ಪ ಅನಾಯಾಸದ ಅನುವ ಕಂಡು, ಆ ಶರಣನು ಪರಮಕಾಷ್ಠೆಯನೆಯ್ದಿ ಎಂತಿರ್ದುದು, ಅಂತೆ ಬ್ರಹ್ಮವಾಗಿ ನಿಶ್ಚಿಂತ ಸುಖಿಯಾಗಿದ್ದನೆಂಬುದೀಗ, ಅನಾಯಾಸದ ಅನುವ ಕಂಡು, ಆನು ಬೆರಗಾದೆ ಇಂತಿರ್ದುದು, ಅಂತೆ ಅದೆ ಚಿಂತೆ ಇಲ್ಲದ ಅನುಭಾವ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೭೦. ಬೆಳಗು ಕತ್ತಲೆಯ ನುಂಗಿ ಒಳಗೆ ತಾನೊಬ್ಬನೆಯಾಗಿ ಕಾಂಬ ಕತ್ತಲೆಯ ಕಳೆದುಳಿದು ನಿಮಗೆ ನಾನು ಗುರುವಾದೆ ಗುಹೇಶ್ವರಾ.

ಟೀಕು:— ಬೆಳಗೆಂಬ ಜ್ಞಾನ ಕತ್ತಲೆಯೆಂಬ ಅಜ್ಞಾನ, ಈ ಎರಡು ಜ್ಞಾನಾಜ್ಞಾನಂಗಳನೂ ಮಹಾಜ್ಞಾನವವಗ್ರಹಿಸಲು, ಅಂತರಂಗದೊಳಗೆ, ತಾನೊಬ್ಬನೆಯಾಗಿ, ತೋರುವ, ತೋರಿಕೆಯ ಅಜ್ಞಾನವೆಂಬ ಕತ್ತಲೆಯನು ಅಳಿದುಳಿದು, ಆ ಮಹಾಶರಣಲಿಂಗದಲ್ಲಿ ಐಕ್ಯವಾಗಿದ್ದನೆಂಬುದೀ ವಚನದ ತಾತ್ಪರ್ಯಾರ್ಥ.

೭೧. ಕೊಟ್ಟದನರಸ ಹೋಗಿ, ತಾನೆ ಕೆಟ್ಟಿತ್ತು. ಹೇಳಲೆಂದು ಬಾರದು ಕೇಳಲೆಂತು ಬಾರದು. ಎಂತಿದ್ದುದಂತೆ? ಸಹಜ ಸ್ವಾನುಭಾವದ ಸಮ್ಯಜ್ಞಾನವನು ಅಜ್ಞಾನಿ ಬಲ್ಲನೆ ಗುಹೇಶ್ವರಾ?

ಟೀಕು:— ತನ್ನ ನಿಲವ ತಾನರಿಯದೆ, ತನಗೆ ತಾನೆ ಕೆಡಿಸಿಕೊಂಡು, ಅನೇಕ ಭವಂಗಳಲ್ಲಿ ಬಂದು ಒಮ್ಮೆ ಸುಜ್ಞಾನೋದಯವಾಗಿ, ಆ ಕೆಟ್ಟ ನಿಜವನರಸಿಹೆನೆಂದು ಉದ್ಯೋಗಿಸುವನ್ನಕ್ಕರ ಆ ಅರಸುವಾತ ತಾನೆ ನಿಜ ಪರಬ್ರಹ್ಮವಲ್ಲವೆಂದು ಅರಿಯಲೊಡನೆ ಅಲ್ಲಿ, ನಿಜವೆ ನಿಂದು ತಾನೆಂಬ ಭಾವವು ಕೆಟ್ಟಿತ್ತೆಂಬುದೀಗ ಕೆಟ್ಟುದನರಸ ಹೋಗಿ, ತಾನೆ ಕೆಟ್ಟಿತ್ತೆಂಬ ಶಬ್ದಕ್ಕರ್ಥ. ಇಂತಪ್ಪ ನಿಜದ ವಾಕ್ಯಕ್ಕೆ ತಂದು ವಚಿಸಬಾರದು. ಭಿನ್ನ ಶ್ರೋತ್ರದಿಂದ ಕೇಳಲಾಗದು. ಅದೇನು ಕಾರಣವೆಂದರೆ ಹೇಳಲಿಕ್ಕೆ ಕೇಳಲಿಕ್ಕೆ ತೆರಹಿಲ್ಲದ ಕಾರಣ ಅಂತಪ್ಪ ಪರಬ್ರಹ್ಮವೆಂತಿದ್ದು



ದಂತೆ ಸಹಜವಾಗಿಪ್ಪ ನಿಲವ ಸಮ್ಯಗ್ ಜ್ಞಾನಿಗಲ್ಲದೆ ಮತ್ತಾರಿಗು ಅರುಹಬಾರದೆಂಬುದೀಗ ಹೇಳಲೆಂದು ಬಾರದು ಕೇಳಲೆಂದು ಬಾರದು ಎಂತಿದ್ದುದಂತೆ ಸಹಜ ಸ್ವಾನುಭಾವದ ಸಮ್ಯಜ್ಞಾನವನು ಅಜ್ಞಾನಿ ಬಲ್ಲನೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೭೨. ಜಗದಗಲದ ಗಗನದ ಆನೆ ಕನಸಿನಲ್ಲಿ ಬಂದು ಮೆಟ್ಟಿತ್ತ ಕಂಡೆ. ಅದೇನೆಂಬೆ ಹೇಳಾ ಮಹಾಘನವದೆಂತೆಂಬೆ ಹೇಳಾ? ಗುಹೇಶ್ವರನೆಂಬ ಲಿಂಗವನರಿದು ಮರೆದಡೆ ಲೊಳಿಸರದ ಮೇಲೆ ಭಂಡಿ ಹರಿದಂತೆ.

ಟೀಕು:— ಲಿಂಗದಲ್ಲಿ ಸಮರಸವಾದ ಮಹಾ ಶರಣನ ಅಖಂಡ ಪರಿಪೂರ್ಣಾನುಭಾವವೆಂಬ ಮಹದಾಕಾರ ಮನೋಲಯ ಕಾಲದಲ್ಲಿ ಅವಗ್ರಹಿಸಿ ನಿಂದು ನಿಜಪದದಲ್ಲಿ ಇಂಬಿಟ್ಟುಕೊಳಲು ಅದೀಗ, ಜಗದಗಲದ ಗಗನದ ಆನೆ ಕನಸಿನಲ್ಲಿ ಬಂದು ಮೆಟ್ಟಿತ್ತ ಕಂಡೆನೆಂಬ ಶಬ್ದಕ್ಕರ್ಥ. ಆ ಮಹಾಘನದ ನಿಜದ ನಿಲವ ಅಂತಿಂತೆಂದು ಉಪಮಿಸಬಾರದು. ಆ ಶರಣ ತನ್ನಲ್ಲಿ ತಾನೆ ನಿರ್ನಾಮವಾಗಿ ನಿರಾವಯವಾದನೆಂಬುದೀಗ, ಅದೇನೆಂಬೆ ಹೇಳಾ ಮಹಾಘನವನದೆಂತೆಂಬೆ ಹೇಳಾ ಗುಹೇಶ್ವರನೆಂಬ ಲಿಂಗವನರಿದು ಮರದಡೆ ಲೊಳಿಸರದ ಮೇಲೆ ಭಂಡಿ ಹರಿದಂತೆ, ಎಂಬ ಶಬ್ದಕ್ಕರ್ಥ.

೭೩. ಕಡಲ ಮೇಲಣ ಕಲ್ಲು ಸಿಡಿಲುಹೊಯ್ದು ಬಾವಿ, ತಡದ ರಕ್ಕಸಿಯ ಮಗಳಡವಿಯಲ್ಲಿ ಮಡಿದಳು. ತೊಡೆಯಬಾರದ ಲಿಪಿಯ ಬರೆಯ ಬಾರದು ನೋಡಾ! ನಡು ನೀರ ಜ್ಯೋತಿಯ ನಾಯುವ ಕೊನೆಯಲ್ಲಿ ನೋಡಾ! ಮೊದಲಿಲ್ಲದ ನಿಜ ಕಡೆಯಿಲ್ಲದ ನಡು ಏನೂ ಇಲ್ಲದ ಊರೊಳಗೆ ಹಿಡಿದಡೆ ನುಂಗಿತ್ತು ನೋಡಾ ಹೆಮ್ಮಾರಿ ಗುಹೇಶ್ವರಾ.

ಟೀಕು:— ಭವವೆಂಬ ಸಮುದ್ರದ ಮಧ್ಯದೊಳು ಜಡತನುವೆಂಬ ಪಾಷಾಣವಿಪ್ಪುದು. ಆ ವಿಷಯ ಕೂಪವನು ಮಹಾಜ್ಞಾನಾಗ್ನಿಬ್ರಹ್ಮ ನಾದಮಯವಾಗಿ, ಆಲಿಂಗಿಸುತ್ತಿರಲು, ಮಾಯೆಯೆಂಬ ರಾಕ್ಷಸಿಯ ಬಸುರಲ್ಲಿ ಬಂದ ಕ್ರಿಯಾಶಕ್ತಿ ಭವಾರಣ್ಯವಳಿದಲ್ಲಿ ಕೂಡೆ, ಅಳಿದು, ಕ್ರಿಯೆಗಳೆಲ್ಲವು ನಷ್ಟವಾಗಿ ನಿಃಪತಿಯಾಯಿತ್ತೆಂಬುದೀಗ ಸಿಡಿಲು ಹೊಯಿದ

ಬಾವಿತಡದ ರಕ್ಕಸಿಯ ಮಗಳಡವಿಯಲ್ಲಿ ಮಡಿಗಿದಳೆಂಬ ಶಬ್ದಕ್ಕರ್ಥ. ಇಂತು ಕ್ರಿಯುಗಳೆಲ್ಲವು ನಷ್ಟವಾಗಿ, ಅಳಿಯಬಾರದು. ಬರೆಯಬಾರದ ಪ್ರಣವಾಕ್ಷರತ್ರಯಂಗಳೆ ತಾನಾಗಿರಲು, ಮನೋಮಧ್ಯದ ಮಹಾಜ್ಞಾನಾಗ್ನಿ ಪ್ರಾಣವಾಯುವನು ಕಳಿದ ಪರನು ಚೈತನ್ಯಾತ್ಮಕ ತತ್ವವನೆಯ್ದಿತ್ತೆಂಬುದೀಗ, ತೊಡೆಯಬಾರದ ಲಿಪಿಯು ಬರೆಯಬಾರದು ನೋಡಾ! ನಡುನೀರಜ್ಯೋತಿಯ ವಾಯುವ ಕೊನೆಯಲ್ಲಿ ನೋಡಾ! ಎಂಬ ಶಬ್ದಕ್ಕರ್ಥ. ಇಂತಪ್ಪ ಪರಮ ಚೈತನ್ಯಾತ್ಮನ ಸಿಲವಿಂಗೆ ಮೊದಲಿಲ್ಲ. ಕಡೆಯಿಲ್ಲ. ನಡುವಿಲ್ಲದಿರುತ್ತಿರಲು, ಆದೀಗ ಮೊದಲಿಲ್ಲದ ನಿಜ ಕಡೆಯಿಲ್ಲದ ನಡುವಿಲ್ಲದಿರುತ್ತಿರಲು, ಎಂಬ ಶಬ್ದಕ್ಕರ್ಥ. ಇಂತು ಸರ್ವಾಂಗವೆಂಬ ಪುರವಳಿದು, ಆ ಕಾಯದೊಳಗೆ ಮಹಾಜ್ಞಾನಶಕ್ತಿ ಪ್ರವೇಶಿಸಿ, ಆ ಶರಣ ನುಂಗಿದ ಬಳಿಕ ನಿರಾಳವೆ ಸಿಂದಿತ್ತೆಂಬುದೀಗ, ಏನೂ ಇಲ್ಲದ ಊರೊಳಗೆ ಹಿಡಿದಡೆ ಹೆಮ್ಮಾರಿ ನುಂಗಿತ್ತು ನೋಡಾ ಗುಹೇಶ್ವರ ಎಂಬ ಶಬ್ದಕ್ಕರ್ಥ.

೭೪. ತುಂಬಿ ಪರಿಮಳ ಉಂಡುದೋ, ಪರಿಮಳ ತುಂಬಿಯನುಂಡುದೋ, ಲಿಂಗ ಪ್ರಾಣವಾಯಿತೋ, ಪ್ರಾಣ ಲಿಂಗವಾಯಿತೋ, ಗುಹೇಶ್ವರಾ ಈ ಉಭಯದ ಭೇದವ ನೀನೆ ಬಲ್ಲೆ.

ಟೀಕು:— ತುಂಬಿಯೆಂದರೆ ಪರಿಪೂರ್ಣಕ್ಕೆ ಹೆಸರು. ಪರಿಮಳವೆಂದರೆ ಸ್ವಾನುಭಾವ ವಾಸನೆಗೆ ಹೆಸರು. ಅಂತು ಪರಿಪೂರ್ಣವೆ ಸ್ವಾನುಭಾವ ವಾಸನೆಯೊಳಗೆ ಮಗ್ನವಾಗಲು, ಆ ಸ್ವಾನುಭಾವವೆ ಪರಿಪೂರ್ಣವಾಸನೆಯೊಳಗೆ ಮಗ್ನವಾಗಲು, ಲಿಂಗವೆ ಪ್ರಾಣದೊಳಗೈಕ್ಯವಾಗಿ, ಪ್ರಾಣವೆ ಲಿಂಗದೊಳಗೈಕ್ಯವಾಗಿದ್ದಿತೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೭೫. ಬೆಣ್ಣೆಯ ಕಂದಲ ಕರಗವಿಟ್ಟರೆ, ಕಂದಲಿ ಕರಗಿತ್ತು. ಬೆಣ್ಣೆ ಉಳಿಯಿತ್ತು. ತುಂಬಿ ಇದ್ದಿತ್ತು. ಪರಿಮಳವಿಲ್ಲ. ಪರಿಮಳವಿದ್ದಿತ್ತು ತುಂಬಿಯಿಲ್ಲ. ತಾನಿದ್ದರೂ ತನ್ನ ಸ್ವರೂಪವಿಲ್ಲ. ಗುಹೇಶ್ವರ ನಿದ್ದನು ಲಿಂಗವಿಲ್ಲ.

ಟೀಕು:— ಬೆಣ್ಣೆ ಎಂದರೆ ಅನುಭವ, ಕಂದಲಿ ಎಂದರೆ ದೇಹ, ಅಂತು ಅನುಭವ ಸನ್ನಿಹಿತವಾಗಿಪ್ಪ ಅಂಗವನು ಮಹಜ್ಞಾನಾಗ್ನಿಯ ಮೇಲಿಡಲು, ಅಲ್ಲಿ ದೇಹವೆ ಕರಗಿ, ಅಳಿದು ಸ್ವಾನುಭಾವವೆಂಬ ನವನೀತವು ಉಳಿಯಿತ್ತೆಂಬುದೀಗ, ಬೆಣ್ಣೆಯ ಕಂದಲ ಕರಗಲಿಟ್ಟರೆ, ಕಂದಲಿ



ಕರಗಿತ್ತು ಬೆಣ್ಣೆ ಉಳಿಯಿತ್ತೆಂಬ ಶಬ್ದಕ್ಕರ್ಥ. ಇಂತಾಗಲು ತುಂಬಿಯೆಂಬ ಪರಿಪೂರ್ಣವೆ ಅವಶೇಷಿಸಿದ್ದಿತ್ತು. ಭಿನ್ನ ಅನುಭವವಿಲ್ಲವೆಂಬುದೀಗ, ತುಂಬಿ ಇದ್ದಿತ್ತು, ಪರಿಮಳವಿಲ್ಲವೆಂಬ ಶಬ್ದಕ್ಕರ್ಥ, ಆ ಪರಿಪೂರ್ಣವಾಸನೆ ಇದ್ದಿತ್ತಾಗಿ ಅಲ್ಲಿ ಪರಿಪೂರ್ಣನೆ ತಾನೆಂಬ ಅಹಂಕಾರವಿಲ್ಲವೆಂಬುದೀಗ, ಪರಿಮಳವಿದ್ದಿತ್ತು ತುಂಬಿಯಿಲ್ಲವೆಂಬ ಶಬ್ದಕ್ಕರ್ಥ. ಇಂತು ತಾನೆ ನಿಜವಾಗಿದ್ದನಲ್ಲದೆ, ಅಲ್ಲಿ ಉಪಾಧಿಯಿಲ್ಲವಾಯಿತ್ತೆಂಬ ಕಾರಣ, ಶರಣನೆ ಉಳಿದು ಲಿಂಗವೆ ಅಲ್ಲಿ ನಿಸ್ತರಂಗವಾಯಿತ್ತೆಂಬುದೀಗ, ತಾನಿದ್ದನು ತನ್ನ ಸ್ವರೂಪವಿಲ್ಲ ಗುಹೇಶ್ವರನಿದ್ದನು ಲಿಂಗವಿಲ್ಲವೆಂಬ ಶಬ್ದಕ್ಕರ್ಥ.

೭೬. ಎಂಭತ್ತುನಾಲ್ಕುಲಕ್ಷ ಒಂಟೆ ಮೂರು ತತ್ತಿಯನಿಕ್ಕಿತ್ತ ಕಂಡೆ. ಆನೆ ಆಡ ಹೋದರೆ ಒಂದು ಚಿಕ್ಕಾಡು ನುಂಗಿತ್ತ ಕಂಡೆ. ನಾರಿಯಾಡಹೋದರೆ ಒಂದು ಚಂದ್ರಮತಿಯ ಕಂಡೆನು. ಪೃಥ್ವೀಮಂಡಲವನೊಂದು ನೊಣ ನುಂಗಿತ್ತು ಕಂಡೆನು. ಗುಹೇಶ್ವರನೆಂಬ ಲಿಂಗವ ಕಂಡವರುಳ್ಳರೆ ಹೇಳಿರೆ.

ಟೀಕು:— ಒಂಟೆಯೆಂದರೆ ಜೀವಂಗೆ ಹೆಸರು. ಅಂತಪ್ಪ ಒಬ್ಬ ಜೀವನು ಎಂಭತ್ತುನಾಲ್ಕುಲಕ್ಷಯೋನಿಗಳೊಳಗೆ ಬರುತ್ತಿಪ್ಪಲ್ಲಿ ಆವ ದೇಹಂಗಳ ಧರಿಸಿದಲ್ಲಿ, ಆ ದೇಹಧರ್ಮವರ್ಣನಾಮಕರ್ಮವಿಡಿದು, ಅಲ್ಲಲ್ಲಿಗೆ ಒಬ್ಬೊಬ್ಬ ಜೀವನಾಗಲು, ಅಂತು ಒಬ್ಬ ಜೀವನೂ ಕರ್ಮಾಧೀನದಿಂದ ಎಂಭತ್ತುನಾಲ್ಕುಲಕ್ಷ ಜೀವರಾಶಿಗಳಾದರೆಂಬುದೀಗ, ಎಂಭತ್ತುನಾಲ್ಕುಲಕ್ಷ ಒಂಟೆಯೆಂಬ ಶಬ್ದಕ್ಕರ್ಥ. ಆ ಎಂಭತ್ತುನಾಲ್ಕುಲಕ್ಷ ಮಟಂಗಳಲ್ಲಿ ಬಹುಮುಖನಾದ ಜೀವನಿಂದ ಸ್ಥೂಲ, ಸೂಕ್ಷ್ಮ, ಕಾರಣವೆಂಬ ಮೂರು ಪಿಂಡಾಂಡಗಳು ಉದಯಿಸಿದವೆಂಬುದೀಗ, ಎಂಭತ್ತುನಾಲ್ಕುಲಕ್ಷ ಒಂಟೆ ಮೂರು ತತ್ತಿಯ ನಿಕ್ಕಿತ್ತು ಕಂಡೆನೆಂಬ ಶಬ್ದಕ್ಕರ್ಥ. ಇಂತು ತನುತ್ರಯಂಗಳ ಧರಿಸಿ ಕೊಂಡಿಪ್ಪ ಜೀವನು, ಅಹಂಕಾರದಿಂದಾಡುತ್ತಿರಲು, ಕರ್ಮಾವಶೇಷದಿಂದ ಆ ಅಹಮ್ಮನು ಅಣುಮಾತ್ರವಪ್ಪ ಚಿತ್ತು ನುಂಗಿತ್ತೆಂಬುದೀಗ, ಆನೆ ಆಡ ಹೋದರೆ ಒಂದು ಚಿಕ್ಕಾಡು ನುಂಗಿತ್ತು ಕಂಡೆನೆಂಬ ಶಬ್ದಕ್ಕರ್ಥ. ಅಂತು ಚಿತ್ತಿನಲ್ಲಿ ಅವಗ್ರಾಹಕನಾದ ಶಿವಯೋಗಿ ಪರಶಕ್ತಿಸ್ವರೂಪನಾಗಿ, ಸ್ವಲೀಲಾ ಚರಿತ್ರವನೆಯ್ದಲು ಪರಮಶಾಂತಿ ದೊರೆಕೊಂಡಿತ್ತೆಂಬುದೀಗ, ನಾರಿಯಾಡಹೋದರೆ ಒಂದು ಚಂದ್ರಮತಿಯ ಕಂಡೆನೆಂಬ ಶಬ್ದಕ್ಕರ್ಥ. ಇಂತು ಪರಮ ಶಾಂತಿಯ ನೆಯ್ದಿದ

ಮಹಲಿಂಗೈಕ್ಯನು ನಿವೃತ್ತಿ ಮಾಡಿವ ಸಂಶಯ ಪದದೊಳಗೆ, ಪಂಚಾಶತ್ಕೋಟಿವಿಸ್ತೀರ್ಣ ಭೂಮಂಡಲವೆಲ್ಲವೂ ಅಡಗಿ, ಜುಗುಪ್ಸೆಯ ನೆಯ್ದುತ್ತಿರಲು, ಅದ ತಾ ಕಂಡು ನಗುತ್ತಿದ್ದನೆಂಬುದೀಗ ಪೃಥ್ವೀಮಂಡಲವನೊಂದು, ನೊಣ ನುಂಗಿತ್ತು ಕಂಡೆನೆಂಬ ಶಬ್ದಕ್ಕರ್ಥ. ಇಂತಪ್ಪ ಮಹಲಿಂಗೈಕ್ಯನ ನಿಲವನಾರಿಗೂ ಕಾಣಬಾರದೆಂಬುದೀಗ, ಗುಹೇಶ್ವರನೆಂಬ ಲಿಂಗವನು ಕಂಡವರುಳ್ಳರೆ ನೀವು ಹೇಳಿರೆಯೆಂಬ ಶಬ್ದಕ್ಕರ್ಥ.

೭೭. ತೆರಹಿಲ್ಲದ ಮಹಾಘನವು ಕುರುಹಿಂಗೆ ಬಾರದ ಮುನ್ನ ತೋರಿದವರಾರು ಹೇಳಾ ಮಹಘನಲಿಂಗೈಕ್ಯವನು? ಆರೂಢದ ಕೂಟನಲ್ಲಿ ನಾನಾರ ಸಾಕ್ಷಿಯ ಕಾಣೆನು. ಬೇರೆ ಮಾಡಿ ನುಡಿಯ ಬಹುದೆ, ಪ್ರಾಣಲಿಂಗವನು? ಅರಿವು ಸಮವಾಗಿ, ಮರಹು ನಷ್ಟವಾದಲ್ಲಿ ಗುಹೇಶ್ವರ ನಿಮ್ಮ ಶರಣನುಪಮಾತೀತನು.

ಟೀಕು:— ಮಹಾಘನಲಿಂಗವನು ಶ್ರೀಗುರು ಕುರುಹಿಂಗೆ ತಂದು ಕರಸ್ಥಲಕ್ಕೆ ಕೊಡದ ಮುನ್ನವೆ, ಆ ಶಿಷ್ಯಂಗೆ ಜ್ಞಾನೋದಯವಾಗಿ, ಸಂಸಾರ ಭವಪಾಶ ಛೇದನವ ತಾನೆ ಮಾಡಿಕೊಂಡು ಬಳಿಕ ಬಂದು ಶ್ರೀಗುರೂಪದೇಶವ ಪಡೆದಕಾರಣ ಅದು ಸ್ವಯಂಭೂ ಜ್ಞಾನ, ಆ ಸ್ವಯಂಭೂ ಜ್ಞಾನವುಳ್ಳ ಶಿಷ್ಯನ ಮರ್ಮವನು ಆ ಶಿಷ್ಯನಲ್ಲದೆ, ಮತ್ತೆ ಆರು ತೋರುವರಿಲ್ಲವೆಂಬುದೀಗ ತೆರಹಿಲ್ಲದ ಘನವು ಕುರುಹಿಂಗೆ ಬಾರದ ಮುನ್ನ ತೋರಿದವರಾರು ಹೇಳಾ ಮಹಾಲಿಂಗೈಕ್ಯವನುಯೆಂಬ ಶಬ್ದಕ್ಕರ್ಥ. ಇದು ಕಾರಣ ಲಿಂಗ ಶರಣ ತನ್ನಲ್ಲಿ ತಾನೆ ತನ್ನನರಿದು ಮಹಾಲಿಂಗೈಕ್ಯವನೆಯ್ದಬೇಕಲ್ಲದೆ ಮತ್ತೆ ಆರು ತೋರಿದರೂ ಆಗದೆಂಬುದೀಗ ಆರೂಢದ ಕೂಟದಲ್ಲಿ ನಾನಾರುವ ಸಾಕ್ಷಿಯ ಕಾಣೆನೆಂಬ ಶಬ್ದಕ್ಕರ್ಥ. ಇಂತಾದ ಕಾರಣ ತಾನೆ ಲಿಂಗ ತಾನೆ ಶರಣನಾಗಿ ಇದ್ದ ಭೇದವನರಿಯದೆ, ತನ್ನಿಂದ ಲಿಂಗವ ಭಿನ್ನವ ಮಾಡಿ ನುಡಿಯಲಾಗದೆಂಬುದೀಗ, ಬೇರೆ ಮಾಡಿ ನುಡಿಯ ಬಹುದೆ, ಪ್ರಾಣಲಿಂಗವನುಯೆಂಬ ಶಬ್ದಕ್ಕರ್ಥ. ಇಂತಪ್ಪ ಸ್ವಯಂಭೂ ಜ್ಞಾನವೆ ತಾನಾಗಿ ಆ ಜ್ಞಾನ ನಿವೃತ್ತಿಯಾಗಿ, ಮಹಲಿಂಗದಲ್ಲಿ ಐಕ್ಯವಾದ ಶರಣನು ಉಪಮಾತೀತನಾಗಿದ್ದನೆಂಬುದೀಗ, ಅರಿವು ಸಮವಾಗಿ ಮರಹು ನಷ್ಟವಾದಲ್ಲಿ ಗುಹೇಶ್ವರಾ ನಿಮ್ಮ ಶರಣನುಪಮಾತೀತನು ನೋಡಾ ಎಂಬ ಶಬ್ದಕ್ಕರ್ಥ.

೭೮. ಕರ್ಪೂರದ ಗಿರಿಯ ಉರಿಯ ಹಿಡಿದಡೆ ಇದ್ದಲಿಯುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ? ಗುಹೇಶ್ವರನೆಂಬ ಲಿಂಗವನರಿದು, ಮರಳಿ ನೆನೆಯಲುಂಟೆ?



ಟೀಕು:— ಲಿಂಗದಲ್ಲಿ ಮನೋಲಯವಾಗಿ, ಸರ್ವಾಂಗವು ಅರಿದು ನಿರ್ವಯಲಾದ ಶರಣಂಗೆ ಕಾಯವಿಲ್ಲ ಪ್ರಾಣವಿಲ್ಲ ಮನವಿಲ್ಲ ಭಾವವಿಲ್ಲ ಏನೂ ಇಲ್ಲ. ಆವ ಪ್ರಯೋಗಕ್ಕು ಬಾಹಾತನಲ್ಲವಾಗಿ, ಉಪಮಾತೀತನಾಗಿದ್ದನೆಂಬುದೀ ವಚನದ ತಾತ್ಪರ್ಯಾರ್ಥ.

೭೯. ಸೊಪ್ಪಡಗಿದ ಸುಮ್ಮಾನಿಗಳವರಲ್ಲಿ ಗತಿಯನರಸುವರೆ? ಅವರಲ್ಲಿ ಮತಿಯನರಸುವರೆ? ಅಂಗವೆಲ್ಲ ನಷ್ಟವಾಗಿ, ಲಿಂಗ ಲಿಯ್ಯವಾದವರಲ್ಲಿ ಗತಿಯನರಸುವರೆ ಮತಿಯನರಸುವರೆ ಗುಹೇಶ್ವರನೆಂಬ ನಿಜನಿಂದವರಲ್ಲಿ?

ಟೀಕು:— ತನುವಿನ ಮರವೆ, ಮನದ ವ್ಯಾಕುಳವಳಿದು, ನಿಜ ತತ್ವ ಸ್ವರೂಪ ತಾನೆಯೆಂದರಿದ ಮಹಾಲಿಂಗೈಕ್ಯನು ತನ್ನಲ್ಲಿ ತಾನೆ ವಿಶ್ರಾಂತಿಯನೆಯ್ದಿಪ್ಪನಾಗಿ, ಆ ಶರಣನಲ್ಲಿ ಆವ ಗುಣದ ಕರ್ಮಂಗಳನು ಅರಸಿ ನೋಡಿಹನೆಂದರೆ ಕಾಣಬಾರದೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೮೦. ಅಟ್ಟಿ ಮುಟ್ಟಲಿಲ್ಲ. ಮುಟ್ಟಿ ಮರಳಲಿಲ್ಲ. ಏಂನೆಂಬೆ, ಲಿಂಗವೆ? ಎಂತೆಂಬೆ ಲಿಂಗಯ್ಯ? ನಿಜವನರಿದ ಬಳಿಕ ಮರಳಿ ಹುಟ್ಟಲಿಲ್ಲ ಕಾಣಾ ಗುಹೇಶ್ವರಾ.

ಟೀಕು:— ತನ್ನ ತಾನರಿದು, ತನ್ನ ಸ್ವರೂಪ ತಾನೆ ಹಿಡಿದು ತನ್ನಲ್ಲಿ ತಾನೆ ಐಕ್ಯವಾದ ಶರಣನು, ತಾನೆ ನಿಜಪರಬ್ರಹ್ಮವಾಗಿಹನಲ್ಲದೆ, ಮರಳಿ ಭವಕಲ್ಪಿತ ಭಾವವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೮೧. ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗ, ಮಿಥ್ಯವನೊಳಕೊಂಡ ಸತ್ಯಕ್ಕೆ ಭಂಗ, ಸತ್ಯಮಿಥ್ಯವನೊಳಕೊಂಡಾಮನಕ್ಕೆ ಭಂಗ, ಮನವನೊಳಕೊಂಡ ಜ್ಞಾನಕ್ಕೆ ಭಂಗ, ಜ್ಞಾನವನೊಳಕೊಂಡ ನಿಜಕ್ಕೆ ಭಂಗವುಂಟೆ ಗುಹೇಶ್ವರಾ?

ಟೀಕು:— ತನ್ನ ತಾನರಿದೆನೆಂಬುದು ಸತ್ಯವೆಂದು ತಾನರಿವುತ್ತಿರಲು, ಅದೆ ಮಿಥ್ಯವಾದ ಕಾರಣ ಅದೆ ಭಂಗವೆಂಬುದೀಗ ಸತ್ಯವನೊಳಕೊಂಡ ಮಿಥ್ಯಕ್ಕೆ ಭಂಗವೆಂಬ ಶಬ್ದಕ್ಕರ್ಥ. ಅಂತಪ್ಪ ಮಿಥ್ಯವನೊಳಕೊಂಡಿಪ್ಪ ಅಸತ್ಯಭಾವಕ್ಕು ಭಂಗವೆಂಬುದೀಗ, ಮಿಥ್ಯವನೊಳಕೊಂಡ ಸತ್ಯಕ್ಕೆ ಭಂಗವೆಂಬ ಶಬ್ದಕ್ಕರ್ಥ. ಇಂತಪ್ಪ ಸತ್ಯಮಿಥ್ಯಗಳೆರಡನೂ ಇಂಬಿಟ್ಟುಕೊಂ

ಡಿಪ್ಪುದೆ ಮನವಾದ ಕಾರಣ, ಆ ಮನವುಳ್ಳನ್ನಕ್ಕರ ಭವವುಂಟಾದ ಕಾರಣ ಅದೀಗ ಸತ್ಯಮಿಥ್ಯವನೊಳಕೊಂಡ ಮನಕ್ಕೆ ಭಂಗವೆಂಬ ಶಬ್ದಕ್ಕರ್ಥ. ಅಂತಪ್ಪ ಮನವನೊಳಕೊಂಡಿಪ್ಪ ಸಂಕಲ್ಪಜ್ಞಾನವು ವಿಕಲ್ಪಜ್ಞಾನದಿಂದ ಅಳಿವುದಾಗಿ, ಅದೀಗ ಮನವನೊಳಕೊಂಡ ಜ್ಞಾನಕ್ಕೆ ಭಂಗವೆಂಬ ಶಬ್ದಕ್ಕರ್ಥ. ಇಂತಪ್ಪ ಜ್ಞಾನವು ನಿಜದಲ್ಲಿ ವಿಶ್ರಮಿಸಿ ತನ್ನಲ್ಲಿ ತಾನೆ ಪರಾಮರಿಸಿ ನಿರ್ವಯಲಾದ ಸಹಜಕ್ಕೆ ಭಂಗವಿಲ್ಲವೆಂಬುದೀಗ, ಜ್ಞಾನವನೊಳಕೊಂಡ ನಿಜಕ್ಕೆ ಭಂಗವುಂಟೆ ಗುಹೇಶ್ವರಾ ಎಂಬ ಶಬ್ದಕ್ಕರ್ಥ.

೬೨. ತನುವಿಲ್ಲದೆ, ಕಂಡು ಕಂಡು ನಿಂದೆ. ಬೆರಗಿಲ್ಲದೆ ಕಂಡು ಕಂಡು ಬೆರಗಾದೆ. ರೂಹಿಲ್ಲದೆ ಕಂಡರಿದೆ ಗುಹೇಶ್ವರನೆಂಬ ಲಿಂಗ.

ಟೀಕುಃ— ನಿಜವನರಿದ ಶರಣನ ಸರ್ವಾಂಗವು ಲಿಂಗವಾಗಿ ನಿಜದಲ್ಲಿ ನಿಂದನೆಂಬುದೀಗ, ತನುವಿಲ್ಲದೆ ಕಂಡು ಕಂಡು, ನಿಂದೆನೆಂಬ ಶಬ್ದಕ್ಕರ್ಥ. ಇಂತು ತನ್ನ ತಾನರಿದ ಭಾವಕ್ಕೆ ತಾನೆ ಬೆರಗಾಗಿ, ಚೋದ್ಯಂಬಡದೆ ನಿಬ್ಬೆರಗಾಗಿ ನಿಂದು ಪರಮಕಾಷ್ಠೆಯನೆಯ್ದಿದನೆಂಬುದೀಗ, ಬೆರಗಿಲ್ಲದೆ ಕಂಡು ಕಂಡು ಬೆರಗಾದೆನೆಂಬ ಶಬ್ದಕ್ಕರ್ಥ. ಇಂತು ಪರಮಕಾಷ್ಠೆಯನೆಯ್ದಿದ ಲಿಂಗೈಕ್ಯನು ಕುರುಹಳಿದು ನಿರ್ವಯಲಾಗಿ ತಾನೆ ನಿಜದರಿವಾಗಿದ್ದನೆಂಬುದೀಗ, ರೂಹಿಲ್ಲದೆ ಕಂಡರಿದೆ ಗುಹೇಶ್ವರನೆಂಬ ಲಿಂಗವನೆಂಬ ಶಬ್ದಕ್ಕರ್ಥ.

೬೩. ಘನವ ಮನವ ಕಂಡು, ಅವಗ್ರಾಹಕವಾಯಿತ್ತು. ಕಂಡು ಕಂಡು, ಮನ ಮಹಘನವಾಯಿತ್ತು. ತತ್ತ್ವಶ್ಲೇಷ್ಯವಾಯಿತ್ತು. ತದ್ಗತ ಶಬ್ದಮುಗ್ಧವಾದುದನೇನೆಂಬೆ ಗುಹೇಶ್ವರಾ?

ಟೀಕುಃ— ಮಹಾಘನದ ನಿಜ ನಿಲವ ಮನ ಕಂಡು, ಅತ್ಯಂತ ವ್ಯಥೆಯಿಂದ ಘನವನವಗ್ರಹಿಸಿ ತಾನೆ ಮಹಾಘನಲಿಂಗದಲ್ಲಿ ಸಾಮರಸ್ಯವಾಗಿ ಅಲ್ಲಿಯೆ ಮನೋಲಯವಾಗಿ, ನಿಃಶಬ್ದಬ್ರಹ್ಮವಾಯಿತ್ತೆಂಬುದೀಗ ಈ ವಚನದ ತಾತ್ಪರ್ಯಾರ್ಥ.

೬೪. ನಾ ನೀನೆಂಬ ಭೇದ. ಅಂದೂ ಇಲ್ಲ ಇಂದೂ ಇಲ್ಲ. ಸಾಲೋಕ್ಯನಲ್ಲ ಸಾಮೀಪ್ಯನಲ್ಲ ಶರಣ, ಸಾರೂಪ್ಯನಲ್ಲ ಸಾಯುಜ್ಯನಲ್ಲ ಶರಣ. ಕಾಯನಲ್ಲ, ಅಕಾಯನಲ್ಲ ಗುಹೇಶ್ವರಲಿಂಗ ತಾನೆಯಾಗಿ.



ಟೀಕುಃ— ನೀ ನಾನೆಂಬ ಉಭಯ ಭಾವವಳಿದು ತಾನು ತಾನಾದ ಲಿಂಗೈಕ್ಯನು ಚತುರ್ವಿಧ ಪದಪದಂಗಳನು ಮೀರಿ, ಆಕಾರವು ನಾಸ್ತಿಯಾಗಿ, ನಿರಾಕಾರವಾದೆನೆಂಬ ಭಯವು ನಾಸ್ತಿಯಾಗಿ, ನಿರ್ಣಯದಲ್ಲಿ ನಿಃಪತಿಯಾಗಿಪ್ಪನೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೬೫. ಕರಿಯ ಮುತ್ತಿನ ಹಾರದ ಪರಿಯೊಂದು ಶೃಂಗಾರ, ಕರದ ಬಣ್ಣದ ನುಡಿಯು ಬೆಡಗಿನೊಳಗಡಗಿತ್ತು. ಸಿಡಿಲ ಬಣ್ಣವನುಟ್ಟು, ಮಡದಿ ಒಂದರೊಳಗೆ ಕಡುಗಲಿ ವಿದ್ಯವನು ನೋಡಿ, ನೋಡದ ನಿರ್ಭಾವ ವಿತರಣೆಯಿಂದ ಧಾರುಣಿಯ ರಚನೆಯು ಗುಹೇಶ್ವರನೆಂಬ ಲಿಂಗವ ಬೆಡಗು ನುಂಗಿ ಅಡಗಿತ್ತು.

ಟೀಕುಃ— ಮುತ್ತೆಂದರೆ ಮುಕ್ತಿಗೆ ಹೆಸರು. ಕರೆ ಎಂದರೆ ಅಜ್ಞಾನಕ್ಕೆ ಹೆಸರು. ಇಂತು ಅಜ್ಞಾನ ಸಂಬಂಧದ ಮುಕ್ತಿಯನು ಇದಿರಿಟ್ಟು ನೋಡುವರೆ, ಆ ಶರಣಂಗೆ ಒಂದು ಛಂದದ ಶೃಂಗಾರವಾಗಿಪ್ಪುದೆಂಬುದೀಗ, ಕರಿಯ ಮುತ್ತಿನ ಹಾರದ ಪರಿಯೆಂದು ಶೃಂಗಾರವೆಂಬ ಶಬ್ದಕ್ಕರ್ಥ. ಇಂತಪ್ಪ ಅಜ್ಞಾನ ಸಂಪರ್ಕವುಳ್ಳ ಮುಕ್ತಿಯ ನಿವೃತ್ತಿ ಜ್ಞಾನವನು ಕರವೆಂದರೆ, ಮಹಾಪ್ರಕಾಶ, ಆ ಮಹಾಪ್ರಕಾಶದ ಶಬ್ದಬ್ರಹ್ಮವೊಳಕೊಂಡಿತ್ತೆಂಬುದೀಗ, ಕರದ ಬಣ್ಣದ ನುಡಿಯು ಬೆಡಗಿನೊಳಗಡಗಿತ್ತೆಂಬ ಶಬ್ದಕ್ಕರ್ಥ. ಅಂತಪ್ಪ ಮಹಾಪ್ರಕಾಶವನೆ ಶರಣನ ಸರ್ವಾಂಗದೊಳಗಿಪ್ಪ ಪರಶಕ್ತಿ ಆವರಣವ ಮಾಡಿಕೊಂಡು ನಿರ್ದೇಹವೆಂಬ ಪರದೊಳಗೆ ಸದ್ವಿದ್ಯೆಯೆಂಬ ಸುಖವ ನೋಡಿ ನೋಟಗೊಟ್ಟು ಅಲ್ಲಿಯೆ ನಿರ್ಭಾವಿಯಾದಳೆಂಬುದೀಗ ಸಿಡಲ ಬಣ್ಣವನುಟ್ಟು, ಮಡದಿಯೊಂದರೊಳಗೆ ಕಡುಗಲಿಯ ವಿದ್ಯವನು ನೋಡಿ ನೋಡದ ನಿರ್ಭಾವ ವೀರ ವಿತರಣೆಯೆಂಬ ಶಬ್ದಕ್ಕರ್ಥ. ಇಂತಪ್ಪ ಶರಣನ ಸರ್ವಾಂಗವೆಂಬ ಲಿಂಗಕ್ಷೇತ್ರವನು ನಿಜವು ನುಂಗಿ ನಿರ್ವಯಲಾಯಿತ್ತೆಂಬುದೀಗ ಧಾರುಣಿಯ ರಚನೆಯು ಗುಹೇಶ್ವರನೆಂಬ ನಿಲವ ಬೆಡಗ ನುಂಗಿ ಅಡಗಿತ್ತೆಂಬ ಶಬ್ದಕ್ಕರ್ಥ.

೬೬. ನುಡಿಯಿಂದ ನಡೆಗೆಟ್ಟಿತ್ತು. ನಡೆಯಿಂದ ನುಡಿಗೆಟ್ಟಿತ್ತು. ಭಾವದ ಗುಸುಟು ಅದು ತಾನೆ ನಾಚಿ ನಿಂದುದು ಗುಹೇಶ್ವರನೆಂಬ ಅರಿವು ಸಿಸೆ ಬಂಜೆಯಾಯಿತ್ತಲ್ಲ.

ಟೀಕುಃ— ತನ್ನಲ್ಲಿ ತಾನು ನಿಜವನರಿದ ಶರಣನು ತಾ ನುಡಿದ ನುಡಿಗೆ ನಾಚಿ ನಿರ್ಗಮನಿಯಾಗಿ, ಆ ನಿರ್ಗಮನಿಯಾದಲ್ಲಿ ಶಬ್ದ ಮುಗ್ಧ

ವಾಗಿರಲು, ಭಾವವಳಿದು ನಿರ್ಭಾವವಾಯಿತ್ತೆಂಬುದೀಗ, ನುಡಿಯಿಂದ ನಡೆಗೆಟ್ಟಿತ್ತು. ನಡೆಯಿಂದ ನುಡಿಗೆಟ್ಟಿತ್ತು. ಭಾವದ ಗುಟ್ಟು ಅದು ತಾನೆ ನಾಚಿ ನಿಂದುದು ಎಂಬ ಶಬ್ದಕ್ಕರ್ಥ. ಇಂತು ನಿರ್ಭಾವಿಯಾದ ಲಿಂಗೈಕ್ಯನು ಪರಿಪೂರ್ಣತತ್ವದಲ್ಲಿ ಪರಮ ಸುಖಾನಂದಮಯವಾಗಿ ಮತ್ತೇನು ಅರಿಯ ತೆರಹಿಲ್ಲವೆಂಬುದೀಗ, ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾಯಿತ್ತಲ್ಲಾ ಯೆಂಬ ಶಬ್ದಕ್ಕರ್ಥ.

೮೭. ನಿರ್ವಿಕಲ್ಪಿತವೆಂಬ ನಿಜದೊಳಗಣಯ್ಯ. ನಿರಹಂಭಾವದಲ್ಲಿ ನಾನಿದ್ದೆನಯ್ಯ! ನೋಡಿಹೆನೆಂದರೆ ನೋಡಲಿಲ್ಲ. ಕೇಳಿಹೆನೆಂದರೆ ಕೇಳಲಿಲ್ಲ. ಘನ ನಿರಂಜನದ ಬೆಳಗಿಂಬಾದುದನೇನೆಂಬೆ ಗುಹೇಶ್ವರಾ?

ಟೀಕು:— ಸಂಕಲ್ಪ ವಿಕಲ್ಪ ಸಂದು ಸಂಶಯುವಳಿದು, ನಿಸ್ಸಂಶಯವಾದ ನಿರ್ವಿಕಲ್ಪವೆಂಬ ಮಹಾಘನ ಪರಶಿವತತ್ವದಲ್ಲಿ ಐಕ್ಯವಾದ ಮಹಾಘನಲಿಂಗೈಕ್ಯನು ಪಂಚೇಂದ್ರಿಯಂಗಳ ದ್ವಾರದಿಂ ಬಪ್ಪ ವಿಷಯಾದಿಗಳನೇನೆಂದು ಅರಿಯದೆ ನಿರಾಳ ನಿರಾಮಯದಲ್ಲಿ ಪರಮ ವಿಶ್ರಾಂತಿಯನೆಯ್ದಿದನೆಂಬುದೀಗ, ಈ ವಚನದ ತಾತ್ಪರ್ಯಾರ್ಥ.

೮೮. ಅಂಗದೊಳಗಣ ಸವಿ, ಸಂಗದೊಳಗಣ ರುಚಿ, ಅಂಗನೆಯ ನಖದೊಳಗೆ ಬಂದು ಮೂರ್ತಿಯಾಯಿತ್ತು. ಚಂದ್ರಕಾಂತದ ಗಿರಿಗೆ ಬಿಂದು ತೃಪ್ತಿಯ ಸಂಚ ಅದರಂದದೊಳಗಣ ಭ್ರಮೆಯ ಪಿಂಡಿಕಾ ಹುಲ್ಲೆನುಂಗಿತ್ತು. ಚಂದ್ರಮನ ಷೋಡಶಕಳೆಯ ಇಂದ್ರನ ವಾಹನ ನುಂಗಿ ಗುಹೇಶ್ವರನೆಂಬ ನಿಲವ ನಖದ ಮುಖ ನುಂಗಿತ್ತು.

ಟೀಕು:— ಸರ್ವಾಂಗವು ಲಿಂಗ ಸಮರಸವಾದ ಪರಮ ಸುಖವು ಪರಮ ಶಾಂತಿಯೆಂಬ ಪರಶಕ್ತಿ ಏಕಾಗ್ರಚಿತ್ತವೆಂಬ ಕೃತನಿಶ್ಚಯ ಹಸ್ತದ ನಖಾಗ್ರದ ಮೇಲೆ ನಿಂದು ತರಹರವಾಯಿತ್ತೆಂಬುದೀಗ, ಅಂಗದೊಳಗಣ ಸವಿ ಸಂಗದೊಳಗಿಣ ರುಚಿ, ಅಂಗನೆಯ ನಖದೊಳಗೆ ಬಂದು, ಮೂರ್ತಿಯಾಯಿತ್ತೆಂಬ ಶಬ್ದಕ್ಕರ್ಥ. ಇಂತು ತರಹರ ಪರಮಾಮೃತ ಬಿಂದುಸ್ವರೂಪವನೆಯ್ದಿದ ನಿತ್ಯತೃಪ್ತಿಯೆನಿಸಿತ್ತೆಂಬುದೀಗ ಚಂದ್ರಕಾಂತದ ಗಿರಿಗೆ ಬಿಂದು ತೃಪ್ತಿಯ ಸಂಚವೆಂಬ ಶಬ್ದಕ್ಕರ್ಥ. ಅನಿತ್ಯತೃಪ್ತನಾದೆನೆಂಬುದನರಿದ, ಅರಿವಿನ ಮರವೆಯ ಭ್ರಮೆಯ ಮಹಾಜ್ಞಾನಕ್ಕೆ ಆಹುತಿಯನಿಕ್ಕಿ ಆ ಶಿವೋಹಮೆಂಬ ಭ್ರಮೆಯಳಿಯಿತ್ತೆಂಬುದೀಗ, ಅದರಿಂದೊಳಗಣ



820
4603

ಭ್ರಮೆಯ ಪಿಂಡದಾ ಹುಲ್ಲೆ ನುಂಗಿತ್ತೆಂಬ ಶಬ್ದಕ್ಕರ್ಥ. ಇಂತು ಪರಿಪೂರ್ಣ ಶಿವಕಳೆಯನೊಳಕೊಂಡಿಪ್ಪ ಮಹಾಲಿಂಗೈಕ್ಯನ ನಿಲವನು ಮಹದಹಂಕಾರದ ಪರಮೈಶ್ವರ್ಯವನವಗ್ರಹಿಸಿ, ಅತ್ಯತಿಷ್ಠದ್ದಶಾಂಗುಲದ ತೂರ್ಯದಲ್ಲಿ ನಿಜ ನಿವಾಸಿಯಾಯಿತ್ತೆಂಬುದೀಗ, ಚಂದ್ರಮನ ಷೋಡಶಕಳೆಯ ಇಂದ್ರವಾಹನ ನುಂಗಿ ಗುಹೇಶ್ವರನೆಂಬ ನಿಲವ ನಖದ ಮುಖ ನುಂಗಿತ್ತೆಂಬ ಶಬ್ದಕ್ಕರ್ಥ.

೮೯. ಬಯಲ ಬೆರಗಿನ ಸುಖದ ಸವಿಯ ಬೆರಗಲ್ಲದೆ ಕಾಣೆ, ಕಾಣೆನೆಂಬ ನುಡಿಗೆಡೆಗಾಣೆ. ಕುರುಹುಗೆಟ್ಟು ಅರಿದ ನೆರೆಯರಿದು ಬೆರಸಿದೆನೆಂಬ ಬಿರುನುಡಿಯ ನುಡಿಗೆ ನಾಚಿದೆನಯ್ಯ ಗುಹೇಶ್ವರಾ.

ಟೀಕು:— ಅರಿವ ನೆರೆಯರಿದು ಅರಿವನರಿದೆನೆಂಬ ಸುಖವ ತನಗೆ ತಾ ನುಡಿದುಕೊಂಡರೆ ಅದೆ ಭಿನ್ನವೆಂದರಿದು, ನಿಃಶಬ್ದವೇದಿಯಾಗಿ ನಿಃಶಬ್ದವೇದಿಯಾದ ನಿಲವನು ನಿಃಶಬ್ದವೇದಿಯೆಂದು ಸಿನೆಯರಿಯದೆ ಮಹಾಲಿಂಗೈಕ್ಯವನು ಮಹಾಘನ ನಿರಾಳಲಿಂಗವೇದಿಯಾಗಿದ್ದನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

ಗದ್ಯ:— ಸ್ವಸ್ತಿ ಸಮಸ್ತ ಭುವನ ಜನ ತಿಮಿರ ಹರಣಕಾರಣ ಸ್ವರೂಪರುಂ ಭಕ್ತದೇಹಿಕದೇವರು ಭಕ್ತವತ್ಸಲರು ಸರ್ವಾಂಗಪ್ರಾಣಲಿಂಗಮೂರ್ತಿವಿಲಾಸರುಂ ಪುಲಿಗೆರೆಯ ಪುರವರಾಧೀಶ್ವರರುಂ ಅಪೂರ್ವಸ್ವಯಂಭೂಪ್ರಸನ್ನ ಚನ್ನದಕ್ಷಿಣ ಶ್ರೀ ಸೋಮನಾಥದೇವರ ದಿವ್ಯ ಶ್ರೀಪಾದ ಪದ್ಮಾರಾಧಕರು ತ್ರಿಭಾಂಡಸಿಷ್ಟರು. ಋಗ್ಯಜುಃಸಾಮಾಥರ್ವಣಾಂತರ್ಗತ ಪ್ರತಿಪಾದ್ಯ ಪ್ರಮುಖರುಂ ಶೃತಿಸ್ಮೃತಿಪುರಾಣಾಗಮ ಇತಿಹಾಸಾದಿ ನಾನಾಶಾಸ್ತ್ರಕೋವಿದರುಂ ಪರಮವೀರಶೈವಾಗಮಾಚಾರ್ಯರುಂ ಸಕಲ ಪ್ರಸಾದ ಪಂಚಾಕ್ಷರೀಮಂತ್ರಸಿದ್ಧರುಂ ನಿತ್ಯ ಪರಿಪೂರ್ಣ ಸಚ್ಚಿದಾನಂದ ನಿರಂಜನ ಪರಂಜ್ಯೋತಿ ಸ್ವರೂಪರಪ್ಪ ಮಹಾಲಿಂಗದೇವರು ತಮ್ಮ ದಿವ್ಯ ಜ್ಞಾನಾನಂದ ಸಿದ್ಧಪ್ರಸನ್ನ ಪ್ರಸಾದವನು ನಿಜ ತಚ್ಛಿಷ್ಯಭಕ್ತಿ ಭಾಂಡಾರಿಜಕ್ಕಣ್ಣಾಚಾರ್ಯಂಗೆ ಸತ್ಪ್ರೇಮಮಹಾನುಭಾವ ಸಂಬೋಧೆ ಸಂಬಂಧ ನಿರೂಪಣ ಕಾರಣಾರ್ಥವಿರಚಿತವಪ್ಪ ಪ್ರಭುದೇವ ಷಡುಸ್ಥಲದೊಳು ಐಕ್ಯನವರ್ಗಂ ಷಷ್ಠಮ ಪರಿಚ್ಛೇದ ಸಮಾಪ್ತ.

**ಸಂಪೂರ್ಣ.**